ತೆಲಂಗಾಣ ಮತ್ತು ಹೈದರಾಬಾದ ಕರ್ನಾಟಕ ಪ್ರದೇಶಗಳ ಕನ್ನಡ ಶಾಸನಗಳು : ಒಂದು ಸಾಂಸ್ಕೃತಿಕ ಅಧ್ಯಯನ

(ಪಿಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನ ಮಹಾಪ್ರಬಂಧ)

ಸಂಶೋಧಕರು
ರಾಜಕುಮಾರ ಶರಣಪ್ಪ
ಸಹಾಯಕ ಪ್ರಾಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು, ಬೀದರ

ಮಾರ್ಗದರ್ಶಕರು
ಡಾ.ಕೆ.ರವೀಂದ್ರನಾಥ
ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬
೨೦೧೮

ತೆಲಂಗಾಣ ಮತ್ತು ಹೈದರಾಬಾದ ಕರ್ನಾಟಕ ಪ್ರದೇಶಗಳ ಕನ್ನಡ ಶಾಸನಗಳು: ಒಂದು ಸಾಂಸ್ಕೃತಿಕ ಅಧ್ಯಯನ

(ಪಿಎಚ್.ಡಿ.ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಸಂಶೋಧನ ಮಹಾಪ್ರಬಂಧ)

ಸಂಶೋಧಕರು

ರಾಜಕುಮಾರ ಶರಣಪ್ಪ

ಸಹಾಯಕ ಪ್ರಾಧ್ಯಾಪಕರು
ಸರಕಾರಿ ಪ್ರಥಮ ದರ್ಜೆ ಕಾಲೇಜು
ಬೀದರ

ಮಾರ್ಗದರ್ಶಕರು

ಡಾ.ಕೆ.ರವೀಂದ್ರನಾಥ

ಪ್ರಾಧ್ಯಾಪಕರು
ಹಸ್ತಪ್ರತಿಶಾಸ್ತ್ರ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಹಸ್ತಪ್ರತಿಶಾಸ್ತ್ರ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

೨೦೧೮

ಕನ್ನಡ ವಿಶ್ವವಿದ್ಯಾಲಯ, ಹಂಪಿ
ಹಸ್ತಪ್ರತಿಶಾಸ್ತ್ರ ವಿಭಾಗ
ವಿದ್ಯಾರಣ್ಯ ೫೮೩ ೨೭೬, ಹೊಸಪೇಟೆ ತಾಲೂಕು, ಬಳ್ಳಾರಿ ಜಿಲ್ಲೆ

ಡಾ.ಕೆ.ರವಿಂದ್ರನಾಥ
ಪ್ರಾಧ್ಯಾಪಕರು

ದೃಢೀಕರಣ ಪತ್ರ

ರಾಜಕುಮಾರ ಶರಣಪ್ಪ ಇವರು ಪಿಎಚ್.ಡಿ.ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ತೆಲಂಗಾಣ ಮತ್ತು ಹೈದರಾಬಾದ ಕರ್ನಾಟಕ ಪ್ರದೇಶಗಳ ಕನ್ನಡ ಶಾಸನಗಳು: ಒಂದು ಸಾಂಸ್ಕೃತಿಕ ಅಧ್ಯಯನ** ಎಂಬ ಈ ಮಹಾ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ **ಹಸ್ತಪ್ರತಿಶಾಸ್ತ್ರ ವಿಭಾಗಕ್ಕೆ** ಸಲ್ಲಿಸುತ್ತಿದ್ದಾರೆ. ಪ್ರಸ್ತುತ ಮಹಾಪ್ರಬಂಧದ ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲ ವೆಂದು ಈ ಮೂಲಕ ದೃಢೀಕರಿಸಲಾಗಿದೆ.

ಡಾ.ಕೆ.ರವಿಂದ್ರನಾಥ
ಮಾರ್ಗದರ್ಶಕರು

ದಿನಾಂಕ: ೧೯-೬-೨೦೧೮
ಸ್ಥಳ: ವಿದ್ಯಾರಣ್ಯ

ಪ್ರಮಾಣ ಪತ್ರ

ತೆಲಂಗಾಣ ಮತ್ತು ಹೈದರಾಬಾದ ಕರ್ನಾಟಕ ಪ್ರದೇಶಗಳ ಕನ್ನಡ ಶಾಸನಗಳು: ಒಂದು ಸಾಂಸ್ಕೃತಿಕ ಅಧ್ಯಯನ ಎಂಬ ಈ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ, ಹಸ್ತಪ್ರತಿಶಾಸ್ತ್ರ ವಿಭಾಗದ, ಪ್ರಾಧ್ಯಾಪಕರಾದ **ಡಾ.ಕೆ.ರವೀಂದ್ರನಾಥ** ಇವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಯಾವುದೇ ಭಾಗವನ್ನು ಯಾವುದೇ ಪದವಿ ಅಥವಾ ಇತರೇ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕರು

ರಾಜಕುಮಾರ ಶರಣಪ್ಪ

ಪಿಎಚ್.ಡಿ.ಸಂಶೋಧನ ವಿದ್ಯಾರ್ಥಿ

ದಿನಾಂಕ: ೧೬-೦೬-೨೦೧೮

ಸ್ಥಳ: ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ,ವ್ಯಾಪ್ತಿ, ವಿಧಾನ ಮತ್ತು ಅಗತ್ಯ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮತ್ತು ಅಗತ್ಯ

ಶಾಸನಗಳು ಯಾವುದೇ ನಾಡಿನ ಸಾಂಸ್ಕೃತಿಕ ಇತಿಹಾಸದ ಪುನ್ರರಚನೆಯ ಮೂಲ ಆಕರ ಸಾಮಗ್ರಿಗಳಾಗಿವೆ.ಒಂದು ನಿರ್ದಿಷ್ಟ ಪ್ರದೇಶಗಳ ಶಾಸನಗಳ ಅಧ್ಯಯನವೆಂದರೆ ಆ ಒಂದು ನಿರ್ದಿಷ್ಟ ಪ್ರದೇಶದಲ್ಲಿ ನೆಲೆಸಿರುವ ಒಟ್ಟು ಜನಾಂಗಿಯ ಅಧ್ಯಯನವೇ ಅಗುತ್ತದೆ. ಶಾಸನಗಳು ಅನೇಕ ಹೊಸ ಹೊಸ ಜ್ಞಾನ ಶಾಖೆಗಳನ್ನು ತನ್ನ ಗರ್ಭದಲ್ಲಿ ಹುದುಗಿಸಿಕೊಂಡಿವೆ. ಅವುಗಳ ಅಧ್ಯಯನಕ್ಕೆ ತೊಡಗಿಸಿಕೊಂಡಾಗ ಅವುಗಳಲ್ಲಿ ಗುಪ್ತವಾಗಿರುವ ಹಲವು ವಿಷಯಗಳನ್ನು ಹೊರಗೆ ತೆರೆದು ತೋರಿಸುವಂತಹ ಜ್ಞಾನ ವಾಹಿನಿಗಳಾಗಿವೆ. ತೆಲಂಗಾಣ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ ಲಭಿಸಿದ ಕನ್ನಡ ಶಾಸನಗಳು ಪ್ರಾಚೀನ ಕನ್ನಡ ನಾಡಿನ ಆಳ–ಅಗಲವನ್ನು ಪ್ರತಿಬಿಂಬಿಸುತ್ತವೆ. ಈ ಪ್ರದೇಶಗಳಲ್ಲಿ ಆಳ್ವಿಕೆ ನಡೆಸಿದ ವಿವಿಧ ರಾಜಮನೆತನಗಳ ರಾಜಕೀಯ, ಆಡಳಿತ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಹಿತ್ಯಿಕ, ಶೈಕ್ಷಣಿಕ, ಅಂದು ಪ್ರಚಲಿತದಲ್ಲಿದ್ದ ವಿವಿಧ ಲಲಿತ ಕಲೆಗಳು; ಅವರು ಕೈಗೊಡಿರುವ ಅನೇಕ ಲೋಕ ಕಲ್ಯಾಣದ ಕಾರ್ಯಗಳು ಮತ್ತು ಶಾಪಾಶಯಗಲ್ಲಿ ಕಂಡುಬರುವ ಸಾಂಸ್ಕೃತಿಕ ಅಂಶಗಳು, ಹೀಗೆ ಹಲವು ಹತ್ತು ವಿಷಯಗಳನ್ನು ಕುರಿತು ಈ ಪ್ರದೇಶಗಳಲ್ಲಿ ಲಭಿಸಿದ ಕನ್ನಡ ಶಾಸನಗಳನ್ನು ಮುಖ್ಯ ಆಕರಗಳನ್ನಾಗಿಟ್ಟುಕೊಂಡು,ಅವುಗಳನ್ನು ವಿವಿಧ ಆಯಾಮಗಳಿಂದ ಅಧ್ಯಯನ ಮಾಡಿ, ಇಲ್ಲಿಯ ಸಾಂಸ್ಕೃತಿಕ ಇತಿಹಾಸದ ಪುನ್ರರಚನೆಗೆ ಯತ್ನಿಸಲಾಗಿದೆ. ಇದರಿಂದಾಗಿ ಜನಸಮುದಾಯಕ್ಕೆ ಅದರ ಅರಿವು ಮೂಡಿಸಲು ನೆರವಾಗುತ್ತದೆ. ಆ ಅರಿವಿನ ಆಧಾರದ ಮೇಲೆ ನಮ್ಮ ಜೀವನಕ್ರಮವನ್ನು ಸರಿಯಾಗಿ ರೂಪಿಸಿಕೊಳ್ಳಲು ಸಹಾಯವೊದಗುತ್ತದೆ. ಹೀಗೆ ತೆಲಂಗಾಣ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಗಳ ಸಾಂಸ್ಕೃತಿಕ ಚರಿತ್ರೆ ಕಟ್ಟಿಕೊಡುವ ನಿಟ್ಟಿನಿಂದ ಈ ಅಧ್ಯಯನಕ್ಕೆ ತೊಡಗಲಾಗಿದೆ.

ದಕ್ಷಿಣ ಭಾರತದಲ್ಲಿಯೇ ಕರ್ನಾಟಕ, ತೆಲಂಗಾಣ ಮತ್ತು ಆಂಧ್ರಪ್ರದೇಶಗಳಲ್ಲಿ ಕನ್ನಡ ಶಾಸನಗಳು ಹೇರಳವಾಗಿ ಲಭಿಸಿವೆ. ಇಂತಹ ಶಾಸನಗಳ ಅಧ್ಯಯನವು ಹೊಸ ಹೊಸ ಬೆಳಕನ್ನು ನಿರಂತರವಾಗಿ ಹೊರಚೆಲ್ಲುವ ತವನಿಧಿಗಳಾಗಿವೆ. ಪ್ರಸ್ತುತದ ಅಧ್ಯಯನವು ಈ ಪ್ರಯತ್ನಗಳಲ್ಲಿ ಒಂದು. ಇದರಿಂದ ಈ ಪ್ರದೇಶಗಳ ಸಾಂಸ್ಕೃತಿಕ ಇತಿಹಾಸದ ಪುನರ್‌ರಚನೆ ನೆರವಾಗುತ್ತದೆ. ಈ ಹಿನ್ನೆಲೆಯಲ್ಲಿ ಇಲ್ಲಿಯ ಅಧ್ಯಯನ ಕೈಗೊಳ್ಳಲಾಗಿದೆ.

ಕವಿರಾಜಮಾರ್ಗಕಾರ ಉಲ್ಲೇಖಿಸಿದಂತೆ ಪ್ರಾಚೀನ ಕರ್ನಾಟಕದ ಹರವು ಕಾವೇರಿಯಿಂದ ಆ ಗೋದಾವರಿವರೆಗೂ ಹರಡಿಕೊಂಡಿದೆ.ಆದುದರಿಂದ ಇಂದಿನ ಮಹಾರಾಷ್ಟ್ರ ಮತ್ತು ತೆಲಂಗಾಣದ ಭಾಗಗಳು ಪ್ರಾಚೀನ ಕರ್ನಾಟಕದ ಭಾಗಗಳೇ ಆಗಿದ್ದವು ಎಂದು ಹೇಳಬಹುದು.ಅದರಲ್ಲಿ ತೆಲಂಗಾಣ ಪ್ರದೇಶವು ಕರ್ನಾಟಕದ ಅರಸು ಮನೆತನಗಳಾದ ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ವಿಜಯನಗರದ ಅರಸುಮನೆತನಗಳು ಮತ್ತು ಇತರರು ಈ ಪ್ರದೇಶಗಳಲ್ಲಿ ತಮ್ಮ ಆಡಳಿತ ಕೇಂದ್ರಗಳು ಸ್ಥಾಪಿಸುವುದರ ಮೂಲಕ ಈ ಭಾಗದ ಮೇಲೂ ತಮ್ಮ ನಿಯಂತ್ರಣ ಸಾಧಿಸಿದ್ದರು. ಅದಕ್ಕಾಗಿಯೇ ಈ ಪ್ರದೇಶಗಳಲ್ಲಿ ಕನ್ನಡ ಶಾಸನಗಳು ಹೆಚ್ಚಾಗಿ ಲಭಿಸಿದ್ದಕ್ಕೆ ಸಾಕ್ಷಿ ಎನ್ನಬಹುದು.

ಒಂದು ಪ್ರದೇಶದ ಇತಿಹಾಸವೆಂದರೆ ಆ ಪ್ರದೇಶದಲ್ಲಿ ಆಳಿದ ರಾಜರ ಜೀವನ ಸಾಧನೆಗಳು ಆಡಳಿತ ಕ್ರಮ ಇವುಗಳಿಗೆ ಮಾತ್ರ ಸೀಮಿತವಾದುದಲ್ಲ. ಆದರೆ ಈವರೆಗೆ ಬಂದಿರುವ ಅನೇಕ ಇತಿಹಾಸ ಕೃತಿಗಳಲ್ಲಿ ಬರೀ ರಾಜರ ಬಿರುದಾವಳಿ, ಆಡಳಿತ, ಅವರ ಸೋಲು ಗೆಲುವು, ಅವರು ಕೈಗೊಂಡ ದಿಗ್ವಿಜಯಗಳು ಇವೇ ಮುಂತಾದ ರಾಜಕೀಯ ಅಂಶಗಳನ್ನು ಮಾತ್ರ ಪ್ರಧಾನವಾಗಿ ಚಿತ್ರಿಸಿರುವುದನ್ನು ಕಾಣುತ್ತೇವೆ. ಒಂದು ಕಾಲದ ಇತಿಹಾಸವೆಂದರೆ ಬರೀ ಆ ಕಾಲದ ರಾಜ ಮಹಾರಾಜರ ಇತಿಹಾಸವಷ್ಟೇ ಅಲ್ಲ. ಆಯಾ ರಾಜರ ಆಡಳಿತ ಪ್ರದೇಶಗಳಲ್ಲಿ ನೆಲೆಸಿರುವ ಪ್ರಜೆಗಳೆಲ್ಲರ ಒಟ್ಟು ಜಾನಾಂಗಿಕ ಅಧ್ಯಯನವನ್ನು ಒಳಗೊಂಡದ್ದೇ ನಿಜವಾದ ಇತಿಹಾಸ. ಇತಿಹಾಸ ಗ್ರಂಥಗಳಲ್ಲಿ ಇಂತಹ ದೃಷ್ಟಿಕೋನವು ಇಲ್ಲವೆನ್ನುವಷ್ಟು ವಿರಳ. ಚಿತ್ರಿಸಿದ್ದಾರೆ.ಚಿತ್ರಿಸಿದರೂ ಅದು ಗೌಣವಾಗಿ ಚಿತ್ರಿಸಿ, ಕೈಬಿಟ್ಟಿರುವುದೇ ಹೆಚ್ಚು. ಆದರೆ ಇಂದು ಇತಿಹಾಸದ ಅಧ್ಯಯನದ ದೃಷ್ಟಿಕೋನ ಬದಲಾಗಿದೆ. ಒಂದು ಪ್ರದೇಶದ ಒಟ್ಟು ಜನಸಮುದಾಯದ ಜನಜೀವನ ವಿಧಾನವು ಇಂದು ಇತಿಹಾಸವೆನಿಸುತ್ತದೆ. ಹೀಗಾಗಿ ಆಯಾ ನಾಡಿನ ಜನರ ಸಂಪ್ರದಾಯಗಳು, ಕಲೆಗಳು, ಧರ್ಮಗಳು, ಸಾಮಾಜಿಕ ವ್ಯವಸ್ಥೆ, ಆರ್ಥಿಕ ವ್ಯವಸ್ಥೆ, ಉಡುಗೆ-ತೊಡುಗೆಗಳು, ಹವ್ಯಾಸಗಳು, ವೈವಾಹಿಕ ಸಂಬಂಧಗಳು, ಮನರಂಜನೆಗಳು, ಭೌಗೋಳಿಕ ಚರಿತ್ರೆ ಇತ್ಯಾದಿಗಳೆಲ್ಲವನ್ನೂ ಒಳಗೊಂಡ ಹಾಗೂ ಸಮಗ್ರವೂ ಆಳವಾದ ಚಿತ್ರಣವಿದ್ದಲ್ಲಿ ಮಾತ್ರ

ಅದು ಸಮಗ್ರ ಇತಿಹಾಸವೆನಿಸುತ್ತದೆ. ಇಂತಹ ಒಂದು ಸಂಕೀರ್ಣ ವಿಷಯದ ಅಧ್ಯಯನವನ್ನು 'ಸಾಂಸ್ಕೃತಿಕ ಅಧ್ಯಯನ'ವೆಂದು ಕರೆಯಲಾಗುತ್ತದೆ. 'ಸಂಸ್ಕೃತಿ' ಎಂದರೆ ನಮ್ಮ ಹಿರಿಯರು ಬಿಟ್ಟು ಹೋದ ನಡೆನುಡಿ, ಆಚಾರ ವಿಚಾರ, ರೂಢಿ ಸಂಪ್ರದಾಯಗಳು, ಬದುಕಿದ ರೀತಿ, ಇವೆಲ್ಲದರ ಸಮಗ್ರಕೂಟ. ಈ "ಸಂಸ್ಕೃತಿ ಎಂಬ ಪದವು ಇಂಗ್ಲೀಷಿನ 'Culture' ಎಂಬ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಬಳಕೆಯಾಗುತ್ತಿದೆ(ಚಿದಾನಂದಮೂರ್ತಿ ಎಂ., ೧೯೭೯, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೪). ಪೂರ್ಣತೆಯ ಸಿದ್ಧಿಗಾಗಿ ಮನುಷ್ಯನು ಮಾಡುತ್ತಿರುವ ಪ್ರಯತ್ನವೇ ಸಂಸ್ಕೃತಿ. "ನಮ್ಮನ್ನು ನಾವು ಉತ್ತಮಗೊಳಿಸಿಕೊಳ್ಳಲು ಮಾಡುವ ಪ್ರಯತ್ನವೇ ಸಂಸ್ಕೃತಿ" ಎಂದು ಮ್ಯಾಥ್ಯೂ ಆರ್ನಾಲ್ಡನು ಹೇಳುತ್ತಾನೆ(ಉದ್ಧೃತ: ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಅದೇ, ಪು.೪, Mathew Arnold: *Culture and Anarchy*, Pp.viii, 4-32). ಸಂಸ್ಕೃತಿಯು ಮಾನವನ ಬಾಹ್ಯರೂಪಕ್ಕಷ್ಟೇ ಸೀಮಿತವಾದುದಲ್ಲ; ಅವನ ಆಂತರಿಕ ಜೀವನ ವಿಕಾಸಕ್ಕೂ ಸಂಬಂಧಿಸಿದುದು. ಅವನಲ್ಲಿಯ ಮೃಗೀಯ ಗುಣಗಳನ್ನು ಹೋಗಲಾಡಿಸಿ, ಸಾತ್ವಿಕ ಗುಣಗಳನ್ನು ಬೆಳೆಸುವಂತಹದು. ಹೀಗೆ ಮಾನವನಲ್ಲಿ ಮಾನವೀಯ ಮೌಲ್ಯಗಳನ್ನು ಬೆಳಸಿ, ಮಾನವ ಧರ್ಮವನ್ನು ಬೆಳೆಸುವುದೇ ಅದರ ಉದ್ದೇಶವಾಗಿದೆ. ಚಿದಾನಂದಮೂರ್ತಿ ಯವರು ಹೇಳುವಂತೆ "ಮನುಷ್ಯನ ಸಾಂಘಿಕ ಜೀವನದಲ್ಲಿ ಅಭಿವ್ಯಕ್ತಗೊಂಡ ಧರ್ಮವೇ ಸಂಸ್ಕೃತಿ"(ಚಿದಾನಂದಮೂರ್ತಿ ಎಂ., ೧೯೭೯, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೫).

"ಸಂಸ್ಕಾರದಿಂದ 'ಸಂಸ್ಕೃತಿ' ಸಂಸ್ಕಾರ ಅಥವಾ 'ಸಂಸ್ಕರಣ' ಎಂದರೆ ಸಮ್ಯಕ್‌ಕರಣ ಸಮ್ಯಕ್‌ಕೃತಿ, ಸಂಸ್ಕರತಿ, ಹಾಗೆಂದರೆ ಚೆನ್ನಾಗುವಂತೆ ಮಾಡುವುದು ಒಳ್ಳೆಯದನ್ನಾಗಿಸುವುದು. ಶುದ್ಧಿ ಮಾಡಿ ಉತ್ತಮಪಡಿಸುವುದು ಎಂದರ್ಥ. 'ಒಳ್ಳೆಯದು' ಎಂದರೆ ಒಂದಾನೊಂದು ಪದಾರ್ಥವು ಅಥವಾ ಸಂಗತಿಯು ಹೇಗಿರಬೇಕೋ ಹಾಗಿರುವುದು ಒಂದು ವಸ್ತು ಅಥವಾ ಒಂದು ವರ್ತನೆ ಹೇಗಿದ್ದರೆ ನಮ್ಮ ಜೀವಿತದ ಪರಮೋದ್ದೇಶ ಸಿದ್ಧಿಯು ನಮಗೆ ಹತ್ತಿರ ಹತ್ತಿರವಾದಿತೋ ಅದೇ ಒಳ್ಳೆಯದು ಅದೇ ಹಿತ. ಅದೇ ಜಾತಿತ್ಯ, ಅದೇ ಸಾಧುತೆ, ಆ ಒಳ್ಳೆಯದನ್ನು ಕಂಡುಕೊಳ್ಳುವ ಪ್ರಯತ್ನವೇ ಆ ಹಿತವನ್ನು ಹುಡುಕುವುದೇ ಸಂಸ್ಕೃತಿ ನಮ್ಮ ಜೀವನವನ್ನು ಸಾಧುವನ್ನಾಗಿ ಮಾಡಿಕೊಳ್ಳುವ ವಿಧಾನವೇ ಸಂಸ್ಕೃತಿ. ಲೋಕದೊಡನೆ ನಮಗಾಗುವ ನಾನಾ ಸಂಪರ್ಕಗಳಲ್ಲಿ ನಾವು ಉಂಟಾಗಿಸುವ ಔಚಿತ್ಯವೇ ಸಂಸ್ಕೃತಿ. ಸೊಗಸೆಂಬುದು ಎಲ್ಲರೂ ಎಲ್ಲೆಲ್ಲಿಯೂ ಬಯಸುವ ಒಂದು ಪರಿಸ್ಥಿತಿಯಲ್ಲಿವೇ? ನಾವು ಮೈಯನ್ನು ತೊಳೆದು ವಸ್ತ್ರಾಭರಣಗಳನ್ನು ಸೊಗಸುಪಡಿಸುತ್ತೇವೆ. ಮನೆಗೆ ಸುಣ್ಣ ಬಣ್ಣ ಮಾಡಿಸುತ್ತೇವೆ. ನಮ್ಮ ಕಣ್ಣಿಗೆ

ಕಾಣಬರುವುದರಲ್ಲೆಲ್ಲ ಅಂದ ಚೆಂದಗಳನ್ನು ಹುಡುಕುತ್ತೇವೆ. ಅದರಂತೆ ನಮ್ಮ ಲೋಕ ಸಂಬಂಧಗಳಲ್ಲಿಯೂ ಒಂದು ಇಂಪು ಬೇಡವೇ? ಆ ನಡೆ-ನುಡಿಗಳ ಸೊಗಸೇ ಸಂಸ್ಕೃತಿ, ಅದು ಭಾವ ಸಾಂದರ್ಯ ಮತ್ತು ಶೀಲಸೌಂದರ್ಯ. ಆ ಆಭರಣವನ್ನು ತೊಡದಿರುವ ಜೀವ ಕಾಡುಮೃಗ ನಾವು ದೇಹಗೇಹಗಳನ್ನು ಚೊಕ್ಕಟ ಚೆಲುವೆನಿಸಲು ಪ್ರಯತ್ನ ಪಡುವಂತೆ ನಮ್ಮ ಲೋಕಬಾಂಧ್ಯವನ್ನು ರಮ್ಯವೆನಿಸುವುದಕ್ಕೂ ಬುದ್ಧಿಪೂರ್ವಕವಾಗಿ ಪರಿಶ್ರಮಿಸಬೇಕು. ಅದೇಸಂಸ್ಕೃತಿಯ ಸಾರಾಂಶ". ನಡೆನುಡಿಗಳ ಚೊಕ್ಕಟವೇ ಸಂಸ್ಕೃತಿ. ಚೊಕ್ಕಟವೆಂದರೆ ಕೊಳಕನ್ನು ಕಳೆದು ಹಾಕುವುದು. ಅದರಿಂದ ಸಂಸ್ಕೃತಿ ಮನಸ್ಸನ್ನು ತಿಕ್ಕಿ ತೊಳೆದು ಶುಚಿ ಮಾಡುವ ಕೆಲಸ(ಡಿವಿಜಿ, ಸಂಸ್ಕೃತಿ, ೧೯೯೬, ಪು.೧೪-೧೫).

"ಸಂಸ್ಕೃತಿಯೆಂಬುದು ಸೂತ್ರ ರೂಪದಲ್ಲಿ ಹಿಡಿದಿಡಲಾಗದ ವಿರಾಟ್ ಶಕ್ತಿ ಎಂಬುದನ್ನು ಇದೆಲ್ಲದರಿಂದ ನಾವು ಕಂಡುಕೊಳ್ಳಬಹುದು. ಹಂತಹಂತವಾಗಿ ಅದು ವಿಕಾಸಗೊಳ್ಳುತ್ತದೆ. ಪದರ ಪದರವಾಗಿ ಜೀವನವನ್ನು ವ್ಯಾಪಿಸುತ್ತದೆ. ಸಂಸ್ಕೃತಿಯೆಂಬುದು ಅಂತರಂಗದ ವಿಕಾಸ ನಿಜ. ಆ ವಿಕಾಸಕ್ಕೆ ಕಾರಣವಾದ ಸಾಮಾಜಿಕ ಪರಿಕರಗಳು; ಅದು ಹೌದು ನುಡಿದಂತೆ ನಡೆಯುವುದುಏ ಸಂಸ್ಕೃತಿ, ಸಮಾಜದೊಡನೆ ಸಹಬಾಳ್ವೆಯ ಸೌಜನ್ಯದ ಮಾರ್ಗವೇ ಸಂಸ್ಕೃತಿ; ಶೀಲದ ಸೌಭಾಗ್ಯವೇ ಸಂಸ್ಕೃತಿ, ಆತ್ಮಶಿಕ್ಷಣವೇ ಸಂಸ್ಕೃತಿ, ಸಾಹಿತ್ಯಾದಿ ಸರಸ ಕಲೆಗಳೇ ಸಂಸ್ಕೃತಿ" (ಡಾ.ಎಚ್.ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ೨೦೦೧, ಪು.೧೪). ಹೀಗೆ 'ಸಂಸ್ಕೃತಿ ಎನ್ನುವುದು ಮಾನವನ ಆಂತರ್ಯದಲ್ಲಿ ಹುದುಗಿರುತ್ತದೆ. ಅದು ಬಾಹ್ಯ ರೂಪಕ್ಕೆ ಗೋಚರಿಸುವುದಿಲ್ಲ. ಅದು ಆತನ ಕ್ರಿಯೆಯಲ್ಲಿ ಗೋಚರಿಸುತ್ತದೆ.

ಅಧ್ಯಯನದ ಉದ್ದೇಶ

ಭಾಷಾವಾರು ಆಧಾರದ ಮೇಲೆ ಪ್ರಾಂತಗಳು ವಿಂಗಡನೆಯಾದಾಗ ಈ ಭಾಗದಲ್ಲಿ ಆಂಧ್ರಪ್ರದೇಶ ಮತ್ತು ಮೈಸೂರು ರಾಜ್ಯಗಳು ಉದಯವಾದವು. ಆಂಧ್ರಪ್ರದೇಶದ ತೆಲಂಗಾಣ ಪ್ರದೇಶ ಮತ್ತು ಕರ್ನಾಟಕದ ಹೈದರಾಬಾದ್ ಕರ್ನಾಟಕ ಪ್ರದೇಶಗಳು ಕ್ರಮವಾಗಿ ಇಂದು ತೆಲಂಗಾಣ ಮತ್ತು ಕರ್ನಾಟಕ ರಾಜ್ಯಗಳ ಭಾಗಗಳಾಗಿವೆ. ಭೌಗೋಳಿಕವಾಗಿ ಇವು ಒಂದಕ್ಕೊಂದು ಹತ್ತಿಕೊಂಡಂತಿದ್ದು, ಈ ಎರಡೂ ಪ್ರದೇಶಗಳ ಗಡಿಭಾಗಗಳಲ್ಲಿ ಕನ್ನಡ ತೆಲುಗು ಭಾಷೆಗಳನ್ನಾಡುವ ದ್ವಿಭಾಷಿಕ ಜನಸಮುದಾಯಗಳಿವೆ. ಕ್ರಿ.ಶ.ಸು.೭೧೩ರಿಂದ ೧೯೪೮ರ ಸಪ್ಟೆಂಬರ್ ೧೭ರವರೆಗೆ ಈ ಪ್ರದೇಶಗಳು ಏಕಚಕ್ರಾಧಿಪತ್ಯಕ್ಕೆ ಒಳಪಟ್ಟಿದ್ದವು. ಇಂದಿನ ಕರ್ನಾಟಕದ ಒಂದೇ ರಾಜಮನೆತನಗಳು ಈ ಪ್ರದೇಶಗಳಲ್ಲಿ ಆಳ್ವಿಕೆಯನ್ನು ನಡೆಸಿದ್ದವು. ೧೯೪೮ರಿಂದೀಚೆಗೆ ಆಡಳಿತಾತ್ಮಕವಾಗಿ ಬಹುಕಾಲ

ಈ ಪ್ರದೇಶಗಳು ಬೇರ್ಪಟ್ಟರೂ ಸಾಂಸ್ಕೃತಿಕವಾಗಿ ಮಾತ್ರ ಒಂದಾಗಿವೆ. ಇಲ್ಲಿಯ ಭಾಷೆಗಳಾದ ಕನ್ನಡ ತೆಲುಗುಗಳು ಸಹೋದರಿ ಭಾಷೆಗಳಾಗಿವೆ. ಬಾದಾಮಿ ಚಾಲುಕ್ಯರಿಂದ ಮೊದಲುಗೊಂಡು ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಕಲಚೂರಿಗಳು, ಕಾಕತೀಯರು, ವಿಜಯನಗರದ ಅರಸರು, ನಿಜಾಂಶಾಹಿ ಮನೆತನಗಳು ಈ ಪ್ರದೇಶಗಳನ್ನು ಆಳಿರುವುದು ಸ್ಪಷ್ಟವಿದೆ. ಹೀಗೆ ಒಂದೊಂದೇ ಮನೆತನಕ್ಕೆ ಸಂಬಂಧಿಸಿದ ರಾಜಮನೆತನಗಳು ಹೆಚ್ಚು ಆಳ್ವಿಕೆ ಮಾಡಿದುದರ ಫಲವಾಗಿ ಈ ಪ್ರದೇಶಗಳ ನಡುವೆ ಒಂದು ಸಾಂಸ್ಕೃತಿಕ ಚಿರಬಾಂಧವ್ಯ ಇರುವುದರಿಂದ ಮತ್ತು ಈ ಎರಡು ಪ್ರದೇಶಗಳಲ್ಲಿ ಕನ್ನಡ ತೆಲುಗು ಭಾಷೆಗಳನ್ನಾಡುವ ಜನಸಮುದಾಯಗಳಿರುವುದರಿಂದ ಇಲ್ಲಿ ಎರಡೂ ಸಂಸ್ಕೃತಿಗಳ ನಡುವೆ ಸಹಜವಾಗಿಯೇ ಕೊಡುಕೊಳ್ಳುವಿಕೆ ನಡೆದಿದೆ. ಇಲ್ಲಿಯ ರೂಢಿ ಸಂಪ್ರದಾಯಗಳು, ಆಡಳಿತ ವ್ಯವಸ್ಥೆ, ರಾಜ್ಯಭಾಷೆ ಅಂದು ಒಂದೇ ಆಗಿದ್ದು, ಸುಮಾರು ಎರಡು ಸಾವಿರ ವರ್ಷಗಳ ಕಾಲದಿಂದ ಈ ಅನ್ಯೋನ್ಯವಾದ ಸಾಂಸ್ಕೃತಿಕ ಸಂಬಂಧ ಬೆಳೆದುಬಂದಿದೆ. ತೆಲಂಗಾಣ ಪ್ರದೇಶದಲ್ಲಿ ಲಭ್ಯವಾಗುವ ಹನ್ನೆರಡನೆಯ ಶತಮಾನದವರೆಗಿನ ಶಾಸನಗಳು ಬಹುತೇಕ ಕನ್ನಡದವೇ ಆಗಿವೆ. ಅದರಲ್ಲಿಯೂ ಪ್ರಸ್ತುತದಲ್ಲಿ ಆಯ್ದುಕೊಂಡಿರುವ ಪ್ರದೇಶದಲ್ಲಿ ಕನ್ನಡ ಶಾಸನಗಳದ್ದೇ ಮೇಲುಗೈ ಎಂದರೆ ತಪ್ಪಾಗಲಾರದು. ಹೀಗಾಗಿ ಈ ಪ್ರದೇಶಗಳಲ್ಲಿ ಲಭ್ಯವಿರುವ ಕನ್ನಡ ಶಾಸನಗಳನ್ನು ಪ್ರಧಾನ ಆಕರಗಳಾಗಿಟ್ಟುಕೊಂಡು ಇಲ್ಲಿಯ ಸಂಸ್ಕೃತಿಯ ಪ್ರಾಚೀನ ನೆಲೆಗಳನ್ನು ಗುರುತಿಸಿ ಅವುಗಳ ಅನನ್ಯತೆಯನ್ನು ಸಾದರಪಡಿಸುವ ಪ್ರಯತ್ನವು ಪ್ರಸ್ತುತ ಅಧ್ಯಯನದ ಉದ್ದೇಶಗಳಲ್ಲಿ ಒಂದಾಗಿದೆ. ಈವರೆಗೆ ತೆಲಂಗಾಣ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಗಳ ರಾಜಕೀಯ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಹಲವಾರು ಗ್ರಂಥಗಳು ರಚಿತವಾಗಿದ್ದರೂ ಅವುಗಳೆಲ್ಲದರ ಉದ್ದೇಶ ರಾಜಕೀಯ ಇತಿಹಾಸವನ್ನು ಚಿತ್ರಿಸುವುದೇ ಆಗಿದೆ. ಪ್ರಾಸಂಗಿಕವಾಗಿ ಮಾತ್ರ ಅಲ್ಲಲ್ಲಿ ಆ ಕಾಲದ ಸಾಮಾಜಿಕ ಸ್ಥಿತಿಗತಿಗಳು, ಸಾಂಸ್ಕೃತಿಕ ವಿವರಗಳು ನಿರೂಪಿತವಾಗಿವೆ. ಪ್ರಸ್ತುತದ ಅಧ್ಯಯನವು ಈ ಕೊರತೆಯನ್ನು ತುಂಬುವ ಉದ್ದೇಶವನ್ನು ಹೊಂದಿದೆ.

ಈ ಹಿನ್ನೆಲೆಯಲ್ಲಿ, ಪ್ರಸ್ತುತದಲ್ಲಿ ಸಾಂಸ್ಕೃತಿಕ ಅಧ್ಯಯನವೆಂದರೆ ಈ ಪ್ರದೇಶಗಳ ಲಭ್ಯವಿರುವ ಕನ್ನಡ ಶಾಸನಗಳಲ್ಲಿ ಮೂಡಿಬರುವ ಸಾಹಿತ್ಯಿಕ, ಸಾಮಾಜಿಕ, ಭಾಷಿಕ, ಆರ್ಥಿಕ, ರಾಜಕೀಯ, ಧಾರ್ಮಿಕ ಮತ್ತು ಅವರು ಕಟ್ಟಿ ಬೆಳೆಸಿದ ಲಲಿತ ಕಲೆಗಳು ಮುಂತಾದ ಆಯಾಮಗಳ ಹಿನ್ನೆಲೆಯಲ್ಲಿ ಅಧ್ಯಯನ ಕೈಗೊಳ್ಳಲಾಗಿದೆ.

ಅಧ್ಯಯನದ ವ್ಯಾಪ್ತಿ

ಯಾವುದೇ ಒಂದು ಕಾರ್ಯವನ್ನು ಅಚ್ಚುಕಟ್ಟಾಗಿ ನಿರ್ವಹಿಸಬೇಕಾದರೆ ಅದಕ್ಕೆ ಮಿತಿಗಳನ್ನು ಹಾಕಿಕೊಳ್ಳುವುದು ಅಗತ್ಯವಾಗುತ್ತದೆ. ಈ ದೃಷ್ಟಿಯಿಂದ, ಅಧ್ಯಯನದ ವ್ಯಾಪ್ತಿಯ ವಿಸ್ತಾರವನ್ನು ಮನಗಂಡು, ಮಿತಿ ಮೀರಿದ ವ್ಯಾಪ್ತಿಯಿಂದ ಅಧ್ಯಯನದ ಉದ್ದೇಶವೇ ಸಡಿಲವಾಗುವ ಸಾಧ್ಯತೆಯನ್ನು ತಿಳಿದು, ಇಲ್ಲಿ ಕೆಲವು ಮುಖ್ಯವಾದ ಮಿತಿಗಳನ್ನು ಹಾಕಿಕೊಳ್ಳಲಾಗಿದೆ.

೧. **ಪ್ರಾದೇಶಿಕ ಮಿತಿ:** ತೆಲಂಗಾಣ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಗಳು. ಇಲ್ಲಿ ತೆಲಂಗಾಣ ಪ್ರದೇಶಗಳೆಂದರೆ ಇಂದು ಆಂಧ್ರಪ್ರದೇಶದಿಂದ ವಿಭಜಿತಗೊಂಡ ತೆಲಂಗಾಣ ರಾಜ್ಯದ ಅದಿಲಾಬಾದ್, ನಿಜಾಮಾಬಾದ್, ಕರೀಮ್‌ನಗರ, ವರಂಗಲ್, ಮೆದಕ್, ಹೈದರಾಬಾದ್, ರಂಗಾರೆಡ್ಡಿ, ನಲ್ಗೊಂಡ, ಖಮ್ಮಂ ಮತ್ತು ಮಹಬೂಬ್‌ನಗರ್(ಅವಿಭಜಿತ) ಜಿಲ್ಲೆಗಳು. ಅದೇ ರೀತಿ, ಹೈದರಾಬಾದ್‌ಕರ್ನಾಟಕ ಪ್ರದೇಶಗಳೆಂದರೆ ಕರ್ನಾಟಕ ರಾಜ್ಯದ ಬೀದರ, ಕಲಬುರಗಿ, ರಾಯಚೂರು ಕೊಪ್ಪಳ ಮತ್ತು ಯಾದಗೀರ ಜಿಲ್ಲೆಗಳು ಪ್ರಸ್ತುತ ಅಧ್ಯಯನದ ವ್ಯಾಪ್ತಿಗೆ ಒಳಪಡುತ್ತವೆ. ಮತ್ತು ಹೈದರಾಬಾದ ಕರ್ನಾಟಕ ಪ್ರದೇಶದ ಇನ್ನೊಂದು ಜಿಲ್ಲೆಯಾದ ಬಳ್ಳಾರಿ ಜಿಲ್ಲೆಯು ಈ ಅಧ್ಯಯನದಿಂದ ಹೊರಗಿಡಲಾಗಿದೆ. ಕಾರಣ ಈ ಪ್ರದೇಶವು ಆರಂಭದಲ್ಲಿ ಹೈದರಾಬಾದನ ನಿಜಾಂನ ಆಡಳಿತಕ್ಕೆ ಒಳಪಟ್ಟಿರುವುದಿಲ್ಲ.ಇದು ಮದ್ರಾಸ್ ಪ್ರಿಸಿಡೆನ್ಸಿ ಆಡಳಿತಕ್ಕೆ ಒಳಪಟ್ಟಿತ್ತು.

೨. **ಭಾಷಿಕ ಮಿತಿ:** ತೆಲಂಗಾಣ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ ಪ್ರಾಕೃತ, ಸಂಸ್ಕೃತ, ಕನ್ನಡ, ತೆಲುಗು, ಉರ್ದು, ಅರೇಬಿಕ್, ಪರ್ಷಿಯನ್ ಹೀಗೆ ವಿವಿಧ ಭಾಷೆಗಳ ಶಾಸನಗಳು ಲಭಿಸುತ್ತವೆ. ಆದುದರಿಂದಲೇ ಪ್ರಸ್ತುತದ ಅಧ್ಯಯನಕ್ಕೆ ಕನ್ನಡ ಶಾಸನಗಳನ್ನು ಮಾತ್ರ ಅಧ್ಯಯನಕ್ಕೆ ಎತ್ತಿಕೊಳ್ಳಲಾಗುತ್ತದೆ. ಉಳಿದ ಭಾಷೆಯ ಶಾಸನಗಳು ಪ್ರಸ್ತುತದ ಅಧ್ಯಯನದ ವ್ಯಾಪ್ತಿಯಿಂದ ಹೊರಗೆ ನಿಲ್ಲುತ್ತವೆ.

೩. **ಪ್ರಕಟಿತ ಶಾಸನಗಳ ಮಿತಿ:** ಈವರೆಗೆ ಕನ್ನಡ ವಿಶ್ವವಿದ್ಯಾಲಯ ಹಂಪಿ ಪ್ರಕಟಿಸಿದ ಬೀದರ, ರಾಯಚೂರು ಮತ್ತು ಕೊಪ್ಪಳ ಜಿಲ್ಲಾವಾರು ಶಾಸನ ಸಂಪುಟಗಳು ಮತ್ತು ಆಂಧ್ರಪ್ರದೇಶದ ಕನ್ನಡ ಶಾಸನಗಳು ಭಾಗ-೨ ಹಾಗೂ ಶ್ರೀಮತಿ ಹನುಮಾಕ್ಷಿ ಗೋಗಿಯವರು ಪ್ರಕಟಿಸಿದ ಕಲಬುರಗಿ ಜಿಲ್ಲೆ ಮತ್ತು ಸುರಪೂರ ತಾಲೂಕಿನ ಶಾಸನ ಸಂಪುಟಗಳಲ್ಲಿ ಪ್ರಕಟಣೆಗೊಂಡ ಕನ್ನಡ ಶಾಸನಗಳು ಮಾತ್ರ ಈ ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ. ಅಪ್ರಕಟಿತ ಮತ್ತು ಅಲಭ್ಯ ಶಾಸನಗಳು ಈ ಅಧ್ಯಯನದ ವ್ಯಾಪ್ತಿಗೆ ಒಳಪಡುವುದಿಲ್ಲ. ಪ್ರಾಸಂಗಿಕವಾಗಿ ದ್ವಿತೀಯ ಆಕರಗಳಾಗಿ ಸಾಹಿತ್ಯಿಕ ಗ್ರಂಥಗಳನ್ನು ಬಳಸಿಕೊಳ್ಳಲಾಗಿದೆ.

ಅಧ್ಯಯನದ ಸ್ವರೂಪ

ತೆಲಂಗಾಣ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಗಳ ಪ್ರಕಟಣೆಗೊಂಡ ಕನ್ನಡ ಶಾಸನಗಳು ಮಾತ್ರ ಈ ಅಧ್ಯಯನಕ್ಕೆ ತೆಗೆದುಕೊಳ್ಳಲಾಗಿದೆ. ಅಧ್ಯಯನದ ಅನುಕೂಲದ ದೃಷ್ಟಿಯಿಂದ ಈ ಕೆಳಗಿನಂತೆ ಅಧ್ಯಾಯಗಳಾಗಿ ವಿಂಗಡಿಸಿಕೊಳ್ಳಲಾಗಿದೆ:

ಅಧ್ಯಾಯ ಒಂದರಲ್ಲಿ: ಅಧ್ಯಯನದ ಉದ್ದೇಶ, ವ್ಯಾಪ್ತಿ, ಅಧ್ಯಯನದ ವಿಧಾನ,ಮತ್ತು ಅಧ್ಯಯನದ ಅಗತ್ಯತೆ: ಕುರಿತು ನಿರೂಪಿಸಲಾಗಿದೆ.

ಅಧ್ಯಾಯ ಎರಡರಲ್ಲಿ: ಈವರೆಗೆ ಈ ಕ್ಷೇತ್ರಗಳಲ್ಲಿ ನಡೆದಿರುವ ಅಧ್ಯಯನಗಳ ಸಮೀಕ್ಷೆ ಮಾಡಲಾಗಿದೆ. ಮತ್ತು ಶಾಸನಗಳ ಪರಿಚಯಾತ್ಮಕ ಹಿನ್ನೆಲೆಯಲ್ಲಿ ಶಾಸನವೆಂದರೇನು? ಶಾಸನಗಳ ಪ್ರಕಾರಗಳು, ಶಾಸನಾಧಾರಗಳ ಮಹತ್ವ, ಕಾಲಗಣನೆ,ಕೂಟಶಾಸನಗಳು, ಶಾಸನಾಧ್ಯಾಯನದಿಂದಾಗುವ ಪ್ರಯೋಜನಗಳು ಇತ್ಯಾದಿ ವಿಷಯಗಳ ಬಗ್ಗೆ ಸ್ಥೂಲವಾಗಿ ಹೇಳಲಾಗಿದೆ.

ಅಧ್ಯಾಯ ಮೂರರಲ್ಲಿ ರಾಜಕೀಯ ಅಧ್ಯಯನ: ತೆಲಂಗಾಣ ಮತ್ತು ಹೈದರಾಬಾದ್-ಕರ್ನಾಟಕ ಪ್ರದೇಶಗಳಲ್ಲಿ ಆಡಳಿತ ಮಾಡಿದ ರಾಜ ಮನೆತನಗಳಾದ, ಮೌರ್ಯರು, ಶಾತವಾಹನರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಗಂಗರು, ಕಲ್ಯಾಣದ ಚಾಲುಕ್ಯರು, ಕಲಚೂರಿಗಳು, ಕಾಕತೀಯರು, ಸೇವುಣರು, ವಿಜಯನಗರದ ಅರಸರು, ಬಹಮನಿ ಸುಲ್ತಾನರು, ಹೈದ್ರಾಬಾದ್ ನಿಜಾಮ್‌ರು ಮತ್ತು ಇತರ ಮಾಂಡಳಿಕರ ಮನೆತನ ಅವರು ಆಳ್ವಿಕೆ ಮಾಡಿದ ಕಾಲ ಮತ್ತು ಪ್ರದೇಶಗಳು, ಅವರು ನೀಡಿದ ಸಾಮಾಜಿಕ ಕೊಡುಗೆಗಳೇನು ಮತ್ತು ಪ್ರಾಚೀನ ಕರ್ನಾಟಕದ ವ್ಯಾಪ್ತಿ ಬಗ್ಗೆ ನಿರೂಪಿಸಲಾಗಿದೆ.

ಅಧ್ಯಾಯ ನಾಲ್ಕರಲ್ಲಿ ಆಡಳಿತ ಅಧ್ಯಯನ: ತೆಲಂಗಾಣ ಮತ್ತು ಹೈದರಾಬಾದ ಕರ್ನಾಟಕ ಪ್ರದೇಶಗಳಲ್ಲಿ ರಾಜ್ಯಭಾರ ಮಾಡಿದ ಅಂದಿನ ರಾಜರು ತಮ್ಮ ರಾಜ್ಯದ ಆಡಳಿತವನ್ನು ಸಮರ್ಪಕವಾಗಿ ನಡೆಸುವದಕ್ಕಾಗಿ ತಮ್ಮ ಅನುಕೂಲಕ್ಕೆ ತಕ್ಕಂತೆ ಅನೇಕ ಆಡಳಿತ ವಿಭಾಗಗಳನ್ನಾಗಿ, ವಿಂಗಡಿಸಿಕೊಂಡಿದ್ದರು. ಅಂದಿನ ಆಡಳಿತ ವ್ಯವಸ್ಥೆಯನ್ನು ಪ್ರಧಾನವಾಗಿ ರಾಜ್ಯಾಡಳಿತ ಮತ್ತು ಪ್ರಾಂತೀಯ ಆಡಳಿತ ಎಂಬುದಾಗಿ ವಿಂಗಡಿಸಿಕೊಂಡಿದ್ದರು. ರಾಜ್ಯಾಡಳಿತದಲ್ಲಿ ರಾಜನೇ ಅಗ್ರ ಶ್ರೇಣಿಯಲ್ಲಿರುವವನು.ಆತನ ತರುವಾಯ ಯುವರಾಜ, ರಾಣಿಯರು, ಮಂತ್ರಿಗಳು ಮತ್ತು ಇತರ ಅಧಿಕಾರಿಗಳು ಬರುತ್ತಾರೆ. ಪ್ರಾಂತಿಯ ಆಡಳಿತಕ್ಕೆ ಸಂಬಂಧಿಸಿದಂತೆ ಸಾಮಂತ ರಾಜರು, ಮಾಂಡಳಿಕರು, ಊರುಗಳ ಆಡಳಿತ ನಡೆಸುವವ ಗಾವುಂಡರು, ಅಗ್ರಹಾರದ ಆಡಳಿತ ಕಾರ್ಯ ನಿರ್ವಹಿಸುವ ಮಹಾಜನರು ಆಡಳಿತದ ವಿಭಾಗ ಕ್ರಮ,ಶ್ರೇಣಿಕೃತ ಆಜ್ಞೆಗಳ ಪಾಲನೆ, ರಾಜ,

ರಾಣಿಯರು, ದಂಡಾಧಿಕಾರಿಗಳು, ಸಾಮಂತರು ಪುರೋಹಿತ ವರ್ಗ, ಊರೊಡೆಯರು, ಇತರ ಅಧಿಕಾರಿ ವರ್ಗಗಳ ಅಧಿಕಾರಗಳು ಮತ್ತು ಅವರುಗಳ ಕಾರ್ಯಗಳು,ಇತ್ಯಾದಿ ಅಂಶಗಳನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ ಐದರಲ್ಲಿ ಸಾಮಾಜಿಕ ಅಧ್ಯಯನ: ತೆಲಂಗಾಣ ಮತ್ತು ಹೈದರಾಬಾದ ಕರ್ನಾಟಕ ಪ್ರದೇಶಗಳಲ್ಲಿ ಆಳ್ವಿಕೆ ಮಾಡಿದ ರಾಜರು ಕೇವಲ ರಾಜ್ಯದ ಗಡಿಗಳು ವಿಸ್ತರಣೆ ಮಾಡುವುದೇ ಅವರ ಮುಖ್ಯ ಕಾರ್ಯವಾಗಿರಲಿಲ್ಲ. ಅದರ ಜೊತೆಗೆಯೇ ಲೋಕೋಪಯೋಗಿ ಕಾರ್ಯಗಳಲ್ಲಿ ತಮ್ಮನ್ನು ತಾವು ಹೇಗೆ ತೊಡಗಿಸಿಕೊಳ್ಳುತ್ತಿದ್ದರೆಂಬುವುದು ಅವರು ಆಗಾಗ ನೀಡಿದ ದಾನ ದತ್ತಿ ವಿಷಯಗಳಿಂದ ತಿಳಿದುಕೊಳ್ಳಬಹುದಾಗಿದೆ.ದಾನ–ದತ್ತಿಗಳನ್ನು ನೀಡುವುದು ಒಂದು ಧಾರ್ಮಿಕ ಕ್ರಿಯೆಯೇ ಆಗಿದ್ದರೂ ಅದು ಸಮಾಜಕ್ಕೆ ಉಪಯುಕ್ತವಾದುದೆಂಬುದನ್ನು ಮಾತ್ರ ತಳ್ಳಿಹಾಕುವಂತಿಲ್ಲ. ಉಳ್ಳವರಿಂದ ಇಲ್ಲದವರ ಕಡೆಗೆ ಸಂಪತ್ತು ಹರಿದು ಬರುತ್ತಿದ್ದ ಒಂದು ಹಿತಕರ ಮಾರ್ಗ ಅದಾಗಿತ್ತು. ದಾನಿಗಳು ಕೇವಲ ಕೆಲವರಿಗೆ ದಾನಕೊಡುವುದಕ್ಕಷ್ಟೇ ಸೀಮಿತವಾಗದೆ ಎಲ್ಲ ಜೀವಿಗಳ ಹಿತಕ್ಕಾಗಿ, ಅದಕ್ಕೆ ಒದಗಿಬರುವ ಸಾಮಾಜಿಕ ಕಾರ್ಯಗಳಿಗಾಗಿ, ದತ್ತಿಗಳನ್ನು ಬಿಡು ತ್ತಿದ್ದುದು ಉದ್ದಕ್ಕೂ ಕಂಡುಬರುತ್ತದೆ. ಪ್ರಜೆಗಳನ್ನು ತನ್ನ ಮಕ್ಕಳಂತೆ ಕಾಪಾಡಬೇಕೆಂಬುದು ರಾಜನ ಧರ್ಮವಾಗಿತ್ತು.ಅದಕ್ಕೆ ಅನುಗುಣವಾಗಿ ರಾಜರು ಅಗತ್ಯವಿರುವ ಕಡೆಗಳಲ್ಲೆಲ್ಲಾ ದೇವಾಲಯಗಳ ನಿರ್ಮಾಣ ಕೆರೆಕಟ್ಟಿಸುವುದು, ಬಾವಿ ತೋಡಿಸುವುದು, ಇತ್ಯಾದಿ ಸಮಾಜೋಪಯೋಗಿ ಕಾರ್ಯಗಳನ್ನು ಶ್ರದ್ಧೆಯಿಂದ ಮಾಡಿಸುತ್ತಿದ್ದರು. ಪುಣ್ಯ ಲಭಿಸುವುದೆಂಬ ನಂಬಿಕೆಯು ಇದಕ್ಕೆ ಬೆನ್ನೆಲುಬಾಗಿತ್ತು. ಕೇವಲ ರಾಜರಷ್ಟೇ ಅಲ್ಲದೆ ಅವರ ಕೈಕೆಳಗಿನ ಸಾಮಂತರು ಅಧಿಕಾರಿಗಳು ಕೂಡ ಇಂತಹ ಕಾರ್ಯಗಳನ್ನು ಮಾಡುತ್ತಿದ್ದರು. ಅಲ್ಲದೆ ಇತರ ಸಾಮಾನ್ಯ ಜನರು ಕೂಡ ಇದಕ್ಕೆ ಕೈ ಜೋಡಿಸುತ್ತಿದ್ದುದುಂಟು. ಅಧಿಕಾರದಲ್ಲಿರುವ ರಾಜರು ಜನಹಿತಕ್ಕಾಗಿ ಕೈಗೊಂಡಿರುವ ಲೋಕೋಪಯೋಗಿ ಕಾರ್ಯಗಳು, ಅವುಗಳಲ್ಲಿ ಕೆರೆ–ಕಟ್ಟೆಗಳ ನಿರ್ಮಾಣ, ಛತ್ರಗಳ ನಿರ್ಮಾಣ, ದೇವಾಲಯಗಳನ್ನು ನಿರ್ಮಿಸುವುದು, ಅಂದಿನ ಜಾತಿ ವ್ಯವಸ್ಥೆ, ಅವರ ಸ್ಥಾನಮಾನ ಮತ್ತು ಸಾಮಾಜಿಕ ರಂಗದಲ್ಲಿ ಸ್ತ್ರೀಯರಿಗೆ ಇರುವ ಸ್ಥಾನಮಾನ, ಪುರೋಹಿತರಿಗಿರುವ ಸ್ಥಾನಮಾನವನ್ನು ಮತ್ತು ಅಂದು ಪ್ರಚಲಿತವಿದ್ದ ಸಾಮಾಜಿಕ ವರ್ಗ ವ್ಯವಸ್ಥೆ,ಕುರಿತು ವಿಚಾರಮಾಡಲಾಗಿದೆ.

ಅಧ್ಯಾಯ ಆರರಲ್ಲಿ ಧಾರ್ಮಿಕ ಅಧ್ಯಯನ: ಭಾರತವು ಇಡೀ ಜಗತ್ತಿಗೆ ಅಧ್ಯಾತ್ಮಿಕ ಗುರು ಎನಿಸಿದೆ. ಇಲ್ಲಿ ಪುರಾತನ ಕಾಲದಿಂದಲೂ ಅನೇಕ ಋಷಿಮುನಿಗಳು ತಮ್ಮ ಕಠಿಣ ತಪಸ್ಸಿನಿಂದ ಸಿದ್ಧಿಗಳನ್ನು ಪಡೆದಿದ್ದರು ಇಂತಹ ತಪಸ್ಸಿನಿಂದಲೇ ತಮ್ಮ ಇಷ್ಟಾರ್ಥಗಳನ್ನು ಪಡೆದುಕೊಳ್ಳುತ್ತಿದ್ದರು ಎಂಬುವುದಕ್ಕೆ ಅನೇಕ ಪುರಾಣಗಳು ಕಾವ್ಯಗಳು ಶಾಸನಗಳು ಸಾಕ್ಷಿಯಾಗುತ್ತವೆ. ಶಾಸನಗಳಲ್ಲಿಯೂ ಉಕ್ತಗೊಂಡಂತೆ ಮಾನವನು ತನ್ನ ಸುಖ ಜೀವನಕ್ಕಾಗಿ ತನಗೆ ಬೇಕಾದ ಬೇಕು ಬೇಡಗಳನ್ನು,

ದೈಹಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ರಾಜಕೀಯ, ಸಾಮಾಜಿಕ, ಆರ್ಥಿಕ, ವೈವಾಹಿಕ, ಕೌಟುಂಬಿಕ ವ್ಯವಸ್ಥೆಗಳನ್ನು ರೂಪಿಸಿಕೊಂಡಂತೆಯೇ ಮಾನಸಿಕ ನೆಮ್ಮದಿಯನ್ನು ಹೊಂದಲು ಧಾರ್ಮಿಕ ವ್ಯವಸ್ಥೆಯನ್ನು ರೂಢಿಸಿಕೊಂಡಂತೆ ತೋರುತ್ತದೆ. ಧರ್ಮದ ಉದ್ದೇಶವೇ ಜೀವನಕ್ಕೆ ಸಾರ್ಥಕತೆಯನ್ನು ಒದಗಿಸುವುದಾಗಿದೆ. ಧರ್ಮವೆಂದರೆ ಮತೀಯ ಆಚಾರ ವಿಚಾರಗಳ ಹಿಂದಿರುವ ಒಟ್ಟು ಮನೋವೃತ್ತಿಗಳ ಮೊತ್ತವೇ ಆಗಿದೆ. ತೆಲಂಗಾಣ ಮತ್ತು ಹೈದರಾಬಾದ ಕರ್ನಾಟಕ ಪ್ರದೇಶಗಳಲ್ಲಿ ಪ್ರಮುಖವಾಗಿ ಬೆಳೆದ ಧರ್ಮಗಳು, ಮತ್ತು ವಿವಿಧ ಮತ-ಧರ್ಮಗಳು ಅವುಗಳಲ್ಲಿ ಮುಖ್ಯವಾಗಿ ಬೌದ್ಧ, ಜೈನ, ವೀರಶೈವ ಹಾಗೂ ವೈಧಿಕ ಧರ್ಮಗಳು ಇಲ್ಲಿ ಪ್ರಧಾನವಾಗಿ ವ್ಯಾಪಿಸಿದ್ದ ಧರ್ಮಗಳೆಂಬುದು ಇಲ್ಲಿಯ ಶಾಸನಗಳ ಅಧ್ಯಯನದಿಂದ ತಿಳಿದು ಬರುತ್ತದೆ. ರಾಜಮನೆತನಗಳು, ಅವುಗಳ ಹುಟ್ಟು ಮತ್ತು ಅವುಗಳ ಜೀರ್ಣೋದ್ಧಾರ, ದೇವಾಲಯಗಳ ನಿರ್ಮಾಣ ಮತ್ತು ಅವುಗಳ ನಿರ್ವಹಣೆಗಾಗಿ ನೀಡಿದ ದಾನ-ದತ್ತಿಗಳು ಹಾಗೂ ವಿವಿಧ ಧರ್ಮಗಳ ಏಳು-ಬೀಳುಗಳ ಬಗ್ಗೆ ಕುರಿತು ಇಲ್ಲಿ ವಿವೇಚಿಸಲಾಗಿದೆ.

ಅಧ್ಯಾಯ ಏಳರಲ್ಲಿ ಆರ್ಥಿಕ ಅಧ್ಯಯನ: ರಾಜ್ಯದ ಸಪ್ತಾಂಗಗಳಲ್ಲಿ ಅರ್ಥಾಂಗವೂ ಒಂದು. ರಾಜ್ಯವು ಸರ್ವಾಂಗೀಣ ಅಭಿವೃದ್ಧಿ ಹೊಂದಬೇಕಾದರೆ ಅಲ್ಲಿಯ ಆರ್ಥಿಕ ವ್ಯವಸ್ಥೆ ಶ್ರೀಮಂತ ವಾಗಿರಬೇಕಾಗುತ್ತದೆ. ತೆಲಂಗಾಣ ಮತ್ತು ಹೈದರಾಬಾದ ಕರ್ನಾಟಕ ಪ್ರದೇಶಗಳ ಶಾಸನಗಳಲ್ಲಿ ಕಂಡುಬರುವ ಅಂದಿನ ಆಳರಸರ ರಾಜ್ಯ ಬೊಕ್ಕಸಕ್ಕೆ ಹರಿದು ಬರುವ ಪ್ರಮುಖ ಆದಾಯಗಳು ಎಂದರೆ ಅಲ್ಲಿಯ ಕೃಷಿಯಿಂದ ಮತ್ತು ಭೂಮಿ, ವಿವಿಧ ಪ್ರದೇಶಗಳ, ಗ್ರಾಮಗಳ ಮೇಲಿನ ತೆರಿಗೆ, ವ್ಯಾಪಾರಿಗಳ ಮೇಲಿನ ತೆರಿಗೆ ಮತ್ತು ಚಿಕ್ಕ ಪುಟ್ಟ ವಸ್ತುಗಳ ತಯಾರಿಕೆಗಳಾದ ಎಲೆ, ಎತ್ತಿನ ಗಾಣದ, ಅಡಿಕೆ, ಮೆಣಸು ಇತ್ಯಾದಿ ವಾಣಿಜ್ಯ ಬೆಳೆಗಳ ಮೇಲೆ ಹಾಕುವ ತೆರಿಗೆಗಳಿಂದ ಹೀಗೆ ವಿವಿಧ ಮೂಲಗಳಿಂದ ಬಂದ ತೆರಿಗೆಯಿಂದ ಮತ್ತು ಕೃಷಿ ಮೂಲದಿಂದ ಬಂದ ಆದಾಯದಿಂದ ರಾಜ್ಯ ಬೊಕ್ಕಸ ತುಂಬುತ್ತಿತ್ತು. ಹೀಗಾಗಿ ಈ ಆದಾಯದಿಂದ ಬಂದ ಸಂಪತ್ತಿನಿಂದ ರಾಜರು, ರಾಣಿಯರು, ದಂಡನಾಯಕರು, ಸಾಮಂತರು, ಅಲ್ಲಿಯ ಧರ್ಮಕಾರ್ಯ ಗಳಾದ ಕೆರೆ, ಬಾವಿ, ಕಾಲುವೆ, ದೇವಾಲಯಗಳ ನಿರ್ಮಾಣ ಮಾಡುವುದು ಅವುಗಳ ಪೋಷಣೆಗಾಗಿ ಉದಾರವಾದ ದಾನ-ದತ್ತಿ ನೀಡುತ್ತಿದ್ದರೆಂದು ಈ ಭಾಗದಲ್ಲಿನ ಶಾಸನಗಳಲ್ಲಿ ಉಲ್ಲೇಖಗೊಂಡ ಅಂಶಗಳಿಂದ ಆರ್ಥಿಕ ಸ್ಥಿತಿಗತಿ ಬಗ್ಗೆ ತಿಳಿದುಕೊಳ್ಳಬಹುದಾಗಿದೆ.

ಅಧ್ಯಾಯ ಎಂಟರಲ್ಲಿ ಸಾಹಿತ್ಯಿಕ ಅಧ್ಯಯನ: ತೆಲಂಗಾಣ ಮತ್ತು ಹೈದರಾಬಾದ ಕರ್ನಾಟಕ ಪ್ರದೇಶಗಳ ಶಾಸನಗಳಲ್ಲಿ ಅಲ್ಲಲ್ಲಿ ಪ್ರಸಾಂಗಿಕವಾಗಿ ಸಾಹಿತ್ಯಿಕ ಅಂಶಗಳು ಕಂಡು ಬರುತ್ತವೆ. ಶಾಸನವನ್ನು ಹಾಕಿಸುವುದರ ಮುಖ್ಯ ಉದ್ದೇಶ ಸಾಹಿತ್ಯ ರಚನೆಯಲ್ಲ. ಅದು ಏನಿದ್ದರೂ

ಘಟನೆ ಅಥವಾ ಸನ್ನಿವೇಶಗಳನ್ನು ನೇರವಾಗಿ ನಿರೂಪಿಸುವಂತಹದ್ದಾಗಿದೆ. ಮೇಲಾಗಿ ಅವು ರಾಜಾಜ್ಞೆಯ ಸ್ವರೂಪವನ್ನು ಹೊಂದಿದ್ದವು. ಶಾಸನ ಕವಿಯಾಗಲಿ, ಲೇಖಕನಾಗಲಿ ಅವರ ಆಜ್ಞೆಯನ್ನು ಗ್ರಹಿಸಿ ನಿರ್ದಿಷ್ಟವಾದ ಚೌಕಟ್ಟಿನಲ್ಲಿ ನಿರೂಪಿಸುತ್ತಿದ್ದನು. ಆದಾಗಿಯ್ಯೂ ಅಲ್ಲಲ್ಲಿ ಕವಿಗಳು ತಮ್ಮ ಕಾವ್ಯಶಕ್ತಿಯನ್ನು ಆಯಾ ಸಂದರ್ಭವನ್ನೂ ಅವಲಂಬಿಸಿ. ಅದಕ್ಕೆ ಸಾಹಿತ್ಯಗುಣದ ಲೇಪವನ್ನುನೀಡಿದ್ದಾರೆ. ಹೀಗಾಗಿ ಪ್ರಾಸಂಗಿಕವಾಗಿ ಸಾಹಿತ್ಯದ ಗುಣಲಕ್ಷಣಗಳು ಅಲ್ಲಲ್ಲಿ ಕಾಣಿಸಿ ಕೊಳ್ಳುತ್ತದೆ. ಇಲ್ಲಿ ಉಲ್ಲೇಖಗೊಂಡ ಸಾಹಿತ್ಯಿಕ ಗುಣಲಕ್ಷಣಗಳುಳ್ಳ ಪದ್ಯಗಳು ಛಂದಸ್ಸಿನ ಚರಿತ್ರೆಗೆ ಪೂರಕಗಳಾಗಿವೆ ಅವುಗಲ್ಲಿ ತೆಲಂಗಾಣದ ಗಂಗಾಪುರ ಶಾಸನ, ಕಲಬುರಗಿಯ ಏವೂರಿನ ಶಾಸನ, ಕೊಪ್ಪಳ ಜಿಲ್ಲೆಯ ಇಟ್ಟಿಗೆ ಶಾಸನಗಳು ಛಂದೋಬಂಧದಲ್ಲಿ ರಚನೆಯಾದ ಪುಟ್ಟ ಚಂಪೂ ಕಾವ್ಯದಂತಿವೆ. ತೆಲಂಗಾಣದ ಕರೀಂನಗರ ಜಿಲ್ಲೆಯ ಕುರ್ಕ್ಯಾಲ ಶಾಸನವು ಕನ್ನಡದ ಆದಿ ಕವಿ ಪಂಪನ ಜೀವನ ಚರಿತ್ರೆ ಮೇಲೆ ಬೆಳಕು ಚಲ್ಲುತ್ತದೆ. ಅಲ್ಲದೆ ತೆಲುಗು ಕಂದಪದ್ಯದ ಉಲ್ಲೇಖಗೊಂಡ ಮೊದಲ ಆಕರವಾಗಿದೆ. ಇಂತಹ ಪ್ರಮುಖ ಸಾಹಿತ್ಯಿಕ ಅಂಶಗಳು ಸಾಹಿತ್ಯ ಮತ್ತು ಕವಿ ಚರಿತೆಗೆ ಬಹು ಮುಖ್ಯವೆನಿಸುತ್ತವೆ ಹಾಗೂ ತೆಲಂಗಾಣ ಮತ್ತು ಹೈದರಾಬಾದ ಕರ್ನಾಟಕ ಪ್ರದೇಶಗಳ ಕನ್ನಡ ಶಾಸನಗಳಲ್ಲಿ ಅನೇಕ ಕಡೆಗಳಲ್ಲಿ ಚೌಷಷ್ಟಿ ಕಲಾ ಪಂಡಿತರು; ಸಕಲ ಕಲಾ ಪಾರಂಗತರು ಎಂಬ ಉಲ್ಲೇಖಗಳು ಬರುತ್ತವೆ. ಹೀಗಾಗಿ ಇಲ್ಲಿಯ ಸಾಹಿತ್ಯ ಮತ್ತು ಲಲಿತಕಲೆಗಳ ಬಗ್ಗೆ ವಿವೇಚಿಸಲಾಗಿದೆ.

ಅಧ್ಯಾಯ ಒಂಬತ್ತರಲ್ಲಿ ಶೈಕ್ಷಣಿಕ ಅಧ್ಯಯನ: ಪ್ರಾಚೀನ ಭಾರತೀಯ ಶಿಕ್ಷಣ ಪರಂಪರೆಯು ತುಂಬಾ ವೈಶಿಷ್ಟಪೂರ್ಣವಾಗಿದೆ.ಕಾರಣ ಆರಂಭದ ದಿನಗಳಲ್ಲಿ ಸಮಾಜದಲ್ಲಿ ಕೆಲವೇ ಕೆಲವರು ಅಕ್ಷರ ಜ್ಞಾನ ಬಲ್ಲವರಾಗಿದ್ದರು. ಮತ್ತು ಶಿಕ್ಷಣವು ಸಾರ್ವತ್ರಿಕವಾಗಿರಲಿಲ್ಲ. ಉಚ್ಚ ಕುಲದಲ್ಲಿ ಹುಟ್ಟಿದವರಿಗೆ ಮತ್ತು ರಾಜಕುಮಾರರಿಗೆ ಮಾತ್ರ ಸೀಮಿತವಾಗಿತ್ತು.ಬೋಧನೆ ಕ್ರಮ ಮೌಖಿಕವಾಗಿತ್ತು. ಅಂದು ಯಾವುದೇ ನಿರ್ದಿಷ್ಟವಾದ ಪಠ್ಯ ಪುಸ್ತಕಗಳು ಇರಲಿಲ್ಲ. ಬರವಣಿಗೆ ಅಭ್ಯಾಸ ಮಾಡವುದಾದರೆ ಉಸುಕಿನ ಮೇಲೋ ಇಲ್ಲವೇ ಮಣ್ಣಿನ ಮೇಲೋ ಅಭ್ಯಾಸ ಮಾಡಿಸಲಾಗುತ್ತಿತ್ತು. ಅಂದು ಸಾರ್ವಜನಿಕ ಶಿಕ್ಷಣ ಕೇಂದ್ರಗಳು ಇರಲಿಲ್ಲ. ಇಂದಿನ ಹಾಗೆ ವಿದ್ಯಾರ್ಥಿ ಇರುವಲ್ಲಿಗೆ ಹೋಗಿ ಶಿಕ್ಷಕರು ಶಿಕ್ಷಣ ನೀಡುತ್ತಿರಲಿಲ್ಲ. ಆದರೆ ಅಂದು ಗುರುಗಳು ಇರುವಲ್ಲಿಗೆಯೇ ಹೋಗಿ ವಿದ್ಯಾರ್ಥಿ ಕ್ಷಣ ಕಲಿಯಬೇಕಾಗಿತ್ತು. ಹೀಗಾಗಿ ಧಾರ್ಮಿಕ ಕೇಂದ್ರಗಳೇ ಅಂದು ಶಿಕ್ಷಣ ಕೇಂದ್ರಗಳಾಗಿದ್ದವು. ಎಂಬುವುದನ್ನು ತೆಲಂಗಾಣ ಮತ್ತು ಹೈದರಾಬಾದ ಕರ್ನಾಟಕ ಪ್ರದೇಶಗಳಲ್ಲಿ ಲಭಿಸಿದ ಶಾಸನಗಳಿಂದ ತಿಳಿದು ಬರುತ್ತದೆ. ಅವುಗಳಲ್ಲಿ ಅಗ್ರಹಾರಗಳು, ದೇವಾಲಯಗಳು, ಬ್ರಹ್ಮಪೂರಿಗಳು, ಘಟಿಕಾಸ್ಥಾನಗಳು ಪ್ರಮುಖವಾಗಿದ್ದವು.

ಅಧ್ಯಾಯ ಹತ್ತರಲ್ಲಿ ಶಾಪಾಶಯಗಳ ಅಧ್ಯಯನ: ಶಾಪಾಶಯಗಳು ಅಂದು ಜನರ ಸ್ವಭಾವಗಳನ್ನು ತಿದ್ದುವಲ್ಲಿ ಸಾಮಾಜಿಕ ಸ್ವಾಸ್ಥ್ಯ ಕಾಪಾಡಿಕೊಂಡು ಹೋಗುವಲ್ಲಿ ಅವು ಹೇಗೆ ಪಾತ್ರವಹಿಸಿದವು ಎಂಬುದನ್ನು ನಮ್ಮ ಮೊಟ್ಟಮೊದಲ ಇಲ್ಲಿ ನಿರೂಪಿಸಲಾಗಿದೆ. ಕ್ರಿ.ಶ.೪೫೦ರ ಹಲ್ಮಿಡಿ ಶಾಸನದಿಂದಲೇ ಈ ಶಾಪಾಶಯಗಳು ಕಂಡುಬರುತ್ತವೆ. ಸಾಮಾನ್ಯವಾಗಿ ಶಾಸನದ ಆರಂಭದಲ್ಲಿ ದೇವತಾ ಸ್ತುತಿಯ ಸಂಸ್ಕೃತ ಶ್ಲೋಕದಿಂದ ಆರಂಭಗೊಂಡು ರಾಜನ ವಂಶಾವಳಿ, ಶಾಸನದ ಉದ್ದೇಶವನ್ನು ನಿರೂಪಿಸುವ ಘಟನಾವಳಿ, ಅಲ್ಲಿಯ ವ್ಯಕ್ತಿಗಾಗಲಿ, ಸಾಮಾಜಿಕ ಧರ್ಮಕ್ಕಾಗಲಿ ಬಿಟ್ಟ ದಾನ-ದತ್ತಿಗಳ ವಿವರದ ನಂತರ ಕೊನೆಯಲ್ಲಿ ಬರುವ ಅಂಶಗಳದೆಂದರೆ ಶಾಪಾಶಯದ ನುಡಿಗಳು. ೧೦ನೇ ಶತಮಾನದ ತರುವಾಯ ಶಾಸನಗಳ ಕೊನೆಯಲ್ಲಿ ಹಾಕಿಸಿದ ಶಾಸನಗಳು ಕಾಪಾಡಿಕೊಂಡು ಬಂದವರಿಗೆ ಲಭಿಸುವ ಫಲಾಶಯಗಳ ವಿವರವಿದೆ. ತದನಂತರ ನೀಡಿದ ಫಲಾಶಯಗಳ ವಿರುದ್ಧವಾದ ಶಾಪಾಶಯಗಳ ಸುದೀರ್ಘವಾದ ಪಟ್ಟಿಯೇ ಇರುತ್ತದೆ. ಕ್ರಿ.ಶ.೧೪-೧೫ನೇ ಶತಮಾನದ ಶಾಸನಗಳ ಶಾಪಾಶಯಗಳು ಕಠೋರವೂ, ಕ್ಲಿಷ್ಟವೂ ಮತ್ತು ಅಶ್ಲೀಲ ಪದಗಳಲ್ಲಿ ರಚನೆಯಾಗಿರುವುದು ಕಂಡುಬರುತ್ತವೆ. ಇದರಿಂದಾಗಿ ಅಂದಿನ ಕಾಲ ಜನರ ಮನೋವೃತ್ತಿಗಳ ಬಗ್ಗೆ, ಅವುಗಳನ್ನು ನಿಯಂತ್ರಿಸುವುದಕ್ಕೆ ಶಾಸನಗಳನ್ನು ಹಾಕಿಸುವವರು ಕೈಗೊಂಡ ಕ್ರಮಗಳ ಬಗ್ಗೆ ಈ ಶಾಪಾಶಯಗಳಿಂದ ತಿಳಿದುಬರುತ್ತದೆ. ರಾಜನು ನೀಡುವ ದೈಹಿಕ ಶಿಕ್ಷೆಗಿಂತಲೂ ದೈವ ಅಥವಾ ಧಾರ್ಮಿಕ ಹಿನ್ನೆಲೆಯಲ್ಲಿ ನೀಡುವ ಶಾಪಗಳು ಪರಿಣಾಮಕಾರಿಯಾಗಿದ್ದವು ಎಂಬ ಕಲ್ಪನೆ ಅವರಲ್ಲಿರುವುದು ಕಂಡುಬರುತ್ತದೆ.

ಹೀಗೆ ತೆಲಂಗಾಣ ಮತ್ತು ಹೈದರಾಬಾದ ಕರ್ನಾಟಕ ಪ್ರದೇಶಗಳ ಕನ್ನಡ ಶಾಸನಗಳಲ್ಲಿ ಕಂಡು ಬರುವ ಸಾಮಾಜಿಕ ಅಧ್ಯಯನ, ಧಾರ್ಮಿಕ ಅಧ್ಯಯನ, ಆರ್ಥಿಕ ಅಧ್ಯಯನ, ಸಾಹಿತ್ಯಿಕ ಅಧ್ಯಯನ, ಶೈಕ್ಷಣಿಕ ಅಧ್ಯಯನ, ಲಲಿತ ಕಲೆಗಳ ಅಧ್ಯಯನ ಮತ್ತು ಶಾಪಾಶಯಗಳ ಅಧ್ಯಯನಗಳಿಂದ ಈ ಪ್ರದೇಶಗಳು ಎಷ್ಟೊಂದು ವೈವಿಧ್ಯಮಯವಾದ ಬದುಕನ್ನು ಕಟ್ಟುಕೊಂಡಿದ್ದರು ಮತ್ತು ಈ ಪ್ರದೇಶದಲ್ಲಿ ವಿವಿಧ ರಾಜಮನೆತನಗಳು ರಾಜಕೀಯ ಶಕ್ತಿಕೇಂದ್ರಗಳಾಗಿ ಹೇಗೆ ಕೆಲಸ ಮಾಡಿವೆ ಎಂಬುದು ಸ್ಪಷ್ಟವಾಗುತ್ತದೆ.

ಅಧ್ಯಾಯ ಹನ್ನೊಂದರಲ್ಲಿ ಸಮಾರೋಪ: ಈ ಅಧ್ಯಾಯದಲ್ಲಿ ತೆಲಂಗಾಣ ಮತ್ತು ಹೈದರಾಬಾದ ಕರ್ನಾಟಕ ಪ್ರದೇಶಗಳ ಕನ್ನಡ ಶಾಸನಗಳ ಅಧ್ಯಯನದ ಒಟ್ಟು ಸಾರವನ್ನೂ, ಈ ಕ್ಷೇತ್ರದಲ್ಲಿ ಇನ್ನೂ ನಡೆಯಬೇಕಾಗಿರುವ ಅಧ್ಯಯನದ ಬಗ್ಗೆ ನಿರೂಪಿಸಲಾಗಿದೆ.

ಕೊನೆಯಲ್ಲಿ ಅನುಬಂಧಗಳಲ್ಲಿ ಪರಾಮರ್ಶನ ಸಾಹಿತ್ಯಸೂಚಿ, ನಕ್ಷೆಗಳು ಇತ್ಯಾದಿ ಪೂರಕಸಾಮಗ್ರಿಗಳ ಸಂಗ್ರಹವನ್ನು ಕೊಡಲಾಗಿದೆ.

ಅಧ್ಯಯನ ವಿಧಾನ

ಯಾವುದೇ ಒಂದು ಅಧ್ಯಯನಕ್ಕೆ ತೊಡಗಿಸಿಕೊಂಡಾಗ ಕೆಲವು ವಿಧಾನಗಳು ಅನುಸರಿಸ ಬೇಕಾಗುತ್ತದೆ. ಆಯಾ ವಿಷಯಗಳಿಗೆ ಅನುಗುಣವಾಗಿ ಕಾಲ, ಸಂದರ್ಭಕ್ಕೆ ತಕ್ಕ ಕೆಲವು ಮಾರ್ಗೋಪಾಯಗಳನ್ನು ಕಂಡುಕೊಳ್ಳಬೇಕಾಗುತ್ತದೆ. ಇಲ್ಲವೇ ಅಧ್ಯಯನ ಕ್ಷೇತ್ರಕ್ಕೆ ಧುಮುಕಿದಾಗ ಅದುವೇ ನಮಗೆ ಕಲಿಸಿಕೊಡುತ್ತದೆ. ಯಾವುದೇ ವಿಷಯಕ್ಕೆ ಹೀಗೆ ವಿಧಾನ ಅನುಸರಿಸಬೇಕೆಂಬ ಮಡಿವಂತಿಕೆ ಇರುವುದಿಲ್ಲ. ಸಂದರ್ಭಕ್ಕೆ ತಕ್ಕಂತೆ ಅನುಸರಿಸಬೇಕಾಗುತ್ತದೆ. ಅದರಂತೆಯೇ ಇಲ್ಲಿ ಶಾಸನಗಳ ಅಧ್ಯಯನದ ಸಂದರ್ಭದಲ್ಲಿ ಕೆಲವು ವಿಧಾನಗಳನ್ನು ಅನುಸರಿಸಲಾಗಿದೆ.

ಮೊದಲನೆಯದಾಗಿ ತೆಲಂಗಾಣ ಮತ್ತು ಹೈದರಬಾದ ಕರ್ನಾಟಕ ಪ್ರದೇಶಗಳ ಕನ್ನಡ ಶಾಸನಗಳು ಪ್ರಕಟಣೆಗೊಂಡ ಶಾಸನ ಸಂಪುಟಗಳನ್ನು ಒಂದೆಡೆಯಲ್ಲಿ ಸಂಗ್ರಹಿಸಲಾಯಿತು. ಎರಡನೆಯದಾಗಿ ನಮ್ಮ ಅಧ್ಯಯನದಲ್ಲಿ ಮಾಡಿಕೊಂಡ ಅಧ್ಯಾಯಗಳ ವಿಷಯವಾರು ವಿಷಯ ಗಳನ್ನು ಓದುವುದು, ಓದುವ ಸಂದರ್ಭದಲ್ಲಿ ಅಧ್ಯಯನಕ್ಕೆ ಸಂಬಂಧಪಟ್ಟ ವಿಷಯಗಳನ್ನು ಪ್ರತ್ಯೇಕ ಪಟ್ಟಿಕೆಗಳಲ್ಲಿ ದಾಖಲಿಸಿಕೊಳ್ಳಲಾಯಿತು. ಅದರ ಕಾಲ, ಸ್ಥಳ, ರಾಜಮನೆತನ, ಅಲ್ಲಿಯ ವಿಶೇಷತೆ, ಶೀರ್ಷಿಕೆಯಡಿಯಲ್ಲಿ ವಿಷಯಗಳನ್ನು ಸಂಗ್ರಹಿಸುತ್ತಾ; ವಿಷಯದ ಸಂಕೀರ್ಣತೆ, ಗೊಂದಲ ಬಂದಾಗಲೆಲ್ಲ ಅವುಗಳನ್ನು ಟಿಪ್ಪಣಿ ಮಾಡಿಕೊಳ್ಳುವುದು, ಈಗಾಗಲೇ ಈ ಕ್ಷೇತ್ರದಲ್ಲಿ ಕೆಲಸ ಮಾಡಿದವರೊಂದಿಗೆ ಅಧ್ಯಯನದ ಮಾರ್ಗದರ್ಶಕರೊಂದಿಗೆ ಚರ್ಚಿಸುವುದು ಮತ್ತು ಈಗಾಗಲೇ ಈ ಪ್ರದೇಶಗಳ ಕೆಲವು ಜಿಲ್ಲೆಗಳ, ತಾಲೂಕುಗಳ ಶಾಸನಗಳನ್ನೇ ಕುರಿತು ಅಧ್ಯಯನ, ಸಂಪಾದನೆ ಮಾಡಿರುವ ವ್ಯಕ್ತಿಗಳೊಂದಿಗೆ ಕ್ಷೇತ್ರಕಾರ್ಯಕ್ಕೆ ಹೋದಾಗಲೆಲ್ಲಾ ಅವರೊಂದಿಗೆ ಚರ್ಚಿಸುವುದು ಹೀಗೆ ಶಾಸನಗಳ ಓದುವಿಕೆ, ವಿದ್ವಾಂಸರೊಂದಿಗೆ ಮಾರ್ಗದರ್ಶಕರೊಂದಿಗೆ ಚರ್ಚೆ, ವಿಷಯವಾರು ಟಿಪ್ಪಣಿಗಳನ್ನು ಪ್ರತ್ಯೇಕವಾಗಿ ದಾಖಲಿಸಿಕೊಳ್ಳುವುದು ಅವುಗಳನ್ನು ವಿಶ್ಲೇಷಿಸುವುದು ಮತ್ತು ಹೈದರಾಬಾದ ಕರ್ನಾಟಕ ಮತ್ತು ತೆಲಂಗಾಣ ಪ್ರದೇಶಗಳ ಶಾಸನಗಳಲ್ಲಿ ಕಂಡುಬರುವ ವಿಷಯಗಳ ಸಾಂಸ್ಕೃತಿಕ ಅಧ್ಯಯನ ಮಾಡುವುದು ಇಲ್ಲಿ ಪ್ರಧಾನ ವಿಧಾನವಾಗಿದೆ.

ಇಲ್ಲಿಯ ಅಧ್ಯಯನಕ್ಕೆ ಈವರೆಗೆ ಪ್ರಕಟಗೊಂಡ ಶಾಸನಗಳನ್ನು ಮಾತ್ರ ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಳ್ಳಲಾಗಿದೆ. ಮೂಲ ಆಕರಗಳಾಗಿ ಶಾಸನಗಳನ್ನೇ ಬಳಸಿಕೊಳ್ಳಾಗಿದೆ. ಅಂಶಿಕವಾಗಿ ಸಾಹಿತ್ಯ ಕೃತಿಗಳ ಸಹಾಯವನ್ನು ತೆಗೆದುಕೊಳ್ಳಲಾಗಿದೆ. ಒಟ್ಟಾರೆಯಾಗಿ ಇಲ್ಲಿ ತೆಲಂಗಾಣ ಮತ್ತು ಹೈದರಬಾದ ಕರ್ನಾಟಕ ಪ್ರದೇಶಗಳ ಕನ್ನಡ ಶಾಸನಗಳ ಸಂಗ್ರಹ, ಸಮೀಕ್ಷೆ, ವಿಶ್ಲೇಷಣೆ ಮತ್ತು ವ್ಯಾಖ್ಯಾನ ಮಾಡುವ ಕ್ರಮದಲ್ಲಿ ಸಾಗಿ, ಈ ಪ್ರದೇಶಗಳ ಸಾಂಸ್ಕೃತಿಕ ಬದುಕನ್ನು ಶೋಧಿಸುವ ವಿಧಾನವನ್ನು ಅನುಸರಿಸಲಾಗಿದೆ.

ಅಧ್ಯಯನದ ಅಗತ್ಯತೆ

ಇಂದಿನ ತೆಲಂಗಾಣ ಪ್ರದೇಶಗಳು ಪ್ರಾಚೀನ ಕರ್ನಾಟಕದ ಭಾಗವೇ ಆಗಿರುವುದರಿಂದ, ಒಂದೇ ರಾಜಮನೆತನಕ್ಕೆ ಸೇರಿದ ಕನ್ನಡದ ರಾಜಮನೆತನಗಳು ಹೈದರಾಬಾದ್ ಕನಾಟಕ ಮತ್ತು ತೆಲಂಗಾಣ ಪ್ರದೇಶಗಳಲ್ಲಿ ಆಳ್ವಿಕೆ ಮಾಡಿದ್ದಾರೆ. ಹೀಗಾಗಿ ಇಂದು ತೆಲಂಗಾಣ ಆಡಳಿತಾತ್ಮಕವಾಗಿ ತೆಲಂಗಾಣ ರಾಜ್ಯವಾಗಿದ್ದರೂ, ಅಂದು ಕರ್ನಾಟಕ ರಾಜ್ಯದ ಭಾಗವೇ ಆಗಿತ್ತು. ಅಲ್ಲಿಯ ಜನ ಭಾಷೆ, ಆಡಳಿತ ಭಾಷೆ ಕನ್ನಡದಲೇ ಆಗಿತ್ತು. ಅದಕ್ಕಾಗಿಯೇ ದಕ್ಷಿಣಭಾರತದಲ್ಲಿಯೇ ಇಂದಿನ ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳಲ್ಲಿ ಕನ್ನಡದ ಅತಿ ಹೆಚ್ಚು ಶಾಸನಗಳು ಲಭಿಸಿವೆ. ಹೀಗಾಗಿ ತೆಲಂಗಾಣ ಪ್ರದೇಶಗಳ ಅಧ್ಯಯನವೆಂದರೆ ಪ್ರಾಚೀನ ಮತ್ತು ಮಧ್ಯಯುಗೀನ ಕಾಲದ ಕರ್ನಾಟಕದ ಅಧ್ಯಯನವೇ ಆಗಿದೆ. ಹೀಗೆ ಈ ಎರಡು ಪ್ರದೇಶಗಳಲ್ಲಿ ಭಾಷಿಕ ಸಾಹಿತ್ಯಿಕ, ರಾಜಕೀಯ, ಧಾರ್ಮಿಕ, ಸಾಮಾಜಿಕ ಈ ಎಲ್ಲ ಅಂಶಗಳಿಂದ ನಿಖರವಾದ ಸಾಂಸ್ಕೃತಿಕ ಅನನ್ಯತೆ ಕಂಡುಬರುತ್ತದೆ. ಅದನ್ನು ಸಾಧಿಸಿ ತೋರಿಸುವ ಪ್ರಯತ್ನವೇ ಇಲ್ಲಿಯ ಅಧ್ಯಯನದ ಅಗತ್ಯತೆಯಾಗಿದೆ.

ತೆಲಂಗಾಣ ಮತ್ತು ಹೈದರಾಬಾದ ಕರ್ನಾಟಕ ಪ್ರದೇಶಗಳ ಕನ್ನಡ ಶಾಸನಗಳು: ಒಂದು ಸಾಂಸ್ಕೃತಿಕ ಅಧ್ಯಯನದಡಿಯಲ್ಲಿ ಕೈಗೊಳ್ಳುವ ಈ ಕಾರ್ಯವು ಅಗತ್ಯವಾಗಿತ್ತು ಎಂದು ಅನಿಸುತ್ತದೆ. ಈ ಹಿಂದೆ ಈ ಪ್ರದೇಶಗಳ ಶಾಸನಗಳ ಸಂಗ್ರಹ, ಅವುಗಳನ್ನು ಕುರಿತು ಬಿಡಿ ಬಿಡಿಯಾಗಿ ಅಧ್ಯಯನ ಕೈಗೊಂಡಿರುತ್ತಾರೆ. ಅಲ್ಲದೇ ಜಿಲ್ಲೆ ಮತ್ತು ತಾಲೂಕುವಾರು ಶಾಸನಗಳನ್ನು ತಮ್ಮ ಅಧ್ಯಯನದಲ್ಲಿ ಬಳಸಿಕೊಂಡು ಸಂಶೋಧನೆ ಮಾಡಿರುತ್ತಾರೆ. ಕಲಬುರ್ಗಿ ಜಿಲ್ಲೆಯ ಶಾಸನ, ಕೊಪ್ಪಳ ಜಿಲ್ಲೆಯ ಶಾಸನ, ಬಳ್ಳಾರಿ ಜಿಲ್ಲೆಯ ಶಾಸನ, ರಾಯಚೂರು ಮತ್ತು ತೆಲಂಗಾಣ ರಾಜ್ಯದ ಕನ್ನಡ ಶಾಸನಗಳ ಕುರಿತು ಹೀಗೆ ಬಿಡಿ ಬಿಡಿಯಾಗಿ ಅಧ್ಯಯನ ಮಾಡಿದ್ದಾರೆ. ಆದರೆ ತೆಲಂಗಾಣ ಮತ್ತು ಹೈದರಾಬಾದ ಕರ್ನಾಟಕದ ಪ್ರದೇಶಗಳ ಶಾಸನಗಳನ್ನು ಒಟ್ಟಾರೆಳೀ ಪ್ರದೇಶದಲ್ಲಿನ ಸಾಂಸ್ಕೃತಿಕ ಅಧ್ಯಯನ ಕುರಿತು ಈವರೆಗೆ ಅಧ್ಯಯನಗಳು ನಡೆದಿಲ್ಲವೆಂದೇ ಹೇಳಬಹುದು. ಈ ಎರಡು ಪ್ರದೇಶಗಳು ಒಂದೇ ರಾಜಮನೆತನಗಳ ಆಳ್ವಿಕೆಗೆ ಬಹುಕಾಲ ಒಳಪಟ್ಟಿದ್ದವು. ಅದರಲ್ಲಿ ವಿಶೇಷವಾಗಿ ಕರ್ನಾಟಕದ ರಾಜಮನೆತನಗಳಾದ ರಾಷ್ಟ್ರಕೂಟರು, ಬಾದಾಮಿ ಚಾಲುಕ್ಯರು, ಕಲ್ಯಾಣದ ಚಾಲುಕ್ಯರು, ವಿಜಯನಗರ ಅರಸರು, ಸಣ್ಣಮಟ್ಟ ಪಾಳೆಗಾರರು, ಸಾಮಂತರು, ಈ ಭೂಭಾಗವನ್ನು ಆಳಿದ್ದಾರೆ. ಹಾಗಾಗಿ ಈ ಎರಡು ಪ್ರದೇಶಗಳಲ್ಲಿ ಆಯಾ ರಾಜಮನೆತನದವರು ಹಾಕಿಸಿದ ಅನೇಕ ಶಾಸನಗಳು ಲಭಿಸುವುದರಿಂದ ಈ ಎರಡು ಪ್ರದೇಶಗಳ ಕನ್ನಡ ಶಾಸನಗಳನ್ನೇ ಆಧಾರವಾಗಿಟ್ಟು ಕೊಂಡು ಈ ಪ್ರದೇಶಗಳ ಸಾಂಸ್ಕೃತಿಕ ಅಧ್ಯಯನ ಮಾಡುವುದು ಅಗತ್ಯವೆಂದು ಮನಗಂಡು ಪ್ರಸ್ತುತ ಅಧ್ಯಯನಕ್ಕೆ ತೊಡಗಲಾಗಿದೆ.

ಅಧ್ಯಾಯ ಎರಡು

ಇದುವರೆಗಿನ ಅಧ್ಯಯನ ಸಮೀಕ್ಷೆ

ಅಧ್ಯಾಯ ಎರಡು

ಇದುವರೆಗಿನ ಅಧ್ಯಯನ ಸಮೀಕ್ಷೆ

ಇತಿಹಾಸದ ರಚನೆ ಮತ್ತು ಅಧ್ಯಯನಕ್ಕೆ ಪ್ರಾಮಾಣಿಕವಾದ ಆಕರ ಸಾಮಗ್ರಿಗಳೆಂದರೆ ಶಾಸನಗಳು, ಸ್ಮಾರಕಗಳು, ನಾಣ್ಯಗಳು ಮತ್ತು ಸಾಹಿತ್ಯಿಕ ಗ್ರಂಥಗಳು. ಅವುಗಳಲ್ಲಿ ಮೊದಲ ಬಹುಮುಖ್ಯ ಆಕರವಾಗಿ ಶಾಸನಗಳು ಮೊದಲನೆ ಸ್ಥಾನದಲ್ಲಿ ನಿಲುತ್ತವೆ. ಇಂತಹ ಶಾಸನಗಳು ಆಯಾ ಕಾಲದ ಸನ್ನಿವೇಶ, ಘಟನೆಗಳನ್ನು ಹೊತ್ತಿ ನಿಂತಿರುತ್ತವೆ. ಇಲ್ಲಿ ಬದಲಾವಣೆ ಅವಕಾಶ ಇರುವುದಿಲ್ಲ. ಅವು ಮೂಲ ಸ್ವರೂಪದಲ್ಲಿಯೇ ಇರುತ್ತವೆ. ಹೀಗಾಗಿ ತೆಲಂಗಾಣ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಗಳ ರಾಜಕೀಯ, ಸಾಮಾಜಿಕ, ಧಾರ್ಮಿಕ, ಆರ್ಥಿಕ, ಸಾಹಿತ್ಯಿಕ, ಕಲೆ ಮತ್ತು ಈ ಪ್ರದೇಶದ ಸಂಸ್ಕೃತಿಗಳ ಅಧ್ಯಯಯನಕ್ಕೆ ಈ ಭಾಗದಲ್ಲಿ ಲಭಿಸುವ ಶಾಸನಗಳೇ ಮುಖ್ಯ ಆಕರಗಳಾಗುತ್ತವೆ.

"ಬೌದ್ಧಧರ್ಮದ ಪ್ರಭಾವ ಮೊದಮೊದಲು ಶಾಸನಗಳನ್ನು ಹೆಚ್ಚಾಗಿ ನಿರ್ಮಿಸಲು ಕಾರಣವಾಯಿತು. ಚೈತ್ಯಾಲಯ ಸ್ತೂಪ ವಿಹಾರಗಳಿಗೆ ದಾನಮಾಡಿ ಪುಣ್ಯವಾಗಲೆಂಬುದು ಧಾರ್ಮಿಕ ವಿಧಿಯಾಗಿ ಪರಿಣಮಿಸಿತು. ದರ ಪರಿಣಾಮವಾಗಿ ಮೌರ್ಯ ಮತ್ತು ಶಾತವಾಹನರ ಕಾಲದಲ್ಲಿ ಅನೇಕ ಶಾಸನಗಳು ರಚಿತವಾದವು. ಆದರೆ ಮುಂದೆ ಗುಪ್ತರ ಕಾಲದಲ್ಲಿ ಹಿಂದೂಧರ್ಮ, ಪುನರುಜ್ಜೀವನಗೊಂಡಿತು. ಮೂರ್ತಿಪೂಜೆ ಒಂದು ಸ್ಪಷ್ಟವಾದ ರೂಪವನ್ನು ಪಡದು ಬೌದ್ಧ ವಿಹಾರ ಚೈತ್ಯಾಲಯಗಳಂತೆ ಹಿಂದೂ ದೇವಾಲಯಗಳು ತಲೆಯೆತ್ತ ತೊಡಗಿದವು. ದೇವಾಲಯಗಳನ್ನು ಕಟ್ಟಿಸುವುದು, ಕಟ್ಟಿಸಿದ ದೇವಾಲಯಗಳಿಗೆ ದತ್ತಿಯನ್ನು ಬಿಡುವುದು ಹಿಂದೂ ರಾಜರುಗಳ ಪವಿತ್ರ ಕರ್ತವ್ಯವೆಂಬ ಭಾವನೆ ಬೆಳೆಯಿತು. ಅದು ಶಾಸನಗಳಿಗೆ ಪ್ರಚೋದಕ ಶಕ್ತಿಯಾಗಿ ಪರಿಣಮಿಸಿತ್ತು. ಗುಪ್ತ, ಕದಂಬ, ಚಾಲುಕ್ಯ, ಕಲಚೂರಿಗಳು, ಗಂಗರು, ರಾಷ್ಟ್ರಕೂಟರು, ಕಾಕತಿಯರು, ವಿಜಯನಗರದ ಅರಸರುಗಳ ಕಾಲದಲ್ಲಿ ಈ ಬಗೆಯ ಧರ್ಮಶಾಸನಗಳ ಸಂಖ್ಯೆ

ಹೆಚ್ಚಾಗಿ ಬೆಳೆದುದ್ದನ್ನು ಕಾಣಬಹುದು(ಡಾ.ಎಚ್.ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು.೨೦೦-೨೩೩).

ಈ ಭಾಗದ ಶಾಸನಗಳ ಸಂಶೋಧನೆ, ಸಂಗ್ರಹ ಕಾರ್ಯವನ್ನು ಪಾಶ್ಚಾತ್ಯ ವಿದ್ವಾಂಸರುಗಳಾದ ಜೆ.ಎಫ್.ಫ್ಲಿಟ್, ಕೀಲ್ ಹಾರ್ನ್, ಎ.ಸಿ.ಬರ್ನೆಲ್, ಎಲ್.ಡಿ.ಬಾರ್ನೆಟ್, ಬಿ.ಎಲ್.ರೈಸ್, ಕರ್ನಲ್ ಮೆಕೆಂಜಿ, ಸ್ಥಳೀಯರಾದ ಆರ್.ನರಸಿಂಹಾಚಾರ್, ಎಚ್.ಕೃಷ್ಣಶಾಸ್ತ್ರೀ, ಡಾ.ಪಿ.ಬಿ.ದೇಸಾಯಿ, ಸಾಲೆತೊರೆ, ಬಿ.ಆರ್.ಹಿರೇಮಠ, ಎಂ.ಎಚ್.ಕೃಷ್ಣ, ಆರ್.ಎಸ್.ಪಂಚಮುಖಿ, ಆರ್.ಸಿ.ಹಿರೇಮಠ, ಶ್ರೀನಿವಾಸ ರಿತ್ತಿ, ಬಾರಾ.ಗೋಪಾಲ, ಡಾ.ಆರ್.ಶೇಷಶಾಸ್ತ್ರಿ, ಡಾ.ಕೆ.ಆರ್.ಗಣೇಶ, ಡಾ.ಎಂ.ಎಂ. ಕಲಬುರ್ಗಿ, ಡಾ.ವಿ.ಶಿವಾನಂದ, ಡಾ.ಸೀತಾರಾಮ ಜಾಗಿರ್‌ದಾರ್, ಡಾ.ಎಂ.ಚಿದಾನಂದಮೂರ್ತಿ, ಡಾ.ಚೆನ್ನಕ್ಕ ಎಲಿಗಾರ, ಡಾ.ಹೆಚ್.ತಿಪ್ಪೇರುದ್ರಸ್ವಾಮಿ, ಡಾ.ಜೆ.ಎಂ.ನಾಗಯ್ಯ, ಡಾ.ಮೇವುಂಡಿ ಮಲ್ಲಾರಿ, ಡಾ.ದೇವರಕೊಂಡಾ ರೆಡ್ಡಿ, ಡಾ.ಕಲವೀರ ಮನ್ವಾಚಾರ್, ಡಾ.ಡಿ.ವಿ.ಪರಮಶಿವಮೂರ್ತಿ, ಡಾ.ಕೆ.ಜಿ.ಭಟ್ಟಸೂರಿ, ಶ್ರೀಮತಿ ಹನುಮಾಕ್ಷಿ ಗೋಗಿ, ಡಾ.ಹಂಪ ನಾಗರಾಜಯ್ಯ, ಡಾ.ಡಿ.ಎಂ. ನಾಗರಾಜು, ಡಾ.ಚನ್ನಬಸವ ಹಿರೇಮಠ, ಡಾ.ಎಲ್.ಆರ್.ಕುಲಕರ್ಣಿ ಮೊದಲಾದ ವಿದ್ವಾಂಸರು ವಿಶೇಷವಾಗಿ ತಮ್ಮನ್ನು ಈ ಕ್ಷೇತ್ರಕ್ಕೆ ತೊಡಗಿಸಿಕೊಂಡಿದ್ದಾರೆ. ಇವರೆಲ್ಲರುಗಳ ಶ್ರಮ ಸಾಹಸದಿಂದ ಇಂದು ಶಾಸನಗಳ ಸಂಗ್ರಹ ಸಂಪತ್ತು ಹೆಚ್ಚಾಗಿದೆ. ಅವುಗಳಲ್ಲಿ ಮುಖ್ಯವಾಗಿ ಆಂಧ್ರಪ್ರದೇಶ ಸರ್ಕಾರವು ಶಾಸನ ಇಲಾಖೆಯಿಂದ ಹೊರತಂದ ಆಂಧ್ರಪ್ರದೇಶ ಆರ್ಕಿಯಾಲೋಜಿಕಲ್ ಸಿರೀಸ್‌ನಲ್ಲಿ ಅನೇಕ ಕನ್ನಡ ಶಾಸನಗಳು, ಸೆಲೆಕ್ಟೆಡ್ ಎಫಿಗ್ರಾಫ್ಸ್ ಆಫ್ ಆಂಧ್ರಪ್ರದೇಶ ಮತ್ತು ಎಫಿಗ್ರಾಫಿಯಾ ಆಂಧ್ರಿಕಾ ಸಂಪುಟಗಳು ಪಕ್ರಟಿಸಿದ ತೆಲಂಗಾಣ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ಸಂಬಂಧಿಸಿದ ಕನ್ನಡ ಶಾಸನಗಳು, ಇನ್ಸ್‌ಕ್ರಿಪ್ಷಿಶನ್ ಆಫ್ ವರಂಗಲ್ ಡಿಸ್ಟ್ರಿಕ್ಟ್, ಕರಿಂನಗರ ಡಿಸ್ಟ್ರೀಕ್ಟ್, ನಲಗೊಂಡಾ ಡಿಸ್ಟ್ರಿಕ್ಟ್, ಮೆದಕ್ ಡಿಸ್ಟ್ರಿಕ್ಟ್ ಮೆಹೆಬೂಬನಗರ ಡಿಸ್ಟ್ರಿಕ್ಟ್ ಮತ್ತು ಕನ್ನಡ ಇನ್ಸ್‌ಕ್ರಿಪ್ಸನ್ಸ್ ಆಫ್ ಆಂಧ್ರಪ್ರದೇಶ ಸಂಪುಟ ಮತ್ತು ತೆಲಂಗಾಣ ಪ್ರದೇಶದಲ್ಲಿದ್ದ ಕನ್ನಡ ಶಾಸನಗಳು ಅಲ್ಲಿರುವ ವಿದ್ವಾಂಸರು ಕನ್ನಡ ಕಲಿತು ಅಲ್ಲಿನ ಕನ್ನಡ ಶಾಸನಗಳ ಬೆಳಕು ಕಾಣಲಿಕ್ಕೆ ಕಾರಣೀ ಭೂತರಾದವರಲ್ಲಿ ಅಲಂಪುರದ ಶ್ರೀ ಗಡಿಯಾರದ ರಾಮಕೃಷ್ಣಶರ್ಮ, ಶ್ರೀ.ಬಿ.ಎನ್.ಶಾಸ್ತ್ರಿ, ಡಾ.ಘಂಟಾ ಜವಾಹರಲಾಲ್, ಡಾ.ನೆಲಟೂರಿ ವೆಂಕಟರಮಣಯ್ಯ, ಡಾ.ಪಿ.ವಿ.ಪರಬ್ರಹ್ಮಶಾಸ್ತ್ರಿ, ಡಾ.ಎಸ್.ಎಸ್.ರಾಮಚಂದ್ರಮೂರ್ತಿ, ಡಾ.ಪಿ.ಶ್ರೀನಿವಾಸಾಚಾರ್, ಡಾ.ಎಂ.ರಾಮರಾವ್, ಶ್ರೀ ಮಲ್ಲಂಪಳ್ಳಿ ಸೋಮಶೇಖರ, ಡಾ.ಎನ್.ರಮೇಶನ್, ಶ್ರೀ ಮಹಮದ್ ಅಬ್ದುಲ್ ವಹೀದ್‌ಖಾನ್, ಡಾ.ಪಿ.ವಿ.ಕೃಷ್ಣಶಾಸ್ತ್ರಿ ಮೊದಲಾದ ವಿದ್ವಾಂಸರು ಈ ಕ್ಷೇತ್ರದಲ್ಲಿ ಗುರುತರವಾದ ಕಾರ್ಯ ಮಾಡಿದ್ದಾರೆ.

ಆಂಧ್ರ ಪ್ರದೇಶದ ಸರ್ಕಾರದ ಶಾಸನಶಾಸ್ತ್ರ ಮತ್ತು ಪ್ರಾಚ್ಯವಸ್ತು ಸಂಗ್ರಹಾಲಯದಿಂದ ಪ್ರಕಟಿಸಿದ ಅನೇಕ ಕನ್ನಡ ಶಾಸನಗಳು, ಆಂಧ್ರಪ್ರದೇಶ ಆರ್ಕಿಯಾಲಾಜಿ ಸಿರೀಸ್, ಸೆಲಕ್ಟೆಡ್ ಇನ್‌ಸ್ಕ್ರಿಪ್ಸನ್ ಆಫ್ ಆಂಧ್ರಪ್ರದೇಶದ ಡಾ.ಪಿ.ಬಿ.ದೇಸಾಯಿ ಸಂಪಾದಿಸಿದ್ದಾರೆ ಮತ್ತು ಆಂಧ್ರಪ್ರದೇಶದ ಕನ್ನಡ ಶಾಸನಗಳು ಡಾ.ಆರ್.ಶೇಷಶಾಸ್ತ್ರಿ ಸಂಪಾದಿಸಿಕೊಟ್ಟಿದ್ದಾರೆ. ತದನಂತರ ಡಾ.ಕೆ.ಆರ್.ಗಣೇಶ ಮತ್ತು ಡಾ.ಆರ್.ಶೇಷಶಾಸ್ತ್ರಿಯವರ ಸಂಪಾದಕತ್ವದಲ್ಲಿ ಕನ್ನಡ ವಿಶ್ವವಿದ್ಯಾಲಯ, ಹಂಪಿ ಪ್ರಕಟಿಸಿರುವ ಆಂಧ್ರಪ್ರದೇಶದ ಕನ್ನಡ ಶಾಸನಗಳು ಸಂಪುಟ ೧ ಮತ್ತು ೨ ಪ್ರಮುಖವಾಗಿವೆ. ಎಫಿಗ್ರಾಫಿಯಾ ಕರ್ನಾಟಿಕಾದ ಸಂಪುಟಗಳು, ಎಫಿಗ್ರಾಫಿಯಾ ಇಂಡಿಕಾ ಮತ್ತು ದಕ್ಷಿಣ ಇಂಡಿಯಾದ ಶಾಸನಗಳು, ಹೈದ್ರಾಬಾದ್ ಕರ್ನಾಟಕ ಪ್ರದೇಶಗಳಿಗೆ ಸಂಬಂಧಿಸಿದಂತೆ ಶ್ರೀಮತಿ ಹನುಮಾಕ್ಷಿ ಗೋಗಿಯವರ ಸುರುಪುರ ತಾಲೂಕಿನ ಶಾಸನಗಳು, ಕಲಬುರ್ಗಿ ಜಿಲ್ಲೆಯ ಶಾಸನಗಳು, ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗದ ಡಾ.ದೇವರಕೊಂಡಾ ರೆಡ್ಡಿ, ಡಾ.ಕೆ.ಜಿ.ಭಟ್ಟಸೂರಿ, ಡಾ.ಕಲವೀರ ಮನ್ವಚಾರ್, ಡಾ.ಡಿ.ವಿ.ಪರಮಶಿವಮೂರ್ತಿಯವರುಗಳ ಸಂಪಾದಕತ್ವದಲ್ಲಿ ಕೊಪ್ಪಳ ಜಿಲ್ಲೆ ಶಾಸನ ಸಂಪುಟ, ರಾಯಚೂರು ಜಿಲ್ಲೆಯ ಶಾಸನ ಸಂಪುಟ ಮತ್ತು ಶ್ರೀಮತಿ ಹನುಮಾಕ್ಷಿಗೋಗಿಯವರು ಸಂಪಾದಿಸಿದ ಸುರಪುರ ತಾಲೂಕಿನ ಶಾಸನಗಳ ಸಂಪುಟದಲ್ಲಿ ಈ ಹಿಂದೆ ಪ್ರಕಟವಾಗಿದ್ದ ಮತ್ತು ಹೊಸದಾಗಿ ಸಂಶೋಧನೆ ಮಾಡಿದ ಒಟ್ಟು ಶಾಸನಳ ಸಂಖ್ಯೆ ೧೦೮ ಮತ್ತು ಕಲಬುರ್ಗಿ ಜಿಲ್ಲೆಯ ಶಾಸನ ಸಂಪುಟದಲ್ಲಿ ೨೩೬ ಶಾಸನಗಳನ್ನು ಪ್ರಕಟಿಸಿದ್ದಾರೆ. ಮೊಟ್ಟಮೊದಲಿಗೆ ಈ ಜಿಲ್ಲೆಯ ಶಾಸನ ಕ್ಷೇತ್ರದಲ್ಲಿ ಕೈಗೊಂಡ ಅಪೂರ್ವ ಸಾಧನೆಯಾಗಿದೆ.

ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದ ಶಾಸನಗಳು ಬೇರೆ ಬೇರೆ ವಿದ್ವಾಂಸರು ಬಿಡಿ ಬಿಡಿಯಾಗಿ ಪ್ರಕಟಿಸಿದ್ದಾರೆ. ಡಾ.ಪಿ.ಬಿ.ದೇಸಾಯಿಯವರು 'ಶಾಸನ ಪರಿಚಯ' ಶೀರ್ಷಿಕೆಯಡಿಯಲ್ಲಿ ಕೆಲವು ಈ ಭಾಗದ ಶಾಸನಗಳನ್ನು ಪ್ರಕಟಿಸಿದ್ದಾರೆ. ಅವರೇ 'ಜೈನಿಸಂ ಇನ್ ಸೌತ್ ಇಂಡಿಯಾ ಅಂಡ್ ಜೈನ್ ಎಫಿಗ್ರಾಫಿ' ಎಂಬ ಗ್ರಂಥದಲ್ಲಿ ಕೆಲವು ಜೈನಧರ್ಮಕ್ಕೆ ಸಂಬಂಧಿಸಿದ ಶಾಸನಗಳನ್ನು ಪ್ರಕಟಿಸಿದ್ದಾರೆ. ಇವರ ನಂತರ ಕೆಲವು ಶಾಸನತಜ್ಞರು ಕರ್ನಾಟಕ ಭಾರತಿ, ಮಾನವಿಕ ಕರ್ನಾಟಕ, ಸತ್ಯಶುದ್ಧ ಕಾಯ ಮುಂತಾದ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ. ಅಲ್ಲದೆ ಆಂಧ್ರ ಪ್ರದೇಶ ಸರ್ಕಾರದ ಆರ್ಕಾಲಾಜಿಕ್ ಸಿರೀಸ್‌ನಲ್ಲಿ ಈ ಭಾಗದ ಕೆಲವು ಶಾಸನಗಳು ಪ್ರಕಟಗೊಂಡಿವೆ. ಡಾ.ಹಂಪ ನಾಗರಾಜಯ್ಯನವರು ೧೯೯೮ರಲ್ಲಿ 'ಕೊಪ್ಪಳ ಜಿಲ್ಲೆಯ ಶಾಸನಗಳು' ಎಂಬ ಪುಸ್ತಕದಲ್ಲಿ ಸುಮಾರು ೧೦೬ ಶಾಸನಗಳನ್ನು ಪ್ರಕಟಿಸಿದ್ದಾರೆ. ಇಷ್ಟೊಂದು ಈ ಭಾಗದ ಶಾಸನಗಳು ಒಂದು ಕೃತಿಯಲ್ಲಿ ಪ್ರಕಟಣೆಗೊಂಡಿದ್ದು ಇದು ಮೊದಲನೆಯ ಪ್ರಯತ್ನವೆಂದು ಹೇಳಬಹುದು. ಅಲ್ಲದೆ ಕೊಪ್ಪಳದ ಅಶೋಕನ ಶಾಸನಗಳು 'ಗವಿಮಠ ಅಂಡ್ ಪಾಲ್ಕಿಗುಂಡ್

ಇನ್‌ಸ್ಕ್ರಿಪ್ಸನ್' ಎಂಬ ಪುಸ್ತಕದಲ್ಲಿ ಪ್ರಕಟಣೆಯಾಗಿವೆ. ಆನೆಗೊಂದಿ ಅದರ ಪರಿಸರದ ಶಾಸನಗಳು ವಿಜಯನಗರ ಪ್ರೋಗ್ರೆಸ್ಸಿವ್ ರಿಪೋರ್ಟ್‌ನಲ್ಲಿ ಪ್ರಕಟಗೊಂಡಿವೆ. ಶ್ರೀ ಬಿ.ಸಿ.ಪಾಟೀಲ್‌ರು 'ಕೊಪ್ಪಳದ ಹೆಚ್ಚಿನ ಶಾಸನಗಳು' ಎಂಬ ಕೃತಿಯಲ್ಲಿ ಈ ಭಾಗದ ಕೆಲವು ಶಾಸನಗಳನ್ನು ಪ್ರಕಟಿಸಿದ್ದಾರೆ. ಅಲ್ಲದೆ ಡಾ.ಸಿ.ಎಸ್.ಪಾಟೀಲ್‌ರು ಈ ಭಾಗದಲ್ಲಿನ ೧೯೯೯ರ ವರೆಗೆ ಪ್ರಕಟಗೊಂಡ ಶಾಸನಗಳ ಸಾರಾಂಶವನ್ನು ಸಂಗ್ರಹಿಸಿ ಆಂಗ್ಲಭಾಷೆಯಲ್ಲಿ 'ಇನ್‌ಸ್ಕ್ರಿಪ್ಸನ್ಸ್ ಆಫ್ ಕರ್ನಾಟಕ', ಸಂಪುಟ ೩ರಲ್ಲಿ ಪ್ರಕಟಿಸಿರುತ್ತಾರೆ. ಡಾ.ಚನ್ನಬಸವ ಹಿರೇಮಠ ಅವರು 'ಕೊಪ್ಪಳ–ರಾಯಚೂರು ಜಿಲ್ಲೆಯ ಶಾಸನಗಳು' ಎಂಬ ಕಿರು ಹೊತ್ತಿಗೆ ಪ್ರಕಟಿಸಿದ್ದಾರೆ. ತದನಂತರ ೧೯೯೯ರಲ್ಲಿ ಕನ್ನಡ ವಿಶ್ವವಿದ್ಯಾಲಯದ ಶಾಸನಶಾಸ್ತ್ರ ವಿಭಾಗವು 'ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ ೨'ರಲ್ಲಿ ಕೊಪ್ಪಳ ಜಿಲ್ಲೆಗೆ ಸಂಬಂಧಿಸಿದ ಶಾಸನಗಳನ್ನು ಸಂಪುಟ ರೂಪದಲ್ಲಿ ಹೊರತಂದಿದೆ. ಡಾ.ದೇವರಕೊಂಡಾ ರೆಡ್ಡಿ ಮತ್ತು ಇತರರ ಸಂಪಾದಕತ್ವದಲ್ಲಿ ಪ್ರಕಟಿಸಿದ 'ಕೊಪ್ಪಳ ಜಿಲ್ಲೆಯ ಶಾಸನ ಸಂಪುಟದಲ್ಲಿ ಸುದೀರ್ಘವಾದ ಪ್ರಸ್ತಾವನೆ, ಸ್ಪಷ್ಟವಾದ ಶಾಸನ ಪಠ್ಯವನ್ನು ಪರಿಷ್ಕರಿಸಿ ಶುದ್ಧರೂಪಲ್ಲಿ ೩೪೮ ಶಾಸನಗಳ ಪಠ್ಯ ನೀಡಿರುತ್ತಾರೆ. ಇದು ಈ ಹಿಂದೆ ಬಿ.ಎಲ್.ರೈಸ್ ಅವರು ಹೊರತಂದ 'ಎಪಿಗ್ರಾಫಿಯಾ ಕರ್ನಾಟಿಕ'ದ ಹಾಗೆ ಪ್ರಕಟಣೆಗೊಂಡಿವೆ.

ಆಂಧ್ರಪ್ರದೇಶ ಸರ್ಕಾರದ ಪುರಾತತ್ವ ಇಲಾಖೆಯಿಂದ ತೆಲಂಗಾಣ ಭಾಗದ ಅನೇಕ ಶಾಸನಗಳು ಪ್ರಕಟಣೆಗೊಂಡವು. ಅವುಗಳಲ್ಲಿ 'ಸೌತ್ ಇಂಡಿಯನ್ ಇನ್‌ಸ್ಕ್ರಿಪ್ಷನ್ಸ್' ಸಂಪುಟದಲ್ಲಿ ಪ್ರಕಟವಾಗದೇ ಉಳಿದ ಅನೇಕ ಕನ್ನಡ ಶಾಸನಗಳು ಈ ಸಂಪುಟದಲ್ಲಿ ಪ್ರಕಟಣೆಗೊಂಡವು. ಆಂಧ್ರಪ್ರದೇಶ ಗೌರ್ನಮೆಂಟ್ ಅರ್ಕೈಲಾಜಿಕಲ್ ಸಿರೀಸ್‌ನಲ್ಲಿ ಬಿಡಿ ಬಿಡಿ ಶಾಸನಗಳು ಪ್ರಕಟಗೊಂಡವು. ಅಲ್ಲಲ್ಲಿ ಚದುರಿ ಹೋದ ತೆಲಂಗಾಣ ಪ್ರದೇಶದ ಕನ್ನಡ ಶಾಸನಗಳು ಡಾ.ಕೆ.ಆರ್.ಗಣೇಶ ಮತ್ತು ಡಾ.ಆರ್.ಶೇಷಶಾಸ್ತ್ರಿ ಇವರಿರ್ವರ ಸಂಪಾದಕತ್ವದಲ್ಲಿ ತೆಲಂಗಾಣ ಪ್ರದೇಶಕ್ಕೆ ಸಂಬಂಧಪಟ್ಟ ಕನ್ನಡ ಶಾಸನಗಳು 'ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ ೫, ಆಂಧ್ರಪ್ರದೇಶದ ಕನ್ನಡ ಶಾಸನಗಳು ಭಾಗ ೨'ರಲ್ಲಿ ಪ್ರಕಟಗೊಂಡಿವೆ. ಇದೇ ಸಂಪುಟದಲ್ಲಿ ಕರಿಂನಗರ ಜಿಲ್ಲೆ, ವಾರಂಗಲ್ ಜಿಲ್ಲೆ, ಮಹಬೂಬನಗರ ಜಿಲ್ಲೆ, ನಲ್ಗೊಂಡ ಜಿಲ್ಲೆ ಮೆದಕ್ ಜಿಲ್ಲೆ, ನಿಜಾಮ್‌ಬಾದ ಜಿಲ್ಲೆ ಮತ್ತು ಆದಿಲಾಬಾದ್ ಜಿಲ್ಲೆ(ಆಂಧ್ರಪ್ರದೇಶದ ಅವಿಭಜಿತ ಜಿಲ್ಲೆಗಳು)ಗಳ ಶಾಸನಗಳು ಕನ್ನಡ ವಿಶ್ವವಿದ್ಯಾಲಯ ಪ್ರಕಟಿಸಿದೆ. ಇದರಲ್ಲಿ ಈ ಭಾಗದ ಒಟ್ಟು ೨೬೦ ಶಾಸನಗಳು ಪ್ರಕಟಗೊಂಡಿವೆ.

ರಾಯಚೂರು ಜಿಲ್ಲೆಗೆ ಸಂಬಂಧಪಟ್ಟ ಶಾಸನಗಳು ಈ ಹಿಂದೆ ಹೈದ್ರಾಬಾದ್ ಆರ್ಕಿಯಾಲಾಜಿಕಲ್ ಸಿರೀಸ್ ಮತ್ತು ಆಂಧ್ರಪ್ರದೇಶದ ಗೌರ್ನ್‌ಮೆಂಟ್ ಆರ್ಕಿಯಾಲಾಜಿಕಲ್ ಸಿರೀಸ್‌ನಲ್ಲಿ ಸಂಪುಟಗಳಲ್ಲಿ ಪ್ರಕಟಣೆಯಾಗಿರುತ್ತವೆ. ಡಾ.ಪಿ.ಬಿ.ದೇಸಾಯಿಯವರ ಸಂಪಾದಕತ್ವದಲ್ಲಿ

'ಕೊಪ್ಪಳ-ರಾಯಚೂರು ಜಿಲ್ಲೆಯ ಶಾಸನಗಳು' ಎಂಬ ಪುಸ್ತಕವನ್ನು ಹಾಗೂ ಮಾನ್ವಿ ತಾಲೂಕಿನ ಶಾಸನಗಳು ಡಾ.ಚನ್ನಬಸವ ಹಿರೇಮಠ ಸಂಪಾದಿಸಿದ್ದಾರೆ. ಇದನ್ನು 'ಮಾನ್ವಿ ತಾಲೂಕಿನ ಶಾಸನಗಳು' ಕೃತಿಯು ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಪ್ರಕಟಿಸಿದೆ. ಅಲ್ಲದೇ ಡಾ.ಸಿ.ಎಸ್. ಪಾಟೀಲ್ ಅವರು ಈ ಜಿಲ್ಲೆಯ ಶಾಸನಗಳ ಸಾರಸಂಗ್ರಹವನ್ನು ಆಂಗ್ಲಭಾಷೆಯಲ್ಲಿ ಸ್ಥೂಲವಾಗಿ ಸಂಗ್ರಹಿಸಿ 'ಇನ್ಸ್‌ಕ್ರಿಪ್ಷನ್ ಆಫ್ ಕರ್ನಾಟಕ ಸಂಪುಟ-೪'ರಲ್ಲಿ ಪ್ರಕಟಿಸಿದೆ. ಇದೇ ಜಿಲ್ಲೆಯ ಅನ್ಯ ಭಾಷೆಗಳಾದ ಉರ್ದು, ಅರಾಬಿಕ್, ಪರ್ಶಿಯನ್ ಶಾಸನಗಳು ಡಾ.ಯಾಸಿನ್ ಖುದ್ದೂಸಿ ವರು ಪರ್ಶಿಯನ್ ಅರಬಿಕ್, ಉರ್ದು ಶಾಸನಗಳು ಎಂಬ ಪುಸ್ತಕದಲ್ಲಿ ಪ್ರಕಟಿಸಿರುತ್ತಾರೆ. ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ ೭ರಲ್ಲಿ ರಾಯಚೂರು ಜಿಲ್ಲೆಯ ಶಾಸನಗಳನ್ನು ಡಾ.ದೇವರಕೊಂಡಾ ರೆಡ್ಡಿ ಮತ್ತು ಇತರರು ಸಂಪಾದಿಸಿ ಕೊಟ್ಟಿದ್ದಾರೆ. ಇಡೀ ಜಿಲ್ಲೆಯ ಶಾಸನಗಳ ಬಗ್ಗೆ ಸುದೀರ್ಘವಾಗಿ ಪ್ರಸ್ತಾವನೆ ಆಯಾ ತಾಲೂಕಿನಲ್ಲಿ ಶಾಸನಗಳು ಲಭ್ಯವಾಗುವ ನಕಾಶೆಗಳನ್ನು ನೀಡಲಾಗಿದೆ. ಇದು ಈ ಭಾಗದ ಶಾಸನ ಕ್ಷೇತ್ರದಲ್ಲಿ ಆದ ಕಾರ್ಯವು ಅಪೂರ್ವವಾದುದು. ಹೀಗೆ ಈ ಜಿಲ್ಲೆಯ ಈ ಹಿಂದೆ ಪ್ರಕಟವಾದ ೭೨ ಶಾಸನಗಳು ಮತ್ತು ಹೊಸದಾಗಿ ಪ್ರಕಟಿಸಿದ ೩೪೬ ಒಟ್ಟು ೪೧೮ ಶಾಸನಗಳು ಪ್ರಕಗೊಂಡಿವೆ.

ಬೀದರ್ ಜಿಲ್ಲೆಗೆ ಸಂಬಂಧಿಸಿದ ಶಾಸನಗಳು ಆಂಧ್ರಪ್ರದೇಶದ ಆರ್ಕಿಲಾಜಿಕಲ್ ಸಿರೀಸ್‌ನಲ್ಲಿ ಮತ್ತು ಎಫಿಗ್ರಾಫಿಕಾ ಇಂಡಿಕಾದಲ್ಲಿ ಬಾ.ರಾ.ಗೋಪಾಲರವರು ಆಣಂದೂರಿನ ಶಾಸನ, ಡಾ.ಪಿ.ಬಿ. ದೇಸಾಯಿ ಅವರು ಸಂಪಾದಕತ್ವದಲ್ಲಿ ಆಂಧ್ರಸರ್ಕಾರವು ಕೆಲವು ಈ ಭಾಗದ ಶಾಸನಗಳನ್ನು ಪ್ರಕಟಿಸಿತ್ತು. ಡಾ.ಎಲ್.ಆರ್.ಕುಲಕರ್ಣಿ, ಹಿಸ್ಟೋರಿಕಲ್ ಅಂಡ್ ಕಲ್ಚರಲ್ ಸ್ಟಡೀಸ್ ಬಸವಕಲ್ಯಾಣ' ಎಂಬ ಮಹಾಪ್ರಬಂಧದಲ್ಲಿ ಬೀದರ ಜಿಲ್ಲೆಗೆ ಸಂಬಂಧಿಸಿದ ಶಾಸನ ಪಾಠಗಳನ್ನು ದಾಖಲಿಸಿದ್ದಾರೆ. ಈ ಜಿಲ್ಲೆಗೆ ಸಂಬಂಧಿಸಿದ ಈವರೆಗೆ ಲಭ್ಯವಿರುವ ಸಮಗ್ರ ಶಾಸನಗಳನ್ನು ಡಾ.ದೇವರಕೊಂಡಾ ರೆಡ್ಡಿ ಮತ್ತು ಶ್ರೀಮತಿ ಹನುಮಾಕ್ಷಿ ಗೋಗಿ ಅವರುಗಳ ಸಂಪಾದಕತ್ವದಲ್ಲಿ ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ ೮(ಬೀದರ ಜಿಲ್ಲೆ) ಎಂಬುದರಲ್ಲಿ ಪ್ರಕಟಿಸಿದೆ. ಈ ಹಿಂದೆ ಈ ಜಿಲ್ಲೆಗೆ ಸಂಬಂಧಿಸಿದ ಶಾಸನಗಳು ೭೭, ಹೊಸವು ೧೧೮, ಒಟ್ಟು ೧೯೫ ಶಾಸನಗಳು ಪ್ರಕಟವಾಗಿವೆ. ಅದರಲ್ಲಿ ಕನ್ನಡವು ೧೪೪ ಶಾಸನಗಳಿರುತ್ತವೆ.

ಹೀಗೆ ಲಭಿಸಿರುವ ಶಾಸನಗಳ ಸಾಂಸ್ಕೃತಿಕ ಅಧ್ಯಯನವು ಕೂಡ ಅಷ್ಟೇ ತೀವ್ರಗತಿಯಲ್ಲಿ ನಡೆಯುತ್ತಾ ಇರುವುದು ಗಮನಾರ್ಹವಾಗಿದೆ. ಮೊತ್ತಮೊದಲಿಗೆ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಮಾಡುವುದಕ್ಕೆ ಕೈಹಾಕಿದವರೆಂದರೆ ಎಂ. ಚಿದಾನಂದಮೂರ್ತಿ ಅವರು ಕ್ರಿ.ಶ.೪೫೦ರಿಂದ ೧೧೫೦ರ ಅವಧಿಯ ಕನ್ನಡ ಶಾಸನಗಳನ್ನು ಮೂಲ ಆಕರ ಸಾಮಗ್ರಿಗಳನ್ನಾಗಿಟ್ಟುಕೊಂಡು

'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಎನ್ನುವ ಶೀರ್ಷಿಕೆಯ ಅಡಿಯಲ್ಲಿ, ಕನ್ನಡ ನಾಡಿನ ಸಾಂಸ್ಕೃತಿಕ ಚರಿತ್ರೆಯನ್ನು ಅವರು ಕಟ್ಟಿಕೊಟ್ಟಿದ್ದಾರೆ. ಈ ಕೃತಿಯು ಈ ದಿಸೆಯಲ್ಲಿ ಕೆಲಸ ಮಾಡುವರಿಗೆ ಅಮೂಲ್ಯ ಮಾರ್ಗದರ್ಶಕ ಕೃತಿಯಾಗಿದೆ. ಆರ್.ಶೇಷಶಾಸ್ತ್ರಿಯವರ 'ಕರ್ನಾಟಕದ ವೀರಗಲ್ಲುಗಳು', ಬಿ.ಜಿ.ಎಲ್.ಸ್ವಾಮಿಯವರ 'ಶಾಸನಗಳಲ್ಲಿ ಗಿಡ-ಮರಗಳು', ಬಿ.ಆರ್.ಹಿರೇಮಠ ಅವರ 'ಕರ್ನಾಟಕದ ಶಾಸನಗಳಲ್ಲಿ ವರ್ತಕರು', ಚೆನ್ನಕ್ಕ ಎಲಿಗಾರ ಅವರ 'ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ', ಎಂ.ಎಂ.ಕಲಬುರ್ಗಿಯವರ 'ಶಾಸನಗಳಲ್ಲಿ ಶಿವಶರಣರು', ಬಸವರಾಜ ಕಲ್ಗುಡಿಯವರ 'ಮಹಾಸತಿ ಆಚರಣೆ ಒಂದು ಅಧ್ಯಯನ' ಜೆ.ಎಂ.ನಾಗಯ್ಯನವರ 'ಆರನೆ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ', ಜಿ.ಎನ್.ಉಪಾಧ್ಯರ 'ಮಹಾರಾಷ್ಟ್ರದ ಕನ್ನಡ ಶಾಸನಗಳು ಒಂದು ಅಧ್ಯಯನ', ಎಂ.ಬಿ.ನೇಗಿನಹಾಳ ಅವರ 'ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ', ಡಿ.ವಿ.ಪರಮಶಿವಮೂರ್ತಿಯವರ 'ಕನ್ನಡ ಶಾಸನಶಿಲ್ಪ', ಕೆ.ಜಿ.ವೆಂಕಟೇಶ ಜೋಯಿಸರ 'ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ', ಕೆ.ಆರ್.ಗಣೇಶ ಅವರ 'ಆಂಧ್ರಪ್ರದೇಶದ ಕನ್ನಡ ಶಾಸನಗಳು ಒಂದು ಅಧ್ಯಯನ', ಹೆಚ್.ಹನುಮಂತರಾಯ ಅವರ 'ಬಳ್ಳಾರಿ ಜಿಲ್ಲೆಯ ಕನ್ನಡ ಶಾಸನಗಳು ಒಂದು ಸಾಂಸ್ಕೃತಿಕ ಅಧ್ಯಯನ', ಡಾ.ವ್ಹಿ.ಶಿವಾನಂದ ಅವರ 'ಹೈದ್ರಾಬಾದ್ ಕರ್ನಾಟಕ ಭಾಗದ ಶಿಲಾಶಾಸನಗಳು', ಪ್ರೊ.ಸೂಗಯ್ಯ ಹಿರೇಮಠ ಅವರ, 'ರಂಜೇರಿನ ಸಿಂಧರು', ಚನ್ನಬಸವಯ್ಯ ಹಿರೇಮಠ ಅವರ 'ಕುರುಗೋಡಿನ ಸಿಂಧರು: ಒಂದು ಅಧ್ಯಯನ', ಡಾ.ಭಾರತಿ ಬಿ.ಆರ್ ಅವರ ರಾಷ್ಟ್ರಕೂಟರ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಡಾ.ಎಸ್.ಎಂ. ಹಿರೇಮಠ ಅವರ 'ಶಾಸನ ಅಧ್ಯಯನ;ಶಾಸನಾನುಸಂಧಾನ,ಶಾಸನ ಪರಿಭಾಷೆ, ಡಾ.ರಂಗರಾಜ ವನದುರ್ಗ ಅವರ 'ಸಗರನಾಡಿನ ಶಾಸನಗಳು, ಡಾ.ನಿವೇದಿತಾ ಸ್ವಾಮಿ ಅವರ ಸಗರ ನಾಡಿನ ಶಾಸನಗಳು ಸಾಂಸ್ಕೃತಿಕ ಅಧ್ಯಯನ, ಮುಡಬಿ ಗುಂಡೇರಾವ್ ಅವರ 'ಸೇಡಿಂಬದುರ್ಗದ ಶಾಸನಗಳು', ಮೇವುಂಡಿ ಮಲ್ಲಾರಿ ಅವರ 'ಕನ್ನಡ ನಾಡಿನ ಶಾಸನ ಕವಿಗಳು' ಡಾ.ಡಿ.ಎಂ. ನಾಗರಾಜು ಅವರ 'ಕಲ್ಯಾಣ ಚಾಲುಕ್ಯ ಆರನೆಯ ವಿಕ್ರಮಾದಿತ್ಯನ ಶಾಸನಗಳ ಸಾಂಸ್ಕೃತಿಕ ಅಧ್ಯಯನ,ಡಾ.ಸಿದ್ಧಲಿಂಗಪ್ಪ ಕೆ.ಇವರ ಕೊಪ್ಪಳ ಜಿಲ್ಲೆಯ ಶಾಸನಗಳು ಸಾಂಸ್ಕೃತಿಕ ಅಧ್ಯಯನ, ಡಾ.ಶರಣಪ್ಪ ಚಕ್ರವರ್ತಿ ಅವರ ಆಳಂದ ತಾಲೂಕಿನ ಶಾಸನಗಳು ಸಾಂಸ್ಕೃತಿಕ ಅಧ್ಯಯನ ಡಾ.ರಾಜಣ್ಣ ಟಿ.ಡಿ. ಅವರು ಕನ್ನಡ ಸಾಹಿತ್ಯ ಮತ್ತು ಶಾಸನಗಳಲ್ಲಿ ಶಾಪ ಇಷ್ಟಾದರೂ ನಿರ್ದಿಷ್ಟವಾಗಿ ಹೈದರಾಬಾದ್ ಕರ್ನಾಟಕ ಮತ್ತು ತೆಲಂಗಾಣ ಪ್ರದೇಶಗಳಿಗೆ ಸಂಬಂಧಿಸಿದಂತೆ ವಿಶೇಷವಾದ ಅಧ್ಯಯನವು ನಡೆದಿಲ್ಲ. ಕನ್ನಡದ ಪ್ರಸಿದ್ಧ ರಾಜಮನೆತನಗಳು ಆಳಿದ ಕೇಂದ್ರಗಳು ಈ ಪ್ರದೇಶದಲ್ಲಿರುವುದು ಕಂಡುಬರುತ್ತದೆ. ಅಂದಿನ ಪ್ರಾಚೀನ ಕರ್ನಾಟಕದ ಭಾಗವು ಇಂದು

ತೆಲಂಗಾಣ ಪ್ರದೇಶಕ್ಕೆ ಸೇರಿರುವುದು ಮುಂತಾದ ಕಾರಣಗಳಿಂದಾಗಿ ಈ ನಿಟ್ಟಿನಲ್ಲಿ ಇನ್ನೂ ಹೆಚ್ಚಿನ ಕಾರ್ಯಕ್ಕೆ ಅವಕಾಶವಿದೆ; ಅದು ಆಗಬೇಕಾದುದು ಅಗತ್ಯವೂ ಹೌದು. ಈ ದೃಷ್ಟಿಯಿಂದ ಕೈಗೆತ್ತಿಕೊಂಡಿರುವ ಪ್ರಸ್ತುತದ ಸಂಶೋಧನೆಯು ಮಹತ್ತ್ವದ್ದಾಗುತ್ತದೆ. ಹೀಗೆ ಈ ಮೇಲಿನ ವಿದ್ವಾಂಸರುಗಳು, ಶಾಸನತಜ್ಞರು ಶ್ರಮಪಟ್ಟು ಶೋಧಿಸಿ, ಸಂಪಾದಿಸಿಕೊಟ್ಟುದರ ಫಲವಾಗಿಯೇ ಇಂದು ಈ ಕ್ಷೇತ್ರದಲ್ಲಿ ಶಾಸನಗಳ ಕುರಿತು ಅಧ್ಯಯನ ಮಾಡುವುದಕ್ಕೆ ಸಾಧ್ಯವಾಗಿದೆ ಎಂದು ಹೇಳಬಹುದು.

'ಶಾಸನ' ಎಂಬ ಶಬ್ದವು ಸಂಸ್ಕೃತದ 'ಶಾಸ್' ಎಂಬ ಧಾತುವಿನಿಂದ ನಿಷ್ಪನ್ನವಾಗಿದೆ. ಈ ಧಾತುವಿಗೆ ಆಜ್ಞೆ, ಶಿಕ್ಷಿಸು, ನಿಯಂತ್ರಿಸು, ಅಪ್ಪಣೆ ಮಾಡು ಮುಂತಾದ ಅರ್ಥಗಳಿವೆ. 'ಶಾಸನ' ಎಂಬುದು ಮೂಲತಃ ರಾಜಾಜ್ಞೆಯಾಗಿದೆ. ತದನಂತರ ಅದರ ಅರ್ಥ ವ್ಯಾಪ್ತಿಯು ವಿಶಾಲವಾಗಿದೆ. ಇಂಗ್ಲೀಷಿನ 'Inscription' ಎಂಬ ಪದಕ್ಕೆ ಸಂವಾದಿಯಾಗಿ ಕನ್ನಡದಲ್ಲಿ ಈ ಶಬ್ದವನ್ನು ಬಳಸಲಾಗುತ್ತದೆ. ಇಂಗ್ಲೀಷಿನ ಶಬ್ದವು 'inscribe' ಎಂದರೆ ಕೊರೆ, ಕೆತ್ತು, ಕಂಡರಿಸು ಎಂಬ ನಾನಾರ್ಥಗಳನ್ನು ಹೊಂದಿರುವ ಮೂಲರೂಪದಿಂದ ನಿಷ್ಪನ್ನವಾಗಿದೆ. ಹೀಗೆ ರಾಜಾಜ್ಞೆಯ ರೂಪದಲ್ಲಿ ಹೊರಡಿಸಿದ ಬರಹವಾಗಿದ್ದು ಅದನ್ನು ಒಂದು ಗಟ್ಟಿಯಾದ ವಸ್ತುವಿನ ಮೇಲೆ ಕೊರೆದುದನ್ನು 'ಶಾಸನ'ವೆಂದು ಕರೆಯುವುದು ರೂಢಿಗೆ ಬಂತು.

" Inscription' ಎಂಬುದನ್ನು ಬ್ರಿಟಾನಿಕಾ ವಿಶ್ವಕೋಶದಲ್ಲಿ ಹೀಗೆ ವಿವರಿಸಿದೆ: Documents incised on some hard or permanent material in the form of letters or other conventional signs, for the purpose of conveying some, information or preserving a record. They are, therefore, to be distinguished on the one hand from 'manuscripts' or documents written on papyrus, parchment paper or other more or less smooth surfaces by means of a brush reed or pen and some coloured fluid"(ಚಿದಾನಂದಮೂರ್ತಿ ಎಂ., ಉದ್ಧೃತ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೧೯೭೭, ಪು.೧೩). ಎಂದರೆ ತಾಳೆಗರಿ, ಭೂರ್ಜಪತ್ರ, ಕಾಗದ ಮುಂತಾದವುಗಳ ಮೇಲೆ ಬರೆಯುವ ಬರಹಗಳನ್ನು ಬಿಟ್ಟು, ಬಹಳ ದಿನ ಬಾಳಿಕೆ ಬರುವ ವಸ್ತುಗಳ ಮೇಲೆ ಬರೆದಿರುವ ಲೇಖನಗಳನ್ನು ಶಾಸನಗಳೆಂದು ಸ್ಥೂಲವಾಗಿ ಕರೆಯಬಹುದು. ಹೀಗೆ ಬಹಳ ದಿನ ಬಾಳಿಕೆ ಬರುವ ವಸ್ತುಗಳಾದ ಕಲ್ಲು, ಲೋಹ, ಕಟ್ಟಿಗೆ, ದಂತ, ಸುಟ್ಟ ಇಟ್ಟಿಗೆ, ಇಂತಹ ಸಾಮಗ್ರಿಗಳ ಮೇಲೆ ಕೊರೆದ ಬರಹಗಳನ್ನು ಸಾಮಾನ್ಯವಾಗಿ 'ಶಾಸನ'ಗಳೆಂದು ಕರೆಯಲಾಗುತ್ತದೆ.

"ಮೂಲತಃ ಶಾಸನ ಎಂಬ ಪದಕ್ಕೆ ರಾಜಾಜ್ಞೆ, ಅಪ್ಪಣೆ ಮಾಡು ಎಂಬ ಅರ್ಥಗಳಿದ್ದವು ಎಂಬುದನ್ನು ಕೌಟಿಲ್ಯನ 'ಅರ್ಥಶಾಸ್ತ್ರ'ದಲ್ಲಿಯೇ ಕಾಣುತ್ತೇವೆ. ಅದರ ಪ್ರಕಾರ 'ಶಾಸನ'ವೆಂಬುದು

ರಾಜರ ಆಜ್ಞೆಗಳನ್ನು ತಿಳಿಸುವ ಬರಹವನ್ನು ಹೇಳುತ್ತದೆ"(ಅದೇ, ಪು.೧೩). ಸೋಮದೇವನ 'ನೀತಿವಾಕ್ಯಾಮೃತ'ದಲ್ಲಿ ಇಂತಹ "ರಾಜಾಜ್ಞೆಯು ಎಲ್ಲರಿಗೂ ದಾಟಲಾರದ ಕೋಟೆಯ ಗೋಡೆ ಇದ್ದಂತೆ"(ಜಿ.ಎಸ್.ದೀಕ್ಷಿತ್, ಬಿ.ರಾಮಸ್ವಾಮಿ, ಶ್ರೀನಿವಾಸರಿತ್ತಿ(ಸಂ), ಆಚಾರ್ಯಸೋಮದೇವ ವಿರಚಿತಮ್ ನೀತಿವಾಕ್ಯಾಮೃತಮ್(ಕರ್ನಾಟಕ ವ್ಯಾಖ್ಯಾನಸಹಿತಂ) ೨೦೦೦, ಶ್ಲೋಕ ೨೩, ಪು.೧೭೮). ಎಂದು ಹೇಳಲಾಗಿದೆ. ಇದರಿಂದ ಆಗ 'ಶಾಸನ'ಗಳಿಗಿದ್ದ ಮಹತ್ವವನ್ನು ಮನಗಾಣಬಹುದು.

ಕಾಲಾಂತರದಲ್ಲಿ 'ಶಾಸನ' ಎಂಬ ಶಬ್ದಕ್ಕೆ ವಿಶಾಲಾರ್ಥ ಒದಗಿ ಬಂದುದ್ದನ್ನು ಕಾಣುತ್ತೇವೆ. ಆರಂಭದಲ್ಲಿ ರಾಜನು ತನ್ನ ನಾಡಿನ ಪ್ರಜೆಗಳಿಗಾಗಿ ಅಪ್ಪಣೆ ಮಾಡುವ ರೀತಿಯಲ್ಲಿ ಆಡಳಿತ, ಧರ್ಮ, ದಾನದತ್ತಿ ಇತ್ಯಾದಿ ವಿಷಯಕವಾಗಿ ಸಾರ್ವಜನಿಕ ಸ್ಥಳದಲ್ಲಿ ಶಾಸನ ಹಾಕಿಸುತ್ತಿದ್ದನು. ಇವು, ನೀವು ಹೀಗೆ ಮಾಡಿ, ಇದನ್ನು ಪಾಲಿಸಿ, ಹೀಗೆ ಅನುಭವಿಸಿ ಎಂಬಿತ್ಯಾದಿ ಅಂಶಗಳನ್ನೊಳಗೊಂಡಿರುತ್ತಿದ್ದವು. ಅಶೋಕನ ಶಾಸನಗಳಲ್ಲಿ ಇದನ್ನು ಕಾಣಬಹುದು. ಮುಂದೆ ಬರುಬರುತ್ತಾ ಕಾಲಸಂದರ್ಭದಲ್ಲಿ ಮೂಲದಲ್ಲಿದ್ದ 'ಶಾಸನ'ದ ಅರ್ಥವು ವಿಶಾಲ ರೂಪ ಪಡೆಯಿತು. ರಾಜನೇ ಆಗಲಿ, ಮಹಾಸಾಮಂತನೇ ಆಗಲಿ, ಅಥವಾ ಇನ್ನಾರೇ ಆಗಲಿ ಕೆತ್ತಿಸಿದ ಯಾವುದೇ ವಸ್ತುವಿಗೆ ಸಂಬಂಧಿಸಿದ ಬರಹವೇ ಆಗಿರಲಿ ಅದನ್ನು 'ಶಾಸನ'ವೆಂದು ಕರೆಯುವುದು ರೂಢಿಗೆ ಬಂತು. ಉದಾಹರಣೆಗೆ, ವೀರಗಲ್ಲು, ಮಾಸ್ತಿಗಲ್ಲು, ನಿಸಿದಿಗಲ್ಲು, ಪ್ರಶಸ್ತಿ ಶಾಸನಗಳು ಇತ್ಯಾದಿಯಾಗಿ ಯಾವುದೇ ವಿಷಯವನ್ನು ಒಳಗೊಂಡಿದ್ದ ಬರಹವನ್ನೇ ಆಗಲಿ 'ಶಾಸನ'ವೆಂದು ಕರೆಯುವುದನ್ನು ಗಮನಿಸಬಹುದು. ಪ್ರಾಚೀನಕಾಲದ ಎಂದರೆ ಕ್ರಿ.ಪೂ.೩ನೆಯ ಶತಮಾನದ ಅಶೋಕನ ಧರ್ಮ ಶಾಸನಗಳಿಂದ ಮೊದಲುಗೊಂಡು ಇತ್ತೀಚಿನ ಕಾಲದವರೆಗೆ ಸಾಕಷ್ಟು ಶಾಸನಗಳು ಲಭಿಸುತ್ತವೆ. ಹೀಗೆ ಒಟ್ಟಾರೆ ಈ ಒಂದು ಕಾಲದಲ್ಲಿ ಕಂಡುಬರುವ ಶಿಲಾಲಿಪಿ, ತಾಮ್ರಲಿಪಿ ಅಥವಾ ಇನ್ನಿತರ ಯಾವುದೇ ಗಟ್ಟಿ ಸಾಮಗ್ರಿಗಳ ಮೇಲಿನ ಬರಹಗಳನ್ನು 'ಶಾಸನ'ಗಳೆಂದು ಕರೆಯುವುದು ರೂಢಿಗೆ ಬಂದಂತಾಗಿದೆ.

ಶಾಸನಗಳಲ್ಲಿ ವಿಷಯಾನುಕ್ರಮಣಿಕೆ

ಸಾಮಾನ್ಯವಾಗಿ ಭಾರತಿಯ ಸಂಪ್ರದಾಯದಲ್ಲಿ ಯಾವುದೇ ಶುಭಕಾರ್ಯವನ್ನು ಮಾಡುವಾಗ ಮಂಗಳಶ್ಲೋಕ ಅಥವಾ ಮಂಗಳಗೀತೆಯೊಂದಿಗೆ ಆರಂಭಿಸುವ ಒಂದು ಪರಿಪಾಠವಿದೆ. ಇದಕ್ಕನುಗುಣವಾಗಿ, ಆಯಾ ರಾಜರು ತಮ್ಮ ಕುಲದೇವತೆ ಆರಾಧ್ಯ ದೇವತೆಗಳನ್ನು ಸ್ತುತಿಸುವ ನಿಟ್ಟಿನಲ್ಲಿ ಶಾಸನಗಳ ಆರಂಭದಲ್ಲಿಯೂ ಇಂತಹ ಒಂದು ಸ್ತುತಿಯನ್ನು ಹಾಕಿಸುತ್ತಿದ್ದುದನ್ನು ಕಾಣಬಹುದು. ಉದಾಹರಣೆಗೆ, ರಾಜನು ವೈಷ್ಣವನಾಗಿದ್ದರೆ ವಿಷ್ಣುಸ್ತುತಿ, ಶೈವನಾಗಿದ್ದರೆ ಶಿವಸ್ತುತಿ,

ಜೈನನಾಗಿದ್ದರೆ ತೀರ್ಥಂಕರಾದಿಗಳ ಸ್ತುತಿ ಇತ್ಯಾದಿಗಳಿಂದ ಪ್ರಾರಂಭಿಸುವುದನ್ನು ಕಾಣಬಹುದು. ತದನಂತರ ಆ ರಾಜನ ಅಥವಾ ವ್ಯಕ್ತಿಯ ವಂಶಾವಳಿ, ಬಿರುದಾವಳಿಗಳು, ಆ ಶಾಸನವನ್ನು ಹಾಕಿಸುವ ಉದ್ದೇಶ, ಕಾಲದ ಉಲ್ಲೇಖ, ಘಟನೆಯ ನಿರೂಪಣೆ, ಸ್ಥಳ ಹಾಗೂ ಅದರ ಚತುಸ್ಸೀಮೆಗಳ ನಿರ್ದೇಶನ [ಅಗತ್ಯವಿದ್ದಲ್ಲಿ] ಇತ್ಯಾದಿ ಅಂಶಗಳು ಬರುತ್ತವೆ. ಕೊನೆಯ ಹಂತದಲ್ಲಿ ಆ ಶಾಸನವನ್ನು ಸಂರಕ್ಷಿಸುವುದಕ್ಕೆ ಅತಿ ನಿಕೃಷ್ಟವಾದ ನುಡಿಗಳಿಂದ ಕೂಡಿದ ಶಾಪಾಶಯಗಳು ಬರುತ್ತವೆ. ಶಾಸನದ ಕೊನೆಯಲ್ಲಿ ಶಾಸನದ ಲಿಪಿಕಾರ, ಕಂಡರಣೆಕಾರರ ಉಲ್ಲೇಖ ಬರುತ್ತದೆ. ರಾಜನ ಹಸ್ತಾಕ್ಷರ ರಾಜಮುದ್ರೆಗಳು ಕೂಡ ಕೆಲವೆಡೆ ಇರುತ್ತವೆ. ಆದರೆ ಎಲ್ಲ ಶಾಸನಗಳಲ್ಲಿ ಈ ಮೇಲಿನವು ಎಲ್ಲವೂ ಇದೇ ರೀತಿಯಲ್ಲಿ ಇರುತ್ತವೆ ಎಂದು ಹೇಳುವುದಕ್ಕೆ ಆಗುವುದಿಲ್ಲ.

ಶಾಸನಗಳು ಸಾಮಾನ್ಯವಾಗಿ ಸಾರ್ವಜನಿಕ ಸ್ಥಳಗಳು, ಕೋಟೆ ಕೊತ್ತಲಗಳು, ದೇವಾಲಯಗಳು, ಆ ಘಟನೆ ನಡೆದ ಸ್ಥಳಗಳು ಇತ್ಯಾದಿಗಳ ಸಮೀಪದಲ್ಲಿ ಕಂಡುಬರುತ್ತವೆ. ತಾಮ್ರಶಾಸನಗಳಾದರೆ ಸಂಬಂಧಿಸಿದ ವ್ಯಕ್ತಿಗಳ ವಶದಲ್ಲಿರುತ್ತವೆ.

ಶಾಸನಗಳ ಪ್ರಕಾರಗಳು

ದಕ್ಷಿಣ ಭಾರತದಲ್ಲಿ ತಮಿಳು ಭಾಷೆಯ ಶಾಸನಗಳನ್ನು ಬಿಟ್ಟರೆ ಸಂಖ್ಯೆಯ ದೃಷ್ಟಿಯಿಂದ ಅತಿ ಹೆಚ್ಚು ಶಾಸನಗಳು ಕನ್ನಡದಲ್ಲಿ ಲಭಿಸಿವೆ. ಅವನ್ನು ವಿಭಿನ್ನ ಸಾಮಗ್ರಿಗಳ ಮೇಲೆ ಕೊರೆಯಲಾಗಿದೆ. ಅವು ವಿವಿಧ ವಿಷಯಗಳನ್ನೊಳಗೊಂಡಿವೆ. ಅವನ್ನು ಅವುಗಳ ರಚನೆಗೆ ಬಳಸಿದ ಸಾಮಗ್ರಿಗಳನ್ನು ಆಧರಿಸಿ, ಇಲ್ಲವೇ ಅವುಗಳಲ್ಲಿ ನಿರೂಪಿತವಾದ ವಿಷಯಗಳನ್ನು ಆಧರಿಸಿ ಸ್ಥೂಲವಾಗಿ ಎರಡು ರೀತಿಗಳಲ್ಲಿ ವಿಂಗಡಿಸಬಹುದು.

೧. ಶಾಸನಗಳ ರಚನೆಗೆ ಬಳಸಿದ ಸಾಮಗ್ರಿಗಳನ್ನು ಆಧರಿಸಿ: ಶಾಸನಗಳನ್ನು ಹಾಕಿಸುವುದಕ್ಕಾಗಿ ಅನೇಕ ಗಟ್ಟಿ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗಿದೆ. ಅವುಗಳಲ್ಲಿ ಶಿಲೆ, ಲೋಹ, ಕಟ್ಟಿಗೆ, ದಂತ, ಸುಟ್ಟ ಇಟ್ಟಿಗೆ, ಇತ್ಯಾದಿಗಳು ಪ್ರಮುಖವಾದವು. ಶಾಸನಗಳನ್ನು ಹಾಕಿಸುವುದಕ್ಕಾಗಿ ಇವುಗಳನ್ನು ಬಳಸಿಕೊಂಡುದ್ದರ ಉದ್ದೇಶವೆಂದರೆ ಅಂದು ಕಾಗದದ ಬಳಕೆ ಇರಲಿಲ್ಲ. ತಾಳಪತ್ರ, ಭೂರ್ಜಪತ್ರಗಳು ಇದ್ದರೂ, ಅವು ಬಹಳ ದಿನ ಬಾಳಿಕೆ ಬರುವಂತಹವಲ್ಲ ಮತ್ತು ಬಹು ಸುಲಭವಾಗಿ ನಾಶವಾಗುವಷ್ಟು ಸೂಕ್ಷ್ಮವಾದಂತಹವು. ಮೇಲಾಗಿ ಸಾರ್ವಜನಿಕ ಸ್ಥಳಗಳಲ್ಲಿ ಹಾಕಿಸಲು ಬರುವಂತಹವಲ್ಲ. ಹೀಗಾಗಿ ಶಾಸನರಚನೆಯಲ್ಲಿ ವಿವಿಧ ವಸ್ತುಗಳ ಪೈಕಿ ಪ್ರಧಾನವಾಗಿ ಶಿಲೆಗಳನ್ನು ಕಲ್ಲನ್ನೇ ಬಳಸಲಾಗಿದೆ. ಕಾರಣ, ಅದು ಉಚಿತ ರೀತಿಯಲ್ಲಿ ಲಭ್ಯವಾಗುವಂತಹದು, ಗಟ್ಟಿಯಾಗಿರುವಂತಹದು, ಬಹಳ ಕಾಲ ಬಾಳಿಕೆ ಬರುವ ಸಾಮಗ್ರಿಯಾಗಿದ್ದು ಅದನ್ನು ಸಾರ್ವಜನಿಕ ಸ್ಥಳ,

ಸೀಮೆಗಳಲ್ಲೂ, ದೇವಾಲಯದ ಕಟ್ಟಡದ ಸಾಲಿನಲ್ಲೂ ನಿರ್ಮಿಸಿ ಮತ್ತು ಸಹಜ ನಿಲ್ಲಿಸಲು ಬರುವಂತಹದು. ಲೋಹಗಳಲ್ಲಿ ತಾಮ್ರವು ಹೆಚ್ಚಾಗಿ ಬಳಕೆಯಾಗಿದೆ. ಇದು ವೈಯಕ್ತಿಕವಾದಂತಹ ಕ್ರಯಪತ್ರಗಳು, ಪ್ರಶಸ್ತಿಪತ್ರಗಳು, ದಾನದತ್ತಿಪತ್ರಗಳು ಇತ್ಯಾದಿಗಳ ರಚನೆಯಲ್ಲಿ ಬಳಕೆಯಾದುದನ್ನು ಕಾಣಬಹುದು. ಇನ್ನುಳಿದ ಲೋಹಗಳಾದ ಬೆಳ್ಳಿ, ಕಂಚು, ಬಂಗಾರ ಕಡಿಮೆ ಪ್ರಮಾಣದಲ್ಲಿ, ಅದರಲ್ಲಿಯೂ ದೇವಾಲಯಗಳ ವಿಷಯಕ್ಕೆ ಸಂಬಂಧಿಸಿದ ಸಂದರ್ಭಗಳಲ್ಲಿ ಬಳಕೆಯಾಗಿವೆ. ಕಟ್ಟಿಗೆ, ದಂತ, ಸುಟ್ಟ ಇಟ್ಟಿಗೆ ಇತ್ಯಾದಿಗಳ ಬಳಕೆ ಪ್ರಮಾಣ ಇನ್ನೂ ಕಡಿಮೆ. ಶಿಲೆಯಲ್ಲಿ ಕೊರೆದ ಶಾಸನಗಳನ್ನು 'ಶಿಲಾಶಾಸನ'ಗಳೆಂದೂ ತಾಮ್ರದಲ್ಲಿ ಕೊರೆದ ಶಾಸನಗಳನ್ನು 'ತಾಮ್ರಶಾಸನ'ಗಳೆಂದೂ ಕಲ್ಲಿನ ಸ್ತಂಭಗಳ ಮೇಲೆ ಕೊರೆದ ಶಾಸನಗಳನ್ನು ಸ್ತಂಭಶಾಸನಗಳೆಂದೂ ಕರೆಯಲಾಗುತ್ತದೆ.

೨. ಶಾಸನಗಳಲ್ಲಿ ನಿರೂಪಿತವಾಗಿರುವ ವಿಷಯಗಳನ್ನು ಆಧರಿಸಿ, ಶಾಸನಗಳನ್ನು ಧರ್ಮಶಾಸನಗಳು, ದಾನದತ್ತಿಶಾಸನಗಳು, ಪ್ರಶಸ್ತಿಶಾಸನಗಳು,ವಿಜಯಶಾಸನಗಳು, ವೀರಗಲ್ಲುಗಳು, ಮಾಸ್ತಿಕಲ್ಲುಗಳು, ನಿಸಿದಿಗಲ್ಲುಗಳು, ಯೂಪಶಾಸನಗಳು ಎಂದು ಮುಂತಾಗಿ ವರ್ಗೀಕರಿಸಬಹುದು.

ಧರ್ಮಶಾಸನಗಳು: ಇವು ಧರ್ಮಪ್ರಸಾರದ ಹಿನ್ನೆಲೆಯಲ್ಲಿ ಆ ಧರ್ಮದ ಧ್ಯೇಯಧೋರಣೆಗಳನ್ನು ಕುರಿತು ಸಾರುತ್ತವೆ. ಉದಾಹರಣೆಗೆ, ಅಶೋಕನ ಶಾಸನಗಳು. ಇವನ್ನು ವಿದ್ವಾಂಸರು ಧರ್ಮಲಿಪಿಗಳೆಂದು ಕೂಡ ಕರೆದಿದ್ದಾರೆ.

ದಾನದತ್ತಿ ಶಾಸನಗಳು

ಕರ್ನಾಟಕದಲ್ಲಿ ಲಭಿಸುವ ಶಾಸನಗಳಲ್ಲಿ ದಾನದತ್ತಿ ಶಾಸನಗಳದ್ದೇ ಸಿಂಹಪಾಲು. ಒಂದು ಸದುದ್ದೇಶಕ್ಕಾಗಿ, ರಾಜರು, ದಂಡಾಧಿಪತಿಗಳು, ಖಾಸಗಿ ವ್ಯಕ್ತಿಗಳು, ತಮಗೆ ಅಥವಾ ತಮಗೆ ಸಂಬಂಧಿಸಿದವರಿಗೆ ಶುಭವಾಗಲೆಂದು ಶುಭಮೂಹೂರ್ತದಲ್ಲಿ ಇಲ್ಲವೇ ಪರ್ವಕಾಲ ಮತ್ತು ಪುಣ್ಯಕಾಲಗಳಲ್ಲಿ ಅನೇಕ ದಾನದತ್ತಿಗಳನ್ನು ಬಿಟ್ಟ ವಿಷಯಗಳನ್ನು ಇಂತಹ ಶಾಸನಗಳು ನಿರೂಪಿಸುತ್ತವೆ. ವಿದ್ಯಾದಾನಕ್ಕಾಗಿ ಭೂಮಿಯನ್ನು ದತ್ತಿ ಬಿಟ್ಟುದನ್ನು ನಾಗಾಯಿ ಶಾಸನವು ತಿಳಿಸುತ್ತದೆ. ಬ್ರಾಹ್ಮಣರಿಗೆ ಬ್ರಹ್ಮಪುರಿಗಳನ್ನು ಅಗ್ರಹಾರಗಳನ್ನು ನಿರ್ಮಿಸಿಕೊಡುವುದು, ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ಕೊಡುಗೆಗಳನ್ನು ನೀಡುವುದು, ತಮಗೆ ಯುದ್ಧದಲ್ಲಿ ಸಹಾಯ ಮಾಡಿದುದಕ್ಕಾಗಿ ಸನ್ಮಾನಮಾಡಿ ಕೊಡುಗೆಗಳನ್ನು ನೀಡುವುದು ಹೀಗೆ ವಿವಿಧ ಸಂದರ್ಭಗಳಲ್ಲಿ ದಾನದತ್ತಿ ನೀಡಿದ ವಿಷಯವನ್ನು ಈ ವರ್ಗದ ಶಾಸನಗಳು ನಿರೂಪಿಸುತ್ತವೆ.

ವೀರಗಲ್ಲುಗಳು: ಈ ಶಾಸನಗಳು ಒಂದು ನಿರ್ದಿಷ್ಟ ಘಟನೆಯನ್ನು ನಿರೂಪಿಸುವಂತಹವುಗಳಾಗಿವೆ. ಅಂದು ವೀರರು ಯುದ್ಧದಲ್ಲಿ, ಊರಿನ ಸಂರಕ್ಷಣೆಯಲ್ಲಿ, ಗೋರಕ್ಷಣೆ, ಸ್ತ್ರೀರಕ್ಷಣೆ ಸಂದರ್ಭಗಳಲ್ಲಿ ತಮ್ಮ ಪ್ರಾಣದ ಹಂಗು ತೊರೆದು, ಹೋರಾಡಿ ಮಡಿದುದರ ನೆನಪಿಗಾಗಿ ಹಾಕಿಸಿದ ಶಾಸನಗಳೇ ವೀರಗಲ್ಲುಗಳು; ಪರಾರ್ಥಕ್ಕಾಗಿ ಹೋರಾಡಿ ಮಡಿದ ಆ ವೀರರ ನೆನಪಿಗಾಗಿ ನೆಟ್ಟ ಕಲ್ಲುಗಳೇ ವೀರಗಲ್ಲುಗಳು. ಅಂದಿನ ವೀರರು

> ಜಿತೇನ ಲಭತೇ ಲಕ್ಷ್ಮೀ ಮೃತೇನಾಪಿ ಸುರಾಂಗನಾ।
> ಕ್ಷಣವಿಧ್ವಂಸಿನೀ ಕಾಯೇ ಕಾ ಚಿಂತಾ ಮರಣೇರಣೇ॥

ಎಂಬ ವೀರವಾಂಛೆಯುಳ್ಳವರಾಗಿದ್ದರು. ಇವು ಅಂದಿನ ವೀರರಲ್ಲಿ ಮನೆಮಾಡಿದ್ದ ಮೌಲ್ಯಗಳೂ ಮತ್ತು ಅವರ ಗುಣಗಳೂ ಆಗಿದ್ದವು. ವೀರರು ತಮ್ಮ ಒಡೆಯನಿಗೆ ನಿಷ್ಠರಾಗಿದ್ದುಕೊಂಡು ಯುದ್ಧ ಕಾಲದಲ್ಲಿಯೇ ಆಗಲಿ, ಕಷ್ಟಕಾಲದಲ್ಲಿಯೇ ಆಗಲಿ ಅಥವಾ ಊರುಕೇರಿಗಳಿಗೆ ವಿಪತ್ತು ಬಂದಾಗ ಪ್ರಾಣದ ಹಂಗು ತೊರೆದು ಹೋರಾಡಿ ವೀರಮರಣ ಹೊಂದಲು ಹಿಂದೆ ಮುಂದೆ ನೋಡುತ್ತಿರಲಿಲ್ಲ. ಇಂತಹ ವೀರರ ನೆನಪಿಗಾಗಿ ನೆಟ್ಟಂತಹವು ಈ ವೀರಗಲ್ಲುಗಳು. ಅವುಗಳಲ್ಲಿ ಶಾಸನ ಸಹಿತ ವೀರಗಲ್ಲುಗಳು ಮತ್ತು ಶಾಸನ ರಹಿತ ವೀರಗಲ್ಲುಗಳಾಗಿ ವಿಂಗಡಿಸಬಹುದಾಗಿದೆ.

ಮಾಸ್ತಿಕಲ್ಲುಗಳು: ಮಾಸ್ತಿಕಲ್ಲುಗಳದ್ದು ಶಾಸನಗಳ ಇನ್ನೊಂದು ಪ್ರಕಾರ. ಪ್ರಾಚೀನ ಕಾಲದಲ್ಲಿ ಕೆಲವೊಮ್ಮೆ ಸತಿಯಾದವಳು ತನ್ನ ಪತಿಯಾದವನು ಯಾವುದೋ ಕಾರಣದಿಂದ ಮರಣ ಹೊಂದಿದಾಗ ಆತನನ್ನೇ ಅನುಸರಿಸಿ ಪ್ರಾಣತ್ಯಾಗ ಮಾಡುತ್ತಿದ್ದಳು. ಈ ರೀತಿ ಪ್ರಾಣತ್ಯಾಗ ಮಾಡುವುದರಲ್ಲಿ ಎರಡು ಪ್ರಕಾರಗಳಿವೆ. ಪತಿಯ ಶವಕ್ಕೆ ಸಂಸ್ಕಾರವಾದ ನಂತರ ಸತಿಯು ಬೇರೆ ಚಿತೆಯೇರಿ ಪ್ರಾಣತ್ಯಾಗ ಮಾಡುವುದು ಒಂದು ಪ್ರಕಾರ. ಇದನ್ನು 'ಅನುಗಮನ' ಪದ್ಧತಿ ಎನ್ನುತ್ತಾರೆ. ಹೀಗಲ್ಲದೆ ಪತಿಯ ಶವವನ್ನು ಇರಿಸಿದ ಚಿತೆಯನ್ನೇ ತಾನೂ ಏರಿ ಪ್ರಾಣತ್ಯಾಗ ಮಾಡುವುದು ಇನ್ನೊಂದು ಪ್ರಕಾರ. ಇದನ್ನು 'ಸಹಗಮನ' ಪದ್ಧತಿ ಎನ್ನುತ್ತಾರೆ. ಹೀಗೆ ಪ್ರಾಣತ್ಯಾಗಮಾಡಿದಾಕೆಯ ನೆನಪಿಗಾಗಿ ಹಾಕಿಸಿದ ಕಲ್ಲುಗಳೇ ಮಾಸ್ತಿಗಲ್ಲುಗಳು. ಕ್ರಿ.ಶ.೧೦೫೭ರ ಬೆಳತೂರಿನ ದೇಕಬ್ಬೆಯ ಶಾಸನವು ಅನುಗಮನಕ್ಕೆ ಪದ್ಧತಿಗೆ ಉತ್ತಮ ಉದಾಹರಣೆಯನ್ನೊದಗಿಸುತ್ತದೆ. ಅವುಗಳಲ್ಲಿ ಶಾಸನ ಸಹಿತ ಮಾಸ್ತಿಗಲ್ಲುಗಳು ಮತ್ತು ಶಾಸನ ರಹಿತ ಮಾಸ್ತಿಗಲ್ಲುಗಳಾಗಿ ವಿಂಗಡಿಸಬಹುದಾಗಿದೆ.

ನಿಸಿದಿಗಲ್ಲುಗಳು: ಜೈನಯತಿಗಳು ತಮ್ಮ ಕಠೋರವಾದ ತಪಸ್ಸಿನಿಂದ ಸಲ್ಲೇಖನ ವ್ರತವನ್ನು ಕೈಕೊಂಡು ಸಮಾಧಿಮರಣ ಹೊಂದುತ್ತಿದ್ದರು. ಇಂತಹವರ ನೆನಪಿಗಾಗಿ ನೆಟ್ಟ ಕಲ್ಲುಗಳೇ ನಿಸಿದಿಗಲ್ಲುಗಳು. ಜೈನರ ಕಾಶಿ ಎಂದೇ ಪ್ರಸಿದ್ಧಿ ಪಡೆದ ಕೊಪ್ಪಳ ಹಾಗೂ ಶ್ರವಣಬೆಳಗೊಳದಲ್ಲಿ

ಇಂತಹ ಅನೇಕ ಜೈನಯತಿಗಳ ನಿಸಿದಿಗಲ್ಲುಗಳು ಇರುವುದನ್ನು ಕಾಣಬಹುದು. ಅವುಗಳಲ್ಲಿ ಶಾಸನ ಸಹಿತ ನಿಸಿದಿಗಲ್ಲುಗಳು ಮತ್ತು ಶಾಸನ ರಹಿತ ನಿಸಿದಿಗಲ್ಲುಗಳಾಗಿ ವಿಂಗಡಿಸಬಹುದಾಗಿದೆ.

ಪ್ರಶಸ್ತಿ ಶಾಸನಗಳು: ರಾಜರು ತಮ್ಮ ದಂಡನಾಯಕರಿಗೆ, ಸಾಮಂತರಿಗೆ, ವೀರರಿಗೆ ಮುಂತಾದವರಿಗೆ ಪ್ರಶಸ್ತಿ ರೂಪದಲ್ಲಿ ಅನೇಕ ರೀತಿಯ ವಸ್ತುಗಳನ್ನು, ಭೂಪ್ರದೇಶಗಳನ್ನು ನೀಡುತ್ತಿದ್ದರು. ಈ ಸಂದರ್ಭದಲ್ಲಿ ಹಾಕಿಸುತ್ತಿದ್ದ ಶಾಸನಗಳನ್ನು ಪ್ರಶಸ್ತಿ ಶಾಸನಗಳೆನ್ನಲಾಗುತ್ತದೆ. ಇವನ್ನು ಶಿಲೆಯ ಮೇಲಾಗಲೀ ತಾಮ್ರಪಟ್ಟಿಕೆಗಳ ಮೇಲಾಗಲೀ ಹಾಕಿಸಲಾಗುತ್ತಿತ್ತು. ಕೆಲವೊಮ್ಮೆ ಎರಡರ ಮೇಲೂ ಹಾಕಿಸುತ್ತಿದ್ದುದೂ ಉಂಟು.

ಹೀಗಲ್ಲದೆ ರಾಜರು ಮುಂತಾದವರು ತಮ್ಮ ವಿಜಯದ ನೆನಪಿಗಾಗಿ ಕೂಡ ಪ್ರಶಸ್ತಿಶಾಸನಗಳನ್ನು ಹಾಕಿಸಿಕೊಳ್ಳುತ್ತಿದ್ದುದುಂಟು. ಇಂತಹವನ್ನು ಸಾಮಾನ್ಯವಾಗಿ ಸ್ತಂಭಗಳ ಮೇಲೆ ಹಾಕಿಸುತ್ತಿದ್ದು ಇವನ್ನು ವಿಜಯಸ್ತಂಭಗಳೆಂದು ಕರೆಯಲಾಗುತ್ತದೆ.

ಯೂಪ ಶಾಸನಗಳು: ಈ ಪ್ರಕಾರದ ಶಾಸನಗಳ ಸಂಖ್ಯೆ ಬಹಳ ಕಡಿಮೆ ಎಂದೇ ಹೇಳಬಹುದು. 'ಯೂಪ' ಎಂದರೆ ಯಜ್ಞಯಾಗಾದಿಗಳ ಸಂದರ್ಭದಲ್ಲಿ ಬಲಿಕೊಡಲು ತಂದ ಪ್ರಾಣಿಯನ್ನು ಕಟ್ಟುತ್ತಿದ್ದ ಒಂದು ಕಂಬ. ಆ ಕಂಬದ ಮೇಲೆ ಘಟನಾವಳಿಯನ್ನು ವಿರಳವಾಗಿ ಬರೆಯುತ್ತಿದ್ದರು. ಅಂತಹದನ್ನು 'ಯೂಪಶಾಸನ'ವೆಂದು ಕರೆಯುತ್ತಾರೆ. ಹೀಗೆ ಶಾಸನಗಳನ್ನು ಪ್ರಧಾನವಾಗಿ ಅವು ರಚಿತವಾಗಿರುವ ಸಾಮಗ್ರಿಗಳ ಆಧಾರದ ಮೇಲೆ ಹಾಗೂ ಅವುಗಳಲ್ಲಿ ನಿರೂಪಣೆಗೊಂಡ ವಸ್ತುವಿನ ಆಧಾರದ ಮೇಲೆ ಅವುಗಳನ್ನು ವರ್ಗೀಕರಿಸಲಾಗುತ್ತದೆ.

ಇಂತಹ ಶಾಸನಗಳು ಆಯಾ ಕಾಲದ ಸಂಸ್ಕೃತಿಯನ್ನು ಅಧ್ಯಯನ ಕೈಗೊಳ್ಳಲು ಮತ್ತು ಮುಖ್ಯ ಆಕರಗಳಾಗಿ ಇತಿಹಾಸದ ಪುನರ್ರಚನೆಗೆ ಮುಖ್ಯ ಆಕರಗಳಾಗಿ ಪರಿಣಮಿಸುತ್ತವೆಂದು ಹೇಳಬಹುದು.

ಶಾಸನಾಧಾರಗಳ ಮಹತ್ವ

ಒಂದು ನಾಡಿನ ಇತಿಹಾಸದ ರಚನೆಗೆ ಹಲವಾರು ರೀತಿಯ ಆಕರ ಸಾಮಗ್ರಿಗಳನ್ನು ಆಶ್ರಯಿಸಬೇಕಾಗುತ್ತದೆ. ಅವುಗಳಲ್ಲಿ ಶಾಸನಗಳು, ಸಾಹಿತ್ಯಕೃತಿಗಳು, ಕೈಫಿಯತ್ತುಗಳು, ಬಖೈರುಗಳು, ಸ್ಮಾರಕಗಳು, ನಾಣ್ಯಗಳು ಮತ್ತು ವಿದೇಶಿ ಬರವಣಿಗೆಗಳು ಮುಂತಾದವು ಸೇರುತ್ತವೆ. ಇವುಗಳ ಪೈಕಿ ಶಾಸನಗಳಿಗೇ ಅಗ್ರಸ್ಥಾನ. ನಮ್ಮ ನಾಡಿನ ಇತಿಹಾಸದ ಪುನಾರಚನೆಯಲ್ಲಿ ಅವು ಅದ್ವಿತೀಯ ಸ್ಥಾನ ಪಡೆಯುತ್ತವೆ. ಭಾರತದಲ್ಲಿ ಬಹು ಸಂಖ್ಯೆಯಲ್ಲಿ ಶಾಸನಗಳು ಲಭಿಸುತ್ತವೆ. ಶಾಸನಗಳಲ್ಲಿ ನಮ್ಮ ನಾಡಿನ ಸಂಸ್ಕೃತಿಯ ವಿವಿಧ ಮುಖಗಳ ಅಧಿಕೃತ ಹೊಳಹುಗಳನ್ನು

ಕಾಣಬಹುದು. "ಕನ್ನಡ ನಾಡಿನ ಜೀವನವು ಎಲ್ಲಿಯೂ, ಯಾವ ಕೃತಿಯಲ್ಲಿಯೂ ಮಡುಗಟ್ಟಿ ನಿಂತಿಲ್ಲ. ಅದು ಕೆಲವು ಕಾವ್ಯಗಳಲ್ಲಿ ಅಲ್ಲಲ್ಲಿ ಗೋಪಾದ ಜಲದಂತೆ ಕಂಡು ಬಂದರೂ ಹೆಚ್ಚು ಪ್ರಮಾಣದಲ್ಲಿ, ಹೆಚ್ಚು ವಿಸ್ತಾರವಾಗಿ, ಹೆಚ್ಚು ಶುದ್ಧರೂಪದಲ್ಲಿ ಕಾಣಿಸಿಕೊಳ್ಳುವುದು ಶಾಸನಗಳಲ್ಲಿ"(ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪೂರ್ವೋಕ್ತ, ಪು.೮). ಅದ್ದರಿಂದ ಶಾಸನಗಳು ನಾಡಿನ ಸಂಸ್ಕೃತಿಯ ಎಲ್ಲ ಜ್ಞಾನ ಶಾಖೆಗಳನ್ನು ಒಳಗೊಂಡಿದ್ದು ಎಲ್ಲ ಆಕರಗಳಿಗಿಂತ ಸರ್ವದೃಷ್ಟಿಯಿಂದ ಅಪೂರ್ವ ಸತ್ಯನಿಷ್ಠ ಆಕರಗಳಾಗಿ ಇವು ಪರಿಣಮಿಸುತ್ತವೆ.

"ಭಾರತೀಯ ಸಂಸ್ಕೃತಿಯನ್ನು ಅಧ್ಯಯನ ಮಾಡುವವರಿಗೆ ಸಂಸ್ಕೃತ ಸಾಹಿತ್ಯದಂತೆ ಶಾಸನ ಸಾಹಿತ್ಯವೂ ವಿಷಯದ ಗಣಿಯಾಗಿದೆ"(ಚನ್ನಬಸವಯ್ಯ ಹಿರೇಮಠ, ಕುರುಗೋಡು ಸಿಂದರು ಒಂದು ಅಧ್ಯಯನ, ೧೯೯೫, ಪು.೬) ಎಂಬ ಡಾ.ಚನ್ನಬಸವಯ್ಯ ಹಿರೇಮಠ ಅವರ ಅಭಿಪ್ರಾಯವು ಅನುಮೋದನೀಯವಾಗಿದೆ. "ಪ್ರಾಚೀನ ಭಾರತದ ರಾಜಕೀಯ, ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸದ ಅಭ್ಯಾಸಗಳು ತಮ್ಮ ಜ್ಞಾನದ ಕೊರತೆಯನ್ನು ಶಾಸನಗಳ ಅಭ್ಯಾಸದಿಂದ ಹೋಗಲಾಡಿಸಿಕೊಳ್ಳಬಹುದು"(ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು.೨೭).

ಕನ್ನಡಸಾಹಿತ್ಯದ ಇತಿಹಾಸವನ್ನು ಶಾಸನದಿಂದಲೇ ಪ್ರಾರಂಭಮಾಡಬೇಕಾಗಿದೆ. "ಶಾಸನಗಳು ಕನ್ನಡ ಸಾಹಿತ್ಯದ ತಲಕಾವೇರಿ"ಗಳಾಗಿವೆ(ಅದೇ, ಪು.೩೧). ನಮ್ಮ ಸಾಹಿತ್ಯದ ಮೊತ್ತಮೊದಲ ಮಾದರಿಯಾಗಿ ಲಭ್ಯವಿರುವುದು ಕ್ರಿ.ಶ.೪೫೦ರ ಹಲ್ಮಿಡಿ ಶಾಸನವೇ. ಕವಿರಾಜಮಾರ್ಗಕ್ಕಿಂತ ಪೂರ್ವದಲ್ಲೇ ಕನ್ನಡದಲ್ಲಿ ಶ್ರೇಷ್ಠ ಕೃತಿಗಳು ರಚಿತವಾಗಿರುವಂತೆ ತಿಳಿದುಬರುವುದಾದರೂ ಆ ಯಾವ ಕೃತಿಯೂ ಇಂದು ಲಭ್ಯವಿಲ್ಲ. ಹಾಗಾಗಿ ಆ ಅವಧಿಯ ಕನ್ನಡ ಸಾಹಿತ್ಯದ ಸ್ವರೂಪವನ್ನು ಕಂಡುಕೊಳ್ಳಬೇಕಾದರೆ ನಾವು ಮೊರೆಹೊಗಬೇಕಾಗಿರುವುದು ಶಾಸನಗಳಿಗೆ ಎಂದು ಹೇಳಬಹುದು.

ಹೀಗೆ ಕನ್ನಡ ಗದ್ಯಸಾಹಿತ್ಯದ ದೃಷ್ಟಿಯಿಂದ ಹಲ್ಮಿಡಿ ಶಾಸನವು ಮೊದಲ ಮೈಲುಗಲ್ಲಾಗಿ ನಿಲ್ಲುತ್ತದೆ. ಇದೇ ರೀತಿ ಕ್ರಿ.ಶ. ೫ನೆಯ ಶತಮಾನದ ಗುಣಮಧುರನ ಶಾಸನವು ಒಂದೇ ಒಂದು ನುಡಿಯಿಂದ ಕೂಡಿದ್ದರೂ ಕನ್ನಡ ಮಾರ್ಗಕಾವ್ಯ ಪರಂಪರೆಯ ಸ್ವರೂಪವನ್ನು ಅರಿಯುವಲ್ಲಿ ಮೊದಲ ಮೈಲುಗಲ್ಲಾಗಿ ನಿಲ್ಲುತ್ತದೆ. ಕ್ರಿ.ಶ. ೭ನೆಯ ಶತಮಾನದ ಬಾದಾಮಿಯ ಕಪ್ಪೆ ಅರಭಟ್ಟನ ಶಾಸನದಲ್ಲಿ ದೇಸಿ ಛಂದಸ್ಸಾದ ತ್ರಿಪದಿಯ ಮೊದಲ ಮಾದರಿಗಳನ್ನು ಕಾಣುತ್ತೇವೆ. ಹೀಗೆ ಕನ್ನಡ ಸಾಹಿತ್ಯ ಚರಿತ್ರೆಯ ರಚನೆಗೆ ಶಾಸನಗಳು ಅತಿ ಮಹತ್ವದ ಆಕರಗಳಾಗಿ ಪರಿಣಮಿಸುತ್ತವೆ. ಶಾಸನಗಳಲ್ಲಿಯ ಕಾವ್ಯಸೌಂದರ್ಯವನ್ನು ಮನಗಂಡ ಆರ್. ನರಸಿಂಹಾಚಾರ್ಯರು ಕ್ರಿ.ಶ. ೧೯೨೩ರಲ್ಲಿ 'ಶಾಸನಪದ್ಯಮಂಜರಿ' ಎಂಬ ಹೆಸರಿನಲ್ಲಿ ಒಂದು

ಕೃತಿಯನ್ನೇ ಪ್ರಕಟಿಸಿದ್ದಾರೆ. ಕೃತಿಗಳು ದೊರಕದ ಸನ್ನಿವೇಶದಲ್ಲಿ ಶಾಸನಗಳಲ್ಲಿ ಉಕ್ತವಾಗಿರುವ ಕವಿಗಳ ಬಗೆಗಿನ ಮಾಹಿತಿಯನ್ನೇ ಒಂದೆಡೆ ಸಂಗ್ರಹಿಸಿ, ಮೇವುಂಡಿ ಮಲ್ಲಾರಿಯವರು 'ಕನ್ನಡ ನಾಡಿನ ಶಾಸನ ಕವಿಗಳು' ಎಂಬ ಒಂದು ಕೃತಿಯನ್ನು ಪ್ರಕಟಿಸಿದ್ದಾರೆ.

ಶಾಸನಾಧಾರಗಳು ಉಳಿದೆಲ್ಲ ದಾಖಲೆಗಳಿಗಿಂತ ಹೆಚ್ಚು ಅಧಿಕೃತ ವಾದಂತಹವು. ಇದಕ್ಕೆ ಕಾರಣಗಳೆಂದರೆ ಅವು ಕಾಲ, ದೇಶ, ಘಟನೆಯ ಮೂಲ ಸ್ವರೂಪ ಇವುಗಳ ದೃಷ್ಟಿಯಿಂದ ಸತ್ಯಕ್ಕೆ ತೀರ ಹತ್ತಿರವಾಗಿರುವುದು, ಅಂದಿನಿಂದ ಇಂದಿನವರೆಗೆ ಮೂಲರೂಪದಲ್ಲಿಯೇ ಉಳಿದುಬಂದಿರುವುದು ಮತ್ತು ಅವುಗಳಲ್ಲಿ ಸಾಹಿತ್ಯಿಕ ದೃಷ್ಟಿಗಿಂತ ಸತ್ಯವನ್ನು ದಾಖಲಿಸುವ ದೃಷ್ಟಿಯೇ ಪ್ರಧಾನವಾಗಿರುವುದು ಇವು. ವಸ್ತುವಿನ ದೃಷ್ಟಿಯಿಂದ ಗಮನಿಸುವುದಾದರೆ, ಕೇವಲ ಶುಷ್ಕ ದಾಖಲೆಗಳಾಗಿ ಉಳಿಯದೆ, ಹಲವಾರು ಮುಖಗಳಲ್ಲಿ ಕೈಚಾಚಿಕೊಂಡಿದ್ದು ಭಾಷಿಕ, ಸಾಹಿತ್ಯಿಕ, ಚಾರಿತ್ರಿಕ ಹಾಗೂ ಸಾಂಸ್ಕೃತಿಕ ಅಂಶಗಳ ಗಣಿಯಾಗಿರುವುದು. ಹೀಗಾಗಿ ಅವುಗಳ ಅಧ್ಯಯನ ಮತ್ತು ಆಧಾರಗಳು ಅತಿ ಮಹತ್ವದವಾಗಿ ನಿಲ್ಲುತ್ತವೆ.

ಶಾಸನಾಧಾರಗಳ ಮಿತಿಗಳು

ಹೀಗೆ ಒಂದು ನಾಡಿನ ಇತಿಹಾಸದ ಪುನಾರಚನೆಯ ಸಂದರ್ಭದಲ್ಲಿ ಶಾಸನಾಧಾರಗಳು ಅತಿ ಮಹತ್ವದ ದಾಖಲೆಗಳಾಗುತ್ತವೆಯೆಂಬುದೇನೋ ನಿಜ. ಆದರೆ ಹಾಗೆಂದುಕೊಂಡು ಹಿಂದುಮುಂದು ನೋಡದೆ ಅವನ್ನು ಯಥಾವತ್ತಾಗಿ ಸ್ವೀಕರಿಸಿದರೆ ಮಾತ್ರ ತೊಂದರೆಗಳು ತಪ್ಪಿದ್ದಲ್ಲ. ಶಾಸನಗಳು ಕೂಡ ಒಬ್ಬ ವ್ಯಕ್ತಿಯ ರಚನೆಗಳೇ ಆಗಿರುವುದರಿಂದ ಅವುಗಳಲ್ಲಿ ಕೂಡ ದೋಷಗಳು ಇಲ್ಲದೆ ಇರುವುದಿಲ್ಲ. ಆದುದರಿಂದ ಅವುಗಳ ಬಳಕೆಯ ಸಂದರ್ಭದಲ್ಲಿ ಅತಿ ಜಾಗ್ರತೆಯನ್ನು ವಹಿಸಬೇಕಾಗುತ್ತದೆ. ಅವು ಎಷ್ಟೇ ಶುದ್ಧದಾಖಲೆಗಳೇ ಆಗಿದ್ದರೂ ಅವುಗಳಲ್ಲಿ ಕೂಡ ಕಲ್ಪನಾವಿಲಾಸಕ್ಕೆ ಉತ್ಪ್ರೇಕ್ಷೆಗೆ ಅವಕಾಶವಿದ್ದೇ ಇರುತ್ತದೆ. ಸಾಮಾನ್ಯವಾಗಿ ರಾಜರ, ಇತರ ಅಧಿಕಾರಿಗಳ, ಅವರ ಪೂರ್ವಜರ ವರ್ಣನೆಗಳಲ್ಲಿ, ಅವರ ಬಿರುದುಬಾವಲಿಗಳ ಸಂದರ್ಭದಲ್ಲಿ ಅತಿಯಾದ ಹೊಗಳಿಕೆ, ಉತ್ಪ್ರೇಕ್ಷೆ ಬರುವುದು ಸಹಜ. ಉದಾಹರಣೆಗೆ, ಮೂರು ಲೋಕದ ಗಂಡ, ತ್ರಿಲೋಕಮಲ್ಲ ಇತ್ಯಾದಿಗಳನ್ನು ಗಮನಿಸಬಹುದು. ಇಂತಹವನ್ನು ಬಳಸಿಕೊಳ್ಳುವಾಗ ಎಚ್ಚರಿಕೆಯಿಂದ ಉತ್ಪ್ರೇಕ್ಷಾದಿಗಳನ್ನು ಶೋಧಿಸಿ ತೆಗೆದು ಮೂಲಸತ್ಯವನ್ನಷ್ಟೇ ಸ್ವೀಕರಿಸಬೇಕಾಗುತ್ತದೆ.

ಒಂದೊಂದು ಸಲ ಶಾಸನ ಕವಿಯ, ಲಿಪಿಕಾರನ, ಇಲ್ಲವೇ ಕಂಡರಣೆಕಾರನ ಆಲಸ್ಯ, ಮರೆವು, ಅಜ್ಞಾನ ಇತ್ಯಾದಿ ದೋಷಗಳಿಂದಲೂ ಅಪಶಬ್ದರೂಪಗಳೂ ಅಪಾರ್ಥಗಳೂ ತಲೆದೋರಬಹುದು. ಇದರಿಂದ ಮೂಲಸತ್ಯವು ಮರೆಯಾಗಬಹುದು. ಇಂತಹ ಸಂದರ್ಭಗಳಲ್ಲಿ ಪಾಠಪರಿಷ್ಕರಣದ ವಿಧಿವಿಧಾನಗಳನ್ನು ಬಳಸಿ ಶುದ್ಧ ಪಾಠವನ್ನು ಸ್ವೀಕರಿಸಬೇಕಾಗುತ್ತದೆ.

ಕೂಟ ಶಾಸನಗಳು

ಯಾವುದೇ ಒಂದು ವಸ್ತುವಿಗೆ ಬಹಳ ಪ್ರಾಮುಖ್ಯತೆ ಇದೆ ಎಂದರೆ ಅದಕ್ಕೆ ಅಡ್ಡಿ ಆತಂಕಗಳು ಇದ್ದೇ ಇರುತ್ತವೆ.ಹೀಗಾಗಿ ಶಾಸಗಳಿಗೆ ಇರುವ ಮಹತ್ವವನ್ನು ಮನಗಂಡ ಕಿಡಿಗೇಡಿಗಳು ಶಾಸನಗಳು ತಮ್ಮ ಅನುಕೂಲಕ್ಕೆ ತಕ್ಕಂತೆ ತಯ್ಯಾರಿಸಿಕೊಂಡು ಅವುಗಳನ್ನು ದುರುಪಯೋಗಪಡಿಸಿ ಕೊಳ್ಳಲು ಪ್ರಯತ್ನಿಸಿರುವುದೂ ಉಂಟು. ಮೋಸದಿಂದ ಇನ್ನೊಬ್ಬರ ಆಸ್ತಿಯನ್ನು ಲಪಟಾಯಿಸುವ ಸಲುವಾಗಿ, ಅಧಿಕಾರವನ್ನು ಗಿಟ್ಟಿಸಿಕೊಳ್ಳುವ ಸಲುವಾಗಿ, ಸುಳ್ಳುಶಾಸನಗಳನ್ನು ರೂಪಿಸಿರುವುದು ಕೆಲವೆಡೆ ಕಂಡುಬರುತ್ತದೆ. ಇಂತಹವನ್ನು 'ಕೂಟಶಾಸನ'ಗಳು ಎಂದು ಕರೆಯಲಾಗುತ್ತದೆ. 'ಕೂಟಶಾಸನ' ವೆಂದರೆ ಕೃತಕ, ಖೊಟ್ಟಿ, ನಕಲಿ ಶಾಸನ ಎಂದು ಅರ್ಥ.

ಇಂತಹ ಕೂಟಶಾಸನಗಳು ಹುಟ್ಟಿಕೊಳ್ಳಲು ಪ್ರಧಾನ ಕಾರಣವೆಂದರೆ ಶಾಸನಗಳಿಗಿರುವ ಮಹತ್ವವೇ ಆಗಿದೆ. ಶಾಸನದಲ್ಲಿ ಉಲ್ಲೇಖ ಇದೆ ಅಂದರೆ ಸಾಕು ಅದು ಸರ್ವರ ಮನ್ನಣೆಯನ್ನು ಪಡೆದ, ಸತ್ಯದಿಂದ ಕೂಡಿದ, ಆಧಾರವಾಗಿ ಪರಿಗಣಿತವಾಗುತ್ತಿತ್ತು. ಶಾಸನಗಳು ಅಂದಿನ ಅಧಿಕೃತ ಪತ್ರಗಳಾಗಿದ್ದವು, ನಂಬಲರ್ಹವಾದ ದಾಖಲೆಗಳಾಗಿದ್ದವು.

ಇಂತಹ ಕೂಟಶಾಸನಗಳು ಸಾಮಾನ್ಯವಾಗಿ ತಾಮ್ರಪತ್ರಗಳಮೇಲೆ ರಚಿತವಾಗಿರುವುದೇ ಅಧಿಕ. ಅಂದರೆ ಕೂಟಶಾಸನಗಳು ಹೆಚ್ಚಾಗಿ ತಾಮ್ರಶಾಸನಗಳೇ ಆಗಿರುತ್ತವೆ. ತಾಮ್ರಶಾಸನಗಳನ್ನು ಸಂಬಂಧಪಟ್ಟವರಿಗೆ ಕ್ರಯ, ಪ್ರಶಸ್ತಿ, ದಾನದತ್ತಿ ಮುಂತಾದವುಗಳ ಸಂಬಂಧದಲ್ಲಿ ನೀಡಲಾಗುತ್ತಿತ್ತು. ಶಿಲಾಶಾಸನಗಳನ್ನು ಸಾಮಾನ್ಯವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಹಾಕಿಸಲಾಗುತ್ತಿತ್ತು. ಆದ್ದರಿಂದ ಶಿಲೆಗಳಲ್ಲಿ ಕೂಟಶಾಸನಗಳನ್ನು ಕಂಡರಿಸುವುದು ಉಚಿತವಾಗಿರಲಿಲ್ಲ. ತಾಮ್ರಶಾಸನಗಳನ್ನು ತಯಾರಿಸುವಷ್ಟು ಗೌಪ್ಯವಾಗಿ ಶಿಲೆಯಲ್ಲಿ ಕೂಟಶಾಸನಗಳನ್ನು ತಯಾರಿಸುವುದು ಸಾಧ್ಯವಿಲ್ಲ. ಆದ್ದರಿಂದ ಕಲ್ಲಿನ ಮೇಲೆ ರಚಿತವಾದಂತಹ ಕೂಟಶಾಸನಗಳು ಇಲ್ಲವೆನ್ನುವಷ್ಟು ವಿರಳವಾಗಿವೆ. ಭುವನೇಶ್ವರದಲ್ಲಿ ದೊರೆತ ಅಶೋಕನ ರುಮ್ಮಿಂದೈ ಶಾಸನದ ಪ್ರತಿ ಹಾಗೂ ಮುಂಬಯಿಯ ಪ್ರಿನ್ಸ್ ಆಫ್ ವೇಲ್ಸ್ ಮ್ಯೂಸಿಯಂಗೆ ಬಂದ ಕಲ್ಲಿನ ಬಟ್ಟಲಿನ ಮೇಲಿನ ಅಶೋಕನ ಶಾಸನದ ಪ್ರತಿ ಇವು ಇಂತಹ ವಿರಳ ಉದಾಹರಣೆಗಳಾಗಿವೆ. ಗಂಗರ ಕಾಲದ ಹಲವು ತಾಮ್ರಶಾಸನಗಳು ಕೃತಕ ಶಾಸನಗಳೆಂದು ಶಾಸನತಜ್ಞರಾದ ಜೆ.ಎಫ್.ಫ್ಲೀಟ್ ಅವರೂ ಬಿ.ಎಲ್.ರೈಸ್ ಅವರೂ ಸಾಧಿಸಿತೋರಿಸಿದ್ದಾರೆ.

ಒಂದು ಶಾಸನವು ಕೂಟಶಾಸನವೋ ನೈಜಶಾಸನವೋ ಎಂಬ ಅಂಶವನ್ನು ಪತ್ತೆಮಾಡಲು ವಿದ್ವಾಂಸರು ಕೆಲವು ಮಾರ್ಗಗಳನ್ನು ಕಂಡುಕೊಂಡಿದ್ದಾರೆ. ಅವುಗಳಲ್ಲಿ ಪ್ರಧಾನವಾದುವುವೆಂದರೆ,

ಅವುಗಳನ್ನು ತಯ್ಯಾರಿಸಲು ಬಳಸಿದ ವಸ್ತುಗಳು, ಅಲ್ಲಿಯ ಭಾಷೆಯ ಸ್ವರೂಪ, ಲಿಪಿಯಸ್ವರೂಪ, ಕಾಲನಿರೂಪಣೆ, ಶಕವರ್ಷಗಳ ಬಳಕೆ, ಅಲ್ಲಿ ಉಕ್ತವಾಗಿರುವ ರಾಜಕೀಯ ಹಾಗೂ ವ್ಯಕ್ತಿಗತ ವಿವರಗಳು ಇವನ್ನು ಪರಿಗಣನೆಗೆ ತೆಗೆದುಕೊಂಡು ಅವುಗಳನ್ನು ಪತ್ತೆ ಹಚ್ಚಬಹುದು.

ಭಾಷೆ: ಕೂಟಶಾಸನಗಳನ್ನು ಪತ್ತೆ ಹಚ್ಚುವಲ್ಲಿ ಅವುಗಳಲ್ಲಿ ಬಳಕೆಯಾಗಿರುವ ಭಾಷೆಯು ಅತಿ ಮಹತ್ವದ ಸ್ಥಾನವನ್ನು ವಹಿಸುತ್ತದೆ. ಶಾಸನ ರಚನೆಗೆ ಸಾಮಾನ್ಯವಾಗಿ ಆಯಾ ಕಾಲದಲ್ಲಿ ಪ್ರಚಲಿತವಿರುವ ಸ್ವರೂಪದ ಭಾಷೆಯು ಬಳಕೆಯಾಗುತ್ತದೆ. ಕೂಟಶಾಸನವನ್ನು ರಚಿಸುವವರು ಹಳೆಯ ಕಾಲದ್ದೆಂದು ಸೂಚಿಸುವ ಸಲುವಾಗಿ ಅರಿವಿಲ್ಲದೆ ಯಾವುದೋ ಹಳೆಯ ರೂಪಗಳನ್ನು ಬಳಸಿಬಿಟ್ಟಿರುತ್ತಾರೆ. ಅದು ಆ ಶಾಸನೋಕ್ತ ಕಾಲದ ಭಾಷೆಯೊಂದಿಗೆ ಭಾಷಾ ಶಾಸ್ತ್ರಜ್ಞರು ತಾಳೆ ಮಾಡಿ ನೋಡುತ್ತಾರೆ.ತಾಳೆಯಾಗದಿರುವ ಲಕ್ಷಣಗಳೇ ಹೆಚ್ಚು.ಹೀಗಾಗಿ ಇಂತಹ ಶಾಸನಗಳು ಕೂಟಶಾಸನಗಳೆಂದು ಗುರುತಿಸುವುದು ಸುಲಭವಾಗುತ್ತದೆ.

ಲಿಪಿ: ಒಂದು ಶಾಸನ ನೈಜವೋ ಕೂಟಶಾಸನವೋ ಎಂಬುವುದನ್ನು ಗುರುತಿಸುವಲ್ಲಿ ಸಹಾಯಕ್ಕೆ ಬರುವ ಬಹು ಮುಖ್ಯವಾದ ಇನ್ನೊಂದು ಅಂಶವೆಂದರೆ ಲಿಪಿ. ಲಿಪಿಯು ಕಾಲದಿಂದ ಕಾಲಕ್ಕೆ ವಿಕಾಸ ಹೊಂದುತ್ತಾ ಬರುತ್ತದೆ. ಹೀಗಾಗಿ ಒಂದು ನಿರ್ದಿಷ್ಟ ಕಾಲಘಟ್ಟದ ಲಿಪಿಯಲ್ಲಿ ಸಾಮಾನ್ಯ ವಾಗಿ ಕೆಲವು ವಿಶಿಷ್ಟ ಲಕ್ಷಣಗಳಿರುತ್ತವೆ. ಕೂಟಶಾಸನವನ್ನು ರಚಿಸುವವರಿಗೆ ಯಾವ ಕಾಲದಲ್ಲಿ ಯಾವ ಲಿಪಿಯಿತ್ತು ಎಂಬುದರ ಪರಿವೆಯಿರುವುದಿಲ್ಲ. ಹೀಗಾಗಿ ಅವರು ಸಾಮಾನ್ಯವಾಗಿ ತಮ್ಮ ಕಾಲದ ಲಿಪಿಗಿಂತ ಭಿನ್ನವಾದ ಯಾವುದೋ ಒಂದು ಲಿಪಿಯನ್ನು ಬಳಸಿಬಿಡುತ್ತಾರೆ. ಇಂತಹ ಸಂದರ್ಭದಲ್ಲಿ ಶಾಸನೋಕ್ತ ಕಾಲಕ್ಕೂ ಅಲ್ಲಿ ಬಳಕೆಯಾಗಿರುವ ಲಿಪಿಸ್ವರೂಪಕ್ಕೂ ತಾಳೆಯಾಗುವುದಿಲ್ಲ. ಹಾಗಾದಲ್ಲಿ ಅಂತಹ ಶಾಸನವನ್ನು ಕೂಟಶಾಸನವೋ ನೈಜಶಾಸನವೋ ಲಿಪಿಶಾಸ್ತ್ರಜ್ಞರು ಅವುಗಳನ್ನು ಸುಲಭವಾಗಿ ಗುರುತಿಸುತ್ತಾರೆ.

ಕಾಲ ನಿರೂಪಣೆ: ಒಂದೊಂದು ಸಲ ಕೂಟಶಾಸನಗಳಲ್ಲಿಯೂ ಭಾಷೆ, ಲಿಪಿ, ಹೊಂದಾಣಿಕೆ ಯಾದರೂ ಅವುಗಳಲ್ಲಿ ಉಕ್ತವಾಗಿರುವ ಕಾಲನಿರೂಪಣೆ ಸರಿ ಹೊಂದದೇ ಇದ್ದಾಗ ಅಲ್ಲಿ ಸಂಶಯಕ್ಕೆ ಎಡೆ ಸಿಕ್ಕಾಂತಾಗುತ್ತದೆ. ಶಾಸನೋಕ್ತ ಕಾಲಕ್ಕೆ ಸರಿಹೊಂದುವ ಶಕ ವರ್ಷವನ್ನು ಸರಿಯಾಗಿ ಉಲ್ಲೇಖಿಸಿದ್ದರೂ ಅಂದಿಗೆ ಸರಿಹೊಂದುವ ತಿಥಿ, ವಾರ, ಪಕ್ಷ, ಮಾಸ, ಸಂವತ್ಸರಗಳ ನಿರೂಪಣೆಯಲ್ಲಿ ಅವರು ಎಡವಿರುವ ಸಂಭವವೇ ಹೆಚ್ಚಾಗಿರುತ್ತದೆ. ಇಂತಹ ಸಂದರ್ಭದಲ್ಲಿ ಸ್ವಾಮಿ ಕಣ್ಣುಪಿಳ್ಳೆಯವರ ಪಂಚಾಂಗದ ಸಹಾಯದಿಂದ ಸರಿನೋಡುವುದರ ಮೂಲಕ ಅದರ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ಸಾಧ್ಯವಾಗುತ್ತದೆ. ಆ ಮೂಲಕವೂ ಒಂದು ಶಾಸನವು ಕೂಟಶಾಸನವೇ ಅಲ್ಲವೇ ನೈಜ ಶಾಸನವೋ ಎಂಬುದನ್ನು ಕಂಡುಕೊಳ್ಳಬಹುದುದಾಗಿದೆ.

ಲೋಹ: ಕೂಟಶಾಸನಗಳು ಹೆಚ್ಚಾಗಿ ಲೋಹಗಳ ಮೇಲೆಯೇ, ಕೊರೆದು ತಯ್ಯಾರಿಸಿರುತ್ತಾರೆ. ಕಾರಣ ಸಾಮಾನ್ಯವಾಗಿ ಶಿಲಾ ಶಾಸನಗಳು ಸಾರ್ವಜನಿಕ ಸ್ಥಳಗಳಲ್ಲಿ ಹಾಕಿಸಲಾಗುತ್ತದೆ. ಖೊಟ್ಟಿ ಶಾಸನಗಳು ಬಹಿರಂಗವಾಗಿ ತಯ್ಯಾರಿಸಲು ಬರುವುದ್ದಿಲ್ಲ. ತಯ್ಯಾರಿಸಿದರೂ ಅವುಗಳನ್ನು ಅನಧಿಕೃತವಾಗಿ ಒಮ್ಮಿಂದೊಮ್ಮಲೆ ಸಾರ್ವಜನಿಕವಾಗಿ ಪ್ರದರ್ಶಿಸಲಿಕ್ಕೆ ಬರುವುದ್ದಿಲ್ಲ. ಅದರಲ್ಲಿಯೂ ಹೆಚ್ಚಾಗಿ ತಾಮ್ರದ ಪಟ್ಟಿಕೆಗಳ ಮೇಲೆಯೇ, ರಚಿತವಾಗಿರುತ್ತವೆ. ತಾಮ್ರ ಶಾಸನಗಳ ಅಧ್ಯಯನ ಮಾಡುವಾಗ ಅವನ್ನು ಬಹು ಎಚ್ಚರಿಕೆಯಿಂದ ಪರಿಶೀಲಿಸಬೇಕಾಗುತ್ತದೆ. ಗಂಗರ ಕಾಲದವುವೆನ್ನ ಲಾಗುವ ತಾಮ್ರಶಾಸನಗಳಲ್ಲಿ ಹೆಚ್ಚಿನವು ಕೂಟಶಾಸನಗಳೆಂದು ಜೆ.ಎಫ್.ಫ್ಲೀಟ್ ಮತ್ತು ಬಿ.ಎಲ್.ರೈಸರು ನಿರ್ಧರಿಸಿರುವುದನ್ನು ಇಲ್ಲಿ ನೆನೆಯಬಹುದು.

ಒಟ್ಟಾರೆಯಾಗಿ ಯಾವ ವಸ್ತುಗಳಿಗೆ ಲೌಕಿಕ ಜೀವನದಲ್ಲಿ ಬಹು ಬೇಡಿಕೆ ಇದೆಯೋ ಆ ಎಲ್ಲ ಕ್ಷೇತ್ರಗಳಲ್ಲಿ ಖೊಟ್ಟಿನಕಲಿ, ಕೆಲಸ ನಡೆಯುತ್ತವೆ. ಅದೇ ರೀತಿ ಅಂದಿನ ಕಾಲದಲ್ಲಿ ಇನ್ನೊಬ್ಬರ ಆಸ್ತಿ ದೋಚುವುದಕ್ಕಾಗಿ ಇಲ್ಲವೆ ಇನ್ನೊಬ್ಬರ ಹಕ್ಕು ಕಸಿದುಕೊಳ್ಳುವುದಕ್ಕೆ ಆಗಲಿ ಅಥವಾ ನಾನೊಬ್ಬ ದೊಡ್ಡ ಶಾಸನ ವಿದ್ವಾಂಸ ಎಂಬ ಪ್ರತಿಷ್ಠೆ ಪ್ರದರ್ಶಿಸುವುದಕೋ ಇಂತಹ ಸಂದರ್ಭಗಳಲ್ಲಿ ಕೂಟ ಶಾಸನಗಳು ಹುಟ್ಟಿಕೊಳ್ಳುತ್ತಿದ್ದವು.ಆದುದರಿಂದ ಯಾವುದೇ ಶಾಸನಗಳನ್ನು ಬಹಳ ಎಚ್ಚರಿಕೆಯಿಂದ ಪರಿಶೀಲಿಸಿ,ಅವುಗಳನ್ನು ಸ್ವೀಕರಿಸುವುದು ಇಲ್ಲವೆ ತಿರಸ್ಕರಿಸುವುದು ಅಷ್ಟು ಸುಲಭದ ಕಾರ್ಯವೇನು ಅಲ್ಲವೆಂದೇ ಹೇಳಬಹುದು.

ಶಾಸನಾಧ್ಯಯನದಿಂದಾಗುವ ಪ್ರಯೋಜನಗಳು

ಹಿಂದೆಯೇ ತಿಳಿಸಿದಂತೆ ಶಾಸನಗಳು ಇತಿಹಾಸರಚನೆಗೆ ಒದಗಿಬರುವ ಪ್ರಧಾನ ದಾಖಲೆಗಳು. ಆದ್ದರಿಂದ ಶಾಸನಾಧ್ಯಯನದಿಂದಾಗುವ ಪ್ರಧಾನ ಪ್ರಯೋಜನವೆಂದರೆ ಇತಿಹಾಸದ ಪುನಾರಚನೆಗೆ ಮಹತ್ತ್ವದ ಮಾಹಿತಿಯನ್ನು ಒದಗಿಸುವುದು. ಶಾಸನಗಳನ್ನು ಎರಡು ರೀತಿಯಲ್ಲಿ ಅಧ್ಯಯನಕ್ಕೆ ಒಳಪಡಿಸಬಹುದು. ಒಂದು, ಆ ಶಾಸನವನ್ನು ಹಾಕಿಸಿದವರ ದೃಷ್ಟಿಕೋನದ ಅಧ್ಯಯನ. ಇನ್ನೊಂದು, ಒಬ್ಬ ಅಧ್ಯಯನಕಾರನ ದೃಷ್ಟಿಕೋನದ ಅಧ್ಯಯನ. ಈ ಮೊದಲ ಕ್ರಮದ ಅಧ್ಯಯನದಿಂದ ನಮಗೆ ಅಲ್ಪಸ್ವಲ್ಪ ಪ್ರಯೋಜವಾಗಬಹುದು ಅಷ್ಟೆ ಆದರೆ ಎರಡನೆ ದೃಷ್ಟಿಕೋನದ ಅಧ್ಯಯನದಿಂದ ಮಾತ್ರ ಅಪಾರ ಪ್ರಯೋಜವಾಗುತ್ತದೆ.

ಮೊದಲನೆದಾಗಿ ನೋಡುವುದಾದರೆ ಶಾಸನವನ್ನು ಯಾವುದೋ ಒಂದು ಘಟನೆಯನ್ನು ನಿರೂಪಿಸುದಕ್ಕಾಗಿ ಆ ಶಾಸನಕಾರ ಹಾಕಿಸಿರುತ್ತಾರೆ. ಮೊದಲ ಕ್ರಮದ ಅಧ್ಯಯನದಿಂದ ಬರೀ ಆ ಒಂದು ಘಟನೆಯ ಬಗ್ಗೆ ಮಾತ್ರ ನಮಗೆ ಅರಿವಾಗುತ್ತದೆ. ಆದರೆ ಅದುವೇ ಒಬ್ಬ ಅಧ್ಯಯನಕಾರನ ದೃಷ್ಟಿಯಿಂದ ನೋಡಿದ್ದೇ ಆದಲ್ಲಿ ಆ ಘಟನೆಯ ಜೊತೆಗೆ ಅದರಲ್ಲಿ

ಉಕ್ತವಾಗಿರುವ ಒಂದೊಂದು ಶಬ್ದವೂ ಅತಿ ಮಹತ್ವದ್ದಾಗಿದೆ. ಉದಾಹರಣೆಗೆ ಹಲ್ಮಿಡಿಶಾಸನವು ಸನ್ಮಾನ ಮಾಡಿ ದಾನ ನೀಡಿದ್ದ ಬಗ್ಗೆ ತಿಳಿಸುವ ಒಂದು ದಾಖಲೆ ಮಾತ್ರ.

ಎರಡನೆಯದಾಗಿ ಒಬ್ಬ ಅಧ್ಯಯನಕಾರನ ದೃಷ್ಟಿಯಿಂದ ಗಮನಿಸಿದಾಗ, ಮಾತ್ರ ಅಪಾರ ಮಾಹಿತಿಯ ಒಂದು ಅಮೂಲ್ಯ ಅಕ್ಷಯಪಾತ್ರೆಯಾಗಿ ತೋರಿಬರುತ್ತವೆ. ಸಾಹಿತ್ಯಚರಿತ್ರೆಯ ರಚನೆಗೆ, ಭಾಷಾಚರಿತ್ರೆಯ ರಚನೆಗೆ, ಲಿಪಿ ಸ್ವರೂಪ ಸಾಂಸ್ಕೃತಿಕ ಚರಿತ್ರೆಯ ರಚನೆಗೆ, ರಾಜಕೀಯ ಚರಿತ್ರೆಯ ರಚನೆಗೆ ಹೀಗೆ ಶಾಸನಗಳು ಒದಗಿಸುವ ನೆರವು ಅಪಾರವೆಂಬುದು ತಿಳಿದ ವಿಚಾರ. ಕನ್ನಡದ ಮೊಟ್ಟ ಮೊದಲ ಶಾಸನವೆಂದು ಖ್ಯಾತಿ ಪಡೆದ ಹಲ್ಮಿಡಿ ಶಾಸನ ಮುಂದುವರೆದು ಗುಣಮಧುರನ ಶಾಸನ ಮತ್ತು ಕಪ್ಪೆಅರಭಟ್ಟನ ಬಾದಾಮಿ ಶಾಸನಗಳು ಆಕಾರದಲ್ಲಿ ಬಹಳ ಚಿಕ್ಕವು ಆದ್ದರೂ ಅವುಗಳಿಂದ ಲಭಿಸುವ ಮಾಹಿತಿ ಮಾತ್ರ ಅಪಾರವಾದುದು. ಕನ್ನಡ ಸಾಹಿತ್ಯದ ಗದ್ಯ-ಪದ್ಯಕಾವ್ಯ ಪರಂಪರೆಯ ಚರಿತ್ರೆ, ಛಂದಸ್ಸಿನ ಚರಿತ್ರೆ ಮತ್ತು ನಮ್ಮ ನಾಡಿನ ಸಾಂಸ್ಕೃತಿಕ ಅಧ್ಯಯನಕ್ಕೆ ಅವು ಒದಗಿಸುವ ನೆರವು ಅಮೂಲ್ಯವಾದುದು.

ಶಾಸನಗಳು ಪ್ರಾಸಂಗಿಕವಾಗಿ ಹಾಕಿಸಲಾಗಿದ್ದರೂ ಎಲ್ಲ ಜ್ಞಾನ ಶಾಖೆಗಳನ್ನೂ ಒಳಗೊಂಡಿವೆ. ಹೀಗಾಗಿ ಸಾಹಿತ್ಯ ಚರಿತ್ರೆ, ಕವಿ ಚರಿತ್ರೆ, ಭಾಷಾ ಚರಿತ್ರೆ, ಲಿಪಿಚರಿತ್ರೆ, ಸಾಂಸ್ಕೃತಿಕ ಚರಿತ್ರೆ, ರಾಜಕೀಯ ಚರಿತ್ರೆ ಇತ್ಯಾದಿಗಳೆಲ್ಲದರ ರಚನೆಗೂ ಅಗತ್ಯ ಮಾಹಿತಿಯನ್ನು ಒದಗಿಸುತ್ತವೆಯೆಂಬುದು ನಿಸ್ಸಂದೇಹವಾಗಿ ಹೇಳಬಹುದು.

ಹೀಗಿದ್ದರೂ, ಒಟ್ಟಾರೆಯಾಗಿ ಶಾಸನಾಧ್ಯಯನದಿಂದಾಗುವ ಪಡೆದುಕೊಳ್ಳುವ ಪ್ರಯೋಜನದ ಪ್ರಮಾಣವು ಮಾತ್ರ ಅಧ್ಯಯನಕಾರನ ಶಕ್ತಿಸಾಮರ್ಥ್ಯಗಳನ್ನು ಅವಲಂಬಿಸಿರುತ್ತದೆಯೆಂಬುದನ್ನು ಮಾತ್ರ ಮರೆಯುವಂತಿಲ್ಲ.

ಶಾಸನಾಧ್ಯಯನದ ವಿಧಾನಗಳು

ಈವರೆಗೆ ಸುಮಾರು ಸಾವಿರಕ್ಕೂ ಹೆಚ್ಚು ಕನ್ನಡ ಶಾಸನಗಳು ಲಭ್ಯವಾಗಿವೆ. ಇನ್ನೂ ಅಲ್ಲಲ್ಲಿ ಶಾಸನಗಳು ಲಭಿಸುತ್ತಲೇ ಇವೆ. ಅಧ್ಯಯನದ ಅನುಕೂಲಕ್ಕೆ ತಕ್ಕಂತೆ ಇವನ್ನು ಪ್ರದೇಶದ ಆಧಾರದ ಮೇಲೆ, ರಾಜವಂಶದ ಆಧಾರದ ಮೇಲೆ, ಕಾಲಘಟ್ಟಗಳ ಆಧಾರದ ಮೇಲೆ, ಭಾಷೆಯ ಆಧಾರದ ಮೇಲೆ, ಲಿಪಿಯ ಆಧಾರದ ಮೇಲೆ, ವಿಷಯದ ಆಧಾರದ ಮೇಲೆ- ಹೀಗೆ ವಿವಿಧ ರೀತಿಗಳಲ್ಲಿ ವರ್ಗೀಕರಿಸಿಕೊಳ್ಳಲಾಗುತ್ತದೆ.

ಒಂದು ಪ್ರದೇಶದ ಬಗ್ಗೆ ಅಧ್ಯಯನ ಮಾಡುವಾಗ ಪ್ರಾದೇಶಿಕ ವರ್ಗೀಕರಣವು ಕ್ರಮವು ಬಹು ಉಚಿತವೆನಿಸುತ್ತದೆ. ಆಯಾ ಪ್ರದೇಶಗಳಲ್ಲಿ ಲಭಿಸುವ ಎಲ್ಲ ರೀತಿಯ ಶಾಸನಗಳನ್ನೂ

ಒಂದೆಡೆ ಕಲೆಹಾಕಿ ಅಧ್ಯಯನ ಮಾಡುವುದು ಇಲ್ಲಿಯ ಕ್ರಮ. ಜಿ.ಎಸ್.ಉಪಾಧ್ಯ ಅವರ 'ಮಹಾರಾಷ್ಟ್ರದ ಕನ್ನಡ ಶಾಸನಗಳು ಒಂದು ಸಾಂಸ್ಕೃತಿಕ ಅಧ್ಯಯನ', ಹೆಚ್.ಹನುಮಂತರಾಯ ಅವರ 'ಬಳ್ಳಾರಿ ಜಿಲ್ಲೆಯ ಕನ್ನಡ ಶಾಸನಗಳು ಒಂದು ಸಾಂಸ್ಕೃತಿಕ ಅಧ್ಯಯನ' ಮುಂತಾದವು ಇದಕ್ಕೆ ಉದಾಹರಣೆಗಳಾಗುತ್ತವೆ.

ಒಂದು ರಾಜವಂಶದ ಇತಿಹಾಸವನ್ನು ಅಧ್ಯಯನ ಮಾಡಬೇಕಾದಾಗ ರಾಜವಂಶವನ್ನು ಆಧರಿಸಿದ ವರ್ಗೀಕರಣವು ಉಚಿತವಾಗುತ್ತದೆ. ನಿಖರವಾಗಿ ಆ ರಾಜಮನೆತನಕ್ಕೆ ಸಂಬಂಧಪಟ್ಟಂತೆ ಲಭಿಸುವ ಎಲ್ಲ ಶಾಸನಗಳನ್ನೂ ಒಂದೆಡೆ ಕಲೆಹಾಕಿ ಅಧ್ಯಯನ ಮಾಡುವುದು ಇಲ್ಲಿಯ ಕ್ರಮ. ಜೆ.ಎಂ.ನಾಗಯ್ಯನವರ 'ಆರನೆ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ', ತಮಿಳು ಸೆಲ್ವಿಯರ 'ಗಂಗರ ಶಾಸನಗಳು ಒಂದು ಸಾಂಸ್ಕೃತಿಕ ಅಧ್ಯಯನ' ಮುಂತಾದವು ಇದಕ್ಕೆ ನಿದರ್ಶನಗಳಾಗಿವೆ.

ನಿರ್ದಿಷ್ಟ ಕಾಲಘಟ್ಟಗಳ ಇತಿಹಾಸವನ್ನು ಅಧ್ಯಯನ ಮಾಡಬೇಕಾಗಿರುವಾಗ ಕಾಲಾಧಾರಿತ ವರ್ಗೀಕರಣವು ಉಚಿತವಾಗುತ್ತದೆ. ನಿರ್ದಿಷ್ಟ ಕಾಲಘಟ್ಟಕ್ಕೆ ಸಂಬಂಧಿಸಿದಂತೆ ಲಭಿಸುವ ಎಲ್ಲ ಶಾಸನಗಳನ್ನೂ ಒಂದೆಡೆ ಕಲೆಹಾಕಿ ಅಧ್ಯಯನ ಮಾಡುವುದು ಇಲ್ಲಿಯ ಕ್ರಮ. ಎಂ.ಚಿದಾನಂದ ಮೂರ್ತಿಯವರ 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'ದಲ್ಲಿ ಕ್ರಿ.ಶ.೪೫೦ರಿಂದ ೧೧೫೦ರ ಅವಧಿಯಲ್ಲಿನ ಕನ್ನಡ ಶಾಸನಗಳನ್ನು ಆಧಾರವಾಗಿಟ್ಟುಕೊಂಡು ಅಧ್ಯಯನ ಕೈಗೊಂಡಿದ್ದಾರೆ. ಹೀಗಾಗಿ ಇದಕ್ಕೆ ಉತ್ತಮ ಉದಾಹರಣೆಯಾಗಿದೆ.

ಭಾಷಿಕಾಧ್ಯಯನದ ಸಂದರ್ಭದಲ್ಲಿ ಭಾಷಿಕ ವರ್ಗೀಕರಣವು ಉಚಿತ ವಾದುದು. ನಿರ್ದಿಷ್ಟ ಭಾಷೆಗೆ ಸಂಬಂಧಿಸಿದಂತೆ ಲಭಿಸುವ ಶಾಸನಗಳನ್ನೂ ಒಂದೆಡೆ ಕಲೆಹಾಕಿ ಅಧ್ಯಯನ ಮಾಡುವುದು ಇಲ್ಲಿಯ ಕ್ರಮವಾಗಿದೆ. ಎ.ಎನ್.ನರಸಿಂಹಯ್ಯನವರ ಪ್ರಾಚೀನ ಕನ್ನಡ ಶಾಸನಗಳ ವ್ಯಾಕರಣಾತ್ಮಕ ಅಧ್ಯಯನ, ಎಂ.ಬಿ.ನೇಗಿನಹಾಳ ಅವರ ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ ಮುಂತಾದವು ಇದಕ್ಕೆ ಉತ್ತಮ ಉದಾಹರಣೆಗಳಾಗಿವೆ.

ಒಂದು ಲಿಪಿಯ ಉಗಮ, ವಿಕಾಸಗಳನ್ನು ಕುರಿತು ಅಧ್ಯಯನ ಮಾಡುವಲ್ಲಿ ಲಿಪಿಆಧಾರಿತ ವರ್ಗೀಕರಣವು ಉಚಿತವಾದುದು. ಲಿಪಿಶಾಸ್ತ್ರದ ಅಧ್ಯಯನಕ್ಕೆ ಶಾಸನಗಳೇ ಮೂಲ ಆಕರಗಳು. ಆಯಾ ಲಿಪಿಯಲ್ಲಿ ರಚಿತವಾಗಿರುವ ಶಾಸನಗಳನ್ನೆಲ್ಲ ಒಂದೆಡೆ ಕಲೆಹಾಕಿ ಅಧ್ಯಯನ ಮಾಡುವುದು ಇಲ್ಲಿಯ ಕ್ರಮ ಇದಾಗಿದೆ. ಈ ದಿಶೆಯಲ್ಲಿ ಎ.ವಿ.ನರಸಿಂಹಮೂರ್ತಿಯವರ 'ಕನ್ನಡ ಲಿಪಿಯ ಉಗಮ ಮತ್ತು ವಿಕಾಸ', ಎಂ.ಜಿ.ಮಂಜುನಾಥ ಅವರ 'ಕನ್ನಡ ಲಿಪಿಶಾಸ್ತ್ರ', ದೇವರಕೊಂಡಾರೆಡ್ಡಿ

ಯವರ ಲಿಪಿಯ ಹುಟ್ಟು ಮತ್ತು ಬೆಳವಣಿಗೆ ಕುರಿತ ಅಧ್ಯಯನ ಇಂತಹ ಅಧ್ಯಯನಗಳಿಗೆ ಆಯಾ ಮಿತಿಯಲ್ಲಿ ರಚಿತವಾದ ಶಾಸನಗಳು ಪ್ರಮುಖ ಆಕರಗಳಾಗುತ್ತವೆ.

ನಿರ್ದಿಷ್ಟ ವಸ್ತುಗಳಿಗೆ ಸಂಬಂಧಿಸಿದಂತೆ ಅಧ್ಯಯನಮಾಡಬೇಕಾದಾಗ ಆಯಾ ವಸ್ತುಗಳ ನ್ನಾಧರಿಸಿದ ವರ್ಗೀಕರಣವು ಉಚಿತವಾದುದು. ಆಯಾ ವಿಷಯ ವಸ್ತುಗಳಿಗೆ ಸಂಬಂಧಿಸಿದ ಶಾಸನಗಳನ್ನು ಮಾತ್ರವೇ ಒಂದೆಡೆ ಕಲೆಹಾಕಿ ಅಧ್ಯಯನ ಮಾಡುವುದು ಇಲ್ಲಿಯ ಕ್ರಮ. ಆರ್.ಶೇಷಶಾಸ್ತ್ರಿಯವರ ಕರ್ನಾಟಕದ ವೀರಗಲ್ಲುಗಳ ಅಧ್ಯಯನ ಚೆನ್ನಕ್ಕ ಎಲಿಗಾರ ಅವರ ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ ಮುಂತಾದವು ಇದಕ್ಕೆ ಉತ್ತಮ ಉದಾಹರಣೆಗಳಾಗುತ್ತವೆ.

ಹೀಗೆ ಶಾಸನಗಳನ್ನು ವಿವಿಧ ರೀತಿಗಳಲ್ಲಿ ವಿಭಾಗೀಕರಿಸಿಕೊಂಡು ಪೂರ್ಣರೂಪದಲ್ಲಿ ಅಧ್ಯಯನಕ್ಕೆ ಒಳಪಡಿಸಿದಲ್ಲಿ ಅದರಿಂದಾಗುವ ಪ್ರಯೋಜನಗಳು ಅಪಾರ ಎಂದು ಹೇಳಬಹುದು. ಇಂಥ ಶಾಸನಗಳನ್ನು ಆಕರಗಳನ್ನಾಗಿ ಬಳಸಿಕೊಂಡು ಅಂದಿನ ರಾಜಕೀಯ, ಭೌಗೋಳಿಕ, ಭಾಷಿಕ, ಲಿಪಿ ಆಯಾ ಕಾಲದಲ್ಲಿ ಹುಟ್ಟಿಕೊಂಡ ಸಾಹಿತ್ಯಿಕ ರೂಪಗಳು ಮತ್ತು ಅಂದಿನ ಸಾಂಸ್ಕೃತಿಕ ಅಧ್ಯಯನ ಮಾಡಿದರೆ ಅವು ಇತಿಹಾಸದ ಪುನರ್ ರಚನೆಯಲ್ಲಿ ಅತಿ ಮಹತ್ತರವಾದ ಸ್ಥಾನ ವಹಿಸುತ್ತವೆ ಎಂದು ಹೇಳಬಹುದು.

ಅಧ್ಯಾಯ ಮೂರು

ರಾಜಕೀಯ ಅಧ್ಯಯನ

ಅಧ್ಯಾಯ ಮೂರು

ರಾಜಕೀಯ ಅಧ್ಯಯನ

ತೆಲಂಗಾಣ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಗಳು ಭೌಗೋಳಿಕವಾಗಿ ಒಂದಕ್ಕೊಂದು ಹತ್ತಿಕೊಂಡಿವೆ ಸ್ವತಂತ್ರ್ಯ ಪೂರ್ವದಲ್ಲಿ ಈ ಪ್ರದೇಶಗಳು ಪ್ರಾಚೀನ ಕರ್ನಾಟಕದ ರಾಜಮನೆತನಗಳಾದ ಬಾದಾಮಿ ಚಾಲುಕ್ಯರಿಂದ ಮೊದಲುಗೊಂಡು ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಕಲಚೂರಿಗಳು, ಕಾಕತೀಯರು, ವಿಜಯನಗರದ ಅರಸರು, ಬಹಮನಿ ಸುಲ್ತಾನರು ಮತ್ತು ನಿಜಾಂಶಾಹಿ ಮನೆತನಗಳು ಈ ಪ್ರದೇಶಗಳನ್ನು ಆಳಿರುವುದು ಸ್ಪಷ್ಟವಿದೆ. ಹೀಗೆ ರಾಜಕೀಯವಾಗಿ ಬಹು ಕಾಲ ಒಂದೇ ರಾಜಮನೆತನಗಳು ಈ ಮೇಲ್ಕಾಣಿಸಿದ ವಿಶಾಲವಾದ ಪ್ರದೇಶಗಳಲ್ಲಿ ತಮ್ಮ ಆಳ್ವಿಕೆ ನಡೆಸಿದುದು ಇದೇ ಪ್ರದೇಶಗಳಲ್ಲಿ ಲಭಿಸಿದ ಕನ್ನಡ ಶಾಸನಗಳಿಂದ ಖಚಿತವಾಗಿ ತಿಳಿದು ಬರುತ್ತದೆ. ಹೀಗಾಗಿ ಈ ಎರಡು ಪ್ರದೇಶಗಳು ಏಕ ಚಕ್ರಾಧಿಪತ್ಯಕ್ಕೆ ಸೇರಿದ್ದವು. ಇದರ ಪರಿಣಾಮವಾಗಿ ಇಲ್ಲಿಯ ಭಾಷೆ,ರೂಢಿ-ಸಂಪ್ರದಾಯಗಳು,ಮತ್ತು ಸಂಸ್ಕೃತಿ ಒಂದೇ ಆಗಿವೆ. ಅದಕ್ಕಾಗಿಯೇ ತೆಲಂಗಾಣ ಪ್ರದೇಶದಲ್ಲಿ ಕನ್ನಡದ ಹೆಚ್ಚು ಶಾಸನಗಳು ಲಭಿಸಿವೆ.ಈ ಪ್ರದೇಶಗಳಲ್ಲಿ ಏಕಕಾಲಕ್ಕೆ ಹಾಕಿಸಿದ ಶಾಸನಗಳು ಕಂಡು ಬರುತ್ತವೆ.ಹೀಗಾಗಿ ಈ ಪ್ರದೇಶಗಳ ರಾಜಕೀಯ ಅಧ್ಯಯನ, ಆಡಳಿತ ಅಧ್ಯಯನ, ಸಾಮಾಜಿಕ ಅಧ್ಯಯನ, ಧಾರ್ಮಿಕ ಅಧ್ಯಯನ, ಆರ್ಥಿಕ ಅಧ್ಯಯನ, ಸಾಹಿತ್ಯಿಕ ಅಧ್ಯಯನ, ಶೈಕ್ಷಣಿಕ ಅಧ್ಯಯನ, ಲಲಿತ ಕಲೆಗಳು ಹೀಗೆ ಅಧ್ಯಯನ ಮಾಡುವುದೆಂದರೆ ಒಂದು ಪ್ರದೇಶದ ಸಾಂಸ್ಕೃತಿಕ ಅಧ್ಯಯನವೇ ಆಗಿದೆ.

ಪ್ರಾಚೀನ ಮತ್ತು ಮಧ್ಯಕಾಲೀನ ತೆಲಂಗಾಣ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ ರಾಜ್ಯಭಾರ ಮಾಡಿದ ಅನೇಕ ಕನ್ನಡ ರಾಜಮನೆತನಗಳು ತಮ್ಮ ಆಳ್ವಿಕೆ ಸಂದರ್ಭದಲ್ಲಿ ಆಯಾ ಸನ್ನಿವೇಶಕ್ಕೆ ಸಂಬಂಧಿಸಿದ ಅನೇಕ ಶಾಸನಗಳು ಹಾಕಿಸಿದ್ದಾರೆ. ಭೌಗೋಳಿಕವಾಗಿ ಈ ವಿಶಾಲ ಪ್ರದೇಶವನ್ನು ಏಕಚಕ್ರಾಧಿಪತ್ಯದಡಿಯಲ್ಲಿ ರಾಜ್ಯಭಾರ ಮಾಡಿದ ಅಂದಿನ ಆಳರಸರು ಈ ಎರಡು ಪ್ರದೇಶಗಳನ್ನು ಅಂದು ಒಂದು ಮಾಡಿಯೇ ಆಳ್ವಿಕೆ ನಡೆಸಿದ್ದಾರೆ. ಅಂತಹ

ರಾಜಮನೆತನಗಳಾದ ಮೌರ್ಯರು, ಶಾತವಾಹನರು, ಬಾದಾಮಿ ಚಾಲುಕ್ಯರು, ವೇಮುಲದ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಲಚೂರಿಗಳು, ದೇವಗಿರಿಯ ಯಾದವರು, ಸವಣರು, ಕಾಕತೀಯರು, ವಿಜಯನಗರದ ಅರಸರು, ಮರಾಠರು, ಬಹಮನಿ ಸುಲ್ತಾನರು, ಮೊಘಲರು, ನಿಜಾಮರು ಮತ್ತು ಇತರ ಸಾಮಂತರು, ಮಾಂಡಳೀಕರು, ನೊಳಂಬರು, ಆನೆಗೊಂದಿ ಅರಸರು ಇತ್ಯಾದಿ ರಾಜಮನೆತನದವರು ಈ ಪ್ರದೇಶಗಳಲ್ಲಿ ರಾಜ್ಯಭಾರ ಮಾಡಿದ್ದಾರೆ ಎನ್ನುವುದಕ್ಕೆ ಅವರೇ ಹಾಕಿಸಿದ ಪಾಲಿ, ಕನ್ನಡ, ಸಂಸ್ಕೃತ, ಉರ್ದು, ಪರ್ಶಿಯನ್, ಅರೆಬಿಕ್, ತೆಲುಗು ಭಾಷೆಗಳಲ್ಲಿ ಶಾಸನಗಳು ಸಾಕ್ಷಿಯಾಗುತ್ತವೆ. ಇಂದಿನ ತೆಲಂಗಾಣ ರಾಜ್ಯದ ಇತಿಹಾಸವೆಂದರೆ ಪ್ರಾಚೀನ ಮತ್ತು ಮಧ್ಯಯುಗ ಕಾಲದ ಕರ್ನಾಟಕದ ಇತಿಹಾಸವೇ ಆಗಿದೆ. ಅಂದು ಈ ಎರಡು ಪ್ರದೇಶಗಳು ಆಡಳಿತದ ದೃಷ್ಟಿಯಿಂದ ಏಕಸಾರ್ವಭೌಮ ಅಧಿಕಾರಕ್ಕೆ ಒಳಪಟ್ಟಿದ್ದವು. ಕರ್ನಾಟಕ ರಾಜಮನೆತನದ ಅರಸರ ಸಾಮ್ರಾಜ್ಯ ಬಹು ವಿಶಾಲವಾಗಿತ್ತು. ಇಂದಿನ ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು, ಮಹಾರಾಷ್ಟ್ರ ಮತ್ತು ಉತ್ತರ ಭಾಗದಲ್ಲಿಯೂ ಕನ್ನಡ ಶಾಸನಗಳು ಸಿಕ್ಕಿವೆ. ಆದುದರಿಂದ ಈ ವಿಶಾಲ ಪ್ರಾಚೀನ ಕರ್ನಾಟಕದ ಹರವು ಬಹು ವಿಸ್ತಾರ ವಾಗಿತ್ತೆಂದು ಲಭ್ಯ ಶಾಸನಗಳಿಂದ ನಿರೂಪಿಸಬಹುದಾಗಿದೆ.

ತೆಲಂಗಾಣ ಮತ್ತು ಹೈದರಾಬಾದ್ ಕರ್ನಾಟಕ ಪ್ರದೇಶಗಳ ರಾಜಕೀಯ ಇತಿಹಾಸವೆಂದರೆ ಪ್ರಾಚೀನ ಕರ್ನಾಟಕದ ರಾಜಮನೆತನೆಗಳ ಇತಿಹಾಸವೇ ಆಗಿದೆ. ಹೀಗಾಗಿ ಪ್ರಾಚೀನ ಮತ್ತು ಮಧ್ಯಯುಗದ ಕರ್ನಾಟಕ ಪ್ರದೇಶಗಳಾದ ತೆಲಂಗಾಣ ಮತ್ತು ಹೈದ್ರಾಬಾದ್ ಪ್ರದೇಶಗಳಲ್ಲಿ ಆಳ್ವಿಕೆ ನಡೆಸಿದ ರಾಜಮನೆತನಗಳ ಬಗ್ಗೆ ಹೀಗೆ ನೋಡಬಹುದಾಗಿದೆ.

ಮೌರ್ಯರು

ಕ್ರಿಪೂರ್ವ ೩೨೨ ಸಂದರ್ಭದಲ್ಲಿ ಹೈದ್ರಾಬಾದ ಕರ್ನಾಟಕ ಪ್ರದೇಶವು ಮೌರ್ಯರ ಆಡಳಿತಕ್ಕೆ ಒಳಪಟ್ಟಿತ್ತೆಂದು ಈ ಪ್ರದೇಶದಲ್ಲಿ ಲಭಿಸಿದ ಪ್ರಸಿದ್ಧ ಮೌರ್ಯ ದೊರೆ ಸಾಮ್ರಾಟ್ ಅಶೋಕನ ಶಾಸನಗಳಿಂದ ತಿಳಿದುಬರುತ್ತದೆ. ಬೃಹದ್ಭಾರತದ ರಾಜಕೀಯ ಪ್ರಭಾವಕ್ಕೆ ಈ ಪ್ರದೇಶ ಸಿಕ್ಕುವಂತೆ ಮಾಡಿದ ಕೀರ್ತಿ ಬಹುಶಃ ಮೌರ್ಯ ಮನೆತನಕ್ಕೆ ಸಲ್ಲುತ್ತದೆ. ಮೈಸೂರು ಸಂಸ್ಥಾನದ ಉತ್ತರಭಾಗವು ಈ ಮೌರ್ಯರ ಚಕ್ರಾಧಿಪತ್ಯದಲ್ಲಿ ಸೇರಿರಬಹುದೆಂದು ಊಹೆ ಮಾಡಬಹುದು. ಅಶೋಕನ ಶಾಸನವು ಹೈದ್ರಾಬಾದ್ ಕರ್ನಾಟಕದ ಪ್ರದೇಶಗಳಾದ ರಾಯಚೂರಿನ ಮಸ್ಕಿ, ಕೊಪ್ಪಳದ ಗವಿಮಠ ಮತ್ತು ಪಾಲ್ಕಿಗುಂಡು, ಬ್ರಹ್ಮಗಿರಿ ಮತ್ತು ಸನ್ನತಿಗಳಲ್ಲಿ ಲಭಿಸಿವೆ. ಈ ಶಾಸನಗಳನ್ನು ವಿದ್ವಾಂಸರು 'ಧರ್ಮಲಿಪಿ'ಗಳೆಂದು ಕರೆದಿದ್ದಾರೆ. ಆದರೆ ಈ ಶಾಸನಗಳು ಹೈದ್ರಾಬಾದ್ ಕರ್ನಾಟಕದ ರಾಜಕೀಯ ಸ್ಥಿತಿಗತಿಗಳ ಬಗ್ಗೆ ಅಷ್ಟೊಂದು ಮಾಹಿತಿ ನೀಡುವುದಿಲ್ಲ.

ಅಶೋಕನು ಬೌದ್ಧ ಧರ್ಮದ ತತ್ವಗಳನ್ನು ಮೈಗೂಡಿಸಿಕೊಂಡ ನಂತರ ದೇಶದ ಎಲ್ಲ ಕಡೆಗೆ ಬೌದ್ಧ ಧರ್ಮ ಪ್ರಸಾರಕ್ಕೆ ಮುಂದಾಗಿ ತನ್ನ ಮಕ್ಕಳನ್ನು ಸಹ ಧರ್ಮ ಪ್ರಸಾರಕ್ಕಾಗಿ ಬೇರೆ ಬೇರೆ ದೇಶಗಳಿಗೆ ಕಳುಹಿಸಿದನು. ಅದರಿಂದಾಗಿಯೆ ಈ ಪ್ರದೇಶದಲ್ಲಿಯೂ ಅಶೋಕನ ಧರ್ಮಲಿಪಿ ಶಾಸನಗಳು ಕಾಣಬಹುದು. ಈ ಶಾಸನಗಳ ಭಾಷೆ ಪ್ರಾಕೃತ ಲಿಪಿ ಬ್ರಾಹ್ಮಿ ಇರುತ್ತದೆ.

"ಮೌರ್ಯರು ಈ ಪ್ರಾಂತ್ಯದಲ್ಲಿ ಸಾಮ್ರಾಜ್ಯವನ್ನು ವಿಸ್ತರಿಸುವುದಕ್ಕೆ ಹಲವು ಕಾರಣಗಳಿವೆ. ವಿಸ್ತರಣ ದಾಹ ಎಲ್ಲ ಸಾಮ್ರಾಟಶಾಹಿಗಳಿಗೆ ಇರುವುದು ಮೂಲಗುಣ. ಮೌರ್ಯರು ತಮ್ಮ ಬೌದ್ಧ ಧರ್ಮವನ್ನು ಪ್ರಚಾರ ಮಾಡಲು ಮತ್ತು ಅದನ್ನು ನೆಲೆಗೊಳಿಸಲು ಮಾತ್ರ ಬರಲಿಲ್ಲ. ಈ ಪ್ರಾಂತ್ಯದ ಸಂಪತ್ತನ್ನು ಬಳಸಿಕೊಳ್ಳಲು ಮುಂದಾಗಿದ್ದರು. ಈ ಪ್ರಾಂತ್ಯದ ಮೇಲೆ ಮೊದಲು ವಸಾಹತುಶಾಹಿ ಆಡಳಿತ ನಡೆಸಿದ್ದೆ ಮೌರ್ಯ ಸಾಮ್ರಾಜ್ಯ"(ಡಾ. ಅಮರೇಶ ನುಗಡೋಣೀ, ೨೦೦೩, ಹೈದ್ರಾಬಾದ್ ಕರ್ನಾಟಕ ಹಾಡು-ಪಾಡು, ಪು.೨). ಹೀಗೆ ಮೌರ್ಯರು ಉತ್ತರದಿಂದ ದಕ್ಷಿಣಕ್ಕೆ, ಸಾಮ್ರಾಜ್ಯ ವಿಸ್ತರಣೆ ಮಾಡಿ ಇಲ್ಲಿಯ ಬೌದ್ಧಧರ್ಮ ಪ್ರಸಾರ ಹಾಗೂ ತಮ್ಮ ಸಾರ್ವಭೌಮತ್ವವನ್ನು ಸ್ಥಾಪಿಸಿದ್ದರೆಂದು ತಿಳಿದುಬರುತ್ತದೆ.

ಬಾದಾಮಿ ಚಾಲುಕ್ಯರು

ಬಾದಾಮಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದ ಬಾದಾಮಿ ಚಾಲುಕ್ಯರ ವಂಶದಲ್ಲಿ ಇಮ್ಮಡಿ ಪುಲಕೇಶಿಯು ಅತ್ಯಂತ ಶ್ರೇಷ್ಠ ದೊರೆಯಾಗಿದ್ದನು. ಆದರೆ ಈ ಹೈದರಾಬಾದ ಕರ್ನಾಟಕ ಮತ್ತು ತೆಲಂಗಾಣ ಪ್ರದೇಶಗಳಲ್ಲಿ ಈತನ ಆಳ್ವಿಕೆಗೆ ಸಂಬಂಧಪಟ್ಟಂತೆ ಯಾವುದೇ ಶಾಸನಗಳೂ ಲಭಿಸಿಲ್ಲ. ಆದರೆ ಅದೇ ವಂಶದ ವಿಜಯಾದಿತ್ಯನಿಗೆ ಸಂಬಂಧಿಸಿದ ಕೆಲವು ಶಾಸನಗಳು ಕೊಪ್ಪಳ ಹಾಗೂ ತೆಲಂಗಾಣದ ಮೆಹಬೂಬ್‌ನಗರ ಜಿಲ್ಲೆಗಳಲ್ಲಿ ಲಭಿಸಿವೆ. ಇದರಿಂದ ಈ ಪ್ರದೇಶಗಳು ವಿಜಯಾದಿತ್ಯನ ಆಳ್ವಿಕೆಗೆ ಒಳಪಟ್ಟಿದ್ದವೆಂದು ಖಚಿತವಾಗಿ ಹೇಳಬಹುದಾಗಿದೆ. ಕೊಪ್ಪಳದ ಹಲಗೇರಿ ಶಾಸನದಲ್ಲಿ(ದೇವರಕೊಂಡಾರೆಡ್ಡಿ, ಭಟ್ಟಸೂರಿ ಕೆ.ಜಿ., ಕಲವೀರ ಮನ್ವಾಚಾರ ಮತ್ತು ಪರಮಶಿವ ಮೂರ್ತಿ ಡಿ.ವಿ.(ಸಂ), ೧೯೯೯, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೨, ಪು.೨೯-೩೦). ಈ ವಿಜಯಾದಿತ್ಯನ ಉಲ್ಲೇಖವಿದೆ. ಇದರ ಕಾಲ ಕ್ರಿ.ಶ. ಸು. ೮ನೆಯ ಶತಮಾನ. ಇವನ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿದ ಕೊಪ್ಪಳದ ಶಾಸನದಲ್ಲಿ ಮೂರು ಜಾತಿ ಗಳನ್ನು ಹಾಗೂ ಗುತ್ತಿಯ ಒಡೆಯ ಅಂಶರಾಜನನ್ನು ಇದರಲ್ಲಿ ಹೆಸರಿಸಲಾಗಿದೆ. ಈತನ ಆಳ್ವಿಕೆ ಸಂಬಂಧಪಟ್ಟ ಇನ್ನೊಂದು ಶಾಸನವೆಂದರೆ ತೆಲಂಗಾಣ ಪ್ರದೇಶದ ಮಹಬೂಬನಗರ್ ಜಿಲ್ಲೆಯ ಅಲಂಪೂರದ್ದು(ಗಣೇಶ ಕೆ.ಆರ್. ಮತ್ತು ಶೇಷಶಾಸ್ತ್ರಿ ಆರ್.(ಸಂ), ೨೦೦೧, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫, ಭಾಗ ೨, ಪು.೧೫೨.) ಈ ಶಾಸನದಲ್ಲಿ ಕಾಲದ ಉಲ್ಲೇಖವಿರುವುದರಿಂದ

ಈತನ ಆಳ್ವಿಕೆ ಕಾಲ ಕ್ರಿ.ಶ.೭೧೩-೭೧೪ರ ಸುಮಾರು ಎಂದು ನಿರ್ಧರಿಸಬಹುದಾಗಿದೆ. ಇದರಿಂದಾಗಿ ಬಾದಾಮಿ ಚಾಲುಕ್ಯರು ಕರ್ನಾಟಕದ ಕೊಪ್ಪಳ ಮತ್ತು ಇಂದಿನ ತೆಲಂಗಾಣ ರಾಜ್ಯದ ಮೆಹಬೂಬನಗರದ ಅಲಂಪೂರದವರೆಗೂ ತಮ್ಮ ಸಾಮ್ರಾಜ್ಯ ಹೊಂದಿದ್ದರೆಂದು ತಿಳಿದುಬರುತ್ತದೆ.

ರಾಷ್ಟ್ರಕೂಟರು

ಬಾದಾಮಿ ಚಾಲುಕ್ಯರ ನಂತರ ಈ ಭಾಗದಲ್ಲಿ ರಾಜ್ಯಭಾರ ಮಾಡಿದವರು ರಾಷ್ಟ್ರಕೂಟರು. ಇವರು ಸುಮಾರು ಕ್ರಿ.ಶ.೭೦೦ರಲ್ಲಿ ರಾಜಕೀಯಕ್ಕೆ ಪ್ರವೇಶಿಸಿದರು. ಇವರು ಮಾನ್ಯಖೇಟ ರಾಜ್ಯಧಾನಿಯನ್ನಾಗಿಸಿಕೊಂಡಿದ್ದರು. ಈ ವಂಶದಲ್ಲಿ ಪ್ರಖ್ಯಾತರಾದ ದೊರೆಗಳೆಂದರೆ ದಂತಿದುರ್ಗ, ಧ್ರುವ, ಮೂರನೆಯ ಗೋವಿಂದ, ಅಮೋಘವರ್ಷ ನೃಪತುಂಗ, ಇಮ್ಮಡಿ ಕೃಷ್ಣ, ಇಮ್ಮಡಿ ಇಂದ್ರ, ಮುಮ್ಮಡಿ ಕೃಷ್ಣ ಪ್ರಮುಖರಾಗಿದ್ದರು. ಈ ರಾಜಮನೆತನಕ್ಕೆ ಸಂಬಂಧಿಸಿದ ಶಾಸನಗಳು ಕಲಬುರ್ಗಿ, ಕೊಪ್ಪಳ, ರಾಯಚೂರು ಜಿಲ್ಲೆಗಳಲ್ಲಿ ಹಾಗೂ ತೆಲಂಗಾಣ ಪ್ರದೇಶಗಳಾದ ಮಹಬೂಬ್‌ನಗರ, ವರಂಗಲ್, ನಲ್ಗೊಂಡ ಜಿಲ್ಲೆಗಳಲ್ಲಿ ಲಭಿಸಿವೆ.

ಧ್ರುವ [ಧಾರಾವರ್ಷ]: ಈತ ತನ್ನ ಸಹೋದರನನ್ನೂ ಮತ್ತು ಅವನ ಮಿತ್ರ ಗಂಗರಾಜ ಶಿವಮಾರನನ್ನೂ ಸೋಲಿಸಿ, ಅಧಿಕಾರಕ್ಕೆ ಬಂದವನು. ಅಲಂಪೂರ ಶಾಸನವು(ಅದೇ, ಪು. ೧೪೭). ಇವನ ಆಳ್ವಿಕೆಯ ಮೊದಲ ವರ್ಷಕ್ಕೆ ಸಂಬಂಧಿಸಿದೆ. ಕ್ರಿ.ಶ.ಸು.೭೮೦ಕ್ಕೆ ಸರಿಹೊಂದುವ ಈತನ ತನ್ನ ಆಳ್ವಿಕೆಯ ಕಾಲದಲ್ಲಿ ಅಲ್ಲಿ ಶ್ರೀವಾಗಿಲನ್ನು ಮಾಡಿಸಿದ ವಿಚಾರವನ್ನು ಹೇಳುತ್ತದೆ. ಈತನಿಗೆ 'ಕಲಿವಲ್ಲಭ'ನೆಂಬ ಬಿರುದು ಇತ್ತು ಎಂಬುದಾಗಿ ಕುರುವಗಟ್ಟದ ಶಾಸನದಿಂದ ತಿಳಿದುಬರುತ್ತದೆ(ಅದೇ, ಪು.೧೮೫).

ಮೂರನೆಯ ಗೋವಿಂದ [ಪ್ರಭೂತವರ್ಷ]: ಈತನ ಆಳ್ವಿಕೆಯ ಕಾಲದಲ್ಲಿ ಹಾಕಿಸಿದ ಶಾಸನವೊಂದು ಮಹಬೂಬ್‌ನಗರ ಜಿಲ್ಲೆಯ ಅಲಂಪೂರದ ವಸ್ತುಸಂಗ್ರಹಾಲಯದಲ್ಲಿದೆ. ಈ ಶಾಸನದಲ್ಲಿ ಈತನಿಗೆ ರಾಜ್ಯಾಭಿವೃದ್ಧಿಯಾಗಲೆಂದು ಬೇತಿಯಬ್ಬೆಗಳ ಮಗ ಶ್ರೀಮಾರ ಎಂಬುವನು ಉತ್ತರೇಶ್ವರದ ಆದಿತ್ಯಗೃಹವನ್ನು ಮಾಡಿಸಿದನೆಂದು ಹೇಳಲಾಗಿದೆ(ಅದೇ, ಪು.೧೧೪).

ಮೊದಲನೆಯ ಅಮೋಘವರ್ಷ [ನೃಪತುಂಗ]: ಮೂರನೆಯ ಗೋವಿಂದನ ನಂತರ ಅವನ ಉತ್ತರಾಧಿಕಾರಿಯಾಗಿ ಮೊದಲನೆಯ ಅಮೋಘವರ್ಷನು ಅಧಿಕಾರಕ್ಕೆ ಬಂದನು. ರಾಷ್ಟ್ರಕೂಟರ ಅತ್ಯಂತ ಶ್ರೇಷ್ಠ ದೊರೆಯಾದ ಈತನಿಗೆ ಸಂಬಂಧಿಸಿದ ಶಾಸನವೊಂದು ತೆಲಂಗಾಣದ ವರಂಗಲ್ ಜಿಲ್ಲೆಯ ಕಾಜಿಪೇಟ್‌ನಲ್ಲಿ ಲಭಿಸಿದೆ. ಇದು ಇವನ ಮಹಾಸಾಮಂತಾಧಿಪತಿ ಸತ್ಯಾಶ್ರಯ ಭೀಮರಸನನ್ನು ಉಲ್ಲೇಖಿಸುತ್ತದೆ(ಅದೇ, ಪು.೯೧).

ಎರಡನೆಯ ಕೃಷ್ಣ: ಈತನು ಅಮೋಘವರ್ಷನ ಉತ್ತರಾಧಿಕಾರಿಯಾಗಿ ಪಟ್ಟಕ್ಕೆ ಬಂದನು. ಈತನ ಶಾಸನವೊಂದು ನಲ್ಗೊಂಡ ಜಿಲ್ಲೆಯ ವೆಲಂಜಲದಲ್ಲಿ ಸಿಕ್ಕಿದೆ. ಈತನಿಗೆ 'ಅಕಾಲವರ್ಷ' ಎಂಬ ಬಿರುದು ಇತ್ತು ಎಂದು ತಿಳಿದು ಬರುತ್ತದೆ(ಅದೇ, ಪು.೨೮೯).

ಮೂರನೆಯ ಇಂದ್ರ: ಇಮ್ಮಡಿ ಕೃಷ್ಣನ ನಂತರದಲ್ಲಿ ಈತನು ಪಟ್ಟಕ್ಕೆ ಬಂದನು. ಈತನ ನಾಮವುಳ್ಳ ಶಾಸನವೊಂದು ಕೊಪ್ಪಳದಲ್ಲಿ ಲಭಿಸಿದೆ(ದೇವರಕೊಂಡಾರೆಡ್ಡಿ, ಭಟ್ಟಸೂರಿ ಕೆ.ಜಿ., ಕಲವೀರ ಮನ್ವಾಚಾರ ಮತ್ತು ಪರಮಶಿವಮೂರ್ತಿ ಡಿ.ವಿ.(ಸಂ): ಕೊಪ್ಪಳ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೨, ೧೯೯೯, ಪು.೪೦-೪೧). ಅದರಲ್ಲಿ ರಾಷ್ಟ್ರಕೂಟರ ಕುಲಪತಿಕವೆನಿಸಿದ ಇಂದ್ರ ಎಂದು ಇದೆ. ಇದರಲ್ಲಿ ದರ ವರ್ಷದ ಉಲ್ಲೇಖವು. ಇರುತ್ತದೆ ಶಕ ८११ ಎಂದು ಇದೆ. ಇದರ ಪ್ರಕಾರ ಕ್ರಿಶ.८೮೯ ಆಗುತ್ತದೆ. ಈ ಅವಧಿಯಲ್ಲಿ ಯಾವ ಇಂದ್ರ ರಾಜನು ರಾಜ್ಯ ಭಾರಮಾಡುತ್ತಿರಲಿಲ್ಲ. ಈ ಶಾಸನದಲ್ಲಿ ಇಂದ್ರ ದಂಡನಾಯಕನಾದ ಮಾಮರಸನು ಸಿದ್ಧಕುಪಕ್ಕೆ ತೀರ್ಥವಂದನಾರ್ಥವಾಗಿ ಬಂದಿದ್ದನು. ಸಮಯದಲ್ಲಿ ಕದಂಬರ ಪೆರ್ಮನರ್ದೇವ ಮತ್ತು ದಡಿಯಮರಸನು ತಮಗೆ ಪುಣ್ಯವಾಗಲೆಂದು ತಾವು ಕಟ್ಟಿಸಿದ ಬಸದಿಗೆ ಕಳಸಾರೋಹಣ ಮಾಡಿಸಿ, ದಾನ ನೀಡಿದ ವಿವರವಿದೆ.

ರಾಯಚೂರಿನ ಕಲ್ಮಾಲ ಶಾಸನದಲ್ಲಿ(ದೇವರಕೊಂಡಾರೆಡ್ಡಿ, ಭಟ್ಟಸೂರಿ ಕೆ.ಜಿ., ಕಲವೀರ ಮನ್ವಾಚಾರ ಮತ್ತು ಪರಮಶಿವಮೂರ್ತಿ ಡಿ.ವಿ.(ಸಂ): ೨೦೦೩, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, ಪು.೩೨). "ರಟ್ಟಕುಲೋದ್ಭವ ನಿತ್ಯವರ್ಷದೇವ" ಎನ್ನುವ ಉಲ್ಲೇಖ ಬರುತ್ತದೆ.

ಕನ್ನರದೇವ(ಮೂರನೆಯ ಕೃಷ್ಣ): ಕನ್ನರದೇವನ ಆಳ್ವಿಕೆಯಲ್ಲಿ ರಾಷ್ಟ್ರಕೂಟರು ಮತ್ತೆ ಬಲಶಾಲಿಗಳಾದರು. ಈತನಿಗೆ ಸಂಬಂಧಪಟ್ಟಂತೆ ಮೂರು ಶಾಸನಗಳು ಸಿಕ್ಕಿವೆ. ಇವುಗಳ ಪೈಕಿ ಪ್ರಾಚೀನವಾದುದು ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಇಟ್ಟಗಿಯ ಕ್ರಿ.ಶ. ೯೩೯ರ ಶಾಸನ. ಈ ಅಕಾಳವರ್ಷ ಕನ್ನರದೇವನು ರಾಜ್ಯಭಾರ ಮಾಡುತ್ತಿದ್ದಾಗ ಆತನ ಆಧೀನದಲ್ಲಿ ಗಂಗಪೆರ್ಮಾಡಿ ರಾಜ್ಯಭಾರ ಮಾಡುತ್ತಿದ್ದ; ಆತನ ಕೈಕೆಳಗೆ ಬುಟ್ಟಯ್ಯನೆಂಬುವನ್ನು ಎಡೆದೊರೆ ೨೦೦೦ವನ್ನು ಆಳುತ್ತಿದ್ದ; ಬೂತುಗಪೆರ್ಮಾಡಿನಡಿಯು ಬೆಳ್ವೊಲ ೩೦೦, ಮಾಸವಾಡಿ ೧೪೦, ಕುಕ್ಕನೂರು ೩೦, ಕೆಳವಾಡಿ ೩೦೦ಗಳನ್ನು ಆಳುತ್ತಿದ್ದ ಎಂಬುದಾಗಿ ಈ ಶಾಸನವು ತಿಳಿಸುತ್ತದೆ (ಕ.ವಿ.ಶಾ.ಸಂ.೨, ಪೂರ್ವೋಕ್ತ, ಪು.೨೫೭-೨೫೮).

ಎರಡನೆಯದು ಕ್ರಿ.ಶ.೯೪೦ರ ರಾಯಚೂರಿನ ಕಲ್ಮಾಲ್‌ಶಾಸನ. ಕನ್ನರದೇವನು ಆಳುತ್ತಿದ್ದಾಗ, ಅವನ ಸಾಮಂತನಾಗಿ ಬುಟ್ಟರಸನಿದ್ದು, ಆ ಬುಟ್ಟರಸ ಪಿಟ್ಟಬ್ಬೆ ಮತ್ತು ಕನ್ನರದೇವ ಈ

ಮೂವರೂ ಸೇರಿ ಅಲ್ಲಿಯ ಮಲ್ಲಿಕಾರ್ಜುನದೇವರಿಗೆ ಬುಟ್ಟರಸ ಕಲ್ಮೇಲೆಯ ಆದಿತ್ಯಭಟ್ಟಾರನಿಗೆ ೩೪ ಮತ್ತರು ಭೂಮಿಯನ್ನು ನೀಡಿದನೆಂದು ಈ ಶಾಸನದಿಂದ ತಿಳಿದುಬರುತ್ತದೆ(ಕ.ವಿ.ಶಾ.ಸಂ.೭, ಪೂರ್ವೋಕ್ತ, ಪು.೩೪).

ಮೂರನೆಯದು, ಕ್ರಿ.ಶ. ೯೫೮ರ ಕಲ್ಬುರ್ಗಿ ಜಿಲ್ಲೆಯ ಜೇವರ್ಗಿ ತಾಲೂಕಿನ ಆಂದೋಲ ಶಾಸನ. ಇದರಲ್ಲಿ "ಮದಗಜಮಲ್ಲ" ಶ್ರೀ ಕನ್ನರದೇವನು ನವಖಂಡ ಪ್ರಥ್ವಿಯನ್ನಾಳುತ್ತಿರಲ್ ಎಂದು ಉಲ್ಲೇಖಬರುತ್ತದೆ. ಕನ್ನರದೇವನ ಆಳ್ವಿಕೆಯಲ್ಲಿ 'ನಮಿಯುಂಬೋವಿಎಟ್ಟಿತ್ತರಲ್ಲಿನ' ಆನೆದೆಂಲೆಯಲ್ಲಿ ಪೆರ್ಗ್ಗಡೆ ಗುಂಡಗೆಯ್ಯನ ಮಗ ಕೇಶಿಮಯ್ಯ ಜಯಬ್ಬಯ್ಯಂ, ಕಿರಿಯ ಸಾಂತನು ಮತ್ತು ಪಳಜಲ್ಬಯ್ಯ ನಾಲ್ಕು ಜನ ಸೇರಿ ಗುಂಡಣೇಶ್ವರ ದೇವರಿಗೆ ಲಿಂಗ ಪ್ರತಿಷ್ಠಾಪನೆ ಮಾಡಿದ ಉಲ್ಲೇಖವಿದೆ. ಇದು ಈ ಪ್ರದೇಶದಲ್ಲಿ ಸಿಕ್ಕಿದ ಮೊದಲ ರಾಷ್ಟ್ರಕೂಟ ಶಾಸನವಾಗಿದೆ(ಹನುಮಾಕ್ಷಿ ಗೋಗಿ, ೧೯೯೬, ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪು.೨೭೮) ಎಂದು ಹೇಳಬಹುದು.

ಹೀಗೆ ರಾಷ್ಟ್ರಕೂಟರು ಹಿಂದಿನ ಕಲಬುರ್ಗಿ ಜಿಲ್ಲೆಯ ಮಾನ್ಯಖೇಟವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಹೈದ್ರಾಬಾದ್ ಕರ್ನಾಟಕ ಪ್ರದೇಶಗಳಾದ ಕಲಬುರ್ಗಿ, ಕೊಪ್ಪಳ, ರಾಯಚೂರು ಜಿಲ್ಲೆ ಪ್ರದೇಶದಿಂದ ಹಿಡಿದು ತೆಲಂಗಾಣದ ಮಹಬೂಬ್‌ನಗರ, ವರಂಗಲ್ ಮತ್ತು ನಲ್ಗೊಂಡ ಜಿಲ್ಲೆಯ ಪ್ರದೇಶಗಳನ್ನು ರಾಷ್ಟ್ರಕೂಟ ದೊರೆ ಧ್ರುವನಿಂದ ಮೊದಲಗೊಂಡು ರಾಷ್ಟ್ರಕೂಟ ದೊರೆ ಮೂರನೆ ಕೃಷ್ಣನವರೆಗೆ ಈ ಭೂಭಾಗದಲ್ಲಿ ತಮ್ಮ ಆಳ್ವಿಕೆ ಮಾಡಿದರೆಂದು ಈ ಶಾಸನಗಳಿಮದ ತಿಳಿದುಬರುತ್ತದೆ.

ಗಂಗರು

ಗಂಗರು ಸಾರ್ವಭೌಮ ಅರಸರಲ್ಲದಿದ್ದರೂ, ಶಕ್ತಿಶಾಲಿಗಳಾದ ಮಹಾ ಮಾಂಡಳಿಕರಾಗಿದ್ದರು. ಇವರು ಬಾದಾಮಿ ಚಾಲುಕ್ಯರ ಸಾಮಂತರಾಗಿ, ರಾಷ್ಟ್ರಕೂಟರ ಸಾಂಮತರಾಗಿ, ಕಲ್ಯಾಣ ಚಾಲುಕ್ಯರ ಸಾಮಂತರಾಗಿ ಆಳ್ವಿಕೆ ಮಾಡಿದ ಇವರ ಕಾಲ ಕರ್ನಾಟಕದ ಇತಿಹಾಸದಲ್ಲಿ ಚಿತಸ್ಮರಣಿಯವಾಗಿದೆ. ಇವರು ಸುಮಾರು ೬ ಶತಮಾನಗಳ ಕಾಲ ಕರ್ನಾಟಕದ ಬಹುಭಾಗವನ್ನು ಆಳಿದ್ದರು. ಇವರ ಆಳ್ವಿಕೆಯ ಪ್ರದೇಶಕ್ಕೆ ಗಂಗವಾಡಿ ತೊಂಬತ್ತಾರು ಸಾವಿರ ಎಂದು ಹೆಸರಿತ್ತು. ಇವರಿಗೆ ಸಂಬಂಧಿಸಿದಂತೆ ಕುಕನೂರು, ಹೆಬ್ಬಾಳ, ಇಟಗಿ, ಮತ್ತು ಕೊಪ್ಪಳದಲ್ಲಿ ಕೆಲವು ಶಾಸನಗಳು ಲಭಿಸಿವೆ.

ಇಮ್ಮಡಿ ಬೂತುಗನು ಮೂರನೆಯ ರಾಚಮಲ್ಲನ ಸಹೋದರ. ಈತನ ಆಳ್ವಿಕೆಯು ಗಂಗರ ರಾಜಕೀಯ ಇತಿಹಾಸದಲ್ಲಿ ಗಮನಾರ್ಹವಾದುದು. ಕ್ರಿ.ಶ. ೯೫೯ರ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಇಟಗಿ ಶಾಸನವು(ಕ.ವಿ.ಶಾ.ಸಂ.೨, ಪೂರ್ವೋಕ್ತ, ಪು.೨೫೮).

ಇಮ್ಮಡಿ ಬೂತುಗನನ್ನು ಹೆಸರಿಸುತ್ತದೆ. ಇದರಲ್ಲಿ ಬೂತುಗನಿಗೆ ರಾಷ್ಟ್ರಕೂಟ ಮುಮ್ಮಡಿ ಕೃಷ್ಣನು ತುಂಗಭದ್ರೆಯ ಉತ್ತರದ ಭಾಗಗಳಾದ ಎಡದೊರೆ ೨೦೦೦, ಬೆಳ್ವೊಲ ೩೦೦, ಮಾಸವಾಡಿ ೧೪೦, ಕುಕನೂರು ೩೦, ಕೆಳವಾಡಿ ೩೦೦ ಮುಂತಾದ ಪ್ರದೇಶಗಳನ್ನು ನೀಡಿದ ಉಲ್ಲೇಖವಿದೆ.

ಗಂಗಕಂದರ್ಪನ(ಇಮ್ಮಡಿ ಮಾರಸಿಂಹನ) ಕಾಲದ ಕುಕನೂರಿನ ತಾಮ್ರಶಾಸನದಲ್ಲಿ ಗಂಗರ ಪಾರಂಪರಿಕ ವಂಶಾವಳಿಯನ್ನು ವಿವರವಾಗಿ ನೀಡಲಾಗಿದೆ(ಅದೇ, ಪೂರ್ವೋಕ್ತ, ಪು.೨೪೦-೨೫೧). ಇದರ ಪ್ರಕಾರ ಗಂಗರು ಜಾಹ್ನವೀಯ ಕುಲದವರು. ಕೊಂಗುಣಿವರ್ಮನು ಅವರ ಮೂಲಪುರುಷ. ಆತನಿಗೆ ಮಾಧವನೆಂಬ ಹೆಸರೂ ಇತ್ತು. ಈತನ ಮಗ ಮಾಧವ; ಈತನ ಮಗ ಕದಂಬ ಕುಲದ ಕೃಷ್ಣವರ್ಮನ ತಂಗಿಯ ಮಗನಾದ ಕೊಂಗುಣಿವರ್ಮನ ಅವಿನೀತ; ಈತನ ಮಗ ದುರ್ವಿನೀತ; ಈತನ ಮಗ ಮುಷ್ಕರ; ಈತನ ಮಗ ಶ್ರೀ ವಿಕ್ರಮ; ಈತನ ಮಗ ಭೂವಿಕ್ರಮ; ಈತನ ತಮ್ಮ ನವಕಾಮ; ಈತನಿಗೆ ಶಿವಮಾರನೆಂಬ ಇನ್ನೊಂದು ಹೆಸರೂ ಇತ್ತು. ಈತನ ಮಗ ಶ್ರೀ ಪುರುಷ; ಇವನಿಗೆ ಕೊಂಗುಣಿವರ್ಮ್ಮ ಧರ್ಮ ಮಹಾರಾಜನೆಂಬ ಹೆಸರೂ ಇತ್ತು. ಈತನ ಮಗ ಸೈಗೊಟ್ಟ ಶಿವಮಾರದೇವ. ಈತನ ಮಗ ಸತ್ಯವಾಕ್ಯ ಕೊಂಗುಣಿವರ್ಮ್ಮ ರಾಜಮಲ್ಲ. ಈತನ ನಂತರ ನೀತಿಮಾರ್ಗ ಪಟ್ಟಕ್ಕೆ ಬಂದನು. ಅವನ ಮಗ ಸತ್ಯವಾಕ್ಯ ಕೊಂಗುಣಿವರ್ಮ ರಾಜಮಲ್ಲ. ಈತನ ತಮ್ಮ ಬೂತುಗನಿಗೆ ಅಮೋಘವರ್ಷನ ಮಗಳು ಚಂದ್ರೋಬಲಬ್ಬೆಯನ್ನು ಕೊಟ್ಟಿದ್ದು, ಇವನ ನಂತರ ರಾಜಮಲ್ಲ ಮತ್ತು ಎರೆಯಪ್ಪನಿಗೆ ಪಟ್ಟಾಭಿಷೇಕವಾಯಿತು. ಈತನ ಬಳಿಕ ಸತ್ಯವಾಕ್ಯ ನರಸಿಂಹ, ಇವನ ತಮ್ಮ ರಾಚಮಲ್ಲ, ಇವನ ನಂತರ ಬೂತುಗ ಪಟ್ಟಕ್ಕೆ ಬಂದರು. ತದನಂತರ ಬೂತುಗನ ಮಗ ನೀತಿಮಾರ್ಗಪುಣಸೆಯ ಗಂಗ ರಾಜ್ಯದ ಪಟ್ಟವೇರಿದನು. ಈತನ ನಂತರ ಇವನ ತಮ್ಮ ಮಾರಸಿಂಹನು ಪಟ್ಟಕ್ಕೆ ಬಂದನು.

ಕೊಪ್ಪಳದ ಗಂಗಾವತಿ ತಾಲೂಕಿನ ಹೆಬ್ಬಾಳದಲ್ಲಿ ಲಭಿಸಿದ ಕ್ರಿ.ಶ.೧೦ನೆಯ ಶತಮಾನದ ಶಾಸನದಲ್ಲಿ ಗಂಗನ ಪಾರಂಪರಿಕ ಬಿರುದುಗಳುಳ್ಳ ಗಂಗರಸನ ಉಲ್ಲೇಖವಿದೆ. ಬಹುಶ: ಇವನು ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ಮಾರಸಿಂಹನೆ ಆಗಿರಬೇಕು(ಅದೇ, ಪೂರ್ವೋಕ್ತ, ಶಾ.ಸಂ.೬೫, ಪು.) ಎಂದು ವಿದ್ವಾಂಸರು ಊಹಿಸಿದ್ದಾರೆ.

ಹೀಗೆ ತಲಕಾಡಿನ ಗಂಗರು ಸಾರ್ವಭೌಮ ದೊರೆಗಳು ಅಲ್ಲದಿದ್ದರೂ ಆರಂಭದಿಂದಲೇ ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರ ಕಲ್ಯಾಣ ಚಾಲುಕ್ಯರ ಸಾಮಂತರಾಗಿ ಹೈದ್ರಾಬಾದ್ ಕನಾಟಕ ಪ್ರದೇಶಗಳಾದ ಕುಕನೂರು, ಹೆಬ್ಬಾಳ, ಇಟಗಿ ಮತ್ತು ಕೊಪ್ಪಳದ ಭಾಗಗಳಲ್ಲಿ ಸಾಮಂತರಾಗಿ ಆಡಳಿತ ನಡೆಸಿದ್ದರೆಂದು ಇಲ್ಲಿಯ ಶಾಸನಗಳಿಂದ ತಿಳಿದುಬರುತ್ತದೆ. ಈ

ಗಂಗರ ಮನೆತನಕ್ಕೆ ಸಂಬಂಧಪಟ್ಟ ಶಾಸನಗಳು ತೆಲಂಗಾಣ ಪ್ರದೇಶದಲ್ಲಿ ಲಭಿಸುವುದಿಲ್ಲ. ಸಾಮಂತರಾಗಿದ್ದ ಗಂಗರ ಇಮ್ಮಡಿ ಬೂತುಗ ರಾಷ್ಟ್ರಕೂಟ ದೊರೆ ಮುಮ್ಮಡಿ ಕೃಷ್ಣನಿಂದ ತುಂಗಭದ್ರೆಯ ಉತ್ತರ ಭಾಗದ ಎಡೆದೊರೆ–೨೦೦೦, ಬೆಳ್ವಲ–೨೦೦, ಮಾಸವಾಡಿ, ಕುಕನೂರು ಮತ್ತು ಕೆಳವಾಡಿ ಈ ಭೂಭಾಗವನ್ನು ಪಡೆದುಕೊಂಡು ಆಳ್ವಿಕೆ ಮಾಡಿದ ಬೂತುಗನು ಗಂಗರ ರಾಜಕೀಯ ಇತಿಹಾಸದಲ್ಲಿ ಗಮನಾರ್ಹ ವ್ಯಕ್ತಿಯಾಗಿದ್ದನು.

ಕಲ್ಯಾಣದ ಚಾಲುಕ್ಯರು

ಬೀದರ ಜಿಲ್ಲೆಯ ಕಲ್ಯಾಣವನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ ಕಲ್ಯಾಣ ಚಾಲುಕ್ಯರು, ರಾಷ್ಟ್ರಕೂಟರ ಕೊನೆಯ ಅರಸ ಎರಡನೇ ಕರ್ಕನನ್ನು ಸಂಹರಿಸಿ, ಚಾಲುಕ್ಯ ದೊರೆ, ಎರಡನೆಯ ತೈಲಪನು ಕ್ರಿ.ಶ. ೯೭೩ರಲ್ಲಿ ರಾಷ್ಟ್ರಕೂಟರ ಆಳ್ವಿಕೆಯನ್ನು ಕೊನೆಗಾಣಿಸಿ, ಚಾಲುಕ್ಯರ ರಾಜ್ಯ ಸ್ಥಾಪನೆ ಮಾಡುತ್ತಾನೆ. ಇದಕ್ಕೆ ಮೊದಲು ಬೇರೆ ಬೇರೆ ಸ್ಥಳಗಳಲ್ಲಿ ರಾಷ್ಟ್ರಕೂಟರ ಸಾಮಂತರಾಗಿ ಇವರು ರಾಜ್ಯಭಾರ ಮಾಡುತ್ತಿರುತ್ತಾರೆ. ಹೈದರಾಬಾದ ಕರ್ನಾಟಕ, ಮತ್ತು ತೆಲಂಗಾಣ ಪ್ರದೇಶಗಳಲ್ಲಿ ಲಭಿಸಿದ ಕನ್ನಡ ಶಾಸನಗಳಲ್ಲಿ ಅರ್ಧಕ್ಕಿಂತ ಹೆಚ್ಚು ಶಾಸನಗಳು ಈ ರಾಜಮನೆತನಕ್ಕೆ ಸೇರಿದವುಗಳಾಗಿವೆ. ಅದರಲ್ಲಿಯೂ ಈ ವಂಶದಲ್ಲಿ ಅತಿಪ್ರಸಿದ್ಧಿ ಪಡೆದ ಮಹಾನ್ ದೊರೆಯಾದ ಆರನೆಯ ವಿಕ್ರಮಾದಿತ್ಯನಿಗೆ ಸಂಬಂಧಿಸಿದ ಶಾಸನಗಳೇ ಹೆಚ್ಚು. ಈ ರಾಜಮನೆತನಕ್ಕೆ ಸಂಬಂಧಪಟ್ಟ ಕನ್ನಡ ಶಾಸನಗಳು ಬೀದರ, ಗುಲಬರ್ಗಾ, ಕೊಪ್ಪಳ, ರಾಯಚೂರುಗಳಲ್ಲಿ ಮತ್ತು ತೆಲಂಗಾಣ ಪ್ರದೇಶಗಳಾದ ಕರೀಮ್‌ನಗರ, ವರಂಗಲ್, ಮಹಬೂಬ್‌ನಗರ, ನಲ್ಗೊಂಡ ಹಾಗೂ ಮೆದಕ್ ಜಿಲ್ಲೆಗಳಲ್ಲಿ ಲಭಿಸಿವೆ. ಇವಕ್ಕೆ ರಾಜಕೀಯ, ಸಾಂಸ್ಕೃತಿಕ, ಸಾಹಿತ್ಯಿಕ ದೃಷ್ಟಿಗಳಿಂದ ಬಹಳ ಮಹತ್ತ್ವವಿದೆ. ಕಲ್ಯಾಣಿ ಚಾಲುಕ್ಯರ ಇತಿಹಾಸದ ಮೇಲೆ ಈ ಶಾಸನಗಳು ಹೊಸ ಬೆಳಕನ್ನು ಚೆಲ್ಲುತ್ತವೆ.

ಕಲ್ಯಾಣಿ ಚಾಲುಕ್ಯರ ವಂಶದಲ್ಲಿ ಆಳ್ವಿಕೆ ಮಾಡಿದ ಪ್ರಸಿದ್ಧ ದೊರೆಗಳಾದ ಎರಡನೆಯ ತೈಲಪ ಇರಿವ ಬೆಡಂಗ, ತ್ರಿಭುವನಮಲ್ಲ ನಾಲ್ಕನೆಯ ವಿಕ್ರಮಾದಿತ್ಯ, ಇಮ್ಮಡಿ ಜಯಸಿಂಹ, ಮೊದಲನೆಯ ಸೋಮೇಶ್ವರ ಅಥವಾ ಭುವನೈಕಮಲ್ಲ, ಆರನೆಯ ವಿಕ್ರಮಾದಿತ್ಯ, ಮೂರನೆಯ ಸೋಮೇಶ್ವರ, ಇಮ್ಮಡಿ ಜಗದೇಕಮಲ್ಲ, ಮುಮ್ಮಡಿ ತೈಲಪ, ನಾಲ್ಕನೆಯ ಸೋಮೇಶ್ವರ ಮೊದಲಾದ ವರ ಬಗ್ಗೆ ಅನೇಕ ಹೊಸ ಅಂಶಗಳು ಈ ಶಾಸನಗಳಿಂದ ಲಭಿಸಿವೆ. ಬೀದರ ಜಿಲ್ಲೆಯ ಬಸವಕಲ್ಯಾಣದ ಕ್ರಿ.ಶ. ೧೧೨೫ರ ಶಾಸನವು(ದೇವರಕೊಂಡಾರೆಡ್ಡಿ ಮತ್ತು ಹನುಮಾಕ್ಷಿ ಗೋಗಿ (ಸಂ): ೨೦೦೬, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೮, ಪು.೪೪). ಚಾಲುಕ್ಯವಂಶದ ಮೂಲದ ಬಗ್ಗೆ ವಿವರಣೆ ನೀಡುತ್ತದೆ. ಆರಂಭದಲ್ಲಿ ಚಾಲುಕ್ಯ ವಂಶದ ಮೂಲವನ್ನು ಆದಿ

ಬ್ರಹ್ಮನಿಂದ; ಆರಂಭಿಸಿ, ಆತನ ಮಗ ಮನು ಈತನಿಗೆ ಮುಂದೆ ಮೂರು ಲೋಕಕ್ಕೆ ಖ್ಯಾತಿ ಪಡೆದ ಹಾರಿತಿ ಹುಟ್ಟಿದ. ಅವನ ಮಗನೇ ಚಾಳುಕ್ಯ(ಕ.ವಿ.ಶಾ.ಸಂ.೫, ಭಾಗ ೨ ಪೂರ್ವೋಕ್ತ, ಪು.೨೯೪). ಆ ವಂಶದಲ್ಲಿ ಕೆಲವರು ಆಳ್ವಿಕೆ ಮಾಡಿದ ನಂತರ ವಿಷ್ಣುವರ್ಧನ, ವಿಜಯಾದಿತ್ಯ ಎಂಬುವವನು ಜನಿಸಿದನು. ಮುಂದೆ ಸತ್ಯಾಶ್ರಯ ಎಂಬುವವನು ರಾಜ್ಯಭಾರ ಮಾಡಿದನು. ಅವನ ಹೆಸರೇ ಈ ವಂಶದವರಿಗೆ ಬಂತು. ಇವರು ಮುಂದೆ ಕುಂತಳ ಭಾಗಕ್ಕೆ ಅಧಿಪತಿಯಾದರು ಎಂದು ಶಾಸನ ಉಲ್ಲೇಖಿಸಿದೆ.

ಎರಡನೆಯ ತೈಲಪ: ಎರಡನೆಯ ತೈಲಪನು ರಾಷ್ಟ್ರಕೂಟರ ಕೊನೆಯ ಅರಸನಾದ ಎರಡನೆಯ ಕರ್ಕನನ್ನು ಸಂಹರಿಸಿ, ಕಲ್ಯಾಣದಲ್ಲಿ ಚಾಲುಕ್ಯ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿದನು. ಈತನಿಗೆ ಸಂಬಂಧಿಸಿದ ಶಾಸನಗಳು ಕೊಪ್ಪಳ, ಬೀದರ ಹಾಗೂ ತೆಲಂಗಾಣದ ಮೆದಕ್, ನಲ್ಗೊಂಡ ಮತ್ತು ಕರೀಮ್‌ನಗರ ಜಿಲ್ಲೆಗಳಲ್ಲಿ ಲಭಿಸಿವೆ.

ಕ್ರಿ.ಶ.೯೭೩ರ ಮೆದಕ್ ಶಾಸನವು ಚಾಲುಕ್ಯದೊರೆ ಆಹವಮಲ್ಲನನ್ನು ಉಲ್ಲೇಖಿಸಿದೆ. ಆತನ ಮಹಾಮಂಡಳೇಶ್ವರನಾದ ಸೋಮಪೆರ್ಮಾಡಿಯ ಆಳ್ವಿಕೆಯ ಬಗ್ಗೆ ಇದು ತಿಳಿಸುತ್ತದೆ. ಇದು ಆಹವಮಲ್ಲನ ಆಳ್ವಿಕೆಯ ಆರಂಭದ ಶಾಸನವಾಗಿದೆ(ಕ.ವಿ.ಶಾ.ಸಂ.೫, ಭಾಗ ೨, ಪೂರ್ವೋಕ್ತ, ಪು.೨೯೪).

ಕ್ರಿ.ಶ. ಸು. ೯೭೩ರ ಕೊಪ್ಪಳದ ಶಾಸನದಲ್ಲಿ(ಕ.ವಿ.ಶಾ.ಸಂ.೨, ಪೂರ್ವೋಕ್ತ, ಪು. ೩೩)ಆಹವಮಲ್ಲನು ತನ್ನ ಆಳ್ವಿಕೆಯ ಮೊದಲ ವರ್ಷದಲ್ಲಿ 'ಬ್ರಹ್ಮಾಂಡಕ್ರತು' ಎಂಬ ಯಾಗವನ್ನು ಮಾಡಿದಂತೆ ಹೇಳಿದೆ. ಈ ಶಾಸನದಲ್ಲಿ ಈತನನ್ನು ಚಾಲುಕ್ಯಾಭರಣ ಪಾಂಚಾಲಮದೇಭಪಂಚಾನನ, ಶಟ್ಟಘರಟ್ಟ, ನರ್ವಡಿತೇಜ, ಆಹವಮಲ್ಲ ಮುಂತಾದ ಬಿರುದುಗಳಿಂದ ಹೊಗಳಲಾಗಿದೆ.

ಕ್ರಿ.ಶ. ೯೮೮ರ ಭಾಲ್ಕಿ ಶಾಸನವು ಚಾಲುಕ್ಯ ತೈಲಹದೇವನನ್ನು ಹೆಸರಿಸಿದೆ. ಅಲ್ಲದೆ ಆತನ ಸಾಮಂತ ರಾಜರಸನನ್ನು ಹೆಸರಿಸುತ್ತಾ, ಈತನ ದಂಡನಾಯಕನಾಗಿ ನಾಗವರ್ಮಯ್ಯನಿರುತ್ತಾನೆಂದು ತಿಳಿಸುತ್ತದೆ.

ಕ್ರಿ.ಶ. ೯೮೭ರ ನಲ್ಗೊಂಡ ಜಿಲ್ಲೆಯ ಕೊಲನುಪಾಕ ಶಾಸನವು ಚಾಲುಕ್ಯ ದೊರೆ ಆಹವಮಲ್ಲದೇವನ ಆಳ್ವಿಕೆಯ್ನು ಉಲ್ಲೇಖಿಸುತ್ತದೆ. ವಿವರಗಳು ಸ್ಪಷ್ಟವಿಲ್ಲ.

ಕ್ರಿ.ಶ. ೯೮೮ರ ಗಂಗಾವತಿಯ ಪಂಪಾಸರೋವರದ ಮೆಟ್ಟಲಿಗೆ ಸೇರಿಸಿದ ಶಾಸನವು(ಕ.ವಿ.ಶಾ.ಸಂ.೨, ಪೂರ್ವೋಕ್ತ, ಪು.೨೫೩-೨೫೪)"ಸತ್ಯಾಶ್ರಯ ಕುಲತಿಳಕ ಚಲುಕ್ಯಾಭರಣ ಶ್ರೀಮದಾಹವಮಲ್ಲದೇವರು ತುಂಗಾಭದ್ರೆಯ ತೆಂಕಣ ತಡಿಯ ಪಂಪೆಯ ಬೀಡಿನ"ಲ್ಲಿ ಬೀಡುಬಿಟ್ಟಿದ್ದಾಗ ....ತಿಳಿಸುತ್ತದೆ.

ಕ್ರಿ.ಶ. ೯೯೧ರ ಯಲಬರ್ಗಾ ತಾಲ್ಲೂಕಿನ ತಳಕಲ್ಲು ಶಾಸನವು ಚಾಲುಕ್ಯ ಆಹವಮಲ್ಲನನ್ನು ಉಲ್ಲೇಖಿಸಿದೆ. ಈತನ ಸಾಮಂತನಾದ ಸೋಭನರಸನು ಎರಡಾಮಿನೂರು, ಬನವಾಸಿ ೧೨೦೦೦ನ್ನು ಆಳುತ್ತಿದ್ದ. ಈತನಕೆಳಗೆ ಸಾಮಿಯಣ್ಣನು ಕುಕ್ಕನೂರ-೩೦ನ್ನು ಆಳುತ್ತಿದ್ದನು. ಸೋಭನರಸನು ಬಂಕಾಪುರದ ನೆಲೆಮಿಡಿನಲ್ಲಿದ್ದಾಗ ಕಾಳದಾಲೂರಿನ ಸಿದ್ದೇಶ್ವರದ ಸಂಕರಾಶಿ ಭಟಾರನ ಶಿಷ್ಯನಾದ ಅಮೃತರಾಶಿ ಮುನೀಷ್ವರನ ಕಾಲನ್ನು ತೊಳೆದು ಅಗ್ರಹಾರ ತಳಕಲ್ಲಿನ ನಾಗಲೇಶ್ವರ ದೇವಾಲಯಕ್ಕೆ ೪೦೦ ಮತ್ತರು ಭೂಮಿಯನ್ನು ನೀಡಿದ ಉಲ್ಲೇಖ ಬರುತ್ತದೆ.

ಕ್ರಿ.ಶ. ೯೯೨ರ ಕರೀಮ್‌ನಗರ ಶಾಸನವು ಆಹವಮಲ್ಲನ ಆಳ್ವಿಕೆಯಲ್ಲಿ ಆತನ ಸೇನಾಪತಿ [ಯಾರು]ಯೊಬ್ಬ ತನ್ನ ಸೈನ್ಯದೊಡನೆ ಮಲ್ಲಿಕಾರ್ಜುನ ದೇವಾಲಯಕ್ಕೆ ಭೇಟಿ ನೀಡಿ, ದೇವರ ಸೇವೆಗಾಗಿ ಗದ್ದೆಯನ್ನೂ ಹೂವಿನ ತೋಟವನ್ನೂ ದತ್ತಿ ನೀಡಿದನೆಂದು ತಿಳಿಸುತ್ತದೆ.

ಕ್ರಿ.ಶ. ೯೯೨ರ ಕರೀಮ್‌ನಗರ ಜಿಲ್ಲೆಯ ಚೊಪ್ಪದಂಡಿ ಶಾಸನವು. ಆಹವಮಲ್ಲನು ಆಳುತ್ತಿರುವಾಗ, ಬಂಧುಜನಕಲ್ಪವೃಕ್ಷ ವ್ಯಕ್ತಿತ್ವವುಳ್ಳ ದುಗ್ಗರಯ್ಯನ ಹಿರಿಯ ಮಗಳಾದ **ಆಚ್ಚಬ್ಬೆಯು** ಚೊಪ್ಪದಂಡಿಯಲ್ಲಿ **ಆಚಬ್ಬೆ** ಸಮುದ್ರವೆಂಬ ಕೆರೆಯನ್ನು ಕಟ್ಟಿಸಿ, ಅದಕ್ಕೆ ೭೦ ದ್ರಮ್ಮವನ್ನು ದತ್ತಿಯಾಗಿ ನೀಡಿರುವುದನ್ನು ದಾಖಲಿಸುತ್ತದೆ. **ಅಲ್ಲದೆ ಇರಿವಬೆಡಂಗ ಸತ್ಯಾಶ್ರಯದೇರ್ವ ದಾದಿ ದೇವಕಟ್ಟಿಯನ್ನೂ ಹೆಸರಿಸಿದೆ.**

ಕ್ರಿ.ಶ.೯೯೫ರ ಇದೇ ಜಿಲ್ಲೆಯ ಹುಜೂರಾಬಾದ್ ತಾಲ್ಲೂಕಿನ ಜಮ್ಮಿಕುಂಟ ಶಾಸನವು ಅಹವಮಲ್ಲನು ಉತ್ತರದ ದಿಗ್ವಿಜಯದಲ್ಲಿ ಉಪ್ಪಳನನ್ನು ಗೆದ್ದು ಆಳುತಿದ್ದನೆಂದು ಹೇಳುತ್ತದೆ.

ಸತ್ಯಾಶ್ರಯ ಇರಿವಬೆಡಂಗ: ಈತನು ಎರಡನೆ ತೈಲಪನ ತರುವಾಯ ಪಟ್ಟಕ್ಕೆ ಬಂದನು. ಈತನಿಗೆ ಸಂಬಂಧಿಸಿದ ಶಾಸನಗಳು ವರಂಗಲ್, ಕರೀಮ್‌ನಗರ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಲಭಿಸಿವೆ.

ಕ್ರಿ.ಶ.೧೦೦೧ರ ವರಂಗಲ್ ಜಿಲ್ಲೆಯ ಜನಗಾಂ ತಾಲೂಕಿನ ಚೆರಿಯಾಲ ಶಾಸನವು ಈತನ ಆಳ್ವಿಕೆಯ ಕಾಲದ್ದು. ಇದರಲ್ಲಿ ರಾಣಿ ಅಯ್ವಬ್ಬದೇವಿಯ ಅಕ್ಕ ಬಟ್ಟೆ ಎಂಬುವವಳು ಚೆರಿಯಾಲದ ಗೋವಯ ಗಾವುಂಡನಿಗೆ ದಸವಂದ ಮಾನ್ಯವನ್ನು ನೀಡಿದುದನ್ನು ಹೇಳಲಾಗಿದೆ.

ಕ್ರಿ.ಶ.೧೦೦೨ರ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಕಲ್ಲೂರು ಶಾಸನವು ಇರಿವಬೆಡಂಗ ಸತ್ತಿದೇವನು ಆಳುತ್ತಿದ್ದಾಗ ಆತನ ಸಾಮಂತ ಚೂಡಾಮಣಿ ಸೋಬ ನರಸನು ಕುಕ್ಕನೂರು ೩೦, ಬನವಾಸಿ ೧೨೦೦೦ಗಳನ್ನು ಆಳುತ್ತಿದ್ದು, ಅಲ್ಲಿಯ ಶ್ರೀಸೋಬನೇಶ್ವರ ದೇವರ ಅಂಗಭೋಗಕ್ಕೆ ಮಹೇಶ್ವರಧರ್ಮವಾಗಿ ದತ್ತಿ ನೀಡಿದಂತೆ ತಿಳಿಸುತ್ತದೆ.

ಕ್ರಿ.ಶ.೧೦೦೫ರ(ಕ.ವಿ.ಶಾ.ಸಂ.೭, ಪೂರ್ವೋಕ್ತ, ಪು.೯೬-೯೭). ಕುಕನೂರ ಶಾಸನವು ಇರಿವಬೆಡಂಗನು ಆಳುತ್ತಿದ್ದದಾಗ ಈಶ್ವರಸೆಟ್ಟಿಯು ಹೊಸಮಠದ ಚೋಳಪಂಡಿತನ ಶಿಷ್ಯನಾದ ಅಗಸ್ತಿಜೀಯನ ಕಾಲನ್ನು ತೊಳೆದು ದಾನ ನೀಡಿದುದನ್ನು ಉಲ್ಲೇಖಿಸುತ್ತದೆ.

ಕ್ರಿ.ಶ. ೧೦೬೨ರ ರಾಯಚೂರ ಜಿಲ್ಲೆಯ ದೇವದುರ್ಗ ತಾಲೂಕಿನ ಬಾಗೂರು ಶಾಸನವು ಚಾಲುಕ್ಯ ದೊರೆ ಇರಿವಬೆಡಂಗ ಸತ್ಯಾಶ್ರಯನನ್ನು ದಾಖಲಿಸಿದೆ. ಇದರಲ್ಲಿ ಶಕ ವರ್ಷ ೯೮೪ ಎಂದಿದ್ದು, ಇದು ಕ್ರಿ.ಶ. ೧೦೬೨ಕ್ಕೆ ಸರಿ ಹೊಂದುತ್ತದೆ. ಈವರೆಗೆ ಇತಿಹಾಸಕಾರರು ಆತನ ಆಳ್ವಿಕೆ ಕಾಲ ಕ್ರಿ.ಶ. ೯೯೭-ರಿಂದ ೧೦೦೮ನು ಎಂದು ಗುರುತಿನದಾರೆ. ಈ ಶಾಸನದಿಂದಾಗಿ, ಇರಿವಬೆಡಂಗನು ಕ್ರಿ.ಶ. ೧೦೬೨ರ ವರೆಗೆ ಆಳದನೆಂದು ತಿಳಿದುಬರುತ್ತದೆ.

ಕ್ರಿ.ಶ. ೧೧೧೫ರ ಕರೀಮ್‌ನಗರ ಶಾಸನವು. ಚಾಲುಕ್ಯದೊರೆ ಇರಿವಬೆಡಂಗ ಸತ್ಯಾಶ್ರಯನ ಆಳ್ವಿಕೆಯನ್ನು ಹೇಳಿದೆ. ಶಕ ವರ್ಷ ೯೨೭ನೆಯ ೫ನೆಯ ಗುರುವಾರಂದು ಅರ್ಕಕುಂಡ ೭೦೦೦ ಕಾಡಿಪಾಳು ೭೦ರ ಉಲ್ಲೇಖ ಇದ್ದು, ಮಾದಿಗಾವುಂಡನಮಗ ಪೃಥವಯ್ಯನ ಪ್ರಾರ್ಥನೆಯಂತೆ ಸಿದ್ಧಾಯವನ್ನು ದತ್ತಿಯಾಗಿ ಕೊಟ್ಟಂತೆ ಇಲ್ಲಿ ದಾಖಲಿಸಿದೆ.

ಕ್ರಿ.ಶ.೧೦೦೭ರ ವರಂಗಲ್ ಪೊನ್ನವೊಲು ಶಾಸನವು ಚಾಲುಕ್ಯ ದೊರೆ ಇರಿವಬೆಡಂಗ ದೇವರನ್ನು ಉಲ್ಲೇಖಿಸುತ್ತದೆ. ಈತನ ಅಂಗರಕ್ಷಕನಾದ ತಂತ್ರಪಾಲ ಅರಸಪ್ಪಯ್ಯ ಎಂಬುವವನು ವಾಜಿಕುಲದ ಶೇಸನಮಯ್ಯ ಎಂಬ ಬ್ರಾಹ್ಮಣನಿಗೆ ದತ್ತಿ ನೀಡಿದುದ್ದನ್ನು ದಾಖಲಿಸುತ್ತದೆ.

ಕ್ರಿ.ಶ.೧೦೦೮ರ ಕರೀಮ್‌ನಗರ ಜಿಲ್ಲೆಯ ಚೊಪ್ಪದಂಡಿ ಶಾಸನವು ಚಾಲುಕ್ಯ ದೊರೆ ಇರಿವಬೆಂಡಗನಿಗೆ ಸಂಬಂಧಿಸಿದೆ. ಇದು ಅವನ ದಾದಿ ದೇವಕಟ್ಟಿ ಎಂಬುವವಳು ಚೊಪ್ಪದ್ಯಾಂಡಿಯಲ್ಲಿ ಮಾಡಿಸಿದ ದೇವಕೇಶ್ವರ ದೇವರಿಗೆ ಭೂಮಿಯನ್ನು ದತ್ತಿಯಾಗಿ ನೀಡಿದುದ್ದನ್ನು ದಾಖಲಿಸುತ್ತದೆ.

ತ್ರಿಭುವನಮಲ್ಲ ಐದನೆಯ ವಿಕ್ರಮಾದಿತ್ಯ: ಇರಿವಬೆಡಂಗನಿಗೆ ಸಂತಾನವಿಲ್ಲದ ಕಾರಣ ಅವನ ನಂತರ ಅವನ ಸಹೋದರನ ಮಗ ಐದನೆಯ ವಿಕ್ರಮಾದಿತ್ಯನು ಪಟ್ಟಕ್ಕೆ ಬಂದನು. ಈತನು ಆಳ್ವಿಕೆ ನಡೆಸಿದ್ದು ಕೆಲವೇ ಕೆಲವು ವರ್ಷಗಳ ಕಾಲ. ಈತನ ಆಳ್ವಿಕೆ ಸಂಬಂಧಪಟ್ಟ ಶಾಸನಗಳು ಕೊಪ್ಪಳ, ರಾಯಚೂರು, ಮತ್ತು ನಲ್ಗೊಂಡ ಜಿಲ್ಲೆಗಳಲ್ಲಿ ಕಂಡು ಬರುತ್ತವೆ.

ಕ್ರಿ.ಶ.ಸು.೧೦೦೮ರ ಕೊಪ್ಪಳದ ಪಾಲ್ಕಿಗುಂಡಿನ ಶಾಸನವು ಈ ಐದನೇ ವಿಕ್ರಮಾದಿತ್ಯನ ಆಳ್ವಿಕೆಯ ಮೊದಲನೆ ವರ್ಷದ್ದಾಗಿದ್ದು, ಈ ಶಾಸನವು ಜೈನ ಯತಿ ಸಿಂಹನಂದಿಯು ಅಲ್ಲಿ

ಒಂದು ತಿಂಗಳ ಕಾಲ ತಪವೆಸಗಿ ಇಂಗಿಣೀ ಮರಣವನ್ನು ಸಾಧಿಸಿದುದು, ಅವನು ಮುಡುಪಿದ ಸ್ಥಳದಲ್ಲಿ ಬಸದಿಯನ್ನು ಕಟ್ಟಿಸಿ, ಶಾಂತಿನಾಥನ ಪ್ರತಿಷ್ಠೆಯನ್ನು ಕಲ್ಯಾಣಕೀರ್ತಿಮುನಿ ಎಂದು ಹೇಳುತ್ತದೆ. ಬಿಚ್ಚುಕುಂದಿಯಲ್ಲಿ ಮಾಡಿಸಿದನು.

ಕ್ರಿ.ಶ.೧೦೧೨ ನಲ್ಗೊಂಡ ಜಿಲ್ಲೆಯ ಹುಝೂರ್‌ನಗರ ತಾಲ್ಲೂಕಿನ ಚೆಲ್ಕುರು ಶಾನವು ಚಾಲುಕ್ಯ ದೊರೆ ತ್ರಿಭುವನಮಲ್ಲನನ್ನು ಹೆಸರಿಸುತ್ತದೆ. ಇದರಲ್ಲಿ ಉತ್ತರ ದಿಗ್ವಿಜಯದಲ್ಲಿ ಮಾಳವದ ಭೋಜದೇವನನ್ನು ದಮನಮಾಡಬೇಕೆಂದು ಪಯನಿಯ ದಡದಲ್ಲಿ ಬೀಡುಬಿಟ್ಟಿದ್ದನು; ಈ ಶಾಸನದಲ್ಲಿ ಉಲ್ಲೇಖಿತನಾದ ತ್ರಿಭುವನಮಲ್ಲ ಎಂಬುವವನು ೧೦೭೬-೧೨೨೬ರಲ್ಲಿದೆ ತ್ರಿಭುವನ ಮಲ್ಲನಲ್ಲ ಕಾರಣ ಈ ಮಾಳವದ ಭೋಜದೇವನು ಈತನ ಸಮಕಾಲಿನನಾದವನಲ್ಲ; ಹೀಗಾಗಿ ಈತನು ಕ್ರಿ.ಶ. ೧೦೦೮-೧೦೧೪ರಲ್ಲಿದ್ದ ಐದನೆಯ ವಿಕ್ರಮಾದಿತ್ಯನಾಗುತ್ತಾನೆ. ಈತನ ದಂಡನಾಯಿಕ ಪದ್ಮನಾಭೈಯ್ಯಾ ಲೊಂಬುಳಿಕೆ-೭೦ ಆಳುತ್ತಿದ್ದನೆಂದು ಉಲ್ಲೇಖಿಸಿದೆ.

ಜಯಸಿಂಹ(ಜಗದೇಕಮಲ್ಲ): ಸತ್ಯಾಶ್ರಯ ಇರಿವಬೆಡಂಗನ ನಂತರ ಅವನ ಸಹೋದರನಾದ ಇಮ್ಮಡಿ ಜಯಸಿಂಹನು ಅಧಿಕಾರಕ್ಕೆ ಬಂದನು. ಈತನು ಆಡಳಿತ ವಹಿಸಿಕೊಂಡ ತರುಣದಲ್ಲಿ ಅನೇಕ ಯುದ್ಧಗಳನ್ನು ಮಾಡಬೇಕಾಯಿತು. ಈತನಿಗೆ ಸಂಬಂಧಪಟ್ಟ ಶಾಸನಗಳು ಬೀದರ, ಗುಲಬರ್ಗಾ, ರಾಯಚೂರು, ಕೊಪ್ಪಳ ಮತ್ತು ತೆಲಂಗಾಣ ಪ್ರದೇಶಗಳಲ್ಲಿ ಲಭಿಸಿವೆ.

ಕ್ರಿ.ಶ.೯೯೭ರ ಕುಷ್ಟಗಿಯ ಹೀರೇಮನ್ನಾಪೂರ ಶಾಸನವು(ಕ.ವಿ.ಶಾ.ಸಂ.೨, ಪೂರ್ವೋಕ್ತ, ಪು.೨೮೩). ಜಯಸಿಂಹನ ವಂಶಾವಳಿಯನ್ನು ನೀಡುತ್ತದೆ. ಈ ಶಾಸನವು ಶಕ ವರ್ಷ ೯೧೯ ಹೆಸರಿಸುತ್ತದೆ. ಇದರ ಪ್ರಕಾರ ಕ್ರಿ.ಶ. ೯೯೭ ಆಗುತ್ತದೆ. ಈ ಕಾಲದಲ್ಲಿ ಎರಡನೆಯ ತೈಪಲ ಮತ್ತು ಆತನ ಹಿರಿಯ ಮಗ ಸತ್ಯಾಶ್ರಯ ಆಳ್ವಿಕೆಯಾಗಿತ್ತು. ಹೀಗಿರುವಾಗ ಈ ಶಾಸನದಲ್ಲಿನ "ಶ್ರೀ ಪ್ರಥ್ವೀವಲ್ಲಭ ಮಹಾರಾಜಾಧಿರಾಜ ಪರಮೇಶ್ವರ ಪರಮ ಭಟ್ಟಾರಕಂ ಶ್ರೀಜಯಸಿಂಹದೇವ ರಾಜ್ಯ ವಿಜಯಮುತ್ತರೋತ್ತರಾಭಿವೃದ್ಧಿ" ಎಂದು ಬಂದಿರುವುದರಿಂದ ಜಯಸಿಂಹನು ಕ್ರಿ.ಶ. ೯೯೭ರಲ್ಲಿಯೇ ಆಳ್ವಿಕೆಗೆ ಬಂದಿದ್ದನೆಂದು ಹೇಳಲು ಸಾಧ್ಯವಿದೆ. ಎಂದು ಹೇಳಬಹುದು.

ಕ್ರಿ.ಶ.೧೦೧೦ರ ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲೂಕಿನ ಮಸ್ಕಿಯ ಶಾಸನವು (ಕ.ವಿ.ಶಾ.ಸಂ.೭ ಪೂರ್ವೋಕ್ತ, ಪು. ೧೬೫) ಚಾಲುಕ್ಯ ದೊರೆ ಇಮ್ಮಡಿ ಜಯ ಸಿಂಹನನ್ನು ದಾಖಲಿಸಿದೆ. ಇಮ್ಮಡಿ ಜಯಸಿಂಹನನ್ನು ಕುಮಾರಗಜ ಕೇಸರಿ, ಕೀರ್ತಿವಿದ್ಯಾರ, ಗಂಡರಗಂಡ, ಸತ್ಯರತ್ನಾಕರ ಮುಂತಾದ ವಿಶೇಷಣಗಳಿಂದ ಬಣಿಸಿದುದ್ದನ್ನು ಕಾಣಬಹುದು. ಈತನ ಕಾಲದಲ್ಲಿ

ರಾಜಧಾನಿ ಹಿರಿಯ ಮೊಸಂಗಿಯಲ್ಲಿದ್ದ ಆಹವಮಲ್ಲನ ಚಟ್ಟನಾದ ಕರಿಯಾಯ್ಯಯ್ಯ ಎಂಬುವವನಿಗೆ ನೂರು ಮತ್ತರು ಭೂಮಿಯನ್ನು ಜಯಸಿಂಹದಾನ ನೀಡುವುದರ ದಾಖಲೆಯಿದೆ.

ಕ್ರಿ.ಶ.೧೦೧೧ರ ರಾಯಚೂರು ಜಿಲ್ಲೆಯ ನವಿಲೆಗ್ರಾಮದ ಶಾಸನವು ಚಾಲುಕ್ಯದೊರೆ ಐದನೆ ವಿಕ್ರಮಾದಿತ್ಯ(ತ್ರಿಭುವನಮಲ್ಲ)ನ ಆಳ್ವಿಕೆಯನ್ನು ಸೂಚಿಸುತ್ತದೆ. ಜೊತೆಗೆ, ತದನಂತರ ಪಟ್ಟಕ್ಕೆ ಬಂದ ಚಾಲುಕ್ಯದೊರೆ ಜಯಸಿಂಹನನ್ನು ಹಲವಾರು ಬಿರುದುಗಳೊಂದಿಗೆ ಬಣ್ಣಿಸುವುದನ್ನೂ ಈ ಶಾಸನದಲ್ಲಿ ಕಾಣಬಹುದಾಗಿದೆ.

ಕ್ರಿ.ಶ. ೧೦೧೮ರ ಗುಲಬರ್ಗಾ ಜಿಲ್ಲೆಯ ಸುರಪುರ ತಾಲೂಕಿನ ಹೆಮ್ಮಡಗಿ ಶಾಸನವು ಕಲ್ಯಾಣ ಚಾಲುಕ್ಯದೊರೆ ಜಗದೇಕಮಲ್ಲನನ್ನು ದಾಖಲಿಸಿದೆ. ಎಮ್ಮವಾಡಿಗೆಯ ಸ್ಥಾನದ ಮಲ್ಲಿಕಾರ್ಜುನ ದೇವರಿಗೆ ದತ್ತಿಬಿಟ್ಟುದರ ಉಲ್ಲೇಖವನ್ನು ಇದು ಒಳಗೊಂಡಿದೆ. ಇದೇ ಕಾಲಕ್ಕೆ ಹೊಂದುವ ರಾಯಚೂರಿನ ಜಿಲ್ಲೆಯ ಲಿಂಗಸುಗೂರಿನ ಮಸ್ಕಿ ಶಾಸನವು ಕ್ರಿ.ಶ.೧೦೧೮ ಎಂದು; ಅದರಲ್ಲಿಯೂ ಚಾಲುಕ್ಯದೊರೆ ಜಗದೇಕಮಲ್ಲನ ಉಲ್ಲೇಖವಿದೆ.

ಕ್ರಿ.ಶ.೧೦೩೨ರ ರಾಯಚೂರು ಜಿಲ್ಲೆಯ ಲಿಂಗಸುಗೂರಿನ ಮಸ್ಕಿಯ ಶಾಸನವು ಜಗದೇಕ ಮಲ್ಲನು ಅಷ್ಟೋಪವಾಸಿ ಕನಕನಂದಿ ಭಟಾರರ ಪ್ರಾರ್ಥನೆಯಂತೆ, ರಾಜಧಾನಿ ಪಿರಿಯ ಮೊಸಂಗಿಯಲ್ಲಿ ಹೊಲದಲ್ಲಿ ದೇಸಿಗ ಗಣದ ಶ್ರೀ ಜಗದೇಕಮಲ್ಲ ಜಿನಾಲಯದ ಭೋಗಕ್ಕಾಗಿ ದತ್ತಿ ನೀಡಿ, ಅದಕ್ಕೆ "ಜಗದೇಕಮಲ್ಲ ಜಯಸಿಂಹವಲ್ಲಭದತ್ತಿ" ಎಂದು ಉಲ್ಲೇಖಿಸಿದೆ.

ಕ್ರಿ.ಶ.೧೦೩೩ರ ರಾಯಚೂರು ಜಿಲ್ಲೆಯ ಮಾನ್ವತಾಲೂಕಿನ ತಡಕಲ್ ಶಾಸನವು ಜಗದೇಕ ಮಲ್ಲನು ಏಕಗಿರಿ ನೆಲೆವೀಡಿನಿಂದ ಆಳುತ್ತಿದ್ದನು ಎಂದು ಉಲ್ಲೇಖಿಸುತ್ತದೆ.

ಕ್ರಿ.ಶ.೧೦೩೪ರ ನಲ್ಗೊಂಡ ಜಿಲ್ಲೆಯ ಸೈದಾಪುರ ಶಾಸನವು ಚಾಲುಕ್ಯದೊರೆ ಜಗದೇಕಮಲ್ಲನ ಆಳ್ವಿಕೆಯನ್ನು ಉಲ್ಲೇಖಿಸಿದೆ. ದೊರೆಯು ವೈದ್ಯಾರತ್ನಾಕರ ಅಗ್ಗಳಯ್ಯನ ಬಿನ್ನಹದಂತೆ ಕೊಳ್ಳಿಪಾಕೆ ೭೦೦೦ ದತ್ತಿ ಬಿಟ್ಟ ವಿಷಯ ಪ್ರಸ್ತಾಪಿಸುತ್ತದೆ.

ಕ್ರಿ.ಶ. ೧೦೩೬ರ ರಾಯಚೂರಿನ ಮಾನ್ವಿ ತಾಲೂಕಿನ ಬಲ್ಲಟಗಿ ಶಾಸನವು ಮತ್ತು ಅದೇ ತಾಲೂಕಿನ ನುಗಡೋಣಿ ಶಾಸನವು(ಕ.ವಿ.ಶಾ.ಸಂ.೭, ಪೂರ್ವೋಕ್ತ, ಪು.೨೧೮) ಚಾಲುಕ್ಯ ದೊರೆ ಜಗದೇಕಮಲ್ಲನ ರಾಣಿ ಸೋಮಲ ದೇವಿಯರ ಪೊಟ್ಟಳಕೆರೆಯ ನೆಲೆವೀಡಿನೊಳ್" ಎಂದು ಉಲ್ಲೇಖಿಸುತ್ತದೆ. ಅದೇ ಬಲ್ಲಟಗಿ ಶಾಸನವು ಜಗದೇಕಮಲ್ಲನು ಪೊಟ್ಟಲಕೆರೆಯ ನೆಲೆವಿಡಿನೊಳು ಎಂದು ಉಲ್ಲೇಖಿಸುವುರಿಂದ, ಪೊಟ್ಟಲಕೆರೆಯು ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತ್ತು ಎಂದು ಹೇಳಬಹುದು.

ಒಂದನೇ ಸೋಮೇಶ್ವರ(ಆಹವಮಲ್ಲ & ತ್ರೈಲೋಕ್ಯಮಲ್ಲ): ಎರಡನೇ ಜಯಸಿಂಹನ (ಜಗದೇಕ ಮಲ್ಲನ) ನಂತರ ಈತನ ಉತ್ತಾರಾಧಿಕಾರಿಯಾಗಿ ಒಂದನೇ ಸೋಮೇಶ್ವರನು ಸಿಂಹಾಸವನ್ನೇರಿದನು. ಈತನಿಗೆ ಸಂಬಂಧಪಟ್ಟ ಶಾಸನಗಳು ಬೀದರ, ಗುಲಬರ್ಗಾ, ರಾಯಚೂರು, ಕೊಪ್ಪಳ, ಕರೀಂನಗರ, ಮಹಬೂಬ್‌ನಗರ, ನಲ್ಗೊಂಡ, ಮೆದಕ್, ನಿಜಾಮಾಬಾದ್ ಜಿಲ್ಲೆಗಳಲ್ಲಿ ಲಭಿಸಿವೆ.

ಕ್ರಿ.ಶ. ೧೦೨೫ರ ರಾಯಚೂರಿನ ಲಿಂಗಸುಗೂರ ತಾಲೂಕಿನ ಬನ್ನಿಗೊಳ ಶಾಸನವು ಈ ತ್ರೈಲೋಕ್ಯಮಲ್ಲದೇವನನ್ನು ಉಲ್ಲೇಖಿಸುತ್ತದೆ. ಇತಿಹಾಸಕಾರರು ಈವರೆಗೆ ಈತನ ಆಳ್ವಿಕೆಯ ಕಾಲ ಕ್ರಿ.ಶ.೧೦೪೨ ಎಂದು ಹೇಳುತ್ತಾ ಬಂದಿದ್ದರು. ಈ ಶಾಸನದ ಆಧಾರದಿಂದಾಗಿ ಇದು ಇನ್ನೂ ಸುಮಾರು ೧೭ ವರ್ಷದಷ್ಟು ಹಿಂದಕ್ಕೆ ಸರಿಯುತ್ತದೆ.

ಕ್ರಿ.ಶ.೧೦೩೩ರ ಅದೇ ಜಿಲ್ಲೆಯ ಸಿಂಧನೂರಿನ ಮಾಡಶಿರವಾರ ಶಾಸನವು ಚಾಲುಕ್ಯದೊರೆ ತ್ರೈಲೋಕಮಲ್ಲದೇವರನನ್ನು ಉಲ್ಲೇಖಿಸುತ್ತದೆ. ಇದು ಕೂಡ ಕ್ರಿ.ಶ. ೧೦೪೨ಕ್ಕಿಂತ ಹಿಂದಿನದೇ ಎಂಬುದು ಗಮನಾರ್ಹ.

ಕ್ರಿ.ಶ. ೧೦೪೫ರ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಗೋತಗಿ ಶಾಸನವು ಈತನ ಆಳ್ವಿಕೆಯ ಕಾಲದ್ದೇ. ಇವನು ಮೊರಗನೂರ ನಲ್ಲಿದ್ದಾಗ ಎಡದರೊ ೨೦೦೦ ದರ ಕಂಪಣ ಕರಡಿಕಲ್ಲು ೩೦೦ರ, ಬಳಿಯ ಗೋವಂತಿಗೆಯಲ್ಲಿ ಚಾಮುಂಡಭಟ್ಟೋಪಾಧ್ಯಾಯನಿಗೆ ಧಾರಪೂರ್ವಕವಾಗಿ ೩೦೦ ಮತ್ತರು ಕರಿಯ ಭೂಮಿಯನ್ನು ಮಾನ್ಯವಾಗಿ ನೀಡುತ್ತಾನೆ.

ಕ್ರಿ.ಶ. ೧೦೪೬ರ ಲಿಂಗಸುಗೂರ ತಾಲ್ಲೂಕಿನ ರೇಲಾರಟ್ಟಿ ಶಾಸನವು ಚಾಲುಕ್ಯದೊರೆ ತ್ರೈಲೋಕಮಲ್ಲನ ಮಗ ಕುಮಾರ ಜಯ ಸಂಘದೇವನನ ದಾಖಲಿಸುತ್ತದೆ. ಜಯಸಿಂಘನು ಕರಡಿಕಲು-೩೦೦ರ ಅಗ್ರಹಾರವನ್ನು ಆಳುತ್ತಿದ್ದ ಈತನನ್ನು' ಸಮರೈಕಮಲ್ಲದೇವ' ನೆಂದು ಶಾಸನ ಪ್ರಸ್ತಾಪವಾಗಿದೆ.

ಕ್ರಿ.ಶ. ೧೦೪೬ರ ನಲ್ಗೊಂಡ ಜಿಲ್ಲೆಯ ಕೊಲನುಪಾಕರ ಶಾಸನವು ಚಾಲುಕ್ಯದೊರೆ ತ್ರೈಲೋಕಮಲ್ಲನು ಕೊಲ್ಲಾಪುರದಿಂದ ಆಳುತ್ತಿದ್ದನು ಎಂದು ದಾಖಲಿಸುತ್ತದೆ. ಈತನ ಮಹಾ ಮಂಡಳೇಶ್ವರನಾದ ಕೊಮ್ಮಣ್ಣಯ್ಯರಸನು ಕೊಳ್ಳಿಪಾಕೆ ೭೦೦೦ರ ವನ್ನು ಆಳುತ್ತಿದ್ದನೆಂದು ಉಲ್ಲೆಖಿಸಿದೆ. ಹೀಗೆ ಚಾಲುಕ್ಯರ ಆಳ್ವಿಕೆ ಕಾಲಕ್ಕೆ ಆಂದ್ರಪ್ರದೇಶದ ಕೊಲ್ಲಾಪುರದವರೆಗೆ ಹರಡಿತ್ತೆಂದು ಹೇಳಬಹುದು.

ಕ್ರಿ.ಶ.೨೧ರ ಮಹಬೂಬನಗರ ಜಿಲ್ಲೆಯ ಕೊಲ್ಲಾಪುರ ತಾಲೂಕಿನ ಮಲ್ಲೇಶ್ವರಂ ಗ್ರಾಮದ ಶಾಸನವು ಚಾಲುಕ್ಯದೊರೆ ತ್ರೈಲೋಕ್ಯಮಲ್ಲ ಹಾಗೂ ಆತನ ಮಹಾಂಡಳೇಶ್ವರ ಕುಮಾರ

ವಿಜಯಾದಿತ್ಯ ದೇವನ ಆಳ್ವಿಕೆ ದಾಖಲಿಸುತ್ತದೆ. ಇದರಿಂದಾಗಿ ತ್ರೈಲೋಕ್ಯಮಲ್ಲನಿಗೆ ವಿಜಯಾದಿತ್ಯದೇವನೆಯ ಮಹಾಮಾಂಡಳಿಕವಾಗಿದ್ದನೆಂದು ತಿಳಿದು ಬರುತ್ತದೆ.

ಕ್ರಿ.ಶ.೧೦೫೧ರ ಕರೀಮನಗರ ತಾಲೂಕಿನ ಸನಿಗರಂ ಶಾಸನವು ಚಾಲುಕ್ಯದೊರೆ ತ್ರೈಲೋಕ್ಯ ಮಲ್ಲದೇವ ಹಾಗೂ ಅವನ ಮಹಾ ಸಮರ ಕಾಕತೀಯ ಬೇತರಸನ ಆಳ್ವಿಕೆ ಹೇಳಿದೆ. ಹೀಗಾಗಿ ಕಾಕತೀಯರು ಕಲ್ಯಾಣ ಚಾಲುಕ್ಯರ ಸಾಮಂತರಾಗಿದ್ದರೆಂದು ಹೇಳಬಹುದು.

ಕ್ರಿ.ಶ.೧೦೫೩ರ ಕರೀಮನಗರ ತಾಲ್ಲೂಕಿನ ಸನಿಗರಂ ಗ್ರಾಮದ ಶಾಸನವು ಚಾಲುಕ್ಯದೊರೆ ತ್ರೈಲೋಕ್ಯಮಲ್ಲನು ರಾಜ್ಯವಾಳುತ್ತಿರುವಾಗ ಆತನ ಮಹಾಸಮಂತ ಕಾಕತೀಯರ ಪೇಳಲರಸನನ್ನು ಹೆಸರಿಸುತ್ತದೆ.

ಕ್ರಿ.ಶ.೧೦೫೬ರ ನಿಜಾಮಬಾದ ಜಿಲ್ಲೆಯ ಬೋಧನ ತಾಲೂಕಿನ ಶಾಸನವು ಚಾಲುಕ್ಯದೊರೆ ತ್ರೈಲೋಕ್ಯಮಲ್ಲಾನನ್ನು ಉಲ್ಲೇಖಿಸುತ್ತದೆ. ಬೋಧನ ಇರದ್ರನಾರಾಯಣ ದೇವಾಲಯಕ್ಕೆ ದೊರೆಯ ಪೆರ್ಗ್ಗಡೆ ಜೋಗಪಯ್ಯನು ಜೀಣೊದ್ಧಾರಕ್ಕಾಗಿ ದತ್ತಿ ಬಿಟ್ಟ ವಿಷಯ ತಿಳಿದು ಬರುತ್ತದೆ. ಈ ದೇವಾಲಯವು ರಾಷ್ಟ್ರಕುಟರ ದೊರೆ ಇಂದ್ರವಲ್ಲಭನು ತನ್ನ ರಾಜಧಾನಿ ಬೋಧನದಲ್ಲಿ ಕಟ್ಟಿಸಿದನೆಂದು ಈ ಶಾಸಸನದಲ್ಲಿ ಹೇಳಲಾಗಿದೆ.

ಕ್ರಿ.ಶ. ೧೦೫೮ರ ಗುಲಬರ್ಗಾ ಜಿಲ್ಲೆಯ ಚಿತಾಪೂರ ತಾಲ್ಲೂಕಿನ ನಾಗಾಯಿ(ಹನುಮಾಕ್ಷಿ ಗೋಗಿ, ಕಲಬುರ್ಗಿ ಜಿಲ್ಲೆಯ ಶಾಸನಗಳು, ಪೂರ್ವೋಕ್ತ, ಪು.೧೮೪-೧೯೩) ಶಾಸನವು ಚಾಲುಕ್ಯದೊರೆ ತ್ರೈಲೋಕ್ಯಮಲ್ಲನನ್ನು ದಾಖಲಿಸಿದೆ. ಈ ಶಾನವು ರಾಜಕೀಯ ಮತ್ತು ವಿದ್ಯಾಭ್ಯಾಸದ ಕ್ರಮದ ಕುರಿತು ವಿಪರವಾದ ದಾಖಲೆ ನೀಡುತ್ತಿದೆ. ಇದರಲ್ಲಿ ಚಾಲುಕ್ಯವಂಶವು ಮೂಲತ; ಬ್ರಹ್ಮನಿಂದ ಹುಟ್ಟಿ; ಮನುಷನಿಂದ ಹಾರಿತಿ; ಹಾರಿತಿಯಿಂದ ಚಾಳುಕ್ಯ; ಚಳುಕ್ಯನಿಂದ ತೈಲಪ; ತೈಪನಿಂದ ಸತ್ಯಾಶ್ರಯ ಇರಿವಬೆಡಂಗ, ಈತನಿಂದ; ವಿಕ್ರಮಾದಿತ್ಯ ೫; ಈತನ ತರುವಾಯ ಜಯಸಿಂಹ, ತರುವಾಯ ತ್ರೈಲೋಕ್ಯಮಲ್ಲ (ಸೋಮೇಶ್ವರ ೧) ನವರೆಗೆ ಸುದೀರ್ಘವಾದ ವಂಶಾವಳಿಯನ್ನು ಉಲ್ಲೇಖಿಸುತ್ತದೆ.

ಎರಡನೆ ಸೋಮೇಶ್ವರ: ಈತನು ಒಂದನೆಯ ಸೋಮೇಶ್ವರ ನಂತರ (ಭುವನೈಕಮಲ್ಲ:): ಕ್ರಿ.ಶ. ೧೦೬೮ರಲ್ಲಿ 'ಭುವನೈಕಮಲ್ಲ' ಎಂದು ಬಿರುದುನ್ನಧಿರಿಸಿ, ಸಿಂಹಾಸನ ಏರಿದನು. ಭುವನೈಕಮಲ್ಲನಿಗೆ ಸಂಬಂಧಿಸಿದ ಶಾಸನಗಳು ಕರ್ನಾಟಕದ ರಾಯಚೂರು ಮತ್ತು ಆಂಧ್ರಪ್ರದೇಶ ಮೆದಕ್, ನಲ್ಲೊಂಡ ಮಹಬೂನಗರ, ಜಿಲ್ಲೆಗಳಲ್ಲಿ ಲಭಿಸಿವೆ.

ಈತನ ಆಳ್ವಿಕೆಯ ಮೊದಲವರ್ಷದ ಕ್ರಿ.ಶ. ೧೦೬೮ರ ಮೆದಕ್ ಜಿಲ್ಲೆಯ ಜಹಿರಾಬಾದ್ ತಾಲ್ಲೂಕಿನ ಕೋಹಿರ್(ಕ.ವಿ.ಶಾ.ಸಂ.೫, ಭಾಗ ೨, ಪೂರ್ವೋಕ್ತ, ಪು.೩೧೨) ಶಾಸನವು ಭುವನೈಕಮಲ್ಲದೇವನನ್ನು ದಾಖಲಿಸಿದೆ. ಈ ಶಾಸನದ ಮೂರನೆ ಮುಖದಲ್ಲಿ ದೊರೆಯ ಪಾದಾರಾಧಕನಾದ ಪಂಪಪೆರ್ಮಾಡಿಯನ್ನು ಉಲ್ಲೇಖಿಸುತ್ತದೆ.

ಕ್ರಿಶ ೧೦೬೯ ರಾಯಚೂರು ಜಿಲ್ಲೆಯ ಮಾನ್ವಿತಾಲ್ಲೂಕಿನ ಕಪ್ಪಗಲ್ಲು ಶಾಸನವು ಕಲ್ಯಾಣ ಚಾಲುಕ್ಯ ದೊರೆ ಭುವನೈಕಮಲ್ಲನು ಕೆರೆಯೂರ ನೆಲೆಮಿಡಿನಿಂದ ರಾಜ್ಯಾಭಾರ ಮಾಡುತ್ತಿರುವಾಗ ಈತನ ರಾಣಿ ಪಂಪಾದೇವಿಯನ್ನು ದ್ವಿತೀಯಲಕ್ಷ್ಮಿಸಮಾನೆ, ಚಿಂತಾಮಣಿ ಮುಂತಾದ ಗುಣ ವಶೇಷಣಗಳಿಂದ ಶಾಸನದಲ್ಲಿ ಕರೆಯಲಾಗಿದೆ. ಈಕೆ ಕಪ್ಪಕಲ್ಲ ಭೋಗೇಶ್ವರ ದೇವರಿಗೆ ದಾನ ನೀಡಿದ ಉಲ್ಲೇಖವಿದೆ.

ಕ್ರಿಶ. ೧೦೭೩ರ ಶಾಸನವು(ಕ.ವಿ.ಶಾ.ಸಂ.೭, ಪೂರ್ವೋಕ್ತ, ಪು.೩೫೦-೩೫೩) ಚಾಲುಕ್ಯದೊರೆ ಭುವನೈಕಮಲ್ಲದೇವನು ಬಂಕಾಪುರದಿಂದ ಆಳುತ್ತಿದ್ದನೆಂದು ಉಲ್ಲೇಖಿಸಿದೆ. ಕನ್ನೆ-೩೦೦, ಪೆಡಕಲ್-೮೦೦, ನರವಾಡಿ-೫೦೦, ಅಯಿಜೆ-೩೦೦ಅನ್ನು ಭೀಳವೃತ್ತಿಯಿಂದ ಆಳುತ್ತಿದ್ದನೆಂದು ಉಲ್ಲೇಖಿಸಿದೆ.

ಆರನೆಯ ವಿಕ್ರಮಾದಿತ್ಯ: ಕಲ್ಯಾಣ ಚಾಲುಕ್ಯ ಅರಸರಲ್ಲಿಯೇ ಆರನೆ ವಿಕ್ರಮಾದಿತ್ಯ ಅಪ್ರತಿಮ ವೀರನು; ಶ್ರೇಷ್ಠ ಆಡಳಿತಗಾರನೂ ಆಗಿದ್ದನು. ಈತನನ್ನು ಶಾಸನಗಳಲ್ಲಿ ತ್ರಿಭುವನಮಲ್ಲ; ಪೆರ್ಮ್ಮಡಿದೇವ, ವೆಂದು ಕರೆಯಲಾಗಿದೆ. ಈತನಿಗೆ ಸಂಬಂಧಿಸಿದ ಕನ್ನಡ ಶಾಸನಗಳು ಹೈದರಬಾದ ಕರ್ನಾಟಕ ಪ್ರದೇಶಗಳಾದ ಬೀದರ, ಗುಲಬರ್ಗಾ, ರಾಯಚೂರು, ಕೊಪ್ಪಳ ಜಿಲ್ಲೆಗಳಲ್ಲಿ; ಮತ್ತು ಆಂಧ್ರಪ್ರದೇಶದ ತೆಲಂಗಾಣ ಪ್ರದೇಶಗಳಾದ ಕರೀಮನಗರ, ವರಂಗಲ್, ಮಹಬೂಬನಗರ, ನಲ್ಗೊಂಡ, ಮೆಡಕ್ ಮತ್ತು ನಿಜಾಮಾಬಾದ ಜಿಲ್ಲೆಗಳಲ್ಲಿ ಹೆಚ್ಚಾಗಿ ಲಭಿಸಿವೆ. ಇಡೀ ಕರ್ನಾಟಕದ ರಾಜಮನೆತನಗಳಲ್ಲಿಯೇ ಕಲ್ಯಾಣ ಚಾಲುಕ್ಯರ ಶಾಸಗನಳೇ ಹೆಚ್ಚು; ಅದರಲ್ಲಿಯೂ, ಚಾಲುಕ್ಯದೊರೆ ಆರನೆಯ ವಿಕ್ರಮಾದಿತ್ಯನ ಕಾಲದ ಶಾಸನಗಳೇ ಹೆಚ್ಚು.

ಕ್ರಿ.ಶ.೧೦೬೩ರ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಸಾಲಗುಂದೆ ಶಾಸನವು ಚಾಲುಕ್ಯ ದೊರೆ ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನನ್ನು ಹೆಸರಿಸಿದೆ. ಈ ಶಾಸನದ ಆರಂಭದಲ್ಲಿ ನೂರ್ಮಡಿ ತೈಲಪನಿಂದ ಮೊದಲುಗೊಂಡು ವಿಕ್ರಮಾದಿತ್ಯನವರೆಗೆ ಚಾಲುಕ್ಯರ ವಂಶಾವಳಿಯ ಉಲ್ಲೇಖ ಬರುತ್ತದೆ. ಮತ್ತು ತ್ರಿಭುವನಮಲ್ಲದೇವನ ಮಾಂಡಳಿಕನಾಗಿ ನಾಗದೇವನಿದ್ದನು. ಈವರೆಗೆ ಇತಿಹಾಸಕಾರರು ತ್ರಿಭುವನಮಲ್ಲದ ಆಳ್ವಿಕೆಯ ಕಾಲ ಕ್ರಿ.ಶ. ೧೦೭೬ರ ಎಂದು ಹೇಳಿರುತ್ತಾರೆ. ಆದರೆ ಇದೇ ಶಾಸನದ ೪೪ನೆಯ ಸಾಲಿನಲ್ಲಿ ಶಕ ವರ್ಷ ೯೮೫ ಎಂದಿದ್ದು; ಇದರ ಪ್ರಕಾರ ಈತನ ಆಳ್ವಿಕೆ ಕ್ರಿ.ಶ. ೧೦೬೩ ರಿಂದಲೇ ಆತನ ಮಂಡಳಿಕನಾದ

ನಾಗದೇವನನ್ನು ಬಹುವಾಗಿ ಹೊಗಳಾಗಿದೆ. ಆದರೆ ಇದೇ ಶಾಸನದ ೫೦ನೆಯ ಸಾಲಿನಲ್ಲಿ ಚಾಳುಕ್ಯವಿಕ್ರಮ ವರ್ಷ ೦೯ ರಕ್ತಾಕ್ಷಿ ಸಂವತ್ಸರ ಉಲ್ಲೇಖ ಬಂದಿದೆ. ಇದರಿಂದಾಗಿ ಕ್ರಿ.ಶ. ೧೦೮೫ಕ್ಕೆ ಸರಿ ಹೊಂದುತ್ತದೆ. ಹೀಗಾಗಿ ತ್ರಿಭುವನಮಲ್ಲ ಆಳ್ವಿಕೆ ಬಜಿತಕಾಲ ಯಾವುದೆಂಬುದು ಗೊಂದಲದ ವಿಷಯವಾಗಿದೆ.

ಕ್ರಿ.ಶ. ೧೦೭೪ರ ಗುಗಲಬರ್ಗಾ ಜಿಲ್ಲೆಯ ಸುರುಪು ತಾಲೂಕಿನ ಬೈಚಬಾಳ(ಹನುಮಾಕ್ಷಿ ಗೋಗಿ, ಸುರಪುರ ತಾಲೂಕಿನ ಶಾಸನಗಳ್ಲು, ಪೂರ್ವೋಕ್ತ, ಪು.೧೦೦–೧೦೧) ಶಾಸನವು ಚಾಲುಕ್ಯದೊರೆ ತ್ರಿಭುವನ ಮಲ್ಲದೇವನನ್ನು ದಾಖಲಿಸುತ್ತದೆ. ಈ ಶಾಸನದಲ್ಲಿ ಶಕ ವರ್ಷ ೯೯೬ರ ಉಲ್ಲೇಖ ಬಂದಿದ್ದು; ಹಾಗಾಗಿ ಇದು ಕ್ರಿ.ಶ. ೧೦೭೪ಕ್ಕೆ ಸರಿಹೊಂದುತ್ತದೆ. ಅದಕ್ಕಾಗಿ ಇತಿಹಾಸಕಾರರು ಈವರೆಗೆ ಚಾಲುಕ್ಯದೊರೆ ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕಾಲ ೧೦೭೬ ರಿಂದ ಆರಂಭವಾಗುತ್ತದೆ ಎಂದು ಹೇಳಿರುವವರು. ಈ ಶಾಸನದಿಂದಾಗಿ ಆತನ ಆಳ್ವಿಕೆಯು ಕ್ರಿ.ಶ.೧೦೭೪ ಎಂದೇ ಹೇಳಬಹುದು.

ಕ್ರಿ.ಶ.೧೦೭೫–೭೬ರ ಗುಲಬರ್ಗಾ ಜಿಲ್ಲೆಯ ತಾಲೂಕಿನ ವಡಗೇರಿಯಲ್ಲಿ ದೊರೆತ ಶಾಸನವು ದೊರೆ ಆರನೆ ವಿಕ್ರಮಾದಿತ್ಯನ ಪಟ್ಟಾಭಿಷೇಕವನ್ನು ಸೂಚಿಸುತ್ತದೆ. ಈತನು ತನ್ನ ಆಳ್ವಿಕೆ ಶಕವನ್ನು ತನ್ನ ಪಟ್ಟಾಭಿಷೇಕ ವರ್ಷದಿಂದಲೇ ಆರಂಭಿಸಿದನೆಂದು ತಿಳಿದುಬರುತ್ತದೆ. ಐವೂರು ಮುಂತಾದ ಶಾಸನಗಳಿಂದ ತಿಳಿದುಬರುತ್ತದೆ. ಈ ಕಾಲಾವಧಿಯಿಂದ ಈತನು ಸುಮಾರು ಐವತ್ತು ವರ್ಷಗಳ ಕಾಲ ರಾಜ್ಯಭಾರ ಮಾಡಿದನೆಂದು ಹೇಳಬಹುದು. ಈತನು ತನ್ನ ಆಡಳಿತ ಚಾಣಕ್ಷತನದಿಂದ ತನ್ನ ಭೂಪ್ರದೇಶವನ್ನು ಆಡಳಿತದ ಅನುಕೂಲತೆಗಾಗಿ ಅನೇಕ ಭಾಗಗಳಾಗಿ ಮಾಡಿ, ಇಡೀ ಆಡಳಿತದಲ್ಲಿ ವಿಕೇಂದ್ರಿಕರಣ ನೀತಿ ಜಾರಿಗೆ ತಂದನೆಂದು ತಿಳಿದುಬರುತ್ತದೆ. ರಾಜಕೀಯ ಚಾಣಕ್ಷತವುಳ್ಳ ಈತನು ಆಡಳಿತ ತಂತ್ರಗಾರಿಕೆಯಿಂದ ಅನೇಕ ವೈರಿ ರಾಜರುಗಳನ್ನು ದಮನ ಮಾಡಿ, ತನ್ನ ಸಾರ್ವಭೌಮತ್ವವನ್ನು ಸಾಧಿಸಿ ಶ್ರೇಷ್ಠ ದೊರೆಯನಿಸಿದ್ದನು. ಈತನ ಆಡಳಿತದಲ್ಲಿ ಚೋಳ, ಚಾಲುಕ್ಯ ಸಂಬಂಧಗಳು ತುಂಬಾ ಕ್ಲಿಷ್ಟಕರವಾಗಿದ್ದವು. ಅವುಗಳನ್ನು ಅತಿ ಸೂಕ್ಷ್ಮವಾಗಿ ಗಮನಿಸಿ ಅವುಗಳನ್ನು ಸರಿದಾರಿಗೆ ತರುವ ನಿಟ್ಟಿನಲ್ಲಿ ಅವರೊಂದಿಗೆ ವೈವಾಹಿಕ ಸಂಬಂಧಗಳನ್ನು ಏರ್ಪಡಿಸಿದ್ದನು. ವಿಕ್ರಮಾದಿತ್ಯನು ತಾನು ಚಿಕ್ಕವನಿರುವಾಗಲೇ ತನ್ನ ತಂದೆಯೊಂದಿಗೆ ಅನೇಕ ಯುದ್ಧಗಳಲ್ಲಿ ಭಾಗವಹಿಸಿದ್ದನು. ವಿಕ್ರಮಾದಿತ್ಯನು ಇಡೀ ಭಾರತ ಪ್ರದೇಶಗಳಾದ ದಕ್ಷಿಣ ದಂಡೆಯಾತ್ರೆ ಮತ್ತು ಉತ್ತರ ದಂಡೆಯಾತ್ರೆಗಳು ಪ್ರಸಿದ್ಧಿ ಪಡೆದಿವೆ. ವಿಕ್ರಮಾದಿತ್ಯನ ಉತ್ತರಭಾಗದ ಯುದ್ಧಗಳು ಒಂದು ರೀತಿಯಲ್ಲಿ ರಾಜಕೀಯ ಮತ್ತು ಆಡಳಿತದ ವಿಸ್ತರಣೆ ಮಾಡುವುದರ ಜೊತೆಗೆ ಸಾಂಸ್ಕೃತಿಕ ಚಿರಬಾಂಧವ್ಯಗಳನ್ನು ಗಟ್ಟಿಗೊಳಿಸಿದನೆಂದು

ಹೇಳಬಹುದು. ಈತನ ಸಾಂಸ್ಕೃತಿಕ ಸಂಬಂಧಗಳು ಕಾಶ್ಮೀರದಿಂದ ಹಲವಾರು ಜನ ಕಾಳಾಮುಖ ಆಚಾರ್ಯರು ಶೈವ ಪಂಡಿತರು ಇವರುಗಳ ಜೊತೆಗೆ ಬಿಲ್ಹಣನಂತಹ ಕವಿಗಳು ಕರ್ನಾಟಕಕ್ಕೆ ಬಂದು ನೆಲೆಸುವಂತಾಯಿತು.

ದೊರೆ ಆರನೇ ವಿಕ್ರಮಾದಿತ್ಯನು ರಾಜ್ಯಭಾಗ ಮಾಡುವಾಗ ಆತನ ಮಹಾ ಸಾಮಂತಾಧಿಪತಿಯಾದ ಮಹಾಪ್ರಚಂಡ ದಂಡಾಧಿಪತಿಯಾದ ಕಾಳಿಯರಸನು ವಿಕ್ರಮಾದಿತ್ಯನಿಗೆ ಉತ್ತರದ ಹಿಮಾಲಯದಿಂದ ಸಮುದ್ರವರೆಗಿನ ಪ್ರದೇಶಗಳನ್ನು ಗಳಿಸಿಕೊಟ್ಟನೆಂದು ವಿವರಿಸುತ್ತದೆ. ಅದರಲ್ಲಿ ಬಹುಮುಖ್ಯ ಪ್ರದೇಶಗಳಾದ ಕಳಿಂಗ, ಅಂಗ, ವಂಗ, ಬರ್ಬರ, ಕಾಶ್ಮೀರ ಮೊದಲಾದ ಭಾಗಗಳಿಗೆ ಹೋಗಿ ಮಹಾಮಂಡಳೇಶ್ವರ ತ್ರಿಭುವನಮಲ್ಲ ಪಾಂಡ್ಯನು ಈ ಪ್ರಾಂತ್ಯಗಳನ್ನು ಜಯಿಸಿಕೊಟ್ಟನೆಂದು ಈ ಶಾಸನದಿಂದ ತಿಳಿದುಬರುತ್ತದೆ. ಇವು ಉತ್ತರಭಾಗದಲ್ಲಿ ಸಾಂಸ್ಕೃತಿಕ ಸಂಬಂಧಗಳನ್ನು ಬೆಳೆಸುವಲ್ಲಿ ಸಹಾಯಕವಾಗಿದ್ದವು.

ಕಲಬುರ್ಗಿ ಜಿಲ್ಲೆಯ ಚಿತ್ತಾಪೂರ ತಾಲೂಕಿನ ನಾಗಾಯಿ ೧೧೦೮ರ ಶಾಸನವು ದೊರೆ ಆರನೇ ವಿಕ್ರಮಾದಿತ್ಯನ ಕಾಲದ ಹಲವು ವಿಚಾರಗಳನ್ನು ತಿಳಿಸುತ್ತದೆ. ಅವುಗಳಲ್ಲಿ ಬ್ರಾಹ್ಮಣ ಧರ್ಮಿಯನಾದ ನಾರಾಯಣನನ್ನು ಮಹಾ ಅಮಾತ್ಯನು ಮತ್ತು ದಂಡನಾಯಕನಾಗಿದ್ದನೆಂದು ತಿಳಿಸುತ್ತದೆ. ಹಾಗೂ ಈತನು ವಿಕ್ರಮಾದಿತ್ಯನ ಆಧೀನದಲ್ಲಿದ್ದನೆಂದು ತಿಳಿದುಬರುತ್ತದೆ. ನಾರಾಣಯ್ಯ ನಾಯಕನು ಇಲ್ಲಿ ತ್ರೈಪುರುಷರ ದೇವರ ಶಾಲಾ, ರಾಮೇಶ್ವರ ದೇವಾಲಯ, ರಾಮತೀರ್ಥನೆಂಬ ಪುಷ್ಕರಣೆ ಮತ್ತು ಮಧುಸೂಧನ ದೇವಾಲಯಗಳನ್ನು ಮಧುವರಸ ಮತ್ತು ಆತನ ಮಗ ಕಾಳಿಯರಸನ ಅನುಮತಿಮೇರೆಗೆ ಕಟ್ಟಿಸಿದನೆಂದು ಈ ಶಾಸನವು ದಾಖಲಿಸಿದೆ.

ಇದೇ ನಾಗಾಯಿ ಶಾಸನದಲ್ಲಿ ಚಾಲುಕ್ಯರ ಮನೆತನದ ವಂಶಾವಳಿ ಕಂಡುಬರುವುದುನ್ನು ಶ್ರೀ ಸೀತಾರಾಮ ಜಾಗೀರದಾರ ಅವರು(ಸೀತಾರಾಮ ಜಾಗೀರದಾರ : ಶಾಸನ ಅಧ್ಯಯನ ಸಂಪುಟ ೨, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ), ಇಲ್ಲಿ ಚಾಲುಕ್ಯರ ಆರಂಭದ ದೊರೆಯಿಂದ ಆರನೇ ವಿಕ್ರಮಾದಿತ್ಯನವರೆಗೆ ರಾಜರುಗಳ ಉಲ್ಲೇಖವಿದೆ. ಶ್ರೀ ಜಾಗೀರದಾರ ಅವರು ಈ ಮನೆತನಕ್ಕೆ ಸಂಬಂಧಿಸಿದ ಕೆಲ ಹೊಸ ಸಂಗತಿಗಳನ್ನು ದಾಖಲಿಸಿದ್ದಾರೆ. ರಾಜರನ್ನು ದೇವರಿಗೆ ಹೋಲಿಸುವುದು ಅಂತಹ ಉಲ್ಲೇಖಗಳು ಹಲವಾರು ಬರುತ್ತವೆ. ತ್ರಿಭುವನಮಲ್ಲ ವಿಕ್ರಮಾದಿತ್ಯನನ್ನು ಮಹಾವಿಷ್ಣುವಿಗೆ ಹೋಲಿಸಲಾಗಿದೆ. ಇದರಿಂದಾಗಿ ರಾಜನು ಸಾಕ್ಷಾತ್ ಪ್ರತ್ಯಕ್ಷ ದೇವರು ಎಂಬ ಮಾತು ಸ್ಪಷ್ಟವಾಗುತ್ತದೆ.

ಕ್ರಿ.ಶ.೧೧೦೭ರ ಬೀದರ ಜಿಲ್ಲೆಯ ಶಾಸನ, ಮತ್ತು ರಾಯಚೂರನ ಜಿಲ್ಲೆಯ ಲಿಂಗಸುಗೂರಿನ ಶಾಸನವು ಮತ್ತು ಗುಲಬರ್ಗಾ ಜಿಲ್ಲೆಯ ಸುರಪುರ ತಾಲೂಕಿನ ಏವೂರಿನ ಶಾಸನವು

ಚಾಲುಕ್ಯದೊರೆ ತ್ರಿಭುವನಮಲ್ಲದೇವನನ್ನು ಉಲ್ಲೇಖಿಸಿವೆ. ಏವೂರಿನ ಸಾನವು ತ್ರಿಭುವನಮಲ್ಲ ಆರನೇಯ ವಿಕ್ರಮಾದಿತ್ಯನ ದಂಡನಾಯಕನಾದ ರವಿಗಚಮೂಪನು ಮೊದಲನೆ ಸೋಮೇಶ್ವರನ ಕಾಲದಲ್ಲಿ ಲಾಳಸಂಧಿವಿಗ್ರಹಿಯಾಗಿ, ಎರಡನೆ ಸೋಮೇಶ್ವರನ ಕಾಲದಲ್ಲಿ ಹೇರಿಸಂಧಿ ವಿಗ್ರಹಿಯಾಗಿ, ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನ ಕಾಲದಲ್ಲಿ ಶ್ರೀಮನ್ಮಹಾ ಪ್ರಾಧಾನರ ಹೇರಿಲಾಳ ಸಂಧಿವಿಗ್ರಹಿ ದಂಡನಾಯಕನಾಗಿ ಹಂತ ಹಂತವಾಗಿ ಉನ್ನತ ಹುದ್ದೆಗೆ ಏರಿದುದನ್ನು ಈ ಶಾಸನ ವಿವರಿಸುತ್ತದೆ.

ಇದೇ ಕಾಲಕ್ಕೆ ಹೊಂದುವ ಕ್ರಿ.ಶ.೧೦೭೭ರ ಶಾಸನವು ಚಾಲುಕ್ಯ ದೊರೆ ತ್ರಿಭುವನಮಲ್ಲ ಕಲ್ಯಾಣ ನಾಡಿನಿಂದ ಆಳುತ್ತಿರುವಾಗ ಆತನ ಮಹಾಮಂಡೇಳ್ವರನಾದ ಸಂಕರಗಂಡರಸನ್ನು ಸಮರಜಧೀರಂ; ಭುವನೈಕರಾಮ; ಭೀಮ; ಮೂರು ಲೋಕದಗಾರದ, ಪರಿನಾರಿಪುತ್ರ; ಮೈಲಾರದೇವರ ಪ್ರಸಾದದಿಂದ ಹುಟ್ಟಿದವ ಹಲವಾರು ಬಿರುದಾಂಕಿ ತದಿಂದ ಈ ಶಾಸನದಲ್ಲಿ ಹೊಗಳಾಗಿದೆ.

ಕ್ರಿ.ಶ. ೧೦೮೧ರ ನಲ್ಗೊಂಡ ಜಿಲ್ಲೆಯ ಕೊಳ್ಳಿಪಾಕೆ ಶಾಸನವು ಚಾಲುಕ್ಯದೊರೆ ವಿಕ್ರಮಾದಿತ್ಯ ೬ನ ಮಹಮಂಡಳೇಶ್ವರನಾದ ದೊರೆಯಿಂದ ತಾಮ್ರಶಾಸನದ ಮೂಲಕ ಕೊಳ್ಳಿಪಾಕೆ ೭೦೦೦ಅನ್ನು ಪಡೆದು ರಾಜಧಾನಿ ಕೊಳ್ಳಪಾಕೆಯಿಂದ ಆಳುತ್ತಿದ್ದ ಕಾಮರಸನ ರಾಜ್ಯಭಾರದ ಬಗ್ಗೆ ತಿಳಿಸುತ್ತದೆ. ಇದರಲ್ಲಿ ಕಾಮರಸನ ವಂಶಾವಳಿಯ ಉಲ್ಲೇಖ ಬರುತ್ತದೆ. ಹೀಗಾಗಿ ಕೊಳ್ಳಿಪಾಕೆಯು ಈತನ ಆಳ್ವಿಕೆಗೆ ಒಳಪಟ್ಟಿಂತೆಂದು ತಿಳಿದುಬರುತ್ತದೆ.

ಕ್ರಿ.ಶ. ೧೧೧೭ರ ವರಂಗಲ್ ಜಿಲ್ಲೆಯ ಹನುಮಕೊಂಡ ಶಾಸನವು ಚಾಲುಕ್ಯದೊರೆ ತ್ರಿಭುವನಮಲ್ಲ ವಿಕ್ರಮಾದಿತ್ಯ ೬ನನ್ನು ಉಲ್ಲೇಖಿಸುತ್ತದೆ. ಇದರಲ್ಲಿ ಅನ್ಮಕುಂಡಪುರವರಾಧೀಶ್ವರ ನಾಥ ಕಾಕತಿ ಬೇತರಸನ ಆಳ್ವಿಕೆಯನ್ನು ಹೇಳಿದೆ. ಈತನು ವಿಕ್ರಮಾದಿತ್ಯನ ೬ನ ಮಹಾಮಂಡಳೇ ಶ್ರರನಾಗಿದ್ದನೆಂದು ತಿಳಿಸುತ್ತದೆ.

ಕ್ರಿ.ಶ.೧೧೦೮ರ ವರಂಗಲ್ ಜಿಲ್ಲೆಯ ಬೈರಾನಿಪಲ್ಲಿ ಶಾಸನವು ತ್ರಿಭುವನಮಲ್ಲನ ಆಳ್ವಿಕೆಯ ಬಗ್ಗೆ ತಿಳಿಸುತ್ತದೆ. ಈತನ ದಂಡನಾಯಕನಾದ ಬೀರಂಮರೆಡ್ಡಿಯು ರಡ್ಡಿಕುಲದ ಪಟ್ಟಿವಂಶಕ್ಕೆ ಸೇರಿದವನೆಂದು ಉಲ್ಲೇಖಿಸುತ್ತದೆ. ಕ್ರಿ.ಶ. ೧೧೧೦ರ ನಲ್ಗೊಂಡ ಜಿಲ್ಲೆಯ ಕೊಲನುಪಕ ಶಾಸನವು ಚಾಲುಕ್ಯದೊರೆ ವಿಕ್ರಮಾದಿತ್ಯ ೬ನ ಮಗನಾದ ಮಹಾಮಂಡಳೇಸ್ವರ ಸೋಮೇಶ್ವರನು ಗಂಗರ ಬಿರುದುಗಳನ್ನು ಪಡೆದು 'ಗಂಗಪೆರ್ಮಾಡಿ' ಯಾದುದ್ದನ್ನು ಉಲ್ಲೇಖಿಸಿದೆ.

ಕ್ರಿ.ಶ.೧೧೧ರ ಅದೇ ಊರಿನ ಇನ್ನೊಂದು ಶಾನವು ಜಯಂತಿಪುರದಿಂದ ಆಳುತ್ತಿದ್ದ ಚಾಲುಕ್ಯದೊರೆ ತ್ರೀಭುವನಮಲ್ಲದೇವ ಹಾಗೂ ಆತನ ಮಗ ಸೋಮೇಶ್ವರನು ಕೊಳ್ಳಿಪಾಕೆ

೭೦೦೦ನು ಆಳುತ್ತಿದ್ದನೆಂದು, 'ಗಂಗಪವ್ಯಡಿ' ಎಂಬ ಗಂಗರ ಬಿರುದುಗಳನ್ನು ಹೊಂದಿದ್ದನೆಂದು ಉಲ್ಲೇಖಿಸಿದೆ.

ಕ್ರಿ.ಶ.೧೧೧೩ರ ಮಹಬೂಬನಗರ ಜಿಲ್ಲೆಯ ಅವಂಚ ಶಾಸನವು ದೊರೆ ತ್ರಿಭುವನಮಲ್ಲನು ಜಯಂತಿಪುರದಿಂದ ರಾಜ್ಯಭಾರ ಮಾಡುವಾಗ ಆತನ ಪುತ್ರ ಮಹಾಮಂಡಳೇಶ್ವರನಾದ ಕುಮಾರ ತೈಲಪದೇವನು ರಿಪುರಾಯಕುವರ, ಅನೇಕ ಬಿರುದಾವಳಿಗಳನ್ನು ದಿಗ್ವಜಯಗಳನ್ನು ಉಲ್ಲೇಖಿಸಿದೆ. ಮತ್ತು ಅವನು ಅವಂಚೆಯ ಪಂಚಮಸಾಲಿಗರಿಗೆ ಅನುಕೂಲಕೆ ಮಾಡಿ ಕೊಟ್ಟದ್ದನ್ನು ತಿಳಿಸುತ್ತದೆ.

ಕ್ರಿ.ಶ. ೧೧೨೧ರ ಮೆಹಬೂನಗರ ಜಿಲ್ಲೆಯ ನೆಖೆಂಡ ಬೀದರ ಜಿಲ್ಲೆಗಳು ಚಾಲುಕ್ಯದೊರೆ ತ್ರಿಭುವನಮಲ್ಲ ಮತ್ತು ಆನತ ರಾಣಿ ಚಂದಲದೇವಿಯ ಮಗ ಮಹಾಮಂಡಳೇಶ್ವರ ಕುಮಾರ ತೈಲಪದೇವನ ರಾಜ್ಯಭಾರವನ್ನು ಸೂಚಿಸುತ್ತದೆ. ಮತ್ತು ಕುಮಾರ ತೈಲಪದೇವ, ಅನವ ರಾಣಿ ಲಕ್ಷ್ಮಾದೇವಿ, ಇವರ ಮಕ್ಕಳಾದ ಪಡಮರ್ಾಡಿದೇವ, ಬಿಕ್ಕಿದೇವರು ಕೇಳೂರಿನ ರಾಜಧಾನಿಯಲ್ಲಿ ರಾಜ್ಯಭಾರ ಮಾಡುತ್ತಿದ್ದಂದ್ದನ್ನು ಉಲ್ಲೇಖಿಸಿವೆ.

ಕ್ರಿ.ಶ. ೧೧೨೫ರ ಬೀದರ ಜಿಲ್ಲೆಯ ಬಸವಕಲ್ಯಾಣದ ಮುಚಳಂಬ ಶಾಸನವು(ಕ.ವಿ.ಶಾ.ಸಂ.೮, ಪು.೧೬೪-೧೬೭). ಚಾಲುಕ್ಯದೊರೆ ತ್ರಿಭುವನಮಲ್ಲನು ಜಯಂತಿಪುರದಿಂದ ಆಳುತ್ತಿದ್ದಾಗ. ರಾಜ ನಾರಾಯಣಪುರದ ಸ್ಥಳದ ಕಾಲಳ್ಳಿಯ ಮುಚುಳಂಬಿಯ ರಾಮೇಶ್ವರದೇವರಿಗೆ ಮೊದಲು ನೀಡಿದ ೮೦ ಮತ್ತರು ಹೊಲವನ್ನು ಮತ್ತು ೧೨ ಮತ್ತರು ತೋಟವನ್ನು, ಎರಡು ನಿವೇಶನಗಳನ್ನು ಮೊದಲು ನೋಡಿಕೊಳ್ಳುತ್ತಿದ್ದ ಗೊರವರು ತಮ್ಮ ಆಧೀನದಲ್ಲಿಟ್ಟಿಕೊಂಡಿದ್ದರು. ಆ ಊರಿನ ಮಹಾಜನಗಳು ಅವರನ್ನು ಒಕಲೆಬ್ಬಿಸಿ, ಆ ಭೂಮಿಯನ್ನು ಬಿಡಿಸಿಕೊಂಡು ಪುನಃ ದೇವರಿಗೆ ನೀಡಿದುದರ ಉಲ್ಲೇಖವಿದೆ.

ಕ್ರಿ.ಶ.೧೯೮೦-೧೧೧೫ರ ಬೀದರ ಜಿಲ್ಲೆಯ ರಂಜೇರಿನ ಶಾಸನವು ಆರಂಭದಲ್ಲಿ ಚಾಲುಕ್ಯ ಅರಸ, ಕತ್ತಿಯರಸನನ್ನು ರಾಷ್ಟ್ರಕೂಟರ ಮೂಲೆಗೆ ತಳ್ಳಿದರೆಂದೂ, ರಾಷ್ಟ್ರಕೂಟರನ್ನು ತೈಲಪನು ಮೂಲೆಗೆ ತಳ್ಳಿದನೆಂದೂ ತಿಳಿಸುತ್ತದೆ. ಅಲ್ಲದೆ ಚಾಲುಕ್ಯರ ವಂಶಾವಳಿ ಬಗ್ಗೆ ತಿಳಿಸುತ್ತದೆ. ರಾಷ್ಟ್ರಕೂಟರನ್ನು ಮೂಲೆಗೆ ತಳ್ಳಿದ ಈ ತೈಲಪ ಈತನ ಮಗನೇ ದಶವರ್ಮ ಈತನ ಮಗ ಜಯಸಿಂಹ, ಜಯಸಿಂಹನ ಮಗ ಆಹವಮಲ್ಲ. ಈತನ ಮಗನೇ ವಿಕ್ರಮಾದಿತ್ಯನೆಂದು ಉಲ್ಲೇಖಿಸಿದೆ. ತ್ರಿಭುವನಮಲ್ಲನು ರಾಜ್ಯಭಾರ ಮಾಡುತ್ತಿದ್ದು; ಈ ಭೂಮಿಯಲ್ಲಿ ಕುಂತಳದೇರದ ಭಾಗವಾಗಿ 'ಅಟ್ಟಳೆನಾಡು' ಚೆಲುವಾಗಿತ್ತು. ಅದರಲ್ಲಿ ರಾಂಜೇರಿನ ಸಿರಧರವಂಶ ಪ್ರಖ್ಯಾತಿಹೊಂಬಿತು. ಅಲ್ಲದೆ ರಂಜೇರಿನ ಸಿರಧರ ವಂಶಾವಳಿ ಬಗ್ಗೆ ಉಲ್ಲೇಖಿಸಿದೆ.

ಕ್ರಿ.ಶ.೧೧೨೪ರ ರಾಯಚೂರು ಜಿಲ್ಲೆಯ ಲಿಂಗಸೂಗೂರು ಶಾಸನವು ಚಾಲುಕ್ಯದೊರೆ ತ್ರಿಭುವನ ಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿರುವಾಗ ಆತನ ರಾಣಿ ಅಬ್ಬಲದೇವಿಯು ಕರಡಿಕಲ್ಲು–೩೦೦ರ ಬಳಿಯ ಲಿಂಗವನ್ನು ಆಳುತ್ತಿದ್ದಳೆಂದು ತಿಳಿಸುತ್ತದೆ. ಅಲ್ಲದೆ ಆಕೆಯನ್ನು ಸಹಸ್ರಫಳ, ಭೋಗಭಾಗಿನಿ, ದ್ವಿತೀಯ ಲಕ್ಷ್ಮಿಸಲೂನೆ, ಕಳಹಾಸೆಯಾನೆ, ರೂಪವಿದ್ಯಾಧರಿ, ಕಸ್ತೂರಿಕಾಮೋದೆ ಇತ್ಯಾದಿ ವಿಶೇಷಗಳಿಂದ ಹೊಗಳಿದೆ.

ಕ್ರಿ.ಶ.೧೧೧೮ರ ಕಲ್ಬುರ್ಗಿ ಜಿಲ್ಲೆಯ ಸುರಪೂರ ತಾಲ್ಲೂಕಿನ ಬೊಮ್ಮನಹಳ್ಳಿ ಶಾಸನವು ಚಾಲುಕ್ಯದೊರೆ ವಿಕ್ರಮಾದಿತ್ಯನ ಇನ್ನಬ್ಬ ರಾಣಿ ಧಾರಲದೇವಿಯನ್ನು ಹೆಸರಿಸಿದೆ. ಈಕೆಯನ್ನು ದ್ದಿತೀಯ ಲಕ್ಷ್ಮಿ, ಪ್ರತ್ಯಕ್ಷಗಿರಿಜ್, ಗುಣದಂಕಾರ್ತಿ; ಮಹಾಸತಿಳಿಕೆ; ಇತ್ಯಾದಿಯಾಗಿ ಬಿರುದಾವಳಿಯನ್ನು ಹೊಂದಿದೆ ಈಕೆಯನ್ನು ಉಲ್ಲೇಖಿಸಿದಿದ್ದು ಗಮನಾರ್ಹವಾಗಿದೆ.

ಕ್ರಿ.ಶ. ೧೧೨೪ರ ರಾಯಚೂರು ಜಿಲ್ಲೆಯ ಲಿಂಗಸೂಗೂರಿನ ಶಾಸನವು ಚಾಲುಕ್ಯ ದೊರೆ ತ್ರಿಭುವನಮಲ್ಲನ್ನು ಕಲ್ಯಾಣದಿಂದ ಆಳುತ್ತಿದ್ದಾಗ ಈತನ ರಾಣಿ ಅಬ್ಬಲದೇವಿಯು ಕರಡಿಕಲ್ಲು–೩೦೦೦ರ ಬಳಿಯ ಲಿಂಗವನ್ನು ಆಳುತ್ತಿದ್ದಳೆಂದು ಉಲ್ಲೇಖಿಸಿದೆ.

ಮೂರನೆ ಸೋಮೇಶ್ವರ: ೧೧೨೭–೧೧೪೫(ಭೂಲೋಕಮಲ್ಲ): ಆರನೆಯ ವಿಕ್ರಮಾದಿತ್ಯನ ತರುವಾಯ ಆತನ ರಾಣಿ ಚಂದ್ರಲೇಖೆಯಲ್ಲಿ ಜನಿಸಿದ ಮೂರನೆ ಸೋಮೇಶ್ವರನು ಅಧಿಕಾರಕ್ಕೆ ಬಂದನು. ಈತನ ಆಳ್ವಿಕೆಗೆ ಸಂಬಂಧಿಸಿದ ಶಾಸನಗಳು ಹೈದ್ರಾಬಾದ–ಕರ್ನಾಟಕದ ಪ್ರದೇಶಗಳಾದ ಬೀದರ, ಕಲ್ಬುರ್ಗಿ, ರಾಯಚೂರು, ಕೊಪ್ಪಳ ಮತ್ತು ತೆಲಂಗಾಣ ಪ್ರದೇಶಗಳಲ್ಲಿ ಲಭಿಸಿವೆ.

ಕ್ರಿ.ಶ. ೧೧೨೫ರ ಆಂಧ್ರಪ್ರದೇಶದ ಮಹಬುಬನಗರ ಜಿಲ್ಲೆಯ ಜಡಚೆರ್ಲ(ಕ.ವಿ.ಶಾ.ಸಂ.೫, ಭಾಗ.೨, ಪೂರ್ವೋಕ್ತ, ಪು.೬೨–೬೩) ಶಾನವು ಮೂರನೆ ಸೋಮೇಶ್ವರನನ್ನು ಉಲ್ಲೇಖಿಸಿದೆ. ಈ ಶಾಸನದಲ್ಲಿ ಶಕವರ್ಷ ೧೦೪೭ ಎಂದು ಇರುವುದರಿಂದ ಕ್ರಿ.ಶ.೧೧೨೫ರಲ್ಲಿಯೇ ಪಟ್ಟಕ್ಕೆ ಬಂದಿದ್ದನೆಂದು ಹೇಳಬಹುದು. ಆಣೆ ಇತಿಹಾಸದ ಪ್ರಕಾರ ಆಗ ಇನ್ನೂ ಆರನೆ ವಿಕ್ರಮಾದಿತ್ಯನ ಆಳ್ವಿಕೆ ನಡೆಯುತ್ತಿತ್ತು. ಎಂದು ಇತಿಹಾಸ ಕೃತಿಗಳಲ್ಲಿ ಕಂಡುಬರುತ್ತದೆ. ಈತನನ್ನು ಸರ್ವಜ್ಞಚಕ್ರವರ್ತಿ, ಭೂಲೋಕಮಲ್ಲನೆಂದು ಹೆಸರಿಸಲಾಗಿದೆ. ಈತನು ಕಲ್ಯುಣಪುರದಿಂದ ಆಳುತ್ತಿದ್ದಾನೆಂದು ಉಲ್ಲೇಖಿಸಿದೆ.

ಕ್ರಿ.ಶ.೧೧೨೮ರ ರಾಯಚೂರು ಜಿಲ್ಲೆಯ ಲಿಂಗಸೂಗೂರಿನ ನವಿಲೆ ಗ್ರಾಮದ ಶಾಸನವು ಚಾಲುಕ್ಯ ದೊರೆ ಭೂಲೀಕಮಲ್ಲನು ನವಿಲೆ ಗ್ರಾಮದ ಜಡೆಯ ಶಂಕರದೇವರ ಅಂಗಭೋಗ

ರಂಗಭೋಗ, ನೈವೇದ್ಯ ಮತ್ತು ಖಂಡಸ್ಫುಟಿತ ಜೀರ್ಣೋದ್ಧಾರಕ್ಕೆ ಕರಡಿಕಲ್ಲ ನಾಡಿನ ಬಳಿಯ ಒಂದು ಗ್ರಾಮವನ್ನು ದಾನವನ್ನಾಗಿ ಬಿಟ್ಟಿದ್ದುದ್ದನ್ನು ಉಲ್ಲೇಖಿಸಿದೆ.

ಕ್ರಿ.ಶ.೧೧೨೮ರ ಆಂಧ್ರಪ್ರದೇಶದ ಕರೀಂನಗರ ಜಿಲ್ಲೆಯ ಸನಿಗರಂ(ಕ.ವಿ.ಶಾ.ಸಂ.೫, ಭಾಗ.೨, ಪೂರ್ವೋಕ್ತ, ಪು.೧೬೫-೧೬೬) ಶಾಸನವು ಚಾಲುಕ್ಯದೊರೆ ಭೂಲೋಕಮಲ್ಲದೇವನ ಆಳ್ವಿಕೆಯನ್ನು ಹೆಸರಿಸಿದೆ. ಈತನ ಮಾಹಾಮಂಡಳೇಶ್ವರನಾದ ಕಾಕತೀಯ ಪೇಳಲರಸನ ಪಾದವಿದ್ಮೋಪಜೀವಿ ಸೌದೊರೆ ರೇಪೂಲ ಕುಕುವರಾಜು ಎಂಬುವವನು ಕೊಮ್ಮೇಶ್ವರ ದೇವರಿಗೆ, ತಪೋಧಶನರಿಗೆ ಭೂಮಿಯನ್ನು ದತ್ತಿಯಾಗಿ ನೀಡಿದನೆಂದ ಹೇಳಿದೆ.

ಕ್ರಿ.ಶ.೧೧೩೯ರ ಬೀದರ ಜಿಲ್ಲೆಯ ಬಸವಕಲ್ಯಾಣದ ನಾರಾಯಣಪುರ(ಕ.ವಿ.ಶಾ.ಸಂ.೮, ಪೂರ್ವೋಕ್ತ ಪು.೧೦೭). ಶಾಸನವು ಚಾಲುಕ್ಯ ದೊರೆ ಭೂಲೋಕಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿದ್ದನೆಂದು; ಈತನ ಮಹಾ ಮಂಡಳೇಶ್ವರನಾಗಿ ಪೆರ್ಮಾಡಿಯರಸನಿರುತ್ತಾನೆ. ಈತನನ್ನು ಭೋಗಾವತಿ ಪ್ರರವವೇಶ್ವರ, ಪರವಧೂ ಕಂದ, ವಿದ್ದಜ್ಜನ ಪಾರಿಜಾತ, ಮುಂತಾಗಿ ಕರೆಯಲಾಗಿದೆ.

ಕ್ರಿ.ಶ.೧೧೩೪ರ ರಾಯಚೂರು ಜಿಲ್ಲೆಯ ಮಾನ್ವತಾಲ್ಲೂಕಿನ ಕಲ್ಲೂರಿನ ಶಾಸನವು ಚಾಳುಕ್ಯ ಚಕ್ರವರ್ತಿ ಭೂಲೋಕಮಲ್ಲನ್ನು ರಾಜ್ಯಭಾರ ಮಾಡುವಾಗ ಆತನ ಮಾರಡಳಿಕ ಚೂಚಿದೇವರಸನಿದ್ದ; ಈತನು ಮುದುಗುಂದೂರು ೩೦೦ರನ್ನು ರಾಜಧಾನಿಯನ್ನಾಗಿ ಮಡಿಕೊಂಡು ಆಳುತ್ತಿದ್ದನು. ಈ ಬೂಚಿದೇವನು ಸರ್ವನಮಸ್ಕವಾಗಿ ಕಲ್ಲೂರಿನಲ್ಲಿ ಮಹಾಜನರಿಗೆ ಭೂಮಿ ದಾನ ನೀಡಿದನೆಂದು ಉಲ್ಲೇಖಸಿದೆ.

ಕ್ರಿ.ಶ.೧೧೩೪ರ ಆಂಧ್ರಪ್ರದೇಶದ ಮಹಬೂಬನಗರ ಜಿಲ್ಲೆಯ ಗಂಗಾಪುರ ಶಾಸನವು ಚಾಲುಕ್ಯದೊರೆ ಭೂಲೋಕಮಲ್ಲನು ರಾಜಧಾನಿ ಕಲ್ಯಾಣಪುರದಿಂದ ಆಳುತ್ತಿರುವಾಗ ಈತನ ಕಿರಿಯ ಮಗನಾದ ತೈಲಪನ ದಂಡನಾಯಕ ಜಯಾನಂದಭಟ್ಟರು ನೇತೃತ್ವದಲ್ಲಿ ದತ್ತಿ ನೀಡಿದುದರ ಉಲ್ಲೇಖಿಸುತ್ತದೆ.

ಕ್ರಿ.ಶ. ೧೧೩೭ರ ಬೀದರ ಜಿಲ್ಲೆಯ ಭಾಲ್ಕಿ ತಾಲೂಕಿನ ಗೋರ ಚಿಂಚೋಳಿ ಬೀದರ ಶಾಸನವು ಚಾಳುಕ್ಯ ಅರಸ ಭೂಲೋಕಮಲ್ಲನ್ನು ಆಳುತ್ತಿರುವಾಗ ಆತನ ಮಹಾಮಂಡಳೇಶ್ವರನಾದ ಹೆಮ್ಮಾಡಿಯರಸನು ಭಲುಂಕೆಯ ಉತ್ತರೇಶ್ವರದೇವರ ಪ್ರತಿರೂಪವಾಗಿ ಚಿಕ್ಕ ಉತ್ತರೇಶ್ವರೇಶ್ವರ ದೇವರೆಂದು ಹೆಸರನ್ನಿಟ್ಟು ಚಿಂಚೋಳಿ ಸೀಮೇಯಿಂದ ಹೊಲವನು ದಾನ ನೀಡಿದನೆಂದು ಉಲ್ಲೇಖಿಸುತ್ತದೆ.

ಕ್ರಿ.ಶ.ಸು.೧೨ ಶತಮಾನದ ಬೀದರ ಜಿಲ್ಲೆಯ ಭಾಲ್ಕಿ ತಾಲ್ಲೂಕಿನ ಹಾಲಹಳ್ಳಿ ಶಾಸನವು ಆರಂಭದಲ್ಲಿ ಚಾಳುಕ್ಯವಂಶದ ವಿಕ್ರಮಾದಿತ್ಯದೇವನ ವರ್ಣನೆ ಇದ್ದು; ಈತನು ಕಟ್ಟರನ್ನು, ಗುರ್ಜರನ್ನು ಸೋಲಿಸಿದಂತೆ ವರ್ಣಿಸಲಾಗಿದೆ. ಈತನ ನಂತರ ಭೂಲೋಕಮಲ್ಲ ಆಳ್ವಿಕೆ ಮಾಡಿದಂತೆ ತೋರುತ್ತದೆ. ಹೀಗೆ ಶಾಸನ ಬಹುಭಾಗ ಹಾಳಾಗಿದೆ. ಹೆಚ್ಚಿನ ವಿಷಯಗಳು ತಿಳಿದುಬರುವುದಿಲ್ಲ.

ಇಮ್ಮಡಿ ಜಗದೇಕಮಲ್ಲ: ಇಮ್ಮಡಿ ಜಗದೇಕಮಲ್ಲನು ಭೂಲೋಮಲ್ಲನ ತರುವಾಯ ಪಟ್ಟಕ್ಕೆ ಬಮದನು ಈತನಿಗೆ ಸಂಬಂಧಿಸಿದ ಶಾಸನಗಳು ಹೈದರಾಬಾದ ಕರ್ನಾಟಕದ ಬೀದರ, ಕಲ್ಬುರ್ಗಿ, ರಾಯಚೂರು, ಮತ್ತು ಕೊಪ್ಪಳದಲ್ಲಿ ಲಭಿಸಿದೆ. ಅದೇ ರೀತಿಯಾಗಿ ಆಂಧ್ರಪ್ರದೇಶ ತೆಲಂಗಾಣ ಪ್ರದೇಶಗಳಲ್ಲಿ ಈತನ ಸಂಬಂಧಿಸಿದ ಶಾಸನಗಳು ಲಭಿಸಿವೆ.

ಕ್ರಿ.ಶ.೧೧೩೮ರ ಬೀದರ ಜಿಲ್ಲೆಯ ಅಣಂದೂರು ಶಾಸನವು ಜಗದೇಕಮಲ ೨ ನನ್ನು ಉಲ್ಲೇಖಿಸಿದೆ. ಈ ಶಾಸನವು ಜಗದೇಕಮಲ್ಲನ ದೇವರನ್ನು ಪಟ್ಟಬಂದೊಪ್ಪವಂ ಮಾಡಿಸಿಕೊಂಡು; ಪ್ರಥಮ ರಾಜ್ಯದಲ್ಲು ಶ್ರೀ ಮನುಹಾಬೈರವಂ ಮೈಲಾರದೇವರ ಶ್ರೀಪಾದಂಗಣ ದೇವರ ದೇವಾಲಯಕ್ಕೆ ಕಳಸಾರೋಹಣ ಮಾಡಿಸದನೆಂದು; ತಿಳಿದುಬರುತ್ತದೆ. ಅದೆ ಲಗ್ನದಲ್ಲೇ ಅನಂದೂರಿನಾ ಶ್ರೀ ನಾರಾಣೇಶ್ವರ ದೇವರ ಅಂಗಭೋಗ, ರಂಗಭೋಗ, ನೈವೇದ್ಯಕ್ಕೆ, ಬ್ರಾಹ್ಮಣರಿಗೆ, ತಪೋಧನರಿಗೆ, ಅನ್ನದಾನಕ್ಕೆಂದು ಮಹಾಪ್ರಧಾನವಾದ ಮನೆವೇರ್ಗ್ಗಡೆ ಅಬ್ಬಳೆ ನಾಡ ಸಾಮಂತ ಬಮ್ಮಣ್ಣ ದಂಡನಾಯಕನಿಗೆ ಆ ನಾಡಿನ ಮನೆಯನಾದ ಮಂಡಳೇಶ್ವರನಾದ ಬದ್ದರಸನಿಗೆ ದತ್ತಿ ನೀಡಲು ಆದೇಶಿಸಿದನು. ಈ ಶಾಸನರಿಂಕ ತಿಳಿಯ ಬರುವ ಅಂಶಗಳೆಂದರೆ ಜಗದೇಕಮಲ್ಲನು ಈ ಶಾಸನದಲ್ಲಿ ಶಕ ವರ್ಷ ೧೦೫೯ ಇರುವುದರಿಂದ ಕ್ರಿ.ಶ. ೧೧೩೮ರಲ್ಲಿಯೇ ಪಟ್ಟಕ್ಕೆ ಬಂದನೆಂದು ಖಚಿತವಾಗಿ ಹೇಳಬಹುದು.

ಕ್ರಿ.ಶ.೧೧೪೯ರ ಆಂಧ್ರಪ್ರದೇಶ ಕರೀಮನಗರ ಜಿಲ್ಲೆಯ ಸನಿಗರಂ ಶಾಸನವು(ಕ.ವಿ.ಶಾ.ಸಂ.೫, ಭಾಗ.೨, ಪೂರ್ವೋಕ್ತ, ಪು.೬೫-೬೬)ಚಾಲ್ಯಕ್ಯದೊರೆ ಜಗದೇಕಮಲ್ಲ ೨ನ ಸಾಮಂತ ಮಹಾಮಂಡಳೇಶ್ವರ ಅನ್ಮಕುಂಡಪುರವರೇಶ್ವರ ಕಾಕತೀಯ ಪೊಳಲರಸ ಹಾಗೂ ಅವನ ಕೈಕೆಳಗಿನ ಅಧಿಕಾರಿ ಪಟ್ಟಿ ೧೦೦೦ದ ಸೌಧರೆ ರೇಪೊಲಕುರುವರಸನನ್ನು ಉಲ್ಲೇಖಿಸಿದೆ.

ಆಂಧ್ರಪ್ರದೇಶದ ನಲ್ಗೊಂಡ ಜಿಲ್ಲೆಯ ಮೋಟಕುಂದುರಿನ ಚಾಳುಕ್ಯದೊರೆ ಜಗದೇಕಮಲ್ಲನು ೨ನು ಪೊಟ್ಟಳಕೆರೆಯಿಂದ ಆಳುತ್ತಿದ್ದನೆಂದು ಹೆಳುತ್ತದೆ. ಇಲ್ಲಿ ಕಾಲದ ಉಲ್ಲೇಖಮಿಲ್ಲ ಆದರೆ ಜಗದೇಕಮಲ್ಲನ ೨ನ ಉಲ್ಲೇಖ ಬರುವುದರಿಂದ ಈ ಮೇಲಿನ ನಿರ್ಣಯಕ್ಕೆ ಬರಹಬುದು.

ಮುಮ್ಮಡಿ ತೈಲಪ: ಎರಡನೆ ಜಗದೇಕಮಲ್ಲನ ಕಿರಿಯ ಸಹೋದರ ಮೂರನೇ ತೈಲಪನು ಅಧಿಕಾರಕ್ಕೆ ಬಂದನು. ಈತನಿಗೆ ಸಂಬಂಧಿಸಿದ ಶಾಸನಗಳು, ಬೀದರ, ಕಲ್ಬುರ್ಗಿ, ರಾಯಚೂರು, ಕೊಪ್ಪಳ, ಜಿಲ್ಲೆಗಳಲ್ಲಿ, ಮತ್ತು ತೆಲಂಗಾನ ಪ್ರದೇಶಗಳಲ್ಲಿ ಲಭಿಸುತ್ತವೆ.

ಕ್ರಿ.ಶ.೧೧೫೨ರ ಆಂಧ್ರಪ್ರದೇಶದ ಮೆದಕ್ ಜಿಲ್ಲೆಯ ಅಂಡೋಲ(ಕ.ಶಾ.ಸಂ.೫, ಪೂರ್ವೋಕ್ತ, ಪು.೬೫-೬೬)ಶಾಸನವು ಚಾಲುಕ್ಯದೊರೆ ತ್ರೈಲೋಕಮಲ್ಲನನ್ನು ಉಲ್ಲೇಖಿಸಿದೆ. ಈ ಶಾಸನದಲ್ಲಿ ಶಕ ವರ್ಷ ೧೦೭೮ ಎಂದಿದ್ದು; ಈತನ ಮಹಾಮಂಡಳೇಶ್ವರ ಸೋಮಪೆರ್ಮಾಡಿಯು ಡಾಕೂರಿನ ಶ್ರೀ ಬಿಜ್ಜೇಶ್ವರ ದೇವರಿಗೆ ಭೂಮಿಯನ್ನು ದತ್ತಿ ಬಿಟ್ಟ ವಿಷಯ ಪ್ರಸ್ತಾಪಿಸಲಾಗಿದೆ.

ಕ್ರಿ.ಶ.೧೧೫೩-೫೪ರ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಗಬ್ಬೂರು (ಕ.ವಿ.ಶಾ.ಸಂ.೭, ಪೂರ್ವೋಕ್ತ, ಪು.೧೪೯). ಶಾಸನವು ಈ ಶಾಸನದಲ್ಲಿ ಎರಡು ಕಾಲಗಳ ಉಲ್ಲೇಖವಿದ್ದು; ಮತ್ತು ಇದರಲ್ಲಿ ಶಾಸನದ ಆರಂಭದಲ್ಲಿ ಚಾಲುಕ್ಯರ ಪಾರಂಪರಿಕ ವಂಶಾವಳಿಯನ್ನು ನೀಡಲಾಗಿದೆ. ವಿಷ್ಣುವರ್ಧನ, ವಿಜಯಾದಿತ್ಯ, ಮುಂತಾದವರು ಆಳಿದ ಮೇಲೆ ತೈಲಪನಾಳಿದ. ಈತನ ಮಗ ಸತ್ಯಾಶ್ರಯ, ಇವನ ನಂತರ ವಿಕ್ರಮ, ಇವನ ತಮ್ಮ ವಾಸವ, ಅಯ್ಯಣ ಮುಂದೆ ತ್ರೈಲೋಕಮಲ್ಲನವರೆಗೆ ವಂಶಾವಳಿ ನೀಡಲಾಗಿದೆ. ಅಲ್ಲದೆ ಗೊರ್ಬ್ಬ ವಿಪ್ರರಿಗೆ ಮಹಾಜನ ಉಲ್ಲೇಖ ಬರುತ್ತದೆ.

ಕ್ರಿ.ಶ.ಸು.೧೨ ಶತಮಾನ ಬೀದರ ಜಿಲ್ಲೆಯ ಬಸವಕಲ್ಯಾಣದ ತ್ರಿಪುರಾಂತಕ ಶಾಸನವು ತ್ರಿಪುರಾಂತಕ ದೇವರ ಮಡಿವಾಳ ೦ಆಚಿದೇವನಿಗೆ ತೈಲಪನು ಭೂ ದಾನವನ್ನು ನೀಡಿದಂತೆ ಉಲ್ಲೇಖಿಸುತ್ತದೆ.

ಕ್ರಿ.ಶ.೧೧೮೦ರ ಕಲ್ಬುರ್ಗಿಜಿಲ್ಲೆಯ ಸುರುಪೂರ ತಾಲ್ಲೂಕಿನ ಮುದನೂರು(ಹನುಮಾಕ್ಷಿ ಗೋಗಿ, ಸುರಪುರ ತಾಲೂಕಿನ ಶಾಸನಗಳು, ಪು.೧೫೦-೧೫೧)ಶಾಸನವು ಚಾಲುಕ್ಯದೊರೆ ಮೂರನೆ ತೈಲಪನು ಕಲ್ಯಾಣಪುರದಿಂದ ಆಳುತ್ತಿದ್ದುಂತೆ; ಅಲ್ಲದೆ ಅಗ್ರಹಾರ ಮುದನೂರಿನಲ್ಲಿ ಐದನೂರು ಮಹಾಜನರಿಗೆ ರಾಮೇಶ್ವರ ಹಾಗೂ ಲಕ್ಷ್ಮಣೇಶ್ವರ ದೇವಾಲಯಗಳಿಗೆ ಭೂಮಿ ದಾನ ನೀಡಿದ್ದುರ ಉಲ್ಲೇಖ ಇದೆ.

ತ್ರಿಭುವನಮಲ್ಲ(ನಾಲ್ಕನೆಯ ಸೋಮೇಶ್ವರ): ಮೂರನೆ ತೈಲಪನ ತರುವಾಯ ಆತನ ಮಗನಾದ ನಾಲ್ಕನೆ ಸೋಮೇಶ್ವರ ಪಟ್ಟಕ್ಕೆ ಬಂದನು. ಈತನಿಗೆ ಸಂಬಂಧಿಸಿದ ಶಾಸನಗಳು, ಕಲ್ಬುರ್ಗಿಯ ಸುರುಪೂರ, ಕೊಪ್ಪಳ ಮತ್ತು ತೆಲಂಗಾಣ ಪ್ರದೇಶಗಳಲ್ಲಿ ಲಭಿಸಿವೆ.

ಕ್ರಿ.ಶ.೧೧೮೨ರ ಕಲ್ಬುರ್ಗಿ ಜಿಲ್ಲೆಯ ಸುರುಪೂರ ತಾಲೂಕಿನ ಹೆಮ್ಮಡಗಿ(ಅದೇ, ಪು.೨೦೯-೨೧೩) ಶಾಸನವು ಕಲ್ಯಾಣ ಚಕ್ರವರ್ತಿ ತ್ರಿಭುವನಮಲ್ಲ ವೀರ ಸೋಮೇಶ್ವರನನ್ನು ಉಲ್ಲೇಖಿಸುತ್ತದೆ.

ಈ ಶಾಸನವು ಕಲ್ಯಾಣ ಚಾಲುಕ್ಯರ ವಂಶಾವಳಿ ಮತ್ತು ದಂಡನಾಯಕ ಬಮ್ಮರಸನ ವಂಶಾವಳಿ ಹಾಗೂ ಎಮ್ಮವಾಡಿಗೆಯ ಪ್ರಭು ಭಾವರಸರ ವಂಶಾವಳಿ ಪ್ರತಿಬಿಂಬಿಸುತ್ತದೆ. ಇದು ಚಾರಿತ್ರಿಕ ದೃಷ್ಟಿಯಿಂದ ಮಹತ್ವ ನಿಡೆದಿದೆ.

ಕ್ರಿ.ಶ. ೧೧೮೪ರ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ(ಕ.ವಿ.ಶಾ.ಸಂ.೨, ಪೂರ್ವೋಕ್ತ, ಪು. ೧೬೮–೧೬೯)ಶಾಸನವು ಚಾಲುಕ್ಯರದೊರೆ ತ್ರಿಭುವನೈಕಮಲ್ಲ ಸೋಮೇಶ್ವರನನ್ನು ಆಳ್ವಿಕೆ ಉಲ್ಲೇಖಿಸಿದೆ. ಈ ಶಾಸನದಲ್ಲಿ ದೊರೆಯ ಸಾಮಂತನಾದ ಸಿಂಧವಂಶದ ವೀರಬಿಜ್ಜದೇವನ ತಾಯಿಕಡೆಯ ಮತ್ತು ತಂದೆ ಕಡೆಯ ವಂಶವಾಳಿಯನ್ನು ಹೀಗೆ ನೀಡಿದೆ.

ಸಿಂಧವಂಶ

ಆಚುಗಿ | ನಾಕನೃಪ | ವೃಸಿಂಹ

ನಾಕನೃಪ → ಸಿರಿಯದೇವಿ (ತಾಯಿ)

ಸಿರಿಯದೇವಿ → ಚಾಮುರದ (ತಂದೆ)

ಬಿಜ್ಜಲದೇವ

ಲಕ್ಕಾದೇವಿ

ವೀರಬಿಜ್ಜಲ | ವಿಕ್ರಮಾದಿತ್ಯ

ಕ್ರಿ.ಶ.೧೧೮೬ರ ಆಂಧ್ರಪ್ರದೇಶ ಮಹಬೂಬನಗರ ಜಿಲ್ಲೆಯ ಉಜ್ಜಿಲ(ಕ.ವಿ.ಶಾ.ಸಂ.೫, ಭಾಗ.೨, ಪೂರ್ವೋಕ್ತ, ಪು. ೧೮೧)ಶಾಸನವು ಚಾಲುಕ್ಯದೊರೆ ವೀರಸೋಮೇಶ್ವರ ದೇವನ ಆಳ್ವಿಕೆ ತಿಳಿಸುತ್ತದೆ. ಈ ಶಾಸನದಲ್ಲಿ ಶಕ ವರ್ಷ ೧೦೮೯ ಎಂದಿದ್ದು, ಇದರ ಪ್ರಕಾರ ಶಾಸನದ ಕಾಲ ೧೧೬೭ ಎಂದಾಗಬೇಕು. ಆದರೆ, ಶಾಸನ ಸಂಪುಟದ ಸಂಗ್ರಹಣಕಾರರ ಅದು ಶಕ ವರ್ಷ ೧೧೦೮ ಎಂದಿರಬೇಕಾಗಿತ್ತು ಎಂದು ಹೇಳಿ ಕ್ರಿ.ಶ. ೧೧೮೬ ಎಂದು ಉಲ್ಲೇಖಿಸಿದ್ದಾರೆ. ಕಲ್ಲಕೆಳಗು ನಾಡಿನ ರಾಜಧಾನಿ ಎಜ್ಜಿಮೊಳಲ ಕೋಟೆಯೊಳಗಿರುವ ಬಸದಿ ಪೂಜೆಗೆ ಕೆರೆಯ ಕೆಳಗಿನ ಭೂಮಿಯನ್ನು ದತ್ತಿಯಾಗಿ ಕೊಟ್ಟರೆಂದು ಇದರಲ್ಲಿ ದಾಖಲಿಸಿದೆ.

ಹೀಗೆ ಇಂದಿನ ಬೀದರ್ ಜಿಲ್ಲೆಯ ಕಲ್ಯಾಣವನ್ನು ರಾಜಧಾನಿಯಾಗಿ ಮಾಡಿಕೊಂಡು ಸುಮಾರು ಎರಡು ಶತಮಾನಕ್ಕೂ ಹೆಚ್ಚು ಕಾಲ ರಾಜ್ಯಭಾರ ಮಾಡಿದ ಕಲ್ಯಾಣದ ಚಾಲುಕ್ಯರು ಆರಂಭದಲ್ಲಿ ರಾಷ್ಟ್ರಕೂಟ ಸಾಮಂತರಾಗಿದ್ದು, ಮುಂದೆ ರಾಷ್ಟ್ರಕೂಟ ಕೊನೆಯ ಅರಸ ಎರಡನೆಯ ಕರ್ಕನನ್ನು ಸಂಹರಿಸಿ ದಕ್ಷಿಣ ಭಾರತದ ಬಹುಭಾಗವನ್ನು ಇವರ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದಕ್ಕೆ ಈ ಮನೆತನದವರು ಬೇರೆ ಬೇರೆ ಪ್ರದೇಶಗಳಲ್ಲಿ ಹಾಕಿಸಿದ ಶಾಸನಗಳೇ ಸಾಕ್ಷಿಯಾಗಿವೆ. ಅದರಲ್ಲಿಯೂ ಹೈದ್ರಾಬಾದ್ ಕರ್ನಾಟಕದ ಪ್ರದೇಶಗಳಲ್ಲದೇ ಮತ್ತು ತೆಲಂಗಾಣದ ಬಹುಭಾಗ, ಇಂದಿನ ಆಂಧ್ರಪ್ರದೇಶದ ಬಹುಭಾಗವು ಈ ರಾಜಮನೆತನದ ನೇರ ಆಡಳಿತಕ್ಕೆ ಒಳಪಟ್ಟಿತ್ತೆಂದು ಈ ಭಾಗದಲ್ಲಿನ ಶಾಸನಗಳು ಉಲ್ಲೇಖಿಸುತ್ತವೆ. ಆರಂಭದಿಂದಲೇ ಅಂದಿನ ಕರ್ನಾಟಕದ ಭೂ

ಭಾಗವಾಗಿದ್ದ ಹಿಂದಿನ ತೆಲಂಗಾಣ ಪ್ರದೇಶಗಳಾದ ಮೆದಕ್, ನಲ್ಗೊಂಡ, ಕರೀಂನಗರ, ವರಂಗಲ್ ಮತ್ತು ಮಹಬೂಬ್‌ನಗರ ಜಿಲ್ಲೆಗಳ ಪ್ರದೇಶಗಳು ಈ ಕಲ್ಯಾಣ ಚಾಲುಕ್ಯರ ಒಡೆತನಕ್ಕೆ ಒಳಪಟ್ಟಿದ್ದವೆಂದು ಶಾಸನಗಳು ತಿಳಿಸುತ್ತವೆ. ಹೀಗಾಗಿ ಅಂದಿನ ಪ್ರಾಚೀನ ಕರ್ನಾಟಕವು ಇಂದಿನ ತೆಲಂಗಾಣ ಮತ್ತು ಆಂಧ್ರಪ್ರದೇಶ ರಾಜ್ಯಗಳ ಪ್ರದೇಶಗಳನ್ನು ಒಳಗೊಂಡು ಕರ್ನಾಟಕವು ಬಹು ವಿಸ್ತಾರವಾದ ಭೂ ಪ್ರದೇಶ ಹೊಂದಿದ್ದ ರಾಜ್ಯವಾಗಿತ್ತೆಂದು ಹೇಳಬಹುದು.

ಕಲಚುರಿಗಳು

ಪ್ರಾಚೀನ ಕರ್ನಾಟಕ ಮತ್ತು ತೆಲಂಗಾಣ ಪ್ರದೇಶಗಳಲ್ಲಿ ರಾಜಭಾರ ಮಾಡಿದ ಅರಸು ಮನೆತನಗಳಲ್ಲಿ ಕಲಚೂರಿ ಮನೆತನವು ಒಂದು. ಈ ಮನೆತನಕ್ಕೆ ಸಂಬಂಧಿಸಿದ ಶಾಸನಗಳು ಬೀದರ, ಕಲಬುರ್ಗಿ, ರಾಯಚೂರು, ಕೊಪ್ಪಳ, ಮತ್ತು ತೆಲಂಗಾಣ ಪ್ರದೇಶಗಳಲ್ಲಿಯೂ ಲಭಿಸಿದೆ. ಇವುಗಳ ಆಧಾರದ ಮೇಲೆ ಇವರ ಆಳ್ವಿಕೆ ಕರ್ನಾಟಕದ-ತೆಲಂಗಾಣ ಪ್ರದೇಶಗಳ ವರೆಗೆ ಹರಡಿತ್ತು ಎಂದು ಹೇಳಬಹುದು.

ಕ್ರಿ.ಶ.೧೧೬೩ರ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಕುಕನೂರು(ಕ.ವಿ.ಶಾ.ಸಂ.೨, ಪೂರ್ವೋಕ್ತ ಪು. ೨೦೬-೨೦೮) ಶಾಸನವು ಈ ಪ್ರದೇಶಗಳಲ್ಲಿ ಕಲಚೂರಿಗಳ ವಂಶಾವಳಿ ಸೂಚಿಸುವ ಮೊದಲ ಶಾಸನವಾಗಿದೆ. ಶಾಸನವು ಕಲಚೂರಿಗೆ ದೊರೆ ಬಿಜ್ಜಳ ೨ನನ್ನು ಉಲ್ಲೇಖಿಸಿದೆ. ಕಲಚುರಿ ವಂಶಕ್ಕೆ ಸಂಬಂಧಿಸಿದ ಈ ಮೊದಲ ಶಾಸನವಾಗಿದ್ದು, ಈ ಭಾಗದಲ್ಲಿ ಬಿಜ್ಜಳ-೨ ನಿಂದ ಕಲಚುರಿಗಳ ಆಳ್ವಿಕೆ ಆರಂಭವಾದುದ್ದನ್ನು ಕಾಣಬಹುದು. ಈ ಶಾಸನದಲ್ಲಿ ಬಿಜ್ಜಳನ ಕಾವ್ಯಮಯವಾಗಿ ವರ್ಣನೆ, ತದನಂತರ ಆತನ ಕೈಕೆಳಗಿನ ದಂಡನಾಯಕರಾದ ಅಮ್ಮಣರಸ, ಬೊಪ್ಪನಾಯಕ, ಬೀವರಸ, ಸಾಯಣ, ಪಟ್ಟಪಯ್ಯನನ್ನೂ ಬಲದೇವ ಈತನ ಕರಣಿಕರಾದ ಮಧುಸೂಧನ, ಆದಿತ್ಯದೇವ, ಸೋಮರಾಜ, ಬೊಪ್ಪದೇವ, ಮತ್ತು ಚಾವುಂಡನನ್ನು ವರ್ಣಿಸಿದೆ. ನಂತರ ಕುಂತಳದೇಶ, ಕುಕ್ಕನೂರು ಹಾಗೂ ಮಲ್ಲಿಕಾರ್ಜುನ ದೇವರನ್ನು ವಿಸ್ತಾರವಾಗಿ ವರ್ಣಿಸಲಾಗಿದೆ.

ಕ್ರಿ.ಶ. ೧೧೬೭ ಯಾದಗಿರಿ ಜಿಲ್ಲೆಯ ಸುರಪೂರ ತಾಲ್ಲೂಕಿನ ಮುದನೂರು(ಹನುಮಾಕ್ಷಿ ಗೋಗಿ ಸುರಪುರ ತಾಲೂಕಿನ ಶಾಸನಗಳು, ಪೂರ್ವೋಕ್ತ, ಪು.೧೧೬)ಶಾಸನವು ಕಲಚುರಿ ಭುಜಬಳ ಚಕ್ರವರ್ತಿ ತ್ರಿಭುವನ ಮಲ್ಲ ಬಿಜ್ಜಳ-೨ ಈತನ ಆಳ್ವಿಕೆಗೆ ಸಂಬಂದಿಸಿದುದು. ಬಿಜ್ಜಳನಿಗೆ ಭುಜಬಳ, ಚಕ್ರವರ್ತಿ, ತ್ರಿಭುವನಮಲ್ಲ ಎಂಬ ಬಿರುದುಗಳಿಸಿದ್ದಾವೆಂದು ಈ ಶಾಸನದಲ್ಲಿ ತಿಳಿದುಬರುತ್ತದೆ. ಕಲಚುರಿ ವಂಶದಲ್ಲಿಯೇ ಬಲಶಾಲಿ ಶ್ರೇಷ್ಠಾ ಅರಸನಾಗಿದ್ದನೆಂದು ಹೇಳಬಹುದು.

ಕ್ರಿ.ಶ.೧೧೬೯ರ ಬೀದರ ಜಿಲ್ಲೆಯ ರಂಜೋಳ(ಕ.ವಿ.ಶಾ.ಸಂ.೮, ಪೂರ್ವೋಕ್ತ ಪು.೧೫೯–೧೬೧)ಶಾಸನವು ಕುಲಚುರಿ ದೊರೆ ಬಿಜ್ಜಳ ೨ನ ಮಗನಾದ ರಾಯಮುರಾರಿ ಸೋಯಿದೇವನನ್ನು ಉಲ್ಲೇಖಿಸಿದೆ. ಶಕವರ್ಷ ೧೦೯೧ ಇರುದುದರಿಮದ ಕ್ರಿ.ಶ. ೧೧೬೯ರಲ್ಲಿಯ ಸೋವಿದೇವ ಪಟ್ಟಕ್ಕೆ ಬಂದಿದ್ದನೆಂಉ ಹೇಳಬಹುದು. ಈ ಶಾಸನವು ತುಂಬಾ ಸಂಕೀರ್ಣತೆಯಿಂದ ಕೂಡಿದೆ. ಶಾಸನದ ಆರಂಭದಲ್ಲಿ ಕುಂತಳ ದೇಶದ ವರ್ಣನೆ ಬಂದಿದೆ. ಇದನ್ನು ಬಿಜ್ಜಳನು ಶಿಷ್ಟರಕ್ಷಣೆ ಮಾಡಿಕೊಂಡು ಬಂದನೆಂದು ಮುಂದೆ ಅಟ್ಟಳೆನಾಡಿನ ಉಲ್ಲೇಖ ಬಂದಿದೆ ಅದನ್ನು ಹಜ್ಜಭೂಪ ಆಳುತ್ತಿದ್ದಂತೆ ಹೇಳಿದೆ. ಈತನು ಸಿಂಧವಂಶದವನಾಗಿದ್ದು, ಈತನ ವಂಶಾವಳಿ ವಿವರಿಸಿದೆ. ಅದು ಇಂತಿದೆ:

ನಾಗೇಂದ್ರ+ ಪದ್ಮಾವತಿ
|
ಪುಲಸಿಂಧ
|
ಸತ್ಯಸೇವ್ಯ ಪ್ರಭೇಸೇವ್ಯ ಜಗತ್ತೆ್ಸೇವ್ಯ ಬುಧಸೇವ್ಯ

ಈ ನಾಲ್ಕು ಮಕ್ಕಳಲ್ಲಿ ಒಳ್ಳರೆ, ವಾಸದ, ಮುಂತಾದ ನಾಡುಗಳ ಒಡೆಯುರಾಗುತ್ತರೆ. ಜಗತ್ತೇವ್ಯನು ಅಟ್ಟಳೆ ನಾಡಿನ ಅರಸನಾಗುತ್ತಾನೆ. ಇದರ ರಾಜ್ಯಧಾನಿ ರಂಜೇರು. ಈ ವಂಶದ ಹಜ್ಜರಸನು ಹಜ್ಜೇಶ್ವರ ದೇವಾಲಯ ಕಟ್ಟಿಸಿದನೆಂದು ಶಾಸನ ಹೇಳುತ್ತದೆ.

ಕ್ರಿ.ಶ ೧೧೭೦ರ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಕುಕನೂರು(ಕ.ವಿ.ಶಾ.ಸಂ.೨, ಪೂರ್ವೋಕ್ತ ಪು.೨೧೧)ಶಾಸನವು ಕಲಚುರಿ ದೊರೆ ಸೋವಿದೇವನು ಮೋದನೂರಿ ನಿಂದ ಆಳುತ್ತಿದ್ದಾಂತೆ ತೋರುತ್ತದೆ. ಈ ಶಾಸನದ ಆರಂಭದಲ್ಲಿ ಕಲಚುರಿ ಅರಸರ ವಂಶಾವಳಿ ಉಲ್ಲೇಖವಿದೆ. ಕಲಚೂರಿಗಳ ಮೂಲ ಪುರುಷ ಕನ್ನಮನಿಂದ ಮೊದಲುಗೊಂಡು, ಜೊಗಮ, ಇತನ ಮಗ ಪೆರ್ಮಾಡಿ, ಈತನಮಗ ಬಿಜ್ಜಳ–೨. ಈತನ ಮಗನೇ ಸೋವಿದೆವ. ನೆಂದು ಉಲ್ಲೇಖಿಸಿದೆ. ಈ ದೃಷ್ಟಿಯಿಂದ ಈ ಪ್ರದೇಶಗಳಲ್ಲಿ ಆಳಿದ ಕಲಚುರಿಗಳ ರಾಜರುಗಳ ಚರಿತ್ರೆಯನ್ನು ರಚಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.

ಕ್ರಿ.ಶ. ೧೧೭೪ರ ಕಲ್ಬುರ್ಗಿ ಜಿಲ್ಲೆಯ ಸುರಪುರ(ಹನುಮಾಕ್ಷಿ ಗೋಗಿ, ಸುರಪುರ ತಾಲೂಕಿನ ಶಾಸನಗಳು ಪು.೪೬) ನ ಏವೂರು ಶಾಸನ ಅದೇ ಜಿಲ್ಲೆಯ ಮುದನೂರು ಈ ಶಾಸನಗಳು ಲಚುರಿ ದೊರೆ ರಾಯಮುರಾರಿ ಸೋವಿದೇವನ ಆಳ್ವಿಕೆಯನ್ನು ಉಲ್ಲೇಖಿಸಿವೆ.

ಕ್ರಿ.ಶ. ೧೧೭೫ರ ರಾಯಚೂರು ಜಿಲ್ಲೆಯ(ಕ.ವಿ.ಶಾ.ಸಂ.೭, ಪೂರ್ವೋಕ್ತ ಪು.೪೦೯) ಮತ್ತು ಅದೇ ತಾಲೂಕಿನ ಶಾಸವೊಂದು(ಅದೇ, ಪು.೩೯) ಶಾಸನಗಳು ಕಲಚುರಿ ದೊರೆ ರಯಮುರಾರಿ ಸೋವಿದೇವನನ್ನು ಆಳ್ವಿಕೆಯನ್ನು ಉಲ್ಲೇಖಿಸುತ್ತವೆ.

ಸಂಕಮ: ರಾಯಮುರಾರಿ ಸೋವಿದೇವನ ನಂತರ ಈತನ ಸಹೋದರ ಸಂಕಮ ಅಧಿಕಾರಕ್ಕೆ ಬಂದನು. ಈತನಿಗೆ ಸಂಬಂಧಿಸಿದ ಶಾಸನಗಳು ಕಲ್ಬುರ್ಗಿಯ ಸುರಪುರ, ಕೊಪ್ಪಳ, ರಾಯಚೂರು, ಪ್ರದಶಗಳಲ್ಲಿ ಲಭಿಸಿವೆ. ಈ ಮೇಲ್ಕಾಣಿಸಿದ ಶಾಸನಗಳಲ್ಲಿ ದಾನ ಶಾಸನಗಳಾಗಿದ್ದು; ಯಾವುದೇ ರೀತಿಯ ರಾಜಕೀಯ ಮಹತ್ವದ ವಿಷಯಗಳು ಕಂಡು ಬರುವುದಿಲ್ಲ.

ಆಹವಮಲ್ಲ: ಆಹವಮಲ್ಲನು ತನ್ನ ಸಹೋದರ ಸಂಕಮ ತರುವಾಯ ಪಟ್ಟಕ್ಕೆ ಬಂದನು. ಈತನಿಗೆ ಸಂಬಂಧಿಸಿದ ಶಾಸನಗಳು ಯಾದಗಿರಿ ಮತ್ತು ತೆಲಂಗಾಣ ಪ್ರದೇಶದ ಮಹಬೂಬನಗರ ಜಿಲ್ಲೆಗಳಲ್ಲಿ ಲಭಿಸಿವೆ. ಕ್ರಿ.ಶ.೧೧೮೨ರ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಮುದನೂರು ಶಾಸನವು ಬಿಜ್ಜಳ ೨ನನ್ನು ಆಹವಮಲ್ಲನ್ನನು ಉಲ್ಲೇಖಿಸಿದೆ. ಈ ಶಾಸನವು ಶ್ರೀ ರಾಮದತ್ತಿ ಸರ್ವ ಸಮಸ್ಯದ ಅಗ್ರಹಾರ ಮುದಿನೀರ ಗ್ರಾಮದ ಲಕ್ಷ್ಮೇಶ್ವರ ದೇವರ ನಂದಾದೇವಿಯ ಎಣೆಗಾಗಿ ಕೆಂಬಾವಿಯ ತೆಲ್ಲಿಗ ಕೇರೆಯಣ್ಣ ಕಲ್ಲುಗಾಣ ಮಾಡಿಸಿಕೊಟ್ಟ ವಿವರಗಳು ಲಭಿಸುತ್ತವೆ.

ಕ್ರಿ.ಶ.೧೧೮೨ರ ತೆಲಂಗಾಣದ ಪ್ರದೇಶದ ಮಹಬೂಬ ನಗರ ಜಿಲ್ಲೆಯ(ಕ.ವಿ.ಶಾ.ಸಂ.೫, ಭಾಗ.೨, ಪೂರ್ವೋಕ್ತ, ಪು.೧೫೦) ಅಲಂಪುರ ಶಾಸನವು ಕಳಚುಯನ ಚಕ್ರವರ್ತಿ ಬುಜಬಳಮಲ್ಲ ಆಹವ ಮಲ್ಲನನ್ನು ಹೆಸರಿಸಿದೆ ಮತ್ತು ಅಯ್ಯಾವಳೆ ಐನೂರ್ವರು, ಉಭಯ ನಾನಾ ದೇಸಿಗಳು, ಮುವತ್ತಾರು ಬೀಡುಗಳ ಮುಮ್ಮರಿ ದಂಡಗಳು, ಕನ್ನಡ ೪೦೦೦, ತುಂಬುಳ ಸ್ಥಳ, ಮದ್ದೂರು ಸ್ಥಳ, ಅಲಂಪೂರ ಸ್ಥಳ ಮೊದಲಾದ ವ್ಯಾಪಾರಿಗಳು ಸೇರಿ ಗವರೇಶ್ವರ ದೇವರ ಸೇವೆಗೆ ಬೇರೆ ಬೇರೆ ಸುಂಕಗಳಿಂದ ಬರುವ ಆದಾಯವನ್ನು ದತ್ತಿಯಾಗಿ ನೀಡಿದುದ್ದನ್ನು ಉಲ್ಲೇಖಿಸಿದೆ.

ಹೀಗೆ ಕಲ್ಯಾಣದ ಕಲಚೂರಿಗಳು ಬಹುದಿನಗಳ ಕಾಲ ಸಾಮಂತರಾಗಿಯೇ ಕಾರ್ಯ ನಿರ್ವಹಿಸಿದರು. ಆದರೆ ಮುಂದೆ ಕಲ್ಯಾಣ ಚಾಲುಕ್ಯರ ಪ್ರಾಬಲ್ಯ ಕುಸಿದು ಹೋಗುತ್ತಿದ್ದಂತೆ ಅವರೊಂದಿಗೆ ರಕ್ತಸಂಬಂಧ ಹೊಂದಿದ್ದ ಕಲಚೂರಿಗಳು ಅಧಿಕಾರದ ಚುಕ್ಕಣಿ ಹಿಡಿದರು. ಅದರಲ್ಲಿ ಪ್ರಮುಖ ಕಲಚೂರಿ ದೊರೆ ಬಿಜ್ಜಳ. ಕಲಚೂರಿ ದೊರೆ ಬಿಜ್ಜಳನ ಮಗ ಸೋಯಿದೇವ, ಸಂಕಮದೇವ, ಆಹವಮಲ್ಲ ಮತ್ತು ಎರಡನೇ ಬಿಜ್ಜಳ ಆಳ್ವಿಕೆಯನ್ನು ನೋಡಿದಾಗ ಹೈದ್ರಾಬಾದ್ ಕರ್ನಾಟಕದ ಬೀದರ್‌ನಿಂದ ತೆಲಂಗಾಣದ ಮೆಹಬೂಬ್ ನಗರದವರೆಗೆ ರಾಜ್ಯಭಾರ ಮಾಡು ತ್ತಿದ್ದಾರೆಂದು ಶಾಸನಗಳು ಉಲ್ಲೇಖಿಸುತ್ತವೆ.

ಕಾಕತೀಯರು

ವರಂಗಲ್ಲಿನ ಕಾಕತೀಯರಿಗೆ ಸಂಬಂಧಿಸಿದ ಶಾಸನಗಳು ಬೀದರ, ರಾಯಚೂರು ಮತ್ತು ತೆಲಂಗಾಣ ಪ್ರದೇಶದ ಮಹಬೂಬನಗರ ಜಿಲ್ಲೆ ಮತ್ತು ನಲ್ಗೊಂಡಾ ಜಿಲ್ಲೆಯಲ್ಲಿ ಲಭಿಸಿವೆ.

ಕ್ರಿ.ಶ.೧೨೯೯ರ ಮಹಬೂಬನಗರ ಜಿಲ್ಲೆಯ ವರ್ಧಮಾನಪುರ(ಅದೇ, ಪೂರ್ವೋಕ್ತ, ಪು.೧೮೨-೧೮೩) ಶಾಸನವು ವರಂಗಲ್ಲಿನ ರಾಜಧಾನಿಯಿಂದ ಆಳುತ್ತಿದ್ದ ಕಾಕತೀಯ ದೊರಿ ಗಣಪತಿ ಹಾಗೂ ಕಂದೂರು ನಾಡನ್ನು ಆಳುತ್ತಿದ್ದ ಗೋನೆಪುಟ್ಟ ರೆಡ್ಡಿಯ ಮಗ ಗಣಪಚ್ಚುನ ಆಳ್ವಿಕೆಯನ್ನು ಹೆಸರಿಸಿದೆ. ಈ ಊರಿನ ವ್ಯಾಪಾರಿಗಳು ಗಣಪತಿ ದೇವನಿಗೆ ಪುಣ್ಯವಾಗಲೆಚಿದು, ಮಾರಾಟದ ಮೇಲಿನ ಸುಂಕಗಳನ್ನು ದತ್ತಿಯಾಗಿ ಕೊಡುತ್ತಾರೆ. ಮತ್ತೆ ಗಣಪತಿ ದೇವನಿಗೆ ಮತ್ತು ಸುಂಕಾಧಿಕಾರಿ ಮಂಚ್ಚರಸೂಗೆ ಪುಣ್ಯವಾಗಲೆಚಿದು ಗವರೇಶ್ವರ ದೇವರಿಗೆ ದತ್ತಿ ಬಿಟ್ಟ ದಾಖಲೆ ಇದೆ.

ಕ್ರಿ.ಶ. ೧೨೯೪ರ ರಾಯಚೂರು ಜಿಲೆಯ ಕೋಟೆಯಲ್ಲಿನ(ಕ.ವಿ.ಶಾ.ಸಂ.೭, ಪೂರ್ವೋಕ್ತ, ಪು.೩೦) ಕಾಕತೀಯ ದೊರೆ ರುದ್ರ ದೇವನನ್ನು ಉಲ್ಲೇಖಿಸುತ್ತದೆ. ಈ ಶಾಸನವು ಕನ್ನಡ ಮತ್ತು ತೆಲುಗು ಭಾಷೆಯಲ್ಲಿದೆ. ಕಾಕತೀಯ ರುದ್ರದೇವನು ಆಳುತ್ತಿರುವಾಗ ವರ್ಧಮಾನ ಪುರದಿಂದ ರಾಜ್ಯಭಾರ ಮಾಡುತ್ತಿದ್ದ ಗೋನ ಗಂನಚುರೆಡ್ಡಿಯ ರಾಜ್ಯದ ರಕ್ಷಾವ್ಮಣಿಯಾಗಿದ್ದ ವಿಶಾಲನಾಥ ಭೂಪಾಲನು ರಾಚೂರಿ ಪಟ್ಟಣದಿಂದ ರಾಜ್ಯಭಾರ ಮಾಡುತ್ತಾ, ಅದವನಿ, ತುಂಬುಳ, ಮಾನುವ (ಮಾನ್ವಿ) ಹಾಲುವ, ದುರ್ಗಗಳನ್ನು ಗೆದ್ದು ಆಳ್ವಿಕೆ ನಡೆಸುತ್ತಿದ್ದಾಗ ಸರ್ವರಾಷ್ಟ್ರ ಸಮಸ್ತ ಪ್ರಜಾ ರಕ್ಷಣಾರ್ಥವಾಗಿ ಬಹುಶಃ ಈಗಿನ ರಾಯಚೂರಿಗೆ ಶಿಲಾದುರ್ಗವನ್ನು ಕಟ್ಟಿಸಿದನೆಂದು ಉಲ್ಲೇಖಿಸಿದೆ.

ತೆಲಂಗಾಣಪ್ರದೇಶದ ನಲ್ಗೊಂಡ ಜಿಲ್ಲೆಯ ಕೊಲನುಪಾಕ(ಕ.ವಿ.ಶಾ.ಸಂ.೫, ಭಾಗ.೨, ಪೂರ್ವೋಕ್ತ, ಪು.೨೨೩) ಶಾಸನವು ಕಾಕತೀಯ ದೊರೆ ಪ್ರತಾಪರುದ್ರ ದೇವನು ಓರಂಗಲ್ಲಿನಿಂದ ಆಳುತ್ತಿದ್ದನೆಂದು ಹೇಳುತ್ತದೆ. ರಾಷ್ಟ್ರಕುತಿಲಕ ಮತ್ತು ಕೊಲಿಪಾಕ ಪುರವರಾಧೀಶ್ವರನೆಂಬ ಬಿರುದಾಂಕಿತ ವ್ಯಕ್ತಿಯೊಬ್ಬ ಸ್ವಯಂಭು ಮಾಣಿಕ್ಯ ತೀರ್ಥೇಶ್ವರಿಗೆ ದತ್ತಿ ನೀಡಿದ ವಿಷಯ ಪ್ರಸ್ತಾಪಿಸಿದೆ.

ಬೀದರ ಜಿಲ್ಲೆಯ ಬೀದರ-೦೧ ಶಾಸನವು(ಕವಿ.ಶಾ.ಸಂ.೮, ಪೂರ್ವೋಕ್ತ, ಪು.೧೨೧) ಸಿಂಧವಂಶದ ಗೊಂಕರಸನ ಮಗ ಹಿರಿಯ ಭೈರವದೇವನು ಸೇವುಣರನ್ನು ಗೆದ್ದು ರುದ್ರದೇವನಿಗೆ ನಿಶ್ಚಿಂತೆಯನ್ನು ಮಾಡಿದನೆಂದು ಉಲ್ಲೇಖಿಸುತ್ತದೆ.

ಇದೇ ಜಿಲ್ಲೆಯ ಇನ್ನೊಂದು ಶಾಸನವು(ಅದೇ, ಪು.೧೨೨-೧೨೩) ಬೀದರ-೦೨ ಕಾಕತೀಯ ದೊರೆ ರುದ್ರದೇವನ ಹೊಗಳಿಕೆಯಿಂದ ಆರಂಭವಾಗುತ್ತದೆ. ಈ ರುದ್ರದೇವನಿಗೆ ರಾಯಜಗದ್ದಳ ಎಂಬ ಬಿರುದಿದ್ದಂತೆ ತೋರುತ್ತದೆ. ಚಕ್ರವರ್ತಿ ಮಹದೇವನು ಕಾಕತೀವಲ್ಲಭನು ೯ ಲಕ್ಷ ಸೈನ್ಯದೊಡನೆ ದೇವತರಿಗೆ ಮುತ್ತಿಗೆ ಹಾಕಿ ಜಯ ಪಡಿದಿದಂತೆ ತೋರುತ್ತದೆ. ಈತನ ಮಗನಾದ ಕಾಕತಿಪುರವರಾಧೀಶ್ವರ ಮೂರರಾಯ ಜಗದ್ದಳ, ಹರಿರಾಯದಾಡಿದಡಕ್ಕ ಸೇಉಣ ಬಳಜಳಧಿ

ಬಡವಾನಳ ಮುಂತಾದ ವಿಶೇಷಣಗಳನ್ನು ಹೊಂದಿರುವ ರುದ್ರ ಎಂಬುವವನು ಓರಂಗಲ್ಲ ನೆಲವೀಡಿನಿಂದ ರಾಜ್ಯಭಾರ ಮಾಡುವಾಗ ಈತನ ಮಗಳಾದ ರುದ್ರಮದೇವಿಯ ಬಂಗಾಳ, ಗುಜ್ಜರ, ಮಗಧ, ಸೇವುಣ, ಮಾಳವ, ಮೊದಲಾದ ಅರಸರನ್ನು ಜಯಸಿದ್ದಳೆಂದು ವರ್ಣಿಸಿದೆ. ಈಕೆಯ ರಾಜ್ಯಭಾರವನ್ನು ಉದ್ಧರಿಸುವವನು ಸರ್ಪವಂಶದ ಭೈರವಭೂಪ. ವಿಷ್ಣುವಿಗೆ ಗರುಡನಂತೆ, ರಾಮನಿಗೆ ಹನುಮಂತನಿದ್ದಂತೆ, ರುದ್ರಮದೇವಿಗೆ ಕಾರ್ಯಸಂಪತ್ತಿಗೆ ಈತನೇ ಕಾರಣನೆಂಬಂತೆ ಆತನನ್ನು ಹೊಗಳಿದೆ. ಮುಂದುವರಿದು ದ್ರವಿಳನಿಂದ ಆನೆಗಳನ್ನು ಕಾಂಬೋಜಿನಿಂದ ಕುದುರೆಗಳನ್ನು ಯಾದವನಿಂದ ದೇಶವನ್ನು ತಂದು ರುದ್ರಮದೇವಿಗೆ ನೀಡಿದ ವಿಖ್ಯಾತಿ ಈ ಭೈರವನದಾಗಿದೆ ಎಚಿದು ಶಾಸನದಲ್ಲಿ ಹೇಳಲಾಗಿದೆ.

ಸೇವುಣರು

ಕ್ರಿ.ಶ. ೧೧೯೧ರ ರಾಯಚೂರು ಜಿಲ್ಲೆಯ ಲಿಂಗಸೂರಿನ ಕರಡ್ಕಲ್(ಕ.ವಿ.ಶಾ.ಸಂ.೭, ಪೂರ್ವೋಕ್ತ, ಪು.೧೩೧-೧೩೪) ಶಾಸನವು ದೇವತರಿಯ ಯಾದವ ವಂಶದ ಭಿಲ್ಲಮನನ್ನು ಹೆಸರಿಸಿದೆ. ಈತನ ಮಹಾ ಮಂಕಳೇಶ್ವರನಾದ ಕ್ವದಂಬ ಕುಲದ ಬಜ್ಜರಸನು ಎಡದೊರೆ ನಾಡಿನ ಕರಡಿಕಲ್ಲ-೩೦೦ ರ ಮುದಗಲ್ಲನ್ನು ರಾಜಧಾನಿಯನ್ನಾಗಿ ಆಳುತ್ತಿದಂತೆ; ಈ ಬಜ್ಜರಸನ ಮಹಾಪ್ರಧಾನಿ ಆನೆಯ ಮಾಳಯ್ಯಾನಾಯಕ, ಈತನನ್ನು ಶಾಸನವು ಅತಿಯಾಗಿ ವರ್ಣಿಸಿದೆ. ಈತನು ಕೂಡ ಕದಂಬ ವಂಶದವನೆಂದು, ಶಾಸನದಿಂದ ತಿಳಿಯುತ್ತದೆ. ಕರಡಿಕಲ್ಲು ನಾಡಿನ ಪ್ರಕೃತಿಯನ್ನು ಮತ್ತು ಕೀರ್ತಿಯನ್ನು ಕಾವ್ಯಾತ್ಮವಾಗಿ ವರ್ಣಿಸುತ್ತದೆ. ಅಲ್ಲದೇ ಮಹಾಮಂಡಳೇಶ್ವರ ಬಜ್ಜರಸನನ್ನು ಹೊಗಳುತ್ತದೆ.

ಕ್ರಿ.ಶ.೧೨೧೭ರ ಅದೇ ಜಿಲ್ಲೆಯ ಮಾನ್ವಿ ತಾಲೂಕಿನ ಕವುತಾಳ(ಅದೇ, ಪು.೩೩೨) ಶಾಸನವು ಯಾದವ ಚಕ್ರವರ್ತಿ ಸೇವುಣ ಸಿಂಗಣನನ್ನು ಉಲ್ಲೇಖಿಸಿದೆ. ಈತನು ದೇವತರಿಯ ನೆಲೆವೀಡಿನಿಂದ ರಾಜ್ಯವಾಳುತ್ತಿರುವಾಗ ಈತನ ಸಾಮಂತನಾದ ಹೈಹೇಯ ವಂಶದ ಮಲ್ಲಿದೇವರಸನಿದ್ದನ್ನು. ಮಲ್ಲಿದೇವರಸನನ್ನು ನಾಲ್ಕು ಭಾಷೆ ಗಂಡ, ಸಮರ ಭಯಂಕರ ಮುಂತಾಗಿ ಕರೆದಿದೆ. ಅದೇ ಊರಿನ ಇನ್ನೊಂದು ಶಾಸನವು(ಅದೇ, ಪು.೯೮)ಕೂಡ ಯಾದವ ದೊರೆ ಸಿಂಗಣನನ್ನು ಹೆಸರಿಸಿದೆ. ಅವನ ಸಾಮಂತನಾದ ಇಮ್ಮಡಿ ಮಲ್ಲಿದೇವನನ್ನು ಉಲ್ಲೇಖಿಸುತ್ತದೆ.

ಕ್ರಿ.ಶ. ೧೨೨೩ರ ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ವೀರಗೋಟ(ಅದೇ, ಪು. ೩೩೫-೩೩೬) ಶಾಸನವು ಯಾದವ ಸಿಂಘಣನನ್ನು ಹೆಸರಿಸಿದೆ. ಈತನು ದೇವತರಿಯ ನೆಲೆ ಪೀಡಿನಲ್ಲಿದ್ದಾಗ ಆತನ ಆಧೀನದಲ್ಲಿದ್ದ ಸರ್ವಾಧಿಕಾರಿ, ಪರಮವಿಶ್ವಾಸಿ, ಮಹಾಪ್ರಧಾನಿ

ಬಾಹತ್ತರ (೭೨) ನಿಯೋಗಾಪತಿ ಪುರುಷೊತ್ತಮ ನಾಯಕ ಈತನ ತಮ್ಮ ನರೊತ್ತಮ ದೇವ ಈತನ ಮಹಾಮಂಡಳೇಶ್ವರ ಚಾಡರಸ ಸೇರಿ ಸಂಕರ ದೇವರಿಗೆ ದಾನ ನೀಡಿದ ವಿಷಯ ಉಲ್ಲೇಖಿಸಿದೆ.

ವಿಜಯನಗರದ ಅರಸರು

ದಕ್ಷಿಣ ಭಾರತದಲ್ಲಿ ಕ್ರಿ.ಶ. ೧೨೯೬ರಿಂದ ೧೩೩೬ರ ವರೆಗೆ ಮುಸಲ್ಮಾನರ ದಾಳಿಯು ನಿರಂತರವಾಗಿ ನಡೆದು, ಇಲ್ಲಿನ ರಾಜ್ಯಗಳೆನ್ನೆಲ್ಲಾ ಬಲಹೀನವಾಗಿದ್ದವು. ಈ ಅವಧಿಯಲ್ಲಿ ರಾಜಕೀಯ ಅನಾಯಕತ್ವ ತಲೆದೊರಿತು. ದೇವಗಿರಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಡಳಿತ ನಡೆಸಿದ ಸೇವುಣರು, ಹೊಯ್ಸಳರು ದ್ವಾರಸಮುದ್ರ ರಾಜಧಾನಿಯನ್ನಾಗಿ, ಕಾಕತಿಯರು ಓರಂಗಲ್ಲನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದ ಸಂದರ್ಭದಲ್ಲಿ ಉತ್ತರ ಭಾರತದಿಂದ ಬರುತ್ತಿದ್ದ ದಾಳಿಯನ್ನು ಎದುರಿಸಲಾರದೇ ತಮ್ಮ ಅಸ್ತಿತ್ವವನ್ನು ಕಳೆದುಕೊಂಡರು. ಇಂತಹ ಸಂದರ್ಭದಲ್ಲಿ ಹೊಯ್ಸಳರ ಆಡಳಿತದಲ್ಲಿ ಅಧಿಕಾರಿಗಳಾಗಿದ್ದ ಸಂಗಮನ ಮಕ್ಕಳಾದ ಹಕ್ಕ ಮತ್ತು ಬುಕ್ಕರು ಕ್ರಿ.ಶ.೧೩೩೬ರಲ್ಲಿ ಹೊಸದೊಂದು ರಾಜ್ಯಸ್ಥಾಪನೆ ಮಾಡಿ ರಾಜಕೀಯ ಅಸ್ಥಿರತೆಯನ್ನು ಕೊನೆಗಾಣಿಸಿದರು. ಆರಂಭದಲ್ಲಿ ಆನೆಗೊಂದಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿದ್ದ ಇವರು ಕೆಲವೇ ಕೆಲವು ದಿನಗಳಲ್ಲಿ ಅದನ್ನು ಪಂಪಪೂರ್ವ ಸಮೀಪದಲ್ಲಿ ನಿರ್ಮಿತವಾದ ಹೊಸ ಪಟ್ಟಣಕ್ಕೆ ಸ್ಥಳಾಂತರಿಸಿ, ಅದಕ್ಕೆ ವಿಜಯನಗರ ವೆಂದು ಹೆಸರು ನೀಡಿದರು.

ಈ ವಿಜಯನಗರವನ್ನೇ ಕೇಂದ್ರವನ್ನಾಗಿರಿಸಿಕೊಂಡು ನಾಲ್ಕು ವಂಶಗಳಾದ ಸಂಗಮ, ಸಾಳುವ, ತುಳು ಹಾಗೂ ಅರವೀಡು ವಂಶಗಳು ರಾಜ್ಯಭಾರ ಮಾಡಿದವು. ಈ ರಾಜ ಮನೆತನಕ್ಕೆ ಸಂಬಂಧಿಸಿದ ಶಾಸನಗಳು. ರಾಯಚೂರು, ಕೊಪ್ಪಳ, ಮತ್ತು ತೆಲಂಗಾಣ ಪ್ರದೇಶಗಳಲ್ಲಿ ಲಭಿಸಿವೆ.

ಸಂಗಮವಂಶ

ಮೊತ್ತ ಮೊದಲಿಗೆ ಈ ವಂಶಕ್ಕೆ ಸಂಬಂಧಿಸಿದ ಶಾಸನವು ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನಲ್ಲಿ ಲಭಿಸಿದೆ. ಇದು ಕ್ರಿ.ಶ. ೧೩೪೨ರ(ಕ.ವಿ.ಶಾ.ಸಂ.೭, ಪೂರ್ವೋಕ್ತ, ಪು.೩೩೬)ಶಾಸನವು ಸಂಗಮ ವಂಶದ ಒಂದನೆ ಬುಕ್ಕರಾಯನ ಮಗ ಹರಿಹರನನ್ನು ಉಲ್ಲೇಖಿಸಿದೆ. ಈ ಶಾಸನದ ಭಾಷೆ ಸಂಸ್ಕೃತ, ಲಿಪಿ ಕನ್ನಡದ್ದಾಗಿದೆ. ಹರಿಹರನ ದಂಡನಾಯಕನಾದ ಬೈಚದಂಡನಾಯಕನ ಮಗ ಇರುಗಪನು ಶಿಲಾಚೈತ್ಯಾಲಯವನ್ನು ನಿರ್ಮಿಸಿದುದ್ದಕ್ಕೆ ಬೈಚದಂಡನಾಯಕನು ದಾನ ನೀಡುತ್ತಾನೆ. ಮುಂದುವರೆದು ಈ ಶಾಸನದಲ್ಲಿ ಕರ್ನಾಟಕ ದೇಶ ಹಾಗೂ ಕುಂತಳ ವಿಷಯದ

ಪ್ರಸ್ತಾಪವಿರುವುದನ್ನು ಕಂಡುಬರುತ್ತದೆ. ಮುಂದೆ ಕೊಪ್ಪಳದ ಕ್ರಿ.ಶ. ೧೩೪೬ರ(ಅದೇ, ಪು.೩೯)ಶಾಸನದಲ್ಲಿ ಹರಿಹರನ ಉಲ್ಲೇಖವಿದೆ.

ಕ್ರಿ.ಶ. ೧೩೪೯ರ ಕೊಪ್ಪಳ ಜಿಲ್ಲೆಯ ಶಾಸನವು(ಅದೇ, ಪು.೩೪೨)ಹರಿಹರನ ಮಗ ಸಾವಣ ಒಡೆಯನನ್ನು ಹೆಸರಿಸಿದೆ. ಆದರೆ ಈವರೆಗೆ ನಮಗೆ ದೊರೆಡ ಸಿದ್ಧ ವಂಶಾವಳಿ ಪ್ರಕಾರ ಸಾವಣ್ಣನನ್ನು ಒಂದನೆಯ ಹರಿಹರನ ತಮ್ಮನಾದ ಕಂಪಣನ ಮಗನೆಂದು ತಿಳಿಸಿವೆ. ಆದರೆ ಈ ಶಾಸನ ಸಿಕ್ಕಮೇಲೆ ಸಾವಣ ಒಡೆಯನು ಒಂದನೆ ಹರಿಹರನ ಮಗನೆಂದು ಸ್ಪಷ್ಟವಾಗಿ "ಶ್ರೀ ಹರಿಹರನಾಥನ ಕುಮಾರ ಸಾವಚಿಣವೊಡೆಯರು ಎನ್ನುವ ಉಲ್ಲೇಖ ಶಾಸನದ ೮, ೯ ಸಾಲಿನಲ್ಲಿ ಬಂದಿದೆ.

ಕಂಪ: ಕ್ರಿ.ಶ. ೧೩೮೨ ರ ಕೊಪ್ಪಳ ಜಿಲ್ಲೆಯ ಗಂಗಾವತಿ(ಅದೇ, ಪು.೩೪೮) ಶಾಸನವು ಸಂಗಮ ವಂಶದ ಕಂಪನನ್ನು ಹೆಸರಿಸಿದೆ. ಏವರೆಗೆ ಕೆಲವು ಕೃತಿಗಳಲ್ಲಿ ಕಂಪನು ಒಂದನೇ ಬುಕ್ಕರಾಯನ ಮಗನೆಂದು ಹೆಸರಿಸಿವೆ. ಆದರೆ ಈ ಶಾಸನವು "ಕುಮಾರ ಕಂಪಭೂಪಾಲ ಶ್ರೀಮಾನ್ ಹರಿಹರಾತ್ಮಜ:" ನೆಂದು ಉಲ್ಲೇಖಿಸಿದೆ. ಹೀಗಾಗಿ ಕಂಪನು ಮೊದಲನೆ ಹರಿಹರನ ಮಗನೆಂದು ಹೇಳಲು ಸಾಧ್ಯವಿದೆ ಎಂದು ಹೇಳಬಹುದು. ಮುಂದುವರೆದು ಕಂಪನು ತುಂಗಾಭದ್ರಾ ತೀರದಲ್ಲಿ ಸೋಪಾನ ಮಾಡಿಸಿದಂತೆ ಹೇಳಿದೆ.

ಪ್ರತಾಪ ದೇವರಾಯ: ಕ್ರಿ.ಶ. ೧೪೩೬ ರ ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲೂಕಿನ ಮುದಗಲ್ ಕೋಟೆ(ಕ.ವಿ.ಶಾ.ಸಂ.೭, ಪೂರ್ವೋಕ್ತ, ಪು. ೧೮೬–೧೮೭)ಶಾಸನವು ವೀರಪ್ರತಾಪ ದೇವರಾಯನನ್ನು ಉಲ್ಲೇಖಿಸುತ್ತದೆ. ವೀರ ಪ್ರತಾಪ ದೇವರಾಯನು ರಾಜ್ಯಭಾರ ಮಾಡುವಾಗ ಮುದುಗಲ್ಲನಾಡನ್ನು ವರದಣ್ಣನಾಯಕನಿಗೆ ನೀಡಿದ. ಮುದುಗಲ್ಲ ಸಿಂಪಿಗ ಭೂತನಾಥನ ಮಗ ರಾಹುತ ವೀರಣ್ಣನು ಸುರಿತಾಣನ ತಿಟ್ಟದ ಕೋಟೆಯಲ್ಲಿದ್ದ ಚಿನ್ನದ ಕಲಶವನ್ನು ತೆಗೆದುಕೊಂಡು ಬರುತ್ತಾನೆ. ವಿಷಯ ರಾಯನಿಗೆ ತಿಳಿಸಿದಾಗ ಆತ ಸಂತೋಷಿಸಿದ. ವರದಣ್ಣ ನಾಯಕ, ಮುದುಗಲ್ಲ ಗ್ರಾಮದ ಗವುಡು ಪ್ರಜೆಗಳು ಸಮಸ್ತ ಹಲರೂ ಕೂಡಿಕೊಂಡು ರಾಹುತ್ತ ವೀರಣ್ಣನಿಗೆ ಮೇಟಿಗೊಳವನ್ನು ದಾನವಾಗಿ ಬಿಡುತ್ತಾರೆ ಎಂಬುವುದನ್ನು ತಿಳಿಸುತ್ತದೆ.

ಕಾಲದ ಉಲ್ಲೇಖವಿಲ್ಲದ ಶಾಸನವು ಆಂಧ್ರಪ್ರದೇಶದ ನಿಜಾಮಬಾದ ಜಿಲ್ಲೆಯ ಬೋಧನ ತಾಲೂಕಿನ ಕನಿಗಿರಿ(ಕ.ವಿ.ಶಾ.ಸಂ.೫, ಭಾಗ ೨, ಪೂರ್ವೋಕ್ತ, ಪು.೩೩೩–೩೩೪)ಶಾಸನವು ವಿಜಯನಗರದ ದೊರೆ ವೀರ ಪ್ರತಾಪದೇವರಾಯನನ್ನು ಉಲ್ಲೇಖಿಸಿದೆ. ಇದರಲ್ಲಿ ಶಿವಾಚಾರ ಸಂಪನ್ನ ಹದಿನೆಂಟು ಸಮಯ, ಕಮ್ಮರಾಜ್ಯ ಮೊದಲಾದ ಶಬ್ದಗಳನ್ನು ಮಾತ್ರ ಗುರುತಿಸಬಹುದಾಗಿದೆ.

ಕ್ರಿ.ಶ.೧೪೩೬ರ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಗಂಗಾ-೮೦ ಕನಕಗಿರಿ (ಕ.ವಿ.ಶಾ.ಸಂ.೨, ಪೂರ್ವೋಕ್ತ, ಪು.೩೭೦-೩೭೧)ಶಾಸನವು ವಿಜಯನಗರದ ಪ್ರಭುದೇವರಾಯನನ್ನು ಹೆಸರಿಸುತ್ತದೆ. ದೊರಿ ಪ್ರಭುದೇವರಾಯನು ಕನಕಗಿರಿ ಪೇಟೆಯನ್ನು ಕನಕಗಿರಿನಾಥ ದೇವರ ಅಮೃತಪಡಿ ನೈವೇದ್ಯಕ್ಕಾಗಿ ಬಿಟ್ಟಿದ್ದುದ್ದನ್ನು ಸೂಚಿಸುತ್ತದೆ. ಅಲ್ಲದೆ ಇದೇ ಶಾಸನದಲ್ಲಿ ಬೇರೆ ಬೇರೆ ಕಾಲಕ್ಕೆ ಸೇರಿದ ನಾಲ್ಕು ಶಾಸನಗಳಿರುವುದು ವಿಶೇಷವಾಗಿದೆ. ಇವೆಲ್ಲವೂ ವಿಜಯನಗರದ ಅರಸರು ಕನಕಾಚಲ ಲಕ್ಷ್ಮೀನರಸಿಂಹ ಸ್ವಾಮಿಗೆ ನೀಡಿದ ದಾನದ ವಿವರಗಳನ್ನು ಒಳಗೊಂಡಿವೆ.

ಕ್ರಿ.ಶ.೧೪೩೭ರ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಆನೆಗೊಂದಿ(ಅದೇ, ಪು. ೩೩೫)ಶಾಸನವು ವಿಜಯನಗರದ ದೊರೆ ವೀರ ಪ್ರೌಢ ಪ್ರತಾಪದೇವರಾಯನನ್ನು ಹೆಸರಿಸಿದೆ. ಈ ಶಾಸನದಲ್ಲಿ ವೀರ ಪ್ರೌಢಪ್ರತಾಪದೇವನ ಅಳಿಯ ತಿರುವೆಂಕಟ ಸಂಗಮರಾಯನು ಕೂಡಿ ಆನೆಗೊಂದಿಯ ಬಯಿರವದೇವರಿಗೆ ಏನನ್ನೊ ಮಾಡಿಸಿದಂತೆ ತಿಳಿದುಬರುತ್ತದೆ. ಕೊನೆಯಲ್ಲಿ ಅದನ್ನು ತಪ್ಪಿದಂಗೆ ಎನ್ನುವ ಶಾಪಾಶಯಗಳು ಬರುತ್ತವೆ.

ಸಾಳ್ವ ವಂಶ

ಸಾಳ್ವ ನರಸಿಂಗದೇವ: ಕ್ರಿ.ಶ. ೧೪೮೮ರ ಕೊಪ್ಪಳ ಜಿಲ್ಲೆಯ ಕನಕಗಿರಿ ಶಾಸನವು(ಅದೇ, ಪು.೩೭೧)ವಿಜಯನಗರದ ಸಾಳ್ವ ನರಸಿಂಗದೇವನನ್ನು ಹೆಸರಿಸುತ್ತದೆ. ನರಸಿಂಗ ದೇವರಾಯನು ರಾಜ್ಯವಾಳುತ್ತಿದ್ದು, ಕನಕಗಿರಿನಾಥ ಸ್ವಾಮಿಯ ಅಮೃತಪಡಿಗೆ ಕನಕಗಿರಿಯ ವಾಯುವ್ಯ ದಿಕ್ಕಿನ ಗೋಡಿರಹಾಳ ಗ್ರಾಮವನ್ನು ಮತ್ತು ಅದಕ್ಕೆ ಸೇರುವ ಗೊವರಹಾಳನ್ನು ನೀಡಿದ್ದುದರ ಉಲ್ಲೇಖವಿದೆ.

ತುಳುವಂಶ

ಕೃಷ್ಣದೇವರಾಯ: ಕ್ರಿ.ಶ.೧೫೧೨ರ ಕೊಪ್ಪಳ ಜಿಲ್ಲೆಯ ಕನಕಗಿರಿ(ಅದೇ, ಪು.೩೭೧)ಶಾಸನವು ವಿಜಯನಗರದ ಪ್ರಸಿದ್ಧ ದೊರೆ ಕೃಷ್ಣದೇವರಾಯನನ್ನು ಹೆಸರಿಸಿದೆ. ಶಾಸನದಲ್ಲಿ ಶಕ ವರುಷ ೧೪೩೮ ಎಂದು ಇರುವ್ಯದರಿಂದ ಕ್ರಿ.ಶ. ೧೫೧೨ಕ್ಕೆ ಸಮನಾಗುತ್ತದೆ. ಬಹುಶಃ ಈತನ ಆಳ್ವಿಕೆಯ ಆರಂಭ ದಿನದ ಶಾಸನವಾಗಿದೆ. ಕ್ರಿ.ಶ. ೧೫೧೨ ರಲ್ಲಿ ಕೃಷ್ಣದೇವರಾಯನು ಆಳ್ವಿಕೆ ಮಾಡುತ್ತಿರುವಾಗ ಶ್ರೀ ಕನಕಗಿರಿನಾಥ ದೇವರ ಅಮೃತಪಡಿಗೆ ಕನಕಗಿರಿ ಪೇಟೆಯ ಸ್ಥಳದ ಸುಂಕ, ತಳವಾರಿಕೆ ಸುಂಕ, ಚಂನ್ನಪುರ, ತೊರಗಲ್ಲು ಸೇವೆಯ ಯಡಿಗಲ್ಲು ಕಳಸ ಗ್ರಾಮ, ನವಿತಿಯ ಸೀಮೆಯಲ್ಲಿನ ಬಾರಾಪುರ ಒಟ್ಟು ಮೂರು ಗ್ರಾಮಗಳನ್ನು ನೀಡಿದ್ದಾನೆಂದು ಉಲ್ಲೇಖಿಸುತ್ತದೆ.

ಕ್ರಿ.ಶ.೧೫೨೧ರ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ-೧೯ ಚೀಕಲಪರ್ವ(ಕ.ವಿ. ಶಾ.ಸಂ.೭, ಪೂರ್ವೋಕ್ತ ಪು.೨೪೩) ಶಾಸನವು ವಿಜಯನಗರದ ಅರಸ ಕೃಷ್ಣದೇವರಾಯನಿಗೆ ಸಂಬಂಧಿಸಿದ ಕೆಲವು ವಿಷಯಗಳನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಶಕ ವರ್ಷ ೧೪೪೩ ಎಂದಿದ್ದು, ಇದರ ಪ್ರಕಾರ ಕ್ರಿ.ಶ. ೧೫೨೧ ಆಗುತ್ತದೆ. ಈ ಸಂದರ್ಭದಲ್ಲಿ ಕೃಷ್ಣದೇವರಾಯನ ಆಳ್ವಿಕೆ ಕಾಲವಾಗಿತ್ತು. ಈ ಶಾಸನದಲ್ಲಿ ಉಲ್ಲೇಖಗೊಂಡ ಈತನ ದಿಗ್ವಿಜಯದ ಬಗ್ಗೆ ವಿವರಿಸುತ್ತದೆ. ರಾಯಚೂರು ಅಲಂಪೂರ, ಮಾನವೆ, ಹಾನಗಲ್ಲು, ಮತ್ತು ಮಾಗಡೆ ದುರ್ಗಗಳನ್ನು ಗೆದ್ದು ಕೂಡಲೂರು ಸಂಗಮಕ್ಕೆ ಬಂದು; ಆ ಸಂಗಮವು ಕೃಷ್ಣವೇಣಿ ಮತ್ತು ಭೀಮ್ಮರಥಿಯ ಸಂಗಮವಾಗಿದ್ದು, ಅಲ್ಲಿನ ಸಂಗಮದಲ್ಲಿ ರತ್ನಧೇನು ಮಹಾದಾನವನ್ನು ಮಾಡಲು ಬಯಸಿ, ತನ್ನ ಪತ್ನಿಯರಾದ ಚಿಂನಾದೇವಿಯ ಕೈಯಲ್ಲಿ ಗೋದಾನವನ್ನು, ತಿರುಮಲದೇವಿ ಕೈಯಲ್ಲಿ ಕನಕದಾನವನ್ನು ಮಾಡಿ; ಮಾನವೆ ಸೀಮೆಯ ಚೀಕಲಪರವಿಯನ್ನು ತಿರುವೆಂಗಳನಾಥ ದೇವರಿಗೆ ದಾನ ನೀಡಿದ ವಿಷಯ ಪ್ರಸ್ತಾಪಿಸಿದೆ.

ಕ್ರಿ.ಶ.೧೫೨೧ರ ಆಂಧ್ರಪ್ರದೇಶದ ಮಹಬೂಬನಗರ್ ಜಿಲ್ಲೆಯ ಅಲಂಪೂರ ಮ್ಯೂಜಿಯಂ ನಲ್ಲಿನ(ಕ.ವಿ.ಶಾ.ಸಂ.೫, ಭಾಗ.೨, ಪೂರ್ವೋಕ್ತ, ಶಾ.ಸಂ.೪೬೬, ಪು.೧೩೬-೧೪೨) ಶಾಸನಗಳು ವಿಜಯನಗರ ಅರಸ ಕೃಷ್ಣದೇವರಾಯನ ಆಳ್ವಿಕೆಯನ್ನು ಹೆಸರಿಸುತ್ತವೆ. ಈ ಎರಡು ಶಾಸನಗಳಲ್ಲಿಯೂ ಕೃಷ್ಣದೇವರಾಯನು ಉತ್ತರದ ರಾಜಕಾಯನದ ದಿಗ್ವಿಜಯದಿಂದ ರಾಚೂರನ್ನು(ಇಂದಿನ ಕರ್ನಾಟಕದ ರಾಯಚೂರು ಜಿಲ್ಲೆ) ಗೆದ್ದು, ಗೌರೆದಂಣಾಯಕರ ಬಸವಪ್ಪಯ್ಯನಿಗೆ ಅಲಂಪುರ ಸೀಮೆಯನ್ನು ಅಮರ ದಂಣಾಯಕತನಕ್ಕೆ ಕೊಟ್ಟಿದ್ದನೆಂದೂ ಇಲ್ಲಿ ಉಲ್ಲೇಖಿಸಲಾಗಿದೆ.

ಕ್ರಿ.ಶ.೧೫೨೭ರ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕೆಸರಟ್ಟಿ ಶಾಸನವು(ಕ.ವಿ. ಶಾ.ಸಂ.೨, ಪು.೪೪೨) ದೊರೆ ಕೃಷ್ಣದೇವರಾಯನ ಉಲ್ಲೇಖಿಸಿದೆ. ಬಹುಶ: ಈ ಭಾಗದಲ್ಲಿ ಲಭಿಸಿದ ಕೊನೆಯ ಶಾಸನ ಇದಾಗಿದೆ. ಈ ಶಾಸನವು ಕೆಸರಟ್ಟಿಯಲ್ಲಿ ಕೃಷ್ಣದೇವರನ್ನು ಪ್ರತಿಷ್ಠೆ ಮಾಡಿದುದರ ಬಗ್ಗೆ ಉಲ್ಲೇಖಿಸುತ್ತದೆ.

ಅಚ್ಯುತದೇವರಾಯ: ಕ್ರಿ.ಶ. ೧೫೩೦ರ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕನ್ನೇರುಮಡು ಶಾಸನವು(ಅದೇ, ಪೂರ್ವೋಕ್ತ, ಪು.೩೬೫) ತೌಳವವಂಶದ ವಿಜಯನಗರ ಅರಸ ಅಚ್ಯುತದೇವ ರಾಯನ ಆಳ್ವಿಕೆಯ ಕಾಲಕ್ಕೆ ಸೇರಿದುದು. ಇದೇ ಈ ಜಿಲ್ಲೆಯಲ್ಲಿ ಲಭಿಸಿದ ಈತನ ಆಳ್ವಿಕೆಯ ಮೊದಲ ಶಾಸನ. ಸಾಳುವ ದೇವರಾಯನು ಅಚ್ಯುತದೇವರಾಯನಿಗೆ ಪುಣ್ಯವಾಗಬೇಕೆಂದು ಕನ್ನೇರುಮಡುವಿನ ಅಮರೇಶ್ವರ ದೇವರಿಗೆ ಯಲಬರಿಗೆಯ ಸೀಮೆಗೆ ಸೇರುವ ಸುಳೆಯ ಕ್ವರೆಯ

ಇಕ್ಕುಷಗದ್ದೆಯನ್ನು ಸೇನಬೋವ ಮಾಳಯ್ಯನು ದೇವರ ಅಂಗರಂಗಭೋಗ ಅಮೃತಪಡಿ ನಿವೇದ್ಯಕ್ಕೆ ಸಮರ್ಪಿಸಿದನು ಎಂದು ತಿಳಿಸುತ್ತದೆ.

ಆನೆಗೊಂದಿಯ ಕ್ರಿ.ಶ. ೧೫೩೧ ಶಾಸನ(ಅದೇ, ಪು.೩೮೦) ಕ್ರಿ.ಶ. ೧೫೩೩ರ ಶಾಸನ(ಅದೇ, ಪು. ೩೫೬) ಕ್ರಿ.ಶ. ೧೫೩೪ರ(ಅದೇ, ಪು.೩೫೫) ಶಾಸನಗಳು ಅಚ್ಯುತರಾಯನನ್ನು ಉಲ್ಲೇಖಿಸುತ್ತವೆ.

ಕ್ರಿ.ಶ.೧೫೩೭ರ ಇದೇ ಜಿಲ್ಲೆಯ ಯಲಬುರ್ಗಾ ತಾಲೂಕಿನ-೧೪ ಕಲ್ಲೂರು ಮತ್ತು ಬಂಡಿಹಾಳದ ಶಾಸನಗಳಲ್ಲಿ(ಅದೇ, ಪು.೩೭೧)ಅಚ್ಯುತರಾಯನ ಆಳ್ವಿಕೆಯಲ್ಲಿ ಗುಜ್ಜಲವಂಶದ ಅರಸರು ಇವರ ಮಾಂಡಲಿಕರಾಗಿದ್ದಂತೆ ತಿಳಿಯುತ್ತದೆ.

ಕ್ರಿ.ಶ. ೧೫೩೭ರ ರಾಯಚೂರು ಜಿಲ್ಲೆಯ ಲಿಂಗಸೂಗೂರಿನ ಮಸ್ಕಿ ಶಾಸನವು(ಕ.ವಿ.ಶಾ.ಸಂ.೭, ಪೂರ್ವೋಕ್ತ, ಪು.೧೭೦)ಅರಸ ಅಚ್ಯುತರಾಯ ಆಳುತ್ತಿರಲು ಗುಜ್ಜಲ ಇಮ್ಮಡಿ ಮೇದಿನಿರಾಯನು ತನ್ನ ಕೈಕೆಳಗಿನ ಮೊಸಗೆಯ ಮೂಲಸ್ಥಾನ ದೇವರಾದ ಮಲ್ಲಿಕಾರ್ಜುನನಿಗೆ ಭೂ-ದಾನವನ್ನು ಕೊಟ್ಟ ವಿಷಯ ತಿಳಿಸುತ್ತದೆ.

ಹೀಗಾಗಿ ಈ ಪ್ರದೇಶಗಳಲ್ಲಿ ರಾಜ್ಯಭಾರ ಮಾಡಿದ ವಿವಿಧ ರಾಜಮನೆತನದ ಅರಸರು ಹೈದ್ರಾಬಾದ್ ಕರ್ನಾಟಕದಿಂದ ತೆಲಂಗಾಣ ಪ್ರದೇಶದ ವರೆಗೆ ಆಳ್ವಿಕೆ ನಡೆಸಿದ ರಾಜರು ತಮ್ಮ ಮಹತ್ವಾಂಕ್ಷಿಯಿಂದ ಸಾಮ್ರಾಜ್ಯದ ವಿಸ್ತರಣೆ ಮಾಡಿ ಅಂದಿನ ವಿಶಾಲ ಕರ್ನಾಟಕ, ಇಂದು ಗತವೈಭವ ಸಾರುವ ಕರ್ನಾಟಕ ರಾಜ್ಯವಾಗಿದೆ.

ಅಧ್ಯಾಯ ನಾಲ್ಕು

ಆಡಳಿತ ಅಧ್ಯಯನ

ಅಧ್ಯಾಯ ನಾಲ್ಕು

ಆಡಳಿತ ಅಧ್ಯಯನ

ಯಾವುದೇ ಒಂದು ಪ್ರದೇಶದ ಇತಿಹಾಸವೆಂದರೆ,ಕೇವಲ ಆ ಪ್ರದೇಶದಲ್ಲಿ ಆಳಿದ ರಾಜರ ಹೋರಾಟದ ಜೀವನ, ಸಾಧನೆಗಳು, ಆಡಳಿತಕ್ರಮ ಇವುಗಳಿಗೆ ಮಾತ್ರ ಸೀಮಿತವಾದುದಲ್ಲ. ಅಲ್ಲಿ ನೆಲೆಸಿರುವ ಒಟ್ಟು ಜನ ಸಮುದಾಯದ ಅಧ್ಯಯನವೇ ಆಗಿರುತ್ತದೆ. ಆದರೆ ಈವರೆಗೆ ಬಂದಿರುವ ಅನೇಕ ಇತಿಹಾಸಕೃತಿಗಳಲ್ಲಿ ಬರೀ ರಾಜರ ಬಿರುದಾವಳಿ, ಆಡಳಿತ, ಸೋಲು ಗೆಲುವು, ಅವರು ಮಾಡಿದ ದಿಗ್ವಿಜಯಗಳು ಇವೇ ಮುಂತಾದ ರಾಜಕೀಯ ಅಂಶಗಳನ್ನು ಪ್ರಧಾನವಾಗಿ ಚಿತ್ರಿಸಿರುವುದನ್ನು ಕಾಣುತ್ತೇವೆ. ಒಂದು ಕಾಲದ ಇತಿಹಾಸವೆಂದರೆ ಆ ಕಾಲದ ರಾಜ ಮಹಾ ರಾಜರ ಇತಿಹಾಸವಷ್ಟೇ ಅಲ್ಲ. ಆಯಾ ರಾಜರ ಆಡಳಿತ ಪ್ರದೇಶಗಳಲ್ಲಿ ನೆಲೆಸಿರುವ ಪ್ರಜೆಗಳೆಲ್ಲರ ಒಟ್ಟು ಜನಾಂಗಿಕ ಅಧ್ಯಯನವನ್ನು ಒಳಗೊಂಡದ್ದೇ ನಿಜವಾದ ಇತಿಹಾಸ. ಇತಿಹಾಸ ಗ್ರಂಥಗಳಲ್ಲಿ ಇಂತಹ ದೃಷ್ಟಿಕೋನವು ಇಲ್ಲವೆನ್ನುವಷ್ಟು ವಿರಳ. ಅದು ಚಿತ್ರಿಸಿದರೂ ಗೌಣವಾಗಿ ಚಿತ್ರಿಸಿ, ಕೈಬಿಟ್ಟಿರುವುದನ್ನು ಕಂಡು ಬರುತ್ತದೆ. ಆದರೆ ಇಂದು ಇತಿಹಾಸದ ಅಧ್ಯಯನದ ದೃಷ್ಟಿಕೋನವು ಬದಲಾಗಿದೆ.ಒಂದು ಪ್ರದೇಶದ ಒಟ್ಟು ಜನಸಮುದಾಯದ ಜೀವನ ವಿಧಾನವು ಇಂದು ಇತಿಹಾಸವೆನಿಸುತ್ತದೆ. ಹೀಗಾಗಿ ಆಯಾ ನಾಡಿನ ಜನರ ಸಂಪ್ರದಾಯಗಳು, ಕಲೆಗಳು, ಧರ್ಮಗಳು, ಸಾಮಾಜಿಕ ವ್ಯವಸ್ಥೆ, ಆಹಾರದ ಸ್ವರೂಪ, ಆರ್ಥಿಕವ್ಯವಸ್ಥೆ, ಉಡುಗೆತೊಡುಗೆಗಳು, ಹವ್ಯಾಸಗಳು, ವೈವಾಹಿಕ ಸಂಬಂಧಗಳು, ಮನರಂಜನೆಗಳು, ಭೌಗೋಳಿಕ ಚರಿತ್ರೆ ಇತ್ಯಾದಿಗಳೆಲ್ಲವನ್ನೂ ಒಳಗೊಂಡ ಸಮಗ್ರ ಹಾಗೂ ಆಳವಾದ ಚಿತ್ರಣವಿದ್ದಲ್ಲಿ ಮಾತ್ರ ಸಮಗ್ರ ಇತಿಹಾಸವೆನಿಸುತ್ತದೆ. ಇಂತಹ ಒಂದು ಸಂಕೀರ್ಣ ವಿಷಯಗರ್ಭಿತ ಅಧ್ಯಯನವನ್ನು 'ಸಾಂಸ್ಕೃತಿಕ ಅಧ್ಯಯನ'ವೆಂದು ಕರೆಯಲಾಗುತ್ತದೆ.

ಪ್ರಾಚೀನ ಹೈದರಾಬಾದ ಕರ್ನಾಟಕ ಮತ್ತು ಆಂಧ್ರಪ್ರದೇಶದ ತೆಲಂಗಾಣ ಪ್ರದೇಶಗಳಲ್ಲಿ ರಾಜರು ತಮ್ಮ ರಾಜ್ಯದ ಆಡಳಿತವನ್ನು ಸಮರ್ಪಕವಾಗಿ ನಡೆಸುವದಕ್ಕಾಗಿ ತಮ್ಮ ಅನುಕೂಲಕ್ಕೆ

ತಕ್ಕಂತೆ ಅನೇಕ ವಿಭಾಗಗಳನ್ನಾಗಿ, ವಿಂಗಡಿಸಿಕೊಂಡಿದ್ದರು. ಆಗಿನ ಆಡಳಿತವ್ಯವಸ್ಥೆಯನ್ನು ಪ್ರಧಾನವಾಗಿ ರಾಜ್ಯಾಡಳಿತ ಮತ್ತು ಪ್ರಾಂತೀಯ ಆಡಳಿತ ಎಂಬುದಾಗಿ ಎರಡಾಗಿ ವಿಂಗಡಿಸಿ ಕೊಳ್ಳಬಹುದು. ರಾಜ್ಯಾಡಳಿತದಲ್ಲಿ ರಾಜನೇ ಅಗ್ರ ಶ್ರೇಣಿಯಲ್ಲಿರುವವನು. ಆತನ ತರುವಾಯ ಯುವರಾಜ, ರಾಣಿಯರು, ಮಂತ್ರಿಗಳು ಮತ್ತು ಇತರ ಅಧಿಕಾರಿಗಳು ಬರುತ್ತಾರೆ. ಪ್ರಾಂತಿಯ ಆಡಳಿತಕ್ಕೆ ಸಂಬಂಧಿಸಿದಂತೆ ಸಾಮಂತ ರಾಜರು, ಮಾಂಡಳಿಕರು, ಊರುಗಳ ಆಡಳಿತ ನಡೆಸುವವ ಗಾವುಂಡರು, ಅಗ್ರಹಾರದ ಆಡಳಿತ ಕಾರ್ಯನಿರ್ವಹಿಸುವ ಮಹಾಜನರು ಇತ್ಯಾದಿಗಳು ಬರುತ್ತಾರೆ. ಈ ರೀತಿಯ ವಿಂಗಡಣಾವ್ಯವಸ್ಥೆಯನ್ನು ಪರೋಕ್ಷವಾಗಿಯಾದರೂ ಶಾಸನಗಳು ಉಲ್ಲೇಖಿಸುತ್ತವೆ. ಆಡಳಿತವು ವಿಕೇಂದ್ರಿಕರಣಗೊಂಡರೂ ಇವೆಲ್ಲ ರಾಜನ ನೇರ ಆಳಿಕೆಗೆ ಒಳಪಟ್ಟಿದ್ದವು ಎಂಬುದನ್ನು ಮಾತ್ರ ತಳ್ಳಿಹಾಕುವಂತಿಲ್ಲ. ಈ ಆಡಳಿತ ಘಟಕಗಳೆಲ್ಲವೂ ಸೇರಿಯೇ ಒಂದು ರಾಜ್ಯವೆನಿಸಿಕೊಳ್ಳುತ್ತಿದ್ದುದು. ಹೀಗಾಗಿ ಇಂದಿನ ಆಧುನಿಕ ಪದ್ಧತಿಯಂತೆ, ಪ್ರಾಚೀನ ಕಾಲದಲ್ಲಿಯೂ ಕೇಂದ್ರಾಡಳಿತ, ರಾಜ್ಯಾಡಳಿತ, ಪ್ರಾಂತಾಡಳಿತ, ಗ್ರಾಮಾಡಳಿತ ಇತ್ಯಾದಿಯಾಗಿ ವಿಕೇಂದ್ರಿತ ಆಡಳಿತ ಪದ್ಧತಿಯು ಪ್ರಚಲಿತವಿತ್ತೆಂಬುದು ಈ ಪ್ರದೇಶಗಳಲ್ಲಿ ಲಭಿಸಿರುವ ಶಾಸನಗಳಿಂದ ಸ್ಪಷ್ಟವಾಗುತ್ತದೆ.

"ಪ್ರಾಚೀನ ಕರ್ನಾಟಕದ ಆಡಳಿತ ವ್ಯವಸ್ಥೆಯನ್ನು ಸ್ಥೂಲವಾಗಿ ಎರಡು ಭಾಗಗಳಾಗಿ ವಿಂಗಡಿಸಬಹುದು. ರಾಜ್ಯಾಡಳಿತ ಮತ್ತು ಊರಾಡಳಿತ. ಈ ವಿಭಜನೆಯು ಕೇವಲ ಸೌಕರ್ಯಕ್ಕಾಗಿ ಮಾಡಿಕೊಂಡಿರುವಂಥದುದ್ದು ಎಂಬುದನ್ನು ಮರೆಯಬಾರದು. ಏಕೆಂದರೆ ಒಂದನ್ನು ಬಿಟ್ಟು ಮತ್ತೊಂದು ಇದ್ದಿಲ್ಲ. ಒಂದರ ಸಹಕಾರದಿಂದ ಮತ್ತೊಂದು ನಡೆಯುತ್ತಿದ್ದಿತು. ಆದರೂ ಅಂತಹ ವಿಭಜನೆಯಲ್ಲಿ ಒಂದು ಜಾತಿತ್ವವೂ ಇದೆಯೆಂಬುದನ್ನು ಮರೆಯಬಾರದು. ಗ್ರಾಮಗಳ ಮತ್ತು ನಗರಗಳ ಮೊತ್ತವೇ ರಾಜ್ಯ. ಎಲ್ಲಕ್ಕೂ ರಾಜನೇ ಅಧಿಪತಿ. ಎಲ್ಲವೂ ಅವನ ಆಳ್ವಿಕೆಗೆ ಒಳಪಟ್ಟಿದೆ. ಆದರೂ ಪ್ರಾಚೀನ ಕರ್ನಾಟಕದ ಗ್ರಾಮಗಳ ಆಳ್ವಿಕೆಯನ್ನು ಪರಿಶೀಲಿಸಿದರೆ ಒಂದೊಂದು ಗ್ರಾಮವೂ ಕೆಲವು ವಿಷಯಗಳಲ್ಲಿ ಆಡಳಿತದ ಪ್ರತ್ಯೇಕ ಘಟಕವೆಂಬಂತೆ ತಮ್ಮ ಆಡಳಿತ ನಿರ್ವಹಿಸುತ್ತಿದ್ದವು. ಶಾಸನಗಳಲ್ಲಿ ಚಿತ್ರಿತವಾಗಿರುವಂತೆ ಒಂದೊಂದು ಗ್ರಾಮವು ವಿಶಾಲವಾದ ರಾಜ್ಯದೊಳಗಿನ ಒಂದು ಪುಟ್ಟ ರಾಜ್ಯ ಎನ್ನುವ ಭಾವನೆ ಬರುತ್ತದೆ"(ಡಾ.ಚಿದಾನಂದಮೂರ್ತಿ, ಕನ್ನಡ ಶಾಸನಗಳ ಅಧ್ಯಯನ, ೧೯೭೯, ಪು.೩೨೧).

"ಇಂದಿನ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ, ಜಿಲ್ಲಾ, ತಾಲೂಕು, ಗ್ರಾಮ ಪಂಚಾಯತಿ ಗಳಂತೆ ಹಿಂದೆಯೂ ವಿಕೇಂದ್ರೀಕೃತ ಆಡಳಿತ ವ್ಯವಸ್ಥೆ ಜಾರಿಯಲ್ಲಿತ್ತು ಎಂಬುವುದಕ್ಕೆ ಈ ರಾಜಕೀಯ ವಿಭಾಗಗಳೇ ಸಾಕ್ಷಿ. ಇಲ್ಲಿ ಚಕ್ರವರ್ತಿಯೇ ಸರ್ವೋಚ್ಚ ಅಧಿಕಾರಿ. ಆತನ ಕೈಕೆಳಗೆ ಅನೇಕ ಸಾಮಂತ ರಾಜರಿರುತ್ತಿದ್ದರು. ಚಕ್ರವರ್ತಿಯ ಅಧೀನದಲ್ಲಿದ್ದರೂ ಇವರಿಗೆ ಸಾಕಷ್ಟು

ಸ್ವಾತಂತ್ರ್ಯವಿರುತ್ತಿತ್ತು. ಆದರೆ ಈ ಸಾಮಂತ ದೊರೆಗಳು ತಮ್ಮ ಚಕ್ರವರ್ತಿಗೆ ನಿಷ್ಠರಾಗಿದ್ದು, ವರ್ಷಂಪ್ರತಿ ಕಪ್ಪಕಾಣಿಕೆಗಳನ್ನು ಕೊಡಲೇಬೇಕಾಗುತ್ತಿತ್ತು. ತನ್ನ ಸಾಮ್ರಾಜ್ಯಕ್ಕೆ ಹೊಸದಾಗಿ ಸೇರ್ಪಡೆಗೊಂಡ ಪ್ರಾಂತ್ಯಗಳಿಗೆ, ವಿಭಾಗಗಳಿಗೆ, ಈ ಸರ್ವೋಚ್ಚ ಅಧಿಕಾರಿಯೇ ನೇಮಕಾತಿಗಳನ್ನು ಮಾಡುತ್ತಿದ್ದನು. ಸಾಮ್ರಾಜ್ಯವನ್ನು ಮಂಡಲ, ವಿಷಯ, ದೇಶ, ನಾಡು, ಕಂಪಣ ಎಂದು ವಿಭಾಗಿಸಲಾಗುತ್ತಿತ್ತು. ಸಾಮ್ರಾಜ್ಯದ ಆಡಳಿತ ವ್ಯವಸ್ಥೆಯಲ್ಲಿ ಎರಡು ರೀತಿಗಳಿದ್ದದ್ದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಚಕ್ರವರ್ತಿಯ ನೇತೃತ್ವದ ಕೇಂದ್ರ ಸರ್ಕಾರ ಒಂದು ಕಡೆಯಾದರೆ ಇನ್ನೊಂದು ಕಡೆ ಪ್ರಾಂತ್ಯದ ಅಥವಾ ವಿಭಾಗದ ಅಧಿಕಾರಿಯ ಉಸ್ತುವರಿಯಲ್ಲಿ ಆಡಳಿತ ನಡೆಯುತ್ತಿತ್ತು (ಡಾ.ಜಿ.ಎನ್.ಉಪಾಧ್ಯ, ಗೋದಾವರಿವರಂ ಇರ್ದ, ಕನ್ನಡ ನಾಡು, ೨೦೦೨, ಪು.೭೯).

ಆಡಳಿತದ ಉಚ್ಚಸ್ತರದಲ್ಲಿ ರಾಜನೇ ಪ್ರಮುಖನಾಗಿರುತ್ತಿದ್ದನು. ಯಾವುದೇ ರಾಜ್ಯದಲ್ಲಿನ ಕಾರ್ಯಗಳು ಆತನ ಹೆಸರಿನಲ್ಲಿಯೇ ನಡೆಯುತ್ತಿದ್ದವು. ಇಂದಿನ ಆಧುನಿಕ ಸಂದರ್ಭದಲ್ಲಿ ಕೇಂದ್ರದಲ್ಲಿ ಎಲ್ಲ ಉನ್ನತ ಮಟ್ಟದ ಕಾರ್ಯಗಳು ರಾಷ್ಟ್ರಪತಿಗಳ ಹೆಸರಿನಲ್ಲಿ ರಾಜ್ಯಮಟ್ಟದಲ್ಲಿ ರಾಜ್ಯಪಾಲರ ಹೆಸರಿನಲ್ಲಿ ಅವರ ಅಧೀನ ಅಧಿಕಾರಿಗಳು ಕಾರ್ಯವನ್ನು ಚಲಾಯಿಸುತ್ತಾರೆ. ರಾಜನ ಹೊರತಾಗಿ ಆತನ ರಾಣಿಯರು, ಯುವರಾಜರು, ಮಹಾಪ್ರಧಾನ, ಪ್ರಧಾನ, ಮಹಾದಂಡಾಧಿಪತಿ, ದಂಡಾಧಿಪತಿ, ಮಾಂಡಳಿಕರು, ಸಾಮಂತರು, ಪ್ರಾಂತ್ಯಾಧಿಕರಿಗಳು, ಮಹಾಜನರು ಊರೊಡೆಯರು, ಗೌವುಡರು ಇತ್ಯಾದಿಯಾಗಿ ಶ್ರೇಣಿಕೃತ ವ್ಯವಸ್ಥೆಯು ಅಂದಿನ ಆಡಳಿತ ವ್ಯವಸ್ಥೆಯಾಗಿತ್ತೆಂದು ಶಾಸನಗಳಲ್ಲಿ ಕಂಡುಬರುತ್ತದೆ. ಎಲ್ಲ ಅಧಿಕಾರಗಳು ಕೇಂದ್ರದಿಂದ ಅಂದರೆ ರಾಜನಿಂದಲೇ ಕೆಳಗಿನ ಅಧಿಕಾರಿಗಳಿಗೆ ಹಸ್ತಾಂತರಗೊಳ್ಳುತ್ತಿದ್ದವು.

ರಾಜ್ಯಾಡಳಿತ

ರಾಜನು ರಾಜ್ಯದ ಸಾರ್ವಭೌಮ ಅಧಿಕಾರಿ. ರಾಜ್ಯದ ಆಡಳಿತವೆಲ್ಲ ಈತನ ಆಜ್ಞೆ ಮತ್ತು ಪಾಲನೆಯಿಂದ ನಡೆಯುವುದು. ಅಂದಿನ ರಾಜನ ಇತಿಹಾಸವೆಂದರೆ ಆ ರಾಜ್ಯದ ಇತಿಹಾಸವೇ ಆಗಿತ್ತು. ಎಲ್ಲವೂ ರಾಜನ ಮೇಲೆಯೇ ಆಧಾರಿತವಾಗಿತ್ತು. ರಾಜ್ಯದ ಸಂರಕ್ಷಣೆ ಮಾಡುವುದು ಈತನ ಆದ್ಯ ಕರ್ತವ್ಯವಾಗಿತ್ತು. ಅದಕ್ಕಾಗಿಯೇ ರಾಜನನ್ನು ಸಾಕ್ಷಾತ್ ದೇವತಾಸ್ವರೂಪಿ ಎಂದು ಭಾವಿಸಲಾಗುತ್ತಿತ್ತು. ಸೋಮದೇವನ 'ನೀತಿವಾಕ್ಯಾಮೃತ'ದ ಪ್ರಕಾರ ಪ್ರಜೆಗಳನ್ನು ರಕ್ಷಿಸದವನು ರಾಜನೇ ಅಲ್ಲ. [ಸಕಿಂ ರಾಜಾಯೋನ ರಕ್ಷತಿ ಪ್ರಜಾ:] ಪ್ರಜಾಪಾಲನೆಯೇ ರಾಜನ ನಿಜವಾದ ಯಜ್ಞವೆಂದು(ಎಂ.ಚಿದಾನಂದಮೂರ್ತಿ. ಕನ್ನಡ .ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಉದ್ಧೃತ, ೧೯೭೯, ಪು.೩೨೧)ಭಾವಿಸಲಾಗುತ್ತಿತ್ತು. [ಪ್ರಜಾ ಪಾಲನಂ ಹಿ ರಾಜ್ಞ: ಯಜ್ಞ] ರಾಜನು ಕಾಲಕ್ಕೆ ಕಾರಣನು (ರಾಜಾ ಕಾಲಸ್ಯ ಕಾರಣಂ) ರಾಜನು ಪ್ರಜೆಗಳನ್ನು ನ್ಯಾಯದಿಂದ

ಪರಿಪಾಲಿಸಿದರೆ ಪ್ರಜೆಗಳಿಗೆ ಎಲ್ಲ ದಿಕ್ಕೂಗಳು ಬಯಿಸಿದುದನ್ನು ಕೊಡುತ್ತವೆ. ಕಾಲಕ್ಕೆ ಸರಿಯಾಗಿ ಇಂದ್ರನು ಮಳೆಯನ್ನು ಸುರಿಸುತ್ತಾನೆ. ಎಲ್ಲ ಬಾಧೆಗಳು ಶಮನಗೊಳ್ಳುತ್ತವೆ. (ನ್ಯಾಯತಃ ಪರಿಪಾಲಕೇ ರಾಜ್ಞ ಪ್ರಜಾನಾಂ ಕಾಮದುಷಾ ಸರ್ವಾದಿಶೋಭವಂತಿ ಕಾಲೇಚ ವರ್ಷತಿ ಮಘವಾನ್ ಸರ್ವಾಶ್ಚೇತಯಃ ಪ್ರಶಾಮ್ಯಂತಿ) ಎಲ್ಲ ಲೋಕಪಾಲರು ರಾಜನನ್ನು ಅನುಸರಿಸುತ್ತಾರೆ. ಆದ್ದರಿಂದ ರಾಜನು ಮಧ್ಯಮನಿದ್ದರೂ ಅತ್ಯುತ್ತಮ ಲೋಕಪಾಲನೆನ್ನುವರು (ರಾಜಾನಮನುವರ್ತಂತೇ ಹೀ ಸರ್ವೆಪಿ ಲೋಕಪಾಲಾಸ್ತೇನ ಮಧ್ಯಮಮಪ್ಯುತ್ತಮಂ ಲೋಕಪಾಲಂ ರಾಜಾನಮಾಹು) ರಾಜನಿಗೆ ಸಮುದ್ರದವರೆಗಿನ ಭೂಮಿಯೆಲ್ಲವೂ ತನ್ನ ಕುಟುಂಬವೇ(ರಾಜ್ಞೋಹಿ ಸಮುದ್ರಾವ ಧಿರ್ಮಹೀ ಸ್ವ ಕುಟುಂಬಂ). ಹೀಗೆ ರಾಜನಿರುವುದು ಪ್ರಜೆಗಳ ಹಿತಕ್ಕಾಗಿ, ಅವರ ಯೋಗಕ್ಷೇಮಕ್ಕಾಗಿ (ಜಿ.ಎಸ್.ದೀಕ್ಷಿತ, ಬಿ.ರಾಮಸ್ವಾಮಿ, ಶ್ರೀನಿವಾಸ ರಿತ್ತಿ(ಸಂ): ಆಚಾರ್ಯ ಸೋಮದೇವ ವಿರಚಿತ ನೀತಿವಾಕ್ಯಾಮೃತಂ, ೨೦೦೦, ಪು.೧೮೩–೧೮೫)· ಇಡೀ ರಾಜ್ಯವೇ ಆತನ ಕುಟುಂಬವಾಗಿತ್ತೆಂದು ಹೇಳಬಹುದು. ರಾಜನಾದವನು ಜನಪರ ಆಡಳಿತ ಕಡೆಗೆ ಹೆಚ್ಚು ಗಮನಹರಿಸುತ್ತಿದ್ದನು. ರಾಜ ಮತ್ತು ಈತನ ಮಂತ್ರಿಮಂಡಳ ಹಾಗೂ ಅಧಿಕಾರಿಗಳು ರಾಜ್ಯದ ಸಮಸ್ತ ಆಳ್ವಿಕೆ ನಡೆಸಿಕೊಂಡು ಹೋಗುತ್ತಿದ್ದರು.

"ರಾಜಧಾನಿಯನ್ನು ನೆಲೆವೀಡು ಎಂದು ಕರೆಯುತ್ತಿದ್ದರು(ಚಿದಾನಂದಮೂರ್ತಿಎಂ: ಪೂರ್ವೋಕ್ತ, ಉದ್ಧೃತ, ಪು. ೩೨೫). ರಾಜನು ಇಂತಹ ನೆಲೆವೀಡಿನಿಂದ ಅನೇಕ ದಾನಗಳನ್ನು ನೀಡುತ್ತಿದ್ದನೆಂದು ಉಲ್ಲೇಖಿಸಲಾಗಿದೆ." ಶ್ರೀಮದ್ರಾಜಧಾನಿ ಕಲ್ಯಾಣಪುರದ ನೆಲೆನೀಡಿನೊಳ್ಳುಖಸಂಕಥಾ ವಿನೋದದಿಂ ರಾಜ್ಯಂಗೆಯ್ಯುತ್ತಮಿರೆ ಶ್ರೀಮಚಾಳುಕ್ಯ ಭೂಲೋಕಮಲ್ಲ"(ದೇವರಕೊಂಡಾರೆಡ್ಡಿ ಮತ್ತು ಹನುಮಾಕ್ಷಿ ಗೋಗಿ (ಸಂ): ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೮, ಮು: ೨೦೦೬, ಪು.೮). ಶ್ರೀಮತ್ತೊಸಮಲ ದೇವಿಯರೇತಗಿರಿಯ ನೆಲೆವಿಡಿನೊಳ. ಕಿರಿದೊರೆಯ ತಡಿಯ ಕಕ್ಕರಗೊಳದುಪಯಣ ವೀಡಿನೊಳ್. ಈ ಮೇಲಿನ ಉಲ್ಲೇಖಗಳನ್ನು ನೋಡಿದಾಗ ರಾಜರು ದಿಗ್ವಿಜಯಕ್ಕೆ ಹೊರಡುವಾಗ ತಾತ್ಕಾಲಿಕವಾಗಿ ರಾಜಧಾನಿಯೊಂದನ್ನು ಸೃಷ್ಟಿಸುತ್ತಿದ್ದರು. ಅದನ್ನು ನೆಲೆವೀಡು, ಅಥವಾ ಪಯಣದ ಬೀಡು, ಎಂದು ಈ ಮೇಲಿನ ಶಾಸನಗಳಿಂದ ವಿದಿತವಾಗಿದೆ. ಅಲ್ಲದೆ ಕೆಲವು ಊರುಗಳನ್ನು ನೆಲೆವೀಡನೊಳ್, ಎಂದು ಉಲ್ಲೇಖ ಇದೆ. ಶ್ರೀಮತ್ತೈಲೋಕ್ಯಮಲ್ಲ ದೇವರ್ ಪೃಥ್ವೀರಾಜ್ಯಂಗೆಯ್ಯುತ್ತಿರೆ ಕನ್ನೂದುರು ನಾಡ ರಾಜಧಾನಿ ಕೊಳೂರು ನೆಲೆವೀಡಿನೋಳ್ (ದೇವರಕೊಂಡಾರೆಡ್ಡಿ, ಭಟ್ಟಸೂರಿ ಕೆ.ಜಿ., ಕಲವೀರ ಮನ್ವಾಚಾರ ಮತ್ತು ಪರಮಶಿವಮೂರ್ತಿ ಡಿ.ವಿ.(ಸಂ): ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, ೨೦೦೩, ಪು.೩೦೧).

ಶ್ರೀಮತ್ತಿಭುವನಮಲ್ಲದೇವರು. ಪೊಟ್ಟಳಕೆರೆಯ ನೆಲೆವೀಡಿನೊಳ್(ಅದೇ ಪೂರ್ವೋಕ್ತ, ಪು.೧೭೮)ಮನ್ನೆದಡಿನಾಡ ರಾಜಧಾನಿ ಕಾಳುಗೆ(ಹನುಮಾಕ್ಷಿ ಗೋಗಿ(ಸಂ): ಕಲ್ಬುರ್ಗಿ ಜಿಲ್ಲೆಯ ಶಾಸನಗಳು: ೧೯೯೬ ಪು.೧೯೨), ರಾಜಧಾನಿ ಕೆಂಬಾವಿ(ಅದೇ. ಪು.೪೯೧). ಹೀಗೆ ಮೇಲ್ಕಾಣಿಸಿದ ಶಾಸನಗಳಲ್ಲಿ ರಾಜಧಾನಿಯೆಂದೇ ಕರೆದಿರುವುದು ಆ ಊರುಗಳ ರಾಜಕೀಯ ಮಹತ್ವವನ್ನು ಸೂಚಿಸುತ್ತದೆ.

ರಾಣಿಯರ ರಾಜ್ಯಾಡಳಿತ

ಇಂದಿನ ಆಧುನಿಕ ಯುಗದಂತೆ, ಪ್ರಾಚೀನ ಕಾಲದಲ್ಲೂ ಸ್ತ್ರೀಯರು ಕೌಟುಂಬಿಕ, ಧಾರ್ಮಿಕ ಮತ್ತು ಸಾಮಾಜಿಕ ಕ್ಷೇತ್ರಗಳಿಗೆ ಸೀಮಿತವಿರದೇ ಅವರು ರಾಜಕೀಯ ರಂಗದಲ್ಲೂ ತಮ್ಮದೇ ಆದ ಛಾಪು ಮೂಡಿಸಿದ್ದಾರೆ. 'ರಾಜ ದೇವರ ಸಮಾನ' ಅದು ಪ್ರಾಚೀನರ ಅಚಲ ನಂಬಿಕೆಯಾಗಿತ್ತು. ಅಂದಿನ ರಾಜಕೀಯ ರಂಗದಲ್ಲಿ ಈ ರಾಜನ ಜೊತೆಗೆ ರಾಣಿಗೂ ಪೂಜ್ಯನೀಯ ಸ್ಥಾನ. ಹೀಗಾಗಿ ಆಕೆಯೂ ಆತನ ಧರ್ಮ, ಅರ್ಥ, ಕಾಮ, ಮೋಕ್ಷಗಳಲ್ಲಿ ಸಹಪಾಲುದಾರಳು. ಹೀಗಾಗಿ ರಾಜನಿಗಿರುವ ರಾಜ ಮರ್ಯಾದೆಗಳು ರಾಣಿಯರಿಗೂ ಸಲ್ಲುತ್ತಿದ್ದವು.

ಶಾಸನಗಳಲ್ಲಿ ಉಕ್ತವಾಗಿರುವಂತೆ ಅನೇಕ ರಾಣಿಯರು ತನ್ನ ಪತಿಯೊಂದಿಗೆ ಮತ್ತು ಸ್ವತಃ ತಾವೇ ಸ್ವತಂತ್ರ್ಯವಾಗಿ ಆಳ್ವಿಕೆ ನಡೆಸುತ್ತಿದುದ್ದನ್ನು ತಿಳಿದುಬರುತ್ತದೆ. ಕ್ರಿ.ಶ. ೧೦೨೮ರ ಬಲ್ಲಟಗಿ ಶಾಸನವು ಚಾಲುಕ್ಯ ದೊರೆ ಜಗದೇಕಮಲ್ಲನ ರಾಣಿ ಸೋಮಲದೇವಿಯ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. "ಜಗದೇಕಮಲ್ಲದೇವ ಪಾದಪಂಕಜ ಭ್ರಮರಿಯರಪ್ಪ ಶ್ರೀಮತ್ಸೋಮಲದೇವಿ ಯರೇತಗಿರಿಯ ನೆಲೆವಿಡಿನೊಳ"(ಕ.ವಿ.ಶಾ.ಸಂ.೭, ಪು.೩೦೮).

ಕ್ರಿ.ಶ.೧೦೩೧ರ ಅದೇ ಊರಿನ ಶಾಸನದಲ್ಲಿ ಚಾಲುಕ್ಯ ಜಯಸಿಂಹನ ರಾಣಿ ಸೋಮ ದೇವಿಯು ಏತಗಿರಿ ನೆಲೆವೀಡಿನೊಳ ಮತ್ತು ಕ್ರಿ.ಶ.೧೦೩೬ರ ನುಗಡೋಣಿ ಶಾಸನವು ಶ್ರೀಮತ್ಸೋಮಲ ದೇವಿಯರ್ ಪೊಟ್ಟಳಕೆರೆಯ ನೆಲೆವಿಡಿನೊಳ್"(ಅದೇ, ಪು.೩೧೬). ಹೀಗೆ ಮೇಲಿನ ಶಾಸನಗಳಲ್ಲಿ ಚಾಲುಕ್ಯ ದೊರೆ ಜಗದೇಕಮಲ್ಲನ ರಾಣಿ ಸೋಮಲದೇವಿ ಆಳ್ವಿಕೆಯ ಕುರುಹುಗಳನ್ನು ಕಾಣಬರುತ್ತವೆ.

ಕ್ರಿ.ಶ. ೧೦೩೨ರ ಸುಂಕನೂರಿನ ಶಾಸನವು ಚಾಳುಕ್ಯ ದೊರೆ ಜಗದೇಕಮಲ್ಲನ ಇನ್ನೊಬ್ಬ ರಾಣಿಯಾದ ಬಿಜ್ಜಲದೇವಿಯನ್ನು ಉಲ್ಲೇಖಿಸಿದೆ. ಈಕೆಯು ಪೊಟ್ಟಳಕೆರೆಯ ನೆಲೆಬೀಡಿನೊಳ್(ಅದೇ, ಪೂರ್ವೋಕ್ತ, ಪು.೩೦೯). ಕ್ರಿ.ಶ.೧೦೫೮ರ ಬಲ್ಲಟಗಿ ಶಾಸನವು ಚಾಲುಕ್ಯ ಮೊದಲನೆ ತ್ರೈಲೋಕ್ಯಮಲ್ಲ ಸೋಮೇಶ್ವರನ ರಾಣಿ ಚಾಮಲದೇವಿಯ" ಶ್ರೀಮಚ್ಚಾಮಿಲದೇವಿಯ ಮಲೆಯ ನೆಲೆವೀಡಿನೊಳ್ (ಅದೇ, ಪೂರ್ವೋಕ್ತ, ಪು.೩೧೬)ಎಂದು ಉಲ್ಲೇಖಿಸುತ್ತದೆ.

ಕ್ರಿ.ಶ.೧೦೬೭ರ ಮುಕ್ಕುಂದಿ ಶಾಸನವು ಚಾಳುಕ್ಯ ದೊರೆ ತ್ರೈಲೋಕ್ಯಮಲ್ಲನ ರಾಣಿ ತ್ರೈಲೋಕ್ಯ ಮಹಾದೇವಿಯರು ಕಲ್ಯಾಣದ ನೆಲೆವೀಡಿನೊಳ್ ಸುಖಸಂಕಥಾವಿನೋದದಿಂ ರಾಜ್ಯಂಗೆಯ್ಯುತ್ತಮಿರೆ ನಿಟ್ಟುರವೆಯಪ್ಪತ್ತರ ಬಳಿಯಗ್ರಹಾರ ಮುಕ್ಕುಂದೆಯಂ ತ್ರಿಭೋಗಾಭ್ಯನ್ತರ ಸಿದ್ಧಿಯಿನಾಳುತ್ತುಂ(ಅದೇ, ಪು.೨೫೮)ಎಂದು ಉಲ್ಲೇಖಿಸಿದೆ.

ಕ್ರಿ.ಶ. ೧೯೯೯ರ ಹುಣಸಿ ಹಡಗಲಿ ಶಾಸನವು ಚಾಳುಕ್ಯ ದೊರೆ ತ್ರಿಭುವನಮಲ್ಲ ದೇವನ ರಾಣಿಯ ಬಗ್ಗೆ ಹೀಗೆ ವಿವರಿಸಿದೆ. ಸವತಿ ಗಜಕೇಸರಿ ಕಲಿಕಾಲ ಸರಸ್ವತಿ ಶ್ರೀಮತ್ರಿಭುವನಮಲ್ಲದೇವ ವಿಶಾಳ ಏಕ್ಷಸ್ಥಳ ನಿವಾಸಿ ನಿಯರಪ್ಪ ಶ್ರೀಮತ್ಪಿರಿಯರಸಿ ಚಂದಲ ದೇವಿಯ ಅಲಂದೆ ಸಾಸಿರ ಪ್ರಮುಖವನೇಕ ಭತ್ತಗ್ರಾಮಂಗಗಳುಮಂ ದುಷ್ಟನಿಗ್ರಹ ಶಿಷ್ಟಪ್ರತಿಪಾಳನದಿಂದಾಳ್ದರಸುಗೆಯ್ಯುತ್ತಮಿರೆ' (ಅದೇ, ಪು.೩೧೨) ಇದರಿಂದ ತಿಳಿದು ಬರುವ ವಿಷಯವೇನೆಂದರೆ ದೊರೆಯ ರಾಣಿ ಚಂದಲದೇವಿಯು ಸ್ವತಂತ್ರವಾಗಿ ಅಲಂದೆ-೧೦೦೦ ವನ್ನು ಆಳುತ್ತಿದ್ದಳೆಂದು; ಈಕೆಗೆ ಇರುವ ವಿರುದು ಗಜಕೇಸರಿ, ಕಲಿಕಾಲ ದುಷ್ಟನಿಗ್ರಹ, ಶಿಷ್ಟ ಪ್ರತಿಪಾಳಕ, ಇವೆಲ್ಲ ನೋಡಿದರೆ ಈಕೆ ಒಬ್ಬ ದೊರೆಯ ಹಾಗೆ ನಿಂತು ತನ್ನ ಪ್ರಜೆಗಳನ್ನು ಸಂರಕ್ಷಿಸುತ್ತಿದ್ದಳೆಂದು ತಿಳಿದುಬರುತ್ತದೆ.

ಕ್ರಿ.ಶ. ೧೦೮೭ರ ಬಗ್ದಲ್ ಶಾಸನವು ಚಾಳುಕ್ಯದೊರೆ ತ್ರಿಭುವನ ಮಲ್ಲನ ರಾಣಿ ಶ್ರೀಯಾದೇವಿ ಯನ್ನು ಹೀಗೆ ಉಲ್ಲೇಖಿಸಿದೆ, ಶ್ರೀಮತ್ರಿಭುವನಮಲ್ಲದೇವ ವಿಶಾಲ ಏಕ್ಷಸ್ಥಳ ನಿವಾಸಿನಿಯರಪ್ಪ ಶ್ರೀಮತು ಶ್ರೀಯಾದೇವಿಯರು ತ್ರಿಭೋಗಾಭ್ಯಂತರ ಸಹಿತಂ ಬಗದಾಳಮಂ ಸುಖದಿಂದಾಳುತ್ತಿವಿರ್ದು (ಹನುಮಾಕ್ಷಿ ಗೋಗಿ ಮತ್ತು ದೇವರಕೊಂಡಾ ರೆಡ್ಡಿ, ಕ.ವಿ.ಶಾ.ಸಂ.೮, ಪು.೧೭೯).

ಕ್ರಿ.ಶ. ೧೯೫ರ ಇಂಗಳಿಗೆ ಶಾಸನವು ಕಲ್ಯಾಣ ಚಾಲುಕ್ಯ ದೊರೆ ಆರನೆ ವಿಕ್ರಮಾದಿತ್ಯ ತ್ರಿಭುವನಮಲ್ಲದೇವನ ರಾಣಿ ಚಾಕಲದೇವಿಯ ಆಳ್ವಿಕೆಯನ್ನು ಹೆಸರಿಸಿದೆ. "ಶ್ರೀಮತ್ತಿಭುವನಮಲ್ಲದೇವ ವಿಶಾಳ ಏಕ್ಷಸ್ಥಳ ನಿವಾಸಿನಿಯರಪ್ಪ ಶ್ರೀಮಜ್ಜಾಕಲದೇವಿಯರ ರಲ್ಲೂಂನೂರಳೊಳಗಣಿಂಗುಣಿಗೆಯಂ ತ್ರಿಭೋಗಾಭ್ಯಂತರ ಸಿದ್ಧಿಯಿಂದಾಳುತ್ತಮಿರೆ(ಹನುಮಾಕ್ಷಿ ಗೋಗಿ(ಸಂ)ಕಲಬುರಗಿ ಜಿಲ್ಲೆ ಶಾಸನಗಳು, ಪು.೨೩೦). ಈ ಉಲ್ಲೇಖದ ಆಧಾರದ ಮೇಲೆ ರಾಣಿ ಚಾಕಲದೇವಿಯು ಇಂಗಳಿಗೆ-೩೦೦ ತ್ರಿಭೋಗಪೂರ್ಣವಾಗಿ ಆಳುತ್ತಿದ್ದಾಳೆಂದು; ಮುಂದುವರೆದು ತನ್ನ ಪತಿಯೊಂದಿನ ಸರಸ ಪ್ರವೃತ್ತಿಯು ಗೋಚರವಾಗುತ್ತದೆ. ಒಂದು ದಿನ ಚಾಕಲದೇವಿಯೊಂದಿಗೆ ಸುಖಸಂಕಥಾ ವಿನೋದದಿಂದಿರಲು ಒಬ್ಬ ವ್ಯಾಪಾರಿ ಬಂದು ಮಾಹು ಮಾಣಿಕ್ಯ ಜಿನವಿಗ್ರಹವನ್ನು ತಂದು ತೋರಿಸಿದ. ಅದನ್ನು ಮೆಚ್ಚಿದ ಅರಸು ನಿನ್ನ ಆಳ್ವಿಕೆಯ ಸ್ಥಳದಲ್ಲಿ ಇದನ್ನು ಪ್ರತಿಷ್ಠಾಪಿಸು ಎಂದು ತಿಳಿಸಿದುದಲ್ಲದೆ

ಆಕೆಯ ವ್ರತವೊಂದನ್ನು ಕೆಡಿಸುವೆನೆಂದು ಪ್ರತಿಜ್ಞೆಗೈದು ಸೋತು ಹೋದ ಸರಸ ಪ್ರಸಂಗವು ಈ ಶಾಸನದಲ್ಲಿ ಒಡಮೂಡಿ ಬಂದಿದೆ.

ಕ್ರಿಶ. ೧೧೨೪ರ ಲಿಂಗಸೂಗುರು ಶಾಸನವು ಕಲ್ಯಾಣ ಚಾಲುಕ್ಯದೊರೆ ಆರನೆ ವಿಕ್ರಮಾದಿತ್ಯನು ಕಲ್ಯಾಣ ನೆಲೆವೀಡಿನಲ್ಲಿದ್ದಾಗ ಈತನ ರಾಣಿ ಅಬ್ಬಲದೇವಿಯು ಕರಡಿಕಲ್ಲು-೩೦೦ ರ ಬಳಿಯ ಲಿಂಗವನ್ನು ಆಳುತ್ತಿದ್ದುದನು ತಿಳಿಸುತ್ತದೆ. "ಶ್ರೀಮತ್ರಿಭುವನ ಮಲ್ಲದೇವ ವಿಷಾಳ ವಕ್ಷಸ್ಥಳ ನಿವಾಸಿನಿಯರಪ್ಪ ಶ್ರೀಮದಬ್ಬಲದೇವಿಯರು ಕರಡಿಕಲ್ಮೂನೂರರ ಬಳಿಯ ಭತ್ತಗ್ರಾಮಂ ಲಿಂಗಮನಾಳುತ್ತಮಿರೆ(ಕ.ವಿ.ಶಾ.ಸಂ.೭, ಪೂರ್ವೋಕ್ತ, ಪು.೧೨೪)ಈಕೆಯನ್ನು ದ್ವಿತೀಯ ಲಕ್ಷ್ಮೀಸಮಾನೆ, ಕಳಹಂಸೆಯಾನೆ, ರೂಪವಿದ್ಯಾಧರಿ, ಕಸ್ತೂರಿಕಾ ಮೋದೆ ಎಂಬ ವಿಶೇಷಣಗಳಿಂದ ಹೊಗಳಲಾಗಿದೆ.

ಈ ಹೇಳಿಕೆಗಳ ಪ್ರಕಾರ ಮಧ್ಯಕಾಲಿನ ರಾಜಕೀಯ ಕ್ಷೇತ್ರದಲ್ಲಿ ರಾಣಿಯರು ವಿಶಿಷ್ಟ ಸ್ಥಾನ ಪಡೆದು. ರಾಜನೊಂದಿಗೆ ಮತ್ತು ಸ್ವತಂತ್ರವಾಗಿಯೂ ರಾಜ್ಯಭಾರ ಮಾಡುತ್ತಿದ್ದುದ್ದನ್ನು ಸ್ಪಷ್ಟವಾಗುತ್ತದೆ.

ಯುವರಾಜ

ಚಕ್ರವರ್ತಿಯ ನಂತರ ಯುವರಾಜನ ಸ್ಥಾನವೇ ಉಚ್ಚಸ್ಥಾನದಲ್ಲಿರುವುದು. ಸಾಮಾನ್ಯವಾಗಿ ಆಡಳಿತದ ಹಿತದೃಷ್ಟಿಯಿಂದ ದೊರೆಯ ಹಿರಿಯ ಮಗನನ್ನು ಯುವರಾಜ ಪಟ್ಟವನ್ನು ಕಟ್ಟುತ್ತಿದ್ದರು. ಒಂದು ವೇಳೆ ಪ್ರಾಪ್ತ ವಯಸ್ಕನಿಲ್ಲದಿದ್ದಾಗ, ದೊರೆಯ ಹಿರಿಯ ತಮ್ಮನಿಗೆ ಆ ಸ್ಥಾನವು ತಾತ್ಕಾಲಿಕವಾಗಿ ದೊರಕುತ್ತಿತ್ತು. ದೊರೆಯ ಮಗ ಪ್ರಾಪ್ತ ವಯಸ್ಕನಾದ ಮೇಲೆ ಆತನನ್ನೇ ಯುವರಾಜ ಪಟ್ಟವನ್ನು ಕಟ್ಟಲಾಗುತ್ತಿತ್ತು. ಈತನ ಆಧೀನದಲ್ಲಿ ಸಾಮಂತರು, ಮಹಾಮಂಡಳೇಶ್ವರರು, ರಾಜ್ಯಭಾರ ಮಾಡುತ್ತಿದ್ದರು. ಯುದ್ಧ ಕಾಲದಲ್ಲಿ ರಾಜನ ಪರ ಸೈನ್ಯದ ಮುಖಂಡತ್ವವೂ ವಹಿಸಿಕೊಳ್ಳುತ್ತಿದ್ದನು.

ಚಾಲುಕ್ಯ ದೊರೆ ಭೂಲೋಕ ಮಲ್ಲದೇವನು ಕಲ್ಯಾಣಪುರದಿಂದ ರಾಜ್ಯಭಾರ ಮಾಡುತ್ತಿದ್ದಾಗ. ಯುವರಾಜ ತೈಲಪನು ಕುಂದೂರು ನಾಡಿನಿಂದ ಆಳುತ್ತಿದ್ದನೆಂದು ಆಂಧ್ರ ಪ್ರದೇಶದ ಶಾಸನವೊಂದು ಉಲ್ಲೇಖಿಸಿದೆ(ಆಂಧ್ರ ಪ್ರದೇಶದ ಕನ್ನಡ ಶಾಸನಗಳು, ಭಾಗ-೨, ಪು.೧೦೦).

ಚಾಳುಕ್ಯದೊರೆ ತ್ರಿಭುವನಮಲ್ಲದೇವನು ಕಲ್ಯಾಣ ನೆಲೆವೀಡಿನಲ್ಲಿದ್ದಾಗ ಯುವರಾಜ ಜಯಸಿಂಹನು ಲೊಂಬಳಿ-೭೦ಯಿಂದ ಆಳುತ್ತಿದ್ದನೆಂದು ಶಾಸನವು ಉಲ್ಲೇಖಿಸುತ್ತದೆ(ಹನುಮಾಕ್ಷಿ ಗೋಗಿ(ಸಂ), ಕಲಬುರಗಿ ಜಿಲ್ಲೆ ಶಾಸನಗಳು, ಪು.೩೬).

ಚಾಳುಕ್ಯದೊರೆ ವಿಕ್ರಮಾದಿತ್ಯನ ಆಳ್ವಿಕೆ ಕಾಲದಲ್ಲಿ ಯುವರಾಜ ಮಲ್ಲಿಕಾರ್ಜುನನು ಅಲಂದೆ ಸಾವಿರದ ಅಧಿಪತಿಯಾಗಿ ಆಳುತ್ತಿದ್ದನೆಂದು; ಈತನ ಆಧೀನನಾದ ಪೆರ್ಗಡೆ, ದಂಡನಾಯಕ ನಾಚರಸ ಹಾಗೂ ಕಾಳಿದಾಸರು ಸ್ವಯಂಭೂ ಸೋಮೇಶ್ವರ ದೇವರಿಗೆ ಅಲ್ಲಿನ ಸ್ಥಾನಪತಿಗಳಾದ ಸೂರೇಶ್ವರ ಪಂಡಿತರಿಗೆ ಪಂಡಿತರಿಗೆ ಭೂಮಿ, ಮಾವಿನ ಅರವೆ, ಹಾಗೂ ಮತ್ತಿತರ ಮೂಲದ ಹಾಗೂ ಸುಂಕದ ವಸ್ತುಗಳನ್ನು ಬಾಧಾ ಪರಿಹಾರವಾಗಿ ಧಾರೆಯೆರೆದು ಬಿಟ್ಟರೆಂದು ಶಾಸನವು ತಿಳಿಸುತ್ತದೆ(ದೇವರಕೊಂಡಾರೆಡ್ಡಿ, ಭಟ್ಟಸೂರಿ ಕೆ.ಜಿ., ಕಲವೀರ ಮನ್ವಾಚಾರ ಮತ್ತು ಪರಮಶಿವಮೂರ್ತಿ ಡಿ.ವಿ.(ಸಂ): ರಾಯಚೂರು ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, ಪು.೧೨೪).

ಹೀಗೆ ಯುವರಾಜರು ಸ್ವತಂತ್ರವಾಗಿ ಪ್ರದೇಶವನ್ನು ಆಳುತ್ತಿದ್ದರೂ ಯುದ್ಧ ಕಾಲದಲ್ಲಿ ರಾಜರಿಗೆ ಸಹಾಯಕನಾಗಿ, ಸೇವೆಯನ್ನು ಸಲ್ಲಿಸುತ್ತಿದ್ದರು.

ಮಂತ್ರಿಗಳು

ಪ್ರಾಚೀನ ಹೈ.ಕ. ಮತ್ತು ಆಂಧ್ರ ಪ್ರದೇಶಗಳಲ್ಲಿ ಆಳ್ವಿಕೆ ಮಾಡಿದ ರಾಜರು ತಮ್ಮ ರಾಜ್ಯದ ಸಂರಕ್ಷಣೆಗಾಗಿ ಬೃಹತ್ ಗಾತ್ರದ ಸೈನ್ಯ ಹೊಂದಿದ್ದರೂ. ಅವರು ಪರಕೀಯರ ದಾಳಿ ತಡೆಯುವುದು. ಯುದ್ಧ ಮಾಡುವುದು. ಬಾಹ್ಯ ಶತ್ರುಗಳಿಂದ ರಾಜ್ಯವನ್ನು ಸಂರಕ್ಷಿಸುತ್ತಿದ್ದರು. ಆದರೆ ರಾಜನಿಗೆ ತನ್ನ ರಾಜ್ಯದ ಆಡಳಿತ ನಿರ್ವಹಣೆಯಲ್ಲಿ ಅನೇಕ ಅಧಿಕಾರಿ ವರ್ಗದವರು ಮಹತ್ವದ ಪಾತ್ರ ವಹಿಸುತ್ತಿದ್ದರು. ಇವರ ಮುಖೇನವೇ ರಾಜ್ಯದ ಆಡಳಿತ ನಡೆಯುತ್ತಿತ್ತು. ಇದಕ್ಕೆ ಅನೇಕ ಲಭ್ಯ ಶಾಸನಗಳೇ ಸಾಕ್ಷಿಯಾಗಿವೆ. ದೊರೆಗಳು ದೊಡ್ಡ ಸೇನೆಯನ್ನು ಕಟ್ಟಿದ್ದರೂ ದೇಶವನ್ನಾಳುತ್ತಿದ್ದುದು ಸೈನ್ಯದ ಬಲದಿಂದಲ್ಲ. ನಾಗರೀಕ ಅಧಿಕಾರಿಗಳ ಬೆಂಬಲದಿಂದ ಎಂದು ಹೇಳಬಹುದು. ಮಂತ್ರಿ ಪದವಿಯನ್ನು ವಂಶಪರಂಪರೆಯಾಗಿ ಬರುತ್ತಿದ್ದರೂ ಅದಕ್ಕೆ ಸೂಕ್ತ ಯೋಗ್ಯತೆಯನ್ನು ಸಂಪಾದಿಸಿದ ಮೇಲೆ ಮರಳಿ ಹಿಂದಕ್ಕೆ ಕೊಟ್ಟದ್ದನ್ನು ಇಲ್ಲಿ ಉಲ್ಲೇಖಿಸಬಹುದು.

ಅಧಿಕಾರಿಗಳು

ರಾಜ್ಯದ ಆಡಳಿತವು ಸುಸೂತ್ರವಾಗಿ ಸಾಗಬೇಕಾದರೆ ರಾಜನಷ್ಟೆ ಆತನ, ಕೈಕೆಳಗಿನ ಅಧಿಕಾರಿಗಳೂ ಕಾರಣರಾಗುತ್ತಾರೆ. ಇವರು ವಂಶಾಪರಂಪರೆಯಿಂದ ಬಂದ ಮಂತ್ರಿ ಮಂಡಳಿಕರಲ್ಲ. ಇವರು ತಮ್ಮ ಯೋಗ್ಯತೆಗೆ ಅನುಗುಣವಾಗಿ ಸ್ಥಾನವನ್ನು ಪಡೆಯುತ್ತಾರೆ. ಇವರು ದಂಡನಾಯಕ ರಾಗಿ, ವಿವಿಧ ಇಲಾಖೆಯ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿ, ರಾಜನಿಗೆ ಸಮಾಜಪರ ಜನಹಿತೋಪಯೋಗಿ ಕಾರ್ಯದಲ್ಲಿ ಸಹಾಯಕರಾಗುತ್ತಾರೆ.

ಕ್ರಿ.ಶ.೯೯೨ರ ಶಾಸನ(ಹನುಮಾಕ್ಷಿ ಗೋಗಿ(ಸಂ), ಕಲಬುರಗಿ ಜಿಲ್ಲೆ ಶಾಸನಗಳು, ಪು.೩೬)ಅಜವರ್ಮನು ಕೆಳವಾಡಿ-೩೭೦ ನ್ನು ಆಳುತ್ತಿದ್ದಾಗ ಈತನ ಅಧಿಕಾರಿ ಬೆಳಗುರ್ಕಿಯಲ್ಲಿ ಮನೆವೆಗ್ಗಡೆ ವಿದ್ದಮಯ್ಯನಿದ್ದನೆಂದು ಉಲ್ಲೇಖಿಸುತ್ತದೆ. ಮೊಸಂಗಿಯ ತಂತ್ರಪಾಳನಾದ ಕಡಿಳಿ ನೊಗತ್ತಯ್ಯ ಕರಡಿಕಲ್ಲು-೩೦೦ ರ ನಾಡಿಗೆ ಸೇರಿದ ಹಿರಿಯ ಹೆಸರೂರು ಗ್ರಾಮಕ್ಕೆ ಕೆಲವು ಮತ್ತರು ಭೂಮಿಯನ್ನು ದಾನಬಿಟ್ಟ ವಿಷಯವನ್ನು ಶಾಸನವೊಂದು ಉಲ್ಲೇಖಿಸಿದೆ. ಕ್ರಿ.ಶ. ೧೦೨೨ರಲ್ಲಿ ಚಾಳುಕ್ಯ ದೊರೆ ಜಗದೇಕಮಲ್ಲನ ರಾಣಿ ಮಹಾದೇವಿಯು ಪುವ್ವರವಳ್ಳಿಯ ಬೀಡಿನಲ್ಲಿದ್ದಾಗ ಈಕೆಯ ತಂತ್ರಪಾಳ ಮಲ್ಲಯನಿದ್ದನೆಂದು ಶಾಸನ(ಹನುಮಾಕ್ಷಿ ಗೋಗಿ(ಸಂ), ಸುರಪುರ ತಾಲೂಕಿನ ಶಾಸನಗಳು, ೧೯೯೫, ಪು.೧೧)ಉಲ್ಲೇಖಿಸಿದೆ. ಕ್ರಿ.ಶ. ೧೦೩೦ ಕೊಳಬಾಳದ ಶಾಸನ(ಅದೇ, ಪು.೧೬೦)ವೊಂದು ದಂಡನಾಯಕ ಕಾಳಿದಾಸನ ತಮ್ಮನಾದ ತಂತ್ರಪಾಲ ಸಿದ್ಧಪಯ್ಯ ನಾಯಕನನ್ನು ಉಲ್ಲೇಖಿಸಿದೆ. ಈ ಶಾಸನದಲ್ಲಿ ಯಾವುದೇ ದೊರೆಯ ಉಲ್ಲೇಖವಿಲ್ಲ.

ಕ್ರಿ.ಶ. ೧೦೦೭ರ ಆಂಧ್ರ ಪ್ರದೇಶದ ವರಂಗಲ್ ಜಿಲ್ಲೆಯ ಪೊನ್ನವೊಲು ಶಾಸನವು(ಆಂಧ್ರ ಪ್ರದೇಶದ ಕನ್ನಡ ಶಾಸನಗಳು, ಭಾಗ-೨, ಪು.೧೦೦) ಚಾಳುಕ್ಯ ದೊರೆ ಇರಿವಬೆಡಂಗದೇವನ ಅಂಗರಕ್ಷಕ ತಂತ್ರಪಾಲ ಅರಸಪ್ಪಯ್ಯನನ್ನು ಹೆಸರಿಸಿದೆ. ಈತನು ವಾಜಿಕುಲದ ಕೇಸನಮಯ್ಯ ಎಂಬ ಬ್ರಾಹ್ಮಣನಿಗೆ ಅಯ್ಯನವೊಳಲಿನ ಪೂರ್ವದಿಕ್ಕಿನ ಕೆರೆಯ ಬಳಿಯಿದ್ದ ೪೦ ಮತ್ತರು ಭೂಮಿ ಮತ್ತು ಪಶ್ಚಿಮಕ್ಕೆ ೩೦ ಮತ್ತರು ಭೂಮಿಯನ್ನು ದತ್ತಿಯಾಗಿ ಕೊಟ್ಟುದ್ದುದ್ದನ್ನು ದಾಖಲಿಸಿದೆ.

ಕ್ರಿ.ಶ.೧೦೬೫ರ ಸುರಪೂರ ತಾಲೂಕಿನ ಏವೂರು ಶಾಸನವು(ಹನುಮಾಕ್ಷಿ ಗೋಗಿ(ಸಂ), ಸುರಪುರ ತಾಲೂಕಿನ ಶಾಸನಗಳು, ೧೯೯೫, ಪು.೧೧) ದಂಡನಾಯಕ ಸೇವರಸನನ್ನು ಹೆಸರಿಸಿದೆ. ಕ್ರಿ.ಶ.೧೦೮೬ರ ನಾಗಾವಿ ಶಾಸನ(ಹನುಮಾಕ್ಷಿ ಗೋಗಿ(ಸಂ)ಕಲಬುರಗಿ ಜಿಲ್ಲೆ ಶಾಸನಗಳು, ಪು.೨೩೦)ದಲ್ಲಿ ಚಾಳುಕ್ಯ ದೊರೆ ಆರನೆ ವಿಕ್ರಮಾದಿತ್ಯನ ಕನ್ನಡ ಸಂಧಿ ವಿಗ್ರಹಿ ದಂಡನಾಯಕ ಮಧುವಪರಸ ಉಲ್ಲೇಖಿಸಿ ಮತ್ತು ದಂಡನಾಯಕ ಕಾಳಿಯರಸನನ್ನು ಹೀಗೆ ವರ್ಣಿಸಿದೆ. ಮಹಾಸಂಧಿವಿಗ್ರಹಾಧಾಪತಿ, ಮಹಾಪ್ರಚಂಡ ದಂಡನಾಯಕ ವೈರಿನಾಯಕಂ, ಸಾಹಿತ್ಯ ವಿದ್ಯಾವಿತರ್ಕಂ, ಬೃಹಸ್ಪತಿ ಗುಣರತ್ನ, ಚಾಳುಕ್ಯ ರಾಜ್ಯ ಸಮುದ್ಧರಣಂ ನಾಮಾದಿ ಸಮಸ್ತ ಪ್ರಸಸ್ತಿ ಸಹಿತಂ ಶ್ರೀಮನ್ಮಹಾಪ್ರಧಾನ ಕಡಿತ ವೆರ್ಗ್ಗಡೆ ಕನ್ನಡ ಸಂಧಿ ವಿಗ್ರಹಿ ದಂಡನಾಯಕಂ ಕಾಳಿಯರಸಂ ಎಂದಿದೆ. ಈತನು ನಾಗವಾವಿಯಲ್ಲಿ ಶ್ರೀ ಮಧುಸೂಧನ ದೇವರಿಗೆ ಪ್ರತಿಷ್ಠಾಪಿಸಿ, ಅಲ್ಲಿಯ ನಾಲ್ನೂರು ಮಹಾಜನ ವರ್ಗಗಳಿಗೆ ತ್ರಿಭೋಗಾಭ್ಯಂತರವಾಗಿ ದಾನ ನೀಡಿದನೆಂದಿದೆ.

ಕ್ರಿ.ಶ.೧೦೭೧ರ ಶಾಸನ(ದೇವರಕೊಂಡಾರೆಡ್ಡಿ, ಭಟ್ಟಸೂರಿ ಕೆ.ಜಿ., ಕಲವೀರ ಮನ್ವಾಚಾರ ಮತ್ತು ಪರಮಶಿವಮೂರ್ತಿ ಡಿ.ವಿ. (ಸಂ): ರಾಯಚೂರು ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, ೨೦೦೩, ಪು.೧೭೮)ವೊಂದು ಚಾಳುಕ್ಯ ದೊರೆ ಆರನೆ ವಿಕ್ರಮಾದಿತ್ಯನು ಕಿರಿ ದೊರೆಯ (ತುಂಗಭದ್ರಾ) ತಡಿಯ ಕಕ್ಕರಗೊಳದ ಪಯಣ ವೀಡಿದಲ್ಲಿದ್ದಾಗ ಈತನ ಹೇರಿಲಾಳ ಸಂಧಿವಿಗ್ರಹಿ ದಂಡನಾಯಕನಾದ ರವಿಯಣಭಟ್ಟ ದಾನ ನೀಡಿದಂತಿದೆ. ಕ್ರಿ.ಶ. ೧೦೭೬ ರ ಶಾಸನ(ಅದೇ, ಪು.೨೯೦)ದಲ್ಲಿ ಕಲ್ಯಾಣ ಚಾಳುಕ್ಯದೊರೆ ಆರನೆ ವಿಕ್ರಮಾದಿತ್ಯನನ್ನು ರಕ್ಕಸಗಂಗಿ ದೇವನೆಂದು ಕರೆಯಲಾಗಿದೆ. ಕಲಿತನ ದಂಡನಾಯಕನಾದ ಸುರಿಗೆ ವೆಣ್ಣಮರಸನನ್ನು ಉಲ್ಲೇಖಿಸಿದೆ. ಈತನಿಗೆ ಹೆಜುಂಕ, ಬಿಲ್ಕೊಡೆ, ಪನ್ನಾಯ ವಡ್ಡರಾವುಳ ಮುಂತಾದವು ಸಲ್ಲುತ್ತಿದ್ದವೆಂದು ವರ್ಣಿಸಿದೆ. ಕ್ರಿ.ಶ. ೧೦೭೪ ರ ಸುರಪುರ ತಾಲೂಕಿನ ಬೈಚಬಾಳ ಶಾಸನವು (ಹನುಮಾಕ್ಷಿ ಗೋಗಿ(ಸಂ), ಸುರಪುರ ತಾಲೂಕಿನ ಶಾಸನಗಳು, ೧೯೯೫, ಪು.೧೦೧) ಕಲ್ಯಾಣ ಚಾಳುಕ್ಯ ದೊರೆ ಆರನೆ ವಿಕ್ರಮಾದಿತ್ಯನ ದಂಡನಾಯಕನಾದ ಸಿಂಗರಸನನ್ನು ದಾಖಲಿಸಿದೆ. ಈತನು ತನ್ನ ತಂದೆ ರೆಬ್ಬಯ್ಯನ ಪರೋಕ್ಷವಿನಯ ನಿಮಿತ್ತವಾಗಿ ಕಚ್ಚೆಗನೂರ ಬಸವನಕೆರೆಯ ಏರಿಯ ಮೇಲೆ ರೆಬ್ಬೇಶ್ವರ ದೇವರನ್ನು ಪ್ರತಿಷ್ಠಾಪಿಸಿ ಅದಕ್ಕೆ ದತ್ತಿ ಬಿಟ್ಟಂತೆ ಉಲ್ಲೇಖಿಸಿದೆ.

ಕ್ರಿ.ಶ. ೧೯೫೫ರ ಶಾಸನವು(ದೇವರಕೊಂಡಾರೆಡ್ಡಿ, ಭಟ್ಟಸೂರಿ ಕೆ.ಜಿ., ಕಲವೀರ ಮನ್ವಾಚಾರ ಮತ್ತು ಪರಮಶಿವಮೂರ್ತಿ ಡಿ.ವಿ.(ಸಂ): ರಾಯಚೂರು ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, ೨೦೦೩, ಪು.೪೨೨)ಚಾಳುಕ್ಯ ದೊರೆ ಆರನೆ ವಿಕ್ರಮಾದಿತ್ಯನು ಕಲ್ಯಾಣ ನೆಲೆವೀಡಿನಿಂದ ಆಳುತ್ತಿರುವಾಗ ಈತನ ದಂಡನಾಯಕ ಮಹಾದೇವಭಟ್ಟೋಪಾಧ್ಯಾಯನನ್ನು ಉಲ್ಲೇಖಿಸಿದೆ. ಈತನನ್ನು ಸಮರ ಸಂತುಷ್ಟ, ಮಹಾಪ್ರಧಾನಿ, ಸಂಧಿವಿಗ್ರಾಹಿ, ಸರ್ವಾಧ್ಯಕ್ಷನೆಂದು ಹೆಸರಿಸಿದೆ. ಅಲ್ಲದೆ, ಅಚ್ಚುಪನ್ನಾಯದ ದಂಡನಾಯಕನಾದ ಕೇಸಿರಾಜನು ದಂಡನಾಯಕ ಮಹಾದೇವಭಟ್ಟೋಪಾಧ್ಯಯನ ಆಜ್ಞೆಯಂತೆ, ಅಗ್ರಹಾರ ಪಿರಿಯ ಬೆಳ್ಳಹಾರಿಯಲ್ಲಿ ಮೂಲಸ್ಥಾನದ ದೇವಾಲಯ ಕಟ್ಟಿಸಿ, ಆ ದೇವಾಲಯಕ್ಕೆ ನಿವೇದ್ಯ ಅಖಂಡ ನಂದಾದೀವಿಗೆಗಾಗಿ ಕೆಲವು ಸುಂಕಗಳನ್ನು ನೀಡಿದನೆಂದು ಉಲ್ಲೇಖಿಸಿದೆ.

ಕ್ರಿ.ಶ. ೧೯೬೭ರ ಸುರಪುರ ತಾಲೂಕಿನ ಕಡಕಲ್ಲು ಶಾಸನವು(ಹನುಮಾಕ್ಷಿ ಗೋಗಿ(ಸಂ), ಸುರಪುರ ತಾಲೂಕಿನ ಶಾಸನಗಳು, ೧೯೯೫, ಪು.೫೯) ಚಾಳುಕ್ಯ ದೊರೆ ಆರನೆ ವಿಕ್ರಮಾದಿತ್ಯನು ಆಳುತ್ತಿರುವಾಗ ಈತನ ದಂಡನಾಯಕನಾದ ನಾಗವರ್ಮಯ್ಯನನ್ನು ಹೆಸರಿಸಿದೆ. ಇದೇ ತಾಲೂಕಿನ ಮುದೆನೂರಿನ ಶಾಸನವು(ಅದೇ, ಪು.೧೧೨)ಚಾಳುಕ್ಯ ವಿಕ್ರಮಾದಿತ್ಯನ ದಂಡನಾಯಕ ಕೊಮಾರಸ್ವಾಮಿಯನ್ನು ಹೆಸರಿಸಿದೆ. ಈ ದಂಡನಾಯಕ ಮತ್ತು ಊರೊಡೆಯ ಹಾಗೂ

ಐದುನೂರು ಮಹಾಜನರು ಸೇರಿ, ಕುಮಾರೇಶ್ವರ ದೇವರನ್ನು ಪ್ರತಿಷ್ಠಾಪಿದರೆಂದು ತಿಳಿಸುತ್ತದೆ. ಕ್ರಿ.ಶ. ೧೧೦೬ರ ಶಾಸನವೊಂದು(ಅದೇ, ಪು.೧೦೫)ಚಾಲುಕ್ಯದೊರೆ ಆರನೆ ವಿಕ್ರಮಾದಿತ್ಯನ ದಂಡನಾಯಕನಾದ ಭೋಗಿಮಯ್ಯನನ್ನು ಹೆಸರಿಸಿದೆ. ಏತನು ಮತ್ತು ದೊರೆಯ ರಾಣಿ ಧಾರಲದೇವಿಯರು ಧಾರಾಪೂರ್ವಕವಾಗಿ ಭೂಮಿಯನ್ನು ನೀಡಿದರೆಂದು ಉಲ್ಲೇಖಿಸಿದೆ. ಕ್ರಿ.ಶ. ೧೧೦೮ ಇದೇ ತಾಲೂಕಿನ ಏವೂರು ಶಾಸನವು ಇದೇ ಅರಸನ ದಂಡನಾಯಕನಾದ ಮುದ್ದರಸರು ಏವೂರ ಸ್ವಯಂಭು ಸೋಮೇಶ್ವರ ದೇವರ ಅಂಗಭೋಗ, ನಂದಾದೀವಿಗೆಗಾಗಿ ಸುಂಕದಾನ ನೀಡಿದನೆಂದು ತಿಳಿಸುತ್ತದೆ. ಕ್ರಿ.ಶ.೧೧೨೦ರ ಶಾಸನವು(ಅದೇ, ಪು.೭೬) ಕಲ್ಯಾಣ ಚಾಳುಕ್ಯ ದೊರೆ ಆರನೆ ವಿಕ್ರಮಾದಿತ್ಯನು ಆಳುತ್ತಿರುವಾಗ ಈತನ ಮಹಾಪ್ರಧಾನಿ ಮನೆವೆರ್ಗ್ಗಡೆ ದಂಡನಾಯಕ ಗೋವಿಂದಮಯ್ಯನ ಆಜ್ಞೆಯಂತೆ ಕರಡಿಕಲ್ಲು ನಾಡಿನ ವಡ್ಡರಾವುಳದ ಸುಂಕವೆರ್ಗ್ಗಡೆ ಬಾಚಿಮಯ್ಯನಾಯಕನು ಕುಡುಗುಂದೆಯಲ್ಲಿ ಒಂದೊಕಲು ತೆರೆಗೆ ಬಿಟ್ಟನೆಂದು ಉಲ್ಲೇಖಿಸುತ್ತದೆ. ಮತ್ತು ಇದೇ ಶಾಸನದಲ್ಲಿ ಪೊನ್ನಕಣಿಯ ದಂಡನಾಯಕ ಬಿಟ್ಟರಸನನ್ನು ಹೆಸರಿಸಿದೆ.

ಕ್ರಿ.ಶ. ೧೧೨೪ರ ಶಾಸನವೊಂದು(ದೇವರಕೊಂಡಾರೆಡ್ಡಿ, ಭಟ್ಟಸೂರಿ ಕೆ.ಜಿ., ಕಲವೀರ ಮನ್ವಾಚಾರ ಮತ್ತು ಪರಮಶಿವಮೂರ್ತಿ ಡಿ.ವಿ.(ಸಂ): ರಾಯಚೂರು ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, ೨೦೦೩, ಪು.೧೪೭)ದಂಡನಾಯಕ ಸಾವಿಪಯ್ಯನ ಸಾಧನೆಗಳ ವಿವರಿಸಿದೆ. ಈತನು ಕಲ್ಯಾಣ ಚಾಳುಕ್ಯ ದೊರೆ, ಆರನೆ ವಿಕ್ರಮಾದಿತ್ಯನ ಹಾಗೂ ಈತನ ಮಗ ಗಂಗಪೆರ್ಮಾಡಿ ಕೊಳ್ಳಿಪಾಕೆ-೭೦೦೦ ದ ಅಧಿಕಾರಿ ಕುಮಾರ ಸೋಮೇಶ್ವರದೇವನ ದಂಡನಾಯಕನಾಗಿದ್ದನು. ಈ ಸಾವಿಪಯ್ಯನ ಪ್ರಾರ್ಥನೆಯಂತೆ ಕುಮಾರ ಸೋಮೇಶ್ವರನು ಗುಮುಡೂರಿನ ಮಲ್ಲೇಶ್ವರ ದೇವರ ಸೇವೆಗೆ ಮೇಲ್ಪುಗೊಂಡ-೨೪ರ ಬಳಿಯ ಬಮ್ಮರಿಗೆ ಎಂಬ ಗ್ರಾಮವನ್ನು ದತ್ತಿಯಾಗಿ ಕೊಟ್ಟನೆಂದು ಈ ಶಾಸನವು ಉಲ್ಲೇಖಿಸುತ್ತದೆ.

ಕ್ರಿ.ಶ. ೧೧೪೬ರ ಶಾಸನವೊಂದು ಕಲ್ಯಾಣ ಚಾಲುಕ್ಯ ಚಕ್ರವರ್ತಿ ಇಮ್ಮಡಿ ಜಗದೇಕಮಲ್ಲನ ಕಾಲದ್ದಾಗಿದ್ದು, ಈ ಶಾಸನವು ಈತನ ಮಹಾಪ್ರಧಾನ ಹಾಗೂ ಸುಂಕವೆರ್ಗ್ಗಡೆ ಗಯಾಧರ ದಂಡನಾಯಕನನ್ನು ಉಲ್ಲೇಖಿಸುತ್ತದೆ. ಈತನು ಮತ್ತು ಅಗ್ರಹಾರ ಮುದೆನೂರಿನ ಪ್ರಮುಖ ಮಹಾಜನಾಂಗಗಳು ಸೇರಿ ಮುದೆನೂರಿನ ಹದಿನೆಂಟು ಸಾವಿರ ಮತ್ತರು ಭೂಮಿಯಲ್ಲಿನ ಹೆರ್ಜುಂಕ, ವಡ್ಡರಾವುಳ ಸರ್ವಸಮಸ್ಯವಾಗಿ ದತ್ತಿ ಬಿಟ್ಟರೆಂದು ಉಲ್ಲೇಖಿಸುತ್ತದೆ.

ಚಾಳುಕ್ಯ ದೊರೆ ಭೂಲೋಕಮಲ್ಲನ ಮಗನಾದ ಮಲ್ಲಿಕಾರ್ಜುನ ಆಳ್ವಿಕೆಯ ಶಾಸನ (ಹನುಮಾಕ್ಷಿ ಗೋಗಿ(ಸಂ), ಸುರಪುರ ತಾಲೂಕಿನ ಶಾಸನಗಳು, ೧೯೯೫, ಪು.೧೧೫) ವೊಂದು ನಾಚಣನೆಂಬ ದಂಡನಾಯಕನನ್ನು ಹೆಸರಿಸಿದೆ. ಈತನು ಎಡದೊರೆ-೨೦೦೦ ದ

ದಂಡನಾಯಕನಾಗಿ ದ್ದನೆಂದು ತಿಳಿಸುತ್ತದೆ. ಈ ನಾಚದಂಡಾಧಿಪನ ತಾತ ನಾಕಿಮಯ್ಯ ಮತ್ತು ತಂದೆ ಕಾಳಿದಾಸ ಚುಮೂಪ. ಇವರ ತಾಯಿ ಕರ್ಣಾಂಬೆ, ಈ ಕಾಳಿದಾಸ ಚಮೂಪನಿಗೆ "ಕನ್ನಡ ಕುಲಾಬ್ದಿ ಚಂದ್ರ" ಎಂಬ ವಿಶೇಷಣವಿತ್ತೆಂದು; ತನ್ನ ತಂದೆ ಕಾಳಿದಾಸನ ಹೆಸರಿನಲ್ಲಿ ನಾಚನು ಕಾಳೇಶ್ವರ ದೇವಾಲಯ ಮಾಡಿಸಿದನೆಂದು ಉಲ್ಲೇಖಿಸಿದೆ. ಕ್ರಿ.ಶ. ೧೧೭೫ರ ಶಾಸನದಲ್ಲಿ (ದೇವರಕೊಂಡಾರೆಡ್ಡಿ, ಭಟ್ಟಸೂರಿ ಕೆ.ಜಿ., ಕಲವೀರ ಮನ್ವಾಚಾರ ಮತ್ತು ಪರಮಶಿವಮೂರ್ತಿ ಡಿ.ವಿ.(ಸಂ): ರಾಯಚೂರು ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, ೨೦೦೩, ಪು.೩೪೭)ಶ್ರೀಮನ್ಮಹಾಪ್ರಧಾನಂ ಸೇನಾಪತಿ ಮಹಾಪ್ರಚಂಡ ದಂಡನಾಯಕ ಕುಮಾರ ಬಮ್ಮದೇವರಸನನ್ನು ಉಲ್ಲೇಖಿಸಿದೆ. ಈತನು ಕಲಚುರಿ ಅರಸ ರಾಯಮುರಾರಿ ಸೋವಿದೇವನ ಅಧಿಕಾರಿಯಾಗಿದ್ದನು. ಅಗ್ರಹಾರ ಮುದಿನೀರ ಪ್ರಭು, ಮುಖ್ಯ ಅಶೇಷ ಮಹಾಜನಗಳು. ಮಹಾಪ್ರಧಾನ, ಸೇನಾಧಿಪತಿ ದಂಡನಾಯಕ ಕುಮಾರ ಬಮ್ಮದೇವರಸ ಹಾಗೂ ಶ್ರೀಕರಣ ವೈಜಯ್ಯರು ಸೇರಿ ಶ್ರೀ ಲಕ್ಷ್ಮೀಣೇಶ್ವರ ದೇವರ ಅಂಗಭೋಗ ನೈವೇದ್ಯಗಳಿಗಾಗಿ ದೇವರಕೇರಿಯ ಅರುಣ ಏಣವನ್ನು ದಾನವಾಗಿ ನೀಡಿದರೆಂದು ತಿಳಿಸುತ್ತದೆ. ದಂಡನಾಯಕ ಕುಮಾರ ಬಮ್ಮದೇವರಸರ ಸುದೀರ್ಘವಾದ ವರ್ಣನೆಯನ್ನು ಕ್ರಿ.ಶ. ೧೧೮೨ರ ಶಾಸನವು(ಹನುಮಾಕ್ಷಿ ಗೋಗಿ(ಸಂ), ಸುರಪುರ ತಾಲೂಕಿನ ಶಾಸನಗಳು, ೧೯೮೫, ಪು.೧೧೯)ಹೀಗೆ ವರ್ಣಿಸಿದೆ. ಕಲ್ಯಾಣ ಚಾಳುಕ್ಯ ಚಕ್ರವರ್ತಿ ತ್ರಿಭುವನಮಲ್ಲ ವೀರಸೋಮೇಶ್ವರನು ಸೆಲೆಯಹಳ್ಳಿಯ ನೆಲೆವೀಡಿನೊಳು ರಾಜ್ಯವಾಳುತ್ತಿರುವಾಗ ಆತನ ದಂಡನಾಯಕ ಕುಮಾರ ಬಮ್ಮದೇವರಸನನ್ನು ಹೀಗೆ ಹೆಸರಿಸಿದೆ. ರಾಯದಂಡಾದಿನಾಥ ಗಂಡಪೆಂಡಾರ ಚಾಳುಕ್ಯರಾಜ್ಯ ಸಮುದ್ಧರಣಂ ಕುಮಾರ ಬಮ್ಮ ದೇವರಸರ ಪ್ರತಾಪ, ಗುಣಗಳನ್ನು ಹೀಗೆ ವರ್ಣಿಸಿದೆ.

"ಭೂವಳೆಯಾದಿನಾಯಕರ ನೋರ್ಪ್ಪನೆ ಗೆಲುದ ಪ್ರತಾಪದಿಂದ,
ದಾವನು ಮಾಂಪರಿಲ್ಲ ಭುಜಗರ್ವ್ವದ ದೋರ್ವ್ವಳದಿಂದೆ ನಿಂದನಿಂ
ಕಾವರುವಾರುವಿಲ್ಲೆನುತ ಓಡಿದರೊಲ್ಲದ ವೈರಿವರ್ಗ್ಗವೀ
ಕಾವಣದಂಡನಾಥ ಸುತ ಬಮ್ಮರಸಂ ಜಗದೇಕವೀರನೋ"
ಬಮ್ಮನ ಸಾಜ ಭಾನುವಿನ ತೇಜಯಿರಿದ್ವೀರನೋಜೆ ಲೋಕದೊಳು
ಸೋಮನ ತಂಪು ಮೇರುವಿನ ಬಣು ಸುರೇಶನ ಪೆಂಪು ನಾಡೆಯುಂ
ರಾಮನ ಸತ್ವ, ಭೀಸ್ಮನ ಸುಚಿತ್ವ ಮಹೇಸ ಮಹತ್ವಮೆಂದೊಡಿ
ನೀಮಹಿಯೊಳು ನೆಗಳ್ತೆವಡೆದಿಪ್ಪವರಾರ್ದ್ದೊರೆ ಬಂಮಿದೇವ.

ಕಲ್ಯಾಣ ಚಾಳುಕ್ಯ ಅರಸರು ದುರ್ಬಲಗೊಂಡಾಗ ಮಹಾಮಂಡಲೇಶ್ವರರಾದ ಕಳಚುರ್ಯರು ರಾಜ್ಯ ಸ್ಥಾಪಿಸಿದಂತೆ, ಅವರೂ ರಾಜ್ಯವಾಳಲು ಅಸಮರ್ಥರಾದಾಗ ಬಲಾಢ್ಯರಾದ ಮಹಾಮಂಡಲೇಶ್ವರರು ಸಾಮಂತರು ದಂಗೆಯೆದ್ದು ಸ್ವತಂತ್ರರಾಗಲು ಹವಣಿಸಿದಂತೆ ತೋರುತ್ತದೆ. ಅಂತೆಯೇ ಸಗರನಾಡಿನ ಮಹಾಮಂಡಳೇಶ್ವರ ಅಲ್ಲ ಹುಲಿ ದೇವರಸ ಸ್ವತಂತ್ರನಾಗಲು ಯತ್ನಿಸಿದಾಗ ಕುಮಾರ ಬಮ್ಮಿದೇವರಸ ದಂಡನಾಯಕ ಎಚ್ಚೆಡಿಯಾಗಿ ಬಂದ ಸಮಯದಲ್ಲಿಯೇ ಎಮ್ಮೆವಾಡಿಗೆಯ ಹಂದೇಶ್ವರ ದೇವರಿಗೆ ದಾನ ನೀಡಿದ ಉಲ್ಲೇಖ ಈ ಶಾಸನವು ಉಲ್ಲೇಖಿಸುತ್ತದೆ. ಕ್ರಿ.ಶ. ೧೨೧೫ ರ ಶಾಸನವೊಂದು(ಅದೇ, ಪು.೨೦೯), ದಾಮೋದರ ದಂಡನಾಥನನ್ನು ಉಲ್ಲೇಖಿಸಿದೆ. ಈತನು ದೇವಗಿರಿ ಯಾದವ ವಂಶದ ಸಿಂಹಣನ ದಂಡನಾಯಕನಾಗಿದ್ದನು. ಕ್ರಿ.ಶ. ೧೨೭೯ರ ಯಾದವ ಚಕ್ರವರ್ತಿ ಇಮ್ಮಡಿ ಸಿಂಗಣ ದೇವನ ಆಳ್ವಿಕೆ ಕಾಲದ ಶಾಸನವೊಂದರಲ್ಲಿ (ದೇವರಕೊಂಡಾರೆಡ್ಡಿ, ಭಟ್ಟಸೂರಿ ಕೆ.ಜಿ., ಕಲವೀರ ಮನ್ವಾಚಾರ ಮತ್ತು ಪರಮಶಿವಮೂರ್ತಿ ಡಿ.ವಿ.(ಸಂ), ರಾಯಚೂರು ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, ೨೦೦೩, ಪು.೧೮೪) ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನು ಮಹಾಪ್ರಧಾನಂ ಬಾಹತ್ತರ ನಿಯೋಗಾಧಿಪತಿ ರಸಲಪತಿ ನಿಯೋಗ ಯೋಗಂಧರ ಪ್ರತಿಕಾರ್ಯಧುರಂಧರಂ ಮಂತ್ರಿ ಮಾಣಿಕ್ಯ ನೀತಿ ಚಾಣ್ಯಕ್ಯನು ಶ್ರೀಮತು ಮಗರ ಮುರಾರಿ ಜಇತಪಳದೇವನ ರಾಜ್ಯಭ್ಯುದೆಯ ಕರಣಕಾರಣನುಮಪ್ಪ ಹಗರಟ್ಟಿಗೆ ३೦೦ ರ ಸುರ್ವಾಧಿಕಾರಿ ಪಾರಿಸಸೆಟ್ಟಿಯಕುಂ" ಎಂದು ವರ್ಣಿಸಿದೆ. ಹೀಗಾಗಿ ಪಾರಿಸೆಟ್ಟಿಯು ೭೨ ನಿಯೋಗಗಳ ಅಧಿಪತಿಯಾಗಿದ್ದನೆಂರು; ಮತ್ತು ಹಗರಟ್ಟಿಗೆ ३೦೦ ರ ಸರ್ವಾಧಿಕಾರಿಯಾಗಿದ್ದನೆಂದು ತಿಳಿದುಬರುತ್ತದೆ. ಈ ಊರಿನ ಮಹಾಜನರು ಈತನ ಸಮ್ಮುಖದಲ್ಲಿ ಶ್ರೀ ರಾಮನಾಥ ದೇವರಿಗೆ, ಶ್ರೀ ಬಾಚೇಶ್ವರ ದೇವರಿಗೆ, ಕೇತೇಶ್ವರ, ಶ್ರೀ ಚೌಡೇಶ್ವರ ದೇವಿಯರಿಗೆ ಭೂದತ್ತಿ ಬಿಟ್ಟ ಉಲ್ಲೇಖ ಕಂಡುಬರುತ್ತದೆ.

೧. ಮಂಡಪರಸ: ಕ್ರಿ.ಶ.೯೪೬ರ ತೆಲಂಗಾಣದ ಕರೀಂನಗರ ತಾಲೂಕಿನ ಸನಿಗರಂ ಶಾಸನವು ತಮ್ಮ ಕುಲಾಭರಣನಾದ ದಂಡನಾಯಕ ಮಂಡಪರಸನನ್ನು ಉಲ್ಲೇಖಿಸುತ್ತದೆ. ಈತನು ಚಾಲುಕ್ಯದೊರೆ ಎರಡನೇ ಜಗದೇಕಮಲ್ಲ ದಂಡನಾಯಕನಾಗಿದ್ದನು. ಇವನು ಅಲ್ಲಿಯ ಶ್ರೀಪಾರ್ಥೇಶ್ವರ ದೇವರಿಗೆ ನಿತ್ಯ ನೈವಿಧ್ಯೆ ಮತ್ತು ದೀಪಕ್ಕಾಗಿ, ತಪೋಧನರಿಗಾಗಿ ದಾನ ನೀಡಿದನೆಂದು ತಿಳಿಸುತ್ತದೆ(ಕ.ವಿ.ಶಾ.ಸಂ.೫, ಭಾಗ ೨, ಪು.೬೬).

೨. ಸಾವಿಪಯ್ಯ: ಕ್ರಿ.ಶ.೧೧೨೪ರ ವರಂಗಲ್ ಜಿಲ್ಲೆಯ ಗೂಡೂರು ಶಾಸನವು ಜಯಂತಿಪುರದಿಂದ ರಾಜ್ಯಭಾರ ಮಾಡುತ್ತಿದ್ದ ಚಾಲುಕ್ಯದೊರೆ ತ್ರಿಭುವನಮಲ್ಲನ ದಂಡಾಧಿಕಾರಿ ಸಾವಿಪಯ್ಯನನ್ನು ಹೆಸರಿಸುತ್ತದೆ. ಈತನನ್ನು ಕೊಳ್ಳಿಪಾಕೆಯ ೨೦೦೦ರ ದಂಡನಾಯಕನಾಗಿದ್ದನು. ಈತನನ್ನು

ಸ್ವಾಮಿದಂಡನಾಥ, ಸಾವಿದೇವ, ಸಾವಿದಂಡಾಧಿಪ ಎಂದೂ ಕರೆಯುತ್ತಾರೆ. ಈತನು ಕೈಗೊಂಡ ಲೋಕೋಪಯೋಗಿ ಸಾಧನೆಗಳನ್ನು ಕುರಿತು ತಿಳಿಸುತ್ತದೆ ಸಂಕ್ರಾಂತಿಯಂದು ಅಲ್ಲಿಯ ಉರಿನ ಮಲ್ಲೇಶ್ವರ ದೇವರ ಅಂಗರಂಗಭೋಗಕ್ಕಾಗಿ ಸರ್ವನಮಸ್ಯವಾಗಿ ದಾನ ನೀಡಿದನೆಂದು ಉಲ್ಲೇಖಿಸುತ್ತದೆ(ಅದೇ, ಪು.೭೯).

೩. **ಲಕ್ಷ್ಮೀದೇವ:** ಕ್ರಿ.ಶ.೧೧೧೧ರ ಶಾಸನವು ಕಲ್ಯಾಣ ಚಾಲುಕ್ಯದೊರೆ ತ್ರಿಭುವನಮಲ್ಲ ದಂಡನಾಯಕನಾದ ಲಕ್ಷ್ಮೀದೇವ ಉಲ್ಲೇಖಿಸುತ್ತದೆ. ಈತನು ಭುವನಗಿರಿಯ ದಂಡನಾಯಕ ನಾಗಿದ್ದನು. ಅಲ್ಲಿಯ ದೇವಾಲಯಗಳ ಜೀರ್ಣೋದ್ಧಾರ ಮತ್ತು ಋಷಿಮುನಿಗಳ ಆಹಾರಕ್ಕಾಗಿ ಮತ್ತು ಸೋಮೇಶ್ವರ ದೇವರಿಗೆ ಧಾರಾಪೂರ್ವಕವಾಗಿ ನೀಡಿದನೆಂದು ವಿವರಿಸುತ್ತದೆ. ಅಲ್ಲದೆ, ಲೋಕೋಪಯೋಗಿ ಕಾರ್ಯಗಳನ್ನು ಮಾಡಿಸಿದನೆಂದು ತಿಳಿದುಬರುತ್ತದೆ(ಅದೇ, ಪು.೨೮೧).

೪. **ಲಕ್ಷ್ಮಣಯ್ಯ:** ಕ್ರಿ.ಶ.೧೧೨೫ರ ಏವೂರಿನ ಶಾಸನವು ದಂಡಾಧಿಕಾರಿ ಲಕ್ಷ್ಮಣಯ್ಯನ್ನು ಕಲ್ಯಾಣ ಚಾಲುಕ್ಯದೊರೆ ಆರನೆ ವಿಕ್ರಮಾದಿತ್ಯನ ದಂಡಾಧಿಕಾರಿಯಾಗಿದ್ದನೆಂದು ತಿಳಿಸುತ್ತದೆ. ಈತನು ಏವೂರಿನ ಶ್ರೀಸ್ವಯಂಭೂ ಸೋಮೇಶ್ವರ ದೇವರಿಗೆ ಮತ್ತು ಬ್ರಾಹ್ಮಣರಿಗೆ ನಾಗೆಯ ದೇವರಿಗೆ ದೀಪಕ್ಕಾಗಿ ದಾನ ನೀಡಿದನೆಂದು ಉಲ್ಲೇಖಿಸುತ್ತದೆ(ಹನುಮಾಕ್ಷಿ ಗೋಗಿ, ಸುರಪುರ ತಾಲೂಕಿನ ಶಾಸನಗಳು, ಪು.೪೨).

೫. **ಕಂಚರಸ:** ಕ್ರಿ.ಶ.೧೧೪೯ರ ಯಾದಗಿರಿ ಜಿಲ್ಲೆಯ ಸುರಪೂರ ತಾಲೂಕಿನ ಏವೂರಿನ ಶಾಸನವು ಕಂಚರಸ ದಂಡನಾಯಕನನ್ನು ಉಲ್ಲೇಖಿಸುತ್ತದೆ. ಈತನು ಕಲ್ಯಾಣದ ದೊರೆ ಆರನೆ ವಿಕ್ರಮಾದಿತ್ಯನು ಆಳ್ವಿಕೆಯ ಕಾಲದಲ್ಲಿ ಸಗರ ನಾಡಿನ-೫೦೦ರ ದಂಡನಾಗಿದ್ದನೆಂದು ತಿಳಿಸುತ್ತದೆ. ಈತನು ಆ ಊರಿನ ಶ್ರೀಸ್ವಯಂಭು ದೇವರಿಗೆ ಅಂಗಭೋಗಕ್ಕಾಗಿ ಹೆರ್ಜುಂಕದಾನವನ್ನು ನೀಡಿದನೆಂದು ವಿವರಿಸುತ್ತದೆ(ಅದೇ, ಪು.೪೪).

೬. **ಶಂಕರಯ್ಯ:** ಕ್ರಿ.ಶ.೧೧೯೬ರ ತೆಲಂಗಾಣ ರಾಜ್ಯದ ನೆಲ್ಗೊಂಡ ಜಿಲ್ಲೆಯ ಚಿಲ್ಕೂರು ಶಾಸನವು ದಂಡನಾಯಕ ಶಂಕರಯ್ಯನನ್ನು ಉಲ್ಲೇಖಿಸುತ್ತದೆ. ಈತನು ಕುಮಾರ ಜನಸಿಂಹದೇವನ ದಂಡನಾಯಕನಾಗಿದ್ದನು. ಈತನು ಸೋಮಗ್ರಹಣದಂದು ರಾಜಧಾನಿ ಚೆಲ್ಲೂರಿನ ಹಿರಿಯ ನಕರೇಶ್ವರ ದೇವರಿಗೆ ಶ್ರೀ ಬಂಡಸ್ಫುಡಿತ ಅಕ್ಷತೆ, ಧೂಪ ದೀಪಕ್ಕಾಗಿ ಮತ್ತು ಅಲ್ಲಿಯು ದೇವರ ನಿತ್ಯ ಪೂಜೆಗಾಗಿ ಮತ್ತು ನೃತ್ಯ ಗೀತ ವಾದ್ಯಕ್ಕಾಗಿ ಮತ್ತು ಅಲ್ಲಿಯ ತಪೋನಿರತರಿಗಾಗಿ ದಾನ ನೀಡಿದ್ದನ್ನು ಉಲ್ಲೇಖಸುತ್ತದೆ(ಕ.ವಿ.ಶಾ.ಸಂ.೫, ಭಾಗ ೨, ಪು.೧೯೪.

೭. **ಕಾವಣಭಟ್ಟ:** ಕ್ರಿ.ಶ.೧೦೫೬ರ ಶಾಸನವು ದಂಡನಾಯಕ ಕಾವಣಭಟ್ಟನು ಅಲ್ಲಿಯ ಪಂಚಮಠಗಳಿಗೆ ಯತಿಗಳಿಗಾಗಿ ಕೊಳ್ಳಿಪಾಕೆಯ ಯೊಂಬತ್ತುಪುರಕ್ಕೆ, ಬಸದಿಗಳಿಗೆ ದೇವಾಲಯಗಳಿಗೆ, ಕೆರೆ,

ಕಾಲುವೆ, ರಾಣ, ತೋಟ ಮತ್ತು ಯಾವುದೇ ಭಾದೆಗಳನ್ನು ಬರಬಾರದಂತೆ ತ್ರಿಭೋಗಾಂಭ್ಯಕವಾಗಿ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ(ಅದೇ, ಪು.೨೫೮).

೮. ಚಿಲ್ಲಮಲ್ಲಯ್ಯ: ಕ್ರಿ.ಶ.೧೦೯೩ರ ತೆಲಂಗಾಣದ ಅಲ್ಲಾದರ್ಗ್ ಶಾಸನವು ಕಲ್ಯಾಣ ಚಾಲುಕ್ಯ ದೊರೆ ಆರನೆ ವಿಕ್ರಮಾದಿತ್ಯನ ಮಹಾಸಂಧಿ ವಿಗ್ರಹಿ ದಂಡನಾಯಕ ಚಿಲ್ಲಮಲ್ಲಯ್ಯನನ್ನು ಉಲ್ಲೇಖಿಸುತ್ತದೆ. ಈತನನ್ನು ಶಾಸನವು ಬಹುವಾಗಿ ವರ್ಣಿಸಿದೆ. ಪ್ರತಾಪ, ವೈರಿನಾರಾಯಣ, ನೀತಿ ಪಾರಾಯಣ ಶೌರ್ಯ್ಯ ಮಾರ್ತಾಂಡ, ರಾಜ್ಯಭರ ನಿರೂಪಿತ, ಪ್ರಭುಮಂತ್ರೋತ್ಸಾಹ ಇವೆಲ್ಲ ಬಿರುಗಳಾಂಕಿತ ಚಿನಮಲ್ಲಯ್ಯನು ಅಲ್ಲಿಯ ಚಿಲ್ಲೇಶ್ವರದೇವರಿಗೆ ಅಂಗಭೋಗಧೂಪ ದೀಪ ನಿವ್ವೇದ್ಯಕ್ಕಾಗಿ ಅಲ್ಲಿಯ ಪೂಜಾರಿಗಳಿಗೆ ಭೂದಾನ ಮಾಡಿದನೆಂದು ತಿಳಿಸುತ್ತದೆ(ಅದೇ, ಪು.೨೯೮).

೯. ಮಲ್ಲಿಯಣ್ಣ: ಕ್ರಿ.ಶ.೧೧೨೬ರ ಪಟಾನ್ ಚೆರು ಶಾಸನವು ದಂಡಾಧಿಕಾರಿ ಮಲ್ಲಿಯಣ್ಣಭಟ್ಟನನ್ನು ಉಲ್ಲೇಖಿಸಿದೆ. ಈತನು ಅಲ್ಲಿಯ ಪೊಟ್ಟಳಕೆರೆಯ ಚಿಂತಾಮಣಿಪುರದ ಕೆಳಗಿನ ಆದಾಯವನ್ನು ದತ್ತಿಯಾಗಿ ಕೊಟ್ಟನೆಂದು ತಿಳಿಸುತ್ತದೆ(ಅದೇ, ಪು.೩೦೫).

ಹೀಗಾಗಿ ಮೇಲೆ ಉಲ್ಲೇಖಿತ ಶಾಸನಗಳನ್ವಯ ದಂಡಾಧಿಕಾರಿಗಳು ಕೇವಲ ಸೈನ್ಯಾಧಿಕಾರಿ ಗಳಲ್ಲ; ಇವರು ರಾಜನ ಸರ್ವಕಾರ್ಯಗಳಲ್ಲಿ ಅಂದರೆ ಸಾಮಾಜಿಕ, ಧಾರ್ಮಿಕ ಕಾರ್ಯಗಳಲ್ಲಿ ಮಹತ್ವದ ಪಾತ್ರವಹಿಸುತ್ತಿದ್ದರು. ಅಲ್ಲದೆ ಕರ ವಿಧಿಸುವ, ಭೂದತ್ತಿ ನೀಡುವ, ನಾಣ್ಯ ಟಂಕಿಸುವ ಅರ್ಥ ಸಚಿವರು, ಸುಂಕ ಸಚಿವರು, ಸೇನಾಧಿಪತಿಗಳು, ರಾಜನಿಗೆ ನೀತಿ ಬೋಧಿಸುವಲ್ಲಿ ಚಾಣಕ್ಯನಾಗಿದ್ದರು. ವಿದೇಶಾಂಗ ಸಚಿವರು ಆಗಿದ್ದರೆಂದು ಹೇಳಬಹುದು.

ಊರೊಡೆಯರು

ಚಕ್ರವರ್ತಿಗಳ ನೇರ ಆಡಳಿತಕ್ಕೆ ಒಳಪಟ್ಟದ್ದು ಕೇಂದ್ರಾಡಳಿತ. ಅದನ್ನು ಹೊರತುಪಡಿಸಿದರೆ ಉಳಿದ ಆಡಳಿತ ಊರಾಡಳಿತವೆಂದು ಸ್ಥೂಲವಾಗಿ ಹೇಳಬಹುದು. ಈ ಊರು ಆಡಳಿತದಲ್ಲಿ ೧. ಪಟ್ಟಣಗಳ ಆಡಳಿತ, ೨. ಅಗ್ರಹಾರಗಳ ಆಡಳಿತ ಮತ್ತು ಹಳ್ಳಿಗಳ ಆಡಳಿತ ಎಂದು ಹೆಸರಿಸಬಹುದೆಂದು ಇದಕ್ಕೆ ಶಾಸನಗಳ ಒಪ್ಪಿಗೆಯೂ ಇದೆ(ಡಾ.ಎಂ.ಚಿದಾನಂದಮೂರ್ತಿ, ಕನ್ನಡ ಶಾಸನ ಸಾಂಸ್ಕೃತಿಕ ಅಧ್ಯಯನ, ೧೯೭೯, ಪು.೩೪೮)ಸಾಮಾನ್ಯವಾಗಿ ಒಂದು ಊರಿನಲ್ಲಿ ಎಲ್ಲ ವರ್ಗದ ಜನ ಸಮುದಾಯ ನೆಲೆಸಿರುತ್ತದೆ. ಇಂತಹ ಊರಿನಲ್ಲಿ ಕೆಲ ಮೇಲ್‌ವರ್ಗದ ಅಕ್ಷರ ಜ್ಞಾನ ಬಲ್ಲವರಿಗೆ, ಕೆಲವು ಜವಾಬ್ದಾರಿ, ಬರೀ ಶಾರೀರಿಕ ಬಲಾಢ್ಯರಿವವರಿಗೆ ಊರಿನ ಕಾವಲು ಕಾರ್ಯ, ಅವರವರ ಯೋಗ್ಯತೆಗೆ ತಕ್ಕ ಅಧಿಕಾರ, ಹುದ್ದೆಗಳನ್ನು ಪಡೆದುಕೊಂಡಿದ್ದರೆಂದು ಹೇಳಬಹುದು.

ಕ್ರಿ.ಶ. ೧೦೫೫ ರ ಕಲ್ಯಾಣ ಚಾಳುಕ್ಯ ಚಕ್ರವರ್ತಿ ಜಗದೇಕಮಲ್ಲ ಎರಡನೆಯ ಜಯಸಿಂಹನ ಕಾಲದ ಶಾಸನವೊಂದು ಕಚ್ಚೆಗ ನೂರಿನ ಊರೊಡೆಯ ಕೇತರಸನು ಊರಿನ ಪಶ್ಚಿಮ ದಿಕ್ಕಿನ ಕೆರೆಯ ಸೀಮೆಯಲ್ಲಿ ಭೂದತ್ತಿ ನೀಡಿದನೆಂದು ಉಲ್ಲೇಖಿಸುತ್ತದೆ. ಒಬ್ಬ ಊರೊಡೆಯನಿಗೂ ಭೂದತ್ತಿ ನೀಡುವ ಅಧಿಕಾರ ಇತ್ತೆಂದು; ಈತನು ಕೂಡ ರಾಜ್ಯದ ಪ್ರತಿನಿಧಿಯಾಗಿ ಊರಿನ ಜನಪರ ಕಾರ್ಯದಲ್ಲಿ ನಿರತನಾಗುತ್ತಿದ್ದನೆಂದು ಹೇಳಬಹುದು. ಕ್ರಿ.ಶ. ೧೧೧೪ರ ಶಾಸನವು(ಹನುಮಾಕ್ಷಿ ಗೋಗಿ(ಸಂ), ಸುರಪುರ ತಾಲೂಕಿನ ಶಾಸನಗಳು, ೧೯೯೫, ಪು.೫೫)ಮಹಾಸಾಮಂತ ಚಂದರಸನು ಆಳುತ್ತಿರುವಾಗ ಊರೊಡೆಯ ತೈಲಪಯ್ಯನಾಯಕನು ಆ ಊರಿನ ದೇವರಿಗೆ ಬಿಟ್ಟದತ್ತಿಯನ್ನು ಹೆಸರಿಸಿದೆ. ಕ್ರಿ.ಶ.೧೨೨೯ರ ಶಾಸನವೊಂದು(ಅದೇ, ಪು.೧೦೭)ಇದು ಯಾದವ ಚಕ್ರವರ್ತಿ ಇಮ್ಮಡಿ ಸಿಂಗಣದೇವನ ಆಳ್ವಿಕೆ ಕಾಲದ್ದಾಗಿದ್ದು; ಹಗರಟಿಗೆಯ ಊರೊಡೆಯನಾದ ಬಾಚರಸನು ಮಾನ್ಯ ಮಾಡಿ ಅಲ್ಲಿಯ ದೇವರಿಗೆ ಅಂಗ-ರಂಗ ಭೋಗಕ್ಕಾಗಿ ಭೂ ದತ್ತಿ ನೀಡಿದನೆಂದು ತಿಳಿಸುತ್ತದೆ.

ಪಟ್ಟಣಗಳ ಆಡಳಿತ

ಪ್ರಾಚೀನ ಕಾಲದ ರಾಜರ ರಾಜಧಾನಿಗಳೆಲ್ಲ ಈಗ ಪ್ರಮುಖ ಪಟ್ಟಣಗಳಾಗಿವೆ. ಪಟ್ಟಣವನ್ನೂ ಪುರ, ನಕರ, ಖೇಡಗಳೆಂದು ಕರೆಯಲಾಗಿದೆ. "ಪ್ರಾಚೀನ ಕರ್ನಾಟಕದ ಪಟ್ಟಣಗಳು ಬಹುಮಟ್ಟಿಗೆ ವ್ಯಾಪಾರ ಕೇಂದ್ರಗಳು, ಬಹುಶಃ ವ್ಯಾಪಾರದಿಂದಲೇ ಊರುಗಳು ಪಟ್ಟಣಗಳಾಗುತ್ತಿದ್ದವು. ಸೆಟ್ಟಿ ಬಿಟ್ಟ ಲೇಪಟ್ಟಣ ಎನ್ನುವ ಗಾದೆಯ ಹಿಂದೆ ಅರ್ಥವಿಲ್ಲದಿಲ್ಲ. ಹಿಂದೊಮ್ಮೆ ರಾಷ್ಟ್ರಕೂಟರ ರಾಜಧಾನಿಯಾಗಿದ್ದ ಮಾನ್ಯಖೇಟವು ಈಗ ಗುಲಬರ್ಗಾ ಜಿಲ್ಲೆಯ ಮಳಖೇಡ್ ಎಂಬ ಒಂದು ಹಳ್ಳಿ. ಈಗ ಪ್ರಚಲಿತವಾಗಿರುವ ಕತೆಗಳ ಪ್ರಕಾರ ಅದು ಪೂರ್ವದಲ್ಲಿ ಹತ್ತು ಮೈಲಿ ದೂರವಿರುವ ಸೇಡಂ, ಊರಿನವರೆಗೂ, ಪಶ್ಚಿಮದಲ್ಲಿ ನಾಲ್ಕು ಮೈಲಿ ದೂರವಿರುವ ದಂಡೋತಿಯವರೆಗೂ ಹಬ್ಬಿದ್ದಿತು. ಇದು ನಿಜವಾದರೆ ಪ್ರಾಚೀನ ಕರ್ನಾಟಕದ ಕೆಲವು ದೊಡ್ಡ ಪಟ್ಟಣಗಳ ವಿಸ್ತಾರವನ್ನು ನಾವು ಊಹಿಸಿಕೊಳ್ಳಬಹುದು(ಡಾ.ಎಂ.ಚಿದಾನಂದಮೂರ್ತಿ, ಕನ್ನಡ ಶಾಸನ ಸಾಂಸ್ಕೃತಿಕ ಅಧ್ಯಯನ, ೧೯೭೭, ಪು.೩೫೦). ಕ್ರಿ.ಶ.೧೧೫೪ ರ ಶಾಸನವೊಂದರಲ್ಲಿ (ದೇವರಕೊಂಡಾರೆಡ್ಡಿ, ಭಟ್ಟಸೂರಿ ಕೆ.ಜಿ., ಕಲವೀರ ಮನ್ವಾಚಾರ ಮತ್ತು ಪರಮಶಿವಮೂರ್ತಿ ಡಿ.ವಿ.(ಸಂ), ಕ.ವಿ.ಶಾ.ಸಂ.೨, ೧೯೯೯. ಪು.೧೮೭)ಅಷ್ಟದಶ ಪಟ್ಟಣರುಂ ಎಂದು ಉಲ್ಲೇಖಿಸಿದೆ. ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಮುಧೋಳ ಶಾಸನದಲ್ಲಿ ಅಲ್ಲಿಯ ಅಶೇಷ ಮಹಾಜನರು ಅನುಮತಿ ಪಡೆದು ಐನೂರು ವ್ಯಾಪಾರಿಗಳು ಅಂದರೆ ಹದಿನೆಂಟು ಪಟ್ಟಣದ ವ್ಯಾಪಾರಿಗಳು ಸೇರಿ ಗವರೇಶ್ವರ ದೇವಾಲಯವನ್ನು ನಿರ್ಮಿಸಿದರೆಂದು ಈ ಶಾಸನ ತಿಳಿಸುತ್ತದೆ.

ಹೆಚ್ಚಿನ ಪಟ್ಟಣಗಳು ನಾಡಿನ ಉಪವಿಭಾಗದ ಮುಖ್ಯಸ್ಥಳಗಳಾಗಿರುವುದರಿಂದ ಆಯಾ ಉಪವಿಭಾಗಗಳ ಆಡಳಿತ ನೋಡಿಕೊಳ್ಳಲು ಸಾಮಂತ ಮಂಡಳೇಶ್ವರರೊಂದಿಗೆ ಮನ್ನೆಯರು ಮತ್ತು ಇತರ ಅಧಿಕಾರಿಗಳು ಅಲ್ಲಿ ವಾಸಿಸುತ್ತಿದ್ದರು. ಆದರೂ ಪ್ರತಿ ಹಳ್ಳಿ ಪಟ್ಟಣ ಸ್ವಯಂಪೂರ್ಣ ಆಡಳಿತ ಘಟಕವಾಗಿ ರಾಜ್ಯಾಡಳಿತದೊಡನೆ ಸಂಬಂಧ ಪಡೆದಿರುತ್ತಿದ್ದವು. ಗ್ರಾಮ ಸ್ವಾಯತ್ತತೆಯ ಈ ಪದ್ಧತಿ ಕದಂಬರ ಕಾಲಕ್ಕೆ ಪ್ರಾರಂಭಗೊಂಡಿದ್ದನ್ನು ಜಿ.ಎಂ. ಮೊರೆಸ್ ಗುರುತಿಸಿದ್ದಾರೆ(ಉದ್ಧೃತ: ಡಾ. ಚನ್ನಬಸವಯ್ಯ ಹಿರೇಮಠ: ಕುರುಗೋಡಿನ ಸಿಂಧರು ಒಂದು ಅಧ್ಯಯನ. ೧೯೯೫, ಪು.೧೫೨). ಹೀಗೆ ಆ ಪಟ್ಟಣಗಳಲ್ಲಿ ವಾಸಿಸುವ ಮತ್ತು ವ್ಯಾಪಾರಿ ಸಂಘದವರು ಅಥವಾ ಅವರಲ್ಲಿಯೇ ಮುಖಂಡರು ಅನೇಕ ದೇವಾಲಯಗಳಿಗೂ ದಾನ–ದತ್ತಿ ಬಿಟ್ಟ ವಿಷಯಗಳು ತಿಳಿದುಬರುತ್ತವೆ.

ಅಗ್ರಹಾರ ಆಡಳಿತ

ಮಧ್ಯಕಾಲೀನ ದಕ್ಷಿಣ ಭಾರತದ ಇತಿಹಾಸದಲ್ಲಿ ಅಗ್ರಹಾರಗಳು ತಮ್ಮದೇ ಆದ ವಿಶಿಷ್ಟ ಪೂರ್ಣವಾದ ಸ್ಥಾನ ಪಡೆದಿವೆ. ಅಗ್ರಹಾರ ಇದರ ಮೂಲರೂಪ "ಅಗ್ರಾಹಾರ" ಎಂದಿರಬೇಕೆಂದೂ, ಅದು ಅಗ್ರ+ಆಹಾರ ಎಂಬ ಎರಡು ಪದಗಳ ಸಮಾಸವೆಂದೂ ಪ್ರೊ: ಡಿ.ಎಲ್. ನರಸಿಂಹಾಚಾರ್ಯರ ಅಭಿಪ್ರಾಯ. 'ಅಗ್ರ' ಎಂದರೆ ಶ್ರೇಷ್ಠ. ಆಹಾರ ಎಂದರೆ ದೇಶ ಅಥವಾ ಸ್ಥಳ. ಅಗ್ರಹಾರವೆಂದರೆ ಶ್ರೇಷ್ಠರಿಗೆ ಕೊಟ್ಟಿರುವ ಸ್ಥಳ. ಅಥವಾ ಊರು ಎಂದರ್ಥ(ಡಾ.ಎಂ.ಚಿದಾನಂದಮೂರ್ತಿ, ಕನ್ನಡ ಶಾಸನ ಸಾಂಸ್ಕೃತಿಕ ಅಧ್ಯಯನ, ೧೯೭೬, ಪು.೨೦೯). ಇಲ್ಲಿ ಶ್ರೇಷ್ಠರೆಂದರೆ ಮಹಾಜನರು, ಮಹಾಜನರೆಂದರೆ ಬ್ರಾಹ್ಮಣರು. ಇವರು ತಮ್ಮ ಅಧ್ಯಯನ, ಅಧ್ಯಾಪನ ಕಾರ್ಯದಲ್ಲಿಯೇ ಅವರು ತಮ್ಮನ್ನು ತಾವು ತೊಡಗಿಸಿಕೊಳ್ಳುತ್ತಿದ್ದರು. ಅವರು ಇಡೀ ಸುತ್ತಲಿನ ಜನರಿಗೆ ವಿದ್ಯಾಭ್ಯಾಸ ಮಾಡಿಸುತ್ತಿದ್ದರು. ಅವರ ಉಪಜೀನವಕ್ಕಾಗಿ ಅಂದಿನ ರಾಜರು ಆ ಊರಿನಿಂದ ಬರುವ ಆದಾಯವನ್ನು ಅವರ ಉಪಜೀವನಕ್ಕಾಗಿ ಸರ್ವ ಸಮಸ್ಯವಾಗಿ ಬಿಟ್ಟುಕೊಡುತ್ತಿದ್ದರು. ಅದನ್ನು ಬಳಸಿಕೊಂಡು ಅಗ್ರಹಾರದ ಒಡೆತನ, ಮತ್ತು ಮೇಲ್ವಿಚಾರಕರಂತೆ ಕಾರ್ಯನಿರ್ವಹಿಸುತ್ತಿದ್ದರು. ಅಗ್ರಹಾರವನ್ನು ಅರಸರಿಂದ ಬ್ರಾಹ್ಮಣ ಮುಖ್ಯಸ್ಥನೊಬ್ಬ ಪಡೆಯುತ್ತಿದ್ದನಾದರೂ ನಂತರ ಆತ ಅದನ್ನು ಇತರ ಬ್ರಾಹ್ಮಣರೊಂದಿಗೆ ಹಂಚಿಕೊಳ್ಳುತ್ತಿದ್ದನು. ಆದರೆ ಹೀಗೆ ಹಂಚಿಕೊಳ್ಳುವಲ್ಲಿ ಅವರು ಯಾವ ಮಾನ ದಂಡವನ್ನು ಉಪಯೋಗಿಸುತ್ತಿದ್ದರೆಂಬುದು ಶಾಸನಗಳಿಂದ ತಿಳಿದುಬರುವುದಿಲ್ಲ(ಡಾ.ಚನ್ನಬಸವಯ್ಯ ಹಿರೇಮಠ: ಕುರುಗೊಡಿನ ಸಿಂಧರು ಒಂದು ಅಧ್ಯಯನ. ಪು.೧೫೪). ಅಗ್ರಹಾರದ ಬ್ರಾಹ್ಮಣರು ರಾಜಕೀಯ ಸಾಮಾಜಿಕ ಧಾರ್ಮಿಕ ಮತ್ತು ಸಾಂಸ್ಕೃತಿಕವಾಗಿ

ಹಲವಾರು ಚಟುವಟಿಕೆಗಳಿಂದ ಗಮನ ಸೆಳೆಯುವರಾಗಿದ್ದರು. ಹೀಗಾಗಿ ಬ್ರಾಹ್ಮಣರು ಊರಿನ ಪೂಜ್ಯನೀಯ ಹಾಗೂ ಒಡೆಯರೆನಿಸಿ ಕೊಳ್ಳುತ್ತಿದ್ದರು.

ಕ್ರಿ.ಶ.೧೧೫೮ರ ಗೊಬ್ಬೂರಿನ ಶಾಸನವೊಂದರಲ್ಲಿ ರಾಜನ ನಂತರ ಅಲ್ಲಿಯ ಅಗ್ರಹಾರದ ಬ್ರಾಹ್ಮಣರೇ ಪ್ರಮುಖ ಉಲ್ಲೇಖವಾಗಿರುವುದನ್ನು ನೋಡಿದರೆ, ಈ ಶಾಸನದಲ್ಲಿ ರಾಜನ ನಂತರ ಯಾವುದೇ ಮಂಡಳೇಶ್ವರನ ಅಥವಾ ಅಧಿಕಾರಿಯ ಉಲ್ಲೇಖವಿರದೇ ಅಗ್ರಹಾರದ ಬ್ರಾಹ್ಮಣರದೇ ಉಲ್ಲೇಖ ಕಂಡುಬರುತ್ತದೆ. ಶ್ರೀಮತು ಸರ್ವ್ವ ನಮಶ್ಯನಗ್ರಹಾರಂ ಹಿರಿಯೂರ ಗೊಬ್ಬೂರ ಆಶೇಷ ಮಹಾಜನಂಗಳ ಮಹಾತ್ಮೆಯೆಂಡೆಂದಡೆ. ಹೀಗೆ ವರ್ಣಿಸಲಾಗಿದೆ.

॥ಕಂದ॥ ಸದುವಿನಯ ವೇದಪಾರಗ

ರೊದವಿದ ಪರಮಾರ್ತ್ಥ ಸಕಳ ಶಾಸ್ತ್ರಾಗಮದಿಂ

ಮುದಿತೋದಿತಮಾಗಿರ್ಪ್ಪ

ರ್ಮ್ಮದದಿಂ ಗೊಬ್ಬೂರ ವಿಪ್ರ ಚೂಡಾಮಣಿಗಳು.

ಅಲ್ಲಿಯ ವಿಪ್ರರು ಸದ್‌ವಿನಯುಳ್ಳವರು ಸಕಲ ಶಾಸ್ತ್ರ ಪಾರಾಂಗತರು ಅವರು ಗೊಬ್ಬೂರಿನ ವಿಪ್ರ ಚೂಡಾಮಣಿಗಳಾಗಿದ್ದರು.

ಚಕ್ರವರ್ತಿ ರಾಜ್ಯ ಸಮುದ್ಧರಣಭರಣರು, ಸಕಳ ಲಕ್ಷ್ಮಿನಿಳಯರುಂ ನುಡಿದೆರಡ ನುಡಿವರಲ್ಲರುಂ ಗುಣ ಸಂಪೂರ್ಣರುಂ ವಿನಾಯಕ ವರದಪ್ರಸಾದರುಂ ಅಭಿಮಾನಧನರು, ವಿಪ್ರ ವರಪ್ರಸಾದರುಂ ಸಕಳಜನ ಸಂತುಷ್ಟರುಂ ಬೇಡಿದವಗ್ಗೀವರು, ಸಕಲ ಧರ್ಮ್ಮಕಾರ್ಯ ಧುರಂಧರರುಮಪ್ಪ" ಹೀಗೆ ಅಗ್ರಹಾರ ಗೊಬ್ಬೂರಿನ ಮಹಾಜನತೆಯನ್ನು ವರ್ಣಿಸಿದೆ; ಅವರ ಪ್ರಭಾವ ಎಷ್ಟಾಗಿತ್ತೆಂದು ಈ ಶಾಸನದಿಂದ ತಿಳಿದುಬರುತ್ತದೆ. ಕ್ರಿ.ಶ. ೧೧೪೨ರ ಶಾಸನವೊಂದು(ದೇವರಕೊಂಡಾರೆಡ್ಡಿ, ಭಟ್ಟಸೂರಿ ಕೆ.ಜಿ., ಕಲವೀರ ಮನ್ವಾಚಾರ ಮತ್ತು ಪರಮಶಿವಮೂರ್ತಿ ಡಿ.ವಿ.(ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, ೨೦೦೩, ಪು.೪೭-೪೮) ಶ್ರೀಮದಗ್ರಹಾರಂ ಮುದಿನೀರೂ ರೊಡೆಯ ಪ್ರಮುಖವಶೇಷ ಮಹಾಜನಂಗಳ ಕೈಯ್ಯಲು ಶ್ರೀ ಮಹಾಮಂಡಳೇಶ್ವರ ಕಪ್ಪದೇವರಸರು ಧಾರಾಪೂರ್ವಕವಾಗಿ ಪಡೆದುಕೊಂಡು, ರಾಮೇಶ್ವರ ದೇವರಿಗೆ, ತಪೋಧನವರ್ಗದ ವರಿಗೆ, ವಿದ್ಯಾಸತ್ರಕ್ಕೆ ದೇವರ ಅಂಗಭೋಗ ನೈವೇದ್ಯಕ್ಕಾಗಿ ಹಾಳಕಟ್ಟೆಯ ಗದ್ದೆಯನ್ನು ನೀಡಿದರೆಂದು ಉಲ್ಲೇಖಿಸಿದೆ. ಅಂದರೆ ಇಲ್ಲಿ ಒಬ್ಬ ರಾಜನ ಮಹಾಮಂಡಳೇಶ್ವರನು ಈ ಮಹಾಜನಗಳಿಂದ ಧಾರಾಪೂರ್ವಕವಾಗಿ ಪಡೆದುಕೊಂಡು ದಾನ ಮಾಡಿದನೆಂದರೆ, ಅಲ್ಲಿಯ ಮಹಾಜನರಿಗೆ ಇರುವ ಗೌರವ ಮತ್ತು ಅಧಿಕಾರದಪರಿ ತಿಳಿಸುತ್ತದೆ.

ಅಗ್ರಹಾರಗಳ ಆಳ್ವಿಕೆ ಮಹಾಜನರಿಂದ ನಡೆಯುತ್ತಿದ್ದರೂ ಅಲ್ಲಲ್ಲಿ ರಾಜ/ರಾಣಿಯರಿಂದ ಆಳುತ್ತಿದ್ದುದ್ದನ್ನು ಶಾಸನಗಳು ಉಲ್ಲೇಖಿಸುತ್ತವೆ. ಕ್ರಿಶ. ೧೦೬೬ರ ಶಾಸನವೊಂದು(ಅದೇ, ಪು.೩೭೭) ಶ್ರೀಮತ್ರೈಲೊಕ್ಯ ಮಹಾದೇವಿಯರು ಕಲ್ಯಾಣದ ನೆಲೆವೀಡಿನಲ್ಲಿರುವಾಗ ನಿಟ್ಟರವೆ-೭೦ರ ಬಳಿಯ ಅಗ್ರಹಾರ ಮುಕ್ಕುಂದೆಯಂ ತ್ರಿಭೋಗಾಭ್ಯನ್ತರಸಿದ್ಧಿಯನಾಳುತ್ತುಂ ಎಂದಿದೆ.

ಕ್ರಿಶ. ೧೧೧೭ರ ಶಾಸನವು(ಹನುಮಾಕ್ಷಿ ಗೋಗಿ(ಸಂ), ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ೧೯೯೬, ಪು.೧೧೫)ಶ್ರೀಮದಗ್ರಹಾರಂ ದಿಗ್ಗಾವಿಗೆಯ ಚಾಳುಕ್ಯ ದೊರೆ ಆರನೆ ವಿಕ್ರಮಾದಿತ್ಯನ ಮಹಾಮಂಡಳೇಶ್ವರ ಲೋಕರಸನ ಪಿರಿಯರಸಿ ಮಲಯಮತಿಯು ಆಳುತ್ತಿದ್ದಾಳೆಂದು ಉಲ್ಲೇಖಿಸಿದೆ. ಹೀಗೆ ಸಾಮಾನ್ಯವಾಗಿ ಅಗ್ರಹಾರಗಳ ಒಡೆಯರು. ಮಹಾಜನರೇ ಆಗಿದ್ದರೂ, ಅಲ್ಲಲ್ಲಿ ಅದರ ಆಳಿಕೆಯನ್ನು ರಾಜಾಡಳಿತದ ಆಧೀನಕ್ಕೆ ಒಳಪಟ್ಟಿತ್ತೆಂದು ಹೇಳಬಹುದು.

ಹಳ್ಳಿಗಳ ಆಡಳಿತ

ಮಧ್ಯಕಾಲಿನ ಇತಿಹಾಸದಲ್ಲಿ ಗ್ರಾಮಾಡಳಿತಕ್ಕೂ, ಹೆಚ್ಚಿನ ಪ್ರಾಮುಖ್ಯ ಇತ್ತೆಂಬುವುದು ಶಾಸನಗಳಿಂದ ತಿಳಿಯುತ್ತದೆ. ಗ್ರಾಮಕೂಟ ಹಾಗೂ ಗ್ರಾಮ, ಇವು ಗ್ರಾಮಾಡಳಿತದ ಘಟಕಗಳನ್ನು ಸೂಚಿಸುತ್ತವೆ. ಊರೊಡೆಯ, ನಾಡೊಡೆಯ, ಗ್ರಾಮಾಧಿಕಾರಿ, ಗಾವುಂಡ, ಗವುಂಡಪ್ರಭು. ಇತ್ಯಾದಿ ಪದಗಳು ಆ ಊರಿನ ಪ್ರಾತಿನಿಧಿಕ ವ್ಯಕ್ತಿಯನ್ನು ಸೂಚಿಸುತ್ತವೆ. ಹೀಗಾಗಿ ಒಂದು ಗ್ರಾಮದ ಆಡಳಿತ ನೋಡಿಕೊಳ್ಳುವವನೇ ಗಾವುಂಡ ಅಂದಿನ ಗಾವುಂಡರೇ ಇಂದಿನ ಊರಿನ ಗೌಡರಾಗಿರಬೇಕು. ಒಂದೊಂದು ಊರಿನಲ್ಲಿಯೂ ಒಂದೊಂದು ಗ್ರಾಮಸಭೆಯಿರುತ್ತಿದ್ದಿತು. ಆ ಸಭೆಗೆ ಮುಖ್ಯಸ್ಥ ಅಲ್ಲಿಯ ಗಾವುಂಡ ಅಥವಾ ಪ್ರಭುಗಾವುಂಡ. ರಾಜ್ಯದಲ್ಲಿ ರಾಜನಿಗೆ ಪರಮಾಧಿಕಾರವಿದ್ದಂತೆ ಗ್ರಾಮದಲ್ಲಿ ಗ್ರಾಮಸಭೆಗೆ ಪರಮಾಧಿಕಾರವಿದ್ದಿತು. ಒಂದೊಂದು ಹಳ್ಳಿಯೂ ರಾಜ್ಯದೊಳಗಿನ ಪುಟ್ಟ ರಾಜ್ಯವಿದ್ದಂತೆ ಇದ್ದವು(ಡಾ.ಎಂ.ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೧೯೭೯, ಪು.೩೬೧).

ಗ್ರಾಮಾಡಳಿತದಲ್ಲಿ ಬಹುಮುಖ ಪಾತ್ರವಹಿಸುವವರೆಂದರೆ ಅಲ್ಲಿನ ಮಹಾಜನರು. ಇವರು ಮೂಲತಃ ಉಚ್ಚಕುಲದವರಾಗಿದ್ದು, ಶಾಸ್ತ್ರಾಭ್ಯಾಸ ಕಲಿತ ಸಮುದಾಯ. ಈ ಮಹಾಜನರಲ್ಲದೆ ಅಲ್ಲಿಯ ಆರ್ಥಿಕವಾಗಿ ಸಬಲರಾದ ವರ್ತಕ ವರ್ಗದವರೂ ಕೂಡ ಮಹಾಜನರು ಎನಿಸಿ ಕೊಳ್ಳುತ್ತಿದ್ದರು. ಅವರಲ್ಲಿ ಮುಖ್ಯವಾಗಿ ಮೂಲಿಗ, ವರ್ತಕವರ್ಗ, ಸೆಟ್ಟಿ, ಸೆಟ್ಟಗುತ್ತ, ನಕರ, ಮುಮ್ಮರಿದಂಡ, ತಳದೊಕ್ಕಲು, ಹದಿನೆಂಟು ಜಾತಿ ಅಲ್ಲದೆ ವೃತ್ತಿ ಸಮುದಾಯದ ಎಂಟು ಹಿಟ್ಟು ಇವರಲ್ಲದೆ ತೇಲಿಗ, ಎಲಿಗಾರ, ಬೆಲ್ಲನೂರ್ವರು, ಮುಂತಾದ ಗ್ರಾಮಾಂತರ ಉದ್ಯೋಗ

ಇಲ್ಲವೇ ಶ್ರಮಿಕ ಸಂಘಗಳು ಹಾಗೂ ಊರಿನಲ್ಲಿರುವ ದೇವಸ್ಥಾನ ಮತ್ತು ಆಯಾ ಊರಿನ ಪಂಚಮಠಗಳು ಗ್ರಾಮಾಡಳಿತದ ಮೇಲೆ ತಮ್ಮ ಪ್ರಭುತ್ವವನ್ನು ಇಟ್ಟುಕೊಂಡಿದ್ದವು ಎಂದು ಹಲವಾರು ಶಾಸನಗಳು ಉಲ್ಲೇಖಿಸುತ್ತವೆ.

ಈ ಹಳ್ಳಿಗಳ ಆಡಳಿತವು ಪ್ರತ್ಯಕ್ಷವಾಗಿ ಕೆಂದ್ರದ ಆಡಳಿತಕ್ಕೆ ಒಳಪಡದಿದ್ದರೂ ಪರೋಕ್ಷವಾಗಿ ಎಲ್ಲ ಹಳ್ಳಿಗಳು ಒಂದಿಲ್ಲ ಒಂದು ರೀತಿಯಲ್ಲಿ ಕೇಂದ್ರ(ರಾಜ)ದ ಆಡಳಿತಕ್ಕೆ ಒಳಪಟ್ಟಿದ್ದವು. ರಾಜನ ಬೊಕ್ಕಸಕ್ಕೆ ಎಲ್ಲ ಹಳ್ಳಿಗಳಿಂದ ಸಂಗ್ರಹವಾಗುತ್ತಿದ್ದ ಹಣವು ಹೋಗುತ್ತಿತ್ತು. ಅದನ್ನು ಸಂಗ್ರಹಿಸುವ ಹೊಣೆ ಆಯಾ ಊರಿನ ಗೌಡರು ಮಾಡುತ್ತಿದ್ದರು. ಒಂದು ಹಳ್ಳಿಗೆ ಒಡೆಯನಾಗಿದ್ದರೆ ಆತನು ಗಾಮುಂಡ ಎನಿಸಿಕೊಳ್ಳುತ್ತಿದ್ದನು. ಒಂದಕ್ಕಿಂತ ಹೆಚ್ಚಿನ ಊರಿನ ಮೇಲ್ವಿಚಾರಣೆ ಹಕ್ಕು ಪಡೆದವನನ್ನು ಪ್ರಭುಗಾಮುಂಡನೆಂದು ಹೇಳಲಾಗಿದೆ.

"ಗಾವುಂಡರು ತಮ್ಮ ಗ್ರಾಮದ ಆಡಳಿತವನ್ನು ನೋಡಿಕೊಳ್ಳುವುದರ ಜೊತೆಗೆ ಅದರ ರಕ್ಷಣೆ ಹಾಗೂ ಅಲ್ಲಿಯ ಸುಂಕವನ್ನು ಸಂಗ್ರಹಿಸುವ ಕೆಲಸವನ್ನೂ ನಿರ್ವಹಿಸುತ್ತಿದ್ದರು. ಇವರು ಪ್ರಭುಗಾವುಂಡರಂತೆ ವೀರರಾಗಿದ್ದರಿಂದ ತಮ್ಮ ಚಕ್ರವರ್ತಿ, ಮಹಾಮಂಡಳೇಶ್ವರ ಇಲ್ಲವೇ ಮಹಾಸಾಮಂತರ ಪರವಾಗಿ ಯುದ್ಧಗಳಲ್ಲಿ ಭಾಗವಹಿಸುತ್ತಿದ್ದರು. ಗ್ರಾಮದ ಕುಂದು-ಕೊರತೆಗಳನ್ನು ನಿವಾರಿಸುವುದರ ಜೊತೆಗೆ ಅಲ್ಲಿನ ಸ್ತ್ರೀ-ಗೋವುಗಳ ಅಪಹರಣ ಸಂದರ್ಭದಲ್ಲಿ ಅವುಗಳನ್ನು ಹೋರಾಡಿ ರಕ್ಷಿಸುತ್ತಿದ್ದರು. ಕೆಲವೊಮ್ಮೆ ಗಾವುಂಡರಿಂದ ಬರಬೇಕಾದ ತೆರಿಗೆ ಮೊದಲಾದವುಗಳನ್ನು ಮೇಲಾಳಿಕೆಯ ಮಹಾಸಾಮಂತರು ಮತ್ತು ಇತರರು ರದ್ದುಪಡಿಸುವ ಮೂಲಕ ಪ್ರೋತ್ಸಾಹಿಸುತ್ತಿದ್ದರು."

ಕ್ರಿ.ಶ.೧೧೯೯ರ ಕಲ್ಬುರ್ಗಿ ಜಿಲ್ಲೆಯ ಹುಣಸೀ ಹಡಗಲಿ ಶಾಸನವು ಗ್ರಾಮಗಳ ಆಡಳಿತ ಮತ್ತ ಅವುಗಳ ಪ್ರಾದೇಶಿಕ ವ್ಯಾಪ್ತಿಯನ್ನು ಚತುಸ್ಸೀಮೆಯನ್ನು ಗುರುತಿಸುತ್ತದೆ. "ಹಡಂಗಿಲೆಯ ವಾಯುವ್ಯದ ಹೊಲದಲ್ಕಲುಂಟರಣೆಯಲ್ಲುದಂತೆ ಗಂಡನ ಗಡಿಂಬದಲು ಬಿಟ್ಟ ಕರಿಯ ನೆಲಂ ಮತ್ತರು ಹನ್ನೆರಡು ಮತ್ತು ಕಾಲಡಿಯಲೊಂದು ಮತ್ತರುವರೆ ತೋಂಟವೊಂದು ಗಾಣಮಾ ಬಸದಿಯಿಂ ತೆಂಕಲುಂ ದಿಡುವಲುವಿಪ್ಪಿ ಹತ್ತು ಮನೆಗಳ್ಮನಾ ಕೆಯ್ಗೆ ಮೂಡಲು ಪಿರಿಯ ಮೆಳಕುಂದೆಯಿಂದಾಲೂರಿಗೆ ಪೋದ ಬಟ್ಟೆ ತೆಂಕ ನೆಟ್ಟಕಲ್ ಪಡುವ ನೀಲನೂರ ವೊಲವೇರೆ ಬಡಗ ಹತ್ತಿಕುಂದೆಯ ಹೊಲವೇರೆ ಯಿವು ಚತುಸ್ಸೀಮೆ"(ಹನುಮಾಕ್ಷಿ ಗೋಗಿ, ಕಲಬುರ್ಗಿ ಜಿಲ್ಲೆಯ ಶಾಸನಗಳು, ಪು.೨೩೩).

ಗ್ರಾಮಾಡಳಿತವನ್ನು ಅಲ್ಲಿಯ ಗೌಡರು ನೋಡಿಕೊಳ್ಳುತ್ತಿದ್ದರು. ಹಲವಾರು ಶಾಸನಗಳಿಂದ ತಿಳಿದುಬರುತ್ತದೆ. ಅದೇ ಗೌಡ ಪದವು ಅದೊಂದು ಹುದ್ದೆಯಾಗಿತ್ತು. ಅದುವೇ ಈಗಲೂ

ಯಾವುದೇ ಅಧಿಕೃತ ಅಧಿಕಾರಿಗಳು ಇಲ್ಲದಿದ್ದರೂ ವಂಶಪರಂಪರೆಯಾಗಿ ಗೌಡರು ಎಂಬ ಪದವು ಬಳಕೆಯಾಗುತ್ತಿದೆ. ಅದೇ ಸ್ಥಾನವು ಇಂದಿನ ಗ್ರಾಮಲೆಕ್ಕಿಗ ವಹಿಸಿಕೊಂಡಿದ್ದಾನೆ. ಈತನು ಊರಿನ ಎಲ್ಲ ಲೆಕ್ಕಪತ್ರ, ಜನನ-ಮರಣ, ಭೂಮಿ ಮೇಲಿನ ಕರ ಭೂದಾಖಲೆಗಳ ನಿರ್ವಹಣ ಇತ್ಯಾದಿ ಕೆಲಸವನ್ನು ನಿರ್ವಹಿಸುತ್ತಿರುವುದನ್ನು ಕಂಡುಬರುತ್ತದೆ.


ಹಳ್ಳಿಗಳ ಆಡಳಿತವು ರಾಜನಷ್ಟೇ ಅಂದರೆ ಆಗ್ರಾಮಕ್ಕೆ ಸಂಬಂಧಿಸಿದಂತೆ ಅಷ್ಟೇ ಪ್ರಮುಖ ಪಾತ್ರವಹಿಸುತ್ತಿತ್ತು. ಕೇಂದ್ರದಲ್ಲಿ ರಾಜನು ಕೈಗೊಳ್ಳುವ ನಿರ್ಣಯಗಳ ಹಾಗೆ ಈತನು ತಮ್ಮ ಗ್ರಾಮಕ್ಕೆ ಸಂಬಂಧಪಟ್ಟ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದರು. ತಮ್ಮ ಮಟ್ಟದಲ್ಲಿ ಯಾವುದೇ ದೀವಾಳಿ ಕಾರ್ಯಗಳು ಆಗದಂತೆ ನೋಡಿಕೊಂಡು ಹೋಗುವ ಜವಾಬ್ದಾರಿ ಆ ಊರಿನ ಗ್ರಾಮಾಡಳಿತ ಅಧಿಕಾರಿಯದ್ದಾಗಿತ್ತು. ತಮ್ಮ ಒಡೆಯನ ಹೆಸರಿನಲ್ಲಿ ಚಿಕ್ಕಪುಟ್ಟ ಪ್ರಮಾಣದ ದಾನ-ದತ್ತಿಗಳನ್ನು ನೀಡುತ್ತಿದ್ದರು. ಅಲ್ಲದೆ, ದಾನ-ದತ್ತಿ ಬಿಡುವಂತೆ ಶಿಫಾರಸ್ಸು ರಾಜ-ಮಂತ್ರಿ-ಮಂಡಳಿಕರಿಗೆ ಮಾಡುತ್ತಿದ್ದರು.

ಹೀಗಾಗಿ ಗ್ರಾಮಾಡಳಿತದಲ್ಲಿ ಊರಿನ ಗ್ರಾಮದ ಮುಖಂಡರೆ ಪ್ರಮುಖರಾಗಿದ್ದರು. ತಮ್ಮ ಊರಿಗೆ ಆಪತ್ತು ಬಂದಾಗ ರಾಜನಿಗೆ ಸಹಾಯಕ್ಕಾಗಿ ಮೊರೆ ಇಡುವುದು ಮತ್ತು ರಾಜನಿಕಗೆ ಆಪತ್ಕಾಲದಲ್ಲಿ ಆರ್ಥಿಕ ಮತ್ತು ಸ್ವತಃ ತಮ್ಮ ಅಧಿಕಾರಿಗಳೊಂದಿಗೆ ರಾಜನಿಗೆ ಯುದ್ಧ ಕಾಲದಲ್ಲಿ ಸಹಾಯ ಮಾಡುತ್ತಿದ್ದರು.

ಎಡೆಯಪುರದ ಮಲ್ಲಿಕಾರ್ಜುನ ದೇವರ ಮತ್ತು ನಾಗಣದೇವರ ಅಂಗಭೋಗ ರಂಗಭೋಗ ಮತ್ತು ಜೀರ್ಣೋದ್ಧಾರಕ್ಕಾಗಿ ದತ್ತಿಯನ್ನು ಮತ್ತು ರಾಜಧಾನಿ ಕೆಂಬಾವಿಯೂರ ಬಳಿ ಅಚಗೌಡ, ಚಿಂನಗೌಡ ಮತ್ತು ವಾಜಗೌಡರು ಎಂಟು ಹಿಟ್ಟು ಪಂಚಮಠಕ್ಕೆ ದತ್ತಿ ಬಿಟ್ಟರೆಂದು ಶಾಸನವೊಂದು ಉಲ್ಲೇಖಿಸಿದೆ(ಹನುಮಾಕ್ಷಿ ಗೋಗಿ(ಸಂ), ಸುರಪುರ ತಾಲೂಕಿನ ಶಾಸನಗಳು, ೧೯೭೫, ಪು.೩).

ಭತ್ತಗ್ರಾಮ ರಾಜನಕೋಳೂರಿನ ಮಹಾಪ್ರಭುಗಳು, ಅಲ್ಲಿಯ ರಾಮಗಮುಂಡ ಇನ್ನೂಳಿದವರು ಸೇರಿ ಶಂಕರನಾರಾಯಣ ದೇವರಿಗೆ ದತ್ತಿ ಬಿಟ್ಟ ವಿಷಯ ಶಾಸನವು ತಿಳಿಸುತ್ತದೆ.

ಕ್ರಿ.ಶ.೧೧೧೦೬ರ ಜಾಲಿಹಾಳ ಶಾಸನದಲ್ಲಿ ಬೀಚಗಾವುಂಡನ ಉಲ್ಲೇಖವಿದ್ದು, ಈತನ ವಂಶಾವಳಿ ಯನ್ನು ಹೀಗೆ ನೀಡಿದೆ.



ಎಡಪಳ್ಳಿಯ ಗವುಂಡನಾದ ಬೀಚಣನು ತನ್ನ ಹೆಸರಿನಲ್ಲಿ ಬೀಚೇಶ್ವರ ದೇವಾಲಯವನ್ನು ಕಟ್ಟಿಸಿದ್ದನು(ಕ.ವಿ.ಶಾ.ಸಂ.೭, ಪು.೩೮೧). ಅದರ ಜೀರ್ಣೋದ್ಧಾರಕ್ಕಾಗಿ ಚಾಳುಕ್ಯದೊರೆ ತ್ರಿಭುವನ ಮಲ್ಲನ ಮಹಾಮಂಡಳೇಶ್ವರನಾದ ಹೇರ್ಮಾಡಿ ದೇವ ಮತ್ತು ಬೀಚಗಾವುಂಡರು ಸೇರಿ ಭೂಮಿಯನ್ನು ದತ್ತಿ ಬಿಟ್ಟ ವಿಷಯವನ್ನು ಶಾಸನವೊಂದು ದಾಖಲಿಸಿದೆ. ದಮ್ಮಿಕುಂಟೆಯ ಪ್ರಧಾನರಾದ ಮೆಡೆಯ ಗಾವುಂಡ ನಾಗಯ ಗಾವುಂಡರು ದೀಪವೃಕ್ಷ ನಿಲ್ಲಿಸಿದರೆಂದು ಶಾಸನವೊಂದು (ದೇವರಕೊಂಡಾರೆಡ್ಡಿ, ಭಟ್ಟಸೂರಿ ಕೆ.ಜಿ., ಕಲವೀರ ಮನ್ವಾಚಾರ ಮತ್ತು ಪರಮಶಿವಮೂರ್ತಿ ಡಿ.ವಿ. (ಸಂ): ಕ.ವಿ.ಶಾ.ಸಂ.೫, ಭಾಗ ೨, ಪು.೩೫)ಉಲ್ಲೇಖಿಸಿದೆ. ಚಾಳುಕ್ಯ ದೊರೆ ಆಹವಮಲ್ಲ ದೇವನು ಉತ್ತರದ ದಿಗ್ವಿಜಯದಲ್ಲಿ ಉಪ್ಪಳನನ್ನು ಗೆದ್ದು ಆಳುತ್ತಿರುವಾಗ ಈ ದೀಪವೃಕ್ಷ ನಿಲ್ಲಿಸಿದನು. ಅಗ್ರಹಾರ ಹಗರಟಗಿಯಲ್ಲಿ ಕೇತಗಾಮುಂಡನ ಮಕ್ಕಳಾದ ರಾಮಗಾಮುಂಡ, ಸಿಂಗಗಾಮುಂಡರು ರಾಮನಾಥದೇವರು, ಅಯುನೂರ್ವ್ವೆಶ್ವರದೇವರು, ಬಾಚೇಶ್ವರದೇವರು, ಕೇತೇಶ್ವರದೇವರು, ಹಾಗೂ ಚೌಡೇಶ್ವರಿದೇವಿ ಈ ಐದು ದೇವರಿಗೆ ಮಹಾಜನರು ದತ್ತಿ ಬಿಡುವಾಗ ಮಹಾಸಭೆ ಕರೆದಾಗ ಅಲ್ಲಿಯ ಗಮುಂಡರೂ ಭಾಗಿಯಾಗಿದ್ದರು. ಒಂದೇ ಊರಲ್ಲಿ ಮಹಾಜನರು, ಸರ್ವಾಧಿಕಾರಿಗಳು, ಎಂಟು ಗಾಮುಂಡರು ಸೇರಿದರೆಂದು ಶಾಸನವೊಂದು (ದೇವರಕೊಂಡಾರೆಡ್ಡಿ, ಭಟ್ಟಸೂರಿ ಕೆ.ಜಿ., ಕಲವೀರ ಮನ್ವಾಚಾರ ಮತ್ತು ಪರಮಶಿವಮೂರ್ತಿ ಡಿ.ವಿ.(ಸಂ), ರಾಯಚೂರು ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, ೨೦೦೩, ಪು.೩೮೧)ಉಲ್ಲೇಖಿಸುತ್ತದೆ. ಹೀಗೆ ಅವರು ನೆಲೆಸುವ ಪ್ರತಿಯೊಂದು ಕಾರ್ಯದಲ್ಲಿಯೂ ಊರಿನ ಗಾವುಂಡರು ಭಾಗಿಯಾಗುತ್ತಿದ್ದರು. ಈ ವೃತ್ತಿಯನ್ನು ವಂಶಪರಂಪರೆಯಾಗಿ ಬರುತ್ತಿದ್ದನ್ನು ಶಾಸನಾಧಾರಗಳಿಂದ ತಿಳಿದುಕೊಳ್ಳಬಹುದು.

ಮಹಾಸಾಮಂತರು ಹಾಗೂ ಅಲ್ಲಿಯ ಮಹಾಜನರು ಯಾವುದೇ ದತ್ತಿ ಬಿಡುತ್ತಿದ್ದರೂ ಈ ಗಾವುಂಡರ ಮೂಲಕವೇ ನೀಡುತ್ತಿದ್ದುದ್ದನ್ನು ಶಾಸನಗಳು ಉಲ್ಲೇಖಿಸುತ್ತವೆ. ಆ ಪರಂಪರೆಯನ್ನು ಈಗಲೂ ಕಾಣಬಹುದಾಗಿದೆ: ಒಂದೊಂದು ಊರಿಗೆ ಒಬ್ಬ ಗೌಡರು ಇರುತ್ತಾರೆ. ಅವರು

ಊರಿನ ಒಳ್ಳೆಯ/ಕೆಟ್ಟದ್ದು ಎಲ್ಲ ಕಾರ್ಯಗಳಲ್ಲಿ ಭಾಗವಹಿಸುತ್ತಾರೆ. ಗೌಡರ ಮನೆಯ ಹಿರಿಯ ತೀರಿದ ಮೇಲೆ ಅವರ ಹಿರಿಯ ಮಗ ಗೌಡಕಿಯನ್ನು ನೋಡಿಕೊಳ್ಳುತ್ತಾನೆ.

ಆಡಳಿತ ವಿಭಾಗಗಳು

ಪ್ರಾಚೀನ ಕಾಲದಲ್ಲಿ ರಾಜರು ತಮ್ಮ ವಿಸ್ತಾರವಾದ ಆಡಳಿತ ಭೂ-ಪ್ರದೇಶವನ್ನು ಹೊಂದಿದ್ದರು. ಅದನ್ನು ತಮ್ಮ ಆಡಳಿತ ಅನುಕೂಲಕ್ಕಾಗಿ ಅನೇಕ ವಿಭಾಗ ಉಪವಿಭಾಗಗಳನ್ನು ರೂಪಿಸಿಕೊಂಡಿದ್ದರು. ತಮಗೆ ಆಡಳಿತ ಅನುಕೂಲವಾಗುವ ಒಂದು ಪ್ರಮುಖ ಕೇಂದ್ರವೆನಿಸುವ ನಗರ/ಪಟ್ಟಣ ಭೂಪ್ರದೇಶವನ್ನು ವಿಭಾಗ ಕೇಂದ್ರವನ್ನಾಗಿ ಮಾಡಿಕೊಳ್ಳುತ್ತಿದ್ದರು. ಅದರಲ್ಲಿ ಸುಮಾರು ೧೨ ಹಳ್ಳಿಗಳಿಂದ ಹಿಡಿದು ೨೧೦೦೦ ಹಳ್ಳಿಗಳು ಒಳಗೊಂಡ ರಾಜಕೀಯ ವಿಭಾಗಗಳನ್ನು ಮಾಡಿಕೊಂಡು; ಆ ವಿಭಾಗಕ್ಕೆ ಉಪ ವಿಭಾಗಗಳನ್ನು ಮಾಡಿ; ರಾಜರು ಇಡೀ ತನ್ನ ರಾಜ್ಯದ ಮೇಲೆ ನಿಯಂತ್ರಣವನ್ನು ಸಾಧಿಸುತ್ತಿದ್ದರು.

೧. **ಕೊಳ್ಳಿಪಾಕೆ-೨೦೦೦:** ಇಂದಿನ ತೆಲಂಗಾಣದ ನಲ್ಗೊಂಡ ಜಿಲ್ಲೆಯ ಕೊಲನುಪಾಕವು ಕಲ್ಯಾಣ ಚಾಳುಕ್ಯ ದೊರೆ ಆರನೆ ವಿಕ್ರಮಾದಿತ್ಯ ಹಾಗೂ ಆತನ ಮಹಾಮಂಡಳೇಶ್ವರ ಕಂದೂರನ ತೊಂಡರಸ ಚೋಳ ಮಹಾರಾಜ ಕೊಳ್ಳಿ ಪಾಕೆ-೭೦೦೦ ಆಳುತ್ತಿದ್ದನೆಂದು ಶಾಸನವೊಂದು ಉಲ್ಲೇಖಿಸಿದೆ. ಈ ಕೊಳ್ಳಿಪಾಕೆ ೭೦೦೦ ದ ಉಲ್ಲೇಖವು ಇದೇ ಪ್ರದೇಶದಲ್ಲಿಯ ಶಾ.ಸಂ. ೫೪೫, ೫೫೨, ೫೬೬, ೫೬೨, ೫೫೬, ೫೬೭, ೫೬೮, ೫೬೯, ೫೭೨, ೫೭೩, ೫೭೫, ಮತ್ತು ೫೭೮ ರ ಶಾಸನಗಳಲ್ಲಿ ಕಂಡುಬರುತ್ತದೆ. ಈ ಕೊಳ್ಳಿಪಾಕೆಯ ವಿಭಾಗದಲ್ಲಿ ಸು. ೭೦೦೦ ಹಳ್ಳಿಗಳು ಒಳಗೊಂಡಿದ್ದವೆಂದು ಹೇಳಬಹುದು(ದೇವರಕೊಂಡಾರೆಡ್ಡಿ, ಭಟ್ಟಸೂರಿ ಕೆ.ಜಿ., ಕಲವೀರ ಮನ್ವಾಚಾರ ಮತ್ತು ಪರಮಶಿವಮೂರ್ತಿ ಡಿ.ವಿ. (ಸಂ): ಕ.ವಿ.ಶಾ.ಸಂ.೫, ಭಾಗ-೨, ಪು.೨೨೦).

೨. **ಆರ್ಮಕುಂಡ-೭೦೦೦:** ಕರೀಮನಗರ ಜಿಲ್ಲೆಯ ಶಾಸನವೊಂದು ಅರ್ಮಕುಂಡ-೭೦೦೦ ಎಂದು ಉಲ್ಲೇಖಿಸಿದೆ. ಇದರಲ್ಲಿ ಚಾಳುಕ್ಯ ದೊರೆ ಇರಿವಬೆಡಂಗ ಸತ್ಯಾಶ್ರಯನ ಆಳ್ವಿಕೆಯನ್ನು ಹೆಸರಿಸಿದೆ. ಈ ಅರ್ಮಕುಂಡವು ಕೂಡ ಸು.೭೦೦೦ ಗ್ರಾಮಗಳನ್ನು ಒಳಗೊಂಡ ರಾಜಕೀಯ ವಿಭಾಗವಾಗಿತ್ತೆಂದು ಹೇಳಬಹುದು(ಅದೇ, ಪು.೫೧).

೩. **ಚಬ್ಬಿ-೨೧೦೦೦:** ಇದೇ ಜಿಲ್ಲೆಯ ಚಾಳುಕ್ಯ ದೊರೆ ಆರನೆ ವಿಕ್ರಮಾದಿತ್ಯ ಕಾಲದ ಶಾಸನವೊಂದು ಚಬ್ಬಿ-೨೧೦೦೦ ಎಂದು ಉಲ್ಲೇಖಿಸಿದೆ. ಮಹಾಮಂಡಳೇಶ್ವರನಾದ ರಾಜಾದಿತ್ಯನು ಚಬ್ಬಿ-೨೧೦೦೦ ರಿಂದ ರಾಜ್ಯವಾಳುತ್ತಿದ್ದನೆಂದು ಉಲ್ಲೇಖಿಸಿದೆ. ಹೀಗಾಗಿ ಮಹಾಮುಡಳೇಶ್ವರ ೨೧೦೦೦ ಹಳ್ಳಿಗಳು ಒಳಗೊಂಡ ಚಬ್ಬಿ ನಾಡನು ಆಳುತ್ತಿದ್ದನೆಂದು; ಆ ಹಳ್ಳಿಗಳು ಯಾವವು ಎಂಬುವುದು ಸ್ಪಷ್ಟ ಉಲ್ಲೇಖ ಇಲ್ಲ(ಅದೇ, ಪು.೪೦).

೪. **ಎಡದೊರೆ-೨೦೦೦ :** ಈ ಎಡದೊರೆ ವಿಭಾಗವು ೨೦೦೦ ಗ್ರಾಮಗಳನ್ನು ಒಳಗೊಂಡಿತು. ಇದಕ್ಕೆ ಕೆಲ ಉಪ ವಿಭಾಗಗಳು ಇದ್ದವು. ಎಡದೊರೆ-೨೦೦೦ ದ ಉಲ್ಲೇಖವು ಮೊದಲಿಗೆ ಕ್ರಿ.ಶ. ಸು.೯೨೮ರ ಲಿಂಗಸೂರಿನ ಯರಡೋಣಿ ಶಾಸನ(ದೇವರಕೊಂಡಾರೆಡ್ಡಿ, ಭಟ್ಟಸೂರಿ ಕೆ.ಜಿ., ಕಲವೀರ ಮನ್ವಾಚಾರ ಮತ್ತು ಪರಮಶಿವಮೂರ್ತಿ ಡಿ.ವಿ.(ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೭, ೨೦೦೩, ಪು.೧೫೧)ದಲ್ಲಿ ಕಾಣಿಸಿಕೊಂಡಿದೆ. ಆದರೆ ಸ್ಪಷ್ಟವಾಗಿ ಎಡದೊರೆ' ಎಂದು ಇಲ್ಲದೆ ಇದ್ದರೂ. ಎಡದೊರೆ-೨೦೦೦ ದ ಆಧೀನದಲ್ಲಿ ಬರುವ ಸಾಗ ೨೦೦. ಅಯಜೆ-೨೦೦ಗಳ ಉಲ್ಲೇಖ ಬಂದಿರುವುದರಿಂದ ಆರಂಭದ ಅಕ್ಷರಗಳು ನಾಶವಾಗಿ ಇದರಲ್ಲಿ ಇರ್ಚ್ಚಾಸಾಸಿರದ ಭಾಗಂ ಸಾಗಮೂನೂರಂ ಇರುವುದರಿಂದ ಎಡದೊರೆ-೨೦೦೦ ಎಂದು ಊಹಿಸಲು ಸಾಧ್ಯವಿದೆ. ಈ ಶಾಸನವು ರಾಷ್ಟ್ರಕೂಟರ ದೊರೆ ಅಕಾಲವರ್ಷನ ಕಾಲದ್ದಾಗಿದೆ. ಸ್ಪಷ್ಟವಾಗಿ ಇದಕ್ಕೆ ಆರಂಭದ ಶಾಸನಗಳು ಸಿಂಧನೂರು ಮತ್ತು ಮಾನ್ವಿ ತಾಲೂಕುಗಳಲ್ಲಿ ದೊರೆಯುವುದರಿಂದ ತುಂಗಭದ್ರೆ, ಎಡಗಡೆಯ ಭಾಗವೆಂಬಂತೆ ಭಾಸವಾಗುತ್ತದೆ. ಮಾನ್ವಿ ತಾಲೂಕಿನ ಬಲ್ಲಟಗಿ ಶಾಸನವೊಂದರಲ್ಲಿ ಚಾಳುಕ್ಯ ದೊರೆ ಜಗದೇಕಮಲ್ಲ ದೇವನ ರಾಣಿ ಸೋಮಲದೇವಿಯ ಪೆರ್ಗಡೆ ಕಕ್ಕಪಯ್ಯನು ಎಡೆದೊರೆ-೨೦೦೦ ದ ಬಳ್ಳನಿಟ್ಟಗೆಯಲ್ಲಿ ವಿಷ್ಣುದೇವಾಲಯ ಕಟ್ಟಿಸಿದಂತೆ ಉಲ್ಲೇಖಿಸಿದೆ. ಇದೇ ಬಳ್ಳನಿಟಗೆಯ ಶಾಸನವು(ಅದೇ, ಪು.೩೦೧) ಚಾಳುಕ್ಯ ದೊರೆ ಮೊದಲನೆಯ ತ್ರೈಲೋಕ್ಯಮಲ್ಲ ಸೋಮೇಶ್ವರನ ರಾಣಿ ಚಾಮಲದೇವಿಯು ತುಂಗಭದ್ರ ಮತ್ತು ಕೃಷ್ಣಾನದಿಯ ಸಂಗಮದಲ್ಲಿ ಸ್ನಾನ ಮಾಡಿದ ನೆನಪಿಗಾಗಿ ಎಡೆದೊರೆ-೨೦೦೦ ದಲ್ಲಿಯ ಮೊಸಳಿಕಲ್ಲು-೨೦೦ ರ ಭತ್ತ ಗ್ರಾಮ ಬಲಟಗಿಯಲ್ಲಿ ದಾನ ನೀಡಿದಳೆಂದು ತಿಳಿಸುತ್ತದೆ. ಇದೇ ಜಿಲ್ಲೆಯ ಸಿಂಧನೂರು ತಾಲೂಕಿನ ಸಾಲಗುಂದೆ ಶಾಸನವು ಎಡೆದೊರೆ-೨೦೦೦ ಉಲ್ಲೇಖಿಸುತ್ತದೆ. ಈ ಶಾಸನವು ಚಾಳುಕ್ಯ ದೊರೆ ಭೂಲೋಕಮಲ್ಲನ ಮಗ ಮಲ್ಲಿಕಾರ್ಜುನ ಕಾಲದ್ದಾಗಿದೆ. ಅಲ್ಲದೇ ಸಾಲಿಗುಂದೆ-೨೦ನ್ನು ಉಲ್ಲೇಖಿಸಿದೆ. ಹೀಗಾಗಿ ಈ ಸಾಲಿಗುಂದೆ-೨೦ ಕೂಡ ಎಡೆದೊರೆ-೨೦೦೦ರ ಉಪ ವಿಭಾಗವಾಗಿತ್ತೆಂದು ತಿಳಿದುಬರುತ್ತದೆ.

ಇದೇ ತಾಲೂಕಿನ ದೇವರಗುಡಿ ಶಾಸನವು ಎಡೆದೊರೆ-೨೦೦೦ ವನ್ನು ಉಲ್ಲೇಖಿಸುತ್ತದೆ. ಚಾಳುಕ್ಯ ದೊರೆ ತ್ರಿಭುವನಮಲ್ಲದೇವನು ಮನ್ನೆ ಕೆರೆಯ ನೆಲೆವೀಡಿನಲ್ಲಿದ್ದಾಗ ಈತನ ಮಹಾ ಮಂಡಳೇಶ್ವರನಾದ ದಸವರ್ಮ ದೇವನು ಎಡೆದೊರೆ-೨೦೦೦ ವನ್ನು ಆಳುತ್ತಿದ್ದನೆಂದು, ಕುದಿಯ ಪರವಿ-೨೦ ಎಡೆದೊರೆ-೨೦೦೦ ದ ಉಪ ವಿಭಾಗವಾಗಿತ್ತೆಂದು ತಿಳಿದುಬರುತ್ತದೆ. ಇದೇ ತಾಲೂಕಿನ ಮಾಡಶಿರವಾರ ಶಾಸನವೊಂದು ಎಡೆದೊರೆ-೨೦೦೦ ಉಲ್ಲೇಖಿಸಿದೆ. ಚಾಳುಕ್ಯ ದೊರೆ ತ್ರೈಲೋಕ್ಯಮಲ್ಲನು ರಾಜ್ಯಭಾರ ಮಾಡುವಾಗ; ಎಡೆದೊರೆ-೨೦೦೦ ದ ಪೆರ್ಗಡೆ

ಮಾರಸಿಂಗನ ತಮ್ಮ ಮಾಡದಸಿರಿವುರದ ದೇವರ ನಂದಾದೀವಿಗೆಗೆ ಸುಂಕದಾನ ಮಾಡಿದನೆಂದು ಉಲ್ಲೇಖಿಸಿದೆ(ಅದೇ, ಪು.೩೧೨).

ಮೊಸಳಿಕಲ್ಲು-೨೦೦: ಮೊಸಳಿಕಲ್ಲು ಎಡೆದೊರೆ-೨೦೦೦ ರ ಉಪವಿಭಾಗವಾಗಿದ್ದು, ಇದರಲ್ಲಿ ೨೦೦ ಗ್ರಾಮಗಳು ಒಳಗೊಂಡಿವೆ. ಮಾನ್ವಿ ತಾಲೂಕಿನ ಬಲ್ಲಟಗಿಯ ಶಾಸನವು(ಅದೇ, ಪು.೩೪೭) ಮೊಸಳಿಕಲ್ಲು-೨೦೦ ನ್ನು ಉಲ್ಲೇಖಿಸಿದೆ. ಮೊಸಳಿಕಲ್ಲು-೨೦೦ರ ಭತ್ತಗ್ರಾಮ ಬಲ್ಲಟಗಿಯಲ್ಲಿ ಶಿವಪಾದಪಂಕಜ ಭ್ರಮಿಕನೆನಿಸಿದ ಭಾಸ್ಕರಸೆಟ್ಟಿಯು ದಾನ ನೀಡಿದನೆಂದು ಉಲ್ಲೇಖಿಸಿದೆ. ಇದೇ ಊರಿನ ಶಾಸನವು(ಅದೇ, ಪು.೩೯೦) ಮೊಸಳಿ ಕಲ್ಲು-೨೦೦ ಉಲ್ಲೇಖಿಸಿದೆ. ಇದು ಚಾಳುಕ್ಯ ದೊರೆ ಎರಡನೆ ಜಯಸಿಂಹನ ರಾಣಿ ಸೋಮಲದೇವಿಯು ಪೊಟ್ಟಬಕೆರೆಯ ನೆಲೆವೀಡಿನಲ್ಲಿದ್ದಾಗ ಎಡೆ ದೊರೆ-೨೦೦೦ದ ಮೊಸಳಿಕಲ್ಲು-೨೦೦ರ ಭತ್ತಗ್ರಾಮ ಬಳ್ಳನಿಟ್ಟಗೆಯಲ್ಲಿ ಬಂಕೇಶ್ವರ ದೇವರಿಗೆ ನಿವೇಶನ, ದಾನ ನೀಡಿದ ಉಲ್ಲೇಖ ನೀಡುತ್ತದೆ. ಇದೇ ತಾಲೂಕಿನ, ಕಪಗಲ್ಲು(ಅದೇ, ಪು.೪೧೮) ಸಿರಿವಾರ(ಅದೇ, ಪು.೩೧೨), ಶಾಸನಗಳು ಮೊಸಳಿಕಲ್ಲು-೨೦೦ ರನ್ನು ಹೆಸರಿಸುತ್ತವೆ.

ಕುದಿಯಪರವಿ-೨೦: ಈ ಕುದಿಯಪರವಿ-೨೦ ಎಡೆದೊರೆ-೨೦೦೦ ದ ಉಪ ವಿಭಾಗವಾಗಿತ್ತು. ಇದು ೨೦ ಗ್ರಾಮಗಳನ್ನು ಒಳಗೊಂಡಿತ್ತು. ಲಿಂಗಸೂಗೂರಿನ ಯರಡೋಣಿ ಶಾಸನಲ೦ವು ಕುದೆಯಪರವಿ-೨೦ ಉಲ್ಲೇಖಿಸುತ್ತದೆ. ಇದು ಕೂಡ ಎಡೆದೊರೆ-೨೦೦೦ ದ ಉಪವಿಭಾಗವಾಗಿ ತ್ತೆಂದು ಈ ಶಾಸನದಿಂದ ತಿಳಿದುಬರುತ್ತದೆ. ಸಿಂಧನೂರಿನ ದೇವರಗುಡಿ ಶಾಸನವು(ಅದೇ, ಪು.೩೧೬) ಕುದಿಯಪರವಿ-೨೦ ರ ಬಳಿಯ ಗ್ರಾಮ ಕಡ್ಡರನೂರ ನಾಲ್ವರು ಪ್ರಭುಗಳು ಹುಳಿಯೇಶ್ವರ ದೇವರಿಗೆ ದಾನ ನೀಡಿದ ಉಲ್ಲೇಖವಿದೆ.

ಕೆಳವಾಡಿ-೩೨೦: ಕೆಳವಾಡಿಯ ಪ್ರಾಚೀನ ಉಲ್ಲೇಖ ಕ್ರಿ.ಶ. ೯೭೨ರ ಬೆಳ್ಗುರ್ಕಿ ಶಾಸನದಲ್ಲಿ(ಅದೇ, ಪು.೨೭೬)ಕಂಡುಬರುತ್ತದೆ. ಇದು ೩೭೦ ಗ್ರಾಮಗಳನ್ನು ಒಳಗೊಂಡ, ಎಡೆದೊರೆ-೨೦೦೦ ದ ಉಪ ವಿಭಾಗವಾಗಿತ್ತೆಂದು ಹೇಳಬಹುದು. ಚಾಳುಕ್ಯದೊರೆ ಅರಿಕೇಸರಿಯ ಕಾಲದಲ್ಲಿ ಕೆಳವಾಡಿ-೩೭೦ರ ಬಾಡವೆಂದು ಕರೆದಿದೆ.

ಕರಡಿಕಲ್ಲು-೨೦೦: ಕ್ರಿ.ಶ.೧೧೭೭ರ ಶಾಸನವೊಂದು(ಅದೇ, ಪು.೨೯೭)ಕರಡಿಕಲ್ಲು-೩೦೦ ರನ್ನು ಉಲ್ಲೇಖಿಸಿದೆ. ಚಾಳುಕ್ಯ ದೊರೆ ಆರನೆ ವಿಕ್ರಮಾದಿತ್ಯನ ಸಾಮಂತ ತ್ರಿಭುವನ ಮಲ್ಲ ವೀರ ನೊಳಂಬ ಪಲ್ಲವ ಪೆರ್ಮಾನಡಿಯು ಕರಡಿಕಲ್ಲು-೩೦೦ ಆಳುತ್ತಿದ್ದನೆಂದು ತಿಳಿಸುತ್ತದೆ. ಕ್ರಿ.ಶ.೧೯೧ರ ಶಾಸನವು(ಅದೇ, ಪು.೧೫೧) ಕರಡಿಕಲ್ಲು-೨೦೦ರ ಬಗ್ಗೆ ಉಲ್ಲೇಖಿಸಿದೆ. ಈ ಶಾಸನವು ದೇವ ಗಿರಿಯ ಯಾದವ ವಂಶದ ಭಿಲ್ಲಮನನ್ನು ಹೆಸರಿಸಿದ್ದು, ಈತನ ಆಳ್ವಿಕೆಯಲ್ಲಿ ಮಹಾಮಂಡಳೇಶ್ವರ

ನಾದ ಕದಂಬಕುಲದ ಬಜ್ಜರಸನು ಎಡೆದೊರೆ ನಾಡಿನ ಕರಡೆಕಲ್ಲು-೩೦೦ ರ ಮುದಗಲ್ಲನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದನೆಂದು ತಿಳಿಸುತ್ತದೆ.

ಸಾಗ-೩೦೦: ಸಾಗ-೩೦೦ ಮೂರು ನೂರು ಹಳ್ಳಿಗಳನ್ನು ಒಳಗೊಂಡ ಎಡೆದೊರೆ-೨೦೦೦ ದ ಒಂದು ಉಪವಿಭಾಗವಾಗಿದೆ. ಮೊದಲಿಗೆ ರಾಯಚೂರು ಜಿಲ್ಲೆಯ ಲಿಂಗಸೂರಿನ ಯರಡೋಣಿ ಶಾಸನದಲ್ಲಿ(ಅದೇ, ಪು.೩೯೦) ಎಡೆದೊರೆ-೨೦೦೦ರ ಭಾಗಂ ಸಾಗಮೂನೂರು ಎಂದು ಉಲ್ಲೇಖಿತವಾಗಿದೆ. ಹೀಗಾಗಿ ಇದು ಕೂಡ ಎಡೆದೊರೆ-೨೦೦೦ರ ಉಪ ವಿಭಾಗವಾಗಿತ್ತೆಂದು ಹೇಳಬಹುದು.

ಆಯಿಜ್ಯ-೩೦೦: ಆಯಿಜ್ಯ-೩೦೦ ಇದು ಎಡೆದೊರೆ-೨೦೦೦ದ ಒಂದು ಉಪಭಾಗವಾಗಿದ್ದು; ಈ ನಾಡನು ರಾಷ್ಟ್ರಕೂಟರ ಹಿರಣ್ಯ ವರ್ಷನ ಕಾಲದಲ್ಲಿ ಮಾಂಡಳಿಕನಾದ ನರನಾರಸಿಗನ ಮಗ (ಹೆಸರಿನ ಉಲ್ಲೇಖ ಇಲ್ಲ) ಈ ಉಪವಿಭಾಗವನ್ನು ಆಳುತ್ತಿದ್ದಂತೆ ಶಾಸನವೊಂದು(ಅದೇ, ಪು.೪೨೦)ಉಲ್ಲೇಖಿಸಿದೆ.

ಸಾಲಿಗುಂದೆ-೭೦: ಸಾಲಿಗುಂದೆ-೭೦ ಕೂಡ ಎಡೆದೊರೆ-೨೦೦೦ದ ಉಪ ವಿಭಾಗಗಳಲ್ಲಿ ಒಂದಾಗಿತ್ತು. ಇದು ೭೦ ಗ್ರಾಮಗಳನ್ನು ಒಳಗೊಂಡಿತ್ತು. ಇದರ ಉಲ್ಲೇಖವು ರಾಯಚೂರು ಜಿಲ್ಲೆಯ ಸಿಂಧನೂರಿನ ಸಾಲಗುಂದೆ ಶಾಸನವು[೨೧೧] ಉಲ್ಲೇಖಿಸಿದೆ. ನಾಚಣ ಎಂಬುವವನು ಈ ಭೂ ಪ್ರದೇಶವನ್ನು ಆಳುತ್ತಿದ್ದನು.

ಕರಿವಿಡಿ-೩೦: ಇದು ಎಡೆದೊರೆ-೨೦೦೦ ದ ಒಂದು ಉಪವಿಭಾಗವಾಗಿದೆ. ಎಡದೊರೆ ೨೦೦೦ ದ ಭಾಗಂ ಸಾಗಮೂನೂರುಂ, ಆಯಿಜೆ ರಾಜ್ಯ ಮೂನುರು, ಕುದಿಯಪರವಿ ಎಪ್ಪತ್ತು, ಕರಿವಿಡೆ ಮೂವತ್ತು ಇನ್ತು ಸಾವಿರ ಮಾಳವೆಂದು ಯರಡೋಣಿ ಶಾಸನವು(ಅದೇ, ಪು.೧೨೬) ಉಲ್ಲೇಖಿಸಿದೆ. ಒಟ್ಟಾಗಿ ಎಡೆದೊರೆ ೨೦೦೦ರಲ್ಲಿ

ಮೊಸಳಿಕಲ್ಲು	:	೩೦೦
ಕುದೆಯ ಪರವಿ	:	೭೦
ಕೆಳವಾಡಿ	:	೩೭೦
ಕರಡಿಕಲ್ಲು	:	೩೦೦
ಸಾಗ	:	೩೦೦
ಆಯುಜ್ಯ	:	೩೦೦

ಸಾಲಿಗುಂದೆ	:	೭೦
ಕರಿವಿಡಿ	:	೩೦
		೧೭೪೦

ಹೀಗೆ ೧೭೪೦ ಗ್ರಾಮಗಳು ಲೆಕ್ಕಕ್ಕೆ ಸಿಕ್ಕಿದಂತಾಯಿತ್ತು. ಇನ್ನೂಳಿದ ೨೬೦ ಗ್ರಾಮಗಳ ಬಗ್ಗೆ ಸ್ಪಷ್ಟವಾದ ಉಲ್ಲೇಖಗಳು ಕಂಡುಬರುವುದಿಲ್ಲ. ೧೭೪೦ ಗ್ರಾಮಗಳು ಮಾತ್ರ ಎಡೆದೊರೆ-೨೦೦೦ರ ವಿಭಾಗಕ್ಕೆ ಒಳಪಟ್ಟ ಉಪ ವಿಭಾಗಗಳಾಗಿದ್ದವೆಂದು ಹೇಳಬಹುದು.

ಸಬ್ಬಿ-೨೧೦೦೦: ತೆಲಂಗಾಣದ ಕರೀಮನಗರ ಜಿಲ್ಲೆಯ ಕ್ರಿ.ಶ.೧೧೦೮೩ರ ವೇಮುಲವಾಡ ಶಾಸನವು(ಕ.ವಿ.ಶಾ.ಸಂ.೫, ಭಾಗ ೨, ಪು.೪೦)ಸಬ್ಬಿ-೨೧೦೦೦ವನ್ನು ಉಲ್ಲೇಖಿಸಿದೆ. ಇದರಲ್ಲಿ ಒಂದು ಸಾವಿರ ಗ್ರಾಮಗಳು ಒಳಗೊಂಡಿವೆಂದು; ಇದು ಚಾಳುಕ್ಯ ದೊರೆ ತ್ರಿಭುವನಮಲ್ಲ ದೇವನ ಕಾಲಕ್ಕೆ ಸೇರಿದ್ದಾಗಿದೆ. ಅರಿಕೇಶ್ವರ ದೇವರ ಪೂಜೆಗಾಗಿ, ಈ ಸಬ್ಬಿ-೨೧೦೦೦ ರ ವೇಣಿನಾಲೆ-೭೦ ರಲ್ಲಿದ್ದ ವೆರದವೆಡಂದಿ ಗ್ರಾಮವನ್ನು ಕುಮಾರಸೋಮೇಶ್ವರನು ಬಲ್ಲವರಸನ ಪ್ರಾರ್ಥನೆಯಂತೆ ದತ್ತಿ ನೀಡಿದನೆಂದು ಉಲ್ಲೇಖಿಸುತ್ತದೆ.

ಇದೇ ಜಿಲ್ಲೆಯ ಸನಿಗರಂ ಶಾಸನ(ಅದೇ, ಪು.೧೫೧)ವು ಸಬ್ಬಿ-೨೧೦೦೦ನ್ನು ಉಲ್ಲೇಖಿಸಿದೆ. ಚಾಳುಕ್ಯ ದೊರೆ ಎರಡನೆಯ ಜಗದೇಕ ಮಲ್ಲ ಮತ್ತು ಆತನ ಸಾಮಂತ ಮಹಾಮಂಡಳೇಶ್ವರ ಅನ್ಮಕುಂಡಪುರವೇಶ್ವರ ಕಾಕತೀಯ ಪೊಳಲರಸ ಹಾಗೂ ಆತನ ಕೈಕೆಳಗಿನ ಅಧಿಕಾರಿ ಸಬ್ಬಿ-೨೧೦೦೦ದ ಸೌಧರೆ ರೇಪೊಲ ಕುರುವರಸನನ್ನು ಹೆಸರಿಸಿದೆ. ಹೀಗಾಗಿ ಸಬ್ಬಿ-೨೧೦೦೦ವು ಒಂದು ಸಾವಿರ ಗ್ರಾಮಗಳನ್ನು ಒಳಗೊಂಡ ಒಂದು ವಿಭಾಗವಾಗಿತ್ತೆಂದು ಈ ಶಾಸನಗಳಿಂದ ತಿಳಿದುಬರುತ್ತದೆ.

ಹಗರಟಗೆ-೩೦೦: ಈ ನಾಡಿನಲ್ಲಿ ೩೦೦ ಗ್ರಾಮಗಳು ಒಳಗೊಂಡಿದ್ದವು ಕಲ್ಬುರ್ಗಿ ಜಿಲ್ಲೆಯ ಸುರಪುರ ತಾಲೂಕಿನ ಹಗರಟಗೆ ಇದರ ಕೇಂದ್ರಸ್ಥಾನವಾಗಿತ್ತು. ಸುರಪುರ ತಾಲೂಕಿನ ಶಾಸನ ಸಂಖ್ಯೆ ೨೨, ೫೨, ೭೪, ೮೧, ೮೨, ೮೩, ೮೫, ೮೭, ೮೮, ೯೦ ರ ಶಾಸನಗಳಲ್ಲಿ ಹಗರಟಗೆ ಗ್ರಾಮದ ಉಲ್ಲೇಖವಿದ್ದು ಮತ್ತು ಇದೇ ತಾಲೂಕಿನ ೬೭ನೆಯ ಸಂಖ್ಯೆಯ ಮುದೆನೂರು ಶಾಸನವು ಹಗರಟಗೆ ನಾಡು ಎಂದು ಉಲ್ಲೇಖಿಸಿದೆ. ಮುಂದುವರಿದು ಇದೇ ತಾಲೂಕಿನ ೨೬, ೬೭, ೮೭, ೮೮, ಮತ್ತು ೯೦ ಶಾಸನಗಳು ಹಗರಟಗೆ-೩೦೦ ಎಂದು ಉಲ್ಲೇಖಿಸಿವೆ. ಹೀಗಾಗಿ ಹಗರಟಗೆ-೩೦೦ ರಲ್ಲಿ ಈ ತಾಲೂಕಿನ ಕಕ್ಕೇರಿ, ಮುದನೂರುಗಳು ಸೇರಿಕೊಂಡಿದ್ದವು. ಕೆಂಬಾವಿ-

೧೨, ಅದರಲ್ಲಿ ಬೈಚಬಾಳ, ಕೂಡಲಗಿ, ಮತ್ತು ಕಡಕಲ್ಲುಗಳು ಸೇರಿದ್ದವೆಂದು ಹೇಳಬಹುದು(ಅದೇ, ಪು.೧೫೧).

ಸಗರನಾಡು ೫೦೦: ಈ ನಾಡಿನ ಉಲ್ಲೇಖವು ಕಲ್ಬುರ್ಗಿ ಜಿಲ್ಲೆಯ ಸುರಪೂರ ತಾಲೂಕಿನ ಶಾ.ಸಂ.೨, ೧೩, ೨೫, ೪೫, ೭೭, ೯೨, ೯೮ ನೆಯ ಶಾಸನಗಳಲ್ಲಿ(ಹನುಮಾಕ್ಷಿ ಗೋಗಿ(ಸಂ), ಸುರಪುರ ತಾಲೂಕಿನ ಶಾಸನಗಳು, ೧೯೯೫, ಶಾಸನ ಸಂಖ್ಯೆಗಳು ೨೨, ೫೨, ೭೪, ೮೧, ೮೨, ೮೩, ೮೫, ೮೭, ೮೮, ೯೦, ೯೨, ೨೬, ೯೭)ಕಂಡುಬರುತ್ತದೆ. ಆದರೆ ಇಲ್ಲಿಯ ಕೆಲವು ಶಾಸನಗಳು ಸಗರನಾಡು–೩೦೦ ಎಂದು ಉಲ್ಲೇಖಿಸಿವೆ. ಅವುಗಳೆಂದರೆ, ಶಾ.ಸಂ. ೮, ೧೧, ೩೧, ೩೭, ಈ ಶಾಸನಗಳಲ್ಲಿ ಸಗರನಾಡು–೩೦೦ ಎಂದು(ಅದೇ, ಶಾಸನ ಸಂಖ್ಯೆಗಳು ೨, ೧೩, ೨೫, ೪೫, ೭೭, ೯೨, ೯೮)ಮತ್ತು ಚಿತಾಪುರನ ಕೊಲ್ಲೂರು ಶಾಸನದಲ್ಲಿ ನಮೂದಾಗಿರುವುದರಿಂದ ಈ ಪ್ರದೇಶವು ಸು.೩೦೦ ಗ್ರಾಮಗಳನ್ನು ಒಳಗೊಂಡ ಒಂದು ವಿಭಾಗ ಕೇಂದ್ರವಾಗಿತ್ತೆಂದು ಹೇಳಬಹುದು. ಆದರೆ ಮುಂದುವರೆದು ಇದೇ ತಾಲೂಕಿನ ಶಾಸನಗಳು ಸಗರವೈನೂರುಂಬಾಡ ಎಂದು ಉಲ್ಲೇಖಿಸಿವೆ. ಅವುಗಳಲ್ಲಿ ಶಾ.ಸಂ. ೧೭, ೫೯, ೬೧, ೬೭, ೭೩, ಶಾಸನಗಳು(ಅದೇ, ಶಾಸನ ಸಂಖ್ಯೆಗಳು ೮, ೧೧, ೩೧, ೩೭)ಅಲ್ಲದೆ ಚಿತಾಪೂರ ತಾಲೂಕಿನ ಕೊಲ್ಲೂರು ಶಾಸನವು ಸಗರನಾಡು–೫೦೦ ಎಂದು ಉಲ್ಲೇಖಿಸಿದೆ. ಇದರ ಪ್ರಕಾರ ಸಗರನಾಡು–೫೦೦ ಗ್ರಾಮಗಳನ್ನು ಒಳಗೊಂಡಿತ್ತೆಂದು ಅರ್ಥವಾಯಿತು. ಹೀಗೆ ಆರಂಭದಲ್ಲಿ ಈ ನಾಡು ೩೦೦ ಗ್ರಾಮಗಳನ್ನು ಒಳಗೊಂಡಿದ್ದು, ಕಲ್ಯಾಣ ಚಾಳುಕ್ಯ ಚಕ್ರವರ್ತಿ ಆರನೆ ವಿಕ್ರಮಾದಿತ್ಯನ ಆಳ್ವಿಕೆಯ ನಂತರ ಕಾಲದಲ್ಲಿ ಅಂದರೆ ಕ್ರಿ.ಶ. ೧೧೩೦ರ ಸುಮಾರಿಗೆ ಸಗರ–೩೦೦ವು ಸಗರ ವೈನೂರುಂಬಾಡವಾಗಿ ಮಾರ್ಪಟ್ಟಿತ್ತೆಂದು ಹೇಳಲು ಸಾಧ್ಯವಿದೆ. ಬಹುಶಃ ಚಾಳುಕ್ಯ ದೊರೆ ವಿಕ್ರಮಾದಿತ್ಯನ ಆಳ್ವಿಕೆಯ ನಂತರ ಈ ನಾಡಿನಲ್ಲಿ ಇನ್ನೂ ೨೦೦ ಗ್ರಾಮಗಳು ವಿಲೀನಗೊಂಡಿರಬೇಕು. ಸಗರ–೫೦೦ ಎಂದಾಗಿರಬೇಕು ಎಂದು ಹೇಳಬಹುದು. ಉಲ್ಲೇಖಿತಗೊಂಡ ಶಾಸನಗಳ ಕಾಲ ಕ್ರಿ.ಶ.೧೧೪೩ರಿಂದ ೧೨೬೫ ಎಂದು ಆಗಿರುತ್ತದೆ.

ಒಟ್ಟಾರೆ ಸಗರ–೩೦೦ರಲ್ಲಿ ಪಿರಿಯಬೆಳ್ಳುಂಬಟ್ಟೆ(ಅದೇ, ಶಾಸನ ಸಂಖ್ಯೆಗಳು ೧೭, ೫, ೬೧, ೬೭, ೭೩), ಶಿವಪುರ, ಎಳರಾವೆ(ಅದೇ, ಪು.೨೫), ಐವೂರ(ಅದೇ, ಪು.೨೬) ನಗರವುರ (ಅದೇ, ಪು.೨೭), ತಿಂಥಿಣಿ ಸಿರಿವುರ(ಅದೇ, ಪು.೨೭–೩೩), ಕಂನದನೂರು, ಹಾಲುಂಗೆರೆ(ಅದೇ, ಪು.೭೧)ಗಳು ಸೇರಿದ್ದವೆಂದು ಇಲ್ಲಿ ಉಲ್ಲೇಖಿತ ಶಾಸನಗಳಿಂದ ತಿಳಿದುಬರುತ್ತದೆ.

ಹೀಗೆ ಈ ಮೇಲ್ಕಾಣಿಸಿದ ಗ್ರಾಮಗಳು ಎಷ್ಟೆಷ್ಟು ಗ್ರಾಮಗಳು ಒಳಗೊಂಡಿದ್ದವೆಂದು ತಿಳಿದು ಬರುವುದಿಲ್ಲ. ಸಗರನಾಡು–೩೦೦ರ ಬಳಿ, ಹೀಗೆ ಉಲ್ಲೇಖಿತವಾಗಿರುವುದರಿಂದ ಬಹುಶಃ.

ಈ ಪ್ರದೇಶಗಳು ಸಗರ-೩೦೦ರಕ್ಕೆ ಒಳಪಟ್ಟಿರಬಹುದೆಂದು ಹೇಳಬಹುದು. ಕ್ರಿ.ಶ. ೧೧೪೯ರಿಂದ ೧೨೬೫ ರ ಕಾಲದ ಶಾಸನಗಳಲ್ಲಿ ಉಲ್ಲೇಖಿತ ಸಗರ-೫೦೦ ರ ನಾಡಿನಲ್ಲಿ ಈ ಮೇಲಿನ ಗ್ರಾಮಗಳಲ್ಲದೆ ಬಹುಶ ಮಹಾ ಅಗ್ರಹಾರ ಮುದನೂರು, ಕೂಡ ಈ ಸಗರನಾಡು-೫೦೦ರಲ್ಲಿ ಸೇರಿರಬೇಕೆಂದು ಊಹಿಸಲು ಸಾಧ್ಯವಿದೆ. ಕಾರಣ ಇದೇ ತಾಲೂಕಿನ ಮುದನೂರು ಶಾಸನಗಳಲ್ಲಿ (ಅದೇ, ಪು.೮೭) ಸಗರವಯಿನೂರಂ ಬಾಡದ ಸಮಸ್ತ ಗ್ರಾಯಿತರು, ಶ್ರೀಮತ್ ಸಾಸನದ ಮನೆ ಮದಿನೀರಲು ಎಂದಿದೆ. ಹೀಗಾಗಿ, ಕ್ರಿ.ಶ.೧೩ ಶತಮಾನದಲ್ಲಿ ಮಹಾ ಅಗ್ರಹಾರ ಮುದಿನೂರು ಕೂಡ ಈ ಸಗರನಾಡು-೫೦೦ರಲ್ಲಿ ಸೇರಿರಬೇಕು. ಆದರೆ ಈ ಮುದಿನೂರು ಎಷ್ಟು ಗ್ರಾಮಗಳನ್ನು ಒಳಗೊಂಡಿತ್ತೆಂಬುವುದು ಸ್ಪಷ್ಟ ಮಾಹಿತಿ ಇಲ್ಲ. ಹೀಗೆ ಸಗರ-೩೦೦ ರಲ್ಲಿ ಸಗರ-೫೦೦ ರಲ್ಲಿ ಒಳಗೊಂಡ ಗ್ರಾಮಗಳ ಸ್ಪಷ್ಟವಾದ ಸಂಖ್ಯೆ ಶಾಸನಗಳಲ್ಲಿ ಕಂಡುಬರುವುದಿಲ್ಲ. ಆದರೆ ಸಗರ-೩೦೦ ಮತ್ತು ಸಗರ-೫೦೦ ಉಲ್ಲೇಖ ಮಾತ್ರ ಈ ಮೇಲಿನ ಶಾಸನಗಳಲ್ಲಿ ಕಂಡುಬರುತ್ತವೆ.

ಅರಲು-೩೦೦: ಅರಲು-೨೦೦ ಇದು ೩೦೦ ಗ್ರಾಮಗಳನ್ನು ಒಳಗೊಂಡ ಒಂದು ಉಪವಿಭಾಗ ವಾಗಿತ್ತು. ಈ ಅರಲು-೩೦೦ ರ ಉಲ್ಲೇಖವು ಕಲ್ಬುರ್ಗಿ ಜಿಲ್ಲೆಯ ಚಿತಾಪುರ ತಾಲೂಕಿನ ಶಾಸನ ಸಂಖ್ಯೆ: ೨, ೩, ೪, ೫, ೬, ೩೦, ೩೬, ೩೯ ಮತ್ತು ೪೦ ಶಾಸನಗಳಲ್ಲಿ ಈ ಅರಲು-೩೦೦ರ ಉಲ್ಲೇಖ ಕಂಡುಬರುತ್ತದೆ(ಹನುಮಾಕ್ಷಿ ಗೋಗಿ(ಸಂ), ಕಲ್ಬುರ್ಗಿ ಜಿಲ್ಲೆಯ ಶಾಸನಗಳು (ಚಿತ್ತಾಪುರ ಶಾಸನಗಳು ೨-೬ ಮತ್ತು ೩೦, ೩೬, ೩೯, ೪೦). ಈ ಅರಲು-೩೦೦ ಉಪ ವಿಭಾಗದಲ್ಲಿ ಇಂಗುಳಗಿ, ಕಮರಡಗಿ, ನಾಗಾಯಿ ಹಲಕರಟಗಿ ಮತ್ತು ಹಂದರಕೆ ಪ್ರದೇಶದ ಗ್ರಾಮಗಳು ಅಲ್ಲದೆ ಇಂಗುಳಗಿ ಮತ್ತು ನಾಗಾಯಿ ಮಹಾ ಅಗ್ರಹಾರಗಳಾಗಿದ್ದವು. ಈ ಪ್ರದೇಶಗಳು ಅರಲು-೩೦೦ ರ ಉಪ ವಿಭಾಗಕ್ಕೆ ಒಳಪಟ್ಟಿರಬೇಕೆಂದು ಹೇಳಬಹುದು

ಅಲಂದೆ ಸಾಸಿರ : ಇದು ಒಂದು ಸಾವಿರ ಗ್ರಾಮಗಳನ್ನು ಒಳಗೊಂಡ ಆಡಳಿತ ವಿಭಾಗವಾಗಿತ್ತು. ಇದು ಹೈದ್ರಾಬಾದ ಕರ್ನಾಟಕ ಪ್ರದೇಶದ ಇಂದಿನ ಕಲ್ಬುರ್ಗಿ ಜಿಲ್ಲೆಯ ಆಳಂದ ತಾಲೂಕ ಪ್ರದೇಶವಾಗಿದೆ. ಈ ಪ್ರದೇಶವು ಅಂದು ಮಹಾರಾಷ್ಟ್ರದ ಸೊಲ್ಲಾಪುರ ಮತ್ತು ಉಸ್ಮಾನಾಬಾದ್ ಜಿಲ್ಲೆಯ ಕೆಲವು ಗ್ರಾಮಗಳನ್ನು ಒಳಗೊಂಡಿತ್ತು. ಅಲ್ಲದೇ ಇಂದಿನ ಕಲ್ಬುರ್ಗಿ ಜಿಲ್ಲೆ ಕೆಲವು ಗ್ರಾಮಗಳನ್ನು ಒಳಗೊಂಡಿತ್ತೆಂದು ಹೇಳಬಹುದು.

ಅಣಂದೂರ-೩೦೦: ಇದು ಅಲಂದೆ ಸಾಸಿರದ ಒಂದು ಉಪವಿಭಾಗವಾಗಿತ್ತೆಂದು ಶಾಸನ ವೊಂದು ಉಲ್ಲೇಖಿಸಿದೆ. ಅಣದೂರ-೩೦೦ರ ಉಲ್ಲೇಖವು ಮಹಾರಾಷ್ಟ್ರದ ಅನೇಕ ಕನ್ನಡ ಶಾಸನಗಳಲ್ಲಿ ಬಂದಿದೆ(ಡಾ.ಜಿ.ಎನ್.ಉಪಾಧ್ಯ ಗೋದಾವರಿವರಂ, ಇರ್ದ ಕನ್ನಡ ನಾಡು, ೨೦೦೨, ಪು.೮೦). ಅಲಂದೆ ಸಾಸಿರದ ಉಲ್ಲೇಖವು, ಕಲ್ಬುರ್ಗಿ ಜಿಲ್ಲೆಯ ಅಫಜಲಪುರ

ತಾಲೂಕಿನ ಶಾ.ಸಂ.೩, ೬, ೭, ೧೦, ೧೦, ೧೧ ಶಾಸನಗಳಲ್ಲಿ ಬಂದಿದೆ(ಹನುಮಾಕ್ಷಿ ಗೋಗಿ(ಸಂ), ಕಲ್ಬುರ್ಗಿ ಜಿಲ್ಲೆಯ ಶಾಸನಗಳು)ಅಫಜಲಪುರ ಶಾಸನಗಳು ೩೬, ೭, ೧೦, ೧೧)ಅಲ್ಲದೇ ಇದೇ ಜಿಲ್ಲೆಯ ಚಿತಾಪುರ ಶಾಸನವು ಅಲಂದೆ ಸಾಸಿರ ನಾಡು ಉಲ್ಲೇಖಿಸಿದೆ(ಅದೇ, ಪು.೨೩೦) ಮತ್ತು ಇದೇ ಜಿಲ್ಲೆಯ ಆಳಂದ ಶಾಸನಗಳಲ್ಲಿ(ಅದೇ, ಪು.೩೭) ಅಲಂದೆ ಸಾಸಿರದ ಉಲ್ಲೇಖ ಬಂದಿದೆ. ಅಲಂದೆ ಸಾಸಿರಕ್ಕೆ ಒಳಪಡುವ ಕೆಲವು ಪ್ರದೇಶಗಳನ್ನು ಕಲ್ಬುರ್ಗಿ ಜಿಲ್ಲೆಯ ಶಾಸನಗಳು ಹೆಸರಿಸುತ್ತವೆ. ಅವುಗಳಲ್ಲಿ ಗೊಂಕನಾಡು–೧೮೦(ಅದೇ, ಪು.೫೪) ಅತ್ತಿನೂರು–೮೦(ಅದೇ, ಪು.೧೮), ಅಣಂದೂರ–೩೦೦(ಅದೇ, ಪು.೨೯) ಮಣಿವೂರ–೧೨, ಮೊರಂಬ–೮೦(ಅದೇ, ಪು.೨೬) ಕಂಪಣವತ್ತಿ, ಗಾಣಪುರ(ಗಾಣಗಾಪುರ)(ಅದೇ, ಪು.೬೦) ಆಳಂದೆ ಸಾಸಿರದ ಉಪವಿಭಾಗಗಳನ್ನು ಕೊಡುತ್ತಾ ಜೆ.ಎಂ.ನಾಗಯ್ಯ ಅವರು ಅಣಂದೂರು ೩೦೦ರಲ್ಲಿ ಕುಂಟರಿಗಾವೆ–೬೦, ಮಂದುವನ–೩೦, ಅಂಕುಲಗೆ–೫೦, ಮಣಿಯೂರ–೧೨, ೬೬ ಬಾಡ, ಒಟ್ಟು ೨೧೮ ಗ್ರಾಮಗಳು ಗುರುತಿಸಿದ್ದಾರೆ(ಡಾ.ಜೆ.ಎಂ ನಾಗಯ್ಯ: ಆರನೆ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ, ೧೯೯೨, ಪು.೯೪). ಹೀಗೆ ಅಲಂದೆಸಾಸಿರ ವಿಭಾಗವು ಹೈದ್ರಾಬಾದ ಕರ್ನಾಟಕ ಪ್ರದೇಶಗಲ್ಲದೆ, ಇಂದಿನ ಮಹಾರಾಷ್ಟ್ರದ ಕೆಲವು ಪ್ರದೇಶಗಳನ್ನು ಒಳಗೊಂಡಿತ್ತೆಂದು ಹೇಳಬಹುದು.

ಮನ್ನೆದಡಿ ಸಾಸಿರ: ಇದು ಒಂದು ಸಾವಿರ ಗ್ರಾಮಗಳ ಘಟಕವಾಗಿತ್ತು. ಮನ್ನೆದಡಿ ಸಾಸಿರದ ಉಲ್ಲೇಖವು ಕಲ್ಬುರ್ಗಿ ಮತ್ತು ಬೀದರ ಜಿಲ್ಲೆಯ ಶಾಸನಗಳು ಉಲ್ಲೇಖಿಸಿವೆ. ಕಲ್ಬುರ್ಗಿ ಜಿಲ್ಲೆಯ ಚಿತಾಪುರ ತಾಲೂಕಿನ ಕಾಳಗಿಯ ಶಾಸನದಲ್ಲಿ(ಹನುಮಾಕ್ಷಿ ಗೋಗಿ(ಸಂ), ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪು.೧೪೦) ಕಾಳುಗೆಯು ಮನ್ನೆದಡಿನಾಡಿನ ರಾಜಧಾನಿ ಯಾಗಿತ್ತೆಂದು ಶಾಸನ ಉಲ್ಲೇಖಿಸಿದೆ. ಇದೇ ತಾಲೂಕಿನ ಕಾಳುಗೆಯ ಶಾ.ಸಂ. ೧೨, ೧೩, ೧೪, ಇವು ಮನ್ನೆದಡಿ ಸಾಸಿರದ ಉಲ್ಲೇಖಗೊಳಿಸಿವೆ(ಅದೇ, ಪು.೧೩೬). ಇದೇ ಜಿಲ್ಲೆಯ ಆಳಂದ ತಾಲೂಕಿನ ಹೊಡಲ ಶಾಸನಗಳು ಈ ಮುನ್ನೆದಡಿ ಸಾಸಿರದ ಉಲ್ಲೇಖ ಮಾಡಿವೆ(ಅದೇ, ಪು.೮೨). ಈ ಶಾಸನದಲ್ಲಿ ಶ್ರೀ ಮನ್ಮಹಾಪ್ರಧಾನಂ ಬಾಹತ್ತರನಿಯೋಗಾಧಿಪತಿ ಹಿರಿಯ ಸೋಮಣ್ಣಯ್ಯ ದಂಡನಾಯಕರು ಶ್ರೀಮನ್ಮಮಾಮಂಡಳೇಶ್ವರಂ ಬಾಣರಾದಿತ್ಯನುಂ ಬಾಣವಂಶ ಕುಳೋದ್ಭವನುಂ ಮನ್ನೆದಡಿ ಸಾಸಿರದ ವೀರ ದುಂಮರಸನುಂ ಸಮಸ್ತ ಅಗ್ರಾಯುತರು ಅಂಬುಲಗೆ ೩೦ರ ಬಳಿಯ ಬಾಡಂ ವಗ್ಗದರಿಯನು ಹೊಡಲ ಶ್ರೀ ಪ್ರಸನ್ನ ರಾಮದೇವರ್ಗೆ ದಾನ ಬಿಟ್ಟ ವಿಷಯ ತಿಳಿಸಿದೆ. ಬೀದರ ಜಿಲ್ಲೆಯ ಬಸವಕಲ್ಯಾಣ ಶಾಸನವು(ದೇವರಕೊಂಡಾರೆಡ್ಡಿ, ಹನುಮಾಕ್ಷಿ ಗೋಗಿ(ಸಂ), ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೮, ೨೦೦೩, ಪು.೩೫)ಮನ್ನೆದಡೆಯ ಪಾಳಿಸಾರರು ಎಂದು ಉಲ್ಲೇಖಿಸಿದೆ. ಇದೇ ಜಿಲ್ಲೆಯ ಹುಮನಾಬಾದ ತಾಲೂಕಿನ ಶಾಸನವೊಂದು

(ಅದೇ, ಪು.೫)ತಂತ್ರಪಾಳ ಹಜ್ಜನಾಯಕರು ಪಡಿಯಕ್ಕನುಂ ಮಗ ತಂತ್ರಪಾಳ ಕೊಂಕೈಯನು ಮನ್ನೆದಡಿ ಸಾಸಿರದ ನೂರುಂಬಾಡದೊಳ್ ಘಟ್ಟವಿಪ್ಪನಾಲ್ಕರ ಬಳಿ ಯೆಕ್ಕಲವಾಡ ಎಂದು ಉಲ್ಲೇಖಿಸಿದೆ. ಹೀಗಾಗಿ ಈ ಮನ್ನೆದಡಿಸಾಸಿರದಲ್ಲಿ ಇಂದಿನ ಬೀದರ, ಮತ್ತು ಕಲ್ಬುರ್ಗಿಯ ಜಿಲ್ಲೆಯ ಪ್ರದೇಶಗಳು ಒಳಗೊಂಡಿದ್ದವೆಂದು ಹೇಳಬಹುದು.

ಅಟ್ಟಳೆ–೩೦೦: ಹೈದರಾಬಾದ–ಕರ್ನಾಟಕ ಪ್ರದೇಶದ ಬೀದರ ಜಿಲ್ಲೆಯ ಶಾಸನಗಳಲ್ಲಿ ಈ ಅಟ್ಟಳೆ ನಾಡಿನ ಉಲ್ಲೇಖ ಬಂದಿದೆ. ಈ ನಾಡು ೩೦೦ ಗ್ರಾಮಗಳನ್ನು ಒಳಗೊಂಡ ಒಂದು ಆಡಳಿತದ ಉಪವಿಭಾಗವಾಗಿತ್ತು. ಇದರ ಆಧೀನಕ್ಕೆ ಈಗಿನ ಬೀದರ ಜಿಲ್ಲೆಯ ಬೀದರ, ಭಾಲ್ಕಿ, ಮತ್ತು ಬಸವಕಲ್ಯಾಣ ತಾಲೂಕಿನ ಪ್ರದೇಶಗಳನ್ನು ಒಳಪಟ್ಟಿದ್ದವೆಂದು ಇಲ್ಲಿ ದೊರೆತ ಶಾಸನಗಳಿಂದ ತಿಳಿದುಬರುತ್ತದೆ. ಬಾದಾಮಿ ಚಾಲುಕ್ಯರ ಕಾಲದ ಪಟ್ಟದಕಲ್ಲಿನ ಶಾಸನವೊಂದರಲ್ಲಿಯೂ ಈ ಅಟ್ಟಳೆ ನಾಡಿನ ಉಲ್ಲೇಖ ಬಂದಿದೆ. ಅದರಲ್ಲಿ ಆಟಳ ಎಂದು ಕರೆಯಲಾಗಿದೆ(ಅದೇ, ಪು.XXVIII) ಮಂಜಿರಾ ನದಿಯ ದಕ್ಷಿಣ ಭಾಗ ಇದರಲ್ಲಿ ಮೇಲಟ್ಟಳೆ, ಕೀಳಟ್ಟಳೆ ಎಂಬ ಎರಡು ಭಾಗಗಳಿದ್ದವು. ಈ ಭಾಗಗಳನ್ನು ಕಾರಂಜಾ ನದಿಯು ವಿಂಗಡಿಸಿರಬೇಕು ಎಂದು ಹೇಳಬಹುದಾಗಿದೆ.

ಕ್ರಿ.ಶ.೧೧೦೪ರ ಬೀದರ ಜಿಲ್ಲೆಯು ಇಂಚೂರು ಶಾಸನವು(ಕ.ವಿ.ಶಾ.ಸಂ.೮, ಪು.೧೧೦) ಅಟ್ಟಳೆ ನಾಡಿನ ಪ್ರಸ್ತಾಪ ಮಾಡಿದೆ. ಇಲ್ಲಿ ಅಟ್ಟಳೆಯ ಗೊಂಕರಸನು ಧೊರೇಶ್ವರ ದೇವರ ಸೇವೆಗಾಗಿ ನಾಗಾವೆ ೧೨ರಲ್ಲಿದ್ದ ಇಂಚೂರಿನಲ್ಲಿ ಭೂ ದಾನ ಬಿಟ್ಟಿದಂತೆ ಉಲ್ಲೇಖಿಸಿದೆ. ಚಾಳುಕ್ಯ ದೊರೆ ತ್ರಿಭುವನಮಲ್ಲನ ಆಳ್ವಿಕೆ ಕಾಲದ ಇದೇ ಜಿಲ್ಲೆಯ ಕ್ರಿ.ಶ. ೧೧೧೫ರ ಬರೂರು ಶಾಸನವು(ಅದೇ, ಪು.೧೮೩)ಅಟ್ಟಳೆಮೂನೂರರ ಬಳಿಯ ಮನ್ನೆಯರುಮಾಕಿಳಟ್ಟಳೆ ನೂರಯ್ವರ ಛಪ್ಪನ್ನ ಹೆಜ್ಜುಂಕವೆರ್ಗ್ಗಡೆಗಳು ಮಿರ್ದ ಶ್ರೀಮದ್ಬ್‌ರವೂರ ಎಂದು ಉಲ್ಲೇಖಿಸಿದೆ. ಅಟ್ಟಳೆ–೩೦೦ರ ಬಗ್ಗೆ ಉಲ್ಲೇಖಿಸುವ ಏಕೈಕ ಶಾಸನ ಇದಾಗಿದೆ. ಇದರಿಂದ ಖಚಿತವಾಗಿ ಅಟ್ಟಳೆನಾಡು ೩೦೦ ಗ್ರಾಮಗಳನ್ನು ಒಳಗೊಂಡ ಒಂದು ಉಪವಿಭಾಗವಾಗಿತ್ತೆಂದು ಅಟ್ಟಳೆ–೩೦೦ರ ಬಳಿಯ ಮನ್ನೆಯರು, ಕಿಳಟ್ಟಳೆ ನೂರೈವರು, ಛಪ್ಪನ್ನಹೆಜ್ಜುಂಕ ವೆರ್ಗ್ಗಡೆಗಳು ಸೇರಿ ಬರವೂರನಲ್ಲಿ ದತ್ತಿ ಬಿಟ್ಟ ವಿಷಯ ತಿಳಿಸುತ್ತದೆ. ಇದೇ ಜಿಲ್ಲೆಯಲ್ಲಿ ಚಾಳುಕ್ಯ ದೊರೆ ತ್ರಿಭುವನ ಮಲ್ಲನ ಆಳ್ವಿಕೆಯ ಕ್ರಿ.ಶ.೧೦೯೦–೧೧೧೫ರ ಕಾಲದ ರಂಜೇರಿನ ಶಾಸನವೊಂದು(ಅದೇ, ಪು.೧೬೪) ಅಟ್ಟಳೆ ನಾಡು ಕಾವ್ಯಾತ್ಮಕವಾಗಿ ವರ್ಣಿಸಿದೆ.

"ಎಳೆಯಳು ಮಿಗಿಲೆನಿಸಿದ ಕುನ್ತಳ ವಿಷಯೋತ್ತಂಸಮೆನಿಸಿ
ಫಲತೆರದಿಂದಟ್ಟಳೆ ನಾಡು, ಚೆಲ್ವಿನಾಗರವಲುಂಬವಾನಾಳ್ಕೆ ನಾಡುಗಳು
ಪಡಿಯೊಳವೆ ಎನೆ ಪೊಗಳ್ವ ಪೊಗರ್ತ್ತೆಗೆ ನೆಲಯೆನಿಪಟ್ಟಳೆ ನಾಳ್ಕೆ ತಿಳಕಂ".

ಅಟ್ಟಳೆ ನಾಡು ಕುಂತಳ ದೇಶದ ಭಾಗವಾಗಿ ಇಡಿ ಭೂಮಿಗೆ ತಿಲಕವಾಗಿ, ಚೆಲುವಾಗಿತ್ತು ಎಂದು ವರ್ಣಿಸಿದೆ.

ಕ್ರಿ.ಶ.೧೧೭೯ರ ಬೀದರ ಜಿಲ್ಲೆಯ ಬಸವಕಲ್ಯಾನ ತಾಲೂಕಿನ ನಾರಾಯಣಪುರ ಶಾಸನವು (ಅದೇ, ಪು.೫೮)ಅಟ್ಟಳೆನಾಡು ಉಲ್ಲೇಖಿಸಿದೆ. ಚಾಳುಕ್ಯ ದೊರೆ ಭೂಲೋಕಮಲ್ಲನು ಆಳುತ್ತಿರುವಾಗ ಈತನ ಮಹಾಮಂಡಳೇಶ್ವರ ಪೆರ್ಮಾಡಿಯರಸನು ಅಟ್ಟಳೆಯ ಬಳಿಯ ರಾಯನಾರಾಯಣಪುರದ ದೇವರಿಗೆ ಭೂದತ್ತಿ ನೀಡಿದನೆಂದು ಉಲ್ಲೇಖಿಸುತ್ತದೆ. ಇದರಿಂದ ತಿಳಿದುಬರುವ ಅಂಶವೆಂದರೆ ಇಂದಿನ ಬಸವಕಲ್ಯಾಣವು ಅಟ್ಟಳೆ-೩೦೦ರ ಪ್ರದೇಶವಾಗಿತ್ತೆಂದು ಹೇಳಬಹುದು.

ಕ್ರಿ.ಶ.೧೧೩೨ರ ಇದೇ ಜಿಲ್ಲೆಯ ಭಾಲ್ಕಿ ತಾಲೂಕಿನ ಧನ್ನೂರಾ(ಹೆಚ್) ಶಾಸನವು(ಅದೇ, ಪು.೧೧೨)ಕಲ್ಯಾಣ ಚಾಳುಕ್ಯ ದೊರೆ ತ್ರಿಭುವನಮಲ್ಲನ ಆಳ್ವಿಕೆ ಕಾಲದ್ದಾಗಿದೆ. ಸಿದ್ಧಾಂತದೇವನು ಅಟ್ಟಳೆ ನಾಡು ಆಳುತ್ತಿರಲು ಧನ್ನೂರ ಪ್ರಭು ಮಹೇಶ್ವರ ದಂಡನಾಯಕನು ಅಲ್ಲಿಯ ಅರಹಂತ ದೇವರಿಗೆ ಭೂದತ್ತಿ ನೀಡಿದ್ದನ್ನು ಉಲ್ಲೇಖಿಸಿದೆ. ಇದರಿಂದ ತಿಳಿದುಬರುವುದೇನೆಂದರೆ ಇಂದಿನ ಭಾಲ್ಕಿ ತಾಲೂಕಿನ ಪ್ರದೇಶವು ಅಟ್ಟಳೆ-೩೦೦ ಆಧೀನ ಒಳಪಟ್ಟಿತ್ತೆಂದು ಹೇಳಬಹುದು.

ಕ್ರಿ.ಶ.೧೧೩೮ರ ಇದೇ ಜಿಲ್ಲೆಯ ಬೀದರ ತಾಲೂಕಿನ ಆಣದೂರು ಶಾಸನವು(ಅದೇ, ಪು.೧೭೪)ಅಟ್ಟಳೆ ನಾಡು' ಉಲ್ಲೇಖಿಸಿದೆ. ಈ ಶಾಸನವು ಚಾಳುಕ್ಯದೊರೆ ಜಗದೇಕಮಲ್ಲನು ಪಟ್ಟ ಕಟ್ಟಿಸಿಕೊಂಡ ಕಾಲದ್ದಾಗಿದೆ. ಈ ಶಾಸನದಲ್ಲಿ ಜಗದೇಕಮಲ್ಲನ ಮಹಾಪ್ರಧಾನನಾದ ಮನೆವೆರ್ಗ್ಗಡೆ ಅಟ್ಟಳೆ ನಾಡ ಸಾಮಂತ ಬಮಣಯ್ಯ ಆಣದೂರಿನ ನಾಗೇಶ್ವರ ದೇವರಿಗೆ ದತ್ತಿ ಬಿಟ್ಟ ವಿಷಯ ತಿಳಿಸಿದೆ.

ಕ್ರಿ.ಶ.೧೧೬೯ರ ಇದೇ ಜಿಲ್ಲೆಯ ರಂಜೋಳ ಶಾಸನವು(ಅದೇ, ಪು.೧೫೯) ಕಳಚುರಿದೊರೆ ಬಿಜ್ಜಳನ ಕಾಲದ್ದಾಗಿದೆ. ಈ ಶಾಸನವು ಅಟ್ಟಳೆ ನಾಡು ಕಾವ್ಯಾತ್ಮವಾಗಿ ಹೀಗೆ ವರ್ಣಿಸಿದೆ.

ತಿಳಿಗೊಳದಿಂ ತಮಾಳ ಲತೆಯಂ...
ಶುಕನಪಿಕದಿಂದೆಸೆದಿರ್ಪ್ಪಭೂತ ನಳಘ ತಿಳಕಂ ಮಹಿಯ. . . .
. .ಆಲೊಂದಿನ ನಂದನ ಬ್ರಂದದಿಂಗಗತ್ತಿಳಕವೆನಲ್ಕೆ ರಂಜಿಸುವದಟ್ಟಳೆನಾಡು.

ಇದೇ ಜಿಲ್ಲೆಯ ಕ್ರಿ.ಶ.೧೨-೧೩ನೆಯ ಶತಮಾನದ ಬೀದರ ಕೋಟೆಯ ವಸ್ತು ಸಂಗ್ರಹಾಲಯದ ಶಾಸನವೊಂದು(ಅದೇ, ಪು.೧೨೩) ಅಟ್ಟಳೆ ನಾಡಿನ ಉಲ್ಲೇಖ ಮಾಡಿದೆ. ಇದು ಕಾಕತೀಯ ದೊರೆ ರುದ್ರದೇವನ ಆಳ್ವಿಕೆ ಕಾಲದಾಗಿದೆ. ಅಟ್ಟಳೆ ನಾಡನು ಹೀಗೆ ವರ್ಣಿಸಿದೆ. ಜಂಭೂದ್ವೀಪದಲ್ಲಿ ಮೇರುಪರ್ವತವಿದೆ. ಅದರ ದಕ್ಷಿಣಕ್ಕೆ ಭಾರತ ದೇಶವಿತ್ತು.

ಅದರ ದಕ್ಷಿಣ ಭಾಗದಲ್ಲಿ ಕುಂತಳವಿತ್ತು. ಇದರಲ್ಲಿ ಅಟ್ಟಳೆ ನಾಡು 'ನಿಚ್ಚ ಬಸಂತಂ ಎನುವಂತೆ' ಸೊಗಯಿಸುತ್ತಿತ್ತು ಎಂದಿದೆ.

ಇದೇ ಜಿಲ್ಲೆಯ ಬಸವಕಲ್ಯಾಣದ ಗೊರ್ಟಾ(ಬಿ) ಶಾಸನವು ಚಾಳುಕ್ಯ ದೊರೆ ತ್ರಿಭುವನ ಮಲ್ಲನ ಕಾಲದಾಗಿದೆ. ಈ ಶಾಸನ(ಅದೇ, ಪು.೬೫)ವು ಮೇಲಟ್ಟಳೆಯ ಕಂಪಣ ಭಲ್ಲುಂಕೆ ಎಂಭತ್ತನಾಲ್ಕು ಎಂದು ಉಲ್ಲೇಖಿಸಿದೆ. ಹೀಗಾಗಿ ಇಂದಿನ ಬೀದರ ಜಿಲ್ಲೆಯ ಭಾಲ್ಕಿ ತಾಲೂಕು ಅಟ್ಟಳೆ–೩೦೦ ರ ಆಧೀನಕ್ಕೆ ಒಳಪಟ್ಟ ಪ್ರದೇಶವಾಗಿತ್ತೆಂದು ಹೇಳಬಹುದು. ಒಟ್ಟಾರೆಯಾಗಿ ಅಟ್ಟಳೆ ನಾಡು–೩೦೦ರಲ್ಲಿ ಇಂದಿನ ಬೀದರ ಜಿಲ್ಲೆಯ ಭಾಲ್ಕಿ ಹುಮನಾಬಾದ, ಬಸವಕಲ್ಯಾಣ ಮತ್ತು ಬೀದರ ತಾಲೂಕಿನ ಪ್ರದೇಶಗಳನ್ನು ಒಳಗೊಂಡಿತ್ತೆಂದು ಹೇಳಬಹುದು.

ಒಟ್ಟಿನಲ್ಲಿ ಈ ವಿಶಾಲವಾದ ತೆಲಂಗಾಣ ಮತ್ತು ಹೈದ್ರಾಬಾದ್ ಕರ್ನಾಟಕದ ಭೂ ಪ್ರದೇಶವನ್ನು ಅನೇಕ ವಿಭಾಗ, ಉಪವಿಭಾಗ, ಮಂಡಲ, ಕಂಪಣ, ಪ್ರಾಂತಗಳನ್ನಾಗಿ ವಿಭಜಿಸಿ, ಆಯಾ ಎಲ್ಲಾ ವಿಭಾಗಗಳಿಗೆ ಅಧಿಕಾರಿಗಳನ್ನು ನೇಮಿಸಿ ರಾಜನು ಕೇಂದ್ರದಲ್ಲಿದ್ದುಕೊಂಡು ಆಡಳಿತ ನಡೆಸುತ್ತಿದ್ದನೆಂದು ಮತ್ತು ಆಡಳಿತ ಕ್ರಮವು ವಿಕೇಂದ್ರೀಕರಣವಾಗಿರುವುದನ್ನು ಶಾಸನಗಳಿಂದ ತಿಳಿದುಬರುತ್ತದೆ.

ಅಧ್ಯಾಯ ಐದು

ಸಾಮಾಜಿಕ ಅಧ್ಯಯನ

ಅಧ್ಯಾಯ ಐದು

ಸಾಮಾಜಿಕ ಅಧ್ಯಯನ

'ಸಮಾಜ'ವೆಂಬುದು ಹಲವಾರು ವರ್ಗಗಳ ಕುಟುಂಬಗಳ ಒಟ್ಟು ಮೊತ್ತವೇ ಅಗಿದೆ. ಇದನ್ನು ಇದರಲ್ಲಿಯ ಸದಸ್ಯರು ತಮ್ಮ ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಳ್ಳುತ್ತಾರೆ. ಮತಧರ್ಮಗಳ ಪ್ರಭಾವವು ಇಂತಹ ಸಾಮಾಜಿಕ ವ್ಯವಸ್ಥೆಯ ಮೇಲೆ ದಟ್ಟವಾಗಿ ಬಿದ್ದಿರುತ್ತದೆ. ವರ್ಣಾಶ್ರಮ ವ್ಯವಸ್ಥೆಯಿಂದ ಕೂಡಿದ ಅಂದಿನ ಸಮಾಜದಲ್ಲಿ ಬ್ರಾಹ್ಮಣರಿಗೆ ಅತಿ ಉಚ್ಚಸ್ಥಾನವಿತ್ತು. ಇವರ ಕಾರ್ಯವು ಪೂಜನೀಯವೆನಿಸಿದ್ದು ಲೋಕಕಲ್ಯಾಣವನ್ನು ಬಯಸುವಂತಿತ್ತು. ಕ್ಷತ್ರಿಯರು ಪರಿಪಾಲನೆಯಲ್ಲೂ, ವೈಶ್ಯರು ನಿಧಿನಿರ್ವಹಣೆ ಆಡಳಿತಗಳಲ್ಲಿಯೂ ತೊಡಗಿಕೊಂಡಿದ್ದರು. ಇತರರದು ಶ್ರಮಿಕವರ್ಗವಾಗಿತ್ತು. ಈ ಒಂದೊಂದು ವರ್ಗವೂ ಪರಸ್ಪರ ಪೂರಕವಾಗಿ ಜೀವನ ನಡೆಸುತ್ತಿತ್ತು. ಇವರ ಜೀವನಕ್ರಮ, ಪರಸ್ಪರ ಸಂಬಂಧಗಳು ಇತ್ಯಾದಿಗಳು ಹೇಗಿದ್ದವು ಎಂಬುದರ ಬಗ್ಗೆ ಇಲ್ಲಿಯ ಶಾಸನಗಳಿಂದ ಹೆಚ್ಚಿನ ವಿವರಗಳು ತಿಳಿದುಬರುವುದಿಲ್ಲ. ಸಿಕ್ಕುವುದೆಲ್ಲ ಹೆಚ್ಚಾಗಿ ಇವರ ಸಾಮಾಜಿಕ ಕಾರ್ಯಗಳು, ಸ್ಥಾನಮಾನಗಳು, ಕೆಲವೊಮ್ಮೆ ಕಾರ್ಯವೈಖರಿಗಳು, ಇತ್ಯಾದಿಗಳಿಗೇ ಸೀಮಿತವಾಗಿರುತ್ತದೆ. ಸಿಕ್ಕುವ ತುಣುಕು ಮಾಹಿತಿಗಳನ್ನೇ ಒಟ್ಟುಗೂಡಿಸಿ ಅಂದಿನ ಸಮಾಜದ ಒಂದು ಒಟ್ಟು ಚಿತ್ರವನ್ನು ಕಂಡುಕೊಳ್ಳಬೇಕಾಗುತ್ತದೆ.

ದಾನದತ್ತಿಗಳನ್ನು ನೀಡುವುದು ಒಂದು ಧಾರ್ಮಿಕ ಕ್ರಿಯೆಯೇ ಆಗಿದ್ದರೂ ಅದು ಸಮಾಜಕ್ಕೆ ಉಪಯುಕ್ತವಾದುದೆಂಬುದನ್ನು ಮಾತ್ರ ತಳ್ಳಿಹಾಕುವಂತಿಲ್ಲ. ಉಳ್ಳವರಿಂದ ಇಲ್ಲದವರ ಕಡೆಗೆ ಸಂಪತ್ತು ಹರಿದು ಬರುತ್ತಿದ್ದ ಒಂದು ಹಿತಕರ ಮಾರ್ಗ ಅದಾಗಿತ್ತು. ದಾನಿಗಳು ಕೇವಲ ಕೆಲವರಿಗೆ ದಾನಕೊಡುವುದಕ್ಕಷ್ಟೇ ಸೀಮಿತವಾಗದೆ ಎಲ್ಲ ಜೀವಿಗಳ ಹಿತಕ್ಕಾಗಿ, ಅದಕ್ಕೆ ಒದಗಿಬರುವ ಸಾಮಾಜಿಕ ಕಾರ್ಯಗಳಿಗಾಗಿ, ದತ್ತಿಗಳನ್ನು ಬಿಡುತ್ತಿದ್ದುದು ಉದ್ದಕ್ಕೂ ಕಂಡುಬರುತ್ತದೆ. ಪ್ರಜೆಗಳನ್ನು ತನ್ನ ಮಕ್ಕಳಂತೆ ಕಾಪಾಡಬೇಕೆಂಬುದು ರಾಜನ ಧರ್ಮವಾಗಿತ್ತು. ಅದಕ್ಕೆ ಅನುಗುಣವಾಗಿ ರಾಜರು ಅಗತ್ಯವಿರುವ ಎಡೆಗಳಲ್ಲೆಲ್ಲಾ ಕೆರೆಕಟ್ಟಿಸುವುದು, ಬಾವಿ ತೋಡಿಸುವುದು, ಇತ್ಯಾದಿ

ಸಮಾಜೋಪಯೋಗಿ ಕಾರ್ಯಗಳನ್ನು ಶ್ರದ್ಧೆಯಿಂದ ಮಾಡಿಸುತ್ತಿದ್ದರು. ಪುಣ್ಯ ಲಭಿಸುವುದೆಂಬ ನಂಬಿಕೆಯು ಇದಕ್ಕೆ ಬೆನ್ನೆಲುಬಾಗಿತ್ತು. ಕೇವಲ ರಾಜರಷ್ಟೇ ಅಲ್ಲದೆ ಅವರ ಕೈಕೆಳಗಿನ ಸಾಮಂತರು ಅಧಿಕಾರಿಗಳು ಮುಂತಾದವರು ಕೂಡ ಇಂತಹ ಕಾರ್ಯಗಳನ್ನು ಮಾಡುತ್ತಿದ್ದರು. ಇತರ ಸಾಮಾನ್ಯ ಜನರು ಕೂಡ ಇದಕ್ಕೆ ಕೈ ಜೋಡಿಸುತ್ತಿದ್ದುದುಂಟು. ಈ ಎಲ್ಲ ಅಂಶಗಳಿಗೆ ಸಂಬಂಧಿಸಿದಂತೆ ಪ್ರಕೃತದ ಶಾಸನಗಳಿಂದ ದೊರೆಯುವ ಮಾಹಿತಿಯೇನು ಎಂಬುದರ ಬಗ್ಗೆ ಇನ್ನು ನೋಡಬಹುದು.

ಲೋಕೋಪಯೋಗಿ ಕಾರ್ಯಗಳು

ಪ್ರಾಚೀನ ಕಾಲದಿಂದಲೂ ಭಾರತೀಯ ಸಮಾಜದಲ್ಲಿ ದಾನ-ಧರ್ಮ-ಪುಣ್ಯಕಾರ್ಯಗಳು ಮಾಡಬೇಕು ಎಂಬ ಭಾವನೆ ಅವರಲ್ಲಿ ಜನ್ಮತಃ ಹುದುಗಿತ್ತು. ಆದುದರಿಂದಲೇ ಸಮಾಜದ ಮುಖಂಡರು, ಧನಿಕರು ಮತ್ತು ಮುಖ್ಯವಾಗಿ ರಾಜರು-ಮಾಡಳಿಕರು, ಜನಹಿತ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದೇ ಪುಣ್ಯದ ಕೆಲಸವೆಂದು ಭಾವಿಸಿದ್ದರು. ಸಮಾಜ ಕಾರ್ಯವೆಂದರೆ ದೇವರ ಕಾರ್ಯವೆಂದು ಬಗೆದಿದ್ದರು. ರಾಜನು ಕೂಡ ಇದಕ್ಕೆ ಹೊರತಾಗಿಲ್ಲ. ಆಡಳಿತ ಚುಕ್ಕಾಣಿ ಹಿಡಿದ ರಾಜ ಮಂತ್ರಿ, ಮಾಂಡಲಿಕರು ತಮ್ಮ ಕಾರ್ಯಕ್ಷೇತ್ರದಲ್ಲಿ ಪ್ರಜೆಗಳ ಏಳಿಗೆಗಾಗಿ ಅನೇಕ ಜನಪರ ಕಾರ್ಯಗಳನ್ನು ಕೈಗೊಳ್ಳುತ್ತಿದ್ದರು. ಅವು ಲೌಕಿಕ ಮತ್ತು ಧಾರ್ಮಿಕ ಪ್ರಗತಿಗಾಗಿ ಕಾರ್ಯ ಕೈಗೊಳ್ಳುತ್ತಿದ್ದರು. ಕೆರೆ, ಬಾವಿ, ಕಾಲುವೆಗಳು, ಉದ್ಯಾನವನ, ರಸ್ತೆ ಇತ್ಯಾದಿಗಳು ಲೌಕಿಕ ಜೀವನದ ಹಸನು ಮಾಡುವುದಕ್ಕಾಗಿ ಮತ್ತು ಗುಡಿ, ದೇವಾಲಯಗಳು, ಅನ್ನಛತ್ರಗಳು, ಅರವಟ್ಟಿಗೆಗಳು, ದೇವಾಲಯಗಳ ಜೀರ್ಣೋದ್ಧರ, ಅಗ್ರಹಾರಗಳಲ್ಲಿರುವ ಮಹಾಜನರಿಗೆ ದಾನ-ದತ್ತಿಗಳನ್ನು ನೀಡುವುದು, ಇವು ಆಧ್ಯಾತ್ಮಕ ಕ್ಷೇತ್ರದ ಪುಣ್ಯ ಕೆಲಸಗಳಾಗಿದ್ದವು. ಲೋಕೋಪಯೋಗಿ ಕಾರ್ಯಗಳು ಮಾಡುವುದು ನಮ್ಮ ಪರಮಧರ್ಮವಾಗಿದೆಯೆಂದು ಅಂದಿನ ಆಳರಸರು ಅಂದು ಕೊಂಡಿದ್ದರು. ಒಬ್ಬ ದೊರೆ ಬರೀ ಕೋಟೆ-ಕೊತ್ತಲಗಳ ನಿರ್ಮಾಣ ಮತ್ತು ಸಾಮ್ರಾಜ್ಯ ವಿಸ್ತರಣೆ ತಮ್ಮ ಆಡಳಿತದ ಪರಮಗುರಿಯಾಗಿರಲಿಲ್ಲ. ತನ್ನ ಸಾಮ್ರಾಜ್ಯದಲ್ಲಿನ ಜನಪರ ಕಾರ್ಯಗಳು ಕೂಡ ಅಷ್ಟೇ ಮುಖ್ಯವಾಗಿದ್ದವೆಂದು ಅವರು ಮನಗಾಣಿದ್ದರು. ಅದಕ್ಕಾಗಿ ಅಂದಿನ ರಾಜರು ಜನಹಿತ ಕಾರ್ಯಗಳು, ಲೋಕಕಲ್ಯಾಣ ಕಾರ್ಯಗಳನ್ನು ಕೈಗೊಳ್ಳುತ್ತಿದ್ದರು. ಲೋಕೋಪಯೋಗಿ ಕಾರ್ಯಗಳು ಕೈಗೊಳ್ಳುವುದರಿಂದ ತನ್ನ ಆಡಳಿತ ಸುಸ್ಥಿರವಾಗಲು ಸಾಧ್ಯವಿದೆ, ಜನಹಿತವೇ ನಮ್ಮ ಹಿತವೆಂದು ತಮ್ಮ ಆಡಳಿತದ ಉನ್ನತಿ, ಸಾಮ್ರಾಜ್ಯದ ವಿಸ್ತರಣೆ ಜೊತೆ ಜೊತೆಗೆ ತಮ್ಮ ಕಾರ್ಯಕ್ಷೇತ್ರಗಳಲ್ಲಿ ಅಲ್ಲಲ್ಲಿ ಇಹಪರ ಕಲ್ಯಾಣ ಕಾರ್ಯಗಳನ್ನು ಕೈಗೊಳ್ಳುತ್ತಿದ್ದರು. ಇಂತಹ ಒಳ್ಳೆಯ ಕೆಲಸ ಮಾಡುವುದರಿಂದ

ತಮ್ಮ ಕುಟುಂಬ ಮತ್ತತು ತನ್ನ ಸಾಮ್ರಾಜ್ಯ ಏಳಿಗೆ ಮತ್ತು ವಿಸ್ತಾರವೆಂದು ಅವರು ಅರಿತು ಕೊಂಡಿದ್ದರಿಂದಲೆ ಅಂದು ಕೈಗೊಂಡ ಅನೇಕ ಜನಪರ ಕಾರ್ಯಗಳು ಇಂದಿಗೂ ದಾರಿದೀಪವಾಗಿದೆ.

ಲೋಕೋಪಯೋಗಿ ಕಾರ್ಯಗಳಿಂದ ತನ್ನ ಪ್ರಜೆಗಳನ್ನು ಸಂತೋಷಪಡಿಸುವುದು, ಇಲ್ಲವಾದಲ್ಲಿ ತನ್ನ ಆಡಳಿತದಲ್ಲಿ ಅಶಾಂತಿ, ಮನಸ್ತಾಪಗಳಿಗೆ ಅವಕಾಶವಾಗುತ್ತದೆ. ರಾಜನು ನಿಜವಾದ ದೇವನೆಂದು ಪ್ರತಿಬಿಂಬಿಸಬೇಕಾದರೆ ತನ್ನ ಸಾಮ್ರಾಜ್ಯದಲ್ಲಿನ ಎಲ್ಲ ಜನರ ಹಿತ ಕಾಯುವುದೇ ಆಗಿತ್ತು. ಅದಕ್ಕಾಗಿ ಗ್ರಹಣ, ಸಂಧಿ ಕಾಲದಲ್ಲಿ ನಾಡಿನ ಹಿತದೃಷ್ಟಿಯಿಂದ ಯಾವುದೋ ದೇವರ ಅಥವಾ ತಮ್ಮ ಹಿರಿಯರ ಹೆಸರಿನಲ್ಲಿ ಸಮಾಜದ ಹಿತಕಾಯುವ ದೃಷ್ಟಿಯಿಂದ ಸತ್ಕಾರ್ಯಗಳನ್ನು ಕೈಗೊಳ್ಳುವುದು, ಅವುಗಳಲ್ಲಿ ಮುಖ್ಯವಾಗಿ ಕೆರೆಗಳು, ರಸ್ತೆ, ದೇವಾಲಯಗಳ ನಿರ್ಮಾಣ, ಸರ್ವಧರ್ಮಸಮನ್ವಯತೆ ಪಾಲಿಸುವುದಕ್ಕಾಗಿ ಎಲ್ಲ ಧರ್ಮಿಯರನ್ನು ಖುಷಿಗೊಳಿಸುವುದಕ್ಕಾಗಿ ಆರ್ಯ ಧರ್ಮದ ಹೆಸರಿನಲ್ಲಿ ದೇವಾಲಯಗಳನ್ನು ನಿರ್ಮಿಸುವುದು ಅವರ ಮುಖ್ಯ ಕರ್ತವ್ಯಗಳಾಗಿದ್ದವು. ಬರೀ ರಾಜರುಗಳನ್ನು ಅಲ್ಲದೆ, ದಂಡನಾಯಕರು, ರಾಣಿಯರು, ಸಾಮಂತ ಅಧಿಕಾರಿಗಳು ಮತ್ತು ಊರಿನ ಒಡೆಯರು ಇಂತಹ ಅನೇಕ ಜನಪರ ಕಾರ್ಯಗಳನ್ನು ಮಾಡುತ್ತಿದ್ದರು. ಇದರ ಉದ್ದೇಶ ಜನಸಾಮಾನ್ಯರು ತಮ್ಮ ರಾಜನ ಬಗ್ಗೆ ಅಗೌರವ ತೋರಬಾರದು, ನನ್ನನ್ನು ನಂಬಿದ್ದಾರೆ ಆ ನಂಬಿಕೆಯನ್ನು ನಾನು ಉಳಿಸಿಕೊಳ್ಳಬೇಕಾದದ್ದು ನನ್ನ ಪರಮಧರ್ಮವಾಗಿದೆ ಎಂದುಕೊಂಡು ಸಮಯ ಸಂದರ್ಭಕ್ಕೆ ಅನುಗುಣವಾಗಿ ಲೋಕೋಪಯೋಗಿ ಕಾರ್ಯಗಳು ಆಗಾಗ ಮಾಡುತ್ತಲೇ ಬಂದಿದ್ದರು. ರಾಜನು ಮತ್ತು ಆಡಳಿತ ಅಧಿಕಾರಿಗಳು, ಲೋಕದ ಜನ ಸುಖವಾಗಿ ಮತ್ತು ಸಮೃದ್ಧಿಯಾಗಿ ಇರಬೇಕಾದರೆ ಇಂತಹ ಜನಪದ ಕಾರ್ಯಗಳಿಂದ ಸಾಧ್ಯವೆಂದು ಬಗೆದು ಇಂತಹ ಕಾರ್ಯಗಳು ಕೂಡ ಆಡಳಿತದ ಒಂದು ಅವಿಭಾಜ್ಯ ಅಂಗವೆಂದು ತಿಳಿದು ಬೇರೆ ಸಾಮ್ರಾಜ್ಯದ ವಿಸ್ತರಣೆ ಮತ್ತು ಅಭಿವೃದ್ಧಿಗಿಂತ ನಮ್ಮ ಸಾಮ್ರಾಜ್ಯ ಮುಂಚೂಣಿಯಲ್ಲಿರಬೇಕೆಂದು ಅನೇಕ ಕಾರ್ಯಗಳನ್ನು ಕೈಗೊಡಿದ್ದಾರೆ.

ಅಂದಿನ ಆಳರಸರು ಯುದ್ಧ, ಸಾಮ್ರಾಜ್ಯ ವಿಸ್ತರಣೆಯಲ್ಲಿ ಮಾತ್ರವೇ ತೊಡಗದೆ ಅನೇಕ ಜನಹಿತ ಕಾರ್ಯಗಳನ್ನೂ ಮಾಡುತ್ತಿದ್ದರು. ಅವುಗಳಲ್ಲಿ ಕೆರೆ, ಬಾವಿ, ಅನ್ನಸತ್ರ, ಅರವಟ್ಟಿಗೆಗಳ ನಿರ್ಮಾಣ ಇತ್ಯಾದಿಗಳು ಪ್ರಧಾನವಾಗಿದ್ದವು. ಇಂತಹ ಜನೋಪಕಾರಿ ಕಾರ್ಯಗಳನ್ನು ಮಾಡುವುದರಿಂದ ಇಹಪರಗಳೆರಡಗಲ್ಲೂ ಸುಖಪ್ರಾಪ್ತಿಯಾಗುತ್ತದೆ ಎಂದು ಅವರು ನಂಬಿದ್ದರು.

ಕೆರೆಕಟ್ಟೆಬಾವಿಗಳ ನಿರ್ಮಾಣ: ಕೆರೆಕಟ್ಟೆ ಬಾವಿಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ಈ ಭಾಗದಲ್ಲಿ ಹಲವಾರು ಶಾಸನಗಳು ಸಿಕ್ಕುತ್ತವೆ. ಕ್ರಿ.ಶ ೯೭೨ರ ಕರೀಮ್‌ನಗರ ಜಿಲ್ಲೆಯ ಚೊಪ್ಪದಂಡಿ

ಶಾಸನವು ಕೆರೆಯನ್ನು ಕಟ್ಟಿಸಿದುದನ್ನು ಉಲ್ಲೇಖಿಸುತ್ತದೆ. ಇದು ಚಾಲುಕ್ಯ ದೊರೆ ಆಹವಮಲ್ಲ ದೇವನ ಆಳ್ವಿಕೆಯ ಕಾಲದ್ದಾಗಿದೆ. ಬಂಧುಜನರ ಕಲ್ಪವೃಕ್ಷವೆನಿಸಿದ ದುಗ್ಗರಯ್ಯ ಎಂಬುವವನ ಮಗಳು ಆಚಬ್ಬೆ ಎಂಬುವವಳು ಚೊಪ್ಪದಂಡಿಯಲ್ಲಿ ಆಚಬ್ಬೆ ಸಮುದ್ರ ಎಂಬ ಕೆರೆಯನ್ನು ಕಟ್ಟಿಸಿ ಅದಕ್ಕೆ ೭೦ ದ್ರಮ್ಮವನ್ನು ದತ್ತಿಯಾಗಿ ನೀಡಿದಳೆಂದು ಈ ಶಾಸನದಲ್ಲಿ ಉಲ್ಲೇಖಿಸಿದೆ.

ಕಾಲದ ಉಲ್ಲೇಖವಿಲ್ಲದ ಶಾಸನವೊಂದು ತನ್ನ ತಂದೆಯ ಶ್ರೇಯಸ್ಸಿಗಾಗಿ ಕಾಕತೀಯ ಬೇತರಸನು ಹನಮಕೊಂಡದಲ್ಲಿ ವರುಣದೇವರನ್ನು ಪ್ರತಿಷ್ಠೆ ಮಾಡಿಸಿ, ಅದರ ಸೇವೆಗೆ ಕೇಸರಿಸಮುದ್ರ ಮತ್ತು ಸೆಟ್ಟಿಕೆರೆ ಎಂಬ ಎರಡು ಕೆರೆಗಳನ್ನು ನಿರ್ಮಿಸಿ ದತ್ತಿಯಾಗಿ ನೀಡಿದುದನ್ನು ಉಲ್ಲೇಖಿಸಿದೆ (ಕೆ.ಆರ್. ಗಣೇಶ ಮತ್ತು ಆರ್.ಶೇಷಶಾಸ್ತ್ರಿ(ಸಂ), ಆಂಧ್ರಪ್ರದೇಶದ ಕನ್ನಡ ಶಾಸನಗಳು ಭಾಗ-೨, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೫, ಭಾಗ ೨, ೨೦೦೧, ಪು.೫೪). ಇದು ಚಾಲುಕ್ಯ ದೊರೆ ತ್ರಿಭುವನಮಲ್ಲನ ಆಳ್ವಿಕೆಯ ಕಾಲದ್ದಾಗಿದೆ. ಅಂದಿನ ಜನ ತಮ್ಮ ತಂದೆ ತಾಯಿಗಳನ್ನು ಸಾಕ್ಷಾತ್ ದೇವರೆಂದು ಕಾಣುತ್ತಿದ್ದರು. ಅವರ ಶ್ರೇಯಸ್ಸಿಗಾಗಿ ಅವರ ಹೆಸರಿನ ಮೇಲೆ ದೇವಾಲಯ ನಿರ್ಮಾಣ, ಕೆರೆ ಬಾವಿ ತೊಡಿಸುವ ಕಾರ್ಯ ಇತ್ಯಾದಿಗಳನ್ನು ಮಾಡಿಸು ತ್ತಿದ್ದರೆಂದು ತಿಳಿದು ಬರುತ್ತದೆ.

ಕ್ರಿ.ಶ.೧೦೮೮ರ ಶಾಸನವೊಂದು(ಅದೇ, ಪು.೧೦೮ ಪೂರ್ವೋಕ್ತ, ಶಾ.ಸಂ. ೪೦೪, ಪು.೫೨) ತುಂಗಭದ್ರಾ ನದಿಯನ್ನು ದಕ್ಷಿಣಗಂಗೆ ಎಂದು ಉಲ್ಲೇಖಿಸುತ್ತದೆ. ಇದರಿಂದಾಗಿ ತಿಳಿದು ಬರುವುದೇನೆಂದರೆ ದಕ್ಷಿಣ ಭಾರತದ ಈ ಭಾಗಕ್ಕೆ ಉತ್ತರದ ಗಂಗೆಯ ಹಾಗೆ ಅದು ಜನರ ಜೀವನದಿಯಾಗಿತ್ತು ಎಂಬುದು. ಈ ಶಾಸನವು ಚಾಲುಕ್ಯ ದೊರೆ ಆರನೆ ವಿಕ್ರಮಾದಿತ್ಯನ ಕಾಲದ್ದಾಗಿದೆ.

ಕ್ರಿ.ಶ.೧೫೫೭ರ ಕೊಪ್ಪಳ ಜಿಲ್ಲೆಯ ಅಚಲಾಪುರ ಶಾಸನವು(ದೇವರಕೊಂಡಾರೆಡ್ಡಿ ಮತ್ತು ಇತರರು: ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೨, ೧೯೯೯, ಪು.೧೪೬)ಕೆರೆಯೊಂದರ ಜೀರ್ಣೋ ದ್ಧಾರದ ಬಗ್ಗೆ ಹೇಳುತ್ತದೆ. ಇಲ್ಲಿಯ ಜಂಗಮರ ಹಳ್ಳಿಯಲ್ಲಿರುವ ಕೆರೆಯೊಂದು ಒಡೆದು ಹೋಗಿತ್ತು. ರಾಜಕೊಂಡ ಉಪ್ಪಾರ ಮದನಬೋವನ ಮಗ ಕನಕಬೋವ ಮತ್ತು ಯಲಬೋವನ ಮಗ ತಿಮ್ಮಬೋವ ಹಾಗೂ ವೇಮುಲ ತಿಮ್ಮಬೋವನ ಮಗ ಯಲಬೋವ ಇವರು ಸೇರಿ ಆ ಕೆರೆಯನ್ನು ಜೀರ್ಣೋದ್ಧಾರ ಮಾಡುತ್ತಾರೆ. ಇದಕ್ಕಾಗಿ ಆ ಊರಿನ ಗೌಡರಾದ ಕಾಮಣ್ಣಗೌಡ, ಮಲ್ಲಣಗೌಡರೂ ಸೇನಬೋವ ತಿಮ್ಮಣನೂ ಸಮಸ್ತ ಜನರೂ ಸೇರಿ ಇವರಿಗೆ ೧೧ ಕೊಳಗ ಗದ್ದೆ ಮತ್ತು ಒಂದು ವರಹದ ಕೊಡುಗೆಯನ್ನು ನೀಡುತ್ತಾರೆ. ಸಾರ್ವಜನಿಕ ಹಿತಕ್ಕಾಗಿ, ಶಾಶ್ವತ ಪರಿಹಾರಕ್ಕಾಗಿ, ಈ ಕೆರೆಯನ್ನು ದುರುಸ್ತಿ ಮಾಡಿದುದಕ್ಕಾಗಿ

ಈ ಮೇಲಿನ ಕೊಡುಗೆಯನ್ನು ಉಪ್ಪಾರ ಸಮುದಾಯಕ್ಕೆ ನೀಡಿರುವುದು ಇಲ್ಲಿ ಗಮನಿಸಬೇಕಾದ ಅಂಶ(ಅದೇ, ಪು.೧೫೬-೧೫೭).

ತೆಲಂಗಾಣದ ಗಂಗಾಪುರದ ಕ್ರಿ.ಶ.೧೧೧೭ರ ಶಾಸನವು ಭೀಮಸಮುದ್ರ ಕೆರೆಯ ಬಗ್ಗೆ ಉಲ್ಲೇಖಿಸುತ್ತದೆ(ಕ.ವಿ.ಶಾ.ಸಂ.೫, ಭಾಗ-೨, ಪೂರ್ವೋಕ್ತ, ಪು.೧೬೯.) ಈ ಶಾಸನವು ಚಾಲುಕ್ಯ ದೊರೆ ತ್ರಿಭುವನಮಲ್ಲನ ಕಾಲದ್ದಾಗಿದೆ. ಈತನ ಮಹಾಪ್ರಧಾನಾದ ಮಹೇಶ್ವರ ದಂಡನಾಯಕನು ಈ ಭೀಮಸಮುದ್ರವೆಂಬ ಕೆರೆಯ ಕೆಳಗೆ ಇರುವ ಭೂಮಿಯನ್ನು ದೇವರಿಗಾಗಿ, ಅಲ್ಲಿಯ ತಪೋಧನರಿಗಾಗಿ ದತ್ತಿ ಬಿಟ್ಟನೆಂದು ಇದು ತಿಳಿಸುತ್ತದೆ.

ಕ್ರಿ.ಶ.೧೫೨೩ರ ರಾಯಚೂರ ಜಿಲ್ಲೆಯ ಸಿದ್ದರಾಂಪುರ ಶಾಸನವು ತಂದೆತಾಯಿಗಳಿಗೆ ಪುಣ್ಯವಾಗಬೇಕೆಂಬ ಕಾರಣದಿಂದ ಕೆರೆ ಬಾವಿ ಇತ್ಯಾದಿಗಳನ್ನು ನಿರ್ಮಿಸುತ್ತಿದ್ದುದರ ಬಗ್ಗೆ ಸಾಕ್ಷ್ಯ ನುಡಿಯುವಂತಹದು. ಉಉಡಕುಂದಿಯ ಸೇನಬೋವ ಸೋಮರಸನ ಮಕ್ಕಳಾದ ಸಿರಗರಸ, ಸೋಮರಸ ಮತ್ತು ನಾಗರಸರು ತಮ್ಮ ತಂದೆ ಸೋಮರಸ ಮತ್ತು ತಾಯಿ ಕಾಮಂಮನಿಗೆ ಪುಣ್ಯವಾಗಬೇಕೆಂದು ಕೆರೆಯನ್ನು ಕಟ್ಟಿಸುತ್ತಾರೆ. ಶ್ರೀವಿರೂಪಾಕ್ಷ ಮತ್ತು ವಿಠಲದೇವರ ಭಕ್ತನಾದ ನಾಗರಸನು ಅದೇ ಊರಿನಲ್ಲಿ ನೀರಿಗಾಗಿ ಅರವಟ್ಟಿಗೆಯ ಮಂಟಪವನ್ನು ನಿರ್ಮಿಸಿದಂತೆ ಕೂಡ ಈ ಶಾಸನವು ತಿಳಿಸುತ್ತದೆ(ಕ.ವಿ.ಶಾ.ಸಂ.೭, ಪು.೩೭೯).

ವರಂಗಲ್ ಜಿಲ್ಲೆಯ ವರ್ಧಮಾನಪುರಂನ ಕ್ರಿ.ಶ.೧೨೨೯ರ ಶಾಸನವು(ಕ.ವಿ.ಶಾ.ಸಂ. ೫, ಭಾಗ ೨, ಪು.೧೮೨) ವರಂಗಲ್ಲಿನ ದೊರೆ ಕಾಕತೀಯ ಗಣಪತಿಯ ಆಳ್ವಿಕೆಯ ಕಾಲಕ್ಕೆ ಸೇರಿದುದು. ಆ ಕಾಲದ ದೇಮಿಸೆಟ್ಟಿ ಮತ್ತು ವೈದಿಸೆಟ್ಟಿಯರು ಸೇರಿ ಸಕಳೇಶ್ವರ ವೀರಭದ್ರ ಮತ್ತು ಸೋಮನಾಥ ದೇವರನ್ನು ಪ್ರತಿಷ್ಠಾಪಿಸಿ, ಅಲ್ಲಿಯೇ ಸೂರಸಮುದ್ರದ ಪೂರ್ವದಿಕ್ಕಿನಲ್ಲಿ ದೇವರಿಗಾಗಿ ಒಂದು ಕೆರೆಯನ್ನು ಕಟ್ಟಿಸಿದರೆಂದು ಈ ಶಾಸನ ತಿಳಿಸುತ್ತದೆ. ದೇವಾಲಯ ಕಟ್ಟಿ ದೇವರನ್ನು ಪ್ರತಿಷ್ಠಾಪಿಸುವುದು ಎಷ್ಟು ಪುಣ್ಯದ ಕಾರ್ಯವೋ ಹಾಗೆಯೇ ಸಾರ್ವಜನಿಕರಿಗಾಗಿ ಕೆರೆ ಕಟ್ಟಿಸುವುದು ಕೂಡ ಅಷ್ಟೇ ಪುಣ್ಯದ ಕಾರ್ಯವೆಂದು ಅಂದಿನ ಜನರು ಮನಗಂಡಿದ್ದುದನ್ನು ಇಲ್ಲಿ ಕಾಣಬಹುದಾಗಿದೆ.

ಮೆದಕ್ ಜಿಲ್ಲೆಯ ಕೊರಪೋಲು ಶಾಸನವು(ಅದೇ, ಪು. ೨೯೫) ಕೆರೆಯ ಕಾವಲುಗಾರನಿಗೆ ಭೂದತ್ತಿ ನೀಡಿದುದನ್ನು ತಿಳಿಸುತ್ತದೆ. ಚಾಲುಕ್ಯ ದೊರೆ ತ್ರೈಲೋಕ್ಯಮಲ್ಲದೇವನು ರಾಜಭಾರ ಮಾಡುವಾಗ ಈತನ ಮಹಾಮಂಡಳೇಶ್ವರನಾದ ಪಂಪಪೆರ್ಮಾನಡಿಯು ಅಲ್ಲಿಯ ಸೋಮಸಮುದ್ರ, ತಾಮರೆಗೆರೆ ಮತ್ತು ಊರುಣ್ಣುವ ಕೆರೆಗಳನ್ನು ನೋಡಿಕೊಳುತ್ತಿದ್ದ ವೀಸದ್ದ ಬೋವ ಎಂಬುವವನಿಗೆ ಅದೇ ಕೆರೆಯ ಕೆಳಗೆ ಭೂದತ್ತಿಯನ್ನು ನೀಡಿದ್ದನ್ನು ತಿಳಿಸುತ್ತದೆ. ಎಂದರೆ ಕೆರೆ ಕಟ್ಟಿಸುವುದು ಅಷ್ಟೇ ಅಲ್ಲ, ಅದನ್ನು ಸಂರಕ್ಷಣೆ ಮಾಡುವುದು ಕೂಡ ಅಂದಿನವರಿಗೆ ಅಷ್ಟೇ ಪ್ರಧಾನವಾಗಿತ್ತು.

ಇಲ್ಲಿ ಕೆರೆಗಳು ಎರಡು ಉಕ್ತವಾಗಿರುವುದರಿಂದ ಒಂದು ದೇವರ ಪೂಜೆ ಪುನಸ್ಕಾರಗಳಿಗಾಗಿ ಇನ್ನೊಂದು ಊರಿನ ಸಾರ್ವಜನಿಕರಿಗಾಗಿ ಇದ್ದವು ಎಂಬುದು ಅರಿವಿಗೆ ಬರುತ್ತದೆ. ಈ ಶಾಸನದ ಸಂಬಂಧದಲ್ಲಿ ಗಮನಿಸಬೇಕಾದ ಅಂಶವೊಂದಿದೆ. ಈ ಶಾಸನ ಪಠ್ಯದ ಪ್ರಕಾರ "ಆರುಣ್ಬ ಕೆಱೆ" ಎಂದಿದೆ; ಆದರೆ ಸಂಪಾದಕರ ಪೀಠಿಕೆಯಲ್ಲಿ ಕನ್ನಡ ಭಾಗದಲ್ಲಿ "ಊರುಣ್ಬ ಕೆರೆ" ಎಂದು ಇಂಗ್ಲೀಷಿನಲ್ಲಿ "Urunta Kere" ಎಂದೂ ಇದೆ.

ಇವುಗಳ ಪೈಕಿ 'ಊರುಂಟ' ಎಂಬುದು ಮುದ್ರಣದೋಷವಿರಬೇಕು; ಸರಿಯಾದ ರೂಪವಲ್ಲ. 'ಊರುಣ್ಬ' ಎಂಬುದು ಊರವರು ಉಣ್ಣುವ ಎಂಬ ಅರ್ಥದಲ್ಲಿ ಸರಿಯಾದ ರೂಪವಾಗಿ ತೋರುತ್ತದೆ. ಆದರೆ ಪಠ್ಯದಲ್ಲಿ 'ಆರುಣ್ಬ' ಇದೆ. 'ಆರ್' ಎಂದರೆ ನದಿ (ಸಣ್ಣ ಹೊಳೆ), ಅದರಿಂದ ತುಂಬಿಕೊಳ್ಳುವ ಕೆರೆ ಎಂಬ ಅರ್ಥ ಹೆಚ್ಚು ಉಚಿತವಾದುದೆನಿಸುತ್ತದೆ. ನದಿಗೆ ಅಡ್ಡಗಟ್ಟೆ ಕಟ್ಟಿ, ಅದರಿಂದ ಕೆರೆಗಳನ್ನು ನಿರ್ಮಿಸುತ್ತಿದ್ದ ಪ್ರಕ್ರಿಯೆಯನ್ನು ಇಲ್ಲಿ ಗಮನಿಸಬಹುದು. ಇದೇ ರೀತಿಯಾದ ಕೆಲಸವನ್ನು ಜಯಸಿಂಹನು ಮಾಡಿದುದರ ಉಲ್ಲೇಖವು ಆತನ ತಳಂಗೆರೆ ಶಾಸನದಲ್ಲಿ ಬಂದಿರುವುದನ್ನು ಇಲ್ಲಿ ನೆನೆಯಬಹುದು(ಅದೇ, ಪು.೫೨)

ತೆಲಂಗಾಣದ ಕರೀಂನಗರ ಜಿಲ್ಲೆಯ ಕುರ್ಕ್ಯಾಲ ಶಾಸನವು(ಕ.ವಿ.ಶಾ.ಸಂ.೫, ಭಾಗ-೨, ಪೂರ್ವೋಕ್ತ, ಪು.೧೭೪) ಕನ್ನಡ ಸಾಹಿತ್ಯ ಚರಿತ್ರೆಗೆ ಅತ್ಯಮೂಲ್ಯವಾದುದು. ಈ ಶಾಸನದಲ್ಲಿ ಕನ್ನಡದ ಆದಿಕವಿ ಪಂಪನ ತಮ್ಮ ಜಿನವಲ್ಲಭನು ತನ್ನ ಅಣ್ಣನ ಬಿರುದಾದ 'ಕವಿತಾಗುಣಾರ್ಣವ' ಎಂಬುದನ್ನು ನೆನಪಿನಲ್ಲುಳಿಸುವಂತೆ ಕವಿತಾಗುಣಾರ್ಣ್ಣ ವವೆಂಬ ಕೆರೆಯನ್ನು ಕಟ್ಟಿಸಿದನೆಂದು ಉಲ್ಲೇಖಿಸಲಾಗಿದೆ. ವೃಷಭಗಿರಿಯ ಮೇಲೆ ತಾನು ಪ್ರತಿಷ್ಠಾಪಿಸಿದ ತನ್ನ ಆರಾಧ್ಯ ಜಿನಬಿಂಬಗಳ ಪೂಜಾದಿ ಸೇವಾಕಾರ್ಯಗಳಿಗಾಗಿ ಬರುವ ಮುನಿಗಳು, ಶ್ರಾವಕರು ಮುಂತಾದವರ ಸೌಕರ್ಯಕ್ಕಾಗಿ ಈ ಕೆರೆಯನ್ನು ಆತ ಕಟ್ಟಿಸಿದ್ದಾನೆ. ಇಂದು ಆ ಕೆರೆ ಇಲ್ಲವಾದರೂ, ಅದರ ಕುರುಹಾದರೂ ಕಂಡುಬರುತ್ತದೆ.

ಕ್ರಿ.ಶ.೧೧೦೮೫ರ ರಾಯಚೂರ ಜಿಲ್ಲೆಯ ಸಾಲಗುಂದೆ ಶಾಸನವು(ಕ.ವಿ.ಶಾ.ಸಂ.೭, ಪೂರ್ವೋಕ್ತ, ಪು. ೩೫೨) ಚಾಲುಕ್ಯ ದೊರೆ ತ್ರಿಭುವನಮಲ್ಲನ ಆಳ್ವಿಕೆಯನ್ನು ಸೂಚಿಸುತ್ತದೆ. ಈತನ ದಂಡಾಧೀಶ ನಾಗದೇವ. ಈತನು ಸಾಲಗುಂದೆಯಲ್ಲಿ ಬಾವಿ, ಕೆರೆ, ಪೊಕ್ಕರಣೆಗಳನ್ನು ಕಟ್ಟಿಸಿದನೆಂದು ಇದರಲ್ಲಿ ಉಲ್ಲೇಖಿಸಿದೆ.

ಕಾಲದ ಉಲ್ಲೇಖವಿಲ್ಲದ ರಾಯಚೂರು ಜಿಲ್ಲೆಯ ಮಸ್ಕಿ ಶಾಸನವು ಶಾಂತರಸನು ಅಲ್ಲಿ ಕಟ್ಟಿಸಿದ ಬಾವಿಯು ಸುರನದಿಗೆ ಸಮಾನವಾಗಿತ್ತೆಂದು ಹೇಳುತ್ತದೆ. ಅಲ್ಲಿನ ವಿವರ ಹೀಗಿದೆ:

ಸುರನದಿಗೆಣೆಯೆನಿಸುವ ಪು ।
ಷ್ಕರಣಿಯನಖಿಳೋರ್ವ್ವಿಗೆಸೆದ ಕಾಟಿಂಗಲ್ಲೊಳ್ ॥
ಪರಹಿತ ವಿನೋದನಾಶ್ರಿತ ।
ಸುರತರು ಸಾನ್ತರಸನತಿಸಯಂ ಕಟ್ಟಿಸಿದಂ ॥
ಸುರನದಿ ಕಾಟಿಂಗಲ್ಲಿಂ ।
ಗಿರದವತರಿಸಿಬ್ದುದಖಿಳ ತೀರ್ತ್ಥಂಗಳು ಬಂ ॥
ದಿರದೆ ನೆಲಸಿಬ್ದುದೆನೆ ಸಾಂ ।
ತರಸಂ ಕಟ್ಟಿಸಿನ ಬಾವಿ ಕಣ್ಗೆಸೆದಿರ್ಕ್ಕುಂ ॥
ಧರೆಯೊಳಗೀ ಧರ್ಮ್ಮಮನು
ದ್ಧರಿಸುವರಾರೆಂದು ನೋರ್ಪ್ಪ ನೋಟಕ ಜನಕ
ಚ್ಚರಿಯೆನೆ ಕಟ್ಟಿಸಿದಂ ಸಾಂ
ತರಸಂ ಬಾವಿಯನಪೂರ್ವ್ವರಚನೋಕ್ತಿಗಳಿಂ ॥
ಪಸಿದರಿಗನ್ನವನಿಕ್ಕುವ
ಪಸುವಿಂಗೊ(ಲಿ)ದೊಳ್ಪಿನಿಂದೆ ಧರ್ಮ್ಮೇತವನೆ
ತ್ತಿಸುವಾ ದಾನಗುಣಂ ಧರೆ
ಗಸದಳಮೆನಿಸಿದುದು ಸಾನ್ತಿವರ್ಮ್ಮಾಗ್ರಣಿಯಾ॥

ಅವನು ಕಟ್ಟಿಸಿದ ಪುಷ್ಕರಿಣಿಯು ಸುರನದಿಗೆ ಸಮಾನವಾಗಿ ಪವಿತ್ರವಾದುದಾಗಿತ್ತು. ದೇವಲೋಕದ ಅಖಿಲ ತೀರ್ಥಗಳೂ ಅಲ್ಲಿ ಬಂದು ನೆಲಸಿದ್ದವು. ಧರೆಯಲ್ಲಿ ಧರ್ಮವನ್ನು ಉದ್ಧರಿಸುವವರು ಯಾರು ಎಂದು ಕುತೂಹಲದಿಂದ ನೋಡುವ ಜನರ ಕಣ್ಣಿಗೆ ಆಶ್ಚರ್ಯವನ್ನುಂಟುಮಾಡುವಂತೆ ಕಲಾತ್ಮಕವಾಗಿ ನಿರ್ಮಿತವಾಗಿತ್ತು ಆ ಬಾವಿ ಎಂಬುದಾಗಿ ಆತನು ಕಟ್ಟಿಸಿದ ಆ ಪುಷ್ಕರಿಣಿ/ಬಾವಿಯನ್ನು ಕವಿಯು ಮನದುಂಬಿ ಹೊಗಳಿದ್ದಾನೆ. ಇಂತಹ ಪುಣ್ಯಕಾರ್ಯವನ್ನು ಮಾಡಿದ ಪುಣ್ಯವಂತ ಈ ಶಾಂತರಸ. ಪರರಿಗೆ ಅನ್ನ ಹಾಕವುದು ಪಶುಗಳಿಗೆ 'ಧರ್ಮೇತ'ವನ್ನು ಎತ್ತಿಸುವುದು ಅವನ ದಾನಗುಣಕ್ಕೆ ಪ್ರತ್ಯಕ್ಷ ಸಾಕ್ಷಿಗಳು. ಇಲ್ಲಿ 'ಧರ್ಮೇತ' ಎಂಬ ಶಬ್ದ ಗಮನಾರ್ಹ. ದನಕರುಗಳು ಕುಡಿಯುವ ಸಲುವಾಗಿ, ಧರ್ಮಕ್ಕಾಗಿ, ಏತವನ್ನು ಎತ್ತಿಸುವ ಸಂಪ್ರಾದಾಯವು ಇಲ್ಲಿ ಉಲ್ಲೇಖಿತವಾಗಿದೆ. ಇದೊಂದು ಅಪರೂಪದ ಮಾಹಿತಿ. ಸಾಂಸ್ಕೃತಿಕ ದೃಷ್ಟಿಯಿಂದ ಬಹು ಮುಖ್ಯವಾದ ಒಂದು ಅಂಶ. ಏತ ಎತ್ತಿಸುವುದು ಸಾಮಾನ್ಯವಾಗಿ ಕೃಷಿಗಾಗಿ ಮಾತ್ರ. ಇಲ್ಲಿ ದನಕರುಗಳಿಗಾಗಿ ಅದನ್ನು ಆಗಾಗ್ಗೆ ಎತ್ತಿಸುತ್ತಿದ್ದ ಉಲ್ಲೇಖವಿದೆ.

ಕಲಬುರ್ಗಿ ಜಿಲ್ಲೆಯ ಸುರಪುರ ತಾಲೂಕಿನ ಶಾಸನಗಳಲ್ಲಿಯು(ಹನುಮಾಕ್ಷಿ ಗೋಗಿ: ಸುರಪುರ ತಾಲೂಕಿನ ಶಾಸನಗಳು, ಶಾಸನ ಸಂಖ್ಯೆ ೮, ೯, ೧೧, ೧೯, ೨೬, ೪೬, ೮೩, ೮೫, ೯೦ ೧೯೯೫, ಪು) ಅನೇಕ ಕಡೆ ಕೆರೆಗಳ ಉಲ್ಲೇಖ ಬಂದಿದೆ. ಅವುಗಳಲ್ಲಿ ಅಣ್ಣ ಗಾಮಂಡನಕೆರೆ, ದಂಡನಾಯಕನ ಕೆರೆ, ಅಣ್ಣಗೊಂಡನ ಕೆರೆ, ಅಣ್ಣಮಕೆರೆ, ಮಗಿಯ ಕೆರೆ, ಬಸವನ ಕೆರೆ, ಉಪ್ಪಿನ ಕೆರೆ, ಕಳ್ಳಗೆರೆ, ಸಂಕನ ಕೆರೆ ಇತ್ಯಾದಿ ಕೆರೆಗಳನ್ನು ಅಂದಿನ ಆಳರಸರು ಜನಪರ ಕಾರ್ಯಗಳ ಹಿನ್ನೆಲೆಯಲ್ಲಿ ಕಟ್ಟಿಸಿ, ಅವುಗಳನ್ನು ಹಾಗೆ ಸಂರಕ್ಷಿಸಿಕೊಂಡು ಬಂದಿದ್ದರೆಂದು ತಿಳಿದುಬರುತ್ತದೆ.

ಹೀಗಾಗಿ ಕೆರೆ, ಬಾವಿ, ಪುಷ್ಕರಣಿಗಳನ್ನು ಕಟ್ಟುವಿಕೆಯು ಒಂದು ಧರ್ಮವೆಂದು ಬಗೆದು, ಅಂದಿನವರು ಅವುಗಳಿಗಾಗಿಯೇ ದಾನದತ್ತಿಗಳನ್ನು ನೀಡುತ್ತಿದ್ದರೆಂದು ಶಾಸನಗಳಿಂದ ತಿಳಿಯಬಹುದಾಗಿದೆ.

ಛತ್ರದ ವ್ಯವಸ್ಥೆ: ಅನ್ನಸತ್ರಗಳು, ಅರವಟ್ಟಿಗೆಗಳು ಅಂದಿನ ಪ್ರಯಾಣಿಕರಿಗೆ, ಯಾತ್ರಿಕರಿಗೆ ಸೌಲಭ್ಯ ಕಲ್ಪಿಸುವ ಪ್ರಮುಖ ವ್ಯವಸ್ಥೆಗಳಾಗಿದ್ದವು. ದಾರಿಹೋಕರಿಗೆ ನೀರುಣಿಸುವುದು, ಅನ್ನನೀಡುವುದು, ವಸತಿ ಒದಗಿಸುವುದು ಇವುಗಳ ಪ್ರಧಾನ ಕಾರ್ಯವಾಗಿತ್ತು.

ಅಂದಿನ ಆಳರಸರು ತಪೋಧನರಿಗಾಗಿ, ವಿದ್ಯಾರ್ಥಿಗಳಿಗಾಗಿ, ಬ್ರಾಹ್ಮಣರಿಗಾಗಿ, ಪ್ರಯಾಣಿಕರಿಗಾಗಿ ಮತ್ತು ಸಾರ್ವಜನಿಕರಿಗಾಗಿ ಛತ್ರದ ವ್ಯವಸ್ಥೆಯನ್ನು ಮಾಡುತ್ತಿದ್ದರು. ಅವುಗಳ ನಿರ್ವಹಣೆಗಾಗಿ ಉದಾರವಾಗಿ ದಾನದತ್ತಿಗಳನ್ನು ನೀಡುತ್ತಿದ್ದರೆಂದು ಅನೇಕ ಶಾಸನಗಳು ಉಲ್ಲೇಖಿಸುತ್ತವೆ. ಅಂದು 'ಅನ್ನದಾನ'ವು ಪ್ರಧಾನ ದಾನಗಳಲ್ಲೊಂದಾಗಿತ್ತು. ಈಗಿನಂತೆ ಅನ್ನವನ್ನು ಮಾರುವ ವ್ಯವಸ್ಥೆ ಅಂದು ಇರಲಿಲ್ಲ. ಇಂತಹ ಛತ್ರಗಳ ನಿರ್ಮಾಣ, ನಿರ್ವಹಣೆಗಳಿಗಾಗಿ ರಾಜಮಹಾರಾಜರೇ ಮುಂತಾದವರು ಮಾತ್ರವಲ್ಲದೆ ಜನ ಸಾಮಾನ್ಯರೂ ದಾನದತ್ತಿಗಳನ್ನು ನೀಡುತ್ತಿದ್ದರೆಂದು ತಿಳಿದುಬರುತ್ತದೆ. ಚಿದಾನಂದ ಮೂರ್ತಿಯವರು ಹೇಳುವಂತೆ "ಅತಿಥಿಸತ್ಕಾರದ ವಿಸ್ತೃತರೂಪವೇ ಸತ್ರ, ಭೂದಾನ ವಿದ್ಯಾದಾನ ಗಳಿಗಿಂತ ಅನ್ನದಾನವೇ ಶ್ರೇಷ್ಠ ಎಂದು ಜನರು ನಂಬಿದರು. .... ಸತ್ರಗಳು ಬಹುಮಟ್ಟಿಗೆ ದೇವಸ್ಥಾನಗಳ ಅಥವಾ ಮಠಗಳ ಅಂಗಗಳಾಗಿದ್ದುವು" (ಎಂ.ಚಿದಾನಂದಮೂರ್ತಿ: ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೧೯೭೯, ಪು. ೪೪೭)

ತೆಲಂಗಾಣದ ಮಹಬೂಬ್‌ನಗರ ಜಿಲ್ಲೆಯ ಮಲ್ಲೇಶ್ವರಂ ಶಾಸನವು(ಕ.ವಿ.ಶಾ.ಸಂ.೫, ಭಾಗ–೨, ಪೂರ್ವೋಕ್ತ, ಪು.೧೭೪) ಚಾಲುಕ್ಯ ದೊರೆ ತ್ರೈಲೋಕ್ಯಮಲ್ಲದೇವನ ಮಹಾಮಂಡಳೇಶ್ವರನಾದ ಕುಮಾರ ವಿಜಯಾದಿತ್ಯ ಮತ್ತು ಮೈಳಲದೇವಿ ಇವರು ಕೂಡಿ ಅಗಸ್ತ್ಯೇಶ್ವರ ಛತ್ರಕ್ಕೆ

ಕಂಡೂರುನಾಡಿನ ವಡ್ಡವಣೆ ೫೦೦ರ ಕಂಪಣ ಇಟ್ಟಪ ೯೦ರ ಬಳಿಯ ಎರಡು ಗ್ರಾಮಗಳನ್ನು ಸರ್ವ್ವಬಾಧಾಪರಿಹಾರವಾಗಿ ದಾನನೀಡಿದು ದನ್ನು ತಿಳಿಸುತ್ತದೆ.

ಕ್ರಿ.ಶ.೧೦೮೮ರ ನಲ್ಗೊಂಡ ಜಿಲ್ಲೆಯ ಕೊಳ್ಳಿಪಾಕೆಯ ಶಾಸನವು(ಅದೇ, ಪು.೨೨೧) ಕಲ್ಯಾಣ ಚಾಲುಕ್ಯ ದೊರೆ ತ್ರಿಭುವನಮಲ್ಲನ ಆಳ್ವಿಕೆಯ ಕಾಲದ್ದು. ಈತನ ಮಹಾಮಂಡಳೇಶ್ವರನಾದ ಕಂದೂರ ತೊಂಡರಸ ಚೋಳ ಮಹಾರಾಜನು ಕೊಳ್ಳಿಪಾಕೆ ೭೦೦೦ವನ್ನು ಆಳುತ್ತಿರುವಲ್ಲಿ ಅಲ್ಲಿ ಓದುವ ವಿದ್ಯಾರ್ಥಿಗಳಾಗಿ ಮತ್ತು ಅಲ್ಲಿಯ ಸತ್ರದ ನಿರ್ವಹಣೆಗಾಗಿ ಸ್ವಲ್ಪ ಭೂಮಿಯನ್ನು ತಳವೃತ್ತಿಯಾಗಿ ಸರ್ವನಮಸ್ಯವಾಗಿ ದಾನ ನೀಡಿದನೆಂದು ಇದರಲ್ಲಿ ಹೇಳಲಾಗಿದೆ.

ಕ್ರಿ.ಶ.೧೦೧೮ರ ರಾಯಚೂರ ಜಿಲ್ಲೆಯ ಮಸ್ಕಿ ಶಾಸನವು(ಕ.ವಿ.ಶಾ.ಸಂ. ೭, ಪೂರ್ವೋಕ್ತ, ಪು.೧೬೮)ಚಾಳುಕ್ಯ ದೊರೆ ಜಗದೇಕಮಲ್ಲನು ಆಳುತ್ತಿರುವಾಗ, ಮೊಸಂಗಿಯ ವುಪಸೆಟ್ಟಿಯ ಮಗ ಪೋತಿಸೆಟ್ಟಿಯು ಅಲ್ಲಿಯ ಮೂಲಸ್ಥಾನ ದೇವಾಲಯದ ತಪೋಧನರಿಗಾಗಿ ಮತ್ತು ಬ್ರಾಹ್ಮಣ ಛತ್ರಕ್ಕಾಗಿ ಮೂವತ್ತೈದು ಮತ್ತರು ಭೂಮಿಯನ್ನು ದತ್ತಿಬಿಟ್ಟನೆಂದು ತಿಳಿಸುತ್ತದೆ. ಇದರಿಂದ ದೊರೆಗಳಲ್ಲದೆ ಸಾಮಾನ್ಯ ಜನರೂ ಕೂಡ ಅನ್ನಛತ್ರಕ್ಕಾಗಿ ಭೂದತ್ತಿ ನೀಡುತ್ತಿದ್ದರೆಂದು ತಿಳಿಯುತ್ತದೆ.

ಕ್ರಿ.ಶ.೧೦೭೭ರ ಯಾದಗಿರಿ ಜಿಲ್ಲೆಯ ಏವೂರು ಶಾಸನವು(ಸುರಪುರ ತಾಲೂಕಿನ ಶಾಸನಗಳು, ಪೂರ್ವೋಕ್ತ, ಪು.೨೬)ಕಲ್ಯಾಣಿ ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದ್ದಾಗಿದೆ. ಇದರಲ್ಲಿ ಈತನ ಮಹಾಪ್ರಧಾನನಾದ ಹೇರಿಲಾಳ ಸಂಧಿವಿಗ್ರಹಿ ದಂಡನಾಯಕ ರವಿಯಣ್ಣಭಟ್ಟರ ಬಿನ್ನಪದ ಮೇರೆಗೆ ಅಲ್ಲಿಯ ಓದುವ ಕೇಳ್ವ ವಿದ್ಯಾರ್ಥಿ ಮತ್ತು ತಪೋಧನರ ಸತ್ರಕ್ಕಾಗಿ ಮೂವತ್ತು ಮತ್ತರು ಭೂದಾನ ನೀಡಿದ ಉಲ್ಲೇಖವಿದೆ.

ಸ್ತ್ರೀಯರಲ್ಲಿಯೂ ಅನೇಕರು ಸಮಾಜ ಪರ ಕಾರ್ಯಗಳಲ್ಲಿ ನಿರತರಾಗಿದ್ದರೆಂದು ಕ್ರಿ.ಶ. ೧೧೨೭ರ ಕೊಪ್ಪಳದ ಕುಕ್ಕನೂರಿನ ಶಾಸವೊಂದರಿಂದ(ಕ.ವಿ.ಶಾ.ಸಂ.೨, ಪೂರ್ವೋಕ್ತ, ಪು. ೨೦೧)ತಿಳಿದುಬರುತ್ತದೆ. ಚಾಳುಕ್ಯ ದೊರೆ ಆರನೆ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದಲ್ಲಿ ಗಂಗಾಧರಯ್ಯ ನಾಯಕನ ಮಗಳಾದ ಕಾಮಿಯಕ್ಕಳು ಹೆಗ್ಗೆರೆಯ ಎರೆ ಭೂಮಿಯಲ್ಲಿ ಅಲ್ಲಿಯ ಸತ್ರಕ್ಕಾಗಿ ಎರಡು ಮತ್ತರು ಭೂದಾನ ಮಾಡಿದಳೆಂದು ತಿಳಿಸಿದೆ.

ಹೀಗೆ ಅಂದಿನ ಕಾಲದಲ್ಲಿ ಛತ್ರಗಳಿಗೆ ಉದಾರವಾದ ದಾನದತ್ತಿಗಳು ರಾಜರು ಮತ್ತು ಜನಸಾಮಾನ್ಯರಿಂದಲೂ ಹರಿದುಬರುತ್ತಿತ್ತು. ಅದು ಅಷ್ಟೇ ಸದ್ವಿನಿಯೋಗ ವಾಗುತ್ತಿತ್ತು. ಆದರೆ ಇಂದೂ ಕೂಡ ಅನೇಕ ಕಡೆಗಳಲ್ಲಿ ಸತ್ರ ಅಥವಾ ಛತ್ರಗಳು ಇವೆ. ಇವು ಅಂದಿನ 'ಸತ್ರ'ಗಳ ಪಳೆಯುಳಿಕೆಗಳೇ ಆಗಿದ್ದರೂ ಇಂದಿನ ಇವುಗಳ ರೂಪ ರೇಷಗಳೇ ಬೇರೆಯಾಗಿದೆ. ಇಂದು

ಊಟದ ವ್ಯವಸ್ಥೆಯಿರುವುದಿಲ್ಲ. ಕೇವಲ ವಸತಿ ಸೌಲಭ್ಯ ಮಾತ್ರ ಸಿಕ್ಕಬಹುದು. ಮದುವೆ ಮುಂತಾದ ಸಮಾರಂಭಗಳಿಗಾಗಿ ಕೂಡ ಇಂತಹವನ್ನು ಬಾಡಿಗೆಗೆ ನೀಡುವ ವ್ಯವಸ್ಥೆ ಇಂದಿನದು.

ಶ್ರೇಣೀಕೃತ ಸಮಾಜದ ವ್ಯವಸ್ಥೆಯಲ್ಲಿ ಪ್ರಾಚೀನ ಕಾಲದಿಂದಲೂ ಆತನು ಪಡೆದ ಸ್ಥಾನ ಬಲದಿಂದಲೋ, ಅಧಿಕಾರ ಬಲದಿಂದಲೋ, ವಿದ್ವತ್ತಿನ ಬಲದಿಂದಲೋ, ಸಂಪತ್ತಿನ ಬಲದಿಂದಲೋ ಈ ಸಮಾಜದಲ್ಲಿ ಅನೇಕ ವರ್ಗಗಳು ಇರುವುದನ್ನು ಕಂಡುಬರುತ್ತದೆ. ಪ್ರಾಚೀನ ಕಾಲದ ವರ್ಣಾಶ್ರಮ ಪದ್ಧತಿಯಂತೆ, ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬಂತೆ ರಾಜಕೀಯ ಆಡಳಿತ ವ್ಯವಸ್ಥೆಯಲ್ಲಿಯೂ ಅಲ್ಲಿನ ಸಾಮಾಜಿಕ ಸ್ತರಗಳು ಹೇಗಿದ್ದವು ಎಂಬುದನ್ನು ಶಾಸನಗಳಲ್ಲಿ ಕಂಡುಬರುತ್ತದೆ. ಅವುಗಳನ್ನು ಈ ಕೆಳಕಂಡತೆ ಮೂರು ಭಾಗಗಳಾಗಿ ವಿಂಗಡಿಸಬಹುದು.

೧. **ಆಡಳಿತ ವರ್ಗ:** ಈ ಆಡಳಿತವರ್ಗದಲ್ಲಿ ರಾಜ, ರಾಣಿ, ಯುವರಾಜ, ದಂಡಾಧಿಕಾರಿಗಳು, ಮಹಾಪ್ರಧಾನ, ಸಾಮಂತರು ಗ್ರಾಮೀಣ ಭಾಗದಲ್ಲಿ ಗೌಡರು, ರಾಜನು ಯಾವುದೇ ಜಾತಿಯವನಾಗಲಿ, ಆತನು ಅಧಿಕಾರದ ಬಲದಿಂದಾಗಿ, ಸಮಾಜದ ಶ್ರೇಷ್ಠ ವರ್ಗಕ್ಕೆ ಆತ ಆತನ ಪರಿವಾರ ವರ್ಗದವರು ಮತ್ತು ಆತನ ಅಧೀನ ಅಧಿಕಾರಿಗಳು ಇಲ್ಲಿ 'ರಾಜಾಜ್ಞೆ' ಅಂದಿನ ಸರ್ವೋಚ್ಚ ನ್ಯಾಯಾಲಯ, ನ್ಯಾಯಾಧೀಶ, ದಂಡಾಧಿಕಾರಿ, ಸಂರಕ್ಷಕ ಎಲ್ಲ ಕಾರ್ಯಗಳು, ಹಕ್ಕುಗಳು ಆತನಲ್ಲಿ ಕೇಂದ್ರಿಕೃತವಾಗಿದ್ದವು. ಪ್ರಭುವರ್ಗವೇ ನಾಡಿನ ಆಗು–ಹೋಗುಗಳ ಮಾಲೀಕತ್ವ ಹೊಂದಿದ್ದರು.

೨. **ಮಹಾಜನರು:** ಇವರು ಸಮಾಜದ ಉಚ್ಚಸ್ಥಾನದಲ್ಲಿದ್ದರು. ಒಂದು ಸಲ ರಾಜನೂ ಕೂಡ ಇವರ ಮಾತು ಮೀರುವಂತಿರಲಿಲ್ಲ. ಇವರೆಲ್ಲ ರಾಜಗುರುಗಳು, ರಾಜಪುರೋಹಿತರು. ಇವರು ಶಕ್ತಿಬಲಕ್ಕಿಂತಲೂ ಜ್ಞಾನಬಲದಿಂದ ಸಮಾಜದ ಮೇಲೆ ತಮ್ಮ ನಿಯಂತ್ರಣ ಸಾಧಿಸಿದರು. ಇವರಿಗೆ ರಾಜನಿಂದ ಉದಾರವಾದ ದಾನ–ದತ್ತಿ ನೀಡಲ್ಪಡುತ್ತಿತ್ತು. ಇವರು ರಾಜನಿಗೆ ಒಳ್ಳೆಯದಾಗಲಿ ಎಂದು ಯಜ್ಞ–ಹವನ ಮಾಡುವುದು, ದೇವಾಲಯದ ಆಡಳಿತ ನಡೆಸುವುದು, ವಿದ್ಯದಾನ ಮಾಡುವುದು ಇತ್ಯಾದಿ ಊರಿನ ಹಿತ ಕಾಪಾಡುವಲ್ಲಿ ಇವರ ತಪೋನಿರತರಾಗಿರುತ್ತಿದ್ದರು. ಈ ವರ್ಗಕ್ಕೆ ಯಾವ ವರ್ಗದಿಂದಲೂ ಭಾದೆ ಇರಲಿಲ್ಲ. ಇವರು ಸಮಾಜದಲ್ಲಿ ಪೂಜ್ಯನೀಯರಾಗಿ ದ್ದರು. ಒಂದು ರೀತಿಯಲ್ಲಿ ಪ್ರಭುವರ್ಗದ ಮೇಲೆ ಮತ್ತು ಇನ್ನುಳಿದ ವರ್ಗದ ಮೇಲೆ ತಮ್ಮ ನಿಯಂತ್ರ ಸಾಧಿಸಿದರೆಂದು ಅನೇಕ ತಿಳಿಸುತ್ತವೆ.

೩. **ಶ್ರಮಿಕ ವರ್ಗ:** ಸಮಾಜದಲ್ಲಿ ವಿವಿಧ ವೃತ್ತಿಗಳನ್ನಾಶ್ರಯಿಸಿದ ಬಹುಸಂಖ್ಯಾ ಸಮೂಹವೇ ಈ ಶ್ರಮಿಕ ವರ್ಗ. ಈ ವರ್ಗದ ಜನ ತಮಗೆ ಸರಿದೂರಿದ ಇಲ್ಲವೇ ತಮ್ಮ ವಂಶಪರಂಪರೆಯಾಗಿ ಬಂದ ವೃತ್ತಿ ಕೈಗೊಂಡು ಅನೇಕ ಜನಸಮುದಾಯ ಸಮಾಜದಲ್ಲಿ ನೆಲೆಸಿದ್ದರು. ತೆಲ್ಲಿಗ,

ಟಂಕಸಾಲಿಗ, ಕಂಚುಗಾರ, ಮಾಲೆಗಾರ, ಓಲೆಕಾರ, ಬಣಂಜಗ, ನಗರರು, ತಂಬುಲಿಗರು, ಕಲ್ಲೋಜರು, ಕಲ್ಲುಕುಟಿಕರು, ಕಾವಲುಗಾರರು, ಸಿಂಪಿಗರು, ಚಮ್ಮಾರರು, ಬಡಿಗ, ಕುಂಬಾರಿಕೆ, ವಿಶ್ವಕರ್ಮರು, ಗೋವು ಸಾಲೆಯವರು, ಕಮ್ಮಾರ ಅಂಕಸಾಲಿಗ, ಒಕ್ಕಲಿಗ, ಅಗಸ, ನಾವಿಂದ, ಬೋಗಾರ, ಜೇಡರು ಮುಂತಾದವರನ್ನು ಶಾಸನಗಳು ಉಲ್ಲೇಖಿಸಿವೆ.

ಶ್ರಮಿಕವರ್ಗದವರಿಗೆ ಅವರ ಕುಲವೃತ್ತಿಯಿಂದಲೇ ವಂಶಪರಂಪಾರಿಕವಾಗಿ ಬಂದವುಗಳಾಗಿದ್ದವು. ಊರಿನ ತಳವಾರಿಕೆಯು ಇದು ಅವರ ವಂಶಪರಂಪರವಾಗಿ ಬಂದ ವೃತ್ತಿಯಾಗಿದೆ. ಊರಿನ ಸಂರಕ್ಷಣೆಯೇ ಇವರ ಮೂಲ ಕರ್ತವ್ಯ. ಊರಿನ ಗಾವುಂಡರಿಂದಲೋ ಅಲ್ಲಿಯ ಮಹಾಜನಗಳಿಂದಲೋ ಆ ಪ್ರಾಂತಾಧಿಕಾರಿಯಿಂದಲೂ ವೃತ್ತಿಯನ್ನು ಪಡೆದು ತನ್ನ ವೃತ್ತಿ ಜೀವನ ನಡೆಸುತ್ತಿದ್ದರು ಮತ್ತು ವ್ಯಾಪಾರಿಗಳು ದೊರೆಯನ್ನು ಬಿಟ್ಟರೇ ಇವರೆ ಶ್ರೀಮಂತರಾಗಿದ್ದರೆಂದು ಹೇಳಬಹುದು. ಇವರು ಸಾಮಾಜಿಕವಾಗಿ ಆರ್ಥಿಕವಾಗಿ ಮೇಲಸ್ತರದಲ್ಲಿದ್ದರೆಂದು ತಿಳಿದುಬರುತ್ತದೆ. ಇವರು ಐಯಾವೊಳೆ, ಬಣಂಜ, ನಖರರು ಕೇಣಿ ಮುಮ್ಮದಂಡ ಗೌಡಸ್ವಾಮಿ ಇತ್ಯಾದಿಯಾಗಿ ಶಾಸನಗಳಲ್ಲಿ ಇವರನ್ನು ಹೆಸರಿಸಲಾಗಿದೆ. ತೆಲಿಂಗರು ತಮ್ಮ ಪಾರಂಪರಿಕವಾಗಿ ಬಂದ ಗಾಣದಿಂದ ಎಣ್ಣೆ ತೆಗೆಯುವುದು ಮತ್ತು ದನ್ನು ಮಾರಾಟ ಮಾಡುವುದು ಇವರ ಕಾಯಕವಾಗಿತ್ತು. ತಂಬುಲಿಗರು ಇವರು ವೀಳ್ಯದೆಲೆಯನ್ನು ಬೆಳೆಸುವುದು, ಅಡಿಕೆ ಬೆಳೆಸುವುದು ಮತ್ತು ಅವುಗಳ ಮಾರಾಟ ಮಾಡುವುದು ನಾವಿಂದರು ಇವರು ಯಾವಾಗಲೂ ಎಲ್ಲರಿಗೂ ಬೇಕಾದವರು ಇವರಿಗೆ ದೊರೆ, ಸಾಮಂತರರು ಭೂದತ್ತಿ ನೀಡಿದರೆಂದು ಶಾಸನಗಳು ಉಲ್ಲೇಖಿಸುತ್ತವೆ.

ಜಾತಿ ವ್ಯವಸ್ಥೆ

ಅನಾದಿ ಕಾಲದಿಂದಲ್ಲೂ ಮಾನವನಲ್ಲಿ ಮೇಲು-ಕೀಳು ಎಂಬ ಭಾವ ಬಂದದ್ದು ನಿಶ್ಚಿತ ನೆಲೆ ನಿಂತ ಮೇಲೆ ಎಂದು ಹೇಳಬಹುದು. ಆತನ ಬುದ್ಧಿ ವಿಕಾಸ ಆದಂತೆಲ್ಲ ಆತನಲ್ಲಿ ಸಹಜವಾಗಿಯೇ ಕುಲ, ಜಾತಿ, ಲಿಂಗ, ವೃತ್ತಿ, ಬಣ್ಣ, ತಾರತಮ್ಯಗಳು ಮೊಳಕೆಯೊಡೆದವು. ಅವು ಮುಂದೆ ಬರುಬರುತ್ತಾ, ಹೆಮ್ಮರವಾಗಿ ಬೆಳೆದು ನಿಂತವು. ನಾಗರಿಕತೆ ಪ್ರಬಲವಾಗುತ್ತಿದ್ದಂತೆ ಆತನಲ್ಲಿ ಶ್ರೇಷ್ಠ-ಕನಿಷ್ಠ ಎಂಬ ಪ್ರಜ್ಞೆ ಮೂಡಲಾರಂಭಿಸಿತು. ಈ ಪ್ರಜ್ಞೆಯೇ ಎಲ್ಲ ಸಾಮಾಜಿಕ ನೆಲೆಗಳಿಗೆ ವ್ಯಾಪಿಸಿತ್ತು. ಅವುಗಳಲ್ಲಿ ಮುಖ್ಯವಾಗಿ ಆಯಾ ಜನ ತನ್ನ ಬದುಕಿನ ಹುಡುಕಾಟದಲ್ಲಿ ತನ್ನ ದಕ್ಕಿದ ಕೆಲಸ ಕೈಗೊಂಡನು, ಅದುವೇ ಆತನಿಗೆ ಇಷ್ಟವಾಯಿತು. ಅದು ಸಹಜವೋ-ಅನಿವಾರ್ಯವೋ ತಿಳಿಯದು.

ಸಮಾಜದಲ್ಲಿ ಜೀವಿಸಬೇಕದಾರೆ, ತನ್ನ ಶಕ್ತಿ ಸಾಮರ್ಥ್ಯಕ್ಕೆ ತಕ್ಕ ಅಥವಾ ಲಭಿಸಿದ ಅಥವಾ ಕಷ್ಟಪಟ್ಟು ರೂಢಿಸಿಕೊಂಡ ಕೆಲಸವೇ ಆತನಿಗೆ ಜೀವನಕ್ಕೆ ಆಶ್ರಯವಾಯಿತು. ಇದುವೇ

ಬರುಬರುತ್ತಾ ಆತನ ಪ್ರೀತಿಯ ಕಾರ್ಯಕ್ಷೇತ್ರವಾಯಿತು. ಆಯಾ ಜನ ತಾವು ಕೈಗೊಂಡ ಕ್ರಿಯೆಗಳ ಕೆಲಸಗಳೇ ಅವು ಅವರಿಗೆ ಮಾರಕವಾಗಿ ಅವರ ಕುಲ(ಸಮೂಹ)ಕಸುಬುಗಳೇ ಅವರಿಗೆ ಒಂದೊಂದು ಜಾತಿ ಚೌಕಟ್ಟನ್ನು ಸೃಷ್ಟಿ ಮಾಡಿದವು. ಅಂದಿನ ವೃತ್ತಿ ಆಧಾರಿತ ಸಮುದಾಯಕ್ಕೆ ಒಂದು ಹೆಸರನ್ನು ನೀಡಲಾಯಿತು. ಉದಾಹರಣೆ ದನಕಾಯುವವರು, ಕುರಿ ಕಾಯುವವರು, ಹಟ್ಟಿಯಲ್ಲಿ ವಾಸಿಸುವವರು, ಮಲೆಯಲ್ಲಿ ವಾಸಿಸುವವರು ಇವರಿಗೆ ಕ್ರಮವಾಗಿ ಧನಗಾರರು, ಕುರುಬರು, ಹಟ್ಟಿಕಾರರು, ಮಲೆವಾಸಿಗರು ಎಂದು ಅನಾಮಧೇಯ ಶಕ್ತಿ ಇವರಿಗೆ ಜಾತಿ ಸಂಕೋಲೆಯಲ್ಲಿ ಬಂಧಿಸಿಬಿಟ್ಟಿತು. ನಿಶ್ಚಿತ ನೆಲೆಯಲ್ಲಿ ನಿಲ್ಲದೇ ಸಂಚಾರಿ ಸಮುದಾಯವನ್ನು ಅಲೆಮಾರಿ ಜನಾಂಗದವರು ಎಂದು ಮೂಲತಃ ಎಲ್ಲರೂ ಗುಡ್ಡಗಾಡು ಗುಹಾಲಯಗಳಲ್ಲಿ ವಾಸಿಸಿದವರೇ ಆಗಿದ್ದರೂ ಯಾರು ಮೊದಲು ಒಂದು ನಿಶ್ಚಿತ ನೆಲೆ ನಿಂತೋ ಅವರೇ ಒಂದು ತಮ್ಮದೇ ಒಂದು ಗುಂಪು ನಿರ್ಮಿಸಿಕೊಂಡರೋ ಅವರೇ ಮೊದಲು ನಾಗರಿಕರಾದರು. ಯಾರು ಹೀಗೆ ಕಾಡು–ಮೇಡು ಅಲೆಯುತ್ತಿದ್ದರೋ ಅವರು ತಡವಾಗಿ ನೆಲೆ ನಿಂತರು. ಮೊದಲು ನೆಲೆ ಕಂಡವರು ಅವರು ಶ್ರೇಷ್ಠ ಕುಲ/ಜಾತಿವರಾದರು, ತದನಂತರವಾಗಿ ತಮ್ಮ ಹತ್ತಿರಕ್ಕೆ ಬಂದವರನ್ನು ಕನಿಷ್ಠರೆಂದು ಪಟ್ಟಕಟ್ಟಿ ಅವರನ್ನು ಒಂದು ನಿರ್ದಿಷ್ಟ ಜಾತಿಗೆ ನೂಕಲಾಯಿತು. ಅಂದಿನಿಂದ ಅವರು ಈ ಹಿಂದೆ ನಂಬಿದ ಕಾರ್ಯವನ್ನು ಮಾಡಿಕೊಂಡು ಇಲ್ಲವೇ ಈ ಮೊದಲೇ ನೆಲೆನಿಂತವರು ಇನರನ್ನು ಅಂತಹ ಕಾರ್ಯವನ್ನು ಮಾಡುವಂತೆ ಪ್ರೇರೇಪಿಸಿ ಅವರನ್ನು ಅವರ ಕಾರ್ಯದಲ್ಲಿರುವಂತೆ ನೋಡಿಕೊಂಡು ಅವರ ಮೇಲೆ ಸವಾರಿ ಮಾಡಿ, ತಾವೇ ಶ್ರೇಷ್ಠ ಕುಲದವರು, ನೀವು ಕನಿಷ್ಠಕುಲದವರೆಂದು ಪಟ್ಟ ಕಟ್ಟಿದರು.

ಪ್ರತಿಯೊಂದು ಜಾತಿಗೂ ತನ್ನದೇ ಆದ ಒಂದು ಕುಲಗೌರವ ಇರುತ್ತದೆ. ಅಲ್ಲದೇ ಒಂದು ಚೌಕಟ್ಟು, ಬದ್ಧತೆ ಇರುತ್ತದೆ. ಮಾನವನ ಉಗಮ ವಿಕಾಸ ಸಿದ್ಧಾಂತ ನೋಡಿದಾಗ ಎಲ್ಲ ಮನುಜರು ಸಮವಾಗಿ ಹಂತಹಂತವಾಗಿ ವಿಕಾಸ ಹೊಂದಿದರು. ಆರಂಭದಲ್ಲಿ ಮಾನವ ಜಾತಿ ಮರದ ಬೇರುಗಳು ಒಂದೇಡೆಯಲ್ಲಿಯೇ ಇದ್ದವು. ಕಾಲಾನುಕ್ರಮದಲ್ಲಿ ಆತ ಮರದ ಕಾಯಿ ಒಣಗಿಸಿ ಅದು ಬೇರೆ ಸ್ಥಳದಲ್ಲಿ ನಾಟಿ ಮಾಡಿ ಬೆಳೆದು ಕಾಯಿ ನೀಡಲು ಆರಂಭಿಸಿದಾಗ ಅದು ತನ್ನ ಮೂಲ ತಾಯಿ ಮರವನ್ನೇ ಮರೆತು ನಾನು ಸ್ವತಂತ್ರವೆಂದು ಭಾವಿಸಿಕೊಳ್ಳ ಲಾರಂಭಿಸಿತು. ಹೀಗಾಗಿ ಮೂಲ ಮರದ ಕಾಯಿಯೇ ಬೇರೆ, ಇದರಿಂದಲೇ ಒಂದು ಕಾಲದಲ್ಲಿ ಬೇರ್ಪಟ್ಟು ಬೇರೆಡೆ ಹೆಮ್ಮರವಾಗಿ ಬೆಳೆದು ಭಿನ್ನ ಮರವೆಂದು ಹೇಳಿಕೊಂಡು ತನ್ನದೇ ಆದ ಬದುಕನ್ನು ಕಟ್ಟಿಕೊಂಡು ಬದುಕಲಾರಂಭಿಸಿತ್ತು. ಇದರಿಂದ ಅನೇಕ ಕಾಯಿಗಳು ಯಾವುದೋ ಭೌಗೋಳಿಕ ವಾತಾವರಣಕ್ಕೆ ಸಿಲುಕಿ ಬೇರೆಡೆಯಲ್ಲಿ ನೆಲೆ ನಿಂತವು. ಮೂಲದಲ್ಲಿ ಒಂದೇ

ಆಗಿದ್ದರೂ ಕಾಲಾಂತರದಲ್ಲಿ ನೀನು ಬೇರೆ ನಾನು ಬೇರೆ ಎಂಬ ಭಾವ ಹುಟ್ಟಿ ಭಿನ್ನ ಜಾತಿಗಳಿಗೆ ಪ್ರೇರಕರವಾಯಿತು. ಅಂತಹ ಬೇರೆ ಬೇರೆ ಪ್ರದೇಶಗಳಲ್ಲಿ ನೆಲೆ ನಿಂತ ಜನಸಮುದಾಯ ಅಲ್ಲಿನ ಭೌಗೋಲಿಕ ಹವಾಮಾನಕ್ಕೆ ತಕ್ಕ ಉಡುಗೆ-ತೊಡುಗೆ ಆಚಾರ-ವಿಚಾರ, ಊಟ-ಉಪಚಾರ ಭಿನ್ನವೇ ಆಗುವುದು ಸಹಜ. ಹೀಗಾಗಿ ಭಿನ್ನ ನೆಲೆ ಭಿನ್ನ ಜಾತಿಗಳು ಹುಟ್ಟಲಿಕ್ಕೆ ಕಾರಣವಾದವು. ಆದರೆ ಇಂದಿನ ಆಧುನಿಕ ಜಗತ್ತಿನಲ್ಲಿ ಎಲ್ಲರೂ ಒಂದೇ ಊರಿನಲ್ಲಿ ನೆಲೆಸಿದ್ದರೂ ಈ ಹಿಂದಿನ ಜಾತಿ ವಾಸನೇ ಇನ್ನೂ ಹಾಗೆ ನೆಲೆಯೂರಿ ನಿಂತಿದೆ. ಅವರು ಕೈಗೊಂಡ 'ವೃತ್ತಿ' ಆಧಾರದ ಮೇಲೆ ಅವರಿಗೆ ಅದೇ ಜಾತಿ ಪಟ್ಟ ಕಟ್ಟುವುದು ಇಂದಿನ ಆಧುನಿಕ ಸಮಾಜದ ನೀತಿಯಾಗಿದೆ.

ಕಷ್ಟದ ಕಾಲದಲ್ಲಿ ಯಾರಿಗೂ ಜಾತಿ, ಧರ್ಮ ಅಡ್ಡ ಬರುವುದಿಲ್ಲ. ಸುಖದ ಕಾಲದಲ್ಲಿ ಮಾತ್ರ ತಮ್ಮ ಜಾತಿ-ಕುಲ ಪ್ರತಿಷ್ಠೆಯಾಗಿ ಮೇರೆಯುತ್ತದೆ. ಭೂಕಂಪ, ಪ್ರವಾಹ ಇತ್ಯಾದಿಗಳಿಂದ ತಮಗೆ ಇನ್ನೆನ್ನು ಉಳಿಗಾಲವೇ ಇಲ್ಲವೆಂದು ನಿಶ್ಚಿತವಾದಾಗ ಎಲ್ಲರೂ ತಮ್ಮ ವೈಯಕ್ತಿಕ ಜಾತಿ, ಭೇದ ಮರೆತು ಒಂದಾಗಿ ತಮ್ಮ ಬದುಕಿಗಾಗಿ ಎಲ್ಲರೂ ಒಟ್ಟುಗೂಡಿ ಹೋರಾಟ ಮಾಡುತ್ತಾರೆ. ಮತ್ತೆ ಹೋರಾಟ ಮುಗಿದ ಮೇಲೆ ಮತ್ತೆ ಅದೇ ಜಾತಿ ತಾರತಮ್ಯದ ಆಟ ಶುರು ಆಗುತ್ತದೆ. ಇಂತಹ ಅನೇಕ ಜಾತಿಗಳ ಉಲ್ಲೇಖ ನಮ್ಮ ಶಾಸನಗಳು, ಸಾಹಿತ್ಯ ಕೃತಿಗಳಲ್ಲಿ ದಾಖಲಿಸುತ್ತವೆ.

ಜಾತಿ ವ್ಯವಸ್ಥೆಯು ಅಂದಿನ ಸಮಾಜದ ಒಂದು ಪ್ರಧಾನ ಲಕ್ಷಣವಾಗಿತ್ತು. ಮೂಲತ: ವೃತ್ತಿಗಳ ಆಧಾರದ ಮೇಲೆ ಇದು ರೂಪಿತವಾಗಿದ್ದರೂ ಬರುಬರುತ್ತಾ ಹುಟ್ಟಿನ ಆಧಾರದ ಮೇಲೆ ಪರಿಗಣಿತವಾಗುತ್ತಾ ಬಂತು. ಹೀಗೆ ಹುಟ್ಟಿನಿಂದ ಈ ವರ್ಗೀಕರಣ ನಡೆದರೂ ಸಾಮಾನ್ಯವಾಗಿ ಒಂದೊಂದು ಜಾತಿಗೂ ಅದರದರ ವೃತ್ತಿಯೇ ಪ್ರಧಾನ ಲಕ್ಷಣವಾಗಿ, ಜೀವನೋಪಾಯವಾಗಿ ಉಳಿದು ಬಂದಿತ್ತು. ಅಂದಿನ ಈ ವ್ಯವಸ್ಥೆಯ ಚಿತ್ರಣ ಶಾಸನಗಳಲ್ಲಿ ಬಹಳಷ್ಟು ಕಡೆ ಪ್ರತ್ಯಕ್ಷವಾಗಿಯೂ ಪರೋಕ್ಷವಾಗಿಯೂ ಉಲ್ಲೇಖಿತವಾಗುತ್ತ ಬಂದಿದೆ.

ಬ್ರಾಹ್ಮಣರು ಪ್ರಾಚೀನ ಕಾಲದಿಂದಲೂ ಉಚ್ಚಸ್ಥಾನದಲ್ಲಿದ್ದವರು. ರಾಜನನ್ನು ಬಿಟ್ಟರೆ ಇವರೇ ಶ್ರೇಷ್ಠರು, ಇಡೀ ಸಮುದಾಯಕ್ಕೆ ಪೂಜ್ಯನೀಯರು. ಇವರು ಷಟ್ಕರ್ಮನಿರತರಾಗಿದ್ದರು. ಎಂದರೆ ಯಜನ (ಯಜ್ಞಮಾಡುವುದು) ಯಾಜನ (ಯಜ್ಞ ಮಾಡಿಸುವುದು), ಅಧ್ಯಯನ (ಓದುವುದು), ಅಧ್ಯಾಪನ (ಓದಿಸುವುದು), ದಾನ (ಕೊಡುವುದು) ಮತ್ತು ಪ್ರತಿಗ್ರಹ (ದಾನವನ್ನು ಸ್ವೀಕರಿಸುವುದು) ಇವುಗಳು ಇವರ ಪ್ರಧಾನ ಕರ್ಮಗಳಾಗಿದ್ದವು. ಇದಕ್ಕಾಗಿ ಇವರಿಗೆ ಅನೇಕ ಕಡೆ ಸರ್ವನಮಸ್ಯವಾಗಿ ಅಗ್ರಹಾರಗಳನ್ನು ನೀಡಿದ್ದುದನ್ನು ಅನೇಕ ಶಾಸನಗಳು ಉಲ್ಲೇಖಿಸುತ್ತವೆ. 'ಅಗ್ರ' ಎಂದರೆ 'ಶ್ರೇಷ್ಠ' 'ಆಹಾರ' ಎಂದರೆ 'ಸ್ಥಳ', ಅಂದರೆ 'ಶ್ರೇಷ್ಠರಿಗಾಗಿ' ನೀಡಿದ 'ಸ್ಥಳಗಳೇ'

'ಅಗ್ರಹಾರ'ಗಳು. ಇಂತಹ ಅಗ್ರಹಾರಗಳಲ್ಲಿ ವೇದ, ಶಾಸ್ತ್ರಗಳ ಪಠಣ, ವಿದ್ಯಾಭ್ಯಾಸ, ಧಾರ್ಮಿಕ ಪರ ಚಟುವಟಿಕೆಗಳು ಇತ್ಯಾದಿಯಾಗಿ ಸಮಾಜೋದ್ಧಾರದ ಕಾರ್ಯಗಳು ನಡೆಯುತ್ತಿದ್ದವು. ಇಂತಹ ಅಗ್ರಹಾರಗಳಿಗೆ ಅಂದಿನ ಆಳರಸರು ಮತ್ತು ಸಾಮಾನ್ಯ ಜನರು ಉದಾರವಾಗಿ ದಾನದತ್ತಿಗಳ ರೂಪದಲ್ಲಿ ಭೂಮಿಯನ್ನೋ ಆ ಒಂದು ಪ್ರಾಂತವನ್ನೋ ನೀಡುತ್ತಿದ್ದರು.

ಕಲ್ಬುರ್ಗಿ ಜಿಲ್ಲೆಯ ಮುದನೂರಿನ ಕ್ರಿ.ಶ. ೧೧೪೨ರ ಶಾಸನವೊಂದು(ಸುರಪುರ ತಾಲೂಕಿನ ಶಾಸನಗಳು, ಪೂರ್ವೋಕ್ತ, ಪು.೧೪೭)ಅಲ್ಲಿನ ಬ್ರಾಹ್ಮಣರ ಬಗ್ಗೆ ಹೀಗೆ ಉಲ್ಲೇಖಿಸುತ್ತದೆ: "ಯಮನಿಯಮ ಸ್ವಾಧ್ಯಾಯಧ್ಯಾನ ಧಾರಣ ಮೌನಾನುಷ್ಠಾನ ಜಪ ಸಮಾಧಿ ಸೀಳಗುಣ ಸಂಪನ್ನರುಂ ಸಮಸ್ತ ವಿದ್ವಜ್ಜನ ಪ್ರಸಂನ್ನರುಂ ಯಜನ ಯಾಜನಾಧ್ಯಯನಾಧ್ಯಾಪನ ದಾನ ಪ್ರತಿಗ್ರಹ ಷಟ್ಕರ್ಮ ನಿರತರೌಪಾಸನಾಗ್ನಿಹೋತ್ರ ದ್ವಿಜಗುರುದೇವಪೂಜಾತತ್ಪರರನೇಕ ಯಜ್ಞಾವಭೃತಾವಗಾಹನಪವಿತ್ರೀಕ್ರಿತ ಶರೀರರುಂ ಮಾರ್ತಾಂಡೋಜ್ವಳ ಕೀರ್ತಿಯುತರನೇಕ ತರ್ಕ್ಕ ವ್ಯಾಕರಣ ಕಾವ್ಯ ನಾಟಕ ವೇದಾನ್ತ ಸಿದ್ಧಾಂತಾಭಿಜ್ಞರುಂ ಸಕಳಕಳಾಸರ್ವಜ್ಞರನೇಕ ಲೋಕಾಲೋಕ ಪರಮ ಪರಂಜ್ಯೋತಿರ್ಮ್ಮಯಾಂ ತರ್ಗ್ಗತ ಶರೀರಯುಕ್ತರುಂ ಸದಾಶಿವಭಕ್ತರುಮಪ್ಪ ಶ್ರೀಮದಗ್ರಹಾರಂ ಮುದಿನೀರೂರೊಡೆಯ ಪ್ರಮುಖಾಶೇಷಮಹಾಜನಂಗಳ ...." ಇಂತಹ ವಿವರಣೆಯು ಹಲವಾರು ಶಾಸನಗಳಲ್ಲಿ ಕಂಡುಬರುತ್ತದೆ. ಇದು ಬ್ರಾಹ್ಮಣರ ಕಾರ್ಯಗಳ ವಿಸ್ತೃತ ವಿವರಣೆಯಾಗಿದೆ.

ಕ್ಷತ್ರಿಯರು ರಾಜ್ಯ ಪರಿಪಾಲನೆಯಲ್ಲಿಯೂ ವೈಶ್ಯರು ವ್ಯಾಪಾರದಲ್ಲಿಯೂ ಶೂದ್ರರು ವ್ಯವಸಾಯಾದಿ ವೃತ್ತಿಗಳಲ್ಲಿಯೂ ನಿರತರಾಗಿದ್ದದು ತಿಳಿದ ವಿಚಾರವೇ. ಇಂತಹವರಿಗೆ ಸಂಬಂಧಿಸಿದಂತೆ ಹಲವು ಶಾಸನಗಳಲ್ಲಿ ಆಧಾರಗಳನ್ನು ಕಾಣಬಹುದು.

ಈ ಮೇಲ್ಕಾಣಿಸಿದ ಪ್ರಮುಖ ಜಾತಿಗಳಲ್ಲದೆ ಇತರ ಜಾತಿಗಳಾದ ಪಂಚಮ ವರ್ಗ ವೆಂಬೊಂದನ್ನು ಕೊಪ್ಪಳ ಜಿಲ್ಲೆಯ ಕಲ್ಲೂರ ಶಾಸನವು(ಕ.ವಿ.ಶಾ.ಸಂ. ೨, ಪೂರ್ವೋಕ್ತ, ಪು. ೧೬೬)ಉಲ್ಲೇಖಿಸಿದೆ.

ಇದೇ ಜಿಲ್ಲೆಯ ಆನೆಗೊಂದಿ ತಾಮ್ರ ಶಾಸನವು ಕುಂಬಾರ ಮತದ ಹುಟ್ಟುವಿಕೆಯ ಬಗ್ಗೆ ವಿಸ್ತಾರವಾಗಿ ನಿರೂಪಿಸುತ್ತದೆ(ಅದೇ, ಪು.೩೨೬-೩೩೦) ಕಾಲದ ಉಲ್ಲೇಖವಿಲ್ಲದ ಈ ಶಾಸನವು ಕುಂಬಾರ ಸಮುದಾಯವು ಗಿರಿಜೆಯ ವಂಶಸ್ಥರೆಂದೂ, ಶಿವನು ಅವರಿಗೆ ಭಾವನಾಗಬೇಕೆಂದೂ ಹೇಳುತ್ತದೆ. ಇದನ್ನು ನಿರೂಪಿಸಲು ಸುಂದರವಾಗಿ ಒಂದು ಕತೆಯನ್ನು ನಿರೂಪಿಸಲಾಗಿದೆ. ಈ ಶಾಸನದ ಆರಂಭವು ಸ್ವಸ್ತಿಶ್ರೀಮತು ಕುಂಬೇಸ್ವರದೇವರ ಶ್ರೀಪಾದಪದ್ಮಾರಾಧಕರುಮಪ್ಪ ಐಸಾವಂತರ ಪ್ರಸಸ್ತಿಯೆಂತೆದಡೆ............"ಎಂದು ಆರಂಭವಾಗುತ್ತದೆ. ಮತದ ಮೂಲದ ಹಿರಿಮೆಯನ್ನು ಎತ್ತಿ ಹಿಡಿಯುವುದು ಇಂತಹ ಶಾಸನಗಳ ಪ್ರಧಾನ ಲಕ್ಷಣ.

ಕ್ರಿ.ಶ.೧೫೨೦ರ ಗಿಣಿಗೇರಿ ವಿಶ್ವಕರ್ಮ ಮಠದ ತಾಮ್ರಶಾಸನವು(ಅದೇ, ಪು.೧೩೭–೧೪೦)ವಿಜಯನಗರದ ದೊರೆ ಕೃಷ್ಣದೇವರಾಯನ ಮಂಡಳೇಶ್ವರನಾದ ಬಂಗಾರು ತಿಮ್ಮರಾಜನನ್ನು ಉಲ್ಲೇಖಿಸಿದೆ. ಇದು ವಿಶ್ವಕರ್ಮರ ಜಾತಿಗೆ ಸೇರಿದ ಶಾಸನವಾಗಿದ್ದು, ಇದರಲ್ಲಿ ಪಾಂಚಾಳರ ಎರಡು ಪೀಠಗಳ ಮಧ್ಯೆ ನಡೆದ ವ್ಯಾಜ್ಯವೊಂದರ ವಿವರಣೆಯಿದೆ. ಆನೆಗೊಂದಿಪೀಠ ಮತ್ತು ಅಂತರವಳ್ಳಿಯ ಮೂರು ಜಾವದಯ್ಯನ ಪೀಠ ಈ ಎರಡೂ ಪೀಠಗಳ ಜನರಲ್ಲಿ ಯಾವ ಪೀಠ ಮೇಲು ಎಂಬುವುದರ ಬಗ್ಗೆ ವಾದ ನಡೆದು ಕೊನೆಯಲ್ಲಿ ಅಲ್ಲಿಯ ತ್ರಿಮತಸ್ಥ ಬ್ರಾಹ್ಮಣರು ರಾಜ ಮತ್ತು ಇತರರು ಸಭೆ ಸೇರಿ ಪೀಠಕ್ಕೆ ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿ ಆನೆಗೊಂದಿ ಪೀಠವೇ ಮೂಲ ಪೀಠವೆಂದು ತೀರ್ಮಾನಿಸಿ, ಅಂತರವಳ್ಳಿಯ ಪೀಠದವರಿಗೆ ದಂಡ ವಿಧಿಸುತ್ತಾರೆ. ಇನ್ನು ಮುಂದೆ ಆನೆಗೊಂದಿ ಪೀಠವೇ ಶ್ರೇಷ್ಠ ಮತ್ತು ದಂಡ, ದೋಷ, ಬಹಿಷ್ಕಾರ ಮುಂತಾದವು ಗಳನ್ನು ವಿಧಿಸುವ ಅಧಿಕಾರವುಳ್ಳದ್ದಾಗಿದೆಯೆಂದು ನಿರ್ಣಯಿಸುತ್ತಾರೆ. ಮಠಗಳು ಸಮಾಜದ ಮೇಲೆ ಹೊಂದಿದ್ದ ಹಿಡಿತವನ್ನು ಇಲ್ಲಿ ಗಮನಿಸಬಹುದು. ಒಂದೊಂದು ಮತದವರಿಗೂ ಒಂದೊಂದು ಮಠ ಅದರ ಅಧಿಪತಿಗಳು ಇದ್ದು, ಅವರು ಆಯಾ ಮಠದ ಕಟ್ಟುಪಾಡುಗಳನ್ನು ಅದರ ಸದಸ್ಯರು ಸರಿಯಾಗಿ ಪಾಲಿಸುವಂತೆ ನೋಡಿಕೊಳ್ಳುತ್ತಿದ್ದರು. ಅದನ್ನು ಮೀರಿದವರಿಗೆ, ಮುರಿದವರಿಗೆ ದಂಡವಿಧಿಸುವುದು, ಬಹಿಷ್ಕಾರ ಹಾಕುವುದು ಅವರ ಕೈಯಲ್ಲಿತ್ತು ಎಂಬ ಗಮನಾರ್ಹ ಅಂಶ ಇದರಲ್ಲಿ ಸ್ಪಷ್ಟವಾಗಿ ಕಂಡುಬರುತ್ತದೆ.

ಜಾತಿಗಳಲ್ಲಿ ಹಲವಾರು ಒಳಪಂಗಡಗಳಿದ್ದುದು ಇನ್ನೊಂದು ಪ್ರಮುಖ ಅಂಶ ಇಂತಹವರ ಪೈಕಿ ಉಪ್ಪಾರು(ಅದೇ, ಪು.೧೫೬) ಬಳಂಜಿಗರು(ಅದೇ, ಪು.೨೮೨), ತೆಲ್ಲಿಗರು(ಅದೇ, ಪು.೨೮೨) ಕುರುಬರು(ಅದೇ, ಪು.೨೮೩) ನಾವಿಂದರು(ಅದೇ, ಪು.೨೮೬) ವಾಲ್ಮೀಕಿ ಧರ್ಮ(ಅದೇ, ಪು) ಇತ್ಯಾದಿ ಜಾತಿಗಳವರು ಇದ್ದರೆಂದು ಈ ಪ್ರದೇಶದ ಶಾಸನಗಳಿಂದ ತಿಳಿದುಬರುತ್ತದೆ.

ಸಮಾಜದಲ್ಲಿ ಸ್ತ್ರೀಯರ ಸ್ಥಾನ

ಒಂದು ಕುಟುಂಬದ ಬೆಳವಣಿಗೆಯಲ್ಲಿ ಪುರುಷರಷ್ಟೇ ಸ್ತ್ರೀಯರ ಪಾತ್ರ ಪ್ರಾಮುಖ್ಯತೆ ಪಡೆದುಕೊಂಡಿದೆ. ಹಾಗೆಯೇ ಒಂದು ನಾಡು, ರಾಷ್ಟ್ರ ಪ್ರಗತಿಹೊಂದಬೇಕಾದರೆ ಅಲ್ಲಿ ಮಹಿಳೆಯರ ಪಾತ್ರ ಅತೀ ಮುಖ್ಯವಾಗಿರುತ್ತದೆ. ಪ್ರಾಚೀನ ಕಾಲದಲ್ಲಿಯೂ ಮಹಿಳೆಯರಿಗೆ ಇದ್ದ ಸ್ಥಾನಮಾನಗಳ ಬಗ್ಗೆ ಶಾಸನಗಳು ಉಲ್ಲೇಖಿಸುತ್ತವೆ. ಉದಾಹರಣೆಗೆ ನೋಡುವುದಾದರೆ ಶಾತವಾಹನರ ರಾಣಿಯರು ಸ್ವತಃ ಶಾಸನಗಳನ್ನು ಹಾಕಿಸಿದರೆನ್ನಲಾಗಿದೆ. ಅದರಲ್ಲಿ ಅವರು ನೀಡಿದ ದಾನದತ್ತಿಗಳು ಮತ್ತು

ಅವರು ನಿರ್ಮಿಸಿದ ಚೈತ್ಯಾಲಯಗಳು, ವಿಹಾರ ಹಾಗೂ ಶಿಲಾಮೂರ್ತಿಗಳ ರಚನೆಗಳ ಕುರಿತಾಗಿ ಮತ್ತು ಬೌದ್ಧ ಸಂಘಗಳಿಗೆ ಅವರು ನೀಡಿದ ದಾನದ ವಿವರಗಳು ಮುಖ್ಯವಾಗುತ್ತವೆ. ಶಾತವಾಹನರ ರಾಣಿ ಗೌತಮಿ, ಬಾಲಶ್ರೀ ಬನವಾಸಿಯ ಚುಟುಕುಲಾನಂದ ರಾಜಕುಮಾರಿ ಶಿವಸ್ಕಂದ ನಾಗಾಶ್ರೀ ಅಲ್ಲದೇ ಇಕ್ಷ್ವಾಕು ಮನೆತನದ ರಾಣಿಯರು ನಾಗಾರ್ಜುನ ಕೊಂಡದಲ್ಲಿ ಹಲವಾರು ಕಟ್ಟಡಗಳನ್ನು ನಿರ್ಮಿಸಿದರೆಂದು ತಿಳಿದುಬರುತ್ತದೆ.

ಪ್ರಾಚೀನ ಕಾಲದಿಂದಲೂ ಸ್ತ್ರೀಯರಿಗೆ ಸಮಾಜದಲ್ಲಿ ಒಂದು ಪ್ರಮುಖ ಸ್ಥಾನವಿದೆ. ಒಂದು ಕುಟುಂಬದ ಕಣ್ಣುಗಳೆಂದರೆ ಗಂಡು-ಹೆಣ್ಣು. ಇವರು ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಸಂಸಾರ ನೌಕೆಯು ಸಾಗಬೇಕಾದರೆ ಸ್ತ್ರೀ ಮತ್ತು ಪುರುಷರು ಎರಡು ಗಾಲಿಗಳಿದ್ದಂತೆ. ಸ್ತ್ರೀಯು ಮಗಳಾಗಿ, ಮಡದಿಯಾಗಿ, ಸೊಸೆಯಾಗಿ, ಅತ್ತೆಯಾಗಿ, ಕೊನೆಗೆ ಮನೆಗೆ ಹಿರಿಯ ಅಜ್ಜಿಯಾಗಿ ಹೀಗೆ ಕುಟುಂಬದ ನಾನಾ ಸ್ತರಗಳಲ್ಲಿ ತನ್ನದೇ ಆದ ಸ್ಥಾನಗಳನ್ನು ನಿರ್ವಹಿಸುತ್ತಾಳೆ. ಯಾವ ಸಮಾಜವು ಸ್ತ್ರೀಯನ್ನು ಗೌರವದಿಂದ ಕಾಣುತ್ತದೆಯೋ ಅಲ್ಲಿ ದೇವತೆ ನೆಲೆಸಿರುತ್ತಾಳಂತೆ; ಇದು ಪೂರ್ವಜರ ಅಭಿಪ್ರಾಯ ಇದು ಸರಿಯೂ ಹೌದು.

ನಮ್ಮ ಶಾಸನಗಳಲ್ಲಿ ಉಕ್ತವಾಗಿರುವ ಸ್ತ್ರೀಲೋಕವನ್ನು ನೋಡಿದಾಗ ಅವರು ಕೌಟುಂಬಿಕ, ಸಮಾಜಿಕ, ಧಾರ್ಮಿಕ, ರಾಜಕೀಯ, ಸಾಹಿತ್ಯಿಕ ಇತ್ಯಾದಿ ಕ್ಷೇತ್ರಗಳಲ್ಲಿ ಗುರುತರವಾದ ಜವಾಬ್ದಾರಿಗಳನ್ನು ನಿರ್ವಹಿಸಿದ್ದನ್ನು ಮನಗಾಣಬಹುದಾಗಿದೆ.

ಮಹಿಳೆ-ಆಡಳಿತರಂಗ: ಪ್ರಾಚೀನ ಕಾಲದಲ್ಲಿ ಮಹಿಳೆಯರು ಗೃಹಿಣಿಯಾಗಿದ್ದುದಲ್ಲದೆ ಒಬ್ಬ ರಾಜನ ಪಟ್ಟದರಸಿಯಾಗಿ ಆಡಳಿತರಂಗದಲ್ಲಿಯು ತಮ್ಮ ಛಾಪು ಮೂಡಿಸಿದ್ದಾರೆ. ಉನ್ನತ ವರ್ಗದ ರಾಜಮನೆತನಕ್ಕೆ ಸಂಬಂಧಿಸಿದ ರಾಣಿಯರು ತಮ್ಮ ಪತಿಯೊಂದಿಗೆ ಮತ್ತು ಸ್ವತಂತ್ರ ವಾಗಿಯೂ ರಾಜ್ಯಭಾರ ಮಾಡಿದುದನ್ನು ಅನೇಕ ಶಾಸನಗಳು ಉಲ್ಲೇಖಿಸಿವೆ.

ಚಾಲುಕ್ಯ ದೊರೆ ಇಮ್ಮಡಿ ಜಯಸಿಂಹನ ಪತ್ನಿಯರಾದ ಸೋಮಲಾದೇವಿ ಹಾಗೂ ಬಿಜ್ಜಲದೇವಿಯರು, ತ್ರೈಲೋಕ್ಯಮಲ್ಲನ ರಾಣಿಯರಾದ ಚಾಮಲದೇವಿ ಮತ್ತು ತ್ರೈಲೋಕ್ಯಮಹಾದೇವಿ, ಭುವನೈಕಮಲ್ಲನ ಪತ್ನಿ ಪಂಪಾದೇವಿ ಹಾಗೂ ಆರನೆಯ ವಿಕ್ರಮಾದಿತ್ಯನ ರಾಣಿಯರಾದ ಮಲೆಯಮತಿ, ಚಂದಲದೇವಿ, ಅಬ್ಬಲದೇವಿ, ಧಾರಲದೇವಿ ಮತ್ತು ಜಾಕಲದೇವಿ, ಚಾಳುಕ್ಯ ಜಗದೇಕಮಲ್ಲನ ಪತ್ನಿ ಪದ್ಮಲಾದೇವಿ ಇವರು ಆಡಳಿತ ರಂಗದಲ್ಲಿ ಪ್ರಮುಖ ಪಾತ್ರ ವಹಿಸಿ ಆಳ್ವಿಕೆ ನಡೆಸಿದ್ದಾರೆಂದು ಶಾಸನಗಳು ಉಲ್ಲೇಖಿಸಿವೆ.

ಈಗ ಹೈದ್ರಾಬಾದ್ ರಾಜ್ಯ ಪುರಾತತ್ವವಸ್ತುಸಂಗ್ರಹಾಲಯ ದಲ್ಲಿರುವ ಕ್ರಿಶ. ೧೦೨೭ರ ಒಂದು ಶಾಸನವು(ದೇವರಕೊಂಡಾರೆಡ್ಡಿ ಮತ್ತು ಹನುಮಾಕ್ಷಿ ಗೋಗಿ: ಬೀದರ ಜಿಲ್ಲೆ, ಕ.ವಿ.ಶಾ.ಸಂ. ೮, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ಪು. ೧೭೯), ಚಾಳುಕ್ಯದೊರೆ ಜಗದೇಕಮಲ್ಲದೇವನ ಮಗಳಾದ ಸೋಮಲಾದೇವಿಯು ಪುಲಿಪೊದರ ಪಲವುವಪ್ಪಯಣವೀಡಿನಲ್ಲಿದ್ದಾಗ ತಂಬಿವಟ್ಟ ಬೆಸವೋಜ ಎಂಬುವವನ ಬಿನ್ನಪದಂತೆ, ಆತನು ಕಟ್ಟಿಸಿದ ಬಸದಿಯ ಭೋಗಕ್ಕೆ ಭೂದತ್ತಿಯನ್ನು ನೀಡಿದಳೆಂದು ಹೇಳುತ್ತದೆ. ಇದೇ ರೀತಿ ಪೊಟ್ಟಳೆಕೆರೆಯ ನೆಲೆವೀಡಿನಲ್ಲಿ ಉತ್ತರಾಯಣ ಸಂಕ್ರಾಂತಿಯಂದು ಗೋಕರ್ಣರಾಸಿ ಜೀಯರಿಗೆ ಒಂದು ದಾನ ನೀಡಿದಂತೆ ಶಾಸನವೊಂದು ಉಲ್ಲೇಖಿಸುತ್ತದೆ.

ಚಾಳುಕ್ಯ ದೊರೆ ಜಗದೇಕಮಲ್ಲದೇವನ ಪತ್ನಿ ಬಿಜ್ಜಲದೇವಿಯು ಪೊಟ್ಟಳೆಕೆರೆಯ ನೆಲೆವೀಡಿನಲ್ಲಿ ಇರುವಲ್ಲಿ ಒಂದು ದಾನ ನೀಡಿದ್ದನ್ನು ಕ್ರಿಶ ೧೦೩೨ರ ರಾಯಚೂರ ಜಿಲ್ಲೆಯ ಸುಂಕನೂರು ಶಾಸನವು(ಕ.ವಿ.ಶಾ.ಸಂ. ೭, ಪೂರ್ವೋಕ್ತ, ಪು.೧೭೩) ಉಲ್ಲೇಖಿಸಿದೆ.

ಕ್ರಿ.ಶ.೧೦೫೮ರ ಒಂದು ಶಾಸನವು ಚಾಳುಕ್ಯ ಮೊದಲನೆಯ ತ್ರೈಲೋಕ್ಯಮಲ್ಲನ ರಾಣಿ ಚಾಮಲದೇವಿಯು ಮಲೆಯ ನೆಲೆವೀಡಿನಲ್ಲಿ ರಾಜ್ಯಭಾರ ಮಾಡುತ್ತಿರುವಾಗ ತುಂಗಭದ್ರಾ ಮತ್ತು ಕೃಷ್ಣಾನದಿಗಳ ಸಂಗಮದಲ್ಲಿ ತೀರ್ಥಸ್ನಾನ ಮಾಡಿದುದರ ನಿಮಿತ್ತವಾಗಿ ಎಡೆದೊರೆ ೨೦೦೦ದ ಮೊಸಳಿಕಲ್ಲು ೩೦೦ರಲ್ಲಿಯ ಭತ್ತಗ್ರಾಮ ಭಲ್ಲಟಗಿಯಲ್ಲಿ ದಾನ ನೀಡಿದಳೆಂಬುದನ್ನು ಉಲ್ಲೇಖಿಸಿದೆ.

ಕ್ರಿ.ಶ.೧೦೬೯ರ ರಾಯಚೂರಿನ ಕಪಗಲ್ಲು ಶಾಸನವು(ಕ.ವಿ.ಶಾ.ಸಂ. ೭, ಪೂರ್ವೋಕ್ತ, ಪು.೧೭೫)ಚಾಳುಕ್ಯದೊರೆ ಭುವನೈಕಮಲ್ಲನು ಕೆರೆಯೂರ ನೆಲೆವೀಡಿನಿಂದ ರಾಜ್ಯಭಾರಮಾಡುತ್ತಿದ್ದಾಗ, ಈತನ ಹೆಂಡತಿ ಪಂಪಾದೇವಿಯು ಮೊಸಳಿಕಲ್ಲು ೩೦೦ರ ಬಳಿಯಿರುವ ಗೋರಿಕಲ್ಲ ೧೨ರ ಕಂಪಣದ ಗ್ರಾಮವಾದ ಕಪ್ಪಗಲ್ಲ ಭೋಗೇಶ್ವರ ದೇವರಿಗೆ ಭೂಮಿಯನ್ನು ದಾನನೀಡಿದ ವಿಚಾರವನ್ನು ತಿಳಿಸುತ್ತದೆ.

ಕ್ರಿ.ಶ. ೧೦೮೬ರ ಬೀದರ ಜಿಲ್ಲೆಯ ಬಗ್ದಲ್ ಶಾಸನವು(ದೇವರಕೊಂಡಾರೆಡ್ಡಿ ಮತ್ತು ಹನುಮಾಕ್ಷಿ ಗೋಗಿ: ಬೀದರ ಜಿಲ್ಲೆ, ಕ.ವಿ.ಶಾ.ಸಂ. ೮, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬, ಪು. ೧೭೯) ಕಲ್ಯಾಣಿ ಚಾಳುಕ್ಯ ದೊರೆ ತ್ರಿಭುವನಮಲ್ಲನು ಜಯಂತಿಪುರದಿಂದ ಆಳ್ವಿಕೆ ನಡೆಸುತ್ತಿರುವಾಗ ಈತನ ರಾಣಿ ಶ್ರೀಯಾದೇವಿಯು ಬಗದಾಳವನ್ನು ಆಳುತ್ತಿದ್ದಳೆಂದು ಹೇಳುತ್ತದೆ. ಈ ಶಾಸನದ ಹೆಚ್ಚಿನ ಭಾಗ ಅಳಿಸಿಹೋಗಿದೆ. ಆದುದರಿಂದ ಪೂರ್ಣ ವಿವರಗಳು ತಿಳಿದು ಬರುವುದಿಲ್ಲ.

ಮಲೆಯಮತಿ(ಅಭಿನವ ಸರಸ್ವತಿ) ಕ್ರಿ.ಶ. ೧೧೦೭ರ ಕಲ್ಬುರ್ಗಿಯ ದಿಗ್ಗಾಂವಿ ಶಾಸನವು(ಹನುಮಾಕ್ಷಿ ಗೋಗಿ: ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ೧೯೯೯, ಪು.೨೮೬) ಕಲ್ಯಾಣ ಚಾಳುಕ್ಯ ದೊರೆ ತ್ರಿಭುವನಮಲ್ಲ ಆರನೆಯ ವಿಕ್ರಮಾದಿತ್ಯನು ರಾಜಧಾನಿ ಮನೆಯ ಕೆರೆಯ ನೆಲೆವೀಡಿನಲ್ಲಿ ರಾಜ್ಯಭಾರ ಮಾಡುತ್ತಿರುವಾಗ ಈತನ ಅರ್ಧಾಂಗಿಯಾದ ಹಿರಿಯ ಅರಸಿ, ಪಟ್ಟಮಹಾದೇವಿ, ಅಭಿನವಸರಸ್ವತಿ, ಮಲೆಯಮತಿಯು ಅಗ್ರಹಾರ ದಿಗ್ಗಾವಿಗೆಯ ಮೇಲಾಳಿಕೆ ಮಾಡುತ್ತಿದ್ದಳೆಂದು ದಾಖಲಿಸುತ್ತದೆ. ಇದೇ ಜಿಲ್ಲೆಯ ಸುರಪುರ ತಾಲೂಕಿನ ಹುಣಸಗಿಯ ಕ್ರಿ.ಶ. ೧೧೨೦ರ ಒಂದು ಶಾಸನವು(ಸುರಪುರ ತಾಲೂಕಿನ ಶಾಸನಗಳು, ಪೂರ್ವೋಕ್ತ, ಪು. ೨೦೧) 'ನಿತ್ಯಭೂಮಿದಾನ' ಇತ್ಯಾದಿಗಳಲ್ಲಿ ನಿರತಳಾಗಿದ್ದುದನ್ನು ತಿಳಿಸುತ್ತದೆ. ಈಕೆಯು ಆಳ್ವಿಕೆಯಲ್ಲಿ ದಿನ ನಿತ್ಯ ದಾನದತ್ತಿಗಳನ್ನು ನೀಡಲಾಗುತ್ತಿತ್ತೆಂಬುದು ಗಮನಾರ್ಹ ವಿಚಾರ.

ಕ್ರಿ.ಶ. ೧೧೯೯ರ ಹುಣಸಿಹಡಗಲಿ ಶಾಸನವು(ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪೂರ್ವೋಕ್ತ, ಪು. ೨೩೦)ಚಾಳುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ಪಟ್ಟದ ರಾಣಿ ಚಂದಲದೇವಿಯು ಅಲಂದೆ ಸಾಸಿರದ ಪ್ರಮುಖ ಅನೇಕ ಭತ್ತಗ್ರಾಮಗಳನ್ನು ದುಷ್ಟನಿಗ್ರಹ ಶಿಷ್ಟಪರಿಪಾಲನಸಹಿತವಾಗಿ ಪ್ರತಿಪಾಲಿಸುತ್ತಾ ಇದ್ದುದನ್ನು ತಿಳಿಸುತ್ತದೆ. ಈಕೆಯನ್ನು ಮಲಪವಿದ್ಯಾಧರಿ, ಸಕಳಕಳಾಧರಿ, ನೃತ್ಯವಿದ್ಯಾಧರಿ, ಸವತೀಗಜಕೇಸರಿ, ಕಲಿಕಾಲ ಸರಸ್ವತಿ ಎಂದು ಮುಂತಾಗಿ ಹೊಗಳಲಾಗಿದೆ. ಹೀಗಾಗಿ ಈಕೆಯು ಸಕಲ ವಿದ್ಯಾಪಾರಂಗತಳಾಗಿದ್ದಳೆಂದೂ, ಅದರಲ್ಲಿಯೂ ದುಷ್ಟರ ನಿಗ್ರಹ, ಶಿಷ್ಟರ ಸಂರಕ್ಷಣೆ ಎಂದಿರುವುದರಿಂದ ಈಕೆಯು ಯುದ್ಧ ಕಲೆಯೂ ಬಲ್ಲಿದಳಾಗಿದ್ದಳೆಂದೂ ಹೇಳಬಹುದು.

ಲಿಂಗಸೂಗೂರಿನ ಕ್ರಿ.ಶ.೧೧೨೪ರ ಶಾಸನವೊಂದು ಚಾಳುಕ್ಯದೊರೆ ತ್ರಿಭುವನಮಲ್ಲದೇವನ ರಾಣಿ ಅಬ್ಬಲದೇವಿಯು ಕರಡಿಕಲ್ಲು ३೦೦ರ ಬಳಿಯ ಭತ್ತಗ್ರಾಮ ಲಿಂಗವನ್ನು [ಲಿಂಗಸೂಗೂರನ್ನು] ಆಳುತ್ತಿದ್ದಳೆಂದು ಹೇಳುತ್ತದೆ(ಕ.ವಿ.ಶಾ.ಸಂ. ೭, ಪೂರ್ವೋಕ್ತ, ಪು. ೧೨೪).

ಕ್ರಿ.ಶ.೧೧೯೫ರ ಕಲ್ಬುರ್ಗಿ ಜಿಲ್ಲೆಯ ಇಂಗಳಗಿ ಶಾಸನವು(ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪೂರ್ವೋಕ್ತ, ಪು.೨೩೦) ಕಲ್ಯಾಣಿ ಚಾಳುಕ್ಯ ದೊರೆ ತ್ರಿಭುವನಮಲ್ಲದೇವನ ರಾಣಿಯಾದ ಜಾಕಲದೇವಿಯು ಅರಲ ३೦೦ರ ಇಂಗುಣಿಗೆಯನ್ನು ತ್ರಿಭೋಗಾಭ್ಯಂತರ ಸಿದ್ಧಿಯಿಂದಾಳುತ್ತ ಇದ್ದ ವಿಚಾರವನ್ನು ತಿಳಿಸುತ್ತದೆ. ಚತುರ್ವಿಧ ದಾನಚಿಂತಾಮಣಿ, ಕಲಿಕಾಲ ಪಾರ್ವತಿ ಅಭಿನವಸರಸ್ವತಿ ಎಂಬ ಇತ್ಯಾದಿ ಬಿರುದುಗಳಿಂದ ಈಕೆಯನ್ನು ಈ ಶಾಸನವು ಚಿತ್ರಿಸಿದೆ.

ಹೀಗಾಗಿ ರಾಜಕೀಯ ಕ್ಷೇತ್ರದಲ್ಲಿ ಆರನೆಯ ವಿಕ್ರಮಾದಿತ್ಯನ ರಾಣಿಯರು ಇತರ ರಾಜಮನೆತನಗಳವರಿಗಿಂತ ಹೆಚ್ಚಾಗಿ ಕಾಣಿಸಿಕೊಂಡಿದ್ದಾರೆ ಎಂಬುದು ಸ್ಪಷ್ಟವಾಗುತ್ತದೆ. ಇದರ ಜೊತೆಗೆ, ತಮ್ಮ ಆಳ್ವಿಕೆಯ ಕಾಲದಲ್ಲಿ ಸಾಕಷ್ಟು ದಾನದತ್ತಿಗಳಿಂದ ಜನಹಿತ ಕಾರ್ಯಗಳನ್ನು ಮಾಡುತ್ತಿದ್ದರೆಂದು ತಿಳಿದುಬರುತ್ತದೆ.

ಹೀಗೆ ಆಳರಸಿಯರಲ್ಲದೆ ಸಾಮಾನ್ಯ ಸ್ತ್ರೀಯರು ಕೂಡ ದಾನ ದತ್ತಿ ನೀಡುತ್ತಿದ್ದರೆಂಬುದು ಹಲವು ಶಾಸನಗಳಲ್ಲಿ ಉಲ್ಲೇಖವಾಗಿದೆ. ಕ್ರಿ.ಶ.೧೧೦೪ರ ನಿಡಿಗೊಂಡದ ಶಾಸನವೊಂದು (ಕ.ವಿ.ಶಾ.ಸಂ. ೭, ಪೂರ್ವೋಕ್ತ, ಪು.೧೨೪) ಚಾಳುಕ್ಯ ದೊರೆ ತ್ರಿಭುವನಮಲ್ಲದೇವನ ಆಳ್ವಿಕೆಯ ಕಾಲದಲ್ಲಿ ಅಧಿಕಾರಿ ದುಗ್ಗಪ್ಪನ ಹೆಂಡತಿ ಮುಪ್ಪಮಾಂಬಿಕೆಯು ಮುಪ್ಪೇಶ್ವರ ದೇವಾಲಯವನ್ನು ಮಾಡಿಸಿದ ವಿಚಾರವನ್ನೂ ಆ ದೇವರಿಗೆ ದುಗ್ಗಪ್ಪನು ಭೂಮಿಯನ್ನು ದತ್ತಿಯಾಗಿ ಬಿಟ್ಟವಿಚಾರವನ್ನೂ ಹೇಳುತ್ತದೆ. ಕ್ರಿ.ಶ.೧೧೯೧ರ ಶಾಸನವೊಂದು ತಳಾರ ಬಮ್ಮೆಯ ನಾಯಕನ ಮಗಳಾದ ಚಾಕಮ ಎಂಬುವವಳು ಮಾಧವ ದೇವರಿಗಾಗಿ ದತ್ತಿ ಬಿಟ್ಟಳೆಂದು ತಿಳಿಸಿದೆ. ಅದೇ ಚಾಕಮನು ಬ್ರಹ್ಮಪುರಿಗೆರೆಯ ಚೆನ್ನ ಮಾಧವ ದೇವರಿಗೆ ಸುವರ್ಣ್ಣಾಭರಣಭೂಷಣ ಮಾಡಿಸಿದಳೆಂದು ಇನ್ನೊಂದು ಶಾಸನವು(ಅದೇ) ಉಲ್ಲೇಖಿಸಿದೆ.

ಮಹಿಳೆ ಮತ್ತು ಸಾಮಾಜಿಕರಂಗ

ಅಂದಿನ ಕಾಲದ ಮಹಿಳೆಯರು ಕುಟುಂಬದ ಪೂರ್ಣ ಜವಾಬ್ದಾರಿಯ ಜೊತೆಗೆ ಧಾರ್ಮಿಕ ಆಡಳಿತ ರಂಗದಲ್ಲಿಯೂ ಸಾಮಾಜಿಕ ಕ್ಷೇತ್ರಗಳಲ್ಲಿಯೂ ಪ್ರಮುಖ ಪಾತ್ರಗಳನ್ನು ವಹಿಸಿರುವುದು ಶಾಸನಗಳಲ್ಲಿ ಅಲ್ಲಲ್ಲಿ ಕಂಡುಬರುತ್ತದೆ. ಅದರಲ್ಲಿಯೂ ಉನ್ನತ ವರ್ಗದ ಮಹಿಳೆಯರು ರಾಜಕೀಯ ಆಡಳಿತ ಅಧಿಕಾರದಿಂದಾಗಿ ಅನೇಕ ಜನಪರ ಸಾಮಾಜಿಕ ಕಾರ್ಯಗಳನ್ನು ಮಾಡಿರುವುದನ್ನು ಅನೇಕ ಶಾಸನಗಳು ಉಲ್ಲೆಖಿಸಿವೆ. ಪ್ರಮುಖವಾಗಿ ಕೆರೆ, ಬಾವಿ, ದೇವಾಲಯಗಳ ನಿರ್ಮಾಣ ಮತ್ತು ಜೀರ್ಣೋದ್ಧಾರಗಳಿಗಾಗಿ, ಶಿಕ್ಷಣಕ್ಕಾಗಿ, ಛತ್ರ ಮುಂತಾದವುಗಳಿಗಾಗಿ ಭೂದಾನದತ್ತಿ ಗಳನ್ನು ನೀಡಿದ್ದನ್ನು ನೋಡಬಹುದು.

ರಾಜ್ಯದ ಅಥವಾ ಒಂದು ದೇಶದ ಬೆಳವಣಿಗೆಯಲ್ಲಿ ಸ್ತ್ರೀಯರ ಪಾತ್ರ ಬಹುಮುಖ್ಯವಾದುದು. ಸ್ತ್ರೀಯರ ಸ್ಥಾನಮಾನ ಅದರಲ್ಲೂ ವಿಶೇಷವಾಗಿ ಅವರು ಅಂದಿನ ಸಮಾಜದಲ್ಲಿ ಹೊಂದಿದ್ದಂತಹ ಸ್ಥಾನಮಾನ ಹಾಗೂ ಸಮಾಜದಲ್ಲಿ ಅವರಿಗೆ ಇದ್ದ ಗೌರವ, ಅವರ ಕುರಿತಾದಂತಹ ವಿವರಗಳು ಶಾಸನಗಳಲ್ಲಿ ಸ್ವಲ್ಪಮಟ್ಟಿಗೆ ದೊರೆಯುತ್ತವೆ. ಪ್ರಾಚೀನ ಶಾಸನಗಳನ್ನು ನೋಡಿದಾಗ ವಿಶೇಷವಾಗಿ ಕ್ರಿ.ಶ.ಆರಂಭ ಕಾಲದಿಂದಲೇ ಮಹಿಳೆಯರು ಅದರಲ್ಲೂ ರಾಜ ಮಹಿಳೆಯರು ಧಾರ್ಮಿಕವಾಗಿ ಹಾಗೂ ಸಾಮಾಜಿಕವಾಗಿ ಬಹುಮುಖ್ಯವಾದ ಸ್ಥಾನಗಳನ್ನು ಹೊಂದಿರುತ್ತಿದ್ದರು. ಇವರ ಕೆಲವು

ಶಾಸನಗಳನ್ನು ನೋಡಿದಾಗ ಒಟ್ಟಾರೆಯಾಗಿ ಸ್ತ್ರೀಯರ ಬಗ್ಗೆ ಒಂದು ಸ್ಪಷ್ಟ ಚಿತ್ರಣವು ಈ ಶಾಸನಗಳಿಂದ ಆ ಕಾಲಕ್ಕೆ ಸೀಮಿತವಾದಂತೆ ದೊರೆಯುತ್ತದೆ. ಇದರಿಂದ ಕ್ರಿ.ಶ.ಆರಂಭ ಕಾಲದಿಂದಲೂ ರಾಜಪರಿವಾರದ ಸ್ತ್ರೀಯರಿಗೆ ವಿಶಿಷ್ಟ ಸ್ಥಾನಮಾನಗಳಿದ್ದವು ಹಾಗೂ ಅವರು ಸ್ವತಂತ್ರ್ಯವಾಗಿ ತಮಗೆ ಇಷ್ಟಬಂದಂತೆ ಧಾರ್ಮಿಕ ಆಚರಣೆಯನ್ನು ಮಾಡುತ್ತಿದ್ರು, ಅದಕ್ಕೆ ಪೂರಕವಾಗಿ ದಾನದತ್ತಿಗಳನ್ನು ನೀಡುತ್ತಿದ್ದರು(ಡಾ.ಡಿ.ಎಂ.ನಾಗರಾಜು, ಕ.ಚಾ.ಆ.ವಿ.ಶಾ.ಸಾಂ. ಆಧ್ಯಯನ, ಪು.೩೨-೩೪).

ಸ್ವತಂತ್ರವಾಗಿ ಆಳ್ವಿಕೆ ಮಾಡಿದ ಅಂದಿನ ರಾಜಮನೆತನದ ಮಹಿಳೆಯರು ಸ್ವತಃ ಸಾಮಾಜಿಕ, ಆಡಳಿತ ರಂಗದಲ್ಲಿ ಧಾರ್ಮಿಕ ಕ್ಷೇತ್ರಗಳಲ್ಲಿ ಭಾಗಿಯಾಗುತ್ತಿದ್ದರೆಂದು ತಿಳಿದುಬರುತ್ತದೆ. "೬ನೇ ವಿಕ್ರಮಾದಿತ್ಯ ರಾಣಿಯರನ್ನು ಕುರಿತಂತೆ ನೋಡಿದಾಗ ಇದುವರೆಗೂ ತಿಳಿದುರವ ೨೮ ಜನ ರಾಣಿಯರು ಸಾಕಷ್ಟು ವಿದ್ಯಾವಂತರಾಗಿದ್ದು, ಸಂಗೀತ, ನೃತ್ಯ, ಆಡಳಿತಗಳಲ್ಲಿ ಪರಿಣಿತಿಯನ್ನು ಹೊಂದಿದ್ದರು. ರಾಣಿಯರ ಸಂಖ್ಯೆ ಈಗ ೨೮ಕ್ಕಿಂತಲೂ ಅಧಿಕವೆಂದು ಮತ್ತು ೬ ಜನರ ಹೆಸರುಗಳನ್ನು ಇದಕ್ಕೆ ಸೇರಿಸಬಹುದೆಂದು ಶ್ರೀಮತಿ ಚೆನ್ನಕ್ಕ ಪಾವಟೆ ಮತ್ತು ಶ್ರೀಮತಿ ಹನುಮಾಕ್ಷಿ ಗೋಗಿ ಇವರು ರಾಜ್ಯ ಪ್ರಾಚ್ಯ ವಸ್ತುಸಂಗ್ರಹಾಲಯ, ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಏರ್ಪಡಿಸಿದ(೨೩, ೨೪ನೇ ಜೂನ್ ೨೦೦೬) ವಿಚಾರ ಸಂಕಿರಣದಲ್ಲಿ ಪ್ರಬಂಧ ಮಂಡಿಸುತ್ತಾ ತಿಳಿಸಿದ್ದಾರೆ(ಉದ್ಧೃತ, ಪೂರ್ವೋಕ್ತ, ಪು.೩೪-೩೫).

"ಭಾರತೀಯರದು ಪಿತೃಪ್ರಧಾನ ಕುಟುಂಬ ಪದ್ಧತಿ. ಇದಕ್ಕನುಗುಣವಾಗಿ ಸಮಾಜದಲ್ಲಿ ನಿಂತು ಪುರುಷ ಮನೆಯಲ್ಲಿ ನಿಂತು ಸ್ತ್ರೀ ಕುಟುಂಬದ ಹೊಣೆಯನ್ನು ತೂಗಿಸಿಕೊಂಡು ಹೋಗುತ್ತಿದ್ದರು. ಹೀಗಾಗಿ ಪುರುಷನೇ ಪ್ರಧಾನವಾಗಿ ಅನೇಕ ವೃತ್ತಿಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಿದ್ದಿತ್ತು. ರಾಣಿ ದಂಡನಾಯಕಿ, ಮಹಾಮಂಡಳೇಶ್ವರಿ, ನಾಳ್ಗಾವುಂಡಿ, ಗಾವುಂಡಿ, ಸೆಟ್ಟಿಲೆ, ಬ್ರಾಹ್ಮಣಿ ಎಂಬ ವಿಶೇಷಣಗಳು ಹೆಣ್ಣಮಕ್ಕಳ ಹೆಸರಿನೊಂದಿಗೆ ಕಂಡುಬಂದರೂ ಇವು ಪ್ರಧಾನವಾಗಿ ರಾಜ, ದಂಡನಾಯಕ, ಮಹಾಮಂಡಳೇಶ್ವರ, ನಾಳ್ಗಾವುಂಡ, ಗಾವುಂಡ, ಸೆಟ್ಟಿ, ಬ್ರಾಹ್ಮಣರ ಹೆಂಡತಿಯರು ಎಂಬುದನ್ನು ಸೂಚಿಸುವುದೇ ಹೊರತು ಈ ಸ್ತ್ರೀಯರ ವೃತ್ತಿಗಲೇನಲ್ಲ" (ಡಾ.ಚನ್ನಕ್ಕ ಎಳಿಗಾರ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಪು.೨೭೧).

"ಕರ್ನಾಟಕದಲ್ಲಿ ಶಾಸನೋಕ್ತ ಮಹಿಳೆಯರ ಇತಿಹಾಸ ಕದಂಬರ ಕಾಲದಿಂದ ಪ್ರಾರಂಭ ವಾಗುತ್ತದೆ. ಅಂದಿನಿಂದ ಸಾಮಾನ್ಯವಾಗಿ ಶಾಸನಗಳ ಒಡಲಲ್ಲಿ ಮೂಡಿ ನಿಂತವರು ಪ್ರಭುವರ್ಗದ ಮತ್ತು ಉನ್ನತ ರ್ಗದ ಮಹಿಳೆಯರು. ಇವರಲ್ಲಿ ಚಕ್ರಾಧಿಪತಿಗಳ ರಾಣಿಯರಿಗಿಂತ, ಸಾಮಂತ, ಮಾಂಡಲಿಕ, ದಂಡನಾಯಕ, ನಾಳ್ಗಾವುಂಡ ಮತ್ತು ಗಾವುಂಡ ಮನೆತನದ ಮಹಿಳೆಯರು

ಹೆಚ್ಚು ಸಂಖ್ಯೆಯಲ್ಲಿ ಕಂಡುಬರುತ್ತಾರೆ. ಇದಕ್ಕೆ ಚಕ್ರವರ್ತಿಗಳಿಗಿಂತ ಮಿಕ್ಕವರ ಸಂಖ್ಯೆ ಅಧಿಕವಾಗಿರುವುದು ಕಾರಣವಾಗಿರುಂತೆ ಮೇಲಿನ ಅಂತಸ್ತಿನರಿಗಿಂತ ಕೆಳಗಿನ ಅಂತಸತಿನವರು ಸಮಾಜದಲ್ಲಿ ಹೆಚ್ಚು ಕಾಣಿಸಿಕೊಳ್ಳುವುದು ಕಾರಣವಾಗಿರಬಹುದು. ಮಹಿಳೆ ಪ್ರಥಮವಾಗಿ ಸಮಾಜವನ್ನು ಪ್ರತಿನಿಧಿಸುವುದು ಗೃಹಿಣಿಯಾಗಿ, ಇದೊಂದು ಸೀಮಿತ ಕ್ಷೇತ್ರ, ಪತಿ ಮಕ್ಕಳು, ಬಂಧು ಬಳಗದ ಯೋಗಕ್ಷೇಮದೊಂದಿಗೆ ಸಮಾಜದಲ್ಲಿ ವಿಶಿಷ್ಟ ಸ್ಥಾನಮಾನ ಕಾಯ್ದುಕೊಳ್ಳುವುದು ಈ ಕ್ಷೇತ್ರದ ಗುರಿ. ಆದರೆ ಮಹಿಳೆಯರು ಈ ಸೀಮಿತ ಪರಿಸರವನ್ನೂ ಮೀರಿ ಜೀವನದಲ್ಲಿ ಹೆಚ್ಚಿನದು ಸಾಧಿಸಬೇಕೆಂಬ ಲವಲವಿಕೆಯುಳ್ಳವರಾಗಿರುತ್ತಾರೆ. ಇವರಲ್ಲಿ ಕೆಲವು ಮಹಿಳೆಯರು ಸ್ಥಾನಬಲದಿಂದ ಪ್ರಾಮುಖ್ಯತೆ ಪಡೆದವರಾದರೆ ಇನ್ನು ಕೆಲವು ಸ್ವಕಾರ್ಯದ ಬಲದಿಂದ ಪ್ರಾಮುಖ್ಯತೆ ಪಡೆದವರು. ಹೀಗಾಗಿ ಪ್ರಾಚೀನ ಕರ್ನಾಟಕದ ರಾಜಕೀಯ ಕ್ಷೇತ್ರಗಳಲ್ಲಿ ಭಾಗಿಗಳಾದ ಮಹಿಳೆಯರ ಸ್ಥಾನ ಪ್ರಾಮುಖ್ಯತೆಯಿಂದ ಗುರುತಿಸಿದರೆ, ಮಿಕ್ಕ ಕ್ಷೇತ್ರಗಳಲ್ಲಿ ಭಾಗಿಗಳಾದವರನ್ನು ದೇವರ ಸೇವೆಗೆ ಮುಡುಪಾಗಿದ್ದರು(ಅದೇ, ಪು.೪).

ಚಾಳುಕ್ಯ ದೊರೆ ತ್ರೈಲೋಕ್ಯಮಲ್ಲನ ಆಳ್ವಿಕೆಯ ಕಾಲದ ಕ್ರಿ.ಶ. ೧೦೫೪ರ ಕಲ್ಬುರ್ಗಿ ಜಿಲ್ಲೆಯ ಕೆಂಬಾವಿ ಶಾಸನವು(ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪೂರ್ವೋಕ್ತ, ಪು. ೧೧೫) ಈ ದೊರೆಯ ಮಹಾಮಂಡಳೇಶ್ವರನಾದ ರೇವರಸನ ಹೆಂಡತಿ ಮಾಳಿಯಬ್ಬರಸಿಯು ಕೆಂಬಾವಿಯಲ್ಲಿ ಮಾಳಿಬೇಶ್ವರ ದೇವರನ್ನು ಪ್ರತಿಷ್ಠೆ ಮಾಡಿ ದೇವರ ಅಂಗರಂಗಭೋಗಕ್ಕಾಗಿ, ತಪೋಧನರಿಗಾಗಿ, ಅಲ್ಲಿ ಓದುವ ವಿದ್ಯಾರ್ಥಿಗಳಾಗಿ ಒಂದು ಸಾವಿರ ಮತ್ತರು ಭೂಮಿಯನ್ನು ರಾಜಧಾನಿ ಕೆಂಬಾವಿಯ ಮೂಡಲದಿಕ್ಕಿನಲ್ಲಿ ಬಿಟ್ಟದ್ದನ್ನು ತಿಳಿಸುತ್ತದೆ.

ಕ್ರಿ.ಶ.೧೦೮೨ರ ಆಳಂದ ಶಾಸನವು ಚಾಲುಕ್ಯದೊರೆ ತ್ರಿಭುನಮಲ್ಲನ ವಿಶಾಳ ವೃಕ್ಷಸ್ಥಳ ನಿವಾಸಿನಿ ನೃತ್ಯ ವಿದ್ಯಾಧರಿ ಚಂದಲದೇವಿಯು ಅಲ್ಲಿಯ ವಿವಿಧ ಪಂಡಿತ ವರ್ಗಕ್ಕೆ ಮತ್ತು ಶಿವಾದಿದೇವ ಪಂಡಿತದೇವ ಶ್ರೀ ಸುರೇಶ್ವರ ಪಂಡಿತದೇವರಿಗೆ ಧಾರಪೂರ್ವಕವಾಗಿ ದತ್ತಿ ನೀಡಿದಳೆಂದು ಹೆಸರಿಸಿದೆ.

ಸ್ವತಃ ಆರನೇ ವಿಕ್ರಮಾದಿತ್ಯನು ಹಲವಾರು ಸ್ತ್ರೀಯರನ್ನು ಮದುವೆಯಾಗಿದ್ದನು. ಆತನ ರಾಣಿಯರು ಸ್ವತಂತ್ರವಾಗಿ ರಾಜನ ಪರವಾಗಿ ಆ ಭಾಗದ ರಾಣಿಯಾಗಿ ಆಳ್ವಿಕೆಮಾಡುತ್ತಿದ್ದರು. ವಿಕ್ರಮಾಧಿತ್ಯನ ರಾಣಿಯರಲ್ಲಿ ಪಿರಿಯರಸಿ, ಪಟ್ಟಮಹಾದೇವಿ ಮತ್ತು ರಾಣಿ ಎಂಬುವುದಾಗಿ ಮೂರು ವರ್ಗಾಗಳಾಗಿ ಮಾಡಲಾಗಿದೆ(ಡಾ. ಡಿ.ಎಂ. ನಾಗರಾಜು, ಕಲ್ಯಾಣ ಚಾಲುಕ್ಯ ಆರನೇ ವಿಕ್ರಮಾದಿತ್ಯನ ಶಾಸನಗಳ ಸಾಂಸ್ಕೃತಿಕ ಅಧ್ಯಯನ).

ಆರನೇ ವಿಕ್ರಮಾದಿತ್ಯನ ರಾಣಿ ಚಂದಲಾದೇವಿಯನ್ನು ಕುರಿತಂತೆ ಮೊಟ್ಟಮೊದಲ ಶಾಸನ ಕಲಬುರ್ಗಿ ಶಾಸನ ಆಳಂದ ತಾಲೂಕಿನ ಕ್ರಿ.ಶ. ೧೦೮೨ರ ಶಾಸನವಾಗಿದೆ. ಈ ಶಾಸನದಲ್ಲಿ ಸೋಮೇಶ್ವರ ದೇವರಿಗೆ ದಾನ ನೀಡಿದ ವಿವರ ದೊರೆಯುತ್ತದೆ. ಅಲ್ಲದೇ ಅವುಗಳಿಗೆ ಸ್ವಸ್ತನವರತ ಪರಮಕಲ್ಯಾಣಭುದ್ಯಯ ಸಹಸ್ರ ಫಲಭೋಗಭಾಗಿನಿ ವಾಟಕ್ಕೆ ಮದದ್ವಿರದಗಾಮಿನಿ, ರಾಯಜಗದಲ ಮನೋಹರಚ್ಚರಿಮಪ್ಪ ಸವಲೇ ಮದಭಂಜನೆ ರಾಯಭಂಗಾರ ದೇವರ್ಮಕ್ಷಯೋನಿಧಿ ಪ್ರವದ್ಧಮಾನ ಚಂದ್ರವದನೆ ಸೌಭಾಗ್ಯನಿದನೆ ಎಂದು ಹೇಳುತ್ತಾ ಅವಳನ್ನು ನೃತ್ಯ ವಿದ್ಯಾಧರೆ, ಚಂದಲ ದೇವಿಯರೆಂದು ಹೇಳಿದೆ. ಮತ್ತೊಂದು ಶಾಸನದಲ್ಲಿ ಇವಳನ್ನು ಮಲಪವಿದ್ಯಾಧರೆ ಸಕಲ ಕಳಾಧರೆ ರಾಯಮನೋಜರಾಜರಲಿ ಆಡಬಳ ಸರಸ್ವತಿ ನೃತ್ಯವಿದ್ಯಾಧರೆ, ಸವತಿ ಗಜಕೇಸರಿ, ಕಲಿಕಾಲ ಸರಸ್ವತಿ, ಶ್ರೀಮತಿಭುವನಮಲ್ಲದೇವ ವಿಶಾಳವಕ್ಷ ಸ್ಥಳ ನಿವಾಸಿನಿಯರಪ್ಪ ಶ್ರೀಮತ್ ಪಿರಿಯರಸಿ, ಚಂದಲದೇವಿಯರು ಎಂದು ಪ್ರಶಸ್ತಿಯಲ್ಲಿ ವರ್ಣಿಸಲಾಗಿದೆ. ಅಲ್ಲದೇ ಚಂದಲದೇವಿಯ ಭಕ್ತಳಾಗಿದ್ದು, ಸಾಕಷ್ಟು ವಿದ್ಯಾಧರೆಯಾಗಿದ್ದು, ಪತಿಭಕ್ತಿಶಿರೋಮಣಿಯಾಗಿದ್ದು, ಸಾಕಷ್ಟು ದಾನ ಧರ್ಮದಲ್ಲಿಯೂ ಎತ್ತಿದ ಕೈಯಾಗಿದ್ದಾಳೆಂದು, ಅತ್ಯಂತ ಸ್ಫುರರೂಪಿಯಾಗಿದ್ದಳೆಂದು, ಆದುದರಿಂದಲೇ ಬಿಲ್ಹಣಕವಿಯು ಚಂದಲೇ ವಿಕ್ರಮರ ವಿವಾಹವನ್ನು ರಸವತ್ತಾಗಿ ಚಿತ್ರಿಸಿದ್ದನ್ನು ವಿಕ್ರಮಾಂಕದೇವ ಚರಿತೆಯಲ್ಲಿ ನೋಡಬಹುದು.

ಕ್ರಿ.ಶ. ೧೧೧೦ರ ಕಾಳಗಿ ಶಾಸನದಲ್ಲಿಯೂ ಪಿರಿಯರಸಿ ಎಂದೇ ಹೆಸರಿಸಿದೆ. ಆಳಂದ ತಾಲೂಕಿನ ರುದ್ರವಾಡಿಯಲ್ಲಿ(ನಾಗರಾಜು ಎಸ್., ರುದ್ರವಾಡಿಯು ಎರಡು ಶಾಸನಗಳು, ಪ್ರಬುದ್ಧ ಕರ್ನಾಟಕ, ಸಂಪುಟ ೫೦, ಸಂಚಿಕೆ ೪) ದೊರೆತ ಒಂದು ಶಾಸನದಲ್ಲಿ ಅಗ್ರಹಾರ ರುದ್ರವಾಡಿ ಅಗ್ರಹಾರದಲ್ಲಿ ಶ್ರೀ ಕೇಶವ ದೇವರಿಗೆ ಮತ್ತು ಅಲ್ಲಿಯ ವಶಿಷ್ಠ ಗೋತ್ರದ ವಾಸುದೇವಭಟ್ಟ ಉಪಾಧ್ಯರಿಗೆ ಹಾಗೂ ೫೦ ಜನ ಮಹಾಜನರಿಗೆ ೧೨೦ ಗದ್ಯಣ ಪೊನ್ನನ್ನು ರಾಣಿ ಚಂದಲಾದೇವಿ ಅಪ್ಪಣೆ ಮೇರೆಗೆ ನೀಡಿದ್ದಾನೆ.

ಕ್ರಿ.ಶ.೧೧೦೬ರ ಇದೇ ಜಿಲ್ಲೆಯ ಬೊಮ್ಮನಹಳ್ಳಿಯ ಶಾಸನವು ಚಾಳುಕ್ಯದೊರೆ ತ್ರಿಭುವನ ಮಲ್ಲದೇವನ ರಾಣಿ ಧಾರಲದೇವಿಯು ಗುರುವಾರದಂದು ಗೋನಾರ ಪ್ರಭು ಮಹಾಪ್ರಧಾನ ಶ್ರೀಕರಣ ದಂಡನಾಯಕ ಧುರಿಮಯ್ಯಂಗೆ, ಮತ್ತು ದಂಡನಾಯಕ ಭೋಗಿಮಯ್ಯಗಳಿಗೆ ದಾನವನ್ನು ನೀಡಿದ ವಿಚಾರವನ್ನು ತಿಳಿಸುತ್ತದೆ.

ಕ್ರಿ.ಶ. ೧೧೦೫ರ ಇದೇ ಜಿಲ್ಲೆಯ ಮುದನೂರಿನ ಒಂದು ಶಾನಸವು(ಸುರಪುರ ತಾಲೂಕಿನ ಶಾಸನಗಳು, ಪೂರ್ವೋಕ್ತ, ಪು.೭೦) ಕಲ್ಯಾಣದ ದೊರೆ ಆರನೇ ವಿಕ್ರಮಾದಿತ್ಯನ ಮಹಾ ಮಂಡಳೇಶ್ವರನಾದ ಜೋಗಮರಸನ ಹೆಂಡತಿ ತಾರಾದೇವಿಯನ್ನು "ಸಹಸ್ರಫಳಭೋಗಭಾಗಿನಿ,

ದ್ವಿತೀಯ ಲಕ್ಷ್ಮೀಸಮಾನೆ, ಶೃಂಗಾರವಿದ್ಯಾಧರೆ, ಸಕಳಕಳಾಧರೆ, ಚಿಂತಾಮಣಿ ಯಾಶ್ರಿತಜನಕಲ್ಪತರು, ಅಮೃತವಾಣಿ, ಸಮನ್ವಿತಗೋತ್ರಪವಿತ್ರೆ, ಸುಜನೈಕಮಿತ್ರೆ, ದಾನವಿನೋದೆ" ಇತ್ಯಾದಿಯಾಗಿ ವರ್ಣಿಸಿ, ಈಕೆಯು ಅಗ್ರಹಾರದ ಮುದಿನೀರೂರೊಡೆಯ ಪ್ರಮುಖ ಅಶೇಷ ಮಹಾಜನಂಗಳಿಗೆ ೫೦ ಗದ್ಯಾಣ ಪೊನ್ನ ಕೊಟ್ಟು, ತನ್ನದಾಗಿಸಿಕೊಂಡು ಉತ್ತರೇಶ್ವರ ದೇವರಿಗೆ ದಕ್ಷಿಣ ಹೊಲದಲ್ಲಿ ರಾಮೇಶ್ವರ ದೇವರಿಗೆ ಭೂದಾನ ಮಾಡಿದಳೆಂದು ತಿಳಿಸಿದೆ.

ಕ್ರಿ.ಶ. ೧೯೯ರ ಕಲ್ಬುರ್ಗಿ ಜಿಲ್ಲೆಯ ಹುಣಿಸಿ ಹಡಗಲಿ ಶಾಸನವು(ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪೂರ್ವೋಕ್ತ, ಪು.೨೨೯–೨೩೩) ಚಾಳುಕ್ಯ ದೊರೆ ತ್ರಿಭುವನಮಲ್ಲದೇವನ ಪಿರಿಯರಸಿ, ಚಂದಲ ದೇವಿಯು ಅಲಂದೆ ೧೦೦೦ದ ಅನೇಕ ಭತ್ತಗ್ರಾಮಗಳನ್ನು ಆಳುತ್ತಿದ್ದುದನ್ನು ಉಲ್ಲೇಖಿಸಿ, ಆಕೆಯನ್ನು "ದೀನಾನಾಥ ಕಥಕ ವೈತಾಳಿಕ ಸುವರ್ಣ್ಣವ್ರಿಷ್ಟ ವಂದಿ ಚಿಂತಾಮಣಿ ಅಂತಃಪುರ ಚೂಡಾಮಣಿಮಲಪ ವಿದ್ಯಾಧರಿ ನ್ರಿತ್ಯವಿದ್ಯಾಧರಿ ಸವತೀಗಜಕೇಸರಿ ಕಲಿಕಾಲ ಸರಸ್ವತಿ" ಇತ್ಯಾದಿಯಾಗಿ ವರ್ಣಿಸಿದೆ.

ಕ್ರಿ.ಶ.೧೯೫ರ ಇದೇ ಜಿಲ್ಲೆಯ ಇಂಗಳಗಿ ಶಾಸನವು(ಅದೇ, ಪು.) ದೊರೆ ಚಾಳುಕ್ಯ ವಿಕ್ರಮಾದಿತ್ಯನು ರಾಜಧಾನಿ ಕಲ್ಯಾಣದಿಂದ ಆಳುತ್ತಿದ್ದಾಗ, ಈತನ ರಾಣಿ ಜಾಕಲದೇವಿಯು ಇಂಗಳಗಿ ೩೦೦ರಿಂದ ಆಳುತ್ತಿದ್ದಳೆಂದು ತಿಳಿಸಿದೆ. ಈಕೆಯನ್ನು ಈ ಶಾಸನವು 'ಚತುರ್ವ್ವಿಧ ದಾನಚಿಂತಾಮಣಿ' ಎಂದು ಮುಂತಾಗಿ ವರ್ಣಿಸಿ ಇವಳು ಅತ್ಯುನ್ನತವಾದ ಜಿನೇಂದ್ರಗೇಹವನ್ನು ಮಾಡಿಸಿ, "ಮಲ್ಲಿಸೇಣಭಟ್ಟಾರಕರ ಕಾಲಂ ಕರ್ಚ್ಚಿ ಧಾರಾಪೂರ್ವಕಂ ಮಾಡಿ" ಭೂದಾನ ನೀಡಿದಳೆಂಬ ವಿಚಾರವನ್ನು ತಿಳಿಸುತ್ತದೆ.

ಕ್ರಿ.ಶ. ೧೧೦೭ರ ಆಂಧ್ರಪ್ರದೇಶದ ಎರಡು ಶಾಸನಗಳು(ಕ.ವಿ.ಶಾ.ಸಂ. ೫, ಪೂರ್ವೋಕ್ತ, ಪು. ೮೩)ಚಾಳುಕ್ಯ ದೊರೆ ತ್ರಿಭುವನ ಮಲ್ಲದೇವನು ಆಳ್ವಿಕೆಯನ್ನು ಮಾಡುವಾಗ ಈತನ ರಾಣಿ ಅಭಿನವ ಸರಸ್ವತಿ (ಮಲೆಯಮತಿ) ಎಂಬುವವಳು ಅಲಂಪುರದ ಬ್ರಹ್ಮೇಶ್ವರದೇವರ ಅಂಗಭೋಗಕ್ಕಾಗಿ, ಖಂಡಸ್ಫುಟಿತಜೀರ್ಣ್ನೋ ದ್ಧಾರಕ್ಕಾಗಿ, ಸುಧಾಕರ್ಮ್ಮಾದ್ಯುಪಭೋಗಕ್ಕಾಗಿ, ಪಂಚೋಪಚಾರ ಪೂಜೆಗಾಗಿ, ಐಜೆ ಮೂನೂರರ ಬಳಿಯ ನುಂಡವಲಿ, ಬೋರುವೆಲ್ಲಿ, ಸಳಿಯೂರು ಕಡಂಬೂರು ಗಳನ್ನು ಕನ್ನೆ ಮೂನೂರರ ಬಳಿ ವಡ್ಡಮಾನಿಯನ್ನೂ ಪರಮೇಶ್ವರ ದತ್ತಿಯಾಗಿ ನೀಡಿದಳೆಂದು ಉಲ್ಲೇಖಿಸಿವೆ; ಇದನ್ನು ಬ್ರಹ್ಮೇಶ್ವರದ ಮಹಾಸ್ಥಾನಾಧಿಪತಿಯಾದ ಧರಣೀಂದ್ರರಾಸಿ ಪಂಡಿತನು ಪಡೆದನೆಂದು ಹೇಳಿದೆ.

ಕ್ರಿ.ಶ.೧೧೨೭ರ ಕೊಪ್ಪಳ ಜಿಲ್ಲೆಯ ಕುಕನೂರು ಶಾಸನವು ಬ್ರಾಹ್ಮಣ ಸ್ತ್ರೀಯರು ಕೂಡ ದೇವಾಲಯದ ಧಾರ್ಮಿಕ ಕಾರ್ಯಗಳಿಗಾಗಿ ಪುರುಷರಂತೆಯೇ ದಾನದತ್ತಿಯನ್ನು ನೀಡುತ್ತಿದ್ದರೆಂದು ತಿಳಿಸುತ್ತದೆ. ಈ ಶಾಸನವು ಚಾಳುಕ್ಯ ದೊರೆ ಆರನೆ ವಿಕ್ರಮಾದಿತ್ಯನ ಕಾಲದ್ದು. ಇಲ್ಲಿ ಗಂಗಾಧರಯ್ಯ ನಾಯಕನ ಮಗಳು ಕಾಮಿಯಕ್ಕಳು ತಮ್ಮ ವಂಶಕ್ಕೆ ಸಂಬಂಧಿಸಿದ ಐದು ಮತ್ತರು ಎರೆ ಭೂಮಿಯನ್ನು ಅಲ್ಲಿಯ ಶ್ರೀ ಸಾಸಿರ್ವ್ವರ ಕಯ್ಯೊಳು ಸರ್ವನಮಸ್ಯವಾಗಿ ಪಡೆದು ತಮ್ಮ ಹೆಗ್ಗೆರೆಯ ಸತ್ರಕ್ಕಾಗಿ ಎರಡು ಮತ್ತರು ಭೂಮಿಯನ್ನು ನೀಡಿದಳೆಂದೂ, ಗಂಗಾಧರ್ರಯ್ಯನ ಮಗನಾದ ಶ್ರೀಪತಿನಾಯಕನ ಹೆಂಡತಿ ಚಾಮಿಕವ್ವೆಯು ಶ್ರೀಸಾಸಿರ್ವ್ವರ ಕೈಯಲ್ಲಿ ಪಡೆದು ಶ್ರೀಮೂಲಸ್ಥಾನದೇವರ ನಿವೇದ್ಯಕ್ಕಾಗಿ ತಮ್ಮ ಸ್ಥಳವಾದ ಹೆಗ್ಗೆರೆಯಲ್ಲಿ ಕಾಮಿಯಕ್ಕನ ಭಾಗದ ಒಂದು ಮತ್ತರು ದೇವರಿಗೆ ಭೂದಾನ ನೀಡಿದಳೆಂದೂ ಉಲ್ಲೇಖಿಸಿದೆ.

ಹಿಂದೆಯೇ ಹೇಳಿದಂತೆ, ಕ್ರಿ.ಶ.೧೧೨೦ರ ಕಲ್ಬುರ್ಗಿ ಜಿಲ್ಲೆಯ ಹುಣಸಗಿ ಶಾಸನವು(ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪೂರ್ವೋಕ್ತ, ಪು. ೨೭೯-೨೩೩) ಆರನೇ ವಿಕ್ರಮಾದಿತ್ಯನ ಪಟ್ಟಮಹಾದೇವಿ ಮಲೆಯಮತಿ ದೇವಿಯು 'ನಿತ್ಯ ಭೂಮಿದಾನ'ದಲ್ಲಿ ನಿರತಳಾಗಿದ್ದುದನ್ನು ತಿಳಿಸುತ್ತದೆ. ಇದರಿಂದ ಈಕೆಯು ಭೂದಾನ ಮಾಡುವಲ್ಲಿ ಇತರ ರಾಣಿಯರಿಗಿಂತಲೂ ಮುಂದಿದ್ದಳೆಂದೂ, ಪ್ರತಿದಿನವು ಭೂದಾನ ನೀಡುತ್ತಿದ್ದಳೆಂದೂ ಊಹಿಸಬಹುದಾಗಿದೆ.

ಕ್ರಿ.ಶ.೧೦೫೧ರ ವರಂಗಲ್ ಜಿಲ್ಲೆಯ ಮಲ್ಲೇಶ್ವರಂನ ಶಾಸನವೊಂದು(ಕ.ವಿ.ಶಾ.ಸಂ. ೫, ಪೂರ್ವೋಕ್ತ, ಪು.೧೩೦-೧೩೨) ಚಾಳುಕ್ಯದೊರೆ ತ್ರೈಲೋಕ್ಯಮಲ್ಲದೇವನ ಮಹಾಮಂಡಳೇಶ್ವರನಾದ ಕುಮಾರ ವಿಜಯಾದಿತ್ಯದೇವನೂ ಮೈಳಲದೇವಿಯೂ ಕೂಡಿ ಅಗಸ್ತ್ಯೇಶ್ವರದೇವರ ಚತ್ರಕ್ಕೆ ಎರಡು ಗ್ರಾಮಗಳನ್ನು ದತ್ತಿಯಾಗಿ ನೀಡಿದರೆಂದು ಉಲ್ಲೇಖಿಸುತ್ತದೆ. ಕ್ರಿ.ಶ. ೧೦೪೨-೬೮ರ ಮಹಬೂಬ್‌ನಗರ ಜಿಲ್ಲೆಯ ಗಂಗಾಪುರ ಶಾಸನವು(ಅದೇ, ಪು.೧೧೫-೧೧೭) ಮಹಾಮಂಡಳೇಶ್ವರ ಏಂಕಣಚೋಳ ಮಹಾರಾಜ ಹಾಗೂ ಪದ್ಮಲದೇವಿಯರ ಮಗಳಾದ ಮಲ್ಲಹಣಿದೇವಿ ಎಂಬುವವಳು ಭೀಮೇಶ್ವರ ದೇವಾಲಯವನ್ನು ಮಾಡಿಸಿದಳೆಂದು ಹೇಳುತ್ತದೆ.

ಕ್ರಿ.ಶ.೧೧೨೧ರ ಇದೇ ಪ್ರದೇಶದ ಭೂತಪುರ ಶಾಸನವು(ಕ.ವಿ.ಶಾ.ಸಂ. ೫, ಪೂರ್ವೋಕ್ತ, ಪು. ೧೩೦-೧೩೨) ಚಾಳುಕ್ಯ ದೊರೆ ಆರನೆಯ ವಿಕ್ರಮಾದಿತ್ಯನ ರಾಣಿ ಚಂದಲದೇವಿಯರ ಮಗ ಹಾಗೂ ಮಹಾ ಮಂಡಳೇಶ್ವರ ಕುಮಾರ ತೈಲಪದೇವನೂ ಆತನ ರಾಣಿ ಲಕ್ಷ್ಮಾದೇವಿ ಹಾಗೂ ಮಕ್ಕಳು ಸೇರಿ ಪೆರ್ಮಾಡಿದೇವ ಬಿಕ್ಕಿದೇವನೊಂದಿಗೆ ಆದಿವಾರದಂದು ನೆಕ್ಕೊಂಡೆಯ ಶ್ರೀರಾಮೇಶ್ವರ ದೇವರ ಅಂಗಭೋಗ ಮತ್ತು ರಂಗಭೋಗಕ್ಕಾಗಿ ಗಂಧ, ಧೂಪ, ದೀಪ, ನಿವೇದ್ಯಕ್ಕಾಗಿ ಮತ್ತು ಅಲ್ಲಿಯ ತಪೋಧನರ ಆಹಾರಕ್ಕಾಗಿ "ತ್ರಿಭೋಗಾಭ್ಯಂತರವಾಗಿ ಕಂದೂರಿನ

ಸಾವಿರದ ನೂರು ಬಾಡದ ಸಮಕಟ್ಟಿನ ಕಂದೂರು ೭೦ರ ಬಳಿಯ ಬಾಡಂ ಬೂದುಪೂರಂ" ದಾನವಾಗಿ ನೀಡಿದರೆಂದು ಹೇಳುತ್ತದೆ.

ಕ್ರಿ.ಶ.೧೧೦೫ರ ಸುರಪುರ ತಾಲೂಕಿನ ಮುದನೂರ ಶಾಸನವು(ಸುರಪುರ ತಾಲೂಕಿನ ಶಾಸನಗಳು, ಪೂರ್ವೋಕ್ತ, ಪು.೨೦೧) ಕಲ್ಯಾಣ ದೊರೆ ತ್ರಿಭುವನ ಮಲ್ಲದೇವನ ಮಹಾ ಮಂಡಳೇಶ್ವರನಾದ ಜೋಗಮರಸರನ ಹೆಂಡತಿ ತಾರಾದೇವಿಯನ್ನು "ದಾನವಿನೋದೆ ಸಕಳ ಧರ್ಮಶಾಸ್ತ್ರಾರ್ಥಪ್ರಮೋದೆ ಕಸ್ತೂರೀಕಾಮೋದೆಯರಪ್ಪ ಶ್ರೀಮತ್ತಾರಾದೇವಿಯರು" ಎಂದು ಹೊಗಳಿ, ಈಕೆಯು ಮುದೆನೂರು ಅಗ್ರಹಾರದ ಒಡೆಯರಾದ ಪ್ರಮುಖ ಅಶೇಷ ಮಹಾಜನಗಳಿಗೆ ೫೦ ಗದ್ಯಾಣ ಪೊನ್ನ ಕೊಟ್ಟು, ಉತ್ತರೇಶ್ವರ ದೇವರಿಗೆ ದಕ್ಷಿಣ ಭಾಗದ ಹೊಲದಲ್ಲಿ ರಾಮೇಶ್ವರ ದೇವರ ಮಾನ್ಯದ ಕೆಯ್ಯಿಂ ಪಶ್ಚಿಮಕ್ಕೆ ೧೦ ಮತ್ತರು ಭೂಮಿಯನ್ನು ದಾನ ನೀಡಿದಳೆಂದು ಉಲ್ಲೇಖಿಸುತ್ತದೆ.

ಕ್ರಿ.ಶ.೧೦೩೧ರ ರಾಯಚೂರ ಜಿಲ್ಲೆಯ ಬಲ್ಲಟಗಿ ಶಾಸನವು(ಕ.ವಿ.ಶಾ.ಸಂ. ೭, ಪೂರ್ವೋಕ್ತ, ಪು. ೩೦೮-೩೦೯)ಚಾಲುಕ್ಯ ದೊರೆ ಜಗದೇಕಮಲ್ಲನ ರಾಣಿ ಸೋಮಲದೇವಿಯು ದಿಗ್ಗಿಗೆಯ ಮಧುಸೂದನ ಭಟ್ಟರಿಗೆ ಭತ್ತಗ್ರಾಮ ಬಳ್ಳನಿಟ್ಟಗೆಯಲ್ಲಿ ಹಿರಿಯಕೋಲಲ್ಲಿ ೧೦೦ ಮತ್ತರು ಭೂಮಿಯನ್ನು ದಾನ ಮಾಡಿದಳೆಂದು ತಿಳಿಸುತ್ತದೆ.

ಕ್ರಿ.ಶ. ೧೦೫೮ರ ಇದೇ ಊರಿನ ಶಾಸನವೊಂದು(ಅದೇ, ಪು.೧೭೦). ಚಾಲುಕ್ಯ ದೊರೆ ತ್ರೈಲೋಕ್ಯಮಲ್ಲ ದೇವನ ರಾಣಿ ಚಾಮಲದೇವಿಯು ಮಲೆಯ (ಮಾಳಾಪೂರ) ನೆಲೆವೀಡಿನಲ್ಲಿದ್ದಾಗ, ಅಕ್ಷಯ ಪರ್ವ ಇದ್ದುದರಿಂದ ತುಂಗಾಭದ್ರೆ ಕೃಷ್ಣವೆಣ್ಣಾನದೀ ಸಂಗಮದಲ್ಲಿ ತೀರ್ಥಸ್ನಾನ ಕೈಗೊಂಡುದುರ ನೆನಪಿಗಾಗಿ ಎಡೆದೊರೆ ೨೦೦೦ದಲ್ಲಿಯ ಮೊಸಳಿಕಲ್ಲು ೩೦೦ರಲ್ಲಿ ಭತ್ತಗ್ರಾಮ ಬಲ್ಲಟಗಿಯಲ್ಲಿ ದಾನಮಾಡಿದಳೆಂದು ದಾಖಲಿಸಿದೆ.

ಕ್ರಿ.ಶ.೧೧೧೫ರ ಇದೇ ಊರಿನ ಶಾಸನವು(ಅದೇ, ಪು.೧೮೬)ಚಾಳುಕ್ಯ ದೊರೆ ತ್ರಿಭುವನಮಲ್ಲ ದೇವನ ರಾಣಿ ಚಂದಲದೇವಿಯು ಕಲಿದೇವರ ನೈವೇದ್ಯ ಅಂಗಭೋಗ, ಖಂಡಸ್ಫುಟಿತ ಜೀರ್ಣೋದ್ಧಾರಕ್ಕಾಗಿ ೧೨ ಮತ್ತರು ಕರಿಯ ನೆಲವನ್ನು ದಾನ ನೀಡಿದಳೆಂದು ಉಲ್ಲೇಖಿಸುತ್ತದೆ.

ಹೀಗೆ ಅಂದಿನ ಮಹಿಳೆಯರು ರಾಜಕೀಯ ರಂಗದಲ್ಲಿಯೂ ಸಾಮಾಜಿಕ ರಂಗದಲ್ಲಿಯೂ ಮಹತ್ತರ ಪಾತ್ರವಹಿಸಿದ್ದರು. ಅವುಗಳಲ್ಲಿ ಧಾರ್ಮಿಕ ವಿಷಯದಲ್ಲಿ ಹೆಚ್ಚಿನ ಆಸ್ಥೆ ಹೊಂದಿದ್ದರೆಂದೂ, ಅದಕ್ಕಾಗಿಯೇ ದೇವಾಲಯಗಳ ನಿರ್ಮಾಣ, ಅವುಗಳ ಜೀರ್ಣೋದ್ಧಾರ ಮಾಡಿಸುವುದು, ಅಲ್ಲದೆ ದೇವರ ಅಂಗಭೋಗ ರಂಗಭೋಗಗಳಿಗಾಗಿ ದಾನದತ್ತಿ ನೀಡುವುದು ಕಂಡುಬರುತ್ತದೆ.

ಅಲ್ಲದೆ ತಪೋಧನರ ಜೀವನೋಪಾಯಕ್ಕಾಗಿ, ಓದುವ ವಿದ್ಯಾರ್ಥಿಗಳ ಆಹಾರಕ್ಕಾಗಿ, ಛತ್ರಗಳ ನಿರ್ವಹಣೆಗಾಗಿ ಹೀಗೆಯೆ ಹಲವು ಹತ್ತು ರೀತಿಯ ಸಮಾಜಮುಖಿ ಕಾರ್ಯಗಳಲ್ಲಿ ಮೇಲ್ವರ್ಗದ ಮಹಿಳೆಯರಲ್ಲದೆ, ಸಾಮಾನ್ಯ ವರ್ಗದ ಮಹಿಳೆಯರು ಕೂಡ, ತಮಗಾದ ರೀತಿಯಲ್ಲಿ ದಾನದತ್ತಿಗಳನ್ನು ನೀಡಿದುದನ್ನು, ಇನ್ನೂ ಕೆಲವು ಕಡೆ ಸತಿ ಪತಿಗಳೂ ಮಕ್ಕಳೂ ಕೂಡಿ ದಾನ ನೀಡಿರುವುದನ್ನು ಕಾಣಬಹುದಾಗಿದೆ.

ಅಂತೂ ಮಹಿಳೆಯರ ಕಾರ್ಯ ಚಟುವಟಿಕೆಗಳನ್ನು ಆಡಳಿತ ರಂಗ, ಧಾರ್ಮಿಕ ರಂಗ ಮತ್ತು ಸಾಮಾಜಿಕರಂಗ ಎಂದು ಮೂರು ರಂಗಗಳಿಗೆ ಹೊಂದಿಸಬಹುದು. ಇದು ಅವರ ಪ್ರಧಾನ ರಂಗವಾದ ಕೌಟುಂಬಿಕ ರಂಗಕ್ಕೆ ಹೊರತಾದುದು. ಅವರು ವಿದ್ಯೆಗಳಲ್ಲಿ ಕಲೆಗಳಲ್ಲಿ ಕೂಡ ಪ್ರಾವೀಣ್ಯ, ನೈಪುಣ್ಯಗಳನ್ನು ಗಳಿಸಿದ್ದಾರೆಂಬುದನ್ನು ಇಲ್ಲಿ ಮನಗಾಣಬಹುದು.

ಅಧ್ಯಾಯ ಆರು

ಧಾರ್ಮಿಕ ಅಧ್ಯಯನ

ಅಧ್ಯಾಯ ಆರು

ಧಾರ್ಮಿಕ ಅಧ್ಯಯನ

ಭಾರತವು ಇಡೀ ಜಗತ್ತಿಗೆ ಅಧ್ಯಾತ್ಮಿಕ ಗುರು ಎನಿಸಿದೆ. ಇಲ್ಲಿ ಪುರಾತನ ಕಾಲದಿಂದಲೂ ಅನೇಕ ಋಷಿಮುನಿಗಳು ತಮ್ಮ ಕಠಿಣ ತಪಸ್ಸಿನಿಂದ ಸಿದ್ಧಿಗಳನ್ನು ಪಡೆದಿದ್ದರು ಇಂತಹ ತಪಸ್ಸಿನಿಂದಲೇ ತಮ್ಮ ಇಷ್ಟಾರ್ಥಗಳನ್ನು ಪಡೆದುಕೊಳ್ಳುತ್ತಿದ್ದರು ಎಂಬುವುದಕ್ಕೆ ಅನೇಕ ಪುರಾಣಗಳು ಶಾಸನಗಳು ಸಾಕ್ಷಿಯಾಗುತ್ತವೆ. ಪ್ರಸ್ತುತದಲ್ಲಿ ಅಧ್ಯಯನಕ್ಕೆ ತೆಗೆದುಕೊಂಡಿರುವ ತೆಲಂಗಾಣ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಗಳು, ವಿವಿಧ ಧರ್ಮಗಳಿಗೆ ನೆಲೆವೀಡಾಗಿರುವುದು ಕಂಡುಬರುತ್ತದೆ. ಇದಕ್ಕೆ ತಿಪ್ಪೇರುದ್ರಸ್ವಾಮಿಯವರು ಕೊಡುವ ವಿವರಣೆ ಹೀಗಿದೆ: "ಕರ್ನಾಟಕ ತನ್ನ ಜೀವನದ ಎಲ್ಲ ಮುಖಗಳಲ್ಲಿಯೂ ಧರ್ಮವನ್ನಳವಡಿಸಿಕೊಂಡಿತ್ತು. ವೇದ ಉಪನಿಷತ್ತುಗಳು, ಆಗಮ ಸ್ಮೃತಿಗಳು, ಇತಿಹಾಸ ಪುರಾಣಗಳು ನಿರೂಪಿಸಿದ ಮತ್ತು ರೂಪಿಸಿದ ಭಾರತೀಯ ಸಂಸ್ಕೃತಿಯ ಒಂದು ಅವಿಭಾಜ್ಯವಾದ ಅಂಗವಾಗಿ ಇದು ಬೆಳೆದುದಲ್ಲದೆ ಆ ಪರಂಪರೆಯನ್ನು ಬೆಳೆಸುವುದಕ್ಕೆ ತನ್ನ ಕೊಡುಗೆಯನ್ನೂ ನೀಡಿತು. ಭೌಗೋಳಿಕ ದೃಷ್ಟಿಯಿಂದಲೂ ದಕ್ಷಿಣ ಭಾರತದ ಕೇಂದ್ರವಾಗಿರುವ ಈ ನಾಡು, ಉದಾರವಾದ ಪ್ರಕೃತಿಯ ಅನುಕೂಲಗಳನ್ನು ಒದಗಿಸಿ ಎಲ್ಲ ಧರ್ಮಗಳನ್ನೂ ಆಕರ್ಷಿಸಿತು. ವೇದಕಾಲಕ್ಕಿಂತ ಪ್ರಾಚೀನವಾದ 'ನಾಗಧರ್ಮ'ದಿಂದ ಹಿಡಿದು ಕಾಲಕಾಲಕ್ಕೆ ಬಂದ ಎಲ್ಲ ಧರ್ಮಗಳೂ ಇಲ್ಲಿ ಆಶ್ರಯ ಪಡೆದವು. ಧರ್ಮ ಸಮನ್ವಯದ ಆದರ್ಶಕ್ಕೆ ಸಮೃದ್ಧವಾದ ರಂಗಭೂಮಿಯಾಗಿ ಪರಿಣಮಿಸಿತು ಕರ್ನಾಟಕ" ಇದು ಸಮಂಜಸವಾದುದು.

ಧರ್ಮವೆಂಬುದು ಕೂಡ ವಿಶಾಲಾರ್ಥವುಳ್ಳುದಾಗಿದೆ. ಸರಳವಾಗಿ ಹೇಳುವುದಾದರೆ, "ಧರ್ಮ' ಶಬ್ದಕ್ಕೆ ಎರಡರ್ಥಗಳಿವೆ. ಒಂದು ವಸ್ತುವಿನ ಸ್ವಭಾವವು ಧರ್ಮವೆನಿಸುವುದು. ಅಗ್ನಿಗೆ ಸುಡುವಿಕೆಯು ಧರ್ಮವಾಗಿದೆ, ಆತ್ಮಕ್ಕೆ ಚೈತನ್ಯವು ಧರ್ಮವಾಗಿದೆ. ಇನ್ನೊಂದು ಆಚಾರವು ಚಾರಿತ್ರ್ಯವು ಧರ್ಮವೆನಿಸುವುದು. ಈ ಎರಡನೆಯ ಅರ್ಥದಲ್ಲಿ ಯಾವುದರಿಂದ ಅಭ್ಯುದಯ

ಮತ್ತು ನಿಃಶ್ರೇಯಸ ಮುಕ್ತಿಯು ಲಭಿಸುವುದೋ ಅದು ಧರ್ಮವೆಂಬ ಮಾತೂ ಸಮಾವೇಶವಾಗುತ್ತದೆ". "ಯತೋಽಭ್ಯುದಯನಿಶ್ರೇಯಸಸಿದ್ಧಿ: ಸ ಧರ್ಮ:" ಎಂದರೆ ಯಾವುದರಿಂದ ಐಹಿಕ ಅಭ್ಯುದಯವೂ ಪಾರಲೌಕಿಕ ಸಿದ್ಧಿಯೂ ಉಂಟಾಗುವುದೋ ಅದೇ ಧರ್ಮ ಎಂಬುದಾಗಿ ಆಚಾರ್ಯ ಸೋಮದೇವನ 'ನೀತಿವಾಕ್ಯಾಮೃತ'ವು ವಿವರಣೆ ನೀಡುತ್ತದೆ.

ಮಾನವನು ತನ್ನ ಬೇಕುಬೇಡಗಳನ್ನು, ದೈಹಿಕ ಅಗತ್ಯಗಳನ್ನು ಪೂರೈಸಿಕೊಳ್ಳಲು ರಾಜಕೀಯ, ಸಾಮಾಜಿಕ, ಆರ್ಥಿಕ, ವೈವಾಹಿಕ, ಕೌಟುಂಬಿಕ ವ್ಯವಸ್ಥೆಗಳನ್ನು ರೂಪಿಸಿಕೊಂಡಂತೆಯೇ ಮಾನಸಿಕ ನೆಮ್ಮದಿಯನ್ನು ಹೊಂದಲು ಧಾರ್ಮಿಕ ವ್ಯವಸ್ಥೆಯನ್ನು ರೂಢಿಸಿಕೊಂಡಂತೆ ತೋರುತ್ತದೆ. ಧರ್ಮದ ಉದ್ದೇಶವೇ ಜೀವನಕ್ಕೆ ಸಾರ್ಥಕತೆಯನ್ನು ಒದಗಿಸುವುದಾಗಿದೆ. ಧರ್ಮವೆಂದರೆ ಮತೀಯ ಆಚಾರ ವಿಚಾರಗಳ ಹಿಂದಿರುವ ಒಟ್ಟು ಮನೋವೃತ್ತಿಗಳ ಮೊತ್ತವೇ ಆಗಿದೆ.

ಶತಶತಮಾನಗಳಿಂದ ಆಳಿದ ಈ ಭಾಗದ ಅರಸರು ವಿವಿಧ ಧರ್ಮಗಳಿಗೆ ಆಶ್ರಯದಾತರಾಗಿ, ಎಲ್ಲ ಧರ್ಮಗಳೂ ಇಲ್ಲಿ ಬಾಳಿ ಬೆಳಗುವಂತೆ ಮಾಡಿದ್ದಾರೆ. ಇಲ್ಲಿ ವೈಧಿಕ, ಬೌದ್ಧ, ಜೈನ, ಶೈವ, ವೀರಶೈವ, ಇಸ್ಲಾಂ ಹಾಗೂ ಕ್ರೈಸ್ತ ಇತ್ಯಾದಿ ಧರ್ಮಗಳೆಲ್ಲವೂ ನೆಲೆಗೊಂಡು ವಿಶಿಷ್ಟವಾದ ಸ್ಥಾನ ಪಡೆದವು. ಹೀಗೆ ಈ ಪ್ರದೇಶಗಳು ಸರ್ವಧರ್ಮಗಳ ನೆಲೆಗಳಾಗಿವೆ. ಇಲ್ಲಿ ಲಭಿಸುವ ಕನ್ನಡ ಶಾಸನಗಳ ಆಧಾರದ ಮೇಲೆ ಇಲ್ಲಿಯ ಧಾರ್ಮಿಕ ವ್ಯವಸ್ಥೆಯನ್ನು ಅಧ್ಯಯನ ಮಾಡಲಾಗಿದೆ.

ಬೌದ್ಧಧರ್ಮ

ಪ್ರಾಚೀನ ಭಾರತ ಪ್ರಥಮ ರಾಜಮನೆತನವೆಂದರೆ ಮಗಧ ಸಾಮ್ರಾಜ್ಯ. ಇದು ಕ್ರಿ.ಪೂ. ನಾಲ್ಕನೆಯ ಶತಮಾನದಲ್ಲಿ ನಂದರ ಆಳ್ವಿಕೆ ಸಂದರ್ಭದಲ್ಲಿ ಉತ್ತರದಿಂದ ದಕ್ಷಿಣಕ್ಕೆ ವಿಸ್ತರಣೆಗೊಂಡಿತ್ತು. ಆದರೆ ಕ್ರಿ.ಪೂ.೩೨೨ರಲ್ಲಿ ನಂದರನ್ನು ಕಡೆಗಣಿಸಿ ಉತ್ತರ ಭಾರತದಲ್ಲಿ ಪ್ರವರ್ಧಮಾನಕ್ಕೆ ಬಂದ ಮೌರ್ಯರು ಇವರು ನೇರವಾಗಿ ದಕ್ಷಿಣ ಭಾರತದ ಕರ್ನಾಟಕದ ಪ್ರದೇಶಗಳನ್ನು ಆಳ್ವಿಕೆ ಮಾಡಿದ್ದಾರೋ ಅಥವಾ ಇಲ್ಲವೋ ಆದರೆ ಚಂದ್ರಗುಪ್ತನ ಮಗ ಬಿಂದುಸಾರ ಆತನ ಮಗ ಸಾಮ್ರಾಟ್ ಅಶೋಕ. ಈತನ ಕಾಲದ ಕೆಲವು ಶಾಸನಗಳು ಕರ್ನಾಟಕದ ಕಲಬುರ್ಗಿಯ ಸನ್ನತಿ, ರಾಯಚೂರಿನ ಮಸ್ಕಿ, ಕೊಪ್ಪಳದ ಗವಿಮಠ, ಪಾಲ್ಕಿಗುಂಡ, ಬ್ರಹ್ಮಗಿರಿ, ಜಟಿಂಗ, ರಾಮೇಶ್ವರ ಪ್ರದೇಶಗಳಲ್ಲಿ ಲಭಿಸಿವೆ. ಇದರಿಂದ ಈ ಪ್ರದೇಶಗಳಲ್ಲಿ ಬೌದ್ಧ ಧರ್ಮವು ಕ್ರಿ.ಪೂ.ದ ಸುಮಾರಿನಲ್ಲಿಯೇ ಪ್ರಚಲಿತವಿತ್ತು ಎಂಬುದು ಸ್ಪಷ್ಟವಾಗುತ್ತದೆ. ಆದರೆ ಈ ಶಾಸನಗಳ ಭಾಷೆ ಪ್ರಾಕೃತವಾದ್ದರಿಂದ ಪ್ರಸ್ತುತ ಅಧ್ಯಯನದ ವಲಯದಿಂದ ಇವುಗಳನ್ನು ಹೊರಗಿಡಲಾಗಿದೆ. ಹೀಗೆ ಭಾರತದಲ್ಲಿ ಶಾಸನ ಹಾಕಿಸುವ ಪರಂಪರೆಗೆ ಬಹುಶಃ ಬೌದ್ಧಧರ್ಮವೇ ನಾಂದಿಯಾಗಿದೆ ಎಂದು ಹೇಳಬಹುದು.

ಜೈನಧರ್ಮ

ಜೈನಧರ್ಮವು ಇಲ್ಲಿಯ ಪ್ರಾಚೀನ ಧರ್ಮಗಳಲ್ಲಿ ಒಂದಾಗಿದೆ. ಕ್ರಿಪೂ. ೩ನೇ ಶತಮಾನದಲ್ಲಿ ಮೌರ್ಯ ವಂಶದ ಚಂದ್ರಗುಪ್ತ ಹಾಗೂ ಭದ್ರಬಾಹು ಇವರು ಉತ್ತರ ಭಾರತದಲ್ಲಿ ಸಂಭವಿಸಿದ ಭೀಕರ ಬರಗಾಲದ ಕಾರಣದಿಂದ ದಕ್ಷಿಣ ಭಾರತದ ಕರ್ನಾಟಕದ ಶ್ರವಣಬೆಳಗೊಳದಲ್ಲಿ ಬಂದು ನೆಲೆಸಿದರು ಎಂಬ ವಿಚಾರವು ಲಭಿಸುವ ಶಾಸನಗಳಿಂದ ಮತ್ತು 'ವಡ್ಡಾರಾಧನೆ' ಮುಂತಾದ ಕೃತಿಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ.

ಕನ್ನಡ ನಾಡಿನ ಕದಂಬ, ರಾಷ್ಟ್ರಕೂಟ, ಗಂಗ, ಚಾಳುಕ್ಯ, ಹೊಯ್ಸಳ ಮುಂತಾದ ಅರಸುಮನೆತನಗಳೆಲ್ಲವೂ ಜೈನಧರ್ಮವನ್ನು ಪಾಲಿಸಿ ಬೆಳೆಸಿದವು. ಇದರಿಂದಾಗಿ ಇಲ್ಲಿ ಜೈನ ಧರ್ಮಕ್ಕೆ ಹೆಚ್ಚಿನ ಪ್ರಾಶಸ್ತ್ಯ ದೊರಕಿದೆ. ಇದು ಈ ಪ್ರದೇಶಗಳಲ್ಲಿ ಲಭಿಸುವ ಶಾಸನಗಳಿಂದಲೂ ವೇದ್ಯವಾಗುತ್ತದೆ.

ಕ್ರಿ.ಶ.೮೮೧ರ ಕೊಪ್ಪಳ ಜಿಲ್ಲೆಯ ಶಾಸನವು(ಕೊಪ್ಪಳ ಜಿಲ್ಲೆ ಶಾ.ಸಂ, ಪೂರ್ವೋಕ್ತ, ಪು.೮೩)ಈ ಪ್ರದೇಶದಲ್ಲಿ ಜೈನಧರ್ಮಕ್ಕೆ ಸಂಬಂಧಿಸಿದಂತೆ ದೊರಕಿದ ಮೊಟ್ಟಮೊದಲ ಶಾಸನವಾಗಿದೆ. ಇದರಲ್ಲಿ ಕುಣ್ಡಕುನ್ದಾನ್ವಯದ ಏಕಚಟ್ಟುಗದ ಭಟಾರರ ಶಿಷ್ಯನಾದ ಸರ್ವನಂದಿ ಭಟಾರರು ಇಲ್ಲಿದ್ದು, ಈ ಕೊಪ್ಪಳ ಊರಿಗೂ ತೀರ್ಥಕ್ಕೂ ಉಪಕಾರಿಯಾಗಿ, ಕೆಲವು ಕಾಲ ತಪಸ್ಸನ್ನು ಮಾಡಿ ವ್ರತವನ್ನು ಸ್ವೀಕರಿಸಿ ಮುಡಿಪಿದರು; ಇಂತಹ ಸರ್ವನಂದಿ ಮುನಿಗೆ ಮಂಗಳವಾಗಲೆಂದು ಹೇಳಿದೆ. ಇದರಿಂದ ಕೊಪ್ಪಳವು ಅಂದು ಜೈನರ ತೀರ್ಥಸ್ಥಳವಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

ಕ್ರಿ.ಶ. ೮೮೩ರ ಅದೇ ಜಿಲ್ಲೆಯ ಇನ್ನೊಂದು ಶಾಸನವು(ಅದೇ, ಪು. ೧೦೮)ರಾಷ್ಟ್ರಕೂಟರ ರಾಜ ಇಂದ್ರನು ಆಳುತ್ತಿದ್ದಾಗ ಆತನ ದಂಡನಾಯಕನಾದ ಮಾಮರಸನು ಸಿದ್ಧಕುಪಣಕ್ಕೆ ತೀರ್ಥವಂದನಾರ್ಥವಾಗಿ ಬಂದಿದ್ದನೆಂದೂ, ಆ ಸಮಯದಲ್ಲಿ ಕದಂಬರ ಪೆರ್ಮದೇವ ಮತ್ತು ದಡಿಯಮರಸರು ಪುಣ್ಯವಾಗಲೆಂದು ತಾವು ಕಟ್ಟಿಸಿದ ಬಸದಿಗೆ ಕಳಸಾರೋಹಣ ಮಾಡಿದರೆಂದೂ ಹೇಳಲಾಗಿದೆ.

ಕ್ರಿ.ಶ. ೯೬೪ರ ಒಂದು ಶಾಸನವು(ಅದೇ, ಪು. ೭೦) ರಾಷ್ಟ್ರಕೂಟರ ಮುಮ್ಮಡಿ ಕೃಷ್ಣನು ಆಳುತ್ತಿದ್ದಾಗ ಯಾದವ ವಂಶದ ಶಂಕರಗಂಡನು ತನ್ನ ಹೆಸರಿನಲ್ಲಿ ಕುಪಣದಲ್ಲಿ 'ಜಯಧೀರ' ಎಂಬ ಜಿನಾಲಯವನ್ನು ಮಾಡಿಸಿ, ಅದಕ್ಕೆ ತಳ ವೃತ್ತಿಯಾಗಿ ಭೂದಾನವನ್ನು ಬೇಡಿದಾಗ ಚಿಕೊಟ್ಟಯ್ಯನೆಂಬವನು ವಿನಯನಂದಿ ಭಟಾರರ ಶಿಷ್ಯರಾದ ನಾಗನಂದಿಪಂಡಿತ ಭಟಾರರ

ಕಾಲನ್ನು ತೊಳೆದು ಭೂಮಿಯನ್ನು ದತ್ತಿಯಾಗಿ ಬಿಡುತ್ತಾನೆ ಎಂದು ಹೇಳುತ್ತದೆ. ಈ ಶಾಸನವು ಜಿಹೊಟ್ಟಯ್ಯ ಹಾಗೂ ನಾಗನಂದಿ ಪಂಡಿತರ ವಂಶಾವಳಿಯನ್ನೂ ನಿರೂಪಿಸುತ್ತದೆ.

ಕ್ರಿ.ಶ.೭೪ರ ಕೊಪ್ಪಳ ಜಿಲ್ಲೆಯ ಇನ್ನೊಂದು ಶಾಸನವು(ಅದೇ, ಪು.೮೦) ಸೇನಗಣಕ್ಕೆ ಸೇರಿದ್ದ ಬುದ್ಧಸೇನ ಪಂಡಿತನ ಶಿಷ್ಯ ಸಾಧುಸೇನ ಪಂಡಿತನು ರಾಜಪೂಜಿತನಾಗಿ ಕೆಲವು ದಿನಗಳು ಕುಪಣದಲ್ಲಿದ್ದನೆಂದು ಉಲ್ಲೇಖಿಸುತ್ತದೆ. ಈತನು ತನ್ನ ಅವಸಾನ ಕಾಲದಲ್ಲಿ ಮಾನ್ಯಖೇಟದ ಏಕಚಟ್ಟುಗದ ಬಸದಿಯಲ್ಲಿ ಸನ್ಯಾಸವನ್ನು ಸ್ವೀಕರಿಸಿ, ಮೋಕ್ಷ ಹೊಂದುತ್ತಾನೆ. ಈ ಸಾಧುಸೇನ ಪಂಡಿತನ ಶಿಷ್ಯನಾದ ಸಿದ್ಧಸೇನ ಪಂಡಿತನು ತನ್ನ ಗುರುವಿನ ನೆನಪಿನಲ್ಲಿ ನಿಸಿದಿಗೆಯನ್ನು ಇಲ್ಲಿ ಮಾಡಿಸುತ್ತಾನೆ.

ಕ್ರಿ.ಶ.೧೦ನೆಯ ಶತಮಾನದ ಸುಮಾರಿನ ಕರೀಂನಗರ ಜಿಲ್ಲೆಯ ಕುರ್ಕ್ಯಾಲದ ಶಾಸವು (ಕ.ವಿ.ಶಾ.ಸಂ.೫, ಭಾಗ ೨, ಪೂರ್ವೋಕ್ತ, ಪು.೬೪) ಜೈನಧರ್ಮದ ದೃಷ್ಟಿಯಿಂದ ತುಂಬ ಪ್ರಮುಖವಾದುದು. ಜಿನವಲ್ಲಭನು ಸಾಮಾನ್ಯವಾಗಿದ್ದ ಒಂದು ಗುಡ್ಡವನ್ನು ಸುಂದರವೂ ಪವಿತ್ರವೂ ಆದ ವೃಷಭಗಿರಿಯೆಂಬ ಪ್ರಸಿದ್ಧ ಯಾತ್ರಾಸ್ಥಳವಾಗಿ ಮಾಡಿದುದನ್ನು ಈ ಶಾಸನವು ಕಾವ್ಯಮಯವಾಗಿ ವರ್ಣಿಸುತ್ತದೆ. ಈ ಜಿನವಲ್ಲಭನು ಕೊಣ್ಡಕುನ್ದೆಯ ದೇಶಿಗಗಣದ ಪೊತ್ಥಗೆಯ ಬಟಿಯ ಪಂಡರಂಗವಲ್ಲಿಯ ಜಯಣಂದಿ ಸಿದ್ಧಾಂತ ಭಟ್ಟಾರಕರ ಗುಡ್ಡ [ಶಿಷ್ಯ]ನಾಗಿದ್ದನು. ಈತ ಆ ಊರ ಬಳಿಯ ಗುಡ್ಡದ ಮೇಲಿನ ಅನಾದಿ ಸಂಸಿದ್ಧ ಶಿಲೆಯ ಮೇಲೆ ತನ್ನ ಕುಲದೈವವಾದ ಆದ್ಯಂತ ಜಿನಬಿಂಬಗಳನ್ನೂ ಚಕ್ರೇಶ್ವರಿಯನ್ನೂ ಇತರ ಕೆಲವು ಜಿನಪ್ರತಿಮೆಗಳನ್ನೂ ಕೆತ್ತಿಸುತ್ತಾನೆ. ಅನಂತರ ಅದಕ್ಕೆ ಅದ್ದೂರಿಯಾಗಿ ಪೂಜಾದಿಕಾರ್ಯಗಳು ನಡೆಯುವಂತೆ ಏರ್ಪಾಟುಮಾಡುತ್ತಾನೆ. ಅದೇ ಬೆಟ್ಟದ ಪರಿಸರದಲ್ಲಿ ಯಾತ್ರೆಗಾಗಿ ಬರುವ ಯಾತ್ರಿಕರಿಗಾಗಿ ತ್ರಿಭುವನತಿಲಕವೆಂಬ ಬಸದಿಯನ್ನೂ ಕವಿತಾಗುಣಾರ್ಣವವೆಂಬ ಕೆರೆಯನ್ನೂ, ಮದನವಿಳಾಸವೆಂಬ ಬನವನ್ನೂ ಮಾಡಿಸುತ್ತಾನೆ. ತಾನೇ ಸ್ವತಃ ನಿಂತು ಜಿನಪೂಜೆಯು ವೈಭವದಿಂದ ನಡೆಯುವ ಹಾಗೆ ನೋಡಿಕೊಳ್ಳುತ್ತಾನೆ.

ಅವನು ಅಲ್ಲಿ ಮಾಡಿಸುತ್ತಿದ್ದ ಪರ್ವವೂ ಧಾರ್ಮಿಕ ಕೈಂಕರ್ಯಗಳೂ ತುಂಬ ಅತಿಶಯ ವಾಗಿದ್ದವು. ಜನರು ಅದ್ಭುತಕಾರ್ಯವೆಂಬಂತೆ ಕೌತುಕೋತ್ಸಾಹಗಳಿಂದ ಅವನ್ನು ನೋಡುತ್ತಿದ್ದರು. ಆ ಪ್ರತಿಮೆಗಳಿಗೆ ಅವನು ಮಾಡಿಸುತ್ತಿದ್ದ ಕ್ಷೀರಾಭಿಷೇಕವು ಇಡೀ ಬೆಟ್ಟವನ್ನು ಹಾಲಿನಿಂದ ತೊಯ್ಯಿಸುತ್ತಿತ್ತಂತೆ. ನೋಡಲು ಅದೊಂದು ಅದ್ಭುತ ದೃಶ್ಯವಾಗಿತ್ತಂತೆ.

ಇಷ್ಟು ಮಾತ್ರವಲ್ಲದೆ ಅವನು ಅಲ್ಲಿಗೆ ಬರುವ ಮುನಿಗಳು ಶ್ರಾವಕರು ಮುಂತಾದವರಿಗೆಲ್ಲ ಸನ್ಮಾನಗಳನ್ನೂ ದಾನಧರ್ಮಗಳನ್ನೂ ಬಹಳ ವೈಭವದಿಂದ ಮಾಡುತ್ತಿದ್ದನಂತೆ. ಹಾಗಾಗಿ

ಅಲ್ಲಿಗೆ ಮುನಿಗಳು ಶ್ರಾವಕರು ಮುಂತಾದವರು ಅಪಾರ ಸಂಖ್ಯೆಯಲ್ಲಿ ಬಂದು ಸೇರುತ್ತಿದ್ದರು. ಅವರ ಸ್ತುತಿರವವು ಪ್ರತಿಧ್ವನಿಗೊಳ್ಳುತ್ತಿದ್ದುದು, ಅವನ ಕೀರ್ತಿಯನ್ನು ಆ ಪರ್ವತವೇ ಉದ್ಘೋಷಿಸುತ್ತಿದೆಯೋ ಎಂಬಂತೆ ಇತ್ತಂತೆ.

ಒಟ್ಟಾರೆ ಜೈನಧರ್ಮದ ಉದ್ಧಾರಕಾರ್ಯವನ್ನು ಎಷ್ಟು ವೈಭವದಿಂದ ಆತ ಮಾಡಿದ ಎಂಬುದು ಈ ಶಾಸನದಿಂದ ಸ್ಪಷ್ಟವಾಗುತ್ತದೆ. ಅದೇ ರೀತಿ, ಇಲ್ಲಿ ಉಲ್ಲೇಖವಾಗಿರುವ ಪಂಪನ ಧರ್ಮಾಪುರವು ಕೂಡ ಜೈನಧರ್ಮದ ಕೇಂದ್ರವಾಗಿತ್ತು ಎಂಬುದನ್ನು ಈ ಶಾಸನವು ತಿಳಿಸುತ್ತದೆ. ಹೀಗೆ ಜೈನಧರ್ಮವು ಈ ಪ್ರದೇಶದಲ್ಲಿ ಬಹಳ ಪ್ರಭಾವಶಾಲಿಯಾಗಿ ಬೇರುಬಿಟ್ಟಿತ್ತು ಎಂಬುದು ಈ ಶಾಸನದಿಂದ ಸ್ಪಷ್ಟವಾಗುತ್ತದೆ.

ಕ್ರಿ.ಶ.೯೮೩ರ ಕೊಪ್ಪಳದ ಶಾಸನವು(ಕ.ವಿ.ಶಾ.ಸಂ.೨, ಪೂರ್ವೋಕ್ತ, ಪು.೮೩) ಸೋಮದೇವ ಪಂಡಿತನು ಕೊಪ್ಪಳದಲ್ಲಿಯೇ ಸ್ವರ್ಗವನ್ನೇರಿದನೆಂದು ಉಲ್ಲೇಖಿಸಿದೆ. ಕ್ರಿ.ಶ.೯೮೬ರ ಇಲ್ಲಿಯದೇ ಇನ್ನೊಂದು ಶಾಸನವು ಪಲ್ಲವ ವಂಶದ ರಾಮನ ಪತ್ನಿ ರೇವಕಯ್ಯ ಕಂತಿ ಸ್ವರ್ಗನ್ನೇರಿದಳೆಂದು ಹೇಳುತ್ತದೆ.

ಕ್ರಿ.ಶ.೯೮೭ರ ಇಲ್ಲಿಯದೇ ಇನ್ನೊಂದು ಶಾಸನವು ಚಲದಂಕ ಗಂಗನ ಮಗನಾದ ಬಾಸ ಮತ್ತು ಆತನ ಪತ್ನಿ ಕಾವಣಬ್ಬರಸಿ ಇವರ ಮಗಳಾದ ರಬ್ಬಲ ದೇವಿಯು ಚಂದ್ರಭಟ್ಟಾರಕರ ಬಳಿ ದೀಕ್ಷೆ ಸ್ವೀಕರಿಸಿ ಮುಡಿಪಿದಳೆಂದು ಉಲ್ಲೇಖಿಸುತ್ತದೆ. ಕ್ರಿ.ಶ.೯೧ರ ಒಂದು ಶಾಸನವ ಕೊಂಡಕುಂದಾನ್ವಯದ ಬೆಳ್ಳಂಡ ಗಣದ ನೇಮಿಚಂದ್ರ ಭಟಾರನ ಶಿಷ್ಯೆಯರಾದ ಜಕ್ಕಿಯಬ್ಬೆಕಂತಿ ಮತ್ತು ನಿಜಬ್ಬೆಕಂತಿ ಇವರು ಸಮಾಧಿ ಮರಣ ಹೊಂದಿದರು ಎಂದು ಉಲ್ಲೇಖಿಸಿ, ಮುಂದೆ ಈ ಜಕ್ಕಿಯಬ್ಬೆಯು ನಿಜಬ್ಬೆ ಕಂತಿಯ ಮಗಳೆಂದೂ ಜಕ್ಕಿಯಬ್ಬೆಯ ಮಗಳು ರೇವಕಬ್ಬೆಯೆಂದೂ ತಿಳಿಸಿದೆ. ಈ ರೇವಕಬ್ಬೆಯು ಮುಗಾಳಿಯ ಗಾಮುಂಡಿಯಾಗಿದ್ದು ತನ್ನ ತಾಯಿಯ ನೆನಪಿಗಾಗಿ ನಿಸಿದಿ ಕಲ್ಲನ್ನು ನಿಲ್ಲಿಸಿದ್ದಾಳೆಂದು ತಿಳಿಸುತ್ತದೆ.

ಕ್ರಿ.ಶ.೯೨ರ ಒಂದು ಶಾಸನವು ಗಂಗರಾಜ ಎಱೆಗಂಗನ ಮಗಳು ಗೋನಂಬೆ ಕಂತಿಯು ಸ್ವರ್ಗಸ್ಥಳಾದುದನ್ನು ಹೇಳುತ್ತದೆ. ಕ್ರಿ.ಶ.೯೭ರ ಒಂದು ಶಾಸನವು ತ್ರಿಕಾಲಯೋಗಿ ಭಟಾರಕನ ನಿಸಿದಿಕಲ್ಲಾಗಿದೆ. ಅವನು ತನಗೆ ಮೋಕ್ಷ ಸಮೀಪಿಸಿದುದ್ದನ್ನು ಗಮನಿಸಿ, ಕೊಪಣದ ಜಿನಪಾದಗಳ ಬಳಿ ಕುಳಿತು ತಪಸ್ಸು ಮಾಡಿ ಮುಕ್ತಿಯನ್ನು ಸಾಧಿಸಿದನೆಂದು ಹೇಳಿದೆ.

ಕ್ರಿ.ಶ.೯೮ರ ಒಂದು ಶಾಸನವು ಬೂತುಗನ ಮಗಳಾದ ಮಾರಸಿಂಗನ ತಂಗಿಯಾದ ಹರಿಗನ ಪತ್ನಿಯಾದ ಜೆಜ್ಜಾಂಬಿಕೆ ದೇವಿಯು ಮುಡಿಪಿದ ವಿಷಯವನ್ನು ತಿಳಿಸುತ್ತದೆ. ಈಕೆಯ ರೂಪ ಲಾವಣ್ಯಗಳನ್ನು ಈ ಶಾಸನದಲ್ಲಿ ಕಾವ್ಯಾತ್ಮಕವಾಗಿ ವರ್ಣಿಸಿದೆ.

ಕ್ರಿ.ಶ.೧೧೧೩ರ ಒಂದು ಶಾಸನವು(ಅದೇ,) ಬೂತುಗ ಮತ್ತು ಆತನ ಪತ್ನಿ ಪದ್ಮಾವತಿ ಇವರ ಮಗಳಾದ ಬಿಜ್ಜಬ್ಬರಸಿಯು ಆರಾಧನಾ ವಿಧಾನದಿಂದ ರತ್ನತ್ರಯವನ್ನು ಸಾಧಿಸಿಕೊಂಡು ದೇವಲೋಕಕ್ಕೆ ಸಂದಳೆಂದು ಉಲ್ಲೇಖಿಸಿದೆ.

ಇದೇ ರೀತಿ ಕೊಪ್ಪಳದ ೮೦, ೯೪, ೯೭, ೧೨೧, ೧೨೫, ೧೦೬, ೧೨೦, ೧೦೨, ೯೬, ೧೨೭, ೯೧, ೫೨, ೧೧೪, ೧೧೯, ೧೨೪ ಈ ಶಾಸನಗಳಲ್ಲಿ ಜೈನ ಯತಿಗಳೂ, ಜೈನಧರ್ಮೀಯರೂ ಮುಡುಪಿದ ಉಲ್ಲೇಖ ಮತ್ತು ಬಸದಿಯನ್ನು ಕಟ್ಟಿಸಿದ ಉಲ್ಲೇಖ ಇವು ಬರುತ್ತವೆ.

ಕ್ರಿ.ಶ. ೧೦೫೧ರ ತೆಲಂಗಾಣದ ಕರೀಮ್‌ನಗರ ಜಿಲ್ಲೆಯ ಸನಿಗರಂ ಶಾಸನವು ಚಾಲುಕ್ಯ ದೊರೆ ತ್ರೈಲೋಕ್ಯ ಮಲ್ಲನು ಆಳುತ್ತಿರುವಾಗ, ಆತನ ಮಹಾ ಸಾಮಂತ ಕಾಕತೀಯ ಬೇತರಸನ ಪೆರ್ಗಡೆ ವೈಜರಾಜನ ಮಗ ನಾರಣಯ್ಯನು ಸಣಗರದ ದುದ್ಧಮಲ್ಲ ಜಿನಾಲಯವನ್ನು ಜೀರ್ಣೋದ್ಧಾರ ಮಾಡಿಸಿ ಅಲ್ಲಿಯ ಗಾವುಂಡರಾದ ಮುಪ್ಪಡಯ್ಯ ಪುನ್ನರಡ್ಡಿಯನ್ನು ಒಪ್ಪಿಸಿ, ಅದಕ್ಕೆ ಒಂದು ರಾಟಣವನ್ನು ಬಿಟ್ಟಿದನೆಂದು ಉಲ್ಲೇಖಿಸುತ್ತದೆ.

ಕ್ರಿ.ಶ.೧೧ನೇ ಶತಮಾನದ ಇದೇ ಜಿಲ್ಲೆಯ ಕೋರಟ್ಲದ ಶಾಸನವು ಕಲ್ಯಾಣಪುರದಿಂದ ಚಾಲುಕ್ಯ ದೊರೆ ತ್ರೈಲೋಕಮಲ್ಲದೇವನು ಆಳ್ವಿಕೆ ಮಾಡುವಾಗ ಪದ್ಮಣಂದಿಸಿದ್ಧಾಂತದೇವರು ಆಚಾರ್ಯರಾಗಿದ್ದಾಗ ರಟ್ಟಮಾರ್ತಂಡ ಜಿನಾಲಯಕ್ಕೆ ಭೂದತ್ತಿಯನ್ನು ನೀಡಿದುದನ್ನು ದಾಖಲಿಸಿದೆ. ತಿಂತ್ರಿಣಿ ಗಚ್ಛಕ್ಕೆ ಸೇರಿದ ಜೈನ ಪಂಗಡದ ಉಲ್ಲೇಖ ಕೂಡ ಇದರಲ್ಲಿದೆ.

ಕ್ರಿ.ಶ.೧೦೮೨ರ ವರಂಗಲ್ ಜಿಲ್ಲೆಯ ಬಾಣಾಜಿಪೇಟ್ ಶಾಸನವು(ಕ.ವಿ.ಶಾ.ಸಂ.೫, ಭಾಗ ೨, ಪೂರ್ವೋಕ್ತ, ಪು.೬೪) ಚಾಲುಕ್ಯ ದೊರೆ ತ್ರಿಭುವನಮಲ್ಲದೇವನ ಮಹಾಮಂಡಲೇಶ್ವರನಾದ ಉಗ್ರವಾಡಿಯ ಮೇದರಸ ಹಾಗೂ ಕಾಕತೀಯ ಬೇತರಸರ ಆಳ್ವಿಕೆಯಲ್ಲಿ ಕಾಕತೀಯ ಬೇತರಸನು ಮೇದರಸನು ಕಟ್ಟಿಸಿದ ವೀರಕಮಲ ಜಿನಾಲಯಕ್ಕೆ ಭೂಮಿದತ್ತಿಯನ್ನು ನೀಡಿದುದನ್ನು ಹೇಳುತ್ತದೆ.

ಕ್ರಿ.ಶ.೧೧೯೯ರ ಬೀದರ ಜಿಲ್ಲೆಯ ಭಾಲ್ಕಿ ಶಾಸನದಲ್ಲಿ(ಕ.ವಿ.ಶಾ.ಸಂ.೮ ಪೂರ್ವೋಕ್ತ, ಪು. ೧೮)ತ್ರಿಭುವನಮಲ್ಲನು ಕಲ್ಯಾಣದಿಂದ ಆಳುತ್ತಿರುವಾಗ ಆತನ ಮಾಂಡಳಿಕ ಹೆರ್ಮಾಡಿ ದೇವನು ರಾಜಧಾನಿ ಭಲ್ಲುಂಕೆಯ ತ್ರೈಪುರುಷ ದೇವರ ದೀಪದ ಎಣ್ಣೆಗಾಗಿ, ಮೂರು ಗಾಣಗಳನ್ನೂ, ಕಪಿಲೇಶ್ವರ ದೇವರಿಗೆ ಒಂದು ಗಾಣವನ್ನೂ, ಬ್ರಹ್ಮಜಿನಾಲಯಕ್ಕೆ ಒಂದು ಗಾಣವನ್ನೂ, ಭಲ್ಲುಂಕೇಶ್ವರ ದೇವರಿಗೆ ಎಂಟು ಗದ್ಯಾಣಗಳನ್ನೂ ನೀಡಿದ ಉಲ್ಲೇಖವಿದೆ.

ಕ್ರಿ.ಶ. ೧೦೨೭ರ ರಾಯಚೂರು ಜಿಲ್ಲೆಯ ಒಂದು ಶಾಸನವು(ಕ.ವಿ.ಶಾ.ಸಂ.೭ ಪೂರ್ವೋಕ್ತ, ಪು. ೩೧೭-೩೨೧)ಚಾಲುಕ್ಯ ಅರಸ ಜಗದೇಕಮಲ್ಲನ ಕಾಲದಲ್ಲಿ ಈತನ ಮಗಳಾದ ಸಹಜವೆಡಂಗಿ ಸೋಮಲದೇವಿಯು ಪುಲಿಪೊಂದರ ನೆಲೆ ವೀಡಿನಲ್ಲಿದ್ದಾಗ ತಂಬಿವಟ್ಟ ಬೆಸವೋಜ ಎಂಬುವವನ ಬಿನ್ನಪದಂತೆ ಆ ಬೆಸವೋಜನು ಕಟ್ಟಿಸಿದ ಬಸದಿಯ ಭೋಗಕ್ಕೆ ಐವತ್ತು ಮತ್ತರು ಭೂಮಿಯನ್ನೂ ಐವತ್ತು ಮತ್ತರು ಅಕಡಿಯನ್ನೂ ದೀಪಕ್ಕೆ ಒಂದು ಗಾಣ, ಒಂದು ಹೂವಿನ ತೋಟ ಇವನ್ನೂ ದಾನನೀಡಿರುವುದನ್ನು ಉಲ್ಲೇಖಿಸುತ್ತದೆ.

ಇಲ್ಲಿ ಬರುವ ಅಕಡಿ ಎಂಬುದು ಒಂದು ವಿಶಿಷ್ಟ ಪದಪ್ರಯೋಗ. ಇಂದಿಗೂ ಇದು ಬೀದರ ಜಿಲ್ಲೆಯಲ್ಲಿ ಮಾತ್ರ ಬಳಕೆಯಲ್ಲಿ ಉಳಿದಿದೆ. ಉದ್ದು, ಎಳ್ಳು, ಹೆಸರು ಇತ್ಯಾದಿಗಳನ್ನು ಬೆಳೆಯುವಾಗ ಅವುಗಳ ಆರು ಇಲ್ಲವೇ ಎಂಟು ಸಾಲುಗಳಿಗೆ ಒಂದು ಸಾಲಿನಂತೆ ತೊಗರಿಯನ್ನು ಇಲ್ಲವೇ ಕುಸುಬೆಯನ್ನು ಬಿತ್ತಲಾಗುತ್ತದೆ. ಹಾಗೆ ಏಕಕಾಲಕ್ಕೆ ಎರಡು ಬೆಳೆಗಳಿದ್ದು ಅವುಗಳಲ್ಲಿ ನಿರ್ದಿಷ್ಟ ರೀತಿಯಲ್ಲಿ ಬರುವ ಇಂತಹ ತೊಗರಿ ಇಲ್ಲವೇ ಕುಸುಬೆಯ ಸಾಲುಗಳನ್ನು ಅಕಡಿಗಳೆಂದು ಕರೆಯಲಾಗುತ್ತದೆ. ಇದು ಅಳತೆಯ ಮಾನವಾಗಿ ಕೂಡ ಬಳಕೆಯಾಗುವುದುಂಟು. ಉದಾಹರಣೆಗೆ, "ಇದು ಎಷ್ಟು ಅಕಡಿ ಹೊಲ?" ಎಂದರೆ ಇದು ಎಷ್ಟು ಅಕಡಿಸಾಲುಗಳಿಂದ ಕೂಡಿದೆ ಎಂದು ಅರ್ಥ. ಏಕೆಂದರೆ ಪ್ರತಿ ಎರಡು ಅಕಡಿಯ ನಡುವೆ ನಿರ್ದಿಷ್ಟ ಅಂತರದ ಪರಿಪಾಲನೆ ಇರುತ್ತದೆ.

ಕ್ರಿ.ಶ. ೧೦೩೨ರ ರಾಯಚೂರು ಜಿಲ್ಲೆಯ ಎರಡು ಶಾಸನಗಳು(ಅದೇ, ಪು. ೧೭೫) ಚಾಲುಕ್ಯ ಅರಸ ಜಗದೇಕಮಲ್ಲನ ಆಳ್ವಿಕೆಯಲ್ಲಿ ಅಷ್ಟೋಪವಾಸಿ ಕನಕಣನ್ದಿ ಭಟಾರರ ಪ್ರಾರ್ಥನೆಯಂತೆ ಕಾಳಿದಾಸನ ಚೂಳಾಯ್ತ ರೇವಣನ ಆಜ್ಞೆಯಂತೆ ಸಮಸ್ತ ಪ್ರಧಾನರ ಇಚ್ಛೆಯಂತೆ ರಾಜಧಾನಿ ಪಿರಿಯ ಮೊಸಂಗಿಯ ಹೊಲದಲ್ಲಿ ದೇಸಿಗಣದ ಶ್ರೀ ಜಗದೇಕಮಲ್ಲ ಜಿನಾಲಯದ ಭೋಗಕ್ಕಾಗಿ ಜಗದೇಕಮಲ್ಲದೇವನು ನೂರು ಮತ್ತರು ಕರಿಯ ನೆಲ, ಎರಡು ಮತ್ತರು ಗದ್ದೆ, ಹೂವಿನ ತೋಟ, ದೀಪಕ್ಕಾಗಿ ಒಂದು ಗಾಣ ಇವನ್ನು ದತ್ತಿ ಬಿಟ್ಟನೆಂದು ಹೇಳುತ್ತವೆ. ಈ ದತ್ತಿಯನ್ನು 'ಜಗದೇಕಮಲ್ಲ ಜಯಸಿಂಹ ವಲ್ಲಭನ ದತ್ತಿ' ಎಂದು ಕರೆಯಲಾಗಿದೆ.

ಕ್ರಿ.ಶ. ೧೦೬೯ರ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ದದ್ದಲ ಶಾಸನವು(ಅದೇ, ಪು.೨೩೩) ಚಾಲುಕ್ಯ ದೊರೆ ಭುವನೈಕಮಲ್ಲನ ಆಳ್ವಿಕೆಯ ಸಂದರ್ಭದಲ್ಲಿ ಆತನ ಮಹಾಮಂಡಳೇಶ್ವರನಾದ ಭೀಮರಾಯ, ಆತನ ಸಾಮಂತ ಮಳೆಯಮರಸ ಆಳುತ್ತಿದ್ದಾಗ, ಮಾಕಿಸೆಟ್ಟಿಯು ಪೊನ್ನಪಾಳಿನಲ್ಲಿ ಗಿರಿಗೋಟೆಮಲ್ಲ ಎಂಬ ಹೆಸರಿನ ಜಿನಾಲಯವನ್ನು ಕಟ್ಟಿಸಿ, ಇದಕ್ಕೆ ಭೂಮಿಯನ್ನು ದಾನ ನೀಡಿದನೆಂದು ಉಲ್ಲೇಖಿಸುತ್ತದೆ.

ಕ್ರಿ.ಶ. ೧೦೯೫ರ ಕಲ್ಬುರ್ಗಿ ಜಿಲ್ಲೆಯ ಚಿತ್ತಾಪುರ ಶಾಸನವು(ಹನುಮಾಕ್ಷಿಗೋಗಿ: ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ೧೯೯೬, ಪು.೧೧೬-೧೧೭) ಚಾಳುಕ್ಯ ವಿಕ್ರಮಾದಿತ್ಯನ ರಾಣಿಯರಲ್ಲೊಬ್ಬಳಾದ ಜಕ್ಕಲದೇವಿಯು ಇಂಗುಳಿಗೆಯಲ್ಲಿ ಜಿನಬಸದಿಯನ್ನು ಕಟ್ಟಿಸಿ, ಅದರ ಉಪಾರ್ಜನೆಗಾಗಿ ದತ್ತಿ ನೀಡಿದಳೆನ್ನುತ್ತದೆ. ಈ ಶಾಸನದಲ್ಲಿ ಮೂಲಸಂಘದ ಸೇನಆಚಾರ್ಯರಾದ ಮಲ್ಲಿಸೇಣ, ಇಂದ್ರಸೇನ ಭಟ್ಟಾರಕರ ಹೆಸರುಗಳಿವೆ.

ಕ್ರಿ.ಶ.೧೦೯೯ರ ಕಲ್ಬುರ್ಗಿಯ ಚಿತ್ತಾಪುರ ತಾಲೂಕಿನ ಹುಣಸೀ ಹಡಗಲಿ ಶಾಸನದಲ್ಲಿ (ಅದೇ,) ಚಾಳುಕ್ಯ ದೊರೆ ವಿಕ್ರಮಾದಿತ್ಯನ ರಾಣಿ ಚಂದಲದೇವಿಯು ಆಳುತ್ತಿರುವಾಗ, ದಂಡನಾಯಕನಾದ ಬೀವಣಯ್ಯಗಳ ಬಿನ್ನಪದಿಂದ ಚೌಧರೆ ರಕ್ಕಸಯ್ಯ ನಾಯಕನು ತನ್ನ ಪ್ರಭುತ್ವದ ಗೊಂಕನೂರಿನ ಕೆಲವು ಹಳ್ಳಿಗಳನ್ನು ಪಾರ್ಶ್ವನಾಥ ಹಾಗೂ ಶಾಂತಿನಾಥ ಬಸದಿಗಳಿಗೆ ದತ್ತಿ ನೀಡಿದನೆಂದು ಉಲ್ಲೇಖಿಸಿದೆ. ಇದರಲ್ಲಿ ಮೂಲಸಂಘದ ದೇಸಿಕ ಗಣದ ಜೈನ ಆಚಾರ್ಯರ ಶಿಷ್ಯ ಪ್ರಶಿಷ್ಯರ ಹೆಸರುಗಳ ಉಲ್ಲೇಖವಿದೆ.

ಕ್ರಿ.ಶ.೧೧೨೪ರ ಕಲ್ಬುರ್ಗಿ ಜಿಲ್ಲೆಯ ಸೇಡಂ ಶಾಸನವು(ಅದೇ) ಚಾಲುಕ್ಯ ದೊರೆ ತ್ರಿಭುವನಮಲ್ಲನು ಆಳುತ್ತಿರುವಾಗ, ಸೇಡಿಂಬದ ಮುನ್ನೂರ್ವರು ಮಹಾಜನರು ಶಾಂತಿನಾಥದೇವರ ಬಸದಿಯನ್ನು ಕಟ್ಟಿಸಿ, ಅದಕ್ಕೆ ಬ್ರಹ್ಮಜಿನಾಲಯ ಎಂಬ ಹೆಸರಿಟ್ಟು, ಅದರ ಉಪಯೋಗಕ್ಕಾಗಿ ದತ್ತಿ ಬಿಟ್ಟುದನ್ನು ಉಲ್ಲೇಖಿಸುತ್ತದೆ. ಇಲ್ಲಿ 'ಮಹಾಜನರು' ಅಂದರೆ ಬ್ರಾಹ್ಮಣರು. ಅನ್ಯಧರ್ಮೀಯರು ಜೈನಧರ್ಮಕ್ಕೆ ನೀಡಿದ ಪ್ರಾಶಸ್ತ್ಯ ಇಲ್ಲಿ ವೇದ್ಯವಾಗುತ್ತದೆ.

ಕ್ರಿ.ಶ.೧೧೦೦ರ ಬೀದರ ಜಿಲ್ಲೆಯ ಒಂದು ಶಾಸನದ(ದೇವರಕೊಂಡಾರೆಡ್ಡಿ ಮತ್ತು ಹನುಮಾಕ್ಷಿ ಗೋಗಿ (ಸಂ): ಬೀದರ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ ೮, ೨೦೦೬, ಪು. ೯೫)ಆರಂಭದಲ್ಲಿ ಚಂದ್ರಪ್ರಭ ಜಿನಾಲಯ ವನ್ನು ಕಟ್ಟಿಸಿದ 'ಕಲ್ಯಾಣದ ಗೋಷ್ಠಿ ಶಾಶ್ವತವಾಗಿರಲಿ' ಎಂಬ ಮಾತು ಬರುತ್ತದೆ. ಈ ಹಿಂದೆ ಅನೇಕರು ಬಸದಿಗಳನ್ನು ಕಟ್ಟಿಸಿದ್ದರು, ಕಾಲಾಂತರದಲ್ಲಿ ರಚ್ಚಮಲ್ಲ ಪೆರ್ಮಾಡಿ ಮತ್ತು ರವಿಯಣ ಎಂಬುವವರು ಭಕ್ತಿಯಿಂದ ಚಂದ್ರಬಸದಿಯನ್ನು ಮಾಡಿಸಿದರೆಂದು ಉಲ್ಲೇಖಿಸಿದೆ. ಈ ಬಸದಿಯ ನಿರ್ಮಾಣದಲ್ಲಿ ದೇವಪಾರ್ಯ ಹಾಗೂ ಚಟ್ಟಪ, ಭರತ, ಶ್ರೀಪತಿ ಮತ್ತು ರಾವದೇವನೆಂಬುವವರು ಗೋಷ್ಠಿಯಲ್ಲಿದ್ದು ಬಸದಿಯ ನಿರ್ಮಾಣಕ್ಕೆ ಶ್ರಮಿಸಿದ್ದಾರೆ.

ಅಲ್ಲದೆ ಜಕ್ಕಣಬ್ಬೆ ಎಂಬುವಳು ಈ ಕಾರ್ಯದಲ್ಲಿ ಭಾಗವಹಿಸಿ, ಮುನಿಗಣಕ್ಕೆ ಆಹಾರದಾನದ ವ್ಯವಸ್ಥೆಯನ್ನು ಮಾಡಿದಳೆಂದೂ ಬಸದಿಯ ಸಹಸ್ರಕೂಟ ಬಿಂಬವನ್ನು ವೈಜಪಯ್ಯನ ಹಿರಿಯ

ಮಗನಾದ ಹೀರಪಾಂಕ ಎಂಬುವನು ಮಾಡಿಸಿದನೆಂದೂ ಹೇಳಿದೆ. ಈಶ್ವರ ಶೆಟ್ಟಿಯು ಮಾನಸ್ತಂಭವನ್ನು ಮಾಡಿಸಿದನಂತೆ.

ಕ್ರಿ.ಶ.೧೧೧೫ರ ಬೀದರ ತಾಲೂಕಿನ ಬರೂರ ಶಾಸನದಲ್ಲಿ(ಅದೇ,) ತ್ರಿಭುವನಮಲ್ಲನು ರಾಜ್ಯಭಾರ ಮಾಡುತ್ತಿದ್ದಾಗ ಬರವೂರ ಪ್ರಭುವಾದ ಆದಿತ್ಯಭಟ್ಟನ ಮಗ ಚಂಗದೇವಭಟ್ಟ, ಕುಮಾರಸ್ವಾಮಿ ಭಟ್ಟೋಪಾಧ್ಯಾಯ, ರುದ್ರಭಟ್ಟ, ಮಲ್ಲದೇವಭಟ್ಟ, ಮುಚ್ಚಿದೇವಭಟ್ಟ ಈ ಐವರೂ ಮಹಾಜನರು, ಪಂಚಮ ಮಠಸ್ಥಾನದವರು, ನಗರದ ಎಲೆ ವ್ಯಾಪಾರಿಗಳು, ಛಪ್ಪನ್ನ ಹೆಜ್ಜುಂಕ ವೆರ್ಗ್ಗಡೆಗಳು ಸೇರಿ ಬರವೂರ ನಗರದ ಬಸದಿಯ ಶಾಂತಿನಾಥ ದೇವರಿಗೆ ದತ್ತಿ ಬಿಟ್ಟ ಉಲ್ಲೇಖ ಬಂದಿದೆ.

ಇದೇ ಜಿಲ್ಲೆಯ ಬಸವಕಲ್ಯಾಣದ ಗೋರ್ಟಾದಲ್ಲಿ ದೊರೆತ ಕ್ರಿ.ಶ. ೧೧೩೩ರ ಶಾಸನದಲ್ಲಿ (ಅದೇ,) ತ್ರಿಭುವನಸೇನ ಮುನಿಯ ಹೊಗಳಿಕೆ ಇದೆ. ಇವನನ್ನು ಅಭಿನವ ಗಣಧರನೆಂದು ಕರೆಯಲಾಗಿದೆ.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ಶಾಸನವು(ಕೊಪ್ಪಳ ಜಿಲ್ಲೆ ಶಾ.ಸಂ–೨, ಪೂರ್ವೋಕ್ತ, ಪು.೩೩೬) ಚಾಲುಕ್ಯ ದೊರೆ ವಿಕ್ರಮಾದಿತ್ಯನ ಮಹಾಪ್ರಧಾನ ತಂತ್ರಾಧಿಷ್ಠಾಯಕ ದೇವಣಾರ್ಯನ ಹೆಂಡತಿಯು ಪಾರ್ಶ್ವನಾಥ ಬಸದಿಯನ್ನು ಕಟ್ಟಿಸಿದುದನ್ನು ಉಲ್ಲೇಖಿಸಿದೆ.

ಕೊಪ್ಪಳದ ಕ್ರಿ.ಶ.ಸು. ೧೨ನೆಯ ಶತಮಾನಕ್ಕೆ ಸರಿಹೊಂದುವ ಜಿನಪೀಠದ ಮೇಲಿನ ಎರಡು ಶಾಸನಗಳು(ಅದೇ, ಪು. ೧೬೭) ಸೋಮರಾಯನೆಂಬುವನು ಒಂದು ಜಿನಾಲಯವನ್ನು ಮಾಡಿಸಿ, ಚಂದ್ರಪ್ರಭ ಮತ್ತು ಪಾರ್ಶ್ವನಾಥ ಬಿಂಬಗಳನ್ನು ನಿರ್ಮಿಸಿದುದರ ಬಗ್ಗೆ ತಿಳಿಸುತ್ತವೆ.

ಕ್ರಿ.ಶ.೧೨೪೦ರ ಕೊಪ್ಪಳ ಜಿಲ್ಲೆಯ ಶಾಸನವು(ಅದೇ, ಪು. ೧೬೭)ಯಾದವ ಸಿಂಹಣನು ಬಸದಿಯನ್ನು ಕಟ್ಟಿಸಿದನೆಂದು ಉಲ್ಲೇಖಿಸುತ್ತದೆ. ಇದೇ ಜಿಲ್ಲೆಯ ಯಲಬುರ್ಗಾದ ಕ್ರಿ.ಶ.ಸು.೧೩ ಶತಮಾನಕ್ಕೆ ಸೇರುವ ಮೂರು ಶಾಸನಗಳು(ಅದೇ, ಪು.೧೬೯). ಯಲಬುರ್ಗಾದಲ್ಲಿ ಇವನು ಜೈನ ಬಸದಿ ಮತ್ತು ಮೂರ್ತಿಗಳನ್ನು ಪ್ರತಿಷ್ಠಾಪಿಸಿದುದನ್ನು ತಿಳಿಸುತ್ತವೆ. ಅಲ್ಲಿಯದೇ ಇನ್ನೊಂದು ಶಾಸನವು೩೫ ಮೂಲಸಂಘ ದೇಸಿಗಣದ ಮಾದಣ ನಾಯಕನು ಯಲಬುರ್ಗಾದಲ್ಲಿ ಒಂದು ಬಸದಿಯನ್ನು ಕಟ್ಟಿಸಿದನೆಂದು ತಿಳಿಸುತ್ತದೆ.

ಕ್ರಿ.ಶ.೧೩೪೨ರ ಕೊಪ್ಪಳ ಜಿಲ್ಲೆಯ ಗಂಗಾವತಿಯ ಶಾಸನವೊಂದು(ಅದೇ, ಪು.೧೬೫). ಬುಕ್ಕರಾಯನ ಮಗ ಹರಿಹರನ ದಂಡನಾಯಕನಾದ ಬೈಚದಂಡನಾಯಕನ ಮಗ ಇರುಗಪನು ಆನೆಗೊಂದಿಯಲ್ಲಿ ಕಲ್ಲಿನಲ್ಲಿ ಬಸದಿಯನ್ನು ನಿರ್ಮಿಸಿ ದಾನ ನೀಡಿದುದನ್ನು ತಿಳಿಸುತ್ತದೆ.

ಹೀಗೆ ಜೈನ ಧರ್ಮಕ್ಕೆ ಸಂಬಂಧಿಸಿದ ಶಾಸನಗಳು ಕ್ರಿ.ಶ.೮೮೧ರಿಂದ ಮೊದಲಗೊಂಡು ಕ್ರಿ.ಶ.೧೪ನೆಯ ಶತಮಾನದವರೆಗೆ ಈ ಭಾಗಗಳಲ್ಲಿ ಲಭಿಸಿವೆ. ಅದರಲ್ಲಿಯೂ ಕೊಪ್ಪಳ ಜಿಲ್ಲೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಲಭಿಸಿವೆ. ಇಲ್ಲಿಯ ಹೆಚ್ಚು ಶಾಸನಗಳು ಸಲ್ಲೇಖನ ವ್ರತಕ್ಕೆ ಸಂಬಂಧಿಸಿದವುಗಳಾಗಿವೆ. ಇದರಿಂದ ತಿಳಿದುಬರುವ ಅಂಶವೆಂದರೆ ಕೊಪ್ಪಳವು ಜೈನರ ಒಂದು ಪ್ರಸಿದ್ಧ ತೀರ್ಥಕ್ಷೇತ್ರವಾಗಿದ್ದು, ಅವಸಾನ ಕಾಲ ಸಮೀಪಿಸಿದವರು ಇಲ್ಲಿಗೆ ಬಂದು ವ್ರತಗಳನ್ನು ಕೈಕೊಂಡು ಸ್ವರ್ಗವನ್ನು ಸೇರಲು ಬಯಸುತ್ತಿದ್ದರೆಂಬುದು.

ಕಾಳಾಮುಖ ಶೈವರು

ದಕ್ಷಿಣ ಭಾರತದಲ್ಲಿ ಜೈನಮತವು ಉಚ್ಛ್ರಾಯ ಸ್ಥಿತಿಯಲ್ಲಿರುವಾಗ ಶೈವ ವೈಷ್ಣವ ಸಂಪ್ರದಾಯಗಳು ಮೊಳಕೆಯೊಡೆದು ಪ್ರಬಲವಾಗಿ ಎದ್ದು ನಿಲ್ಲಲು ಪ್ರಯತ್ನಿಸಿದವು. ಆಗ ಶೈವರ ಅನೇಕ ಪಂಥಗಳು ಚಲಾವಣೆಯಲ್ಲಿದ್ದವು. ಅವುಗಳಲ್ಲಿ ಕಾಳಾಮುಖ, ಕಾಪಾಲಿಕ, ಲಾಕುಳಶೈವ ಹಾಗೂ ಗಾಣಾಪತ್ಯ ಮುಖ್ಯವಾದವು ಗಳಾಗಿವೆ. ಕಾಶ್ಮೀರದಿಂದ ಬಂದ ವೈದಿಕ ಮೂಲದ ಶೈವ ಪಂಥವೇ ಕಾಳಾಮುಖ ಶೈವರು. "ಮುಖದ ಮೇಲೆ ಕರಿಯ ಗೆರೆಯನ್ನು ಹಚ್ಚಿಕೊಳ್ಳುತ್ತಿದ್ದುದರಿಂದ ಇವರನ್ನು ಕಾಳಾಮುಖರೆಂದು ಕರೆಯುತ್ತಿದ್ದಿರಬೇಕು. ....ಉತ್ತರ ಭಾರತದ ಯಾವ ಶಾಸನದಲ್ಲಿಯೂ ಕಾಳಾಮುಖರ ಹೆಸರಿಲ್ಲದಿರುವುದು ಈ ಪಂಗಡವು ಉತ್ತರ ಭಾರತದಲ್ಲಿ ಪ್ರಚುರವಾಗಿರಲಿಲ್ಲವೆಂಬುದನ್ನು ಸೂಚಿಸುತ್ತದೆ. ಇವರು ವಿಶೇಷವಾಗಿ ತಮಿಳುನಾಡಿನಲ್ಲಿ, ಕರ್ನಾಟಕ ಮತ್ತು ಆಂಧ್ರಪ್ರದೇಶದಲ್ಲಿ ಪ್ರಬಲರಾಗಿದ್ದರು." ಎಂಬುದಾಗಿ ಎಂ.ಚಿದಾನಂದಮೂರ್ತಿಯವರು ಅಭಿಪ್ರಾಯಪಡುತ್ತಾರೆ. ಇವರು ದೊಡ್ಡ ದೊಡ್ಡ ಮಠಗಳನ್ನು ಕಟ್ಟಿಕೊಂಡು ಅಲ್ಲಿ ವೈದಿಕ ಶಿಕ್ಷಣವನ್ನು ನೀಡುತ್ತಿದ್ದರು. ಶಿವದೇವಾಲಯಗಳ ಸ್ಥಾನಪತಿಗಳಾಗಿ ನೈಷ್ಠಿಕ ಬ್ರಹ್ಮಚಾರಿಗಳಾಗಿದ್ದ ಕಾಳಾಮುಖ ಗುರುಗಳು, ದೇವಾಲಯಗಳ ಆಡಳಿತದ ಸೂತ್ರಧಾರಕ ರಾಗಿದ್ದರೆಂದು ತಿಳಿದುಬರುತ್ತದೆ.

ಆಗಮ ಮೂಲದ ಅನೇಕ ಶೈವಧರ್ಮಗಳಲ್ಲಿ ಕಾಳಾಮುಖ ಶೈವ ಪಂಥ ಕರ್ನಾಟಕದಲ್ಲಿ ತುಂಬ ಪ್ರಸಿದ್ಧಿ ಪಡೆದಿತ್ತು. ಮುಂದೆ ವೀರಶೈವ ಧರ್ಮವು ಪ್ರಬಲವಾದಂತೆ ಅದರಲ್ಲಿ ಈ ಕಾಳಾಮುಖ ಶೈವ ಧರ್ಮವು ಕರಗಿ ಹೋಯಿತು. ಈ ಧರ್ಮದ ಯತಿಗಳು ದೇವಾಲಯದ ಸ್ಥಾನಿಕರಾಗಿರುವುದಲ್ಲದೆ ಆ ದೇವಾಲಯಕ್ಕೆ ಹೊಂದಿಕೊಂಡಂತೆ ಮಠವೊಂದಿರುತ್ತಿದ್ದು, ಅದರ ಮೇಲ್ವಿಚಾರಣೆಯನ್ನು ಇವರೇ ನೋಡಿಕೊಳ್ಳುತ್ತಿದ್ದರು. ದೇವಾಲಯ ಮತ್ತು ಮಠಗಳ ಕಾರ್ಯಚಟುವಟಿಕೆಗಳ ನಿರ್ವಹಣೆ ಹಾಗೂ ವಿದ್ಯಾದಾನ ಇವರ ಕರ್ತವ್ಯಗಳಾಗಿದ್ದವು. ಕಾಳಾಮುಖ

ಶೈವಧರ್ಮಕ್ಕೆ ಸಂಬಂಧಿಸಿದ ಶಾಸನಗಳು ಹೈದ್ರಾಬಾದ್ ಕರ್ನಾಟಕ ಪ್ರದೇಶಗಳಾದ ಗುಲಬರ್ಗಾ ಮತ್ತು ಕೊಪ್ಪಳ ಜಿಲ್ಲೆಗಳಲ್ಲೂ ಆಂಧ್ರಪ್ರದೇಶದ ತೆಲಂಗಾಣ ಪ್ರದೇಶಗಳಲ್ಲೂ ಲಭಿಸಿವೆ.

ಕೊಪ್ಪಳ ಜಿಲ್ಲೆಯ ಯಲಬುರ್ಗಾದ ಶಾಸನವು(ಕೊಪ್ಪಳ ಜಿಲ್ಲೆ ಶಾ.ಸಂ-೨, ಪೂರ್ವೋಕ್ತ, ಪು.೧೬೦). ಜಗವಿನ್ದ ಪಂಡಿತನನ್ನು "ಯಮ ನಿಯಮ ಸ್ವಾಧ್ಯಾಯ ಧಾರಣಮೋನಾನುಷ್ಠಾನ ಪರಾಯಣರುಂ ಶಿಷ್ಯಾನುಶಿಷ್ಯ ಪ್ರಯುಕ್ತರುಂ ಸರ್ವಶಾಸ್ತ್ರ ಪರಿಣತರುಂ ತಾಪಾನಳತಪಜ್ಞಿಭಾವರುಂ ಸಂಸಾರ ವಿರಕ್ತರುಂ ಷಟ್ದರ್ಶನ ಚತುಸ್ಸಯಮ ವ್ಯಾಖ್ಯಾನರುಮಪ್ಪ ಶ್ರೀ ಜಗವಿನ್ದಪಂಡಿತರ್" ಎಂದು ವರ್ಣಿಸುತ್ತದೆ.

ಕ್ರಿ.ಶ. ೧೧೦೫ರ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಕುಕನೂರ ಶಾಸನವು(ಅದೇ, ಪು.೧೬೧) ಕಾಳಾಮುಖ ಪಂಥದ ಸೋಮೇಶ್ವರ ಪಂಡಿತರನ್ನು ಉಲ್ಲೇಖಿಸಿದೆ.

ಕ್ರಿ.ಶ. ಸು.೧೧೭೮ರ ಕಾಲಕ್ಕೆ ಸೇರುವ ಅದೇ ಊರಿನ ಇನ್ನೊಂದು ಶಾಸನದಲ್ಲಿ ಕಾಳಾಮುಖ ಪರಂಪರೆಗೆ ಸೇರಿದ್ದ ಕಳೇಶ್ವರ ಮುನಿಯನ್ನು ಉಲ್ಲೇಖಿಸಲಾಗಿದೆ. ಈತನು ಮಹಾಮಂಡಳೇಶ್ವರ ಸಿಂಧರಾಜ ಪೆರ್ಮಾಡಿಗೂ ಅವನ ಮಂಡಳೇಶ್ವರ ಚಾವುಂಡನಿಗೂ ಗುರುವಾಗಿದ್ದನು. ಈತನು ಸೂಂಡಿಯ ನಗರೇಶ್ವರ ಕಾಳಾಮುಖಾನ್ವಯಕ್ಕೆ ಸೇರಿದವನೆಂದು ಈ ಶಾಸನದಲ್ಲಿ ತಿಳಿಸಿದೆ. ಈತನಿಗೆ ಸೋಮೇಶ್ವರ ಶಿಷ್ಯ ಯೋಗೀಶ್ವರ ಗುರುವಾಗಿದ್ದನೆಂದೂ ಈತನು ಅನೇಕ ಸಿದ್ಧಾಂತಗಳಲ್ಲಿ ಪರಿಣತನಾಗಿದ್ದುದರಿಂದ ಈತನಿಗೆ 'ಸಿದ್ಧಾಂತಿಕಳೇಶ್ವರ' ಎಂಬ ಬಿರುದಿತ್ತೆಂದೂ ಇಲ್ಲಿ ಹೇಳಲಾಗಿದೆ.

ತೆಲಂಗಾಣದ ಮೆಹಬೂಬ್‌ನಗರ ಜಿಲ್ಲೆಯ ಅಲಂಪೂರದ ಹಲವು ಶಾಸನಗಳಲ್ಲಿ (ಕ.ವಿ.ಶಾ.ಸಂ.೫, ಭಾಗ ೨, ಸಂ-೫ ಪೂರ್ವೋಕ್ತ, ಪು. ೧೧೬, ೧೪೧) ಉಕ್ತವಾಗಿರುವ ಅಂಶಗಳನ್ನು ಗಮನಿಸಿದಾಗ ಇಲ್ಲಿಯ ಕಾಳಾಮುಖರ ಗುರುಪರಂಪರೆಯು ಕರ್ನಾಟಕದ ಬಳ್ಳಿಗಾವೆಯ ಕೋಡೀಮಠದ ಗುರು ಪರಂಪರೆಗಿಂತ ಪ್ರಾಚೀನವಾದುದು ಎಂಬುದು ಸ್ಪಷ್ಟವಾಗುತ್ತದೆ. ಅದರಲ್ಲಿಯೂ ಅಲಂಪೂರದ ಬಾಲಬ್ರಹ್ಮೇಶ್ವರ ದೇವಾಲಯದಲ್ಲಿದ್ದುದು ಅತ್ಯಂತ ಪ್ರಸಿದ್ಧಿಯನ್ನು ಪಡೆದಿದೆ. ಈ ಶಾಸನಗಳನ್ನು ಆಧರಿಸಿಲಾಧಾರಿತ ಈ ಅಲಂಪೂರ ಕಾಳಾಮುಖರ ಪೀಳಿಗೆಯನ್ನು ಹೀಗೆ ನಿರೂಪಿಸಬಹುದು:

ಪಂಚರಾಸಿ ಭಟಾರಕ (ಕ್ರಿ.ಶ. ೧೦೫೧)

ಮೊದಲನೆಯ ಸೋಮೇಶ್ವರರಾಸಿ ಭಟಾರಕ (ಕ್ರಿ.ಶ. ೧೦೫೫)

ಮೊದಲನೆಯ ಬ್ರಹ್ಮರಾಸಿ ಭಟಾರಕ (ಕ್ರಿ.ಶ. ೧೦೫೭-೧೦೭೬)

ಎರಡನೆಯ ಸೋಮೇಶ್ವರರಾಸಿ ಭಟಾರಕ (ಕ್ರಿ.ಶ. ೧೦೭೮)

ಎರಡನೆಯ ಬ್ರಹ್ಮರಾಸಿ ಭಟಾರಕ (ಕ್ರಿ.ಶ. ೧೦೮೦)

ಸೇವರಾಸಿ ಭಟಾರಕ (ಕ್ರಿ.ಶ. ೧೦೮೫)

ಧರಣೀಂದ್ರರಾಸಿ ಪಂಡಿತ (ಕ್ರಿ.ಶ. ೧೧೧೬-೧೧೧೮)

ಎಂಬುದಾಗಿ. ಈ ಎಲ್ಲಾ ಶಾಸನಗಳಲ್ಲಿ ಇಲ್ಲಿಯ ಬಾಲಬ್ರಹ್ಮೇಶ್ವರ ದೇವಾಲಯದ ಉಲ್ಲೇಖವು ಬಂದಿರುವುದರಿಂದ ಈ ಬಾಲಬ್ರಹ್ಮೇಶ್ವರ ದೇವಾಲಯಕ್ಕೆ ಸಂಬಂಧಿಸಿದ ಸಂಪೂರ್ಣ ಪ್ರಭುತ್ವವನ್ನು ಈ ಗುರುಗಳು ಪಡೆದಿದ್ದರೆಂಬುದು ಮನದಟ್ಟಾಗುತ್ತದೆ. ಬ್ರಹ್ಮಚಾರಿಗಳ ವಿದ್ಯಾದಾನಕ್ಕೆ, ಸತ್ರ ವ್ಯವಸ್ಥೆಗೆ, ಸಂಗೀತಗಾರರಿಗೆ, ವಿದ್ಯಾರ್ಥಿಗಳ ಅನ್ನದಾನಕ್ಕೆ ಇವರು ದತ್ತಿಗಳನ್ನು ಸಾಮಾನ್ಯವಾಗಿ 'ಪಾರಮೇಶ್ವರದತ್ತಿ'ಯಾಗಿ ಪಡೆಯುತ್ತಿದ್ದರು. ದೇವಾಲಯಗಳಲ್ಲಿ ಘಟಿಕಾಸ್ಥಾನಗಳನ್ನು ನಡೆಸುತ್ತಿದ್ದುದರಿಂದ ಆಡಳಿತದ ಮೇಲ್ವಿಚಾರಣೆಯನ್ನು ನೋಡಿಕೊಳ್ಳುತ್ತಿದ್ದುದರಿಂದ ಇವರನ್ನು 'ಸ್ಥಾನಪತಿ' ಗಳು ಎಂದು ಕರೆದಿರುವುದಾಗಿ ಕಂಡುಬರುತ್ತದೆ. ಒಟ್ಟಿನಲ್ಲಿ ಅಲಂಪುರದ ಬಾಲಬ್ರಹ್ಮೇಶ್ವರ ದೇವಾಲಯವು ಕಾಳಾಮುಖ ಗುರುಪರಂಪರೆಯು ಬಹಳ ಪ್ರಸಿದ್ಧವಾಗಿತ್ತೆಂದು ನಿಸ್ಸಂಶಯವಾಗಿ ಹೇಳಬಹುದಾಗಿದೆ. ಈ ಪ್ರದೇಶದಲ್ಲಿ ಮುಂದೆ ವೀರಶೈವಧರ್ಮವು ಪ್ರಬಲಿಸುತ್ತಾ ಹೋದಂತೆಲ್ಲ ಇದು ಕ್ಷೀಣಿಸುತ್ತಾ ಬಂದಿದೆ.

ವೀರಶೈವಧರ್ಮ

ಕರ್ನಾಟಕ ಮತ್ತು ಆಂಧ್ರಪ್ರದೇಶಗಳಲ್ಲಿ ಕಾಳಾಮುಖರು ಉನ್ನತವಾದ ಸ್ಥಾನದಲ್ಲಿದ್ದರು. ಮುಂದೆ ಬರುಬರುತ್ತಾ ಅವರು ಕ್ಷೀಣಿಸುತ್ತಾ ಬಂದಿರುವುದನ್ನು ಕಾಣುತ್ತೇವೆ. ವೀರಶೈವರ ಕ್ಷಿಪ್ರಗತಿಯ ಬೆಳವಣಿಗೆಯೇ ಇದಕ್ಕೆ ಕಾರಣವೆಂದು ಹೇಳಬಹುದು. ಸಂಶೋಧಕರು ಹೇಳುವಂತೆ, "ವೀರಶೈವ ಧರ್ಮದ ಉಗಮ-ವಿಕಾಸವು ಹಳೆಯ ತಲೆಮಾರಿನ ವಿದ್ವಾಂಸರು ಭಾವಿಸಿದಂತೆ ಇಂದು ಅಷ್ಟೇನು ಸಮಸ್ಯೆಯಾಗಿ ಉಳಿದಿಲ್ಲ. .... ಹೊಸತನವನ್ನು ಮೈಗೂಡಿಸಿಕೊಂಡ ಅಭಿನವ ಪಾಶುಪತದ ಮುಂದುವರಿಕೆಯ ರೂಪವೇ ವೀರಶೈವವಾಗಿದೆ." "ಬಸವ, ಚನ್ನಬಸವ, ಅಲ್ಲಮರಿಂದ ಉತ್ಕರ್ಷವನ್ನು ಪಡೆದ ವೀರಶೈವಧರ್ಮದ ಮುಂದೆ ಕಾಳಾಮುಖ ಧರ್ಮವು ಹೋರಾಡಿ, ಎದುರಿಸಲು ಅಸಮರ್ಥವಾಗಿ ಕೊನೆಗೆ ಅದರಲ್ಲೇ ವಿಲೀನಗೊಂಡಂತೆ ಕಾಣಿಸುತ್ತದೆ." "ಕಾಳಾಮುಖಶೈವರೇ ವೀರಶೈವರಾಗಿ ಬದಲಾವಣೆ ಹೊಂದಿದ್ದಾರೋ ಅಥವಾ ಕಾಳಾಮುಖರಿಗಿಂತಲೂ ಹಿಂದಿನಿಂದಲೇ ಅಸ್ತಿತ್ವವನ್ನು ಪಡೆದಿದ್ದರೋ ಎಂಬ ವಿಚಾರದಲ್ಲಿ ವಿದ್ವಾಂಸರಲ್ಲಿ ಒಮ್ಮತವಿಲ್ಲ."

ನೇರವಾಗಿ ವೀರಶೈವ ಧರ್ಮಕ್ಕೇ ಸಂಬಂಧಿಸಿದ ಶಾಸನಗಳು ಹೈದ್ರಾಬಾದ್ ಕರ್ನಾಟಕ ಹಾಗೂ ತೆಲಂಗಾಣ ಪ್ರದೇಶಗಳಲ್ಲಿ ಅಷ್ಟಾಗಿ ಕಾಣುವುದಿಲ್ಲ. ಆದರೆ, ಇಲ್ಲಿಯ ಕೆಲವು ಶಾಸನಗಳಲ್ಲಿ ಉಲ್ಲೇಖಗೊಂಡ ವಿಷಯ ಮತ್ತು ಬದಲಾದ ಹೆಸರುಗಳು ಇವುಗಳ ಆಧಾರದಿಂದ ವೀರಶೈವಕ್ಕೆ ಸಂಬಂಧಿಸಿದ ವಿಚಾರಗಳು ಇವುಗಳಲ್ಲಿ ಅಲ್ಲಲ್ಲಿ ಬಂದಿವೆಯೆಂದು ಧಾರಾಳವಾಗಿ ಹೇಳಬಹುದಾಗಿದೆ.

ಕ್ರಿ.ಶ.೧೧೩೪ರ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಕಲ್ಲೂರು ಶಾಸನವು (ಕೊಪ್ಪಳ ಜಿಲ್ಲೆ ಶಾ.ಸಂ–೨, ಪೂರ್ವೋಕ್ತ, ಪು.೧೬೦) ತ್ರೈಲೋಕ್ಯಮಲ್ಲನ ಆಳ್ವಿಕೆಗೆ ಸಂಬಂಧಿಸಿದುದು. ಈ ಶಾಸನದಲ್ಲಿ ಮೊಲ್ಲೆಯ ಬಮ್ಮಯ್ಯನ ಉಲ್ಲೇಖವಿದೆ. ಈತನು ಕಲಿದೇವಸ್ವಾಮಿಯ ಪಾದಾರಾಧಕನಾಗಿದ್ದನು; ಈತನಿಗೆ ಮಹಾಮಂಡಳೇಶ್ವರನಾದ ಚಾವುಂಡರಸನ ಹೆಂಡತಿಯು ದೇಹಾತ ವೃತ್ತಿಯಾಗಿ ಆರು ಮತ್ತರು ಹೊಲವನ್ನು ನೀಡಿದಳು ಎಂಬುದಾಗಿ ಇಲ್ಲಿ ಹೇಳಲಾಗಿದೆ.

ಮುಂದೆ ಇದೇ ಊರಿನ ಕ್ರಿ.ಶ.೧೧೮೬ರ ಒಂದು ಶಾಸನವು(ಅದೇ) ಇದೇ ಮೊಲ್ಲೆಯ ಬಮ್ಮಯ್ಯನಿಗೆ ಈ ಮೇಲೆ ಉಲ್ಲೇಖಿತನಾದ ಚಾವುಂಡರಾಯನ ಮಗ ವೀರ ಬಿಜ್ಜಲದೇವನು ಪ್ರಥಮ ವ್ಯಕ್ತಿಯಾಗಿ ಇಲ್ಲಿನ ಗಣಮಠಕ್ಕೆ ಇನ್ನೂರು ಮತ್ತರು ಭೂಮಿಯನ್ನು ದಾನವಾಗಿ ನೀಡಿದುದನ್ನು ಉಲ್ಲೇಖಿಸುತ್ತದೆ.

ವೀರಶೈವಧರ್ಮದ ನೂತನ ಗಣಗಳಲ್ಲಿ ಒಬ್ಬನಾದ ಸಕಲೇಶ್ವರ ಮಾದರಾಜನನ್ನು ಆಥಾವಾ ಸಕಲೇಶ್ವರ ಮಾದರಸನನ್ನು ಹೆಸರಿಸುವ ಕೆಲವು ಶಾಸನಗಳು ರಾಯಚೂರು ಜಿಲ್ಲೆಯಲ್ಲಿ ದೊರಕಿವೆ. ಅವುಗಳ ವಿವರ ಹೀಗಿದೆ:

ಕ್ರಿ.ಶ.೧೧೯೬ರ ಮಲ್ಲಟದ ಶಾಸನವು ಸಕಲೇಶ ಮಾದರಸನನ್ನು ಉಲ್ಲೇಖಿಸಿದೆ. ಕಲ್ಯಾಣರ ಚಾಲುಕ್ಯ ವಿಕ್ರಮನ ಕಾಲದಲ್ಲಿ ಅವನ ಮಹಾಮಂಡಳೇಶ್ವರನಾಗಿ ಮೊರಟದ ವೀರಮಾಹೇಶ್ವರ ಮಲ್ಲ ಅಥವಾ ಮಲ್ಲಿದೇವರಸನೆಂಬುವವನಿದ್ದ. ಆತನು ಅಹಿಹಯ ವಂಶದವನು. ಇಲ್ಲಿ ಸಂಕ್ರಾಂತಿಯ ಪರ್ವದ ನಿಮಿತ್ತವಾಗಿ ರಾಜಧಾನಿಪಟ್ಟಣವಾದ ಮೊರಟದಲ್ಲಿಯ ಸಪ್ತನಾಥದೇವರ ಸೇವಕನಾದ ಮಹಾಮಹೇಶ್ವರ ಆವುಜದ ಮಾಳಯ್ಯ ಎಂಬುವವನು, ಸಕಳೇಶ್ವರ ದೇವರ ಮಾದಿರಾಜಯ್ಯನ ಹೆಸರಿನಲ್ಲಿ ದೇವರ ಪ್ರತಿಷ್ಠೆಯನ್ನು ಮಾಡುತ್ತಾನೆ. ಆಗ ಆ ಮಾಳಯ್ಯನ ಮಗಳೂ ಮಲ್ಲದೇವನ ಪತ್ನಿಯೂ ಆದ ಬೆಸವಲದೇವಿಯು ಪತಿ ಸಮೇತಳಾಗಿ ಮಾದೇಶ್ವರ ದೇವರ ಸೇವೆಗಾಗಿ, ದೇವಾಲಯದ ಖಂಡಸ್ಫುಟಿತ ಜೀರ್ಣೋದ್ಧಾರಗಳಿಗಾಗಿ, ಮಾಹೇಶ್ವರರ ಆಹಾರದಾನಕ್ಕಾಗಿ ಕಲ್ಲಯ್ಯ ನೆಂಬುವವನಿಗೆ ಗಣಮಠವಾಗಿ ಭೂದಾನ ನೀಡುತ್ತಾರೆ. ಇದನ್ನು ಗಮನಿಸಿದಾಗ ಸಕಲೇಶ ಮಾದರಾಸನು ಈ ಕಾಲಕ್ಕಾಗಲೇ ಗತಿಸಿದ್ದನೆಂದು ಊಹಿಸಬಹುದಾಗಿದೆ.

ಕ್ರಿ.ಶ.೧೨ನೆಯ ಶತಮಾನದ ಸುಮಾರಿಗೆ ಸೇರಬಹುದಾದ ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲೂಕಿನ ಮಸ್ಕಿ ಶಾಸನವು ಒಂದು ತುಂಡು ಶಾಸನವಾಗಿದ್ದರೂ ಒಂದು ಅಮೂಲ್ಯವಾದ ಮಾಹಿತಿಯನ್ನು ನೀಡುತ್ತದೆ. ಸಕಲೇಶ ಮಾದರಸನಿಗೆ ವೀರನೆಂಬ ಮಗನಿದ್ದುದನ್ನು ಇದು ಉಲ್ಲೇಖಿಸುತ್ತದೆ. ಅವನನ್ನು ಕುರಿತಂತೆ ಅಲ್ಲಿ ಬರುವ ಚಂಪಕಮಾಲೆಯಲ್ಲಿ ಕಾವ್ಯಾತ್ಮಕವಾಗಿ ಮೂಡಿಬಂದಿರುವ ಸುಂದರವಾದ ಪದ್ಯ ಹೀಗಿದೆ:

ವನರುಹನಾಭನಂಬುಜಭವಂ ದಿವಿಜೇಂದ್ರ ಮುನೀಂದ್ರರೆಯ್ದರೀ।
ತನ ನಿಜ ತತ್ವದೊಳ್ಪು ಸಕಲೇಶ್ವರ ದೇವರ ಭಕ್ತ ಮಾದಿರಾ॥
ಜನ ಮಗ ವೀರನಲ್ಲಿ ನೆಲೆಗೊಂಡುದು ರಾಮಪದಪ್ರಸಾದದಿಂ।
ದನುಪಮಮೇಕಮಕ್ಷಯಮಖಣ್ಡಮನನ್ತ ಸುಖಂ ಪರಾಪರಂ॥

ಈ ಶಾಸನದಿಂದ ತಿಳಿದುಬರುವ ಇನ್ನೊಂದು ಮಹತ್ತ್ವದ ಅಂಶವೆಂದರೆ, ಸಕಲೇಶ ಮಾದಿರಾಜನ ಮಗನಾದ ಈ ವೀರನು ಮಸ್ಕಿಯಲ್ಲಿ ನೆಲೆಗೊಂಡಿದ್ದನೆಂಬುದು.

ಕ್ರಿ.ಶ.೧೫೩೭ರ ಇಲ್ಲಿಯದೇ ಇನ್ನೊಂದು ಶಾಸನವು(ರಾಯಚೂರು ಜಿಲ್ಲೆ ಶಾ.ಸಂ–೭ ಪೂರ್ವೋಕ್ತ, ಪು.೩೧೭–೩೨೧) ವಿಜಯನಗರ ಸಾಮ್ರಾಜ್ಯವನ್ನು ಆಳುತ್ತಿದ್ದ ಅಚ್ಯುತರಾಯನ ಕಾಲಕ್ಕೆ ಸೇರಿದುದು. ಇದ ರಲ್ಲಿ ಇಮ್ಮಡಿ ಮೇದಿನಿರಾಯನು ರುದ್ರಪಾದ ಮಠಪತಿ ಒಡೆಯರಿಗೆ ಭೂದಾನ ನೀಡಿದ ಉಲ್ಲೇಖವಿದೆ.

ಇದೇ ಜಿಲ್ಲೆಯ ಮಾನ್ವಿಯ ಒಂದು ಶಾಸನದಲ್ಲಿ(ಅದೇ,)ಕುರಕುಂದದಲ್ಲಿ ಹಾಗನಕೇರಿ ಚನ್ನವೀರಸ್ವಾಮಿಯ ಶಿಷ್ಯನಾದ ರುದ್ರದೇವನ ಉಲ್ಲೇಖವಿದೆ.

ಇದೇ ಜಿಲ್ಲೆಯ ಲಿಂಗಸೂಗೂರಿನ ಒಂದು ಶಾಸನದಲ್ಲಿ(ಅದೇ) ಹಂಡೆಯ ಪಾಳೆಯಗಾರ ಹನುಮಿನಾಯಕ ಅಂಕುಶರಾಯನು ಗುರುಗಳಾದ ಯತಿರಾಯ ಕರಡಿ ಲಿಂಗಬಸಪ್ಪಯ್ಯರಾಜದೇವರಿಗೆ ಭಕ್ತಿಯಿಂದ ದತ್ತಿ ನೀಡಿದುದನ್ನು ಉಲ್ಲೇಖಿಸಲಾಗಿದೆ.

ಬೀದರ ಜಿಲ್ಲೆಯ ಬಸವಕಲ್ಯಾಣದ ಒಂದು ಶಾಸನವು(ಬೀದರ ಜಿಲ್ಲೆ ಶಾ.ಸಂ–೮ ಪೂರ್ವೋಕ್ತ, ಪು.) ತೈಲಪದೇವನ ಆಳ್ವಿಕೆಯ ಕಾಲದ್ದು. ಇದರಲ್ಲಿ ತೈಲದೇವನ ಮಡಿವಳ ಮತ್ತು ತ್ರಿಪುರಾಂತಕ ದೇವರ ಮಡಿವಳ ಮಾಕೆಯನನ್ನು ಉಲ್ಲೇಖಿಸಿದೆ. ಬಹುಶ: ಈತನು ವಚನ ಸಾಹಿತ್ಯದಲ್ಲಿ ಉಲ್ಲೇಖಿತನಾದ ಮಡಿವಾಳ ಮಾಚಿದೇವ ನಾಗಿರಬೇಕು. ಆದರೆ ಈ ಬಗ್ಗೆ ಖಚಿತವಾಗಿ ಹೇಳಲು ಬರುವುದಿಲ್ಲ.

ಕ್ರಿ.ಶ.೧೨೪೮ರ ಕಲ್ಬುರ್ಗಿ ಜಿಲ್ಲೆಯ ಚಿತ್ತಾಪೂರ ತಾಲೂಕಿನ ಇಂಗಳಗಿಯ ಒಂದು ಶಾಸನವು(ಕಲ್ಬುರ್ಗಿ ಜಿಲ್ಲೆ ಶಾ.ಸಂ, ಪೂರ್ವೋಕ್ತ, ಪು. ೧೨೧-೧೨೨) ಯಾದವ ಸಿಂಘಣನ ಮಹಾಮಂಡಳೇಶ್ವರ ಅಹಿಹಯ ವಂಶದ ಆನೆಗನ ಪುತ್ರ ವೀರ ಬಿಜ್ಜರಸನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ. ಇದರಲ್ಲಿ ವೀರಗಣಂಗಳ ಶೌರ್ಯವನ್ನು

ಕರಕರನುಂಸೆಂಡಾಡುವ ।
ರುರಗಪನಂ ಕಿಱರಲಿಟ್ಟು ಬಿಟ್ಟಿಕ್ಕುವರಾ ॥
ಗಿರಿಕುಳಮಂ ಕಿತ್ತೆತ್ತುವ ।
ರುರಿಯೊಱು ಪರಿಮಱಿಯನಾಡುತ್ತಿರ್ಪ್ಪರು ಸರಣರ್॥

ಎಂದು ವರ್ಣಿಸಲಾಗಿದೆ. ಈ ಶಾಸನವು ಎರಡು ದೃಷ್ಟಿಗಳಿಂದ ಗಮನಾರ್ಹ ವಾಗುತ್ತದೆ. ಮೊದಲನೆಯದೆಂದರೆ ಇಲ್ಲಿ 'ದಶಗಣ' ಹಾಗೂ 'ಶೋಡಷಗಣ'ದ ಕೆಲವು ಶರಣರ ಹೆಸರುಗಳನ್ನು ಉಲ್ಲೇಖಿಸಿರುವುದು. ಅವರಲ್ಲಿ ಮುಖ್ಯರಾದವರೆಂದರೆ "ಸಿದ್ಧರಾಮನಾಥ, ದಶಗಣದ ಸಿಂಗಿದೇವ, ಬಿಜ್ಜೇಶ್ವರದೇವರು, ರೇವಣೇಶ್ವರ, ಕಂನೇಶ್ವರ, ಕೇದಾರದೇವ, ನಾಗೇಶ್ವರ" ಇವರು. ಇವರಲ್ಲಿ ಕೆಲವರಾದರೂ ಚಾರಿತ್ರಿಕ ವ್ಯಕ್ತಿಗಳಾಗಿರಬಹುದು. ಇಲ್ಲಿಯ ಗಣಮಠದಲ್ಲಿ ಗುಡ್ಡವ್ವೆಯು ಮುಖ್ಯಳೆಂದು ಹೇಳಿರುವುದು, ಈ ದತ್ತಿಯನ್ನು ಪಡೆದ ಅಚಲವ್ವೆಯನ್ನು ಕ್ಷೇತ್ರಸನ್ಯಾಸಿನಿ ಎಂದು ಕರೆದಿರುವುದು ಇನ್ನೊಂದು. ಇದರ ಪ್ರಕಾರ ಸನ್ಯಾಸಿಗಳ ವರ್ಗದಲ್ಲಿ ಮಹಿಳೆಯರಿಗೆ ಕೂಡ ಹೆಚ್ಚಿನ ಸ್ಥಾನಮಾನಗಳು ಲಭ್ಯವಾಗುತ್ತಿತ್ತೆಂಬುದು ಸ್ಪಷ್ಟವಾಗುತ್ತದೆ.

ಕ್ರಿ.ಶ.೧೨೩೧ರ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಕುಕನೂರ ಶಾಸನವು ಯಾದವ ಸಿಂಘಣ ದೇವನ ಆಳ್ವಿಕೆಯ ಕಾಲದ್ದಾಗಿದ್ದು ಮೂಲಸ್ಥಾನ ದೇವರ ಆಚಾರ್ಯನಾದ ವಿರೂಪಾಕ್ಷ ಸ್ವಾಮಿಯನ್ನು ಉಲ್ಲೇಖಿಸುತ್ತದೆ. ಈತನು ಕಲ್ಲೇಶ್ವರದ ಆಚಾರ್ಯನಾಗಿದ್ದಂತೆ ಹೇಳಿದೆ. ಹೀಗಾಗಿ ಈತನು ಬಹುಶ: ವೀರಶೈವ ಆಚಾರ್ಯನಾಗಿರಬೇಕು ಎಂದು ಹೇಳಬಹುದು.

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಪುರದ ಶಾಸನವು(ಕೊಪ್ಪಳ ಜಿಲ್ಲೆ ಶಾ.ಸಂ-೨, ಪೂರ್ವೋಕ್ತ, ಪು.೧೭೭) ಶ್ರೀ ವೀರ ಪ್ರತಾಪ ದೇವನ ಕಾಲದ್ದಾಗಿದ್ದು, ಬನದಾಯವೆ ಎಂಬುವಳು ಸಜ್ಜನ ಶುದ್ಧ ಶಿವಾಚಾರ ಸಂಪನ್ನರಾದ ಸೋಮಯದೇವ ಅಯ್ಯಗಳಿಗೆ ದೇವರ ನೈವೇದ್ಯಕ್ಕಾಗಿ ಬೇಕಾದ ನೆಲ್ಲು ಬೆಳೆಯಲು ಅಲ್ಲಿ ಕೆರೆಯೊಂದನ್ನು ಕಟ್ಟಿಸುತ್ತಾಳೆಂದು ಹೇಳುತ್ತದೆ.

ಇದೇ ಊರಿನ ಇನ್ನೊಂದು ಶಾಸನವು(ಕೊಪ್ಪಳ ಜಿಲ್ಲೆ ಶಾ.ಸಂ-೨, ಪೂರ್ವೋಕ್ತ, ಪು. ೧೭೭)ಅಲ್ಲಿಯ ಸೋಮೆಶ್ವರ ದೇವರ ಉಲ್ಲೇಖದ ಜೊತೆಗೆ ಓಹಿಲಯ್ಯನು ಅಲ್ಲಿ ನೆಲೆಸಿದ

ಸಂಗತಿಯನ್ನು ತಿಳಿಸಿ, ಅವನಿಗೆ ಸೋಮನಾಥನು ಕನಸಿನಲ್ಲಿ ಬಂದು ಕೆರೆಯನ್ನು ಕಟ್ಟಿಸು, ದೇವಾಲಯವನ್ನು ಮಾಡಿಸು ಎಂದು ಹೇಳಿದಂತೆ ತಿಳಿಸುತ್ತಾ, "ಹಲಿಯ ಹೆಕ್ಕು ದೇಗುಲವ ಮಾಡುವುದು ಸರಿಗೆಯ ಹೆಕ್ಕು ಕೆರೆಯನಗಳುವದು" ಎಂಬ ಅಲ್ಲಮಪ್ರಭುವಿನ ಒಂದು ವಚನವನ್ನು ಉಲ್ಲೇಖಿಸುತ್ತದೆ.

ಕ್ರಿ.ಶ.೧೫೩೮ರ ಇದೇ ಜಿಲ್ಲೆಯ ಗಂಗಾವತಿ ತಾಲೂಕಿನ ಎರಡು ಶಾಸನಗಳು(ಕೊಪ್ಪಳ ಜಿಲ್ಲೆ ಶಾ.ಸಂ–೨, ಪೂರ್ವೋಕ್ತ, ಪು. ೧೭೭) 'ನಿರಾಸಿ' ಮಠದ ಬಗ್ಗೆ ಉಲ್ಲೇಖಿಸಿವೆ. ಜೆಂತಗಲ್ಲ ಮಾಗಣಿಯ ಅಪಂಣಅಯ್ಯನವರು ಚೆನ್ನಮಲ್ಲಿಕಾರ್ಜುನ ಒಡೆಯರಿಗೆ ನಿರಾಸಿಮಠದ ಮಾನ್ಯವಾಗಿ ಭೂಮಿಯನ್ನು ನೀಡಿ, ಆ ಸ್ಥಳದಲ್ಲಿ ಬದನೆ, ಬಾಳೆ, ತೆಂಗು, ಹಲಸು ಮುಂತಾದವನ್ನು ಬೆಳೆದುಕೊಂಡು ಶಿವಪೂಜೆ ಮಾಡಿಕೊಂಡು ಅನುಭವಿಸಬೇಕೆಂದು ಮೊದಲನೆಯ ಶಾಸನವು ತಿಳಿಸುತ್ತದೆ.

ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಗೊಬ್ಬೂರ ಶಾಸನವು(ರಾಯಚೂರು ಜಿಲ್ಲೆ ಶಾ.ಸಂ–೭ ಪೂರ್ವೋಕ್ತ, ಪು. ೩೧೭–೩೨೧) ಆದ್ಯ ವಚನಕಾರ ಜೇಡರ ದಾಸಿಮಯ್ಯನನ್ನು ಉಲ್ಲೇಖಿಸುತ್ತದೆ. ಕ್ರಿ.ಶ.೧೧೪೮ರ ಅದೇ ಊರಿನ ಇನ್ನೊಂದು ಶಾಸನವು[೩೬೪] ಕಲ್ಯಾಣ ಚಾಲುಕ್ಯ ದೊರೆ ಜಗದೇಕ ಮಲ್ಲನ ಕಾಲದ್ದಾಗಿದೆ. ಈ ಶಾಸನವು ಕೂಡ ಆದ್ಯ ವಚನಕಾರ ಜೇಡರ ದಾಸಿಮಯ್ಯನ ಹೆಸರನ್ನು ಉಲ್ಲೇಖಿಸುತ್ತದೆ; ಆದರೆ ಅದರ ಜೊತೆಗೆ, ಅವನ ವಿಚಾರವಾಗಿ ಮೇಲೆ ತಕ್ಕಮಟ್ಟಿಗೆ ಹೆಚ್ಚಿನ ಬೆಳಕನ್ನೂ ಚಲ್ಲುವುದು ಅದರ ಮಹತ್ತ್ವವನ್ನು ಹೆಚ್ಚಿಸಿದೆ. ಅನೇಕ ವಿಶೇಷಣಗಳಿಂದ ಹೊಗಳಲ್ಪಟ್ಟ ಹಿರಿಯ ಗೊಬ್ಬುರ ಮಹಾಜನಗಳ ಪಾದಾರಾಧಕರಾಗಿದ್ದ, ಸೋಮೇಶ್ವರ ದೇವರ ಭಕ್ತರಾದ ಜೇಡಕುಳ ತಿಲಕ ಜೇಡರ ದಾಸಿಮಯ್ಯನ ಪ್ರಿಯಪುತ್ರರಾದ ಅಥವಾ ಅವನ ವಂಶಸ್ಥರಾದ ಸಕಲ ಜೇಡ ಗೊತ್ತಳಿಗಳು ಸೇರಿ ತಮ್ಮ ಕುಲದೈವವಾದ ಗೊಜ್ಜೇಶ್ವರ ದೇವರ ಪೂಜೆ ಪುನಸ್ಕಾರ, ನೈವೇದ್ಯಕ್ಕೆ ಒಂದು ಹಾಗವನ್ನು ಬಿಡುತ್ತಾರೆ. ಅದೇ ರೀತಿ ಆ ದೇವರ ಉತ್ತರಕ್ಕೆ ಮಾರಿಯಣ್ಣನು ಕಟ್ಟಿಸಿದ ಮಲ್ಲಿಕಾರ್ಜುನ ದೇವರಿಗೆ ಒಂದು ವೀಸವನ್ನೂ ಒಟ್ಟು ಜೇಡಗೊತ್ತಳಿಗಳು ೫೦೦ ಜನರು ಆರು ವೀಸವನ್ನೂ ಬಿಡುತ್ತಾರೆ. ಈ ಶಾಸನವು "ಓಂ ನಮ: ಶಿವಾಯ" ಎಂಬುದರಿಂದ ಆರಂಭಗೊಳ್ಳುತ್ತದೆ. ಇದು ವೀರಶೈವರು ಶಿವನನ್ನು ಸ್ತುತಿಸುವ ಷಡಕ್ಷರಿ ಮಂತ್ರವೂ ಅಗಿದೆ.

ಕ್ರಿ.ಶ.೧೬೦೩ರ ಮೆಹಬೂಬ್‌ನಗರ ಜಿಲ್ಲೆಯ ಒಂದು ಶಾಸನದಲ್ಲಿ(ಆಂಧ್ರಪ್ರದೇಶದ ಕನ್ನಡ ಶಾಸನಗಳು ಭಾಗ ೨, ಸಂ–೫ ಪೂರ್ವೋಕ್ತ, ಪು.೧೧೬). ಪಂಡಿತಾರಾಧ್ಯನನ್ನು ನೆನೆಯಲಾಗಿದೆ.

ಇದು ಆರಾಧ್ಯ ಸಂಪ್ರದಾಯಕ್ಕೆ ಸೇರಿದ ಒಂದು ತೆಲುಗು ಶಾಸನ. ಆದರೆ, ಇದರಲ್ಲಿ ಮಧ್ಯೆಮಧ್ಯೆ ಕನ್ನಡ ಭಾಗಗಳೂ ಬಂದಿರುವುದರಿಂದ ಪಾಕ್ಷಿಕವಾಗಿಯಾದರೂ ಬಳಸಿಕೊಳ್ಳಬೇಕಾಗುತ್ತದೆ. ಇದರಲ್ಲಿ ಶ್ರೀಶೈಲದ ಪಂಚಮಠಪಂಚಗೃಹಗಳಿಗೆ ಮುಖ್ಯವಾದ ಬಸವಣ್ಣನ ಗೃಹದ ಸಿಂಹಾಸನದ ಮಹಾಮಹತ್ತಿನ ಪಟ್ಟದ ಪ್ರಮಥೇಶ್ವರ ದೇವರ ಉಲ್ಲೇಖ ಬರುತ್ತದೆ. ಇಲ್ಲಿಯ, "ಶ್ರೀಮತ್ಪರಮ ವೀರಶೈವ ಶಿ[ದ್ಧಾ]ಂತ ಸನ್ಮಾರ್ಗಸಂಪನ್ನ ಸದ್ವೀರಮಾಹೇಶ್ವರ ಹೃತ್ಕಮಲ ಕರ್ಣಿಕಾನಿವಾಸ ಚಿನ್ಮೂರ್ತಿ ಪ್ರಾಣಲಿಂಗ ಸಮಾರ್ಚನಾನುಸಂತುಷ್ಟ ಋಗ್ವೇದ ಶಾಸ್ತ್ರಾಗಮಪುರಾಣ ಯಿತಿಹಾಸಾದಿ ನಾನಾ ಶಾಸ್ತ್ರ ಕೋವಿದರುಂ, ಜೈನ ಚಾರ್ವಾಕ ಮಾಯಾವಾದ ಮೊದಲಾದ ಪರವಾದಿ ಕೋಲಾಹಲರುಂ ಗುರುಲಿಂಗ ಜಂಗಮಪಾದೋದಕ ಪ್ರಸಾದಾನುಭಾವಿಗಳಪ್ಪ" ಎಂಬ ಮಾತುಗಳು ವೀರಶೈವ ಮತ್ತು ಆರಾಧ್ಯ ಸಂಪ್ರದಾಯಗಳು ಒಂದೇ ಆಗಿದ್ದರೂ ಹೇಗೆ ಮೂಲದಲ್ಲಿ ಭಿನ್ನವಾಗಿವೆ ಎಂಬುದನ್ನು ಸ್ಪಷ್ಟಪಡಿಸುತ್ತವೆ.

ಹೀಗೆ ವೀರಶೈವ ಧರ್ಮಕ್ಕೆ ಸಂಬಂಧಿಸಿದಂತೆ ಶಾಸನಗಳು ಬಹಳ ಕಡಿಮೆ ಪ್ರಮಾಣದಲ್ಲಿ ಇದ್ದ ಹಲವು ಮಹತ್ತ್ವದ ಅಂಶಗಳನ್ನು ತಿಳಿಸುತ್ತವೆ. ವಾಸ್ತವವಾಗಿ ಪ್ರಸ್ತುತ ಪ್ರದೇಶವು ವೀರಶೈವಧರ್ಮದ ಕೇಂದ್ರ ಪ್ರದೇಶ. ಇಲ್ಲಿ ಹೆಚ್ಚಿನ ಸಂಖ್ಯೆಯ ಶರಣರು ನೆಲಸಿದ್ದರು. ಹಾಗಿದ್ದೂ ಅವರ ಬಗ್ಗೆ ಸಿಕ್ಕುವ ಮಾಹಿತಿ ಮಾತ್ರ ಅತ್ಯಲ್ಪ ಹಾಗೂ ಇಲ್ಲಿ ನಡೆದ ಕಲ್ಯಾಣದ ಕ್ರಾಂತಿ ಇವುಗಳ ಕಾರಣದಿಂದಾಗಿಯೋ ಅಥವಾ ಒಂದು ಅವರನ್ನು ಕುರಿತಂತೆ ಶಾಸನಗಳಲ್ಲಿ ಅಷ್ಟಾಗಿ ದಾಖಲಿಸದೇ ಇರಬಹುದು, ಇಲ್ಲವೇ ದಾಖಲಿಸಿದೇ ಹಾಳಾಗಿರಬಹುದು.

ವೈದಿಕ ಧರ್ಮ

ಸನಾತನ ಹಿಂದೂ ಧರ್ಮವೆಂದು ಪರಿಗಣಿತವಾದ ವೈದಿಕ ಧರ್ಮವು ಅನೇಕ ರಾಜಾಶ್ರಯ ಗಳ ನೆರವಿನಲ್ಲಿ, ಸಂಸ್ಕೃತ ಭಾಷೆಯಿಂದ ವಿದ್ಯೆಗೆ ಹೆಗ್ಗಳಿಕೆ ಪಡೆದ ಅಗ್ರಹಾರ, ಬ್ರಹ್ಮಪುರಿ ಮತ್ತು ಘಟಿಕಾಸ್ಥಾನಗಳ ಅಡಿಯಲ್ಲಿ ಪ್ರಭಾವಶಾಲಿಯಾಗಿ ಬೆಳೆದು ಬಂದುದಕ್ಕೆ ಅನೇಕ ಉದಾಹರಣೆಗಳಿವೆ. ರಾಷ್ಟ್ರಕೂಟರು ಜೈನ ಧರ್ಮವನ್ನು ಪೋಷಿಸಿಕೊಂಡು ಬಂದರು. ಚಾಳುಕ್ಯರಂತೂ ವೈದಿಕ ಮತಾವಲಂಬಿಗಳಾಗಿದ್ದರು. ಅಂದಿನ ಚತುರ್ವರ್ಣ ವ್ಯವಸ್ಥೆಯಲ್ಲಿ ಬ್ರಾಹ್ಮಣರು ಉಚ್ಚ ಸ್ಥಾನದಲ್ಲಿದ್ದರು. ಶಾಸನಗಳಲ್ಲಿ ಕಂಡುಬರುವ 'ಮಹಾಜನರು' ಇವರೇ ಆಗಿದ್ದಾರೆ ಮತ್ತು ಬ್ರಹ್ಮಪುರಿ, ಅಗ್ರಹಾರ, ಘಟಿಕಾಸ್ಥಾನಗಳಲ್ಲಿ ಪ್ರಧಾನವಾಗಿ ಈ ವೈದಿಕಧರ್ಮೀಯರೇ ಹೆಚ್ಚಾಗಿ ಇರುತ್ತಿದ್ದರು. ಆಯಾ ಸ್ಥಾನಗಳಲ್ಲಿ ರಾಜನ ನಂತರ ಇವರೇ ಪ್ರಮುಖರಾಗಿದ್ದರೆಂಬುವುದಕ್ಕೆ ಅನೇಕ ಶಾಸನಗಳಲ್ಲಿ ಉಲ್ಲೇಖಗೊಂಡ ನಿದರ್ಶನಗಳೇ ಸಾಕ್ಷಿ.

ಹೈದರಾಬಾದ್ ಕರ್ನಾಟಕ ಮತ್ತು ತೆಲಂಗಾಣ ಪ್ರದೇಶಗಳಲ್ಲಿ ವೈಧಿಕ ಧರ್ಮವು ಅತಿ ಉಚ್ಚ ಸ್ಥಾನದಲ್ಲಿತ್ತೆಂಬುದು ಇಲ್ಲಿಯ ಶಾಸನಗಳಲ್ಲಿ ಉಲ್ಲೇಖಗೊಂಡ ಅಗ್ರಹಾರ, ಬ್ರಹ್ಮಪುರಿ, ಘಟಿಕಾಸ್ಥಾನಗಳು, ಮಹಾಜನರು ಇತ್ಯಾದಿ ಅಂಶಗಳನ್ನು ನೋಡಿದಾಗ ಸ್ಪಷ್ಟವಾಗುತ್ತದೆ. ಅತ್ಯಂತ ಶ್ರೇಷ್ಠ ಸ್ಥಾನದಲ್ಲಿದ್ದ ಬ್ರಾಹ್ಮಣರು ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ ಪ್ರತಿಗ್ರಹಗಳಲ್ಲಿ ನಿರತರಾಗಿರುತ್ತಿದ್ದರು. ಇಂತಹವರ ಉಪಜೀವನಕ್ಕಾಗಿ ಸುಂಕ ರಹಿತವಾಗಿ ನೀಡುತ್ತಿದ್ದ ಊರುಗಳೇ ಅಗ್ರಹಾರಗಳು.

ಕ್ರಿ.ಶ.೧೧೭೮ರ ಕಲ್ಬುರ್ಗಿ ಜಿಲ್ಲೆಯ ಸೇಡಂ ಶಾಸನವು(ಹನುಮಾಕ್ಷಿ ಗೋಗಿ, ಕಲಬುರ್ಗಿ ಜಿಲ್ಲೆಯ ಶಾಸನಗಳು, ಪು.೧೨೧-೧೨೨)ಅಲ್ಲಿಯ ಅಗ್ರಹಾರದಲ್ಲಿಯ ಮಹಾಜನರನ್ನು

ಅಂಬುಧಿ ಮೇರೆದಪ್ಪಿ ಕವಿದೀ ಧರೆಯಂ ಕಿಡಿಪಂದು ವಿಷ್ಣುವೀ
ಶಂಬೆರಸೀ ಜಗತ್ತ್ರಯಮುಮಂ ಬಸಿರೊಳ್ನಲಿಸಿಟ್ಟು ಕಾವವೊ
ಲಿಂಬಳಿದಿರ್ದ್ದ ನಾಲ್ದೆಸೆಯ ನಾಡುಗಳಂ ಪೆರಗಿಕ್ಕಿ ಕಾವ ಸೇ
ಡಿಂಬದ ವಿಪ್ರರೊಂದಳವನೇವೊಗಳ್ವೆಂ ಚಲದಂಕರಾಮರಂ.

ಎಂದು ವರ್ಣಿಸುತ್ತದೆ. ಅವರ ಕಾರ್ಯಗಳನ್ನು ಕುರಿತಂತೆ,

"ಯಮ ನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೌನಾನುಷ್ಠಾನ ಪರಾಯಣ ಜಪತಪ ಸಮಾಧಿಶೀಳಗುಣಸಂಪನ್ನರುಂ, ನುಡಿದು ಮತ್ತೆನ್ನರುಂ ಕಾಂಚೀಪುರದ್ವಾರ ಕವಾಟ ಪುಟಭೇಧನಾಭಿಚಾರ ಹೋಮ ಸಾಧಕರುಂ, ವಿರೋಧಿ ಕುಳಾರಣ್ಯದಾವಪಾವಕರುಂ, ಚತುರ್ವ್ವೇದ ಪಾರಾವಾರ ಪಾರಗರುಂ, ಬಹುವಿಧ ವಚನ ರಚನಾ ಪ್ರವೀಣರುಂ, ಚತುಷ್ಷಷ್ಟಿ ಕಳಾನ್ವಿತ ವಸುಮತೀಗೀರ್ವ್ವಾಣರುಂ, ಹೇಮಕುಂಡಳ ಜ್ವಾಳಿನೀದೇವ್ಯಾಕರ್ಷಣರುಂ, ಸಮಸ್ತ ವಿದ್ಯಾ ವಿಶೇಷಣರುಂ, ಶರಣಾಗತ ವಜ್ರಪಂಜರರುಂ, ವೈರಿ ದಿಕ್ಕುಂಜರರುಂ, ಶ್ರೀನಾರಾಯಣದೇವ ಪಾದಪಂಕಜ ಭ್ರಮರರುಮಪ್ಪ ಶ್ರೀಮದನಾದಿಯಗ್ರಹಾರಂ ಸೇಡಿಂಬದಶೇಷ ಮಹಾಜನಂ ಮೂನೂರ್ವ್ವಸ್ವಾಮಿಗಳ್ ಸ್ಥಿರಂಜೀಯಾತ್" ಎಂದು ತಿಳಿಸುತ್ತದೆ.

ಕ್ರಿ.ಶ.೧೧೧೦ಕ್ಕೆ ಸರಿ ಹೊಂದುವ ಬೀದರ ಜಿಲ್ಲೆಯ ಬಸವಕಲ್ಯಾಣದ ಶಾಸನವು (ಕ.ವಿ.ಶಾ.ಸಂ.೮ ಪೂರ್ವೋಕ್ತ, ಪು.೮೭) ಚಾಲುಕ್ಯ ತ್ರಿಭುವನ ಮಲ್ಲನು ಜಯಂತೀಪುರದಿಂದ ರಾಜ್ಯಭಾರ ಮಾಡುತ್ತಿರುವಾಗ ಕೊಪೇಶ್ವರ ದೇವರ ಬಳಿಯ ನಾರಾಯಣ ದೇವರಿಗೆ ಮತ್ತು ಊರಿನ ಒಳಗೆ ನಾರಾಯಣ ಭಟ್ಟಯ್ಯನು ಮಾಡಿಸಿದ ಕೇಶವ ದೇವರಿಗೆ ದಾನ ನೀಡಿದಂತೆ ಉಲ್ಲೇಖಿಸುತ್ತದೆ. ಬಸವಕಲ್ಯಾಣಕ್ಕೆ ಹತ್ತಿಕೊಂಡೆ 'ನಾರಾಯಣಪುರ' ಎಂಬ ಊರು ಕೂಡ ಈಗಲೂ ಇದೆ. ಅಲ್ಲಿ ನಾರಾಯಣೇಶ್ವರ ದೇವಾಲಯ ಪ್ರಸಿದ್ಧಿ ಪಡೆದಿದೆ.

ಕ್ರಿ.ಶ.೧೧೪೨ರ ಕಲ್ಬುರ್ಗಿ ಜಿಲ್ಲೆಯ ಮುದನೂರು ಶಾಸನವು(ಕಲ್ಬುರ್ಗಿ ಜಿಲ್ಲೆ ಶಾ.ಸಂ, ಪೂರ್ವೋಕ್ತ, ಪು.೧೨೧) ಅಗ್ರಹಾರದ ಒಡೆಯರನ್ನು ಪ್ರಮುಖ ವಿಶೇಷ 'ಮಹಾಜನ'ವೆಂದು ಉಲ್ಲೇಖಿಸಿದೆ. ಚಾಳುಕ್ಯ ಜಗದೇಕಮಲ್ಲನು ಆಳುತ್ತಿರುವಾಗ, ಆತನ ಮಾಂಡಳಿಕನಾದ ಕಪ್ಪದೇವರಸ ಮತ್ತು ಅಲ್ಲಿಯ ಮಹಾಜನರು ಸೇರಿ ಕೆಲವು ತೆರಿಗೆಗಳನ್ನು ವಿನಾಯತಿ ಮಾಡುವುದರ ಉಲ್ಲೇಖ ಇಲ್ಲಿ ಬರುತ್ತದೆ.

ಕ್ರಿ.ಶ.೧೧೬೮ರ ಇದೇ ಜಿಲ್ಲೆಯ ಹಗರಟಗಿ ಶಾಸನವು(ಅದೇ, ಪು.೧೨೨)ಅಲ್ಲಿಯ ಮಹಾಜನರನ್ನು ವರ್ಣಿಸಿದೆ. ಈ ಶಾಸನವು ಕಳಚುರ್ಯ ಸಂಕಮದೇವನ ಆಳ್ವಿಕೆಯ ಕಾಲದ್ದಾಗಿದೆ.

ಕ್ರಿ.ಶ.೧೧೪೮ರ ಇದೇ ಜಿಲ್ಲೆಯ ಮುದನೂರ ಶಾಸನದಲ್ಲಿ(ಅದೇ, ಪು.೧೨೫)ಕಲ್ಯಾಣೀ ಚಾಲುಕ್ಯ ದೊರೆ ಇಮ್ಮಡಿ ಜಗದೇಕಮಲ್ಲನು ಆಳುತ್ತಿರುವಾಗ ಅಗ್ರಹಾರ ಮುದಿನೀರ ಐದುನೂರು ಮಹಾಜನರ ಸನ್ನಿಧಾನದಲ್ಲಿ ಮಹಾಪ್ರಧಾನನೂ ಸುಂಕವೆರ್ಗ್ಗಡೆಯೂ

ಆದ ಗಯಾಧರ ದಂಡನಾಯಕನು ಈ ಗ್ರಾಮದ ಹದಿನೆಂಟು ಸಾವಿರ ಮತ್ತರು ಭೂಮಿಯೊಳಗಿನ ಹೆರ್ಜುಂಕ ಹಾಗೂ ವಡ್ಡರಾವುಳ ತೆರಿಗೆ ಹಣವನ್ನು ರಾಮೇಶ್ವರ ದೇವರ ಅಂಗಭೋಗ ನೈವೇದ್ಯ, ನಂದಾದೇವಿಗೆ ವಿದ್ಯಾಸತ್ರ ಮುಂತಾದವುಗಳಿಗೆ ದಾನ ನೀಡಿದುದ್ದರ ಉಲ್ಲೇಖ ಬರುತ್ತದೆ. ಈ ಶಾಸನದಿಂದ ತಿಳಿದುಬರುವ ಇಲ್ಲಿ ಗಮನಿಸಬೇಕಾದ ಅಂಶವೊಂದಿದೆ. ಅದೆಂದರೆ ದಾನ ನೀಡುವಾಗ ಮುದಿನೀರ ಐದು ಸಾವಿರ ಮಹಾಜನರ ಸನ್ನಿಧಾನದಲ್ಲಿ ನೀಡಲಾಯಿತು ಎಂಬುವುದು ಮುಖ್ಯವಾಗುತ್ತದೆ. ರಾಜನನ್ನು ಬಿಟ್ಟರೆ ಇವರು ಎರಡನೆ ಸ್ಥಾನ ವಹಿಸಿದ್ದರೆಂದೂ ಅಷ್ಟೇ ಪೂಜ್ಯನೀಯರಾಗಿದ್ದರೆಂದೂ ಇದರಿಂದ ತಿಳಿಯುತ್ತದೆ.

ಕ್ರಿ.ಶ.೧೦೭೭ರ ಇದೇ ಜಿಲ್ಲೆಯ ಸುರಪೂರ ತಾಲೂಕಿನ ಏವೂರು ಶಾಸನವು(ಹನುಮಾಕ್ಷಿ ಗೋಗಿ: ೧೯೯೫, ಸುರಪುರ ತಾಲೂಕಿನ ಶಾಸನಗಳು, ಪು.೧೪೭-೧೪೮)ಚಾಲುಕ್ಯ ದೊರೆ ಆರನೇ ವಿಕ್ರಮಾದಿತ್ಯನ ಆಳ್ವಿಕೆಯ ಕಾಲದ್ದಾಗಿದೆ. ಅಗ್ರಹಾರ ಮತ್ತು ಇತರ ಊರುಗಳಲ್ಲಿ ಬ್ರಾಹ್ಮಣರು ವಾಸಿಸುವ ಕೇರಿಗಳಿಗೆ 'ಬ್ರಹ್ಮಪುರಿ' ಗಳೆನ್ನುತ್ತಿದ್ದರು. ಶೈವಮತಾನುಯಾಯಿ ಗಳು, ಶೈವ ದೇವಸ್ಥಾನಗಳ ಪೂಜಾರಿಗಳು ಪರಿಚಾರಕರು ವಾಸಿಸುವ ಕೇರಿಗಳಿಗೆ 'ಶಿವಪುರಿ'ಗಳೆನ್ನುತ್ತಿದ್ದರು. ಇಂತಹ ಉಭಯಪುರಿಗಳೂ ಒಂದೇ ಊರಿನಲ್ಲಿರುತ್ತಿದ್ದುವೆನ್ನುವುದಕ್ಕೆ ಈ ಶಾಸನವೇ ಸಾಕ್ಷಿ. ಏವೂರಿನಲ್ಲಿ ಬ್ರಹ್ಮಪುರಿಯಿತ್ತು. ರವಿದೇವ ಚಮೂಪ ಬಳಬಟ್ಟಿಯ ಹತ್ತಿರ 'ಶಿವಪುರ' ಮಾಡಿಸಿದನೆಂದು ಈ ಶಾಸನ ತಿಳಿಸುತ್ತದೆ. ಇಲ್ಲಿ ದೊರೆಯ ಸರ್ವಧರ್ಮ ಸಮನ್ವಯತೆ, ಕೂಡಿ ಬಾಳುವಿಕೆಯ ಗುಣ ಇವನ್ನು ಕಾಣಬಹುದಾಗಿದೆ.

ಸೇನಬೋವ ಸಿರಿಯಣ್ಣ ತ್ರಿಪುರಾಂತಕದೇವ, ಉಮಾಭವ, ಕೇಶವದೇವರಿಗೆ ದತ್ತಿ ನೀಡಿದುದನ್ನು ಹಗರಟಗಿ ಶಾಸನವು ತಿಳಿಸುತ್ತದೆ. ಸತ್ಯಪ್ರಚಾರ ಭಟ್ಟಾರಕದೇವರು ತಮ್ಮ ಆಳ್ವಿಕೆಯ ಏವೂರಿನಲ್ಲಿ ಕೇಶವದೇವರ ಖಂಡಸ್ಫುಟಿತ-ಜೀರ್ಣೋದ್ಧಾರ ಪೂಜೆಗಳಿಗಾಗಿ ಭೂದತ್ತಿ ನೀಡಿದುದನ್ನು ಸುರಪೂರ ತಾಲೂಕಿನ ಏವೂರಿನ ಕ್ರಿ.ಶ.೧೧೦೫ರ[ಸುರ-೧೧೭೩] ಶಾಸನವು(ಹನುಮಾಕ್ಷಿ ಗೋಗಿ: ೧೯೯೫, ಸುರಪುರ ತಾಲೂಕಿನ ಶಾಸನಗಳು, ಪು. ೧೪೭) ಉಲ್ಲೇಖಿಸಿದೆ. ದಂಡನಾಯಕನ ತಮ್ಮ ಮಾಧವರಾಜ ತಾನು ಮಾಡಿಸಿದ ನಾರಾಯಣ ದೇವರಿಗೆ ಭೂದತ್ತಿ ಬಿಟ್ಟಿದುದನು ಸುರಪೂರ ತಾಲೂಕಿನ ಕ್ರಿ.ಶ.೧೦೮೧ರ ಹಿರಿಯ ಹೆಬ್ಬಾಳ ಶಾಸನವು(ಅದೇ, ಪು.೧೪೯)ತಿಳಿಸುತ್ತದೆ.

ಕ್ರಿ.ಶ.೧೧೯೭ರ ಒಂದು ಶಾಸನವು ಚಾಳುಕ್ಯ ದೊರೆ ತ್ರಿಭುವನ ಮಲ್ಲನ ಅರಸಿ ಚಂದಲ ದೇವಿಯು ರಾಜನ ಕೋಳೂರಿನಲ್ಲಿ ಶಂಕರ ನಾರಾಯಣ ದೇವರಿಗೆ ಭೂಮಿ, ತೋಟ, ಗಾಣ ನಿವೇಶನಗಳನ್ನು ದತ್ತಿಯಾಗಿ ಬಿಟ್ಟುದನ್ನು ತಿಳಿಸುತ್ತದೆ(ಅದೇ, ಪು.೧೫೧)

ಕ್ರಿ.ಶ.೧೨೧೪ರ ಸುರಪುರ ತಾಲೂಕಿನ ರಾಜನ ಕೋಳೂರಿನ ಶಾಸನವು(ಅದೇ, ಪು.೧೫೨) ಯಾದವ ಚಕ್ರವರ್ತಿ ಎರಡನೆ ಸಿಂಘಣನ ಕಾಲದ ಶಾಸನವಾಗಿದೆ. ಬತ್ತಗ್ರಾಮ ರಾಜನ ಕೋಳೂರಿನ ಮಹಾಪ್ರಭುಗಳು, ಸೆಟ್ಟಿ ಗುತ್ತರು, ತಂಬುಲಿಗರು, ಅರುವತ್ತೊಕ್ಕಲು ಮುಮ್ಮುರಿ ದಂಡರು, ವ್ಯಾಪಾರಿಗಳು, ಹನ್ನವಣಿಗಳು ಸೇರಿ ಶಂಕರ ನಾರಾಯಣ ದೇವರಿಗೆ ಬಿಟ್ಟ ದತ್ತಿಯನ್ನು ಇದು ವಿವರಿಸುತ್ತದೆ.

ಮಹಾಜನರೆಂದು ಖ್ಯಾತರಾದ ಬ್ರಾಹ್ಮಣರು ಹೆಸರಿಗೆ ತಕ್ಕಂತೆ ವಿದ್ವತ್ತಿನಲ್ಲಿಯೂ, ಇತರ ಧರ್ಮಗಳ ವಿಷಯದಲ್ಲಿಯೂ ಔದಾರ್ಯದಿಂದಲೇ ನಡೆದುಕೊಳ್ಳುತ್ತಿದ್ದರೆಂಬುವುದಕ್ಕೆ ಕ್ರಿ.ಶ.೧೧೨೪ರ ಕಲ್ಬುರ್ಗಿಯ ಜಿಲ್ಲೆಯ ಸೇಡಿಂಬ ದುರ್ಗದ ಶಾಸನವು(ಕಲ್ಬುರ್ಗಿ ಜಿಲ್ಲೆ ಶಾ.ಸಂ, ಪೂರ್ವೋಕ್ತ, ಪು. ೧೨೧-೧೨೨)ಸಾಕ್ಷಿಯಾಗಿದೆ. ಈ ಶಾಸನವು ಚಾಲುಕ್ಯ ದೊರೆ ತ್ರಿಭುವನಮಲ್ಲನ ಆಳ್ವಿಕೆಗೆ ಸಂಬಂಧಿಸಿದುದು. ಸೇಡಿಂಬದ "ಅಶೇಷ ಮಹಾಜನಂ ಮೂನೂರ್ವ್ವರುಂ ಸೇಡಿಂಬದಲು ಬಸದಿಯಂ ನಿರ್ವ್ವಾಣವಾಗಿ ಮಾಡಿಸಿ, ಶಾಂತಿನಾಥದೇವರಂ ಪ್ರತಿಷ್ಠೆಯಂ ಮಾಡಿ, ಮಹಾವಿಭೂತಿಯಿಂ ಸುವರ್ಣ ಕಳಸಾರೋಹಣಂ ಮಾಡಿ ಬ್ರಹ್ಮಜಿನಾಲಯ ಮೆಂದು ಪೆಸರನಿಟ್ಟು, ಮತ್ತಂ ಆ ಶಾಂತಿನಾಥ ದೇವರ್ಗೆ" ಮಹಾಪೂಜೆ ಇತ್ಯಾದಿಗಳಿಗಾಗಿ ಖಂಡಸ್ಫುಟಿತ ಜೀರ್ಣೋದ್ಧಾರಕ್ಕಾಗಿ ಸೇಡಿಂಬದಲ್ಲಿ ನಾಲ್ವತ್ತು ಮತ್ತರು ಭೂಮಿಯನ್ನು ಕೊಟ್ಟರೆಂದು ತಿಳಿಸಿದೆ.

ಬ್ರಾಹ್ಮಣರಿಗಾಗಿ ನೀಡಿದ ಅನೇಕ ಅಗ್ರಹಾರಗಳ ಉಲ್ಲೇಖವು ರಾಯಚೂರು ಜಿಲ್ಲೆಯ ಶಾಸನಗಳಲ್ಲೂ ಕಂಡುಬರುತ್ತದೆ.

ಬಳ್ಳನಿಟ್ಟಿಗೆಯು ಈ ಪ್ರದೇಶದ ಬಹುಪ್ರಮುಖ ಅಗ್ರಹಾರವಾಗಿತ್ತು. ಮಾನ್ವಿಯ ಎಂಟು ಶಾಸನಗಳಲ್ಲಿ(ಕ.ವಿ.ಶಾ.ಸಂ-೭ ಪೂರ್ವೋಕ್ತ, ಪು.೩೧೭-೩೨೧)ಇದು ಸರ್ವನಮಸ್ಯ ವಾಗಿ ನೀಡಿದ ಅಗ್ರಹಾರವೆಂದು ಉಲ್ಲೇಖಗೊಂಡಿದೆ.

ಇದೇ ಜಿಲ್ಲೆಯ ಬೆಳಗುರ್ಕಿ(ಅದೇ, ಪು.೩೨೨), ತಡಕಲ್(ಅದೇ, ಪು.೩೨೫), ಬನ್ನಗೊಳ (ಅದೇ, ಪು.೩೨೭), ಮುಕ್ಕುಂದೆ(ಅದೇ, ಪು.೩೨೯), ಕಲ್ಲೂರು(ಅದೇ, ಪು.೩೨೧), ಸಾಲಿಗುಂದೆ (ಅದೇ, ಪು.೩೩೨), ಬೇವಿನ ಹಾಳ(ಅದೇ, ಪು.೩೩೪), ಕುರುಡಿ(ಅದೇ, ಪು.೩೩೬), ಜಾಜಾವಿ (ಅದೇ, ಪು.೩೨೮), ಹಿರಿಯ ಬಳಗಾನೂರು(ಅದೇ, ಪು.೩೨೦), ಕೊಟ್ಟುಕುಣುಹೆ(ಅದೇ, ಪು.೩೩೨), ಮುಂತಾದುವೆಲ್ಲ ಅಗ್ರಹಾರಗಳೇ ಆಗಿದ್ದವು.

ಇದೇ ಜಿಲ್ಲೆಯ ದೇವದುರ್ಗ ತಾಲೂಕಿನ ಗಬ್ಬೂರು ಶಾಸನಗಳಲಿ(ಅದೇ, ಪು.೩೪೪), ಹಿರಿಯ ಅಗ್ರಹಾರವಾದ ಗಬ್ಬೂರಿನ ಮಹಾಜನಗಳ ವರ್ಣನೆಯಿದ್ದು ಅವರನ್ನು ಗೊಬ್ಬೂರ ವಿಪ್ರಚೂಡಾಮಣಿಗಳೆಂದು ಕರೆಯಲಾಗಿದೆ. ಗೊಬ್ಬೂರನ್ನು ಪ್ರಸಿದ್ಧ ವಿದ್ಯಾಕ್ಷೇತ್ರವೆಂದೂ, ಭುವನವಿಖ್ಯಾತ ಗೋಪುರವೆಂದೂ, ವಿಬುಧ ಜನರ ಕ್ಷೇತ್ರವೆಂದೂ, ವಿದ್ವಜ್ಜನಗಳು ನೆಲೆಸಿದ ಗ್ರಾಮರಾಜ ನಂತಿದೆಯೆಂದೂ ಹೊಗಳಲಾಗಿದೆ. ಈ ಅಗ್ರಹಾರದಲ್ಲಿ ರಾಜನ ನಂತರ ಅಲ್ಲಿನ ಬ್ರಾಹ್ಮಣರದೇ ಪ್ರಮುಖ ಉಲ್ಲೇಖವಿರುವುದು ಈ ಶಾಸನಗಳಿಂದ ತಿಳಿಯುತ್ತದೆ. ಈ ಶಾಸನಗಳಲ್ಲಿ ಯಾವುದೇ ಮಂಡಳೇಶ್ವರನ ಅಥವಾ ಅಧಿಕಾರಿಯ ಉಲ್ಲೇಖವಿಲ್ಲ. ಇದು ಆ ಗ್ರಾಮದಲ್ಲಿದ್ದ ಮಹಾಜನರ ಪ್ರಭಾವವನ್ನು ಸೂಚಿಸುತ್ತೆಂದು ಹೇಳಬಹುದು.

ಕ್ರಿ.ಶ.೧೧೫೪ರ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಮುಧೋಳು (ಕ.ವಿ.ಶಾ.ಸಂ.೨ ಪೂರ್ವೋಕ್ತ, ಪು. ೨೦೨) "ಸಮಸ್ತ ಪ್ರಶಸ್ತಿ ಸಹಿತಂ ಶ್ರೀಮನ್ಮಹಾಗ್ರಹಾರಂ ಮುದುವೊಳಲಶೇಷ ಮಹಾಜನಂಗಳು ಸಾಸಿರ್ವ್ವರು" ಎಂದು ಬರುತ್ತದೆ. ಚಾಲುಕ್ಯ ದೊರೆ ತ್ರೈಲೋಕ್ಯಮಲ್ಲನು ಕಲ್ಯಾಣದಿಂದ ಆಳುತ್ತಿರುವಾಗಿನ ಈ ಶಾಸನದಲ್ಲಿ ಮೊದಲಿಗೆ, ಮುದುವೊಳಲಿನ ಮಹಾಜನರನ್ನು ಅನೇಕ ವಿಶೇಷಣಗಳಿಂದ ದೀರ್ಘವಾಗಿ ವರ್ಣಿಸಿದೆ. ಇವರನ್ನು ಶ್ರೀ ಸ್ವಯಂಭು ಒಡೆಯ ಶಂಕರದೇವರ ಪಾದಾರಾಧಕರು ಎಂದು ಕರೆದಿದೆ. ಈ ಮಹಾಜನರ ಅನುಮತಿ ಪಡೆದು ಐನೂರು ಜನರು ಅಗ್ರಹಾರದ ಗವರೇಶ್ವರ ದೇವರ ದೇವಾಲಯವನ್ನು ನಿರ್ಮಿಸಿದರೆಂದು ಉಲ್ಲೇಖಿಸಲಾಗಿದೆ. ಈ ಮಹಾಜನರನ್ನು, "ಸ್ವಸ್ತಿ ಯಮನಿಯಮ ಸ್ವಾಧ್ಯಾಯ ಧ್ಯಾನಧಾರಣ ವೌನಾನುಷ್ಠಾನ ಪಾರಾಯಣ ಜಪ ಸಮಾಧಿಶೀಲ ಸಂಪನ್ನರು, ಪನ್ನಗಸಯನ ಪದಕಮಳಾರಾದಿತೋತ್ಪನ್ನರು, ಷಟ್ಕರ್ಮನಿರತರು, ಆಶ್ರಿತಜನಕಲ್ಪವೃಕ್ಷರು, ಶರಣಾಗತವಜ್ರಪಂಜರರು" ಎಂದು ಮುಂತಾಗಿ ಸುದೀರ್ಘವಾಗಿ ವರ್ಣಿಸಲಾಗಿದೆ. ಒಟ್ಟಾರೆ, ರಾಜನ ನಂತರ ಆಡಳಿತದ

ಮೇಲ್ವಿಚಾರಣೆಯ ಜವಾಬ್ದಾರಿಯನ್ನು ಇವರು ಹೊತ್ತಿದ್ದರೆಂಬುದೂ, ಈ ಅಗ್ರಹಾರದ ಅಧಿಕಾರ ಇವರ ಆಧೀನಲ್ಲಿತ್ತೆಂಬುದೂ, ಇತರ ಸಮುದಾಯಕ್ಕಿಂತ ಇವರು ಉಚ್ಚ ಸ್ಥಾನದ ಮಾನ್ಯತೆಯನ್ನು ಪಡೆದಿದ್ದರೆಂಬುದೂ ಸ್ಪಷ್ಟವಿದೆ.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಬಳಗೇರಿಯ ಶಾಸನವು(ಅದೇ, ಪು.೨೦೩) ಆ ಊರನ್ನು 'ಬ್ರಹ್ಮಪುರಿ' ಎಂದು ಉಲ್ಲೇಖಿಸಿ, ಅಲ್ಲಿ ಇನೂರ್ವ್ವರು ಮಹಾಜನರು ಇದ್ದರೆಂದು ತಿಳಿಸುತ್ತದೆ. ಅವರನ್ನು ಸಕಳಶಾಸ್ತ್ರ ಷಟ್‌ದರ್ಶನ ಚತುಸ್ಸಮಯ ವ್ಯಾಖ್ಯಾನರು ಎಂಬಿತ್ಯಾದಿಯಾಗಿ ವರ್ಣಿಸಲಾಗಿದೆ.

ಎಲ್ಲ ಅಗ್ರಹಾರಗಳೂ ಒಂದೇ ಗಾತ್ರದವಾಗಿರಲಿಲ್ಲ. ಒಂದೊಂದರಲ್ಲಿ ಒಂದೊಂದು ಪ್ರಮಾಣದ ಜನಸಂಖ್ಯೆ ಇರುತ್ತಿತ್ತು. ಕೆಲವು ಅಗ್ರಹಾರಗಳಲ್ಲಿ ಎಷ್ಟೆಷ್ಟು ಜನರಿದ್ದರೆಂಬುದರ [ಕುಟುಂಬಗಳಿದ್ದ ವೆಂಬುದರ] ಉಲ್ಲೇಖ ಕೂಡ ಶಾಸನಗಳಲ್ಲಿ ಸಿಕ್ಕುತ್ತದೆ. ಉದಾಹರಣೆಗೆ, ಈ ಕೆಳಗಿನ ಅಗ್ರಹಾರಗಳಲ್ಲಿಯ ಜನರ ಸಂಖ್ಯೆ ಹೀಗೆ ಕಂಡುಬರುತ್ತದೆ:

ಅಳವಂಡಿ–೪೦೦(ಅದೇ, ಪು.೨೦೪)

ಇಟ್ಟಿಗೆ–೪೦೦(ಅದೇ, ಪು.೨೦೬)

ಕುಕ್ಕನೂರು–೧೦೦೦(ಅದೇ, ಪು.೨೦೭)

ಕೌರೂರು–೫೦೦(ಅದೇ, ಪು.೨೦೯)

ಬಳಂಗೆರೆ–೩೦೦(ಅದೇ, ಪು.೨೧೧)

ಮುಧುವೊಳಲು–೧೦೦೦(ಅದೇ, ಪು.೨೧೨)

ಹೀಗೆ ಬೇರೆ ಬೇರೆ ಅಗ್ರಹಾರಗಳಲ್ಲಿ ಬೇರೆ ಬೇರೆ ಸಂಖ್ಯೆಯ ಜನರಿರುತ್ತಿದ್ದರೆಂದು ತಿಳಿದುಬರುತ್ತದೆ. ಇಂತಹ ಮಹಾಜನರಿದ್ದ ಊರಿನಲ್ಲಿ ಅಥವಾ ತಮ್ಮ ಅಕ್ಕಪಕ್ಕದ ಊರುಗಳಲ್ಲಿ ಇರುವಂತಹ ದೇವಾಲಯಗಳಿಗೆ ಅಥವಾ ಬ್ರಾಹ್ಮಣರಿಗೆ ದಾನದತ್ತಿಗಳನ್ನು ನೀಡಬೇಕ್ಕಿದ್ದರೂ ಈ ಮಹಾಜನರ ಒಪ್ಪಿಗೆ ಬೇಕಾಗಿತ್ತು ಎಂದು ತಿಳಿದುಬರುತ್ತದೆ.

ದೇವಿ ಉಪಾಸನೆ

ದೇವೀಉಪಾಸನೆಯ ಪದ್ಧತಿಯು ಕೊಪ್ಪಳ ಜಿಲ್ಲೆಯಲ್ಲಿ ರೂಢಿಯಲ್ಲಿ ಇರುವುದನ್ನು ಇಲ್ಲಿ ಲಭಿಸುವ ಶಾಸನಗಳಿಂದ ತಿಳಿಯಬಹುದಾಗಿದೆ. ಕ್ರಿ.ಶ.೧೧೭೪ರ ಯಲಬುರ್ಗಾದ ಕುಕನೂರಿನ ಶಾಸನವು ಜೇಷ್ಠಾದೇವಿಯನ್ನು ಕುರಿತಂತೆ ವಿಸ್ತಾರವಾದ ವಿವರವನ್ನು ನೀಡುತ್ತದೆ. ಕಳಚುರಿ ಸಂಕಮದೇವನು ಮಾದೆಗನೂರಿನಲ್ಲಿದ್ದಾಗ ಅವನ ಸೇನಾನಿಯಾಗಿದ್ದ ಧನ್ಯಚಮೂಪ, ಆತನ

ತಾಯಿ ಚಂಪಾಬಾಯಿ, ಅಕ್ಕ ಲಳಿಯಾದೇವಿ ಮತ್ತು ಅವನ ಐದು ಕರಣಗಳು, ಕುಕ್ಕನೂರಿಗೆ ಬಂದು ಜೇಷ್ಠಾದೇವಿಗೆ ಪೂಜೆ ಮಾಡಿ ದೇವರ ಪೂಜೋಪಕಾರ್ಯಗಳಿಗೆ ಬೆನತೂರನ್ನು ದತ್ತಿಯಾಗಿ ನೀಡಿದ ವಿವರ ಇಲ್ಲಿದೆ. ಈ ಕ್ಷೇತ್ರವು ಆ ಕಾಲಕ್ಕೆ ಒಂದು ಪ್ರಸಿದ್ಧ ಶಕ್ತಿಪೀಠವಾಗಿತ್ತೆಂಬ ಅಂಶ ಈ ಶಾಸನದಿಂದ ವ್ಯಕ್ತವಾಗುತ್ತದೆ.

ಇದು ಕಾವ್ಯಮಯವಾದ ಒಂದು ಸುಂದರ ಶಾಸನ. ಒಂದು ಪುಟ್ಟ ಚಂಪೂಕಾವ್ಯದಂತಿದೆ. ಸಮುದ್ರವರ್ಣನೆಯಿಂದ ಪ್ರಾರಂಭವಾಗಿ ಸುದೀರ್ಘವಾಗಿ ಸಾಗುವ ಈ ಶಾಸನವು ಇಲ್ಲಿಯ ದೇವದೇವಿಯರ ಬಗ್ಗೆ ವಿವರಣೆ ನೀಡುತ್ತದೆ.

ಶಿವಲಿಂಗಂಗಳು ಸ್ವಯಂಭೂಪ್ರಭುತೆಯಿನೆಸೆವೊಂಬತ್ತೆನಲ್ ಶಕ್ತಿಪೀಠಂ ।
ಭುವನಸ್ತುತ್ಯಂಗಳೊಂಬತ್ತೆನಲಿದು ಶಿವಶಕ್ತಿಸ್ಫುರತ್ಸಂಪುಟಕ್ಷೇ ॥
ತ್ರವೆನುತ್ತಂ ಸಿದ್ಧಯೋಗೇಶ್ವರ ವರಸಹಜಾಯೋಗಿನೀವ್ರಾತವತ್ಯು ।
ತ್ಸವದಿಂದಲ್ಲಿಂದವೆಂದುಂ ತೊಲಗರೆನಲದಾರ್ ಬಣ್ಣಿಸರ್ ಕುಕ್ಕನೂರಂ ॥

ಇಲ್ಲಿ ಒಂಬತ್ತು ಶಿವಲಿಂಗಗಳಿದ್ದುವಂತೆ, ಜೊತೆಗೆ ಶಕ್ತಿಪೀಠವಿತ್ತಂತೆ. ಆದಿಪೀಠದ ಅಂಬಿಕಾದೇವಿ, ಪುರಾಣೀದೇವಿ, ಚಾಮುಂಡೀದೇವಿ, ಮಹಾಮಾಯಾದೇವಿ, ತಡಾಗದಂಬಿಕಾದೇವಿ, ವಸಂತಾದೇವಿ, ಕಾಳ್ಯಂಬಾದೇವಿ ಮತ್ತು ಗುಪ್ತಚಾಮುಂಡೀದೇವಿ ಎಂಬ ಮಹಾದೇವಿಯರು ಇಲ್ಲಿಯ ಶಕ್ತಿದೇವತೆಗಳು. ಇದನ್ನು,

ಸಮಸಂದಾದಿಯ ಪೀಠದಂಬಿಕೆ ಪುರಾಣೀದೇವಿ ಚಾಮುಂಡಿದೇ ।
ವಿ ಮಹಾಮಾಯೆ ತಡಾಗದಂಬಿಕೆ ವಸಂತಾದೇವಿ ಕಾಳ್ಯಂಬೆ ವಿ ॥
ಶ್ವಮಹೀವಂದಿತೆ ಶಾಂತಿಕಾರಿ ವಿಳಸತ್ ಶ್ರೀಗುಪ್ತಚಾಮುಂಡಿಯೆಂ ।
ಬ ಮಹಾದೇವಿಯರಿರ್ಪ್ಪ ಸ್ಯೆಪಿನೊದವಿಂದಂ ಕುಕ್ಕನೂರ್ಪ್ಪಾವನಂ ॥

ಎಂಬ ಪದ್ಯದಲ್ಲಿ ವಿವರಿಸಲಾಗಿದೆ.

ಆ ದೇವಿಯರ್ಕ್ಕಳೊಳು ಮಹಿ ।
ಮೋದಯದಿಂ ಪಿರಿಯಳಾರ್ಗವೆನಿಪೊಳ್ಪಿಂ ಜ್ಯೇ ॥
ಷ್ಠಾದೇವಿಯೆನಿಸುತುಂ ಜ್ಯೇ ।
ಷ್ಠಾದೇವಿ ತದಗ್ರಹಾರದೊಳು ನೆಲೆಗೊಂಡಳು ॥

ಈ ಎಲ್ಲ ದೇವಿಯರಿಗೂ ಹಿರಿಯಳಾಗಿ ಜ್ಯೇಷ್ಠಾದೇವಿಯು ಆ ಅಗ್ರಹಾರದಲ್ಲಿ ನೆಲೆಸಿದ್ದಳಂತೆ. ಅವಳು ನೆಲೆಗೊಂಡ ದೇವಾಲಯದ ಮೂಡಲುದಿಕ್ಕಿನಲ್ಲಿ ಬ್ರಹ್ಮೇಶ್ವರ ದೇವಾಲಯವಿತ್ತಂತೆ;

ತೆಂಕಣದಿಕ್ಕಿನಲ್ಲಿ ಗಣೇಶ್ವರದೇವಾಲಯವಿತ್ತಂತೆ; ಪಡುವಲಿನಲ್ಲಿ ಮೂಲೇಶ್ವರ ದೇವಾಲಯವಿತ್ತಂತೆ; ಬಡಗಲಿನಲ್ಲಿ ಮಲ್ಲಿಕಾರ್ಜುನ ದೇವಾಲಯವಿತ್ತಂತೆ. ಇವೆಲ್ಲವೂ ಸ್ವಯಂಭೂಶಿವಲಿಂಗಗಳಿಂದ ಕೂಡಿದ ದೇವಾಲಯಗಳು.

ಸ್ಫುರದುದ್ಯನ್ನವನಾ[ಭ]ಮಂಡಲದೊಳಿರ್ಪ್ಪ ಭದ್ರಕಾಳ್ಯಾದಿ ಭಾ ।
ಸುರದೇವೀಪ್ರಳಯಾನ್ತಕಾದ್ಯಮರರೇಕಾಕಾರದಿಂ ಲಿಂಗಮಾ ॥
ಗಿರೆ ಸೋಮೇಶ್ವರವಾಸದೊಳ್ ನವಮಠಂ ಸಂಸೇವ್ಯಮೆಂದಲ್ಲಿಯಾ ।
ದರದಿಂದಂ ಪ್ರಳಯಾಂಬೆ ಭೈರವಯುತಂ ಶ್ರೀಜ್ಯೇಷ್ಠೆ ರಾರಾಜಿಪ[ಳ್] ॥

ಎನ್ನಲಾಗಿದೆ. ಇದರ ಪ್ರಕಾರ ನವಮಠದಲ್ಲಿ ಪ್ರಳಯಾಂಬೆಯಾದ ಜ್ಯೇಷ್ಠಾದೇವಿಯು ಭೈರವಯುತಳಾಗಿ ನೆಲಸಿದ್ದಳೆಂಬುದು ಸ್ಪಷ್ಟವಾಗುತ್ತದೆ.

ಒಲಿದು ಕಾಪಾಳೀಶ ಮಹಾ ।
ಪ್ರಳಯಾಂಬೆ ನಿಜೋರ್ದ್ಧಪೀಠದೊಳು ತನ್ನೆಡದೊಳು ॥
ನೆಲೆಗೊಳೆ ಕಾಳಿಕೆ ಮೊದಲೊಳು ।
ನೆಲೆಗೊಂಡಳು ಭಕ್ತಜನದಭೀಷ್ಟಮನೀಯಲ್॥

ಎಂಬ ಪದ್ಯದ ಪ್ರಕಾರ ಪ್ರಳಯಾಂಬಿಕೆಯಾದ ಈ ಜ್ಯೇಷ್ಠಾದೇವಿಯು ಭೈರವನ ಎಡಭಾಗದಲ್ಲಿ, ತೆಂಕಣದಿಕ್ಕಿಗೆ ಮುಖಮಾಡಿಕೊಂಡು ನೆಲಸಿದ್ದಾಳಂತೆ. "ಭೈರವಂ ಭೈರವನಾಗಿಳಿಯಿರ್ಕುವನ್" ಎಂದೂ, "ಆ ಕಾಳಿಕೆ ಮುಳಿದಡೆ ಕಡುಪಿಂದೆ ಕಟ್ಟುವಳು ನಾಲಗೆಯಂ" ಎಂದು ಮುಂತಾಗಿಯೂ, ಅವರ ಮಹಾಶಕ್ತಿಯನ್ನು, ಹಿರಿಮೆಯನ್ನು ಎತ್ತಿಹಿಡಿಯಲಾಗಿದೆ.

ಪ್ರಳಯಮನೆಯ್ದಿಸುತಿರ್ಪ್ಪಳು ।
ಪ್ರಳಯಾಂಬಿಕೆ ಕೆಳದರ್ು ಭೈರವಂ ಭೈರವನಾ ॥
ಗಿಳಿಯಿರ್ಕ್ಕುವನಾ ಕಾಳಿಕೆ ।
ಮುಳಿದಡೆ ಕಡುಪಿಂದೆ ಕಟ್ಟುವಳು ನಾಲಗೆಯಂ ॥
ತಾ ಭಯಮನೊದವಿಸುತ್ತಂ ।
ಸ್ತಂಭಿಸುವಳು ಗತಿಯನೇವಳೆಂದವಮತಿಯಂ ॥
ಸ್ತಂಭಿಸುವಳು ವಾಕ್ತತಿಯಂ ।
ಸ್ತಂಭಿಸುವಳು ಜ್ಯೇಷ್ಠೆಯಲ್ಲಿ ಪಗೆವೇಡಾವಗಂ ॥
ಶರಣೆಂದಂಗಭಯಪ್ರದಾನಫಳಮಂ ಕೈಗೂಡುವಳು ಸೊರ್ಕ್ಕಿಮಾ ।

ಕರಿಸುತ್ತಿರ್ಪ್ಪ ಮದಾನ್ಧನಪ್ಪ ಖಳನಾಯುರ್ದ್ದೀಪಮಮಂ ತನ್ನ ಚಾ ॥
ಮರದಿಂ ತೊಟ್ಟನೆ ನಂದೆ ಬೀಸಿ ಕಳೆವಳು ತತ್ಕಾಯಮಮಂ ತನ್ನ ಭೀ ।
ಕರಕಾಕಾನನಕಾಗಳಂತೆ ಗುಱಿಮಾಳ್ಪಳು ಜ್ಯೇಷ್ಠೆ ಸಾಮಾನ್ಯೆಯೇ ॥
ಎಱಗುವ ಬರಸಿಡಿಲಂ ನೆಱಿ ।
ದಱಿಯಟ್ಟುವಕಾಲಮೃತ್ಯುವಂ ನುಂಗುವ ಪೇ ॥
ರಱಿಕೆಯ ಪೆರ್ಮಾರಿಯನಾ ।
ರುಱಿದರ್ಬ್ಬರ್ದ್ದುಕಾಡಲಾರ್ಪ್ಪರಾ ಕಾಳಿಕೆಯಂ ॥
ಎಂದು ಮುಂತಾಗಿ ಅವಳ ಉಗ್ರಶಕ್ತಿಸ್ವರೂಪವನ್ನು ಬಣ್ಣಿಸಲಾಗಿದೆ. ಮುಂದುವರಿದು,
ಮಿಗುವಾಗುಂ ಪೋಗುಂ ನಾ ।
ಲಗೆಯಿಂ ಸಮನಿಸುಗುವಖಿಳ ಜೀವಿಗೆಯಾನಾ ॥
ಲಗೆ ತನ್ನ ವಶವೆನಲು ಜ್ಯೇ ।
ಷ್ಠೆಗೆ ಲೋಕದ ಬಾಳ್ಕೆ ಯೆಕ್ಕಲಾವಣವಲ್ತೇ ॥
ಜನದೊಳಗೆ ನಾಲಗುಳ್ಳಾ ।
ತನೆ ಬಾಳ್ಗುವೆನುತ್ತುವರ್ಪ್ಪರಾ ನಾಲಗೆ ನೆ ॥
ಟ್ಟನೆ ತನ್ನ ಬಸದೆ ವರ್ತ್ತಿಪ್ಪು ।
ದೆನಲಾರ್ಕ್ಕಳಿಕೆಯ ನೆರವಿಗೊಳ್ಳದೆ ಬಾಳ್ವರು ॥
ಒಸಯಿಸಿದಾತನ ವಸುವಂ ।
ವಸುಮತಿಯುಮನೆಂದು ಪೊದವಿಪಳು ಬೆಸಯಿಸಲಾ ॥
ವಸುವಸುಮತಿಯಸುನಿಸುಗಳ ।
ನಸಮಜಸೆ ಕಾಳಿಕಾಂಬೆ ಕುಂದಿಸುತಿರ್ಪ್ಪ[ಳ್] ॥
ಇದನೇನೆಂಬುದೊ ತನ್ನನೇಳಿಸಿ ಜಗತ್ಪ್ರಖ್ಯಾತದೆಯ್ವಂಗಳಂ ।
ಪದೆದಾರಾಧಿಸೆ ಮೆಚ್ಚಿದೆಯ್ವವೆರೆ ನೀಂ ಬೇಡಿತ್ತನಿತ್ತಪ್ಪೆನಂ ॥
ಬುದುವಾರಾಧಕನಿಷ್ಟಮಂ ಮಱಿಸಿ ತಜ್ಜಿಹ್ವಾಗ್ರದೊಳು ನಿಂದು ಬೇ ।
ಡದುದಂ ಬೇಡಿಸಿ ಕೇಡನೆಯ್ದಿಸುವಳಾರ್ಮ್ಮಿಕ್ಕಪ್ಪರಾ ಜ್ಯೇಷ್ಠೆಯಂ ॥

ಎನ್ನಲಾಗಿದೆ. ಹೀಗೆಯೇ ಅವಳ ಮಹಿಮೆಯನ್ನು ಬಹು ವಿಸ್ತಾರವಾಗಿ ವರ್ಣಿಸಲಾಗಿದೆ. ಅವಳ ಈ ಉಗ್ರಶಕ್ತಿಗೆ ವಿಪ್ರರು ಹೆದರಿ ಅವಳ ತಂಟೆಯೇ ಬೇಡವೆಂದು ದೂರವಿದ್ದರಂತೆ.

ಒಸೆದಾರಂ ಪೊರ್ದ್ದಿಯುವವ ।
ರೆಸಕಮನುಡುಗಿಸದೆ ಮಾಣಳಾ ಜ್ಯೇಷ್ಠೆಯನಾ ॥
ರ್ಬ್ಬಸಯಿಸಿ ಬಾಳ್ವವರಾಕೆಯ ।
ಗಸಣಿಯೆ ಬೇಡೆಂದು ದಿವಿಜರಳ್ಕುತ್ತಿರ್ಪ್ಪರು ॥
ಎನ್ನಲಾಗಿದೆ.
ಅದಱಿಂ ಕಾಳಿಕೆಯಂ ನೆನೆ ।
ವುದು ಬಣ್ಣಿಪುದೆರವಿಗೊಳ್ವುದಾ ಬ್ರತಮಂ ನೋಂ ॥
ಪುದು ಮಱೆಯಂ ಪುಗುವುದು ಸ ।
ಮ್ಮದವುಣ್ಮೆ ನಿಜೇಷ್ಟಸಿದ್ಧಿಯಂ ಬಯಸುವವಂ ॥

ಎಂದು ಅವಳನ್ನು ಆಶ್ರಯಿಸಿ ಬದುಕಬೇಕೆಂಬುದನ್ನು ಎತ್ತಿಹಿಡಿಯಲಾಗಿದೆ. ಮುಂದಕ್ಕೆ ಅವಳ ವಿಧ ವರ್ಣಗಳಿಗೆ ಸಂಬಂಧಿಸಿದಂತೆ ಕೆಲವು ವಿಚಾರಗಳನ್ನು ನಿರೂಪಿಸಲಾಗಿದೆ.

ಆ ಘನವರ್ಣದ ಕಾಳಿಕಾಜ್ಯೇಷ್ಠೆಯಿಂ ಕಪಾಳೀಶನಿಂ ಸ್ತಂಭನ ಕೃಷ್ಣವರ್ಣದ ಭದ್ರಕಾಳೀ ಜ್ಯೇಷ್ಠೆಯಿಂ ಪ್ರಳಯಾಂತಕನಿಂ ವಿಷಹರಣಂ ಧೂಮ್ರವರ್ಣದ ಮಹಾಕಾಳೀ ಜ್ಯೇಷ್ಠೆಯಿಂ ಮಹಾಕಾಳನಿಂ ಜ್ವರಹರಣಂ ಮಹಾಕೃಷ್ಣವರ್ಣದ ನೀಲಾಜ್ಯೇಷ್ಠೆಯಿಂ ಭದ್ರಕಾಳನಿಂ ವಿದ್ವೇಷಣಂ ಮಹಾಧೂಮ್ರವರ್ಣದ ನೀಲಪತಾಕಿನೀ ಜ್ಯೇಷ್ಠೆಯಿಂದಿಂದ್ರಭಂಜನನಿಂ ಸಂಗ್ರಹಣಂ ನೀಲವರ್ಣದ ವೃದ್ಧಕುಬ್ಜಿಜ್ಯೇಷ್ಠೆಯಿಂ ನೀಲಗ್ರೀವನಿಂ ಶಾಂತಿ ಶ್ಯಾಮವರ್ಣದ ಮಹಾಜ್ಯೇಶ್ಠೆಯಿಂ ಮಹಾಗ್ರೀವನಿಂ ವಶ್ಯಾಕರ್ಷಣ ಮಾರಣಂ ರಕ್ತವರ್ಣದ ಭಂಜನೀ ಜ್ಯೇಷ್ಠೆಯಿಂ ಸುಪೀಠನಿನುಚ್ಚಾಟನಂ ಮಹಾರಕ್ತವರ್ಣದ ಪ್ರಬಂಜಿನೀ ಜ್ಯೇಷ್ಠೆಯಿಂ ಪೀಠನಾಯಕನಿಂ ಸರ್ಬ್ಬಸಿದ್ಧಿಯಾರಾಧಕನಿಚ್ಚೆಯಿಂ ಸವನಿಸುಗುಂ" ಎನ್ನಲಾಗಿದೆ. ಇಂತಹ ಜಗದ್ವರಿಷ್ಠೆಯರ ಜ್ಯೇಷ್ಠೆಯರ ಸ್ಥಾನಾಚಾರ್ಯತ್ವವನ್ನೂ ಅಲ್ಲಿಯ ನವಲಿಂಗಮಹಿಮಾನ್ವಿತವಾದ ಸೋಮೇಶ್ವರದೇವರ ನವಮಠಾಚಾರ್ಯತ್ವವನ್ನೂ, ಸಿಂದರ ರಾಜಧಾನಿಯಾದ ಯರಂಬರವಿಯ ಮೂಲಸ್ಥಾನ ಸಿಂಗೇಶ್ವರ ರಾಚೇಶ್ವರ ಚೌಂಡೇಶ್ವರ ವಿಕ್ರಮೇಶ್ವರ ದೇವಾಯತನ ಮಠಾಚಾರ್ಯತ್ವವನ್ನೂ ಕಳೇಶ್ವರಸೈದ್ಧಾಂತಿಕರಾಜರಾಜಗುರುಗಳು ತಳೆದಿದ್ದರಂತೆ. ಇವರು ಕಾಳಾಮುಖ ಸಂಪ್ರದಾಯಕ್ಕೆ ಸೇರಿದವರು.

ಇದನ್ನೆಲ್ಲ ಗಮನಿಸಿದಾಗ ಇಲ್ಲಿ ಕಾಳಾಮುಖ ಶೈವಪಂಥವು ಎಷ್ಟು ಪ್ರಬಲವಾಗಿತ್ತು ಎಂಬುದೂ ಅದರ ಅಂಗವಾಗಿ ಶಕ್ತ್ಯೋಪಾಸನೆಯು ಎಷ್ಟು ದಟ್ಟಪ್ರಭಾವವನ್ನು ಬೀರಿತ್ತು ಎಂಬುದೂ ಮನದಟ್ಟಾಗುತ್ತದೆ.

ಕ್ರಿ.ಶ.೧೩೯೭ರ ಯಲಬುರ್ಗಾ ತಾಲ್ಲೂಕಿನ ಇದೇ ಕುಕ್ಕನೂರಿನ ಇನ್ನೊಂದು ಶಾಸನದ (ಕ.ವಿ.ಶಾ.ಸಂ.೨, ಪೂರ್ವೋಕ್ತ, ಪು. ೧೯೬) ಪ್ರಕಾರ ಕ್ರಿ.ಶ.೧೩೯೭ರ ಸುಮಾರಿಗೆ ಈ ಕುಕನೂರು ಅಗ್ರಹಾರವು ಖಿಲವಾಗಿಹೋಗಿದ್ದಂತೆ ತಿಳಿದುಬರುತ್ತದೆ. ಹನ್ನೆರಡನೆಯ ಶತಮಾನದ ವೀರಶೈವದ ಪ್ರಾಬಲ್ಯವು ಇದಕ್ಕೆ ಪ್ರಧಾನವಾದ ಕಾರಣವಾಗಿರಬಹುದು. ಹರಿಹರರಾಯನು ಕ್ರಿಯಾಶಕ್ತಿಗುರುವಿನ ನಿರೂಪದಿಂದ ಈ ಕುಕ್ಕನೂರು ಅಗ್ರಹಾರವನ್ನು ಪುನರುದ್ಧರಿಸಿ ಅಲ್ಲಿಯ ಶ್ರೀಗಂಡಿನ ಭಟ್ಟಪ್ಪಯ್ಯನಿಗೆ ಪುನರ್ ದತ್ತಿ ನೀಡಿದಂತೆ ತಿಳಿದುಬರುತ್ತದೆ. ಅದೇ ಸಂದರ್ಭದಲ್ಲಿ ಅವನು ಅಲ್ಲಿಯ ಮಹಾಮಾಯಾದೇವಿಯ ದೇವಾಲಯವೇ ಮುಂತಾದ ದೇವಾಲಯಗಳ ಜೀರ್ಣೋದ್ಧಾರಕ್ಕಾಗಿಯೂ ಪೂಜಾದಿಕಾರ್ಯಗಳಿ ಗಾಗಿಯೂ ಪರ್ವಾದಿ ಉತ್ಸವಗಳಿಗಾಗಿಯೂ ಕೊಡುಗೆ ನೀಡುತ್ತಾನೆ.

ಹೀಗೆ ಹದಿನಾಲ್ಕನೆಯ ಶತಮಾನದ ಹೊತ್ತಿಗೆ ದೇವೀ ಉಪಾಸನೆಯು ಈ ಭಾಗದಲ್ಲಿ ಪುನರುದ್ಧಾರಗೊಂಡುದಾಗಿ ತಿಳಿದುಬರುತ್ತದೆ.

ಮೈಲಾರ ಸಂಪ್ರದಾಯ

ಜನಸಾಮಾನ್ಯರ ನಂಬಿಕೆ, ಆಚರಣೆಗೆ ಅನುಸಾರವಾಗಿ ಅಭಿಜಾತ ಧರ್ಮಗಳೊಂದಿಗೆ ಕೆಲವು ದೇಸೀ ಮತಸಂಪ್ರದಾಯಗಳೂ ಸಹ ರೂಢಿಯಲ್ಲಿದ್ದವು. ಅದರಲ್ಲಿ ಮೈಲಾರ ಸಂಪ್ರದಾಯವೂ ಒಂದು. ಈ ಮೈಲಾರ ದೇವರಿಗೆ ಈ ಪ್ರದೇಶದ ರಾಜಮನೆತನಗಳು ದಾನ ನೀಡಿದ ಉದಾಹರಣೆಗಳು ಇಲ್ಲಿಯ ಶಾಸನಗಳಲ್ಲಿ ಲಭಿಸಿವೆ.

ಮಹಾರಾಷ್ಟ್ರದ 'ಖಂಡೋಬಾ' ಹೆಸರಿನ ದೇವತೆ ಹಾಗೂ ಕರ್ನಾಟಕದ 'ಮೈಲಾರ' ದೇವತೆಗಳ ಆಚರಣೆಗಳಲ್ಲಿ ಸಮಾನಾಂಶಗಳಿರುವುದು ಕಂಡುಬರುತ್ತದೆ. ಈ ಮೈಲಾರ ದೇವನ, ಭಕ್ತರನ್ನು ಗೊರವ, ಪೂಜಾರಿ ಮತ್ತು ಕುರುಬರೆಂದು ಕರೆಯುತ್ತಾರೆ. ಈ ಸಮುದಾಯದ ಮನೆದೇವರು ಮೈಲಾರ ದೇವನೇ ಆಗಿದ್ದಾನೆ.

ಕ್ರಿ.ಶ. ೮ನೆಯ ಶತಮಾನದಿಂದಲೇ ಈ ಸಂಪ್ರದಾಯ ಇಲ್ಲಿ ಬೇರೂರಿದ್ದುದಕ್ಕೆ ಆಧಾರಗಳಿವೆ ಯೆಂದೂ, "ಬೀರದೇವ ಹಾಗೂ ಖಂಡೋಬಾ' ದೇವತೆಗಳ ಪರಿಕಲ್ಪನೆಯು ಕ್ರಿ.ಶ. ೪ನೆಯ ಶತಮಾನದಿಂದಲೂ ಇದ್ದುದಾಗಿಯೂ ಡಿ.ಡಿ.ಕೋಸಂಬಿ ಯವರು ಹೇಳುತ್ತಾರೆ.

ಕ್ರಿ.ಶ.೧೧೩೭ರ ಬೀದರ ಜಿಲ್ಲೆಯ ಆಣದೂರು ಶಾಸನವು(ಕ.ವಿ.ಶಾ.ಸಂ.೮ ಪೂರ್ವೋಕ್ತ, ಪು.೮೭) ಇದು ಕಲ್ಯಾಣ ಚಾಲುಕ್ಯ ದೊರೆ ಜಗದೇಕಮಲ್ಲನು ಪಟ್ಟಬಂಧೋತ್ಸವವನ್ನು ಮಾಡಿಕೊಂಡು ಪ್ರಥಮ ವರ್ಷದಲ್ಲಿ ಶ್ರೀಮನ್ ಮಹಾಭೈರವ ಮೈಲಾರ ದೇವರ ಶ್ರೀಪಾದಗಳಿಗೆ ಪೊಡಮೊಟ್ಟು ಆ ದೇವಾಲಯಕ್ಕೆ ಕಳಸಾರೋಹಣ ಮಾಡಿಸಿದನೆಂದು ಉಲ್ಲೇಖಿಸುತ್ತದೆ.

ಇದೇ ಆಣದೂರು ಗ್ರಾಮಕ್ಕೆ ೧೦ ಕಿ.ಮೀ. ದೂರದಲ್ಲಿಯೇ ದಕ್ಷಿಣ ಕಾಶಿ ಮೈಲಾರ ದೇವಾಲಯ ಈಗಲೂ ಇದೆ. ಇಲ್ಲಿ ಪ್ರತಿ ರವಿವಾರ ದನ-ಕರುಗಳ ಕೊಡು-ಕೊಳ್ಳುವಿಕೆ ವ್ಯಾಪಾರ ನಡೆಯುತ್ತದೆ. ಪ್ರಾಚೀನ ಕಾಲದ ನೀರಿನ ಕುಂಡಗಳು ಸುಮಾರು ಏಳು ಇಲ್ಲಿವೆ. ಈ ಜಾತ್ರೆಗೆ ಮಹಾರಾಷ್ಟ್ರ, ಆಂಧ್ರಪ್ರದೇಶದ ಭಕ್ತರೂ ಬರುತ್ತಾರೆ.

ಕ್ರಿ.ಶ.೧೩೩೭ರ ಇದೇ ಜಿಲ್ಲೆಯ ಸೇಡಂ ತಾಲೂಕಿನ ಮಳಖೇಡ ಶಾಸನ೧೧೦ವು ಮಳಖೇಡದ ಶ್ರೀ ಮೈಲಾರ ದೇವರ ಮುಖಮಂಟಪ ಮತ್ತು ಕುದುರೆಯ ಮೇಲಾಯವನ್ನು ಮಹಾ ಪ್ರಧಾನ ಬಾಚಲೆ ರಾಣಿಯರು ಮಾಡಿಸಿದರೆಂದು ಉಲ್ಲೇಖಿಸಿದೆ.

ಹೀಗೆ ಅನೇಕ ಶಾಸನಗಳಲ್ಲಿ ಬರುವ ಏಕ್ಕೋಟಿ, ತಪೋಧನರು, ಗುರವರು ಮುಂತಾದ ಪದಗಳು ಇದೇ ಸಂಪ್ರದಾಯದ ಅನುಯಾಯಿಗಳ ಮೇಲೆ ಬೆಳಕು ಚಲ್ಲುತ್ತವೆ. ಹೀಗಾಗಿ ಮೈಲಾರದೇವನ ಸಂಪ್ರದಾಯವು ಹೈದ್ರಾಬಾದ ಕರ್ನಾಟಕದ ಬೀದರ, ಕಲ್ಬುರ್ಗಿ ಜಿಲ್ಲೆಗಳಲ್ಲಿ ಇತ್ತೆಂದು ಹೇಳಲು ಸಾಧ್ಯವಾಗುತ್ತದೆ.

ಪುಣ್ಯ ಸ್ಥಳಗಳು

ಭಾರತೀಯ ಸಂಪ್ರದಾಯದಂತೆ ಪ್ರಾಚೀನ ಕಾಲದಿಂದಲೂ ದೇವರ ಬಗ್ಗೆ ತೀರ್ಥಕ್ಷೇತ್ರಗಳ ಬಗ್ಗೆ, ಯಾತ್ರಾಸ್ಥಳಗಳ ಬಗ್ಗೆ ಅಪಾರವಾದ ಗೌರವ ಭಕ್ತಿಗಳಿದ್ದವೆಂಬುದು ಇಲ್ಲಿ ದೊರೆಯುವ ಶಾಸನಗಳಿಂದ ಸ್ಪಷ್ಟವಾಗಿ ತಿಳಿದುಬರುತ್ತದೆ. ಅಂತಹ ತೀರ್ಥಸ್ಥಳಗಳಿಗೆ, ಪುಣ್ಯಕ್ಷೇತ್ರಗಳಿಗೆ ಶುಭದಿನದಂದು, ಪರ್ವಕಾಲಗಳಂದು, ಹೋಗಿ ತೀರ್ಥಸ್ನಾನ ಮಾಡಿ, ಅಲ್ಲಿಯ ದೇವರ ದರ್ಶನ ಮಾಡಿ, ಅಲ್ಲಿಗೆ ದಾನದತ್ತಿಗಳನ್ನು ನೀಡಿದುದರ ಉಲ್ಲೇಖಗಳು ಇಲ್ಲಿಯ ಶಾಸನಗಳಲ್ಲಿ ಅಲ್ಲಲ್ಲಿ ಬರುತ್ತವೆ. ರಾಯಚೂರು ಜಿಲ್ಲೆಯ ಕೆಲವು ಶಾಸನಗಳಲ್ಲಿ ರಾಜರು ಉದ್ದೇಶ ಪೂರ್ವಕ ವಾಗಿಯೋ, ಆಕಸ್ಮಿಕವಾಗಿಯೋ ನದೀ ತೀರದ ಪುಣ್ಯ ಕ್ಷೇತ್ರಕ್ಕೆ ಹೋಗಿ ಅಲ್ಲಿ ದತ್ತಿ ಬಿಟ್ಟ ನಿದರ್ಶನಗಳಿವೆ.

ಕ್ರಿ.ಶ.೧೦೬೭ರ ರಾಯಚೂರು ಜಿಲ್ಲೆಯ ನವಿಲೆ ಶಾಸನವು(ಕ.ವಿ.ಶಾ.ಸಂ.೭ ಪೂರ್ವೋಕ್ತ, ಪು.೩೧೭-೩೨೧)ಕಲ್ಯಾಣಿ ಚಾಳುಕ್ಯ ಅರಸ ತ್ರೈಲೋಕ್ಯಮಲ್ಲದೇವನ ಸಾಮಂತನಾದ ಕದಂಬ ವಂಶದ ನಾಗವರ್ಮರಸನು ಕರಡಿಕಲ್ಲೂನೂರರ ಬಳಿಯ ಕೃಷ್ಣಾನದೀ ತೀರದ ಪ್ರಸಿದ್ಧ ತೀರ್ಥವಾದ ಜಡೆಯ ಶಂಕರದೇವರಿಗೆ ಅಲ್ಲಿಯ ಒಡೆಯ ಶಂಕರದೇವ ತಪೋಧನರ ಕಾಲನ್ನು ತೊಳೆದು ಸರ್ವನಮಸ್ಯವಾಗಿ ದಾನ ಬಿಟ್ಟ ವಿಷಯವನ್ನು ಉಲ್ಲೇಖಿಸುತ್ತದೆ.

ಕ್ರಿ.ಶ.೧೦೮೮ರ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಮುಕ್ಕುಂದಿ ಶಾಸನವು(ಅದೇ, ಪು.೩೨೧) ಚಾಳುಕ್ಯರ ದೊರೆ ತ್ರಿಭುವನಮಲ್ಲದೇವನು ಗೌತಮಗಂಗೆ ಗೋದಾವರಿಯ ಪುರಣಿ ಸಂಗಮದ ಕಂಠೇಶ್ವರದ ತೀರ್ಥಸ್ಥಾನದಲ್ಲಿ ಹಿರಣ್ಯಗರ್ಭಾದಿ ಮಹಾ ದಾನಗಳನ್ನು ಮಾಡಿದನೆಂದು ಉಲ್ಲೇಖಿಸುತ್ತದೆ.

ಕ್ರಿ.ಶ.೧೧೧೦೯ರ ಇದೇ ಜಿಲ್ಲೆಯ ಸಿಂಧನೂರು ತಾಲೂಕಿನ ಜಾಲಿಹಾಳು ಶಾಸನವ (ಅದೇ, ಪು.೩೧೭-೩೨೧) ಚಾಳುಕ್ಯ ದೊರೆ ತ್ರಿಭುವನ ಮಲ್ಲದೇವನ ಆಳ್ವಿಕೆ ಕಾಲದಲ್ಲಿ ಬಲ್ಲವರಸ ಎಂಬುವವನು ಉತ್ತರಾಯಣ ಸಂಕ್ರಾಂತಿ ನಿಮಿತ್ತವಾಗಿ ದಕ್ಷಿಣಗಂಗೆ ತುಂಗಾಭದ್ರಾನದೀ ತೀರದ ಪಂಪಾದೇವಿ ಸ್ಥಾನದಲ್ಲಿ ತುಳಾಪುರುಷ ದಾನವನ್ನು ಮಾಡಿದನೆಂದು ಉಲ್ಲೇಖಿಸುತ್ತದೆ.

ಇದೇ ಜಿಲ್ಲೆಯ ಮಾನ್ವಿ ತಾಲೂಕಿನ ಚೀಕಲಪರ್ವಿಯ ಶಾಸನದಲ್ಲಿ(ಅದೇ, ಪು.೩೨೨) ವಿಜಯನಗರದ ದೊರೆ ಕೃಷ್ಣದೇವರಾಯನು ರಾಯಚೂರು, ಅಲಂಪೂರು, ಮಾನವೆ, ಹಾನಗಲ್ಲು, ಮಾಗಡೆ ದುರ್ಗಗಳನ್ನು ಗೆದ್ದು, ಕೂಡಲೂರು ಸಂಗಮಕ್ಕೆ ಬಂದು, ಆ ಸಂಗಮದಲ್ಲಿ ಶ್ರಾವಣ ಶುದ್ಧ ದ್ವಾದಶೀ ಸೋಮವಾರದಂದು ಕೃಷ್ಣಾ, ಭೀಮಾ ಸಂಗಮದಲ್ಲಿ ರತ್ನಧೇನು ಮಹಾದಾನವನ್ನು ಮಾಡಿದನೆಂದೂ ಹೆಂಡತಿ ಚಿನ್ನಾದೇವಿಯು ಗೋದಾನವನ್ನು ಮಾಡಿದಳೆಂದೂ, ಮತ್ತೊಬ್ಬ ಹೆಂಡತಿ ತಿರುಮಲದೇವಿಯು ಕನಕದಾನವನ್ನು ಮಾಡಿದಳೆಂದೂ ಉಲ್ಲೇಖವಿದೆ.

ಹೀಗೆ ತೀರ್ಥಕ್ಷೇತ್ರ ದರ್ಶನ, ಅಲ್ಲಿ ದಾನಧರ್ಮಾದಿಗಳನ್ನು ಮಾಡುವುದು ಇವು ಸಾಮಾನ್ಯ ಜನರಂತೆಯೇ ರಾಜಾದಿಗಳಲ್ಲಿಯೂ ಪ್ರಚಲಿತವಿದ್ದ ಸಂಪ್ರದಾಯವಾಗಿತ್ತೆಂದೂ, ಈ ಸಂಪ್ರದಾಯವು ಪ್ರಕೃತದ ಅಧ್ಯಯನದ ಪ್ರದೇಶಗಳಲ್ಲಿಯೂ ಪ್ರಚಲಿತವಿತ್ತೆಂಬುದೂ ಇಲ್ಲಿಯ ಶಾಸನಗಳ ಆಧಾರದಿಂದ ತಿಳಿದುಬರುತ್ತದೆ.

ತೀರ್ಥಸ್ಥಳಗಳು

ಭಾರತೀಯ ಸಮಾಜದಲ್ಲಿ ಧಾರ್ಮಿಕ ಪುಣ್ಯಸ್ಥಳಗಳಿಗೆ ತೀರ್ಥಯಾತ್ರೆ ಹೋಗಿ ಬರುವ ಪರಂಪರೆ ಮೊದಲಿನಿಂದಲೂ ಇರುವುದನ್ನು ಕಾಣುತ್ತೇವೆ. ಪಾಪ ಪುಣ್ಯಗಳ ಪರಿವೆಯ ಕಾರಣದಿಂದಾಗಿ ಉಳ್ಳವರೂ ಬಡವರೂ ತಮ್ಮ ಅನುಕೂಲಕ್ಕೆ ತಕ್ಕ ತೀರ್ಥಸ್ಥಳಗಳಿಗೆ ಹೋಗಿ ತಮ್ಮ ಮಾನಸಿಕ ನೆಮ್ಮದಿಯನ್ನು ಪಡೆದುಕೊಳ್ಳುತ್ತಾರೆ. ಇಂತಹ ಕಡೆಗಳಿಗೆ ರಾಜರು ರಾಣಿಯರು, ಋಷಿಮುನಿಗಳು, ಸಾಮಾನ್ಯ ಜನರು ತೀರ್ಥಯಾತ್ರೆಗೆ ಹೋಗಿ ಪಾವನರಾದ ಭಾವನೆ ತಾಳು ತ್ತಿದ್ದುದನ್ನೂ, ಅಲ್ಲಿ ದಾನದತ್ತಿಗಳನ್ನು ನೀಡುತ್ತಿದ್ದುದನ್ನೂ ಈ ಪ್ರದೇಶದ ಶಾಸನಗಳು ತಿಳಿಸುವುದನ್ನು ಈಗಾಗಲೇ ನೋಡಲಾಗಿದೆ. ಇದರ ಜೊತೆಗೆ, ಜೈನರಲ್ಲಿ ಇನ್ನೊಂದು ಸಂಪ್ರದಾಯವಿದೆ.

ಜೈನಯತಿಗಳು, ಇಂತಹ ಕಡೆಗಳಿಗೆ ಹೋಗಿ ಕಠೋರವಾದ ವ್ರತಗಳನ್ನು ಕೈಕೊಂಡು ಅಲ್ಲಿಯೇ ಮುಡಿಪಿದುದನ್ನು, ತಮಗೆ ಅವಸಾನಕಾಲವು ಸಮೀಪಿಸಿದಾಗ ಇಂತಹ ಪವಿತ್ರ ತೀರ್ಥಸ್ಥಳಗಳಿಗೆ ಹೋಗಿ ತಮ್ಮ ಕೊನೆಯುಸಿರೆಳೆದುದನ್ನೂ ಇಲ್ಲಿಯ ಹಲವು ಶಾಸನಗಳು ದಾಖಲಿಸಿವೆ. ಕೊಪ್ಪಳ ಶಾಸನವು ಕೊಣ್ಡಕುನ್ದಾನ್ವಯದ ಏಕಚಟ್ಟುಗದ ಭಟಾರರ ಶಿಷ್ಯ ಸರ್ವನಂದಿ ಭಟಾರರು ಕೊಪ್ಪಳದಲ್ಲಿ ನೆಲೆಸಿ ಊರಿಗೂ, ತೀರ್ಥಕ್ಕೂ ಉಪಕಾರಿಗಳಾಗಿ ಕೆಲವು ಕಾಲ ತಪಸ್ಸು ಮಾಡಿ ವ್ರತವನ್ನು ಸ್ವೀಕರಿಸಿ ಮುಡಿಪಿದ್ದನ್ನು ತಿಳಿಸುತ್ತದೆ(ಕ.ವಿ.ಶಾ.ಸಂ.೨, ಪೂರ್ವೋಕ್ತ, ಪು.೩೩೬)

ಕ್ರಿ.ಶ.೮೮೩ರ ಕೊಪ್ಪಳ ಶಾಸನವು ರಾಷ್ಟ್ರಕೂಟರ ದೊರೆ ಇಂದ್ರನ ದಂಡನಾಯಕನಾದ ಮಾಮರಸನು ತೀರ್ಥವಂದನಾರ್ಥವಾಗಿ ಸಿದ್ಧಕುಪಣಕ್ಕೆ (ಕೊಪ್ಪಳ) ಬಂದಿದ್ದುದನ್ನು ತಿಳಿಸುತ್ತದೆ(ಅದೇ, ಪು.೩೩೮).

ಕ್ರಿ.ಶ.೯೭೩ರ ಇದೇ ಜಿಲ್ಲೆಯ ಶಾಸನವೊಂದು ಗಂಗ ರಾಜ ಬೂತುಗನ ಪತ್ನಿಯು ಪರಮ ಶ್ರಾವಕಿಯಾಗಿದ್ದು ತನ್ನ ಲೌಕಿಕ ಸುಖವೆಲ್ಲವನ್ನೂ ತ್ಯಜಿಸಿ ತೀರ್ಥಸ್ಥಳವಾದ ಕುಪಣಕ್ಕೆ ಬಂದು ದೀಕ್ಷೆಯನ್ನು ಕೈಕೊಂಡಳೆಂದು ತಿಳಿಸುತ್ತದೆ(ಅದೇ, ಪು.೩೩೯).

ಕ್ರಿ.ಶ.೧೦೩೨ರ ಕೊಪ್ಪಳದ ಶಾಸನವೊಂದು(ಅದೇ, ಪು.೩೪೦)ಕೊಪ್ಪಳವನ್ನು ತೀರ್ಥಸ್ಥಳವೆಂದು ಕರೆದು ಅಲ್ಲಿ ತಳಗರ ಸಾಂತನು ಸೋಪಾನಪಂಕ್ತಿಗಳನ್ನು ಮಾಡಿಸಿದುದನ್ನು ವಿವರಿಸುತ್ತದೆ.

ಕ್ರಿ.ಶ. ೧೦ನೇ ಶತಮಾನದ ಸುಮಾರಿನ ತೆಲಂಗಾಣದ ಕುರ್ಕ್ಯಾಲ ಶಾಸನವು (ಕ.ವಿ.ಶಾ. ಸಂ.೫, ಭಾಗ ೨, ಸಂ-೫ ಪೂರ್ವೋಕ್ತ, ಪು. ೧೧೬) ಅಲ್ಲಿಯ ಬೊಮ್ಮಲ ಗುಟ್ಟವೂ ಒಂದು ಜೈನ ಧರ್ಮದ ಪವಿತ್ರ ತೀರ್ಥ ಸ್ಥಳವಾಗಿತ್ತೆಂದು ತಿಳಿಸುತ್ತದೆ ಯೆಂಬುದನ್ನು ಇಲ್ಲಿ ನೆನೆಯಬಹುದು.

ಕ್ರಿ.ಶ.೧೦೫೮ರ ರಾಯಚೂರು ಜಿಲ್ಲೆಯ ಬಲ್ಲಟಗಿ ಶಾಸನವು ಚಾಳುಕ್ಯದೊರೆ ಮೊದಲನೆ ತ್ರೈಲೋಕ್ಯಮಲ್ಲ ಸೋಮೇಶ್ವರನ ರಾಣಿಯಾದ ಚಾಲಮದೇವಿಯು ಅಕ್ಷಯ ಪರ್ವದ ನಿಮಿತ್ತವಾಗಿ ತುಂಗಭದ್ರೆಕೃಷ್ಣವೇಣಿಗಳ ಸಂಗಮದಲ್ಲಿ ತೀರ್ಥಸ್ನಾನ ಮಾಡಿ ದಾನಗಳನ್ನು ಮಾಡಿದುದಾಗಿ ಹೇಳುತ್ತದೆ.

ಕ್ರಿ.ಶ. ೧೦೬೬ರ ರಾಯಚೂರಿನ ನವಿಲೆ ಊರಿನ ಶಾಸನವು(ಕ.ವಿ.ಶಾ.ಸಂ.೭ ಪೂರ್ವೋಕ್ತ, ಪು.೩೨೧)ಕರಡಿಕಲ್ಲೂನೂರರ ಬಳಿ ಕ್ರಿಷ್ಣಾ ನದಿ ತಡಿಯ ಪ್ರಸಿದ್ಧ ತೀರ್ಥಸ್ಥಳವನ್ನೂ ಅಲ್ಲಿಯ ಜಡೆಯ ಶಂಕರದೇವರ ಸಾನ್ನಿಧ್ಯವನ್ನೂ ಹೆಸರಿಸುತ್ತದೆ.

ಕ್ರಿ.ಶ. ೧೦೮೮ರ ಇದೇ ಜಿಲ್ಲೆಯ ಮುಕ್ಕುಂದಿ ಶಾಸನವು(ಅದೇ, ಪು.೩೨೪) "ಗೌತಮಗಂಗೆ ಗೋದಾವರಿಯ ಪುರಣಿ ಸಂಗಮದ ಕಂಠೇಶ್ವರದ ತೀರ್ಥ"ವನ್ನು ಉಲ್ಲೇಖಿಸುತ್ತದೆ.

ಹೀಗೆ ರಾಜರು ರಾಣಿಯರು ಮಾಂಡಳಿಕರು, ಅಧಿಕಾರಿಗಳು ಮತ್ತು ಸಾಮಂತರು ತಮಗೆ ಬಂದ ವಿಪತ್ತಗಳು ದೂರವಾಗಲೆಂದೋ, ತಾವು ಮಾಡಿದ ಪಾಪವು ದೂರವಾಗಲೆಂದೋ, ತಮಗೆ ಒಳ್ಳೆಯದಾಗಲೆಂದೋ ಯಾವುದೋ ಒಂದು ಸದುದ್ದೇಶ ಇಟ್ಟುಕೊಂಡು ತೀರ್ಥಸ್ಥಳಗಳಿಗೆ ಹೋಗಿ ತಮ್ಮ ಯೋಗ್ಯತೆಗೆ ತಕ್ಕಂತೆ ದಾನದತ್ತಿಗಳನ್ನು ನೀಡುತ್ತಿದ್ದರೆಂದು ಈ ಮೇಲಿನ ಶಾಸನಗಳಿಂದ ತಿಳಿದುಬರುತ್ತದೆ.

ಅಂದು ಕೊಪ್ಪಳವು ಜೈನಧರ್ಮೀಯರಿಗೆ ಅತೀವ ಪುಣ್ಯಸ್ಥಳವೂ ತೀರ್ಥ ಕ್ಷೇತ್ರವೂ ಆಗಿತ್ತು. ಅದನ್ನು ಜೈನಕಾಶಿಯೆಂದು ಕರೆಯಲಾಗುತ್ತಿತ್ತು. ಗಂಗವಂಶದ ರಾಣಿವಾಸದ ಅನೇಕ ಜನ ಈ ಪವಿತ್ರ ಕೊಪ್ಪಳದಲ್ಲಿ ಮುಡುಪಿದ್ದಾರೆ. ಹೀಗಾಗಿ ಈ ಪ್ರದೇಶಕ್ಕೆ ರಾಜಮಾನ್ಯತೆ ಲಭಿಸಿತ್ತು. ಜನರಿಗೆ ಮುಕ್ತಿಲಭಿಸುವ ಸ್ಥಳವೆನಿಸಿ ಇದು ಅಷ್ಟೊಂದು ಪ್ರಸಿದ್ಧಿಗೆ ಬಂದುದ್ದನ್ನು ಕಾಣಬಹುದು. ಇಲ್ಲಿ ಜೈನಧರ್ಮದ ಬೇರೆ ಬೇರೆ ಗಣದ ಗಚ್ಛದ ಮುನಿಗಳು ಬಂದು ವ್ರತ ಕೈಗೊಂಡ ಕಾರಣ ಇದು ಆದಿತೀರ್ಥವೇಂದೇ ಖ್ಯಾತಿ ಪಡೆಯಿತು. 'ದಾನಚಿಂತಾಮಣಿ' ಅತ್ತಿಮಬ್ಬೆಯ ಗುಣಗಾನ ಮಾಡುವಾಗ "ಬಿಳಿಯರಳೆಯಂತೆ, ಗಂಗಾಜಳದಂತೆ, ನೆಗಳ್ದ **ಕೊಪಣಾಚಲದಂತೆ'** ಎನ್ನುವಲ್ಲಿ, ಕೊಪ್ಪಳದ ಪಾವಿತ್ರ್ಯತೆ ಘನತೆ ಅರಿವಾಗುತ್ತದೆ.

ಅಂದು ಕೃಷ್ಣವೇಣಿ, ತುಂಗಭದ್ರೆ, ಕುರ್ಕ್ಯಾಲದ ವೃಷಭಗಿರಿ, ಅಲಂಪುರ, ಗೌತಮಗಂಗೆ, ಗೋದಾವರಿ, ಭೀಮರಥಿ ಇತ್ಯಾದಿ ಸ್ಥಳಗಳು ನದಿಗಳು ತೀರ್ಥಕ್ಷೇತ್ರಗಳು ಹೀಗೆಯೇ ತುಂಬ ಪ್ರಸಿದ್ಧವಾಗಿದ್ದವೆಂಬುದು ಈವರೆಗಿನ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಒಟ್ಟಾರೆ ಪ್ರಕೃತದ ಅಧ್ಯಯನಕ್ಕೆ ಸಂಬಂಧಿಸಿದ ಪ್ರದೇಶವು ಹಲವು ಪುಣ್ಯಕ್ಷೇತ್ರಗಳಿಂದ ಕೂಡಿತ್ತೆಂಬುದು ಸ್ಪಷ್ಟವಾಗುತ್ತದೆ.

ಹೀಗೆ ಈ ಪ್ರದೇಶಗಳಲ್ಲಿ ಬೌದ್ಧ, ಜೈನ, ವೈದಿಕ, ಶೈವರು, ವೀರಶೈವ ಧರ್ಮಗಳು ಇದ್ದವು. ಮತ್ತು ಹಲವಾರು ತೀರ್ಥಕ್ಷೇತ್ರ ಮತ್ತು ಪುಣ್ಯ ಸ್ಥಳಗಳಿರುವುದನ್ನು ಇವಕ್ಕೆ ಇಲ್ಲಿಯ ದೊರೆಯಗಳು ಉದಾರವಾಗಿ ದತ್ತಿ ಬಿಟ್ಟು ಅವುಗಳನ್ನು ಪೋಷಿಸಿಕೊಂಡು ಬಂದರೆಂದು ತಿಳಿದುಬರುತ್ತದೆ.

ಅಧ್ಯಾಯ ಏಳು

ಆರ್ಥಿಕ ಅಧ್ಯಯನ

ಅಧ್ಯಾಯ ಏಳು

ಆರ್ಥಿಕ ಅಧ್ಯಯನ

ಯಾವುದೇ ಒಂದು ದೇಶವು ಪ್ರಬಲವಾಗಿ ಅಭಿವೃದ್ಧಿ ಹೊಂದಬೇಕಾದರೆ ಆರ್ಥಿಕ ಸಬಲತೆ, ಸದೃಢತೆ ಅಲೆ ಮುಖ್ಯವಾಗುತ್ತದೆ. ನಾಡಿನ ಯಾವುದೇ ಕ್ಷೇತ್ರದ ಅಭಿವೃದ್ಧಿಗೊಳಿಸಬೇಕಾದರೆ ಅಲ್ಲಿ ಆರ್ಥಿಕ ನೆರವು ಅತ್ಯವಶ್ಯಕವಾಗಿದೆ. ಇಂತಹ ಆರ್ಥಿಕ ವ್ಯವಸ್ಥೆಯನ್ನು ಹೆಚ್ಚಿಸುವ ಮೂಲ ಆಕರಗಳೆಂದರೆ ಫಲವತ್ತಾದ ಭೂಮಿ. ಈ ಭೂಮಿಯನ್ನು ಕೃಷಿಕರು ಉಳುಮೆ ಮಾಡಿ ತಮಗೆ ಬೇಕಾದ ಆಹಾರ ಧಾನ್ಯಗಳನ್ನು ಬೆಳೆಸಿಕೊಳ್ಳುತ್ತಾನೆ. ಅದರ ಜೊತೆ ಜೊತೆಗೆ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಾನೆ. ಇಂತಹ ವಾಣಿಜ್ಯ ಬೆಳೆಗಳನ್ನು ಮಾರಾಟ ಮಾಡುವುದಕ್ಕೆ ವ್ಯಾಪಾರಿಗಳು ಇರುತ್ತಾರೆ ಮತ್ತು ಇವರೇ ತಮ್ಮ ಒಗ್ಗಟ್ಟನ್ನು ಪ್ರದರ್ಶಿಸುವುದಕ್ಕಗಿ ಅವರದೇ ಆದ ಸಂಘ–ಸಂಸ್ಥೆಗಳನ್ನು ಕಟ್ಟಿಕೊಳ್ಳುತ್ತಾರೆ. ಆರ್ಥಿಕವಾಗಿ ಬಲಿಷ್ಠವಾಗಬೇಕಾದರೆ ಅಲ್ಲಿಯ ಫಲವತ್ತಾದ ಭೂಮಿ ತುಂಬಾ ಮಹತ್ವದ್ದಾಗಿದೆ. ಭೂಮಿಯನ್ನು ಕಪ್ಪು ಭೂಮಿ, ಕೆಂಪು ಭೂಮಿ, ಮರಂಡಿ ಭೂಮಿ(ಮರಳು) ಮತ್ತು ಕೃಷಿಗೆ ಯೋಗ್ಯವಲ್ಲದ ಬಂಜರು ಭೂಮಿ, ನೀರಾವರಿ ಭೂಮಿ ಇತ್ಯಾದಿಯಾಗಿ ಭೂಮಿಯನ್ನು ಪ್ರಭೇದವಾಗಿಸಬಹುದು. ಒಂದು ಪ್ರಾಂತ್ಯದಲ್ಲಿ ಈ ಮೇಲಿನ ಸ್ವರೂಪದ ಭೂ ಪ್ರದೇಶ ಇರಲಿಕ್ಕೆ ಸಾಧ್ಯವಿದೆ.

ಆರ್ಥಿಕವಾಗಿ ಸ್ವಾಲಂಬನೆಯಾಗಬೇಕಾದರೆ ಕೃಷಿಕರಿಗೆ ಸಕಾಲಕ್ಕೆ ನೀರಿನ ಅವಶ್ಯಕತೆ ಇರುತ್ತದೆ. ಅದಕ್ಕಾಗಿ ಹಿಂದಿನ ರಾಜರುಗಳು ಕೆರೆ–ಕೊಳ್ಳ, ಬಾವಿ, ಹಳ್ಳ, ಸರೋವರ ನಿರ್ಮಿಸುತ್ತಿದ್ದರು. ಇದರಿಂದ ಕೃಷಿಕ ಜನಕ್ಕೆ ಬೇಕಾಗುವ ನೀರಿನ ಸರಬರಾಜು ಮಾಡುತ್ತಿದ್ದರು. ಇದರಿಂದ ರಾಜನಿಗೆ ಕೃಷಿಯಿಂದ ರಾಜ್ಯದ ಬೊಕ್ಕಸಕ್ಕೆ ಕರದ ರೂಪದಲ್ಲಿ ಆದಾಯ ಬರುತ್ತಿತ್ತು. ಇಂತಹ ಆದಾಯದಿಂದ ರಾಜ–ಮಾಂಡಳಿಕರು ರಾಜ್ಯದ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದರು. ಆ ನಾಡಿನ ದೊರೆಗಳಿಗೆ ಅಲ್ಲಿನ ಕೃಷಿಕರು, ವ್ಯಾಪಾರಿಗಳು, ಕಾರ್ಮಿಕರು ಕರ ನೀಡುವುದರ ಮೂಲಕ

ಆರ್ಥಿಕವಾಗಿ ಶಕ್ತಿ ಬಲಪಡಿಸುತ್ತಿದ್ದರು ಎಂಬ ವಿಷಯವನ್ನು ಅನೇಕ ಪ್ರದೇಶದಲ್ಲಿ ಶಾಸನಗಳು ಉಲ್ಲೇಖಿಸುತ್ತವೆ.

ವಿವಿಧ ಮೂಲಗಳಿಂದ ರಾಜ್ಯ ಬೊಕ್ಕಸಕ್ಕೆ ಹರಿದು ಬಂದ ಹಣವನ್ನು ರಾಜನು/ ಮಾಂಡಳಿಕರು, ಅದನ್ನು ಆ ಪ್ರದೇಶದ ಅಭಿವೃದ್ಧಿ ಕಾರ್ಯಗಳಾದ ರಸ್ತೆ ನಿರ್ಮಾಣ, ಕೆರೆಗಳನ್ನು ಕಟ್ಟಿಸುವುದು, ಬಾವಿಗಳನ್ನು ತೋಡಿಸುವುದು, ಕಾಲುವೆಗಳ ನಿರ್ಮಾಣ, ದೇವಾಲಯ, ಬಸದಿಗಳು, ವಿಹಾರಗಳು, ಪ್ರವಾಸಿ ಮಂದಿರಗಳನ್ನು ನಿರ್ಮಿಸುತ್ತಿದ್ದರು. "ಮನು ತನ್ನ ಸ್ಮೃತಿಯಲ್ಲಿ ಕೃಷಿಕರನ್ನು ಹೀಗೆ ಹೇಳುತ್ತಾನೆ. ರೈತನಾದವನು ಸಮಯಕ್ಕೆ ಅನುಗುಣವಾಗಿ ಬಿತ್ತನೆ ಮಾಡದೇ ಹೋದರೆ ಮತ್ತು ಪಶುಪಕ್ಷಿಗಳು ಬೆಳೆಗಳನ್ನು ತಿಂದು ಹಾಳು ಮಾಡಿದರೆ ರೈತನಿಗೆ ದಂಡ ವಿಧಿಸಬೇಕೆಂದು ಹೇಳಿದ್ದಾನೆ. ಕೌಟಿಲ್ಯನು ತನ್ನ ಕೃತಿಯಲ್ಲಿ ಯಾವನು ಕೃಷಿ, ಬೇಸಾಯವನ್ನು ಮಾಡುವುದಿಲ್ಲವೋ ಅವನಿಂದ ಭೂಮಿಯನ್ನು ಕಿತ್ತುಕೊಂಡು ಬೇರೆಯವರಿಗೆ ನೀಡಬೇಕು ಮತ್ತು ರೈತರಿಗೆ ಅಂದರೆ ಸರಿಯಾಗಿ ಕೃಷಿ ಮಾಡುವ ರೈತರಿಗೆ ಯಾವುದೇ ರೀತಿಯ ತೊಂದರೆ ನೀಡಬಾರದು ಎಂದು ಹೇಳಿದ್ದಾನೆ.

ಒಂದು ನಾಡಿನ ಜನತೆ ತಮ್ಮ ಜೀವನ ನಿರ್ವಹಣೆ ಮತ್ತು ಆರ್ಥಿಕ ಭದ್ರತೆಗೆ ಅಲ್ಲಿನ ನೈಸರ್ಗಿಕ ಸಂಪತ್ತಾದ ಭೂಮಿಯನ್ನಾಶ್ರಯಿಸುವುದು ಕಂಡುಬರುತ್ತದೆ. ಆಧುನಿಕ ಅರ್ಥ ಶಾಸ್ತ್ರದನ್ವಯ ಪ್ರಕೃತಿದತ್ತವಾದ ಎಲ್ಲ ಕೊಡುಗೆಗಳು ಅಂದರೆ ಮಣ್ಣು, ನೀರು, ಖನಿಜ, ಅರಣ್ಯ ಸಂಪತ್ತುಗಳು, ಭೂಮಿಯಲ್ಲಿ ಸಮಾವೇಶವಾಗುತ್ತದೆ. ಹೀಗಾಗಿ ಭೂಮಿ ಅತ್ಯಂತ ಮಹತ್ವದ ನಿಸರ್ಗ ಸಂಪನ್ಮೂಲವೆಂದು ಹೇಳಬಹುದು(ಡಾ.ಎಸ್.ಕೆ.ಕೊಪ್ಪ, ತರ್ದವಾಡಿನಾಡು, ಪು.೨೦೨). ವ್ಯವಸಾಯಕ್ಕಾಗಿ ಬಳಸುವ ಭೂಮಿಯು ಪ್ರಾಕೃತಿಕವಾಗಿ ಅನೇಕ ತರಹದ್ದಾಗಿರುತ್ತದೆ. ಅದರಲ್ಲಿಯೂ ಶಾಸನಗಳಲ್ಲಿ ಉಲ್ಲೇಖಗೊಂಡಂತೆ ಸ್ಥಳೀಯ ಹೆಸರುಗಳು ಕಂಡುಬರುತ್ತವೆ. ಕರಿಯನೆಲ ಕೆಮ್ಮರಡಿ, ಮಸಂಬು ಬೆಂಚೆ ಬೆಣ್ಣೆಯ ದಂಡೆ ಸಿಡಿಲಹರಿ, ಕಲ್ಲಗುತ್ತಿ, ಅರಣಿ, ಸೌಳ, ಒಣಬೇಸಾಯ, ಖುಷ್ಕಿ ಬೆಳೆಯ ಭೂಮಿಯನ್ನು ಹೊಲ ಮತ್ತು ಕೆಯ್ ಎಂಬ ಪದಗಳು ಶಾಸನಗಳಲ್ಲಿ ಕಂಡುಬರುತ್ತವೆ.

ಭೂಮಿಯನ್ನು ಮತ್ತರು ಸ್ವರೂಪದಲ್ಲಿ ಅಳತೆ ಮಾಡಲಾಗುತ್ತಿತ್ತು. ತಮ್ಮ ಹೊಲಗದ್ದೆಗಳಿಗೆ ವಿಶಿಷ್ಟ ಹೆಸರುಗಳಿಂದ ಗುರುತಿಸಲಾಗುತ್ತಿತ್ತು. ಅವುಗಳಲ್ಲಿ ಪ್ರಾಕೃತಿಕ ಹೊಲಗದ್ದೆಗಳು, ಒಂಟೆಯ ಹೊಲ, ಹುಣಸೆ ಬೆಂಚೆ, ಬೆಳ್ಳುಂಬಟ್ಟೆಯ ಹೊಲ, ಕುರುಬರ ಹೊಲ, ಅಗಸರ ರೊಂಡಾರ, ಕಂಚುಗಾರ, ಗೊಂಡಾರ, ದೇವರಗದ್ದೆ, ಈಸಪೇಶ್ವರ ದೇವರ ಹೊಲ, ಇತ್ಯಾದಿಯಾಗಿ ಕರೆಯುತ್ತಿದ್ದನ್ನು ಶಾಸನಗಳು ಉಲ್ಲೇಖಿಸುತ್ತವೆ. ಕುಕ್ಕನೂರಿನ ಶಾಸನವು ಆ ಹೊಲದ ಫಲವತ್ತತೆ ಮತ್ತು ಅದು

ನೀಡುವ ಇಳುವರಿ ಮೇಲೆ ಆ ಹೊಲಕ್ಕೆ ಕರೆಯಲಾಗುತ್ತದೆ. ಮತ್ತು ಆ ಹೊಲ ಬಿತ್ತುವುದಕ್ಕೆ ಬೇಕಾಗುವ ಬೀಜದ ಲೆಕ್ಕದ ಮೇಲೆಯೂ ಆ ಹೊಲವನ್ನು ಹೆಸರಿಸಿದ್ದು ಕಂಡುಬರುತ್ತದೆ. ನಾನೂರು ಖಂಡುಗದ ಬೀಜದ ಹೊಲ, ಮೂಗಂಡುಗದ ಮಸುಂಬು ಖಂಡುಗದ ಗಡ್ಡೆ, ಇತ್ಯಾದಿಯಾಗಿ ಹೆಸರಿಸಿದೆ.

ಆರ್ಥಿಕ ಸ್ಥಿತಿಗತಿಯನ್ನು ಅಧ್ಯಯನ ಮಾಡುವುದರಿಂದ ಅಂದಿನ ಕಾಲದ ಜನಜೀವನ ಅನೇಕ ಅಂಶಗಳು ಬೆಳಕಿಗೆ ಬರುತ್ತವೆ. ವಿಶೇಷವಾಗಿ ಅವುಗಳಲ್ಲಿ ಆದಾಯದ ಸಂಪನ್ಮೂಲಗಳಾದ ಒಕ್ಕಲುತನ, ಭೂಮಿಯ ಸ್ವರೂಪ, ನೀರಾವರಿ ಸೌಲಭ್ಯ, ಯಾವ ಬೆಳೆಗಳು ಬೆಳೆಯುತ್ತಿದ್ದರು, ವ್ಯಾಪಾರ, ವ್ಯಾಪಾರ ಕೇಂದ್ರಗಳು, ಆಮದು ರಫ್ತುಗಳ ವಿಚಾರ, ಸಾರಿಗೆ ವ್ಯವಸ್ಥೆ, ಕರ ವಸೂಲಿ, ಅಳತೆ ಮಾಪನಗಳು, ಅರಣ್ಯ ಸಂಪತ್ತು, ಅಲ್ಲಿ ಸಿಗುವ ಧನವಂತರಿಗಳು ಇತ್ಯಾದಿ ಅಂಶಗಳು ಬೆಳಕಿಗೆ ಬರುತ್ತವೆ.

ಕೃಷಿ

ದೇಶದ ಆರ್ಥಿಕ ಬೆನ್ನೆಲುಬು ಕೃಷಿ. ಮಧ್ಯಯುಗದಲ್ಲಿಯೂ ಕೃಷಿಗೆ ಹೆಚ್ಚಿನ ಗೌರವ ಮತ್ತು ಆದ್ಯತೆ ನೀಡುತ್ತಿದ್ದರೆಂದು ಆಯಾ ಕಾಲದಲ್ಲಿ ರಾಜರು, ರಾಣಿಯರು, ಮಂತ್ರಿಗಳು, ಸಾಮಂತರು, ದಂಡಾಧಿಕಾರಿಗಳು, ಭೂದಾನ ಮಾಡುವುದನ್ನು ತಿಳಿಸುತ್ತವೆ. ಹಾಗಾಗಿ ಭೂದಾನ ಮಾಡುವವನು, ಕೃಷಿ ಅವಲಂಬಿತನು ಮತ್ತು ಪಡೆಯುವವನಿಗೆ ಅಧಿಕ ಆದಾಯದ ಮೂಲವಾಗಿತ್ತು. ಅದಕ್ಕಾಗಿಯೇ, ಪ್ರಶಸ್ತಿ ರಊಪದಲ್ಲಿ ದಾನ-ದತ್ತಿ ರೂಪದಲ್ಲಿ ವ್ಯಕ್ತಿಗಳಿಗೆ, ಸಂಘ ಸಂಸ್ಥೆ, ದೇವಾಲಯ, ಮಠ ಮಾನ್ಯಗಳಿಗೆ ಭೂದಾನ ಉದಾರವಾಗಿ ನೀಡುವುದನ್ನು ಶಾಸನಗಳು ಉಲ್ಲೇಖಿಸುತ್ತವೆ. ಭೂಮಿ ಆದಾಯದ ಮೂಲ ಸಂಪತ್ತು ಆಗಿತ್ತು. ಕೃಷಿಯಿಂದಲೇ ರಾಜ್ಯಬೊಕ್ಕಸಕ್ಕೆ ಹೆಚ್ಚು ಆದಾಯ ಬರುತ್ತಿತ್ತು ಎಂದು ಶಾಸನಗಳಿಂದ ತಿಳಿದುಬರುತ್ತದೆ.

ಕ್ರಿ.ಶ.೯೫೫ರ ತೇಲಂಗಾಣದ ಕರೀಮನಗರ ಜಿಲ್ಲೆಯ ಜಮ್ಮಿಕುಂಟ ಶಾಸನವು ಚಾಲುಕ್ಯ ದೊರೆ ಅಹವಮಲ್ಲನು ಆಳುತ್ತಿರುವಾಗ ಈತನ ಪ್ರಧಾನರಾದ ಮೆಗಡೆಯಗಾವುಂಡ ಮತ್ತು ನಾಗಯ ಗಾವುಂಡ ಇವರಿರ್ವರು ಸೇರಿ ಅಲ್ಲಿಯೇ ಕಟ್ಟಿಸಿದ ತ್ರೈಲೇಶ್ವರ ದೇವರಿಗಾಗಿ ಮತ್ತು ಆದಿತ್ಯದೇವರಿಗಾಗಿ ತಮ್ಮ ಸ್ವಾಮ್ಯದ ಭೂಮಿಯನ್ನು ಎರಡು ಖಂಡುಗದ ನೀರ್ನೆಲ ಮತ್ತು ಮತ್ತರು ವೆಳು ಭೂಮಿಯನ್ನು ದತ್ತಿಯಾಗಿ ಬಿಟ್ಟಿದ್ದನು. ಮತ್ತು ರಾಜಭೂಮಿಯ ಮಧ್ಯದಿಂ ೧೨೦ ಮತ್ತರು ಭೂಮಿಯನ್ನು ಮತ್ತು ಎರಡು ರಾಟಣಗಳನ್ನು ನೀಡಿದನೆಂದು ಉಲ್ಲೇಖಿಸಿದೆ(ಕ.ವಿ. ಶಾ.ಸಂ.೫, ಭಾಗ-೨, ಪು.೩೫).

ಕ್ರಿ.ಶ.೧೦೩೩ರ ವೇಮುಲವಾಡ ಶಾಸನವು ಚಾಲುಕ್ಯದೊರೆ ತ್ರಿಭುವನಮಲ್ಲನು ಕಲ್ಯಾಣದಿಂದ ರಾಜ್ಯಭಾರ ಮಾಡುವಾಗ ಚಬ್ಬಿ ೨೧೦೦೦ದ ದೊರೆ ರಾಜಾದಿತ್ಯನು ರಾಜಧಾನಿ ಲೆಂಬುಳವಾಡೆಯಲ್ಲಿ ಶ್ರೀರಾಜಾದಿತ್ಯಶ್ವರ ದೇವರನ್ನು ಪ್ರತಿಷ್ಠಾಪಿಸಿ, ಅದರ ಜೊತೆ ನಿರ್ವಹಣೆಗಾಗಿ ತನ್ನದೇಯಿಂದ ಪರಮೇಶ್ವರ ದತ್ತಿಯಾಗಿ ಪಡೆದು ದೇವರ ಅಂಗ-ರಂಗಭೋಗಕ್ಕಾಗಿ ದೇಗುಲದ ಖಂಡಸ್ಫುತ ಜೀರ್ಣೋದ್ಧಾರಕ್ಕಾಗಿ, ಅಲ್ಲಿಯ ತಪೋಧನರ ಮತ್ತು ಅಲ್ಲಿ ಅಧ್ಯಯನ ಮಾಡುವ ವಿದ್ಯಾರ್ಥಿಗಳ ಆಹಾರಕ್ಕಾಗಿ ಮತ್ತು ವಿದ್ಯಾರ್ಥಿಗಳಿಗೆ ಬೋಧಿಸುವ ಬೋಧಕರ ಜೀವನೋಪಾಯಕ್ಕಾಗಿ ವೇಣ್ನೆಸಾಲೆ ೭೦ರ ಬಳಿ ಲೆಂಬುಳವಾಡಿಯ ತಳವೃತ್ತಿಯಾಗಿ ಭೂದಾನ ನೀಡಿದನೆಂದು ತಿಳಿಸುತ್ತದೆ(ಅದೇ, ಪು.೪೧).

ಕ್ರಿ.ಶ.೧೦೮೮ರ ಕೊಪ್ಪಳದ ಹುಲಿಗಿ ಶಾಸನವು ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನನ್ನು ಕಲ್ಯಾಣ ನಾಡಿನಿಂದ ರಾಜ್ಯಭಾರ ಮಾಡುತ್ತಿರುವಾಗ ನಾರಾಯಣಭಟ್ಟ ಉಪಾಧ್ಯಯರ ಮಗ ಚಾವೇದಿಭಟ್ಟನು ಹುಲಿಗೆಯನ್ನು ತ್ರೈಲೋಕ್ಯಮಲ್ಲನಿಂದ ಪಡೆದು ತುಂಗಭದ್ರ ನದಿಯಿಂದ ಸೀಳುನಾಲೆಯನ್ನು ತಂದನು. ಆತನ ಮಗನಾದ ಸೋಮನಾಥನು ಸೋಮನಾಥ ದೇವಾಲಯವನ್ನು ಮಾಡಿಸಿ, ಅಲ್ಲಿಯ ಮಹಾಜನರನ್ನು ಒಳಗೊಂಡು ೨೦೦ ಕಮ್ಮ ನಾಲ್ಕು ಮತ್ತರುಭೂಮಿ ಹೂದೋಟ ಬಿಟ್ಟನೆಮದು ತಿಳಿಸುತ್ತದೆ. ಮತ್ತು ಅಲ್ಲಿರುವ ವೇದ ಪಠಿಸುವ ಮತ್ತು ತ್ರಿಸಂಧಿಯಾಗಿ ಪೂಜೆಗೈಯು ಆಚಾರ್ಯರಿಗೆ ವೃತ್ತಿಗಾಗಿ ಆರು ಗದ್ಯಾಣ ಭೂಮಿ, ಅಲ್ಲಿಯ ದೇವರ ಪರಿಚಾರಿಕರಿಗಾಗಿ ಇರ್ವರಿಗೆ ವರ್ಷಕ್ಕೆ ಜೀವಿತಕಾಲದವರೆಗೆ ಆರು ಗದ್ಯಾಣ, ಅಲ್ಲಿಯ ಪುರಾಣ ಹೇಳುವ ಭಟ್ಟರಿಗಾಗಿ ವೃತ್ತಿ ವರ್ಷಕ್ಕೆ ನಾಲ್ಕು ಗದ್ಯಾಣ ದೇವರ ನೈವೇದ್ಯಕ್ಕೆ ಇತ್ಯಾದಿ ಭೂದಾನ ನೀಡಿದನೆಂದು ತಿಳಿದುಬರುತ್ತದೆ(ಕ.ವಿ..ಶಾ.ಸಂ.೨, ಪು.೧೪೮-೧೪೯).

ಕ್ರಿ.ಶ.೧೦೮೫ ಶಾಸನವು ಕಲ್ಯಾಣ ಚಾಲುಕ್ಯದೊರೆ ತ್ರಿಭುವನಮಲ್ಲನ ಮಾಂಡಳಿಕನಾದ ನಾಗದೇವನು ಸಾಲಿಗುಂದೆಯಲ್ಲಿ ಬಾವಿ, ಕೆರೆ, ಪೊಕ್ಕರಣೆ ಮಾಡಿಸಿದನೆಂದು ತಿಳಿಸುತ್ತದೆ. ಹೀಗಾಗಿ ನಾಗದೇವನು ಅಲ್ಲಿಯ ಕೃಷಿ ಅಭಿವೃದ್ಧಿಗಾಗಿ ಬಾವಿ, ಕೆರೆ, ಜಾನುವಾರುಗಳ ನೀರಿಗಾಗಿ ಹೊಕ್ಕರಣೆ ನಿರ್ಮಿಸಿದನೆಂದು ಹೇಳಬಹುದು(ಕ.ವಿ.ಶಾ.ಸಂ.೭, ಪು.೩೫೨).

ಕ್ರಿ.ಶ.ಸು.೧೨ನೆ ಶತಮಾನದ ಯಡ್ರಾಮಿ ಶಾಸನವು ಕಲ್ಯಾಣ ಚಾಲುಕ್ಯ ದೊರೆ ತ್ರೈಲೋಕ್ಯಮಲ್ಲನ್ನು ಕಲ್ಯಾಣದಿಂದ ಆಳ್ವಿಕೆ ನಡೆಸುವಾಗ ಆತನ ಮಹಾಸಾಮಂತ ಏಚರಸನು ಅಲ್ಲಿಯ ದೇವರ ರಂಗಭೋಗಕ್ಕಾಗಿ ಮತ್ತು ವಿದ್ಯಾಸತ್ರಕ್ಕಾಗಿ ಉಭಯಪುರಿಗಳಿಗಾಗಿ ತಪೋಧನರಿಗಾಗಿ ಎರಡು ನೂರು ಮತ್ತರು ಎರೆಭೂಮಿಯನ್ನು ಧಾರಾಪೂರ್ವಕವಾಗಿ ಬಿಟ್ಟನೆಂದು ತಿಳಿಸುತ್ತದೆ.

ಹೀಗಾಗಿ ಭೂಮಿಯು ಆದಾಯದ ಮೂಲ ಆಗಿರುವುದರಿಂದಲೇ ಎಲ್ಲ ಸಾಮಾಜಿಕ ಕಾರ್ಯಗಳ ನಿರ್ವಹಣೆಗಾಗಿ ಅಂದಿನ ಆಳಸರಸು ಭೂಮಿಯನ್ನು ನೀಡಿ, ಅದರಿಂದ ಬರುವ ಆದಾಯದಲ್ಲಿ ಅಲ್ಲಿಯ ಎಲ್ಲ ಸಾಮಾಜಿಕ ಪದ ಕಾರ್ಯಗಳನ್ನು ನಡೆಸಿಕೊಂಡು ಹೋಗುತ್ತಿದ್ದರೆಂದು ಶಾಸನಗಳು ತಿಳಿಸುತ್ತದೆ.

ಕ್ರಿ.ಶ.೧೧೧೭ರ ತೆಲಂಗಾಣದ ವರಂಗಲ್‌ನ ಹನುಕೊಂಡ ಶಾಸನವು ಚಾಲುಕ್ಯ ದೊರೆ ತ್ರಿಭುವನಮಲ್ಲ ಹಾಗೂ ಆನ್ಮಕುಂಡದ ಪುರವರಾಧೀಶ್ವರ ಕಾಕತೀಯ ಬೇತರಸನನ್ನು ಹೆಸರಿಸುತ್ತದೆ. ಈ ಬೇತರಸನ ಮಂತ್ರಿಯ ಹೆಂಡತಿ ಮೈಲಮಳು ಅಲ್ಲಿಯ ಬೆಟ್ಟದ ಮೇಲೆ ಕದಲಲಾಯಿ ಬಸದಿಯನ್ನು ನಿರ್ಮಿಸಿದಳು. ತನಗೆ ಅಭ್ಯುದಯವಾಗಲೆಂದು ಮತ್ತು ನಿತ್ಯಪೂಜೆ ಕಾರ್ಯಕ್ಕಾಗಿ ದೀಪ ಧೂಪಕ್ಕಾಗಿ ಧಾರಾಪೂರ್ವಕವಾಗಿ ಕೆರೆಯ ಪಕ್ಕದ ಎರಿಯ ಎರಡು ಮತ್ತರು ಮತ್ತು ಹಾಸರೆಗಲ್ಲುಗಳ ನಡುವಣ ಇರುವ ನಾಲ್ಕು ಮತ್ತರು ಕರಬು ಭೂಮಿಯನ್ನು ದಾನ ನೀಡಿದಳೆಂದು ತಿಳಿದುಬರುತ್ತದೆ. ಇಲ್ಲಿ ಭೂಮಿಯು ಕರಿ ಮತ್ತು ಕರಬು(ಬಂಜರು) ಭೂಮಿ ಇತ್ತೆಂದು ತಿಳಿಯುತ್ತದೆ. ಮತ್ತು ಇದೇ ಶಾಸನವು ಉಗ್ರವಾಡಿಯ ಮಹಾಮಂಡಳೇಶ್ವರನಾದ ಮೇಳರಸನು ತನ್ನಾಳ್ವಿಕೆಯ ಊರಿಗೆಲ್ಲ ಕೂಚಿಕೆರೆಯ ಕೆಳಗೆ ಕಾಲುವೆ ಮಾಡಿಸಿ, ಗದ್ದೆಗಳಿಗೆ ನೀರು ಸರಬರಾಜು ಮಾಡಿಸಿದನೆಂದು ತಿಳಿಯುತ್ತದೆ(ಕ.ವಿ.ಶಾ.ಸಂ.೫, ಭಾಗ ೨, ಪು.೧೦೬).

ಇದೇ ಊರಿನಲ್ಲಿ ಕಾಕತೀಯ ಬೇತರಸನ ಮಹಾಮಂಡಳೇಶ್ವರನು ತನ್ನ ತಂದೆ ಪೊಳಲರಸನ ಶ್ರೇಯಸ್ಸಿಗಾಗಿ, ಶುದ್ಧ ಬೃಹಸ್ಪತಿವಾರದಂದು ವರುಣದೇವರನ್ನು ಪ್ರತಿಷ್ಠಾಪಿಸಿ, ಅದರ ಪೂಜೆ, ದೀಪ ನಿರ್ವಹಣೆಗಾಗಿ, ಅಲ್ಲಿಯ ಕೇಸರಿ ಸಮುದ್ರ ಮತ್ತು ಸೆಟ್ಟಿ ಕೆರೆಯು ದಾನವಾಗಿ ಬಿಡುತ್ತಾನೆ. ಈ ಶಾಸನದಿಂದ ತಿಳಿದುಬರುವ ಅಂಶಗಳೆಂದರೆ, ಕೆರೆನೀರು ಮತ್ತು ಕೆಸರಿ ಸಮುದ್ರದಿಂದ ಕೃಷಿಕರು ರಾಜನಿಗೆ ಕರ ನೀಡಿ ನೀರನ್ನು ಬಳಸಿಕೊಳ್ಳುತ್ತಿರುವುದರಿಂದ ಅದರಿಂದ ಬರುವ ಆದಾಯ ವರುಣದೇವರ ಸೇವೆಗೆಂದು ದತ್ತಿಯಾಗಿ ಬಿಟ್ಟನೆಂದು ತಿಳಿಸುತ್ತದೆ. ಅಂದರೆ ನೀರಾವರಿಯ ಭೂಮಿಗೆ ನೀರು ಕರ ನೀಡಿ ನೀರನ್ನು ಬಳಸಿಕೊಳ್ಳಬೇಕಾಗಿತ್ತು ಎಂದು ಊಹಿಸಬಹುದು.

ಹೀಗೆ ಈ ಪ್ರದೇಶಗಳ ಭೂಮಿಯನ್ನು ಒಣ ಬೇಸಾಯವನ್ನು ಖುಷ್ಕಿ ಮತ್ತು ಬೆಳೆಯ ಭೂಮಿಯನ್ನು ಹೊಲ ಮತ್ತು ಕೆಯ್ ಎಂಬ ಪದಗಳನ್ನು ಸಮನಾರ್ಥದಲ್ಲಿ ಈ ಭಾಗದ ಶಾಶನಗಳನ್ನು ಸೂಚಿಸುತ್ತವೆ ಅಲ್ಲದೆ ಶಾಸನಗಳಲ್ಲಿ ನೀರಾವರಿ ಆಶ್ರಿತ ಭೂಮಿಯನ್ನು ಗದ್ದೆ ಮತ್ತು ತೋಟವೆಂದು ವಿಂಗಡಿಸಲಾಗಿದೆ. ಅಲಂದೆ ಶಾಸನವು ಮಾವಿನ ಮರದ ಬೇಸಾಯವನನು ಸೂಚಿಸುತ್ತದೆ. ಅಳೆಯಲಾದ ಭೂಮಿಯ ಪ್ರಮಾಣವನ್ನು ತಮ್ಮ ಮತ್ತರುಗಳಲ್ಲಿ ಗುರುತಿಸಲಾಗಿತ್ತು.

ತಮ್ಮ ಹೊಲ ಗದ್ದೆಗಲಿಗೆ ವಿಶಿಷ್ಟ ಹೆಸರುಗಳಿಂದ ಅಂದರೆ ಆ ಹೊಲದಲ್ಲಿ ಬೆಳೆಸುವ ಆಹಾರ ಧಾನ್ಯದ ಮತ್ತು ಅಲ್ಲಿನ ಭೌಗೋಳಿಕ ವೈಲಕ್ಷಣಗಳ ಆಧಾರದ ಮೇಲೆ ಹೊಲಗಳನ್ನು ಹೆಸರಿಸಲಾಗುತ್ತಿತ್ತು. ಆ ಭಾಗಕ್ಕೆ ಅದೇ ಹೆಸರಿಂದಲೇ ಮುಂದೆ ಕರೆಯುವ ವಾಡಿಕೆಯಾಯಿತು.

ವ್ಯಾಪಾರ

ರಾಜ್ಯ ಬೊಕ್ಕಸಕ್ಕೆ ಕೃಷಿ ಮೊದಲನೆಯ ವರಮಾನ ಆದರೆ ಅಲ್ಲಿರುವ ಅನೇಕ ವ್ಯಾಪಾರ/ವರ್ತಕರು, ಮಾಡುವ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಕೊಂಡೊಯ್ಯುವ ವಿವಿಧ ವಸ್ತುಗಳು, ಆಹಾರ ಧಾನ್ಯಗಳು, ಖನಿಜ ವಸ್ತುಗಳು ಇತ್ಯಾದಿಗಳ ವಹಿವಾಟುಗಳಿಂದ ರಾಜಬೊಕ್ಕಸಕ್ಕೆ ಕರ ರೂಪದಲ್ಲಿ ಆದಾಯ ಬರುತ್ತಿತ್ತು. ಈ ಪ್ರದೇಶಗಳ ಶಾಸನಗಳಲ್ಲಿ ಪ್ರಮುಖವಾಗಿ ಇವರು ಶ್ರೇಣಿ, ಚೇಣಿ, ಖೇಣಿ, ಗನ್ನಿಗ ಮುಂತಾದ ವರ್ಗಗಳ ಹೆಸರುಗಳನ್ನು ಶಾಸನಗಳು ಉಲ್ಲೇಖಿಸಿವೆ.

"ಚತುರ್ವಿಧ ಪುರುಷಾರ್ಥಗಳಲ್ಲಿ ಅರ್ಥಕ್ಕೆ ಎರಡನೆ ಸ್ಥಾನವಿದ್ದರೂ ಸಮಾಜದಲ್ಲಿ ಅದಕ್ಕೆ ಮೊದಲನೆಯ ಸ್ಥಾನವೇ ಸಲ್ಲುತ್ತದೆ. ಅರ್ಥದ ಮೇಲ್ವಿಚಾರಣೆ ರಾಜನದಾದರೂ ಅರ್ಥ ಮೂಲವಾದ ವಾಣಿಜ್ಯ ವ್ಯಾಪಾರಿಗಳ ಕೈಯಲ್ಲಿರುತ್ತಿತ್ತು." ಇಲ್ಲಿ ಅಯ್ಯೊವೊಳೆಯ ಪುರವಾರಾಧೀಶ್ವರರು, ನಖರರು, ಉಭಯ ನಾನಾದೇಶಿಗಳು, ಮುಂಮರಿದಂಡರು, ಬಲ್ಲುಂಕೆ ದಂಡಹಸ್ತರು, ಹನ್ನವಣೆಗರು, ಎಂದುನಾಡ, ಪದಿನರುವರು, ಗವರಿಗಳು, ಗವತ್ರಿಗಾತ್ರಿಗರು, ಬೀರರು, ಬೀರವಣೆಗರು, ಸೆಟ್ಟಿಯರು, ಸೆಟ್ಟಿಗುತ್ತರು, ಗಲುಡುಗಳು, ಗಲುಡಸ್ವಾಮಿಗಳು ಉಪ್ಪಿನ ಗಲುಡುಗಳು, ಮುವತ್ತಾರುಬೀಡು ಇತ್ಯಾದಿ ವರ್ತಕ ಪ್ರಕಾರದವರು"ಇದ್ದರೆಂದು ತಿಳಿಯುತ್ತದೆ(ಹನುಮಾಕ್ಷಿ ಗೋಗಿ, ಸುರಪುರ ತಾಲೂಕಿನ ಶಾಸನಗಳು, ಪು.L)

ಕ್ರಿ.ಶ.೧೧೪೪ರ ಕಲ್ಬುರ್ಗಿ ಜಿಲ್ಲೆಯ ಹಗರಟಗಿ ಶಾಸನವು ಐದುನೂರು ಜನ ಮಹಾರಾಜರು ಮತ್ತು ಅಯ್ಯಾವೊಳೆಯ ಐನುರ್ವರ ಪ್ರಶಸ್ತಿಯನ್ನು ವ್ಯಾಪಾರಿಗಳು ಅನೇಕ ವಸ್ತುಗಳನ್ನು ತರುವ ಮತ್ತು ಮಾರುವ ಬಗ್ಗೆ ಈ ಶಾಸನವು ಸುದೀರ್ಘವಾಗಿ ಉಲ್ಲೇಖಿಸಿದೆ. "ಭುವನ ವಿಖ್ಯಾತ ಪಂಚಸತ ವೀರಸಾಸನಲಬ್ಧ ಚಾರುಚರಣ ನಯವಿನಯ ವಿಜ್ಞಾನವಿವ ಭಣಂಜಧರ್ಮ್ಮ ಪ್ರತಿಪಾಳನರುಂ ವಿಶುದ್ಧ ಗುಡ್ಡಧ್ವಜ ಲಿಂಗಿತ ಲಕ್ಷ್ಮೀವಕ್ಷಸ್ಥಳ ಭುವನ ಪರಾಕ್ರಮೋನ್ನತರುಂ ವಾಸುದೇವ ಖಂಡಳಿ ಮೂಳಭದ್ರ ವಂಶೋದ್ಭವರುಂ ದ್ವಾತ್ರಿಂಸತು ವೇಳಾಉರಮುಂ ಅಷ್ಟಾರಸ ಪಟ್ಟಣಮುಂ ಚೌಸಷ್ಟಿ ಯೋಗಪೀಠಮುಂ ಅರುವತ್ತನಾಲ್ಕು ಪೂಜಾಸ್ಥಾನಮುಂ ಗಂಗವಂಗ, ಕಳಿಂಗ, ಕಾಂಬೋಜ, ಕೊಂಗು, ಕೊಂಕಣ, ಸೌರಾಷ್ಟ್ರ, ವರಾಳ, ಮಘದ, ಮಾಳವ, ಲಾಳ, ಪಾರ್ಯ್ಯತ, ತುರಸ್ಕ(ಇಂದಿನ ತುರ್ಕಿಸ್ಥಾನ) ಕಾಶ್ಮೀರ, ಚೇರ, ಚೋಳ, ಪಾಂಡ್ಯ, ಆಂಧ್ರ,

ಕರ್ನ್ನಾಟ ಪೂರ್ಬ್ಬೋರ್ ಪಶ್ಚಿಮ ಉತ್ತರ ದಕ್ಷಿಣೋನ್ನತ ನಾನಾದೇಷಾಂತರ ಎಂಟುನಾದ ಪದಿನರುವರುಂ ಗವರಿಗಳುಮ, ಗವರಿ, ಗಾತ್ರಿಗರುಂ, ಬೀರರುಂ, ಬೀರವಣಿಗರುಂ, ಸೆಟ್ಟಿಯರುಂ, ಸೆಟ್ಟಿ ಉತ್ತರುಂ, ಗೌಡಗಳುಂ, ಗೌಉಡಸ್ವಾಮಿಗಳುಂ, ಭಲ್ಲುಂಕೆದಂಡ ಹಸ್ತರುಂಮಾಚಾರ ಕಲಿಗಳುಂ ಕಲಹ ಸಂಪೂರ್ಣ್ನರುಂ, ಏಕೈಕವೀರರು ಅಸಹಾಯಸೌರ್ಯ್ಯರುಂ ಸಮಯ ಸಮುದ್ಧರುಂ, ಅಯ್ಯಾವೊಳೆಯ ಪುರವರಾಧೀಶ್ವರ ಪ್ರತಾಪವೆಂತೆದಡೆ ಸಮುದ್ರವೆ ಭೇರಿಯಾಗಿ ಭೇರಿಯೆ ಮದ್ದಳೆಯಾಗಿ ಪ್ರಿಥಿವೇ ಕಳನಾಗಿ ದಿಸಾಗಜಂಗಳೆ ಕಂಭಮಾಗಿ ಮೇರು ಪರ್ಬ್ಬತವೇ ಮೇಲೆಯಮಾಗಿ ಚಂದ್ರನೆ ಚಂದ್ರಬಲವಾಗಿ ಆದಿತ್ಯನೇ ಬೆಂಬಲವಾಗಿ ಅಷ್ಟಲೋಕಪಾಳಕರೆ ಗಳೆಯಿಕ್ಕುವರಾಗಿ ದೇವರ ದಿಬ್ಬಾಯುಧಮೆ ಆಯುಧಮಾಗಿ ನವಗ್ರಿಹಂ ಗಳೇಕಾದಶಸ್ತರಾಗೆ ತೆತ್ರಿಂಸಾದಿಗಲೆ ನೋದರ್ಕ್ಕಳಾಗಿ ಕಾದಿ ಗೆಲ್ದ ಭಗವಲೆ ದೇವಿಯ ಮಕ್ಕಳಪ್ಪ ಶ್ರೀಮದೆಂಟುನಾಡ ಪರ್ದಿರುವರ ಯಿನೂರ್ವ್ವ ಸ್ವಾಮಿಗಳುಮಪ್ಪ್" ಎಂದು ಶಾಸನ ಉಲ್ಲೇಖಿಸುತ್ತದೆ.

ಹೀಗೆ ಈ ಭಾಗದ ವ್ಯಾಪಾರವು ದೇಶ ವಿದೇಶಗಳೊಂದಿಗೆ ಸಂಬಂಧ ಹೊಂದಿತ್ತೆಂದು ತಿಳಿದುಬರುತ್ತದೆ. ಅದರಲ್ಲಿ ಕಳಿಂಗ, ಕಾಂಬೋಜ, ಕೊಂಕಣ, ಸೌರಾಷ್ಟ್ರ, ಮಗಧ, ಮಾಳವ ತುರಕಿಸ್ತಾನ, ಕಾಶ್ಮೀರ ತಮಿಳುನಾಡು, ಕೇರಳ, ಆಂಧ್ರ ಪ್ರದೇಶ ಪೂರ್ವ, ಪಶ್ಚಿಮ, ದಕ್ಷಿಣ ಉತ್ತರ ಭಾಗಗಳಲ್ಲಿ ವ್ಯಾಪಾರದ ವಹಿವಾಟು ಮಾಡುತ್ತಿದ್ದೆಂದು ಈ ಶಾಸನದಿಂದ ತಿಳಿದು ಬರುತ್ತದೆ(ಸುರ.೮೪).

ಕ್ರಿ.ಶ.೧೨ ಶತಮಾನ ಆದರೆ ಶಾಸನವು ಸಿರೆಯ ಕಾಳಿಸೆಟ್ಟಿ ಹೀಗೆ ವರ್ಣಿಸಿದೆ.

"ಎಸೆದಿರೆ ಕೀರ್ತಿವೇತ್ತ ಸಿಯಕಾಲ ನೆಗಳ್ತೆಯ
ಮಲ್ಲಿಸೆಟ್ಟಿಯಿಂ ಪೆಸರ ಗೆಗರ್ತ್ತೆಯಂ ಪಡೆದ ರೂಡಿಯ
ಸಿರೆಯ ಕಾಳಿಸೆಟ್ಟಿಯಿಂ ದಸಗುಣವಾಯ್ತು"..........
ಧರ್ಮವೆನಲಂತವರಿರ್ವ್ವರಿನೆಯ್ದೆ ಮಾಡಿದೀ ಬಸದಿಯನೆಂದು,
ನಾಲಗೆಯೊಳೇವೊಗಳ್ವಂ ಪೊಗಳ್ವಂ ಧರಿತ್ರಿಯೊಳು॥
"ಮರದುವ ಸತ್ಯವಂ ನುಡಿಯ ಬೇಡಿದ
ವಸ್ತುವನಾರ್ಗ್ಗವಿಲ್ಲೆನಲ್ಕರಿಯನಶೇಷ ಭವ್ಯಜನ ಸಂತತಿಗಳು
ಪೊಗಳ್ವಂ ಭಕ್ತಿಯಂ ಮೇರೆವ
ಜಿನೇಂದ್ರನೊಳು ಪರಹಿತಾರ್ಥ ಮೆಯೆಯ್ಯೆನಿಸಿಪ್ಪನೆಂದು
ಹೇರರಿಕೆಯ ದಾನಿಯಂ ಪೊಗಳ್ವುದೀ ಧರೆಯ
ಸೀರೆಯ ಕಾಳಿಸೆಟ್ಟಿ"

ಕಾಳಿಸೆಟ್ಟಿಯು ಒಬ್ಬ ಸೀರೆಯನ್ನು ಮಾರುವ ಒಬ್ಬ ವ್ಯಾಪಾರಿಯಾಗಿದ್ದುಕೊಂಡು, ಪರಹಿತಧನ ಶ್ರೇಷ್ಠ ಗುಣನೆಂದು ಭಾವಿಸಿ, ಅಲ್ಲಿಯ ಜೈನ ಧರ್ಮಕ್ಕೆ ದಾನ ನೀಡಿದನೆಂದು ತಿಳಿದುಬರುತ್ತದೆ.

ಅದೇ ಊರಿನ ಕ್ರಿ.ಶ.೧೧೬೫ರ ಅಡಕಿ ಶಾಸನದಲ್ಲಿ ಬಲದೇವ ಮತ್ತು ವಾಸುದೇವ ಕಂಡಳಿಕ ಮೂಲಭದ್ರ ವಂಶೋದ್ಧವರುಮಪ್ಪ ಶ್ರೀಮದಯ್ಯಾವಳೆಯಯ್ನೂರ್ವ್ವರು ಸಾಮಿಗಳು ಪ್ರಮುಖ ಮುವತ್ತಾರು ಬೀಡು ಮುಮ್ಮರಿ ದಂಡಗಳು ಭಯ ನಾನಾದೇಸಿಗಳು ಮುಖ್ಯವಾಗಿ ಶ್ರೀಮದ ಅಡಕಿಯ ತೆಂಕಣ ಕೊಪ್ಪ ಜೀನಾಲಯದ ಚೆನ್ನ ಪಾರ್ಶ್ವದೇವರಂಗಭೋಗಕ್ಕೆ, ನಿತ್ಯ ಪೂಜೆಗೆಂದು, ಬಿಟ್ಟ ಆಯಂ ಹೇರಿಂಗೆ ಭತ್ತಮಾನ ಬೆಳ್ಳಿಹಾಗ, ಸೀರೆ ಇತ್ಯಾದಿಯಾಗಿ ದಾನ ನೀಡಿದರೆಂದು ಉಲ್ಲೇಖಿಸುತ್ತದೆ.

ಕ್ರಿ.ಶ.೧೧೪೧ರ ಮಹಬೂಬನಗರ ತಾಲೂಕಿನ ಗಂಗಾಪೂರ ಶಾಸನವು ಚಾಲುಕ್ಯ ದೊರೆ ಜಗದೇಕಮಲ್ಲನು ರಾಜ್ಯಭಾರ ಮಾಡುವಾಗ ಅಲ್ಲಿಯ ಸೆಟ್ಟಿ ಸಮುದಾಯವು ಅಲ್ಲಿ ಪ್ರತಿಷ್ಠೆ ಮಾಡಿದ ಸಾಗರೇಶ್ವರ ದೇವರಿಗೆ ಶ್ರೀಕೇಶವ ದೇವರಿಗೆ ಶ್ರೀಮದಗ್ನಿಯರಸೆಟ್ಟಿಯುಂ ತೆಂಕಣಾದಿತ್ಯ ಸೋಮಿಸೆಟ್ಟಿಯು ಚಲಂದಕರಾಮ ಕೀರ್ತಿನಾರಾಯಣಸೆಟ್ಟಿ ಗೋನಿಸೆಟ್ಟಿ ಭೂತಿ ಸೆಟ್ಟಿ, ಬಾಚಿಸೆಟ್ಟಿಯು, ಬಮ್ಮಿಸೆಟ್ಟಿ ಭೋನಗಿಯ ದಾಸಿಸೆಟ್ಟಿ" ಹೀಗೆ ನಾನಾಭಾಗದ ಸೆಟ್ಟಿಕಾರರು ಸಮಸ್ತಪ್ರಜೆಗಳು ಕೂಡಿ ಮೇಲಿನ ದೇವರಿಗೆ ಒಂದು ಸಾವಿರ ಹೇರಿಂಗೆ ಗದ್ಯಾಣ ಒಂದು, ಕೊಟ್ಟರೆಂದು ತಿಳಿಸುತ್ತದೆ. ಅಂದರೆ ಸೆಟ್ಟಿ ಅಂದರೆ ವರ್ತಕರು ತುಂಬಾ ಧನಿಕರಾಗಿದ್ದರು. ಅದರಿಂದಲೂ ಸಮಾಜಮುಖಿ ಕಾರ್ಯಗಳು, ಧರ್ಮಕಾರ್ಯಗಳು ನಡೆಯುತ್ತಿದ್ದವೆಂದು ಹೇಳಬಹುದು.

ಅದೇ ಊರಿನ ಇನ್ನೊಂದು ಶಾಸನವು ಅಲ್ಲಿಯ ಸಾಗರೇಶ್ವರ ದೇವರಿಗೆ ತಿರುವಿಸೆಟ್ಟಿಯ ಮಗ ಕೇಸವಸೆಟ್ಟಿಯು ಸಮಯ(ಧರ್ಮ)ಸಹಕೂಡಿ, ಅಲ್ಲಿಯ ವರ್ತಕರ ಸಂಘದ ಒಪ್ಪಿಗೆಯನ್ನು ಪಡೆದು ನೀಡಿದನೆಂದು ಉಲ್ಲೇಖಿಸಿದೆ. ಅಂದರೆ, ಈ ವ್ಯಾಪಾರಿ ವರ್ಗದವರು ಸೇರಿ ತಮ್ಮ ಒಕ್ಕಟನ್ನು ತೋರಿಸುವುದಕ್ಕಾಗಿ, ಮತ್ತು ತಮಗೆ ಇತರರಿಂದ ಯಾವುದೇ ಕಿರುಕುಳ ಆಗಬಾರದು ಎನ್ನುವ ನಿಟ್ಟಿನಲ್ಲಿ ಸಂಘಗಳನ್ನು ಕಟ್ಟಿಕೊಂಡಿದ್ದರೆಂದು ತಿಳಿದುಬರುತ್ತದೆ.

ಅದೇ ಊರಿನ ಇನ್ನೊಂದು ಶಾಸನವು ಕಲ್ಯಾಣಪುರದ ನೆಲವೀಡಿನಿಂದ ರಾಜ್ಯ ಮಾಡುತ್ತಿದ್ದ ಚಾಲುಕ್ಯ ದೊರೆ ಎರಡನೇ ಜಗದೇಕಮಲ್ಲ ಅಲ್ಲಿಯ ಶ್ರೀಪೂಜ್ಜೇಶ್ವರ ದೇವರ್ಗ್ಗೆ ದತ್ತಿ ಬಿಟ್ಟ ನಾನಾದೇಶದ ವ್ಯಾಪಾರಿಗಳ ವರ್ಣನೆ ಹೀಗಿದೆ. ಮಣಿಗಾರ ಬಮ್ಮಿಸೆಟ್ಟಿ, ಮಣ್ಣಕೆರೆಯ ಕಾಳಿಸೆಟ್ಟಿ, ಗಯ್ಯಣಸೆಟ್ಟಿ, ಮಾಲ್ಯದ ಹೊನ್ನಿಸೆಟ್ಟಿ, ಚಂದಣಸೆಟ್ಟಿ ಯೀಶ್ವರಸೆಟ್ಟಿ, ಕೊಲ್ಲಾಪುರದ ಮಾಚಿಸೆಟ್ಟಿ,

ಸೇವಣಸೆಟ್ಟಿಯರು, ಮಿರಿಂಜೆಯ ಕೊಮ್ಮಿಸೆಟ್ಟಿ, ಕೊಟ್ಟಲಿಯ ರೇವಿಸೆಟ್ಟಿ ಸಮಸ್ತ ನಾನಾ ದೇಸಿಯುವ್ವೆನೂರ್ಬ್ಬರುಂ ಮಾಡಿ ಶ್ರೀಮೊಜ್ಜೇಶ್ವರ ದೇವರಿಗೆ ದತ್ತಿ ಬಿಟ್ಟಿದ್ದನ್ನು ಈ ಶಾಸನ ಹೆಸರಿಸುತ್ತದೆ. ಕ್ರಿ.ಶ.೧೨೨೯ರ ವರ್ಧಮಾನಪುರದ ಶಾಸನವು ವರಂಗಲ್ಲಿನ ರಾಜಧಾನಿಯಿಂದ ರಾಜ್ಯಭಾರ ಮಾಡುತ್ತಿದ್ದ, ಕಾಕತೀಯ ದೊರೆ ಗಣಪತಿ ಮತ್ತು ರಾಜಧಾನಿ ವರ್ಧಮಾನಪುರದಿಂದ ಕಂದೂರು ನಾಡನ್ನು ಆಳುತ್ತಿದ್ದ; ಅರಿಗಳ ಭೈರವನೆನಿಸಿದ ಗೋನೆ ಪುಟ್ಟಿ ರೆಡ್ಡಿಯ ಮಗ ಗಣಪಯ್ಯ ಹೆಸರಿಸುತ್ತದೆ. ಇಲ್ಲಿಯ ವ್ಯಾಪಾರಿ ಸಮೂಹದ ದೇಮಿಸೆಟ್ಟಿಯನ್ನು ಶಾಸನ ಹೀಗೆ ವರ್ಣಿಸಿದೆ.

"ಸ್ವಸ್ತಿ ಸಮಸ್ತಭುವನ ವಿಖ್ಯಾತ ಪಂಚಸತ ವೀರ ಸಾಸನ ಲಬ್ಧಾನೇಕ ಗುಣಗಣಾಳಂ ಕ್ರತಿ ಸತ್ಯ ಸೌಚಾಚಾರು ಚರಿತ್ರ ನಯ ವಿನಯ ವಿಜ್ಞಾನ ವೀರಬಳಂಜ ಧರ್ಮ್ಮ ಪ್ರತಿಪಾಳಕರು ಭಗವಲೆದೇವಿಯ ಲಬ್ಧವರ ಪ್ರಸಾದರುಮಪ್ಪ..... ದೇಮಿಸೆಟ್ಟಿ." ಈತನು ಸಕಳೇಶ್ವರ, ವೀರಭದ್ರ ಸೋಮನಾಥದೇವರ ಪ್ರತಿಷ್ಠೆ ಮಾಡಿ, ದೆವರ ಅಂಗಭೋಗ ಮತ್ತು ರಂಗಭೋಗಕ್ಕಾಗಿ ದೀಪ ಧೂಪನೈವೇದ್ಯಕ್ಕಾಗಿ ಧಾರಾಪೂರ್ವಕವಾಗಿ ಸೂರಸಮುದ್ರದಿಂದ ಮೂಡಲು ಕಟ್ಟಿಸಿ ಕೊಟ್ಟಕೆರೆ ಮತ್ತು ಗಣಪತಿದೇವನಿಗೆ ಪುಣ್ಯವಾಗಲೆಂದು ಹೆಜ್ಜುಂಕ ಅಡ್ಡವಟ್ಟಿಯಂ ಮಾನ್ಯ ಮಾಡಿ ಗಾಣ ೧, ಅಂಗಡಿ ೧, ಮಗ್ಗ-೨, ತೋಟ ೧ ಹೀಗೆ ಉದಾರವಾಗಿ ದಾನಕೊಟ್ಟ ದೇಮಿಸೆಟ್ಟಿಯು ಅಂದಿನ ಸಮಾಜದಲ್ಲಿ ಆರ್ಥಿಕವಾಗಿ ವ್ಯಾಪಾರಿಗಳು ಉನ್ನತ ಸ್ಥಾನದಲ್ಲಿದ್ದನೆಂದು ತಿಳಿದುಬರುತ್ತದೆ (ಕ.ವಿ.ಶಾ.ಸಂ.೫, ಭಾಗ ೨, ಪು.೧೮೨).

ಕ್ರಿ.ಶ.೧೧೧೭ರ ಬೀದರ ಜಿಲ್ಲೆಯ ಬಸವಕಲ್ಯಾಣದ ಶಾಸನವು ಚಾಲುಕ್ಯ ಅರಸ ತ್ರಿಭುವನ ಮಲ್ಲನ್ನು ಜಯಂತಿಪುರದಿಂದ ಆಳ್ವಿಕೆ ಮಾಡುವಾಗ ಮುದ್ರಾವಣದ ವಡ್ಡವ್ಯವಹಾರಿಯ ಹಣದಿಂದ ಚಾಮಳಸೆಟ್ಟಿಯ ತಮ್ಮ ಲಖಸೆಟ್ಟಿಯು ಮಯ್ದುನ ವಾಸಪಸೆಟ್ಟಿಯು ತಮ್ಮ ಮಾಡಿಸಿದ ಗುರ್ಜ್ಜರ ಮಲಯಮತಿದೇವಿಯ ದೇಗುಲದ ಪಶ್ಚಿಮ ದಿಕ್ಕಿಗಿರುವ ನಾರಾಯಣದೇವರಿಗೆ ಪೂಜೆ, ಗದ್ದಾಕ್ಷತೆ, ನೈವಿಧ್ಯ ಇತಯಾದಿಗಳಿಗಾದ ದತ್ತಿ ಬಿಟ್ಟಿದ್ದನ್ನು ಉಲ್ಲೇಖಿಸುತ್ತಾ, ಮುಂದುವರೆದು ಮುದ್ರಾಮಾದ್ ನಗರಂಗಳು(ವ್ಯಾಪಾರಿಗಳು) ನಡೆಸುವ ತಮ್ಮ ದತ್ತಿಯಲ್ಲಿ ಉತ್ಪತ್ತಿಯಾದ ದ್ರವ್ಯವಂ ದೇವರಿಗೆ ವಿನೋದದಲು, ನಗರಂಗಳು ನಡೆಸುವವರು. ನಾರಾಯಣ ದೇವರಿಗೆ ಧರ್ಮ್ಮಕ್ಕಂ ದ್ರವ್ಯಕ್ಕೆ ನಗರಂಗಳೊಡೆಯರು, ಗೊರವರಿಗೆ ಬ್ರಾಹ್ಮಣರಿಗವಗತ್ಯ ಸಂಗತವಿಲ್ಲ......; ಮುಂದುವರೆದು ಅನೇಕ ಸೆಟ್ಟಿಗಳು ಹೆಸರು ಉಲ್ಲೇಖಿಸಿ, ಮತ್ತೆ ಶಾಸನದ ಕೊನೆಯಲ್ಲಿ ಇನ್ನು ಪಂಚನಗರಗಳ ಅರಿಯಲು ಮುದ್ರಾವಣದ ದೋಸಿಗ ನಗರವೊಡೆಯರು, ಅದರ ದತ್ತಿಯಾ ಗೊರವರಿಗಂ ಬ್ರಾಹ್ಮಣರಿಗಂ ಕಾರಣಮಲ್ಲ......; ನಗರಂಗಳುಂ ಸಮರ್ಪಿಸಿದ ಮಾಣಿಯರು ದೇವರನ್ನು

ಪೂಜಿಸುವವರು. ಈ ಉಲ್ಲೇಖಿಸಿ ಶಾಸನದನ್ವಯ ಅಂದು ವ್ಯಾಪಾರಿ ವರ್ಗದವರು ಆರ್ಥಿಕವಾಗಿ ಬಲಿಷ್ಠರಾಗಿದ್ದು; ಒಂದು ಕಡೆ ಒಡೆಯನನ್ನು ವೈಭವೀಕರಿಸುವುದಕ್ಕಾಗಿ ಮಲಯಮತಿದೇವಿ ದೇವಾಲಯಗಳನ್ನು ನಿರ್ಮಿಸುವುದು ಮತ್ತು ಅದಕ್ಕೆ ಬಿಡುವ ದತ್ತಿಗಳಿಂದ ಬರುವ ಆದಾಯ ಮತ್ತು ಇವರೆ ನೇಮಿಸಿದ ವ್ಯಕ್ತಿಗಳು ಆ ದೇವರನ್ನು ಪೂಜಿಸಬೇಕು. ಇದರ ಮೇಲೆ, ಬ್ರಾಹ್ಮಣರದಾಗಲಿ, ಗೊರವ ಸಮುದಾಯದಾಗಲಿ ಹಕ್ಕು ಇರುವುದಿಲ್ಲ ಎಂದು ಶಾಸನದಲ್ಲಿ ಒತ್ತು ಕೊಟ್ಟು ತಿಳಿಸಿವೆ.

ಕ್ರಿ.ಶ.೧೧೫೪ರ ಕೊಪ್ಪಳ ಜಿಲ್ಲೆಯ ಮುಧೋಳು ಶಾಸನವು ಅಲ್ಲಿಯ ಐನೂರು ಜನರು(ವ್ಯಾಪಾರಿಗಳು) ಗವರೇಶ್ವರ ದೇವರ ದೇವಲಯವನ್ನು ನಿರ್ಮಿಸಿದರು. ಈ ವ್ಯಾಪಾರಿ ವರ್ಗದವರನ್ನು ಶಾಸನವು ಬಹುವಾಗಿ ವರ್ಣಿಸಿದೆ.

> "ಅಯ್ಯಾವೊಳೆಯ ಪುರವರಾಧೀಶ್ವರರುಂ ಶ್ರೀಮಚ್ಚಕ್ರವರ್ತಿ ಪ್ರಸನ್ನರುಂ
> ಶರಣಾತ ವಜ್ರಪಂಜರರುಮಪ್ಪ ಶ್ರೀಮದಯ್ಯೂರ್ವ್ವರ ಪರಾಕ್ರಮಮೆನ್ತಂದಡೆ.
> ಬಲದೊಳು ಬಾಲಿಯಂ ಚಲದೊಳು ದುರ್ಯ್ಯೋಧನನಂ
> ಸತ್ಯದೊಳು ಧರ್ಮಪುತ್ರನಂ ಸಾಹಸದೊಳು ಭೀಮನಂ
> ಪರಾಕ್ರಮದೊಳು ಅರ್ಜುನನಂ ಅರಿತದೊಳು ಸಹದೇವನಂ
> ಸೌಚದೊಳು ಗಾಂಗೇಯನಂ ತೇಜದೊಲಾದಿತ್ಯನಂ
> ಭೋಗದೊಳಿಂದ್ರನಂ ತ್ಯಾಗದೊಳು ಕರ್ಣ್ನನಂ
> ಕೋಪದೊಳು ಅಗ್ನಿಯಂ ಬಲ್ಲಾಳ್ತನದೊಳು ಜವನಂ
> ಪೆಂಪಿಂದಾಕಾಶಯಂ ಬಿಣ್ಪಿಂ ಧರಣಿಯಂ
> ಗುಣ್ಪಿಂ ಮಹಾಸಮುದ್ರಮಂ"

ಹೀಗೆ ಅಲ್ಲಿಯ ವ್ಯಾಪಾರಿಗಳು ಬಲದಲ್ಲಿ ಬಲಿಯಂತೆ, ಚಲದಲ್ಲಿ ದುರ್ಯೋಧನನಂತೆ ಸತ್ಯದಲ್ಲಿ ಧರ್ಮರಾಯ, ಸಾಹಸದಲ್ಲಿ ಭೀಮ, ಪರಾಕ್ರಮದಲ್ಲಿ ಅರ್ಜುನ, ಜ್ಞಾನದಲ್ಲಿ ಸಹದೇವ, ಶಾಚದಲ್ಲಿ ಭೀಷ್ಮ, ತೇಜದಲ್ಲಿ ಆದಿತ್ಯ, ಭೋಗದಲ್ಲಿ ಇಂದ್ರ, ತ್ಯಾಗದಲ್ಲಿ ಕರ್ಣ, ಕೋಪದಲ್ಲಿ ಅಗ್ನಿ, ಗಟ್ಟಿತನದಲ್ಲಿ ಯಮ, ಪೆಂಪಿನಲ್ಲಿ ಆಕಾಶ, ಬಿಣುಪಿನಲ್ಲಿ ಭೂಮಿ, ಗುಣದಲ್ಲಿ ಸಾಗರದಂತೆ. ಹೀಗೆ ಇವರು ಪ್ರಸಿದ್ಧಿ ಪಡೆದಿದ್ದರು. ಅಲ್ಲದೆ ಅಲ್ಲಿಯ ಅಯ್ಯವೊಳೆ ಐನೂರ್ವರು ಎಂದು ನಾಡ ಹದಿನಾರು ಸಮಸ್ತ ಮುಮ್ಮರಿದಂಡಗಳು, ನಾನಾದೇಶಿಗಳು ಸೇರಿ ಅಲ್ಲಿಯ ಗವರೇಶ್ವರ ದೇವರಿಗೆ ಅಂಗರಂಗಭೋಗಕ್ಕಾಗಿ ದತ್ತಿ ಬಿಟ್ಟರೆಂದು ಹೇಳುತ್ತದೆ. ಅಲ್ಲದೆ ಇವರು ಕಲಿಗಳು ಆಗಿದ್ದರೂ ಎನ್ನುವುದಕ್ಕೆ ಒಂದು ಕಂದ ಪದ್ಯದಲ್ಲಿ ಅವರ ಶೌರ್ಯ ಗುಣಗಳನ್ನು ವಿವರಿಸಿದೆ.

"ಉರದಿದಿರಾಂತರಂಸ
ಮಕರದೊಳ್ತಿಱಿದೊಟ್ಟುವ ಬಂಧು ಭೀತಿಯಿಂ
ಮರೆವುಗೆಕಾದು ರಕ್ಷಿಸುವ ಪೂ
ಣ್ದೆರೆವರ್ತಿ ಜನಕ್ಕೆ ಲಕ್ಷ್ಮಿ ಕಣ್ದೆಱೆದವೊಲೀವ ॥೬೦॥"

ಹೀಗೆ ವ್ಯಾಪಾರಿಗಳು ಸಮಾಜದಲ್ಲಿ ಆರ್ಥಿಕವಾಗಿ ಉನ್ನತಸ್ಥಿತಿಯಲ್ಲಿದ್ದರೆಂದು, ಎಂತಲೇ ಯಾವಾಗಲೂ ಧರ್ಮಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಸಮಾಜದಲ್ಲಿ ಅವರು ತಮ್ಮದೇ ಆದ ಸಂಘಕಟ್ಟಿಕೊಂಡು ತಮ್ಮ ಸುತ್ತಮುತ್ತಲಿನ ಸಹವರ್ಗದವರು ಸೇರಿ ತಮ್ಮ ಒಗ್ಗಟ್ಟನ್ನು ಪ್ರದರ್ಶಿಸುವುದನ್ನು ಶಾಸನಗಳಲ್ಲಿ ಕಂಡುಬರುತ್ತದೆ. ಅಲ್ಲದೇ ಶಾಸನಗಳೇ ಅವರನ್ನು ನಾನಾ ರೀತಿಯಲ್ಲಿ ರಾಜನ ಹಾಗೆ ಹಾಡಿ ಹೊಗಳಿವೆ ಎಂದರೆ ಸಮಾಜದಲ್ಲಿ ಅವರಿಗೆ ಉನ್ನತ ಸ್ಥಾನವಿತ್ತೆಂದು, ಆರ್ಥಿಕವಾಗಿ ಸಬಲರಾಗಿದ್ದರೆಂದು; ರಾಜನೇ ದತ್ತಿ ಬಿಡುವ ಕಾರ್ಯ ಸ್ವತಃ ಇವರೂ ಮಾಡುತ್ತಿದ್ದರೆಂದರೆ ಇವರೂ ಆರ್ಥಿಕವಾಗಿ ಬಲಿಷ್ಟರಾಗಿದ್ದರೆಂದು ಇಲ್ಲಿ ಅವರು ಮಾಡಿರುವ ಧರ್ಮಕಾರ್ಯಗಳಿಂದ ತಿಳಿದುಬರುತ್ತದೆ.

ತೆರಿಗೆಗಳು

ರಾಜ್ಯದ ಸಪ್ತಾಂಗಗಳಲ್ಲಿ ಕೋಶಾಂಗವೂ ಒಂದು. ಯಾವುದೇ ರಾಜ್ಯದ ಪ್ರಗತಿಯತ್ತ ಸಾಗಬೇಕಾದರೆ ಅಲ್ಲಿಯ ಆರ್ಥಿಕ ಸ್ಥಿತಿ ಚೆನ್ನಾಗಿರಬೇಕು. ಇಲ್ಲವಾದರೆ ದಿವಾಳಿ ಏಳುವ ಸಂಭವ ಹೆಚ್ಚು. ಪ್ರಾಚೀನ ಮತ್ತು ಮಧ್ಯಯುಗಕಾಲೀನ ಕರ್ನಾಟಕ ಪ್ರದೇಶವು ಅನೇಕ ರಾಜ ಮನೆತನಗಳು ಆಳ್ವಿಕೆ ನಡೆಸಿವೆ. 'ಆರ್ಥಿಕ' ಸಂಪತ್ತೇ ಎಲ್ಲದರ ಅಭ್ಯುದಯದ ಬೇರು. ಇದು ಇಲ್ಲದಿದ್ದಲ್ಲಿ ರಾಜ್ಯದ ಯಾವುದೇ ಕ್ಷೇತ್ರ ಅಭಿವೃದ್ಧಿ ಸಾಧಿಸಲು ಸಾಧ್ಯವಿಲ್ಲ. ತೆರಿಗೆ ಮೂಲ ಭೂಮಿ. ಈ ಭೂಮಿಯಲ್ಲಿ ಬೆಳೆಯುವ, ಅದರಲ್ಲಿ ಬೆಳೆದ ಧಾನ್ಯಗಳ ಮಾರಾಟ ಮಾಡುವ, ತಯಾರಿಸುವ ವಸ್ತುಗಳ ಮೇಲೆ, ಹಾಕುವ ತೆರಿಗೆ ಮತ್ತು ಭೂಮಿಯ ಮೇಲೆ ಹಾಕುವ ತೆರಿಗೆಗಳು, ವ್ಯಾಪಾರಿಗಳ ಮಾರಾಟ ಮಾಡುವ ವಸ್ತುಗಳ ಮೇಲೆ ವಿಧಿಸುವ ತೆರಿಗೆ, ಅಪರಾಧ ಎಸಗಿದಾಗ ವಿಧಿಸುವ ತೆರಿಗೆ, ಸೂಳೆಗಾರಿಕೆ ಮೇಲೆ ವಿಧಿಸುವ ತೆರಿಗೆ, ಕೆರೆ–ಬಾವಿ, ತೋಟ, ಸಾರಿಗೆ ಮೇಲೆ ವಿಧಿಸುವ ಸುಂಕಗಳು ಹೀಗೆ ಹಲವು ಹತ್ತು ಬಗೆಯ ತೆರಿಗೆ ಪದ್ಧತಿಗಳು ಚಾಲ್ತಿಯಲ್ಲಿದ್ದವೆಂದು ಶಾಸನಗಳು ಉಲ್ಲೇಖಿಸುತ್ತವೆ. ಹೆಚ್ಚಾಗಿ ಅವರು ಬೆಳೆದ ವಸ್ತುಗಳೇ ತೆರಿಗೆ ರೂಪದಲ್ಲಿ ರಾಜ್ಯಕೋಶ ಭರಿಸಲಾಗುತ್ತಿತ್ತು. ಹಣದ ವಹಿವಾಟು ಕಡಿಮೆ ಎಂದು ಹೇಳಬಹುದು. ಯಾರಿಗೂ ಭಾರ ಆಗದ ನಿಟ್ಟಿನಲ್ಲಿ ಅವರವರ ಉತ್ಪನ್ನಗಳಿಗೆ ತಕ್ಕಂತೆ, ಅವರ ವಹಿವಾಟುಗಳಿಗೆ ಸಂಬಂಧಿಸಿದಂತೆ ತೆರಿಗೆಯನ್ನು ವಿಧಿಸಲಾಗುತ್ತಿತ್ತು ಮತ್ತು ವಿವಿಧ ವಸ್ತುಗಳನ್ನು ಒಂದು ಸ್ಥಳದಿಂದ

ಇನ್ನೊಂದು ಸ್ಥಳಕ್ಕೆ ಮಾರುವ, ಕೊಳ್ಳುವ, ವ್ಯಾಪಾರಿಗಳ ಮೇಲೆ ಆಯಾ ವಸ್ತುಗಳಿಗೆ ಅನುಗುಣವಾಗಿ ವಿಧಿಸುವ ಸುಂಕಗಳು.

"ರಾಜನ ಆದಾಯದ ಬಹುಭಾಗವು ತೆರಿಗೆಗಳಿಂದ ಬರುತ್ತಿದ್ದಿತು. ರಾಜನು ದೇಶವನ್ನು ರಕ್ಷಿಸುವುದಕ್ಕೆ ಪ್ರಜೆಗಳು ಹಿಂದಿರುಗಿ ಕೊಡುವ ಪ್ರತಿಫಲವೇ ತೆರಿಗೆಗಳೆಂದು ಗೌತಮ ಸಂಹಿತೆ, ನಾರದ ಸಂಹಿತೆ ಮುಂತಾದ ಸ್ಮೃತಿಗಳು ಭಾವಿಸುತ್ತವೆ. ಧರ್ಮದಿಂದ ರಾಜ್ಯವನ್ನಾಳುವ ರಾಜನಿಗೆ ದೇಶದಲ್ಲಿ ಬೆಳೆಯುವ ಬೆಲೆಯ ಆರನೆಯ ಒಂದು ಭಾಗವು ಸಲ್ಲಬೇಕೆಂದು ವಸಿಷ್ಠನು ಅಭಿಪ್ರಾಯಪಡುತ್ತಾನೆ. ಇದು ರಾಜನಿಗೂ ಪ್ರಜೆಗಳಿಗೂ ಮಧ್ಯೆ ಒಂದು ರೀತಿಯ ಒಪ್ಪಂದವಿದ್ದಂತೆ, ರಾಜನು ತನ್ನ ಕರ್ತವ್ಯವನ್ನು ಸರಿಯಾಗಿ ನಿರ್ವಹಿಸದಿದ್ದರೆ ಪ್ರಜೆಗಳಿಂದ ಪಡೆದ ತೆರಿಗೆಗಳನ್ನು ಹಿಂದಿರುಗಿಸಬೇಕೆಂಬ ಅಭಿಪ್ರಾಯವೂ ಇದ್ದಿತು"(ಚಿ.ಮೂ. ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಪು.೩೯೫). "ಅರ್ಥವ್ಯವಸ್ಥೆಗೆ ಭೂಮಿಯೇ ಮೂಲವಾದುದರಿಂದ ರಾಜ್ಯಾದಾಯದಲ್ಲಿ ಭೂಕಂದಾಯದ ಮೊತ್ತ ದೊಡ್ಡದಾಗಿರುತ್ತಿತ್ತು. ಕೃಷಿ ಪ್ರಧಾನವಾದ ಪ್ರದೇಶಗಳೆಲ್ಲಕ್ಕೂ ಇದು ಅನಿವಾರ್ಯವೂ ಆಗಿತ್ತು. ಕಂದಾಯ ಪದ್ಧತಿ ಪರಂಪರಾನುಗುಣವಾಗಿ ನಿರ್ಧರಿತವಾಗುತ್ತಿತ್ತು. ಶಾಸನಗಳು ಕರಿಭೂಮಿಗಾಗಿ ವಿಶೇಷವಾಗಿ ಭೂಮಾಪನಗಳಿದ್ದುದನ್ನು ಹೇಳಿದ್ದು, ಅದರಿಂದ ಮೌಲ್ಯಮಾಪನ ಮಾಡಿದ ನಂತರವೇ ಕರಾಕರಣೆ ಮಾಡಲಾಗುತ್ತಿತ್ತು. ಇದನ್ನೇ ಸೂಕ್ತ ಸುಧಾರ್ಣವ 'ಸಿದ್ಧಾಯ'ವೆಂದು ಕರೆದಿದೆ. ಮೊದಲೇ ನಿಗದಿಪಡಿಸಿದ ಈ ಆಯ ಭೂಕಂದಾಯಕಷ್ಟೇ ಸೀಮಿತವಾಗಿರದೆ, ಮನೆ, ಅಂಗಡಿಗಳ ಮೇಲೂ ಆಕರಿಸುತ್ತಿದ್ದುದಾಗಿ ತಿಳಿದುಬರುತ್ತದೆ(ಡಾ.ಚನ್ನಬಸವ ಹಿರೇಮಠ ಕುರುಗೋಡು ಸಿಂಧರು ಒಂದು ಅಧ್ಯಯನ, ಪು.೨೩೦).

ಕ್ರಿ.ಶ.೧೧೨೩ರ ಕಲ್ಬುರ್ಗಿ ಜಿಲ್ಲೆಯ ಹಗರಟಗಿ ಶಾಸನವು ಕಲ್ಯಾಣ ಚಾಲುಕ್ಯ ದೊರೆ ಆರನೇ ವಿಕ್ರಮಾದಿತ್ಯನು ಅಲ್ಲಿಯ ಪಗರಿಟಗೆಯ ನಖರೇಶ್ವರ ದೇವರಿಗೆ ಭೂದತ್ತಿ ಬಿಟ್ಟು; ಅಲ್ಲಿ ಬೆಳೆದ ಕೆಲವು ವಸ್ತುಗಳ ಮೇಲೆ ಕರ ವಿಧಿಸಿದ್ದನ್ನು ಸೂಚಿಸುತ್ತದೆ. ತೋಟದ–೧, ಮೆಳಸು–೧, ಎಲೆಗೆ–೧, ತೆಲೆಗೆ–೧೦, ಹೊಂಗೆ ಅಡಗೆ–೧, ತಳ ವೃತ್ತಿಮಾನ–೨, ಕೊಟ್ಟ ನಿವೇಶನಕ್ಕೆ–೧, ಗೊರವಿಯ ಮತ್ತರಕೆ–೧ ಎಂದು ಉಲ್ಲೇಖಿಸುತ್ತದೆ.

ಕ್ರಿ.ಶ.೧೧೫೧ರ ರಾಯಚೂರು ಜಿಲ್ಲೆಯ ಕಲ್ಲೂರಿನ ಶಾಸನವು ಅಯ್ಯನವಾಡಿಯ ನಾಡ ಹೆಗ್ಗಡೆ ದಂಡನಾಯಕ ವೆಣ್ಣಮರಸ ಮತ್ತು ಮಹಾಮಂಡಳೇಶ್ವರ ಮಾಚಿದೇವರಸರು ಅಲ್ಲಿಯ ಮಾರಟೇಶ್ವರ ದೇವರಿಗೆ ದತ್ತಿ ಬಿಟ್ಟಿದ್ದರು. ಈ ದತ್ತಿಯಿಂದ ಬರುವ ಆದಾಯ ತೆರಿಗೆಯನ್ನು ಅಲ್ಲಿಯ ಹೆಗ್ಗಡೆ ಮಲ್ಲಿದೇವರಸನು ಮತ್ತು ಕೊಪ್ಪರಸನು ಹೆಜ್ಜುಂಕ, ಬಿಲ್ಕೊಡೆ, ಪನ್ನಾಯ ವಡ್ಡರಾವುಳಂ ವಿಂತಿ ನಿಸರಲುಂ ಹುಟ್ಟುತತ್ಥನದಲ್ಲಿ ಹೊಂಗೆ, ಹಾಗವಂ ಅಲ್ಲಿಯ ದೇವರಾದ

ಮಾರಟೇಶ್ವರರಿಗೆ ಪುನಃ ದತ್ತಿ ಬಿಟ್ಟದ್ದನ್ನು ತಿಳಿಸುತ್ತದೆ. ಇಲ್ಲಿ ಬರುವ ಕರಗಳ ಪ್ರಕಾರಗಳಾದ ಹೆಜ್ಜುಂಕ, ಬಿಲ್ಕೊಡೆ, ಪನ್ನಾಯ ವಡ್ಡರಾವುಳ, ಉಲ್ಲೇಖಿಸುತ್ತದೆ(ಕ.ವಿ.ಶಾ.ಸಂ.೭, ಪು.೨೯೦)

ಕ್ರಿ.ಶ.೧೫೫೩ರ ಮಾನ್ವಿ ಶಾಸನವು ವಿಜಯನಗರ ದೊರೆ ಸದಾಶಿವರಾಯನು ಆಳುತ್ತಿರುವಾಗ ಅಲ್ಲಿಯ ರಾಯಚೂರು ಸೀಮೆಯ ಭೂಮಿಯನ್ನು ನಾವಿಂದರಿಗೆ ವಿಧಿಸಲಾಗಿತ್ತು. ಆದರೆ ಅಲ್ಲಿಯ ಮಹಾಮಂಡಳೇಶ್ವರನಾದ ರಾಮರಾಯದೇವನ್ನು ತನ್ನ ಒಡೆಯನಾದ ಸದಾಶಿವದೇವನಿಗೆ ಪುಣ್ಯವಾಗಲೆಂದು ಅಲ್ಲಿಯ ನಾವಿಂದರಾದ ತಿಂಮೋಜ, ಕೊಂಡೋಜ ಮತ್ತು ಭದ್ರೋಜರ ವಿನಂತಿಯ ಮೇರೆಗೆ ನಾವಿಂದರ ಮೇಲೆ ಹಾಕಿದ ಸುಂಕವನ್ನು ದಾನ ಮಾಡಿದನೆಂದು ತಿಳಿಸುತ್ತದೆ(ಅದೇ, ಪು.೨೩೨).

ಕ್ರಿ.ಶ.೧೦೮೭ರ ಜಲದುರ್ಗ ಶಾಸನವು ಅಲ್ಲಿಯ ಪೊನ್ನಕಣಿಯ ದಂಡನಾಯಕ ಬಿಟ್ಟರಸನ ಆದೇಶಕ್ಕನುಗುಣವಾಗಿ ಅಲ್ಲಿಯ ಬಣಂಜ ಸಮುದಾಯರೆಲ್ಲರು ಸೇರಿ ತಾವು ಮಾಡುವ ವ್ಯಾಪಾರಿಗಳ ಮೇಲೆ ಇಂತಿಷ್ಟು ತೆರಿಗೆ ರೂಪದಲ್ಲಿ ತಿಂಗಳದೆರೆಯಾಗಿ ಧಮಂ ಹೇರಿಬ, ಬಂಡಕೆ ಹೊನ್ನವ ಎಂಬಂತೆ ಅಲ್ಲಿಯ ಮಹಾಜನಗಳ ಸಮಕ್ಷಮದಲ್ಲಿ ದತ್ತಿ ಬಿಡುತ್ತಾರೆ. ಮತ್ತು ತೆಲ್ಲಿರು ಸಹ ದೇವರ ನರದಾದೀವಿಗೆಗಾಗಿ ಗಾಣದಲ್ಲಿ ಕೊಟ್ಟ ಎಣ್ಣೆಗಿದ್ದ "ಸೊಲ್ಲಗೆ" ತೆರಿಗೆ ರೂಪದಲ್ಲಿ ನೀಡಿದ್ದರೆಂದು ತಿಳಿದುಬರುತ್ತದೆ.

ಹೀಗೆ, ಅಂದಿನ ಕಾಲದಲ್ಲಿ ವ್ಯಾಪಾರಿಗಳು, ಮತ್ತು ನಾವಿಂದರು ಇನ್ನಿತರ ಆದಾಯವಿರುವ ಜನಸಮುದಾಯಗಳು ತಾವು ನೀಡಬೇಕಾದ ತಿಂಗಳ ತೆರಿಗೆಯನ್ನು ಅಲ್ಲಿಯ ದಂಡಾಧಿಕಾರಿಗಳು, ಒಡೆಯರು, ಅಲ್ಲಿಯ ದೇವಾಲಯಗಳಿಗೆ ದತ್ತಿ ನೀಡುವಂತೆ ಸೂಚಿಸುತ್ತಿದ್ದರು. ಅದಕ್ಕೆ ಅನುಗುಣವಾಗಿ ತಾವು ಕೈಗೊಳ್ಳುವ ವ್ಯವಹಾರಕ್ಕೆ ಅನುಸಾರವಾಗಿ ಈ ವ್ಯಾಪಾರಿ ಜನಗಳು ತೆರಿಗೆ ರೂಪದ ಆದಾಯವು ದತ್ತಿ ರೂಪದಲ್ಲಿ ಅಲ್ಲಿಯ ಮಹಾಜನಗಳ ಸಮ್ಮುಖದಲ್ಲಿ ನೀಡುತ್ತಿದ್ದರೆಂದು ತಿಳಿದುಬರುತ್ತದೆ. ತೆರಿಗೆ ಅನೇಕ ಪ್ರಕಾರ ಆಗಿದ್ದವು.

ಅಳತೆ-ಭೂಮಾಪನ

ಪ್ರಾಚೀನ ಕರ್ನಾಟಕದ ಪ್ರದೇಶಗಳಲ್ಲಿ ಭೂಮಿಯನ್ನು ಅಳತೆ ಮಾಡುವ ಕ್ರಮವು ಆಹಾರ ಧಾನ್ಯಗಳನ್ನು ಅಳತೆ ಮಾಡುವಾಗ ಮತ್ತು ಭೂಮಿಯನ್ನು ಬಿತ್ತುವ ಸಮದಯಲ್ಲಿ ಅದಕ್ಕೆ ಬೇಕಾಗುವ ಬೀಜ ಲೆಕ್ಕದ ಮೇಲೆ ಆ ಹೊಲಕ್ಕೆ ಖಂಡುಗ, ಇರ್ಖಂಡುಗ, ಮಣ ಎಂಬ ಹೆಸರಿನಿಂದ ಕರೆಯಲಾಗುತ್ತಿತ್ತು. ಭೂಮಿಯನ್ನು ಹೆಚ್ಚಾಗಿ ಮತ್ತರು, ಕಮ್ಮ, ವಿವಿಧ ವ್ಯಕ್ತಿ ದೇವರುಗಳ ಹೆಸರಿನ, ಕೋಲ ಹೀಗೆ ಭೂಮಿಯನ್ನು ಅಳೆಯುವ ಪದ್ಧತಿ ಇತ್ತು. ಮನೆ ಅಳೆದು

ಕೊಡುವುದಾದರೆ, ಕೈಯಿಂದ ಮೊಳ ಲೆಕ್ಕದಲ್ಲಿ ಅಳೆದುಕೊಡುತ್ತಿದ್ದರು. ಆಹಾರ ಧಾನ್ಯಗಳನ್ನು ಒಮ್ಮನ, ಕೊಳಗ, ಬಳ್ಳ, ಮಾನ, ಸೊಲ್ಲಗೆ, ಅರ್ಧಸೊಲ್ಲಗೆ ಸಟ್ಟುಗ, ದಳ, ಹಾನೆ, ತಳಿಗೆ, ಖಂಡುಗ, ಮಣ ಇತ್ಯಾದಿ ಮಾಪನಗಳನ್ನು ಬಳಸುತ್ತಿದ್ದರು.

ಸಾಮಾನ್ಯವಾಗಿ ಭೂಮಿಯನ್ನು ಅಳೆಯುವ ಪದ್ಧತಿಯ ಒಂದು ಆ ಭೂಮಿ ಬಿತ್ತಲಿಕೆ ಬೇಕಾಗುವ ಬೀಜದ ಆಧಾರದ ಮೇಲೆ ಆ ಭೂಮಿಯ ಅಳತೆ ಮಾಡಲಾಗುತ್ತಿತ್ತು. ಮತ್ತೊಂದು ಪದ್ಧತಿಯೆಂದರೆ, ಮತ್ತರು, ಕಮ್ಮ ಲೆಕ್ಕದಲ್ಲಿ ಅಳತೆ ಮಾಡಲಾಗುತ್ತಿತ್ತು. ಕಲ್ಬುರ್ಗಿಯ ಅಫಜಲಪುರ ಶಾಸನದಲ್ಲಿ ಅಲ್ಲಿಯ ರೇವಣೇಶ್ವರ ದೇವರಿಗೆ ನಗರೇಶ್ವರ ಕೋಲಲು ಬಿಟ್ಟ ಭೂಮಿ ಮತ್ತರು ನೂರು ಎಂದಿದೆ. ಆ ನುರು ಭೂಮಿಯಲ್ಲಿ ಸತ್ರಕ್ಕೆ ಮತ್ತರು ಇಪ್ಪತ್ತು, ತೋಟಕ್ಕೆ ಮತ್ತರು ಒಂದು, ದೇವಣ ಭಟ್ಟರಿಗೆ ಮತ್ತರು ಇಪ್ಪತ್ತೈದು ಎಂದು ಉಲ್ಲೇಖಿಸಿದೆ. ಅದೇ ಜಿಲ್ಲೆಯ ಗೊಬ್ಬೂರ ಶಾಸನವು ಅಲ್ಲಿಯ ಕಲಿದೇವರಿಗೆ ಮತ್ತರು–೨ ಕೊಲ ಮತ್ತರು ೫, ೧೦, ಬಿಂಗೋಳಿ, ಮಣ್ಣೂರು, ಕೆಲ್ಲೂರು ಶಾಸನದಲ್ಲಿ ರಾಜಹಸ್ತದ ಅಗಲ ೨೬ ನೀಳ ಎಂದು ಉಲ್ಲೇಖಿಸಿದೆ. ಮಾಣಿಕೇಶ್ವರ ಕೋಲು, ಹಿರಿಯ ಕೋಲು, ಕೇಶವ ದೇವರ ಕೋಲು, ಧರಿಣಿ ದೇವನ ಕೋಲು, ಆದಿತ್ಯದೇವರ ಗಡಿಂಬದ ಬೆಂಕೊಳ್ವನ ಕೋಲು, ಕುರುಕುರದಿಯ ಕೋಲು, ಹೀಗೆ ಅನೇಕ ಪ್ರಕಾರದ ಅಳತೆ ಮಾಪನಗಳು ಭೂಮಿ ಅಳತೆಯಲ್ಲಿ ಬಳಸುತ್ತಿದ್ದರೆಂದು ಹೇಳಬಹುದು(ರಾಯಚೂರು ಜಿಲ್ಲೆ) ಈ ಕೋಲುಗಳು ಎಲ್ಲ ಪ್ರದೇಶಗಳಲ್ಲಿ ಸಮನಾಗಿರಲ್ಲಿಲ್ಲ. ಆಯಾ ಪ್ರದೇಶಕ್ಕೆ ಅನುಗುಣವಾಗಿ ವೃತ್ತಿ, ದೇವರ ಹೆಸರಿನ ಮೇಲೆ ಅವು ರೂಪಿಸಲ್ಪಟ್ಟಿದ್ದವು.

ಹೀಗೆ ಆರ್ಥಿಕ ಸಂಗ್ರಹಣೆಯ ಮೂಲ ಆಕರಗಳಾಗಿ ಕೃಷಿ, ಕಂದಾಯ, ವ್ಯಾಪಾರಗಳ ಮೇಲೆ ಹಾಕುವ ತೆರಿಗೆಯಿಂದ ನಿಧಿ ಸಂಗ್ರಹಿಸಲಾಗುತ್ತಿತ್ತು. ಇದರಿಂದ ರಾಜ್ಯದ ಆಡಳಿತ ಸಾಮಾಜಿಕ, ಧಾರ್ಮಿಕ ಸುಧಾರಣೆಗಳು ಮಾಡಲಾಗುತ್ತಿತ್ತು. ಇಂತಹ ಆದಾಯದಲ್ಲಿ ಬ್ರಹ್ಮಪುರಿ ದೇವಾಲಯಗಳ ನಿರ್ಮಾಣ, ಅವುಗಳ ನಿರ್ವಹಣೆಗಾಗಿ ಉದಾರವಾಗಿ ದಾನ ದತ್ತಿಗಳನ್ನು ಅಂದಿನ ಆಳರಸರು ಮತ್ತು ಅಧೀನ ಅಧಿಕಾರಿಗಳು ದಾನ ನೀಡುತ್ತಿದ್ದರು.

ಅಧ್ಯಾಯ ಎಂಟು

ಸಾಹಿತ್ಯಿಕ ಅಧ್ಯಯನ

ಅಧ್ಯಾಯ ಎಂಟು

ಸಾಹಿತ್ಯಿಕ ಅಧ್ಯಯನ

"ಕೆಲವು ಶಾಸನ ಕರ್ತೃಗಳು ಕಾವ್ಯಗಳನ್ನೂ ಬರೆದಿರಬೇಕೆನಿಸುತ್ತದೆ; ಹಾಗಿವೆ ಕೆಲವು ಶಾಸನಗಳು. ಇಲ್ಲಿ ನಿರೂಪಿಸಬೇಕಾದುದು ಒಂದು ದಾನ, ಒಂದು ದತ್ತಿ ಇಲ್ಲವೇ ದೇವಾಲಯ ನಿರ್ಮಾಣ ಇತ್ಯಾದಿಗಳನ್ನು ಕುರಿತೇ ಆದರೂ ಅದರಲ್ಲಿಯೇ ತನ್ನ ಕಾವ್ಯಶಕ್ತಿ ವ್ಯಕ್ತವಾಗುವುದಕ್ಕೆ ಬೇಕಾದ ಹಿನ್ನೆಲೆಯನ್ನು ಹಾಕಿಕೊಳ್ಳುತ್ತಾನೆ. ಶಾಸನಕವಿ ಕೆಲವು ವೇಳೆ ಕಾವ್ಯಗಳನ್ನು ಸಮುದ್ರ ವರ್ಣನೆಯಿಂದಲೇ ಶಾಸನ ಪ್ರಾರಂಭವಾಗುತ್ತದೆ. ಅಲ್ಲಿ ಮೇರು ಪರ್ವತ, ಅದರ ದಕ್ಷಿಣಕ್ಕೆ ಕನ್ನಡ ನಾಡು ಮತ್ತು ಹೇಳಬೇಕಾದ ಊರು, ಅದನ್ನು ಆಳುತ್ತಿರುವ ರಾಜ, ಅವನ ಹಿರಿಮೆ ಮತ್ತು ಪರಾಕ್ರಮ, ಆತನ ಸಾಮಂತ ಅಥವಾ ಅಧಿಕಾರಿ ದಾನ ಕೊಡುತ್ತಿದ್ದರೆ ಅವನ ವರ್ಣನೆ, ಕಟ್ಟಿಸಿದುದು ದೇವಾಲಯವಾದರೆ ಅದರ ವರ್ಣನೆ, ಅಗ್ರಹಾರವಾದರೆ ಅದರ ಮತ್ತು ಅಲ್ಲಿರುವ ವಿದ್ವನ್ಮಣಿಗಳ ವರ್ಣನೆ–ಹೀಗೆ ಅನೇಕ ವರ್ಣನೆಗಳಿಗೆ ಅವಕಾಶವನ್ನು ಶಾಸನಗಳು ಕಲ್ಪಿಸಿಕೊಡುತ್ತವೆ. ಇಂತಹ ಕೆಲವು ವರ್ಣನೆಗಳು ಕರ್ನಾಟಕದ ಸಮೃದ್ಧಿ, ಸೌಂದರ್ಯ ಸುಸಂಸ್ಕೃತಿಗಳನ್ನು ವೀರರ ಉದಾತ್ತ ಆದರ್ಶಗಳನ್ನು ಚಿರಂತನಗೊಳಿಸವೆ. ಸಾಹಿತ್ಯ ದೃಷ್ಟಿಯಿಂದಲೂ ಬಹು ಪರಿಣಾಮಕಾರಿ ಯಾಗಿ ಮೂಡಿಬಂದಿವೆ(ಡಾ.ಎಚ್.ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ೨೦೦೧, ಪು.೨೯೨).

ಘಟನೆ ನಿರೂಪಣೆಯೇ ಶಾಸನ ಕರ್ತೃಗಳ ಪ್ರಧಾನ ಉದ್ದೇಶವಾಗಿದ್ದರೂ ಆತನು ಸ್ವಲ್ಪ ಭಾವನಾ ಪ್ರಿಯ ಮತ್ತು ಆತನ ಮನಸ್ಸು ಶಾಸ್ತ್ರ ಕೃತಿಗಳಿಗಿಂತಲೂ ಕಾವ್ಯ ಕೃತಿಗಳಿಂದ ಪ್ರಚೋದನೆಗೊಂಡರೆ ಸಹಜವಾಗಿಯೇ ಆತನು ಹೇಳುವ ಮಾತುಗಳೆಲ್ಲವೂ ಕಾವ್ಯದ ರೂಪ ಪಡೆದುಕೊಳ್ಳುತ್ತವೆ. ಒಂದೊಂದು ಸಲ ಬುದ್ದಿಗಿಂತ ಭಾವ ಮೇಲಾಗುತ್ತದೆ. ಈ ಮೇಲುಗೈ ಪಡೆದಾಗಲೆಲ್ಲ ಅದು ಎಂತಹ ಸನ್ನಿವೇಶವೇ ಆಗಿರಲಿ ಸಮಯದ ಅಭಾವ ಇದ್ದರೂ ಆತನು ನಿರೂಪಿಸುವ ವಿಷಯ ಕಾವ್ಯವಾಗಿ ಹೊರಹೊಮ್ಮುತ್ತದೆ. ಅದೇ ಬುದ್ಧಿ ಭಾವದ ಪರವಶವಾಗುವಿಕೆ.

“ಶಾಸನಗಳ ಪ್ರಾರಂಭದ ಇಷ್ಟದೇವತಾಸ್ತುತಿ, ಕೊನೆಯಲ್ಲಿನ ಫಲಶ್ರುತಿ ವಾಕ್ಯಗಳು ಸಾಮಾನ್ಯವಾಗಿ ಸಂಸ್ಕರತದಲ್ಲಿರುತ್ತವೆ. ಕೆಲವು ಸಲ ಅವು ವಿರಳವಾಗಿ ಕನ್ನಡದಲ್ಲಿಯೂ ಇವೆ. ಸಾಂಪ್ರದಾಯಿಕ ಬಿರುದಾವಳಿಗಳು ಮತ್ತು ದತ್ತಿ ವಿವರಗಳು ಹೆಚ್ಚಾಗಿ ಗದ್ಯದಲ್ಲಿರುತ್ತವೆ. ದೇಶರ್ಣನೆ, ಪುರವರ್ಣನೆ, ರಾಜ ಮತ್ತು ಆವನ ಅಧೀನರ ಕಾರ್ಯಾಧಿ ಗುಣಗಾನ, ದಾನಕೊಡುವವನ ಔದಾರ್ಯ ಮನೋಭಾವ, ಸ್ವೀಕರಿಸುವವನ ಅರ್ಹತೆ ಇತ್ಯಾದಿ ವಿಷಯ ನಿರೂಪಣೆ ವಿದ್ಯದಲ್ಲಿದ್ದು ಅಲ್ಲೆಲ್ಲ ಕವಿ ಕಲ್ಪನೆ ಗಿರಿಗೆದರಿರುತ್ತದೆ. ಶಾಸನಕವಿಗಳಿಗೆ ಹೆಚ್ಚು ಸ್ವತಂತ್ರವಿರುವುದು ಈ ಭಾಗದಲ್ಲಿಯೇ. ಕವಿ ಹೇಳಬೇಕಾದ ವ್ಯಕ್ತಿ, ರಾಜ, ಸಾಮಂತ, ಅಧಿಕಾರಿ, ಸಾಮಾನ್ಯ, ಯಾರೆ ಆಗಿರಲಿ ಆತನ ಅವನಲ್ಲಿ ಅತ್ಯುನ್ನತ್ತವಾದ ಆದರ್ಶಗಳನ್ನು ಆರೋಪಿಸುತ್ತಾನೆ. ಹೀಗಾಗಿ ಇಲ್ಲಿನ ವರ್ಣನೆಗಳು ವಾಸ್ತವಾಂಶಗಳನ್ನು ತಿಳಿಸಕೊಡದೆ ಅತಿಶಯೋಕ್ತಿ ಮತ್ತು ಉತ್ಪ್ರೇಕ್ಷೆಗಳಾಗಿ ನಿಂತು ಬಿಡುತ್ತವೆ. ಉಳಿದ ದೇಶ, ಪುರ, ದೇವಾಲಯಗಳ ವರ್ಣನೆಗಳ ಸ್ಥಿತಿಯೂ ಇದಕ್ಕೆ ಹೊರತಾಗುವುದಿಲ್ಲ(ಡಾ.ಎಸ್.ಕೆ.ಕೊಪ್ಪಾ, ತರ್ದವಾಡಿ ನಾಡು, ೧೯೯೦, ಪು.೩೨೫).

ಶಾಸನ ಕವಿ/ಲೇಖಕರು ಪ್ರಾಸಂಗಿಕವಾಗಿ ತಮ್ಮ ಭಾವನಾತ್ಮಕ ನಿರೂಪಣೆಯ ಭರಾಟೆಯಲಲಿ ಅದೆಷ್ಟೋ ಉತ್ಪ್ರೇಕ್ಷೆ ಮತ್ತು ಅತಿಶಯೋಕ್ತಿ ವಿಚಾರಗಳನ್ನು ಪ್ರಚುರಪಡಿಸುತ್ತಾರೆ. ಇದರಿಂದ ಶಾಸನಾಧ್ಯಯನಕಾರರ ಲಾಭವೇ ಹೆಚ್ಚು ನಷ್ಟವಂತು ಅಲ್ಲವೇ ಅಲ್ಲ. ಕಾರಣ ಏಕಕಾಲಕ್ಕೆ ಆ ಶಾಸನ ಹಾಕಿಸುವುದರ ಉದ್ದೇಶ ವಿಷಯದ ಜೊತೆಗೆ ಜೊತೆಗೆ ಕಾವ್ಯಾತ್ಮಕ ಗುಣವುಳ್ಳ ಅದೆಷ್ಟೂ ವಿಷಯಗಳು ಲಭಿಸುತ್ತವೆ. ಉದಾಹರಣೆಗೆ ಕಪ್ಪೆ ಅರಭಟ್ಟನ ಬಾದಾಮಿ ಶಾಸನ, ಗುಣಮಧುರ ಶಾಸನ, ಜೈನ ನಿಷಿಧಿ ಶಾಸನಗಳು ಮತ್ತು ಇಟಗಿ ಶಾಸನ ಇವು ಒಂದು ರೀತಿಯ ಪುಟ್ಟ ಕಾವ್ಯದಂತಿವೆ. ಆದರೆ ಇವು ಕಾವ್ಯ ಪ್ರಯೋಗಕ್ಕಾಗಿ ಶಿಲೆಯ ಮೇಲೆ ಬರೆದವುಗಳಲ್ಲ; ಹೇಳುವ ವಿಷಯವು ಭಾವ ಪ್ರಧಾನವಾಗಿ ಹೊರ ಹೊಮ್ಮಿದೆ.

ತೆಲಂಗಾಣ ಮತ್ತು ಹೈದ್ರಾಬಾದ್ ಕನಾಟಕ ಪ್ರದೇಶಗಳ ಕನ್ನಡ ಶಾಸನಗಳು ಅನೇಕ ಕಡೆಗಳಲ್ಲಿ ಕಾವ್ಯಗುಣವಿರುವ ಪುಟ್ಟ ಚಂಪೂ ಕಾವ್ಯದಂತಿದೆ. ಅದರಲ್ಲಿ ಪ್ರಮುಖವಾಗಿ ತೆಲಂಗಾಣದ ಗಂಗಾಪೂರ ಶಾಸನ ಪುಡೂರಿನ ಶಾಸನ, ಕಲಬುರ್ಗಿ ಜಿಲ್ಲೆಯ ಏವೂರಿನ ಶಾಸನ, ಕೊಪ್ಪಳ ಜಿಲ್ಲೆಯ ಇಟಗಿ ಶಾಸನ ಹೀಗೆ ಇಂತಹ ಅನೇಕ ಕಡೆಗಳಲ್ಲಿ ಶಾಸನಗಳು ತಮ್ಮ ಒಡಲಿನಲ್ಲಿ ಅನೇಕ ವಿಷಯಗಳೊಂದಿಗೆ ಕಾವ್ಯಾತ್ಮಕ ಗುಣಗಳನ್ನು ಗರ್ಭಿಸಿಕೊಂಡಿರುವುದನ್ನು ಶಾಸನಗಳಲ್ಲಿ ನೋಡಬಹುದಾಗಿದೆ.

“ಮನಲೊಲ್ದಂದನಿನಣ್ಣ ಬಣ್ಣಿಸಲದಾರ್ಗಂ ಸಾಲದೆ ಬಾಪ್ಪು ಶಿ
ಷ್ಟನಿಧಾನಂ ರವಿದೇವನಿಟ್ಟ ಭುವನಂ ಲಕ್ಷ್ಮೀಶನಿಟ್ಟಂಬುರಾ

ಶಿನಿಳಿಂಪದ್ರುಮಬುಟ್ಟಿ ನಂದನವನಂ ತಾರೇಶನಿಟ್ಟಿಂಬರಂ
ವನಜಾತ ಪ್ರಿಯನಿಟ್ಟಿ ಪೂರ್ವಕುಧರಂ ದೇವೇಂದ್ರ ನಿಟ್ಟಾಸ್ಪದಂ"

"ಇದು ಕಲಿಕಾಲದಂದಮಣಮಲ್ಲದು, ಧರ್ಮದ ಬಳ್ಳಿಕೂಡೆ ಪ
ರ್ವಿದುದು ಋತಾಕುರಂ ಬಳೆದು ಪಲ್ಲವಿಸಿತ್ತು, ಪರೋಪಕಾರಸ
ಸ್ಯದ ತೆನೆ ಕಾಣಲಾದಪುದು, ದಾನಘನಂ ಕಱುದಪ್ಪುದಣ್ಣ ನೋ
ಡಿದು ರವಿದೇವನೆಂಬ ಪುರುಷೋತ್ತಮನಿಟ್ಟಿ ಧರಿತ್ರಿಯಾಗದೇ"

"ಅದು ಲೋಕೋತ್ತರವೊಪ್ಪದೇ ಪೊಗಳಲಾರ್ಗಂ ಬಾಪ್ಪಹಂಕಾರ ಮಿ
ಲ್ಲದ ನಿತ್ಯೋನ್ನತಿ ಮಿಥ್ಯೆಯಿಲ್ಲದ ಋವನ್ಯಸ್ತ್ರೀರತಾಸಕ್ತಿಯಿ
ಲ್ಲದ ಶೌಚವ್ರತ ಮೂನವಿಲ್ಲದೆಸಕಂ ಪೊಳ್ಳಿಲ್ಲದಾರ್ಪಾರ್ಗಮಂ
ಜದ ವಿದ್ಯಾ ಮಹಿಮೋದಯಂ ಭುವನದೊಳ್ ಶ್ರೀ ವಿಪ್ರಮಾಣಿಕ್ಯನಾ"

"ಇದು ನೋಡಚ್ಚರಿ ನೋಡೆ ನೋಡೆ ಶಶಿಯಿಂದತ್ತತ್ತ ತಾರಾಸಮೂ
ಹದಿನತ್ತತ್ತ ಕುಳಾದ್ರಿ ಸಂಕುಳದಿನತ್ತತ್ತರ್ಣವಾನೀಕ ಲೇ
ರರ್ದಿತ್ತತ್ತ ದಿಶಾಗಜೋತ್ಕರದಿನತ್ತತ್ತಬ್ಜಗರ್ಭಾಂಡ ಖಂ
ಡದಿ ನತ್ತತ ಪೊದಳ್ವನಿಮ್ಮಿದು ಜನಂಶ್ರೀ ವಿಂಕ್ರಮಾಣಿಕ್ಯನಾ"

"ಎನಿತೆನಿತೆ ಲಕ್ಷ್ಮಿ ಪೆರ್ಚುಗು
ಮನಿತನಿತೊಳ್ಗುಣಮೆ ಕೆಗುಮುಳಿದೊರ್ಗಂತ
ಲ್ತೆನಿತೆನಿತು ಲಕ್ಷ್ಮಿಪೆರ್ಚುಗು
ಮನಿತನಿತೊಳ್ಗುಣಮನಲ್ತೆ ರವಿಗಂ ತಳೆದಂ"

ಹೀಗೆ ರವಿದೇವನ ಸದ್ಗುಣಗಳನ್ನು, ಸ್ವಭಾವ ಮತ್ತು ಧಾರ್ಮಿಕ ದೃಷ್ಟಿಯನ್ನು ವರ್ಣಿಸಿದ ಶಾಸನಕವಿ ತನ್ನ ಕವಿತಾಶಕ್ತಿಯನ್ನು ಮೆರೆದಿದ್ದಾನೆ. ಸಂಪತ್ತು ಹೆಚ್ಚಿದಂತೆಲ್ಲಾ ಸದ್ಗುಣಗಳು ನಾಶವಾಗುವುದು ಸಹಜವಾದರೂ ಕವಿಗಳಲ್ಲಿ ತದ್ವಿರುದ್ಧವಾಗಿ ಸಂಪತ್ತು ಹೆಚ್ಚಿದಂತೆಲ್ಲಾ ವನ ಒಳ್ಗುಣಗಳು ಅಧಿಕವಾದವು ಎಂದು ಆತನ ಸಂಪತ್ತನ್ನು ಸದ್ಗುಣ ಸಂಪತ್ತನ್ನು ಚಮತ್ಕಾರವಾಗಿ ಸೂಚಿಸಿದ್ದಾನೆ ಕವಿ"(ಹನುಮಾಕ್ಷಿ ಗೋಗಿ, ೧೯೯೫, ಸುರಪುರ ತಾಲೂಕಿನ ಶಾಸನಗಳು ಪು.೨೨-೨೩).

ಯಾವುದೇ ಶಾಸನವನ್ನು ಹಾಕಿಸುವುದರ ಮುಖ್ಯ ಉದ್ದೇಶ ಸಾಹಿತ್ಯ ರಚನೆಯಲ್ಲ. ಅದು ಏನಿದ್ದರೂ ಘಟನೆ ಅಥವಾ ಸನ್ನಿವೇಶಗಳನ್ನು ನೇರವಾಗಿ ನಿರೂಪಿಸುವಂತಹದ್ದಾಗಿದೆ. ಮೇಲಾಗಿ ಅವು ರಾಜಾಜ್ಞೆಯ ಸ್ವರೂಪವನ್ನು ಹೊಂದಿದ್ದವು. ಶಾಸನ ಕವಿಯಾಗಲಿ, ಲೇಖಕನಾಗಲಿ ಅವರ ಆಜ್ಞೆಯನ್ನು ಗ್ರಹಿಸಿ ನಿರ್ದಿಷ್ಟವಾದ ಚೌಕಟ್ಟಿನಲ್ಲಿ ಅದನ್ನು ತನ್ನದೇ ಅದ ರೀತಿಯಲ್ಲಿ ನಿರೂಪಿಸುತ್ತಿದ್ದನು. ಈ ಸಂದರ್ಭದಲ್ಲಿ ಅವನ ಕಾವ್ಯಶಕ್ತಿಯನ್ನೂ ಸಂದರ್ಭವನ್ನೂ ಅವಲಂಬಿಸಿ ಅದಕ್ಕೆ ಸಾಹಿತ್ಯಗುಣದ ಲೇಪವನ್ನು ಕೊಡಲಾಗುತ್ತಿತ್ತು. ಹೀಗಾಗಿ ಪ್ರಾಸಂಗಿಕವಾಗಿ ಅಲ್ಲಲ್ಲಿ ಸಾಹಿತ್ಯದ ರೂಪ ಕಾಣಿಸಿಕೊಳ್ಳುತ್ತದೆ. ಶಾಸನಗಳ ನಾಂದೀಪದ್ಯ ಅಥವಾ ದೇವತಾ ಸ್ತುತಿಯ ಸಂದರ್ಭದಲ್ಲಿ, ರಾಜನ ವಂಶಾವಳಿಯನ್ನು ನಿರೂಪಿಸುವಾಗ, ದಾನದತ್ತಿ ನೀಡುವಾಗ, ರಾಜನ ವಿಜಯಸಾಧನೆಗಳನ್ನು ನಿರೂಪಿಸುವಾಗ, ಶಾಸನಕವಿಯ ಪ್ರತಿಭೆಯ ಮೂಸೆಯಲ್ಲಿ ಸಾಹಿತ್ಯಿಕ ಅಂಶಗಳು ಒಡಮೂಡಿ ಬಂದಿವೆ. ಇಂತಹ ಶಾಸನ ಕವಿಗಳು ಶ್ರೇಷ್ಠ ಕವಿಗಳೂ ಆಗಿದ್ದುದ್ದರಿಂದಲೇ ಕೆಲವು ಶಾಸನಗಳು ಪುಟ್ಟ ಪುಟ್ಟ ಕಾವ್ಯದಂತಿವೆ. ರಾ.ನರಸಿಂಹಾಚಾರ್ಯರ 'ಶಾಸನಪದ್ಯಮಂಜರಿ' ಮತ್ತು ಎಂ.ಎಂ.ಕಲಬುರ್ಗಿಯವರ 'ಶಾಸನ ಸೂಕ್ತಿಸುಧಾರ್ಣವ'ಗಳು ಒಳ್ಳೆಯ ನಿದರ್ಶನ ಗಳನ್ನೊದಗಿಸುತ್ತವೆ.

"ಶಾಸನದ ಪಾಠವನ್ನು ಸಿದ್ಧಪಡಿಸಿಕೊಳ್ಳಲು ವಿದ್ಯಾವಂತರನ್ನೊ, ವಿದ್ವಾಂಸರನ್ನೊ, ಕವಿಗಳನ್ನೊ ಕೇಳಿಕೊಳ್ಳುತ್ತಿದ್ದರು. ಕೆಲವು ಸಾರಿ ಶಾಸನಗಳ ಪಾಠವನ್ನು ಪ್ರಸಿದ್ಧ ಕವಿಗಳೂ ಸಿದ್ಧಪಡಿಸಿಕೊಟ್ಟಿರು ವುದುಂಟು. ಕನ್ನಡದಲ್ಲಿ ಕಾವ್ಯವನ್ನು ಬರೆದು ಪ್ರಖ್ಯಾತರಾದ ಕವಿಗಳು ಬರೆದ ಅನೇಕ ಶಾಸನಗಳು ದೊರಕಿವೆ"(ಡಾ.ಎಂ.ಎಂ.ಕಲಬುರ್ಗಿ, ಪು.೮)ಎಂಬ ಮಾತು ಸರ್ವವಿದಿತವಾಗಿದೆ.

ತೆಲಂಗಾಣದ ಕನ್ನಡ ಶಾಸನಗಳಲ್ಲಿನ ಪದ್ಯಗಳ ಛಂದಸ್ಸು ಕನ್ನಡ ಛಂದಸ್ಸಿನ ಚರಿತ್ರೆಯಲ್ಲಿ ಅಪೂರ್ವವಾದ ಸ್ಥಾನ ಪಡೆಯುತ್ತವೆ. ಅದರಲ್ಲಿ ಮಹಬೂಬ್ ನಗರ ಜಿಲ್ಲೆಯ ಗಂಗಾಪುರ ಶಾಸನವು ಪ್ರಮುಖವಾದುದು. ತೇದಿಯಿಲ್ಲದ ಈ ಶಾಸನದಲ್ಲಿ ಮೀನಾಂಬರದ ದಿವ್ಯಸ್ಥಾನದ ಚೂಡಾಮಣಿ ಮುನಿಪನ ಆಧ್ಯಾತ್ಮಿಕ ಜ್ಞಾನದ ವಿಶೇಷತೆಯನ್ನು ಹೊಗಳಿದೆ. ಇದು ಅಂಶಗಣದಿಂದ ಕೂಡಿದ ಅಂಶಷಟ್ಪದಿಯಲ್ಲಿದೆ.

ಶ್ರೀನಾ[ರೀ] ನಿಳೆಯಂ ಶ್ರೀ	ವಿ. ವಿ.
ಮೀನಾಂಬರ ದಿಬ್ಯ	ಬ್ರ. ವಿ.
ಸ್ಥಾ[ನಾಮೋ]ದಿ ಚೂಡಾಮಣಿಮುನಿಪಂ	ವಿ. ವಿ. ರು.
ಧ್ಯಾನಾರೂಢದೆ ನೋಡಿ	ವಿ. ವಿ.

ತಾನೊಪ್ಪೆ ಕೇವಳ ವಿ. ವಿ.

ಜ್ಞಾನ ಪ್ರಸಿದ್ಧಮೇಂ ಪ್ರಕಟಿಸಿದ[ಂ] ವಿ. ವಿ. ರು.

ಇದೇ ಜಿಲ್ಲೆಯ ಮೂಡೂರಿನ ಶಾಸನವೊಂದರಲ್ಲಿ(ಕ.ವಿ.ಶಾ.ಸಂ.೫, ಭಾಗ.೨, ಪೂರ್ವೋಕ್ತ, ಪು.೧೫೩) ಕೂಡ ಇಂತಹದೇ ಅಂಶಗಣಾತ್ಮಕ ಷಟ್ಪದಿಯ ಬಳಕೆಯನ್ನು ಕಾಣಬಹುದು.

ಲೀಲೆಯಿನೆಸೆವೇಕ ವಿ. ವಿ.

ಶಾಲ ದ್ವಿಶಾಲ ತ್ರಿ ವಿ. ವಿ.

ಶಾಲ ಚತುಶ್ಶಾಲ ಪಂಚಶಾಲಂ ವಿ. ವಿ. ರು.

ಮೇಲೆನಿಸಿತ್ತಲ್ಲಿಂ ವಿ. ವಿ.

ಮೇಲೆ ಪಲ್ಲವನ ಜಿ ವಿ.ವಿ.

ನಾಲಯಂ ಸರ್ವ್ವತೋಭದ್ರದಿಂದಂ ॥೧೧॥ ವಿ. ವಿ. ರು.

ಈ ಶಾಸನವು ೧೬ ಪದ್ಯಗಳಿಂದ ಕೂಡಿದೆ. ಇದರಲ್ಲಿ ವಚನದ ಪ್ರಯೋಗವೇ ಇಲ್ಲ. ಇದೊಂದು ಪುಟ್ಟ ಪದ್ಯಕಾವ್ಯದಂತಿದೆ.

ಕ್ರಿ.ಶ.೧೦೭೭ರ ಯಾದಗಿರಿ ಜಿಲ್ಲೆಯ ಏವೂರಿನ ಶಾಸನವು(ಹನುಮಾಕ್ಷಿ ಗೋಗಿ, ಸುರಪುರ ತಾಲೂಕಿನ ಶಾಸನಗಳು, ಪು.೧೯)ಒಂದು ಪುಟ್ಟ ಕಾವ್ಯದಂತೆ ಶೋಭಿಸುತ್ತದೆ. ಇಲ್ಲಿ ಬಳಕೆಗೊಂಡ ಕಂದ, ಖ್ಯಾತಕರ್ನಾಟಕ ವೃತ್ತಗಳು, ಮಧ್ಯದಲ್ಲಿ ಕೊಂಡಿಯಂತೆ ವಚನದ ಬಳಕೆ ಹೀಗಾಗಿ ಇದೊಂದು ಪುಟ್ಟ ಚಂಪೂಕಾವ್ಯವೇ ಆಗಿದೆ. ಅಲ್ಲಿ ಮುಕ್ಕುಂದೆ ಗ್ರಾಮವನ್ನು ಸೊಗಸಾಗಿ ಹೀಗೆ ವರ್ಣಿಸಲಾಗಿದೆ:

ಕಂದ॥ ಪೊಡವಿಗದೆ ತಾನೆ ಮುಖಮೆನಿ
ಪೆಡೆದೊಱೆನಾಡಿಂಗೆ ತಿಳಕದನ್ದದಿನೊಪ್ಪಂ ।
ಬಡೆ ದಿರ್ಕುಮೆಸೆವ ಕಿಱುದೊಱೆ
ದಡಿಯೊಳ್ ಮುಕ್ಕುನ್ದೆಯೆಂಬ ವಿಪ್ರಗ್ರಾಮಂ ॥
ಮತ್ತೇಭ ವಿಕ್ರೀಡಿತ॥
ಅದು ತಾಂ ದಕ್ಷಿಣ ದೇಶದೊಳ್ ನೆಲಸಿಯುಂ ಲೋಕೋತ್ತರಂನನ್ದನಾ।
ಸ್ಪದಮಾಗಿಟ್ಟುಮಸತ್ಕುಜಾತ ತತಿ ನಾನಾ ನೀತಿ ವಿಖ್ಯಾತ ಸಂ।
ಪದಮಾಗಿಟ್ಟುಮನೀತಿ ಸಂಗತಿ ವಿನೀತಾನೇಕ ಲೋಕಂಗಳಿಂ।
ಪುದಿದಿಟ್ಟುಂ ಪರಿಭಾವಿಪಾಗಳವಿನೀತಾಧಾನ ಶೋಭಾವಹಂ ॥

ಇದರಲ್ಲಿಯೇ ಚಾಳುಕ್ಯದೊರೆ ಆರನೆ ವಿಕ್ರಮಾದಿತ್ಯನ ದಂಡನಾಯಕನಾದ ರವಿಗದೇವನ ಬಹುಮುಖ ಪ್ರತಿಭೆಯನ್ನು ತುಂಬಾ ಸೊಗಸಾಗಿ ವರ್ಣಿಸಿದೆ.

ಕವಿತಾ ಕಲ್ಪಲತಾರ್ಪ್ಪಣಕ್ಕೆ ಸುರಭೂಜಂ ಶಬ್ದ ವಿದ್ಯಾಪಯೋ।
ಬ್ಧಿವಿಳಾಸಕ್ಕಮೃತಾಮೃತರ್ಕ್ಕ ವಿಮಳವ್ಯೋಮ ಪ್ರಕಾಶಕ್ಕೆ ಭಾ ।
ನು ವಿಶುದ್ಧಾಗಮ ತತ್ವಕೇಳಿ ಸದನೋದ್ಯೋತಕ್ಕೆ ರತ್ನಪ್ರದೀ ।
ಪವೆನಿಪ್ಪಂ ಕುಳದೀಪಕಂ ರವಿಚಮೂಪಂ ಬನ್ಧುಕಳ್ಪದ್ರುಮಂ ॥
ಈತನು ಬಹು ಲಿಪಿಜ್ಞನಾಗಿದ್ದನೆಂಬುದಕ್ಕೆ,
ಅನುಮಾನಕ್ಕೆಡೆಯಿಲ್ಲ ಬಾಜಿಪೊಡೆ ರೇಖಾಶುದ್ಧಿ ಬೇಱೊಂದೆ ಭಿ
ತ್ತಿ ನಯಂಬೆತ್ತೆಸೆದಪ್ಪುವಂ ನಿಮಿಟ್ಟಿ ಚಂಚನ್ಮಾತ್ರೆಗಳ್ ಪದ್ಮಗ
ರ್ಭನುಮೇಂ ಬಲ್ಲನೆ ಪೇಳಿಮಿನ್ತು ಬರೆಯಲ್ಕೆಂಬನ್ನೆಗಂ ತಾನೆನೆ
ಟ್ಟನೆ ಬಲ್ಲಂ ಬರೆಯಲ್ಕನೇಕ ಲಿಪಿಯಂ ಶ್ರೀವಿಪ್ರವಿದ್ಯಾಧರಂ ॥

ಅದೇ ರೀತಿ ಅವನು ವಾದನದಲ್ಲೂ ಕುಶಲಮತಿ ಯಾಗಿದ್ದನೆಂದು ಈ ಕೆಳಗಿನ ಪದ್ಯದಿಂದ ತಿಳಿದುಬರುತ್ತದೆ:

ಇದು ನವ ಮಧುಧಾರಾಸಾರಮೋ ಮೇಣ್ಸುಧಾಂಭೋ
ನಿಧಿಯೊ ಕವಿವುದೆಂಬೊನ್ದದಿಂ ನುಣ್ಪನಿಂಪಂ ಪು
ದಿದು ರವಿಗ ಚಮೂಪಂ ಬಾಜಿಪೊನ್ದೋಜೆ ಪೇಳೇ
ನೊದವಿಸುಗುಮೊ ಕರ್ಣ್ಣಾನನ್ದಮಂ ಧಾತ್ರಿಗೆಲ್ಲಂ ॥
ಮಹಿಗೆನೆ ತಾನುಮಂ ಪರುಸವೇದಿಯ ಬೆಟ್ಟುಗಳಂ ಸುರಾವನೀ
ರುಹದ ಬನಂಗಳಂ ಪರಿವ ಸಿದ್ಧರಸಂಗಳ ಬಲ್ಪೊನಲ್ಗಳಂ
ಬಹುವಿಧ ಯತ್ನದಿಂದೆ ಬಿದಿ ಮಾಡಿದವನಲ್ಲದೆ ಲಾಳಸನ್ನಿವಿ
ಗ್ರಹ ರವಿದೇವನೊರ್ವ್ವನನೆ ಮಾಡಿದನೇ ಸಕಳೋಪಕಾರಿಯಂ॥(ಅದೇ, ಪು.೨೧)

ಹೀಗೆ ರವಿಗದೇವನ ಕಾವ್ಯಾತ್ಮಕವಾದ ವರ್ಣನೆಯು ಅಲಂಕಾರಾತ್ಮಕವಾದ ರೀತಿಯಲ್ಲಿ ಒಡಮೂಡಿ ಬಂದಿದೆ.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಇಟ್ಟಿಗೆಯ ಸರಸ್ವತಿ ದೇವಾಲಯದಲ್ಲಿರುವ ಶಾಸನವು(ಕ.ವಿ.ಶಾ.ಸಂ.೨, ಪು.೨೬೩, ೨೬೬) ಇಂತಹದೇ ಇನ್ನೊಂದು ಪುಟ್ಟ ಚಂಪೂ ಕಾವ್ಯದಂತಿದೆ. ಇದರ ಕಾಲ ಕ್ರಿ.ಶ.ಸು. ೧೧೧೮ ತುಂಬಾ ದೀರ್ಘವಾಗಿರುವ ಈ ಶಾಸನವು ರಮ್ಯವಾದ ವರ್ಣನೆಗಳಿಂದ ಕೂಡಿದ್ದಾಗಿದೆ. ಆರಂಭದಲ್ಲಿ ತ್ರಿಮೂರ್ತಿಗಳ ಪ್ರಾರ್ಥನೆಯಿಂದ

ಆರಂಭವಾಗುತ್ತದೆ. ತದನಂತರ ಚಾಳುಕ್ಯದೊರೆ ಆರನೆ ವಿಕ್ರಮಾದಿತ್ಯನ ದಂಡನಾಯಕನಾದ ಮಹಾದೇವ ದಂಡಾಧೀಶ ಹಾಗೂ ಅವನು ಈ ಮಹಾದೇವ ದೇವಾಲಯವನ್ನು ಕಟ್ಟಿಸಿದುದು ಇವುಗಳ ಬಗ್ಗೆ ಹೇಳಲಾಗಿದೆ. ಅಂತೆಯೇ ಚಾಳುಕ್ಯದೊರೆ ವಿಕ್ರಮಾದಿತ್ಯನ ಬಾಹುಬಲದ ಹಿರಿಮೆ, ಇತ್ಯಾದಿ ಅಂಶಗಳನ್ನು ಕಾವ್ಯಾತ್ಮಕವಾಗಿ ಅಷ್ಟೇ ಮನೋಜ್ಞವಾಗಿ ನಿರೂಪಿಸಲಾಗಿದೆ.

ವಿಕ್ರಮಾದಿತ್ಯನ ಬಾಹುಬಲದ ಹಿರಿಮೆಯನ್ನು ಹೀಗೆ ಚಿತ್ರಿಸಲಾಗಿದೆ:

ಕಮಠಾಧೀಶನ ಬೆನ್ನೊಳಿಟ್ಟು ಫಣಿರಾಜೋದ್ಯತ್ಫಣಾಗ್ರಕ್ಕೆ ವಂ
ದುಮಹೀಕಾಮಿನಿ ದಿಗ್ಗಜ ಬ್ರಜದ ಕುಂಭಾಗ್ರಂಗಳಂ ಮೆಟ್ಟಿ ವಿ
ಕ್ರಮ ಚಕ್ರೇಶನುದಗ್ರನಪ್ಪ ಭುಜಮಂ ಬಂದೇಱಿದ[ಳ್] ರಾಗದಿಂ
ದಮಿದೇನುನ್ನತಮಾಯ್ತೊ ದಕ್ಷಿಣಭುಜಂ ಚಾಲುಕ್ಯ ಚಕ್ರೇಶನ ॥

ಭೂದೇವಿಯು ಮೊದಲು ಕಮಠನ ಬೆನ್ನಿನಲ್ಲಿದ್ದಳು, ತದನಂತರ ಫಣಿರಾಜನ ಹೆಡೆಯ ಮೇಲೆ ನೆಲೆಸಿದ್ದಳು. ಅನಂತರ ದಿಗ್ಗಜಗಳ ಕುಂಭಾಗ್ರವನ್ನು ಮೆಟ್ಟಿನಿಂತಳು, ಕೊನೆಯಲ್ಲಿ ಈ ವಿಕ್ರಮಾದಿತ್ಯನ ಭುಜವನ್ನೇರಿದಳೆಂದು ವರ್ಣಿಸಿದೆ.

ಇಟ್ಟಿಗೆ ನಾಡನ್ನು ಬಹುವಾಗಿ ವರ್ಣಿಸಿದ ರೀತಿ ಹೀಗಿದೆ:

ಸಕಳದ್ವೀಪ ಕಳಾಪಮಂ ಮಿಗುವ ಜಂಬೂದ್ವೀಪದೊಳು ಕೀರ್ತಿವೆ
ತ್ತು ಕರಂ ಭಾರತವರ್ಷಮಿರ್ಪುದದು ವರ್ಷೋತ್ಕೃಷ್ಟಮಂತಲ್ಲಿ ವಿ
ಶ್ವಕುಳಾಸಂಕುಳ ಜನ್ಮಭೂಮಿಭುವನ ಶ್ರೀರಮ್ಯಹರ್ಮ್ಯಾಗ್ರ ಚೂ
ಳಿಕೆಯಿರ್ಕುಂ ಬಹುಧರ್ಮ್ಮಧೇನುನಿವಹಕ್ಕಾಡುಂಬೊಲಂ ಬೆಳ್ವಲ ॥

ಬಹುಧರ್ಮಗಳ ಬೀಡಾಗಿತ್ತು ಈ ಬೆಳ್ವಲನಾಡು ಎಂಬುವುದನ್ನು ಹೇಳುವುದರ ಮೂಲಕ ಇಂದಿನ ಭಾರತವು ಪ್ರಾಚೀನ ಕಾಲದಿಂದಲೇ ಬಹು ಧರ್ಮಗಳಿಗೆ ಬೀಡಾಗಿತ್ತು ಎಂಬುವುದನ್ನು ಇದು ನಿರೂಪಿಸುತ್ತದೆ.

ಮಹಾದೇವ ದಂಡಾಧಿಪತಿಯು ಕಟ್ಟಿಸಿದ ಮಹಾದೇವ ದೇವಾಲಯದ ಅಪೂರ್ವ ರಚನೆ, ಅದರ ಘನತೆ, ಎತ್ತರ ಬಿತ್ತರಗಳ ಮನೋಜ್ಞವಾದ ವರ್ಣನೆ ಇಲ್ಲಿದೆ:

ಇದಪೂರ್ವ್ವಂ ಬ್ರಹ್ಮನುಂ ನಿರ್ಮ್ಮಿಸಲಱಿಯನಿದಂ ಪೋಲಲಾ ವಿಶ್ವಕರ್ಮ್ಮಂ
ಗಿದೆದಲ್ಕರ್ಮ್ಮಾಂತರ ಪ್ರೌಢಿಗೆ ಗುರುವೆನಿಸಲು ಸಾಲ್ವುದೆಂಬಂತುಟಂನೋ
ಡಿದರಾಶ್ಚರ್ಯ್ಯಂಬಡಲ್ಮಾಡಿದನಿದನೆ ವಲಂದೇವದೇವಂಗಿರಲ್ತ
ಕ್ಕುದೆನಿಪ್ಪುತ್ತುಂಗ ದೇವಾಯತನಮೆಸೆದಿರಲು ದಂಡನಾಥತ್ರಿನೇತ್ರಂ ॥

ಉದಧಿವ್ಯಾವೃತ ಧಾತ್ರಿಯೊಳ್ಪಡಿಯಿಡಲು ದೇವಾಲಯಂ ಮುನ್ನೆ ಮಾ
ಡಿದವಿಮ್ಮಾಡುವವೀಗ ಮಾಡಿಸುವವಾವುಂ ಪೋಲ್ವುವೇ ಪೋಲವಿಂ
ತಿದು ದೇವಾಲಯ ಚಕ್ರವರ್ತಿಯೆನಿಸಲು ಸಾಲ್ದಿರ್ಪ್ಪುದಂ ಮುಂಮ್ಮನೋ
ಮುದದಿಂದ ಮಾಡಿಸಿ ಮಾಣದೊಪ್ಪುವ ಮಹಾದೇವೇಶ್ವರಾ(ರೋ)ಪಾಂತದೊಳು॥

ಮಹಾದೇವ ದಂಡಾಧಿಪನು ನಿರ್ಮಿಸಿದ ಈ ಮಹಾದೇವ ದೇವಾಲಯವು ಅಪೂರ್ವವಾದುದು; ಸ್ವತಃ ಬ್ರಹ್ಮನೇ ನಿರ್ಮಿಸಲು ಅರಿಯದಂತಹದು. ಆ ವಿಶ್ವಕರ್ಮನಿಗೆಯೇ ಮಾದರಿಯೆನುವಂತೆ, ಈ ದೇವಾಲಯವು ಇಡೀ ದೇವಾಲಯ ಸಮೂಹಕ್ಕೆ ರಾಜನೆನಿಸಿದೆ ಎಂದು ಈ ದೇವಾಲಯವನ್ನು ಕಾವ್ಯಾತ್ಮಕವಾಗಿ ವರ್ಣನೆ ಮಾಡಲಾಗಿದೆ. ಇಂತಹ ಸೊಗಸಾಗಿ ಪದ್ಯ ರಚಿಸಿದವನು ಒಬ್ಬ ಪ್ರತಿಭಾವಂತ ಕವಿಯೇ ಆಗಿರಬೇಕೆಂದು ಹೇಳಬಹುದು.

ಹೀಗೆ ಶಾಸನಗಳು ಮೂಲತಃ ಪ್ರಭುಸಮ್ಮಿತರೂಪದಿಂದ ಕೂಡಿದ್ದರೂ ಪ್ರಾಸಂಗಿಕವಾಗಿ ರಾಜರ ವಂಶಾವಳಿ, ದಾನದತ್ತಿ, ಸಮಾಜಪರ ಚಟುವಟಿಕೆಗಳ ನಿರೂಪಣೆ ಮುಂತಾದ ಸಂದರ್ಭಗಳಲ್ಲಿ ಪ್ರತಿಭಾಶಾಲಿಯಾದ ಲೇಖಕನ ಕೈಯಲ್ಲಿ ಕಾಂತಾಸಮ್ಮಿತವಾಗಿ ಹೊರಹೊಮ್ಮಿವೆ. ಇದರಿಂದಾಗಿ ನಾಡಿನ ಸಾಹಿತ್ಯ ಮತ್ತು ಸಾಂಸ್ಕೃತಿಕ ಜಗತ್ತು ಜೀವಂತಿಕೆಯಿಂದ ಉಳಿಯುವಂತಾಗಿದೆ. ಹೀಗಾಗಿ ಶಾಸನ ಸಾಹಿತ್ಯವು ಬರೀ ಗದ್ಯ ಸಾಹಿತ್ಯವೇ ಅಲ್ಲ; ಅದು ಕಾವ್ಯಲೋಕಕ್ಕೂ, ಅಮೂಲ್ಯವಾದ ನೆರವನ್ನು ಒದಗಿಸುವಂತಹದಾಗಿ ನಿಂತಿದೆ.

ಕನ್ನಡ ಸಾಹಿತ್ಯ ಚರಿತ್ರೆಗೆ ಅತ್ಯಂತ ಅಮೂಲ್ಯವಾದ ಶಾಸನವೊಂದು(ಕ.ವಿ.ಶಾ.ಸಂ.೫, ಭಾಗ ೨, ಪು.೧೧೬) ಆಂಧ್ರಪ್ರದೇಶದ ತೆಲಂಗಾಣದಲ್ಲಿದೆ. ಅದನ್ನು ಮೊತ್ತ ಮೊದಲಿಗೆ ಕಂಡು ಹಿಡಿದವರು ಡಾ॥ ಎನ್. ವೆಂಕಟರಮಣಯ್ಯ ನವರು.[೪೧೩] ಈ ಶಾಸನವು ಇಂದಿನ ಆಂಧ್ರ ಪ್ರದೇಶದ ಕರೀಂನಗರ ಜಿಲ್ಲೆಯ ಕುರ್ಕ್ಯಾಲದಲ್ಲಿದೆ. ಈ ಶಾಸನವು ತ್ರಿಭಾಷೆಯಲ್ಲಿ ರಚಿತವಾಗಿದೆ. ಪಂಪನ ತಮ್ಮನಾದ ಜಿನವಲ್ಲಭನ ಕಾರ್ಯಾವಳಿಯನ್ನು ಇದರಲ್ಲಿ ಕನ್ನಡ, ಸಂಸ್ಕೃತ ಗಳಲ್ಲಿ ವಿಸ್ತೃತವಾಗಿ ವರ್ಣಿಸಲಾಗಿದೆ. ತೆಲುಗು ಭಾಷೆಯಲ್ಲಿ ಕೂಡ ಅವನ ಗುಣಾವಳಿಗಳನ್ನು ಹೊಗಳಲಾಗಿದೆ. ಮೂರೂ ಭಾಷೆಗಳಲ್ಲಿ ಪದ್ಯಗಳಲ್ಲಿ ಈ ವರ್ಣನೆಗಳು ಬಂದಿರುವುದು ಇಲ್ಲಿ ಗಮನಾರ್ಹ. ಇದರಿಂದ ಜಿನವಲ್ಲಭನ ಕವಿತಾಶಕ್ತಿಯು ಸ್ಪಷ್ಟವಾಗುತ್ತದೆ. ಬೋಧನದ ರಾಜಧಾನಿಯಿಂದ ಆಳುತ್ತಿದ್ದ ವೇಮುಲವಾಡದ ಚಾಲುಕ್ಯರ ಎರಡನೆ ಅರಿಕೇಸರಿಯನ್ನು ಇದರಲ್ಲಿ ಉಲ್ಲೇಖಿಸಿದೆ. ಆಗ ಅಲ್ಲಿಯ ಆಡಳಿತ ಭಾಷೆ ಕನ್ನಡ, ಅಲ್ಲಿಯ ಜನರ ಭಾಷೆ ತೆಲುಗು ಆಗಿತ್ತು. ಸಂಸ್ಕೃತವು ಆಸ್ಥಾನದ ಭಾಷೆಯಾಗಿತ್ತು. ಹಾಗಾಗಿ ಮೂರೂ ಭಾಷೆಗಳು ಇಲ್ಲಿ ಬಳಕೆಯಾಗಿವೆ. ಪಂಪನ ತಮ್ಮನಾದ ಜಿನವಲ್ಲನು ಸ್ವತಃ ಕವಿಯೂ ಗಮಕಿಯೂ, ಸಂಗೀತಗಾರನೂ ಆಗಿದ್ದನು.

ಈ ಶಾಸನ ಲಭಿಸಿದ ಬಳಿಕ ಪಂಪನ ತಂದೆ ಭೀಮಪ್ಪಯ್ಯನೆಂಬುದು ಸ್ಪಷ್ಟವಾಗಿ ತಿಳಿದುಬಂದಿದೆ. ಜೊತೆಗೆ ಪಂಪನಿಗೆ ಜಿನವಲ್ಲಭನು ತಮ್ಮನಾಗಿದ್ದನೆಂಬುದು ಕೂಡ. ಕನ್ನಡ ಸಾಹಿತ್ಯ ಚರಿತ್ರೆಯ ಪುನಾರಚನೆಗೆ ಇದರಿಂದ ಸಹಾಯವೊದಗಿದೆ. ಈವರೆಗೆ ಪಂಪನಿಗೆ ಒಬ್ಬ ತಮ್ಮನಿದ್ದುದ್ದರ ಉಲ್ಲೇಖ ಎಲ್ಲೂ ಕಂಡುಬಂದಿರಲಿಲ್ಲ.

ಕವಿ ಚರಿತ್ರೆ

ಕ್ರಿ.ಶ.ಆರಂಭದ ಘಟ್ಟದಿಂದ ಮೊದಲುಗೊಂಡು ಕ್ರಿ.ಶ.೭ ಶತಮಾನದವರೆಗೆ ಅಲ್ಲಲ್ಲಿ ಶಾಸನಗಳು ಕಾವ್ಯಾತ್ಮಕವಾಗಿ ರಚನೆಯಾದುದನ್ನು ಕಾಣಬಹುದು. ಪಂಪಾದಿಗಳ ದಟ್ಟ ಪ್ರಭಾವದಿಂದಾಗಿ ೧೦ನೆಯ ಶತಮಾನದಿಂದೀಚೆಗೆ ರಚನೆಯಾದ ಶಾಸನ ಪದ್ಯಗಳಂತೂ ಪುಟ್ಟಪುಟ್ಟ ಚಂಪೂ ಕಾವ್ಯಗಳಂತೆ ಗೋಚರಿಸುತ್ತವೆ. ಶಾಸನ ಕವಿಗಳು ಕಂದ, ಖ್ಯಾತಕರ್ನಾಟಕ ವೃತ್ತಗಳು, ಅಂಶಷಟ್ಪದಿ, ಅಕ್ಕರ, ಮೊದಲಾದ ಛಂದಸ್ಸುಗಳನ್ನು ಬಳಸಿರುವುದನ್ನು ಕಾಣುತ್ತೇವೆ. ಕನ್ನಡ ಶಾಸನಗಳ ರಚನೆಯಲ್ಲಿ ಸಂಸ್ಕೃತ ಕಾವ್ಯದ, ಛಂದಸ್ಸಿನ, ಪ್ರಭಾವವು ಹೆಚ್ಚಾಗಿ ಕಂಡುಬರುತ್ತದೆ.

ಶಾಸನ ಕವಿಗಳ ಇನ್ನೊಂದು ವಿಶೇಷತೆ ಎಂದರೆ ಸಾಹಿತ್ಯಿಕ ಕವಿಗಳಂತೆ ಅವರು ತಮ್ಮ ವೈಯಕ್ತಿಕ ಬದುಕಿನ ವಿವರಗಳನ್ನು ಹೇಳಿಕೊಳ್ಳುವುದು ತೀರಾ ಕಡಿಮೆ ಎಂತಲೇ ಹೇಳಬಹುದು. ಸಾಮಾನ್ಯವಾಗಿ ಶಾಸನಗಳಲ್ಲಿ ಅದರ ರಚಕರ ಹೆಸರು ಉಲ್ಲೇಖಗೊಂಡಿರುತ್ತದೆ. ಆದರೆ ಬಹುತೇಕ ಶಾಸನಗಳಲ್ಲಿ ಅದು ಇಲ್ಲದಿರುವುದೇ ಹೆಚ್ಚು. ಕಾವ್ಯಗಳಲ್ಲೇ ಈ ಲಕ್ಷಣವಿರುವಾಗ ಇನ್ನು ಶಾಸನಗಳ ಮಾತೇನು! ಅಂತೂ ಲಭ್ಯವಿರುವ ಉಲ್ಲೇಖಗಳಂತೂ ತುಂಬಾ ಅಮೂಲ್ಯ ವಾಗಿರುತ್ತವೆ. ಕನ್ನಡದ ಎಷ್ಟೋ ಪ್ರಸಿದ್ಧಕವಿಗಳ ಕಾಲನಿರ್ಣಯಕ್ಕೆ ಶಾಸನಗಳೇ ಆಧಾರವಾದು ವೆಂಬುದನ್ನು ಇಲ್ಲಿ ನೆನೆಯಬೇಕು. ಪಂಪನ ಬಗ್ಗೆ ಕುರ್ಕ್ಯಾಲ ಶಾಸನವು ಅಪೂರ್ವ ಮಾಹಿತಿಯನ್ನು ಒದಗಿಸುವುದನ್ನು ಇಲ್ಲಿ ನೆನೆಯಬೇಕು.

ಶಾಸನರಚನೆಯಲ್ಲಿ ಪ್ರಸಿದ್ಧ ಕವಿಗಳಂತೆಯೇ ಅಪ್ರಸಿದ್ಧ ಕವಿಗಳು ಕೂಡ ಕೈಯ್ಯಾಡಿಸಿದ್ದಾರೆ. ಇವರಲ್ಲಿ ಹೆಚ್ಚಿನವರ ಕಾವ್ಯಗಳು ಇಂದು ಲಭ್ಯವಿಲ್ಲ. ಹಾಗಾಗಿ ಇವರ ಕವಿತಾಶಕ್ತಿಯ ಹೊಳಹನ್ನು ಇವರು ರಚಿಸಿದ ಶಾಸನಗಳಲ್ಲಿಯೇ ಕಾಣಬೇಕಾಗಿದೆ. ಪ್ರಸ್ತುತ ಅಧ್ಯಯನ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಹಲವರು ಕವಿಗಳನ್ನು ಇಲ್ಲಿಯ ಶಾಸನಗಳು ಉಲ್ಲೇಖಿಸಿವೆ.

ಶಾಸನ ಕವಿಗಳು

ಶಾಸನ ಕವಿಗಳು ಕಾವ್ಯ ರಚಿಸುವ ಉದ್ದೇಶದಿಂದ ಕಾವ್ಯ ರಚಿಸಿದವರಲ್ಲ. ಆದರೂ ಪ್ರಾಸಂಗಿಕವಾಗಿ ಅಲ್ಲಲ್ಲಿ ಕವಿ ಪ್ರತಿಭೆಯು ಮಿಂಚಿದೆ. ರಾಜನ ಹಾಗೂ ಅವನ ವಂಶಾವಳಿಯ

ವರ್ಣನೆ, ದಾನದತ್ತಿಗಳ ವಿಷಯ ನಿರೂಪಣೆ, ಬಿರುದಾವಳಿಗಳ ನಿರೂಪಣೆ ಇತ್ಯಾದಿ ಕಡೆಗಳಲ್ಲಿ ಶಾಸನ ಕವಿಗಳು ಬಲು ಸೊಗಸಾಗಿಯೂ ಸೌಂದರ್ಯಯುತವಾಗಿಯೂ ಕಾವ್ಯಾತ್ಮವಾಗಿಯೂ ಚಿತ್ರಣ ನೀಡುತ್ತಾರೆ.

ಜಿನವಲ್ಲಭ: ತೆಲಂಗಾಣದ ಕರೀಮ್‌ನಗರ ಜಿಲ್ಲೆಯ ಕುರ್ಕ್ಯಾಲ ಶಾಸನವು ಕನ್ನಡ ಸಾಹಿತ್ಯ ಚರಿತ್ರೆಯ ದೃಷ್ಟಿಯಿಂದ ಇದು ಅತಿ ಮಹತ್ವದ್ದಾಗಿದೆ. ಇದರ ಕಾಲ ಕ್ರಿ.ಶ.ಸು. ೧೦ನೆಯ ಶತಮಾನ(ಕ.ವಿ.ಶಾ.ಸಂ.೫, ಭಾಗ ೨, ಪೂರ್ವೋಕ್ತ, ಪು.೧೧೬). ಭೀಮತನಯನೂ ಆದಿಕವಿ ಪಂಪನ ಅನುಜನೂ ಆದ ಜಿನವಲ್ಲಭನು ಉತ್ತಮ ವಾಗ್ಮಿಯೂ, ವ್ಯಾಖ್ಯಾನಕಾರನೂ, ಗಮಕಿಯೂ, ಕವಿಯೂ ಆಗಿದ್ದನೆಂಬುದು ಈ ಶಾಸನದಿಂದ ವ್ಯಕ್ತವಾಗುತ್ತದೆ.

"ಗೀತಂ ಗಾತುಮನೇಕ ಭೇದ ಸುಭಗಂ ಕಾವ್ಯಾನಿ ಸೋಚ್ಚಾವಚಂ
ವಾಚಾವಾಚಯಿತುಂ ಪ್ರಿಯಾಣಿವದಿತುಂ ಸಾಧೂಪಕರ್ತ್ತುಂ ಸತಾಂ
ಭೋಗಾನ್ಸೇವಿತು ಮಂಗನಾರಮಯಿತುಂ ಪೂಜಾಂ ವಿಧಾತುಂ ಜಿನೇ
ಜಾನೀತೇ ಜಿನವಲ್ಲಭಪ್ಪರಮಿದಂ ಪಂಪಾಭಿಧಾನಾನುಜ:" ॥೨॥

ಇಲ್ಲಿಯ ಸಂಸ್ಕೃತ ಕನ್ನಡ ಹಾಗೂ ತೆಲುಗು ಪದ್ಯಗಳು ತುಂಬ ಮೇಲ್ಮಟ್ಟದ ರಚನೆಗಳಾಗಿವೆ. ಇದರಿಂದ ಈತನು ಮೂರೂ ಭಾಷೆಗಳು ಬಲ್ಲಿದವನಾಗಿದ್ದು, ಉತ್ತಮ ಮಟ್ಟದ ಕವಿಯಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ತನ್ನನ್ನು "ವಾಗ್ವಧೂವರವಲ್ಲಭಂ ಜಿನವಲ್ಲಭಂ" ಎಂದು ವಿಶ್ಲೇಷಿಸಿಕೊಂಡಿರುವುದು ಸಾರ್ಥಕವಾಗಿದೆ. ಈ ಶಾಸನದಲ್ಲಿ ಉಲ್ಲೇಖಗೊಂಡ ತೆಲುಗು ಭಾಷೆಯ ಕಂದ ಪದ್ಯವು ತೆಲುಗು ಸಾಹಿತ್ಯದ ಮೊದಲ ಕಂದ ಪದ್ಯವಾಗಿದೆ.

ಈತನು ಕನ್ನಡದ ಆದಿ ಕವಿ ಪಂಪನ ತಮ್ಮನೇ ಆಗಿರುವುದರಿಂದ, ಅದೇ ಪರಿಸರದಲ್ಲಿ ಬೆಳೆದಿರುವುದರಿಂದ, ಹಾಗೂ ಈ ಮೇಲಿನ ಹೇಳಿಕೆಗಳಿಂದ, ಒಬ್ಬ ಮಹಾಕವಿಯಾಗಿರಲು ಸಾಧ್ಯವಿದೆ. ಆದರೆ, ಈತನ ಯಾವುದೇ ಕೃತಿಗಳು ಈವರೆಗೆ ಲಭ್ಯವಿಲ್ಲ.

ಚಂಗದೇವಯ್ಯ: ಕ್ರಿ.ಶ. ೧೦೫೪ರ ಕಾಲದ ಸುರಪುರ ತಾಲೂಕಿನ ಕೆಂಬಾವಿಯ ಶಾಸನವನ್ನು (ಹನುಮಾಕ್ಷಿ ಗೋಗಿ: ಸುರಪುರ ತಾಲೂಕಿನ ಶಾಸನಗಳು, ೧೯೯೫, ಪು. ೧೪೭– ೧೪೮)ರಚಿಸಿದವನು ಈತ. ಚಾಳುಕ್ಯ ದೊರೆ ಮೊದಲನೆ ಸೋಮೇಶ್ವರನ ಕಾಲದವನು. ಈ ಶಾಸನವು ಚಂದಭೂಪಾಳನನ್ನು ಹೀಗೆ ವರ್ಣಿಸಿದೆ:

ಶ್ರೀರಾಜಾಗ್ರಣಿ ಚಂದನಾತನ ಮಗಂ ನಿಂಬಂ ದ್ವಿಷತ್‌ಸೈನ್ಯಸಂ ।
ಹಾರಂ ತತ್ಪ್ರಿಯಪುತ್ರನಲ್ಲಪುಲಿ ವಿಖ್ಯಾತಂ ಗುಣಾನ್ವಿತನಂ ॥
ತಾ ರಾಜಾಗ್ರಜನಯ್ಯಣಾನ್ವಯವಿಯತ್ತಿಗ್ಮಾಂಶು ತಾಂ ಪುಟ್ಟಿದಂ ।

ಪಾರಾವಾರಪರೀತಭೂತಳಯಶಂ ಶ್ರೀಚಂದಭೂಪಾಳಕಂ ॥
ಆತನ ತನಯಂ ಭುವನ ।
ಖ್ಯಾತಗುಣಂ ಶೌರ್ಯಶಾಳಿ ರಿಪುನೃಪಕುಳನಿ ॥
ರ್ದ್ಧೂತಂ ಷಾಡ್ಗುಣ್ಯಗುಣೋ ।
ಪೇತಂ ಶಶಿವಿಶದಕೀರ್ತ್ತಿ ಮೂವಡಿಗಣ್ಡಂ ॥

ಹೀಗೆ ಕವಿ ಚಂಗದೇವಯ್ಯನು ಖ್ಯಾತಕರ್ಣಾಟಕವೃತ್ತಗಳಲ್ಲಿ ಒಂದಾದ ಶಾರ್ದೂಲವಿಕ್ರೀಡಿತ ವೃತ್ತ ಮತ್ತು ಕಂದಪದ್ಯದಲ್ಲಿ ಹೈಹಯವಂಶದ ಮಹಾ ಮಂಡಳೇಶ್ವರರ ವಂಶಾವಳಿಯನ್ನು ಕಾವ್ಯಾತ್ಮಕವಾಗಿ ವರ್ಣಿಸಿದ್ದಾನೆ. ಇಲ್ಲಿಯ ರಚನೆಯನ್ನು ಗಮನಿಸಿದಾಗ ಈತ ಕೂಡ ಒಬ್ಬ ಉತ್ತಮ ಮಟ್ಟದ ಕವಿಯಾಗಿದ್ದನೆಂಬುದರಲ್ಲಿ ಸಂಶಯ ಉಳಿಯುವುದಿಲ್ಲ. ಈತ ರಚಿಸಿರಬಹುದಾದ ಯಾವ ಕೃತಿಯೂ ಇಂದು ಲಭ್ಯವಿಲ್ಲ.

ವಾಗ್ವಧೂನಂದನ ನಾಗಾರ್ಜುನ ಪಂಡಿತ: ಕ್ರಿ.ಶ. ೧೧೯೫ರ ಕಲ್ಬುರ್ಗಿ ಜಿಲ್ಲೆಯ ಚಿತಾಪೂರ ತಾಲೂಕಿನ ಇಂಗಳಗಿಯ ಶಾಸನವನ್ನು ರಚಿಸಿದವನು ಈತ. ಜಿನವಲ್ಲಭನು ವಾಗ್ವಧೂವರವಲ್ಲಭನಾದರೆ ಇವನು ವಾಗ್ವಧೂನಂದನ. ಈತನ ಈ ರಚನೆಯು ಒಂದು ಪುಟ್ಟ ಚಂಪೂ ಕಾವ್ಯದಂತೆ ಪ್ರೌಢವಾಗಿದೆ. ಇದನ್ನು ಗಮನಿಸಿದಾಗ ಇವನು ಕೂಡ ಒಬ್ಬ ಉತ್ತಮ ಮಟ್ಟದ ಕವಿಯಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಆದರೆ ಈತ ರಚಿಸಿರಬಹುದಾದ ಯಾವ ಕೃತಿಯೂ ಇಂದು ಲಭ್ಯವಿಲ್ಲ(ಕಲ್ಬುರ್ಗಿ ಜಿಲ್ಲೆ ಶಾ.ಸಂ, ಪೂರ್ವೋಕ್ತ, ಪು.೧೨೧)

ಮಹಾಕವಿ ವಿಷ್ಣುಭಟ್ಟ: ಕ್ರಿ.ಶ. ೧೧೧೫ರ ತೆಲಂಗಾಣದ ನಲ್ಗೊಂಡ ಜಿಲ್ಲೆಯ ಚಂದುಪಟ್ಲ ಶಾಸನವನ್ನು ರಚಿಸಿದವನು ಈತ. ಇಡೀ ಶಾಸನವು ತುಂಬ ಕಾವ್ಯಾತ್ಮಕವಾಗಿದೆ. ತನ್ನನ್ನು ಈತ ಈತನನ್ನು ಮಹಾಕವಿ ವಿಷ್ಣುಭಟ್ಟನೆಂದು ಕರೆದುಕೊಂಡಿದ್ದಾನೆ. ಇದರಿಂದ ಈತನು ಒಬ್ಬ ಶ್ರೇಷ್ಠ ಮಹಾಕವಿಯಾಗಿರಬಹುದು. ಆದರೆ ಈತ ರಚಿಸಿರಬಹುದಾದ ಯಾವ ಕೃತಿಯೂ ಇಂದು ಲಭ್ಯವಿಲ್ಲ(ಕ.ವಿ.ಶಾ.ಸಂ.೫, ಭಾಗ ೨, ಪೂರ್ವೋಕ್ತ, ಪು. ೧೧೬)

ಕಲಬುರ್ಗಿ ಜಿಲ್ಲೆಯ ಆಳಂದ ತಾಲೂಕಿನ ರುದ್ರವಾಡಿ ಶಾಸನವು ಕವಿ ವಿಷ್ಣುಭಟ್ಟನನ್ನು ಉಲ್ಲೇಖಿಸಿದೆ. ಈತನು ಬಹುಭಾಷಾ ಪಂಡಿತ ಕವಿಯಾಗಿದ್ದನು ತಿಳಿದುಬರುತ್ತದೆ. ಈ ಶಾಸನದಲ್ಲಿ ಈತನನ್ನು 'ಸುಕವಿಗಳೀ ಕಾವ್ಯಮನೆಯ್ದೆ ಕೇಳ್ದು ಕವಿರತ್ನಭೂಷಣಂದಲ್ಕರ್ನ್ನಾಟಕ ಸಂಸ್ಕೃತಾಂಧ್ರಕ ಕವಿಯೆಂದು ರೂರ್ಮ್ಮೆಯಿಂ ವಿಷ್ಣುಭಟ್ಟನಂ ಕೈಕೊಳ್ವರ್ ಎಂದು ಉಲ್ಲೇಖಿಸಿದೆ. ಹೀಗಾಗಿ ಈತನು ಕನ್ನಡ, ಸಂಸ್ಕೃತ, ತೆಲುಗು ತ್ರಿಭಾಷಾ ಪಂಡಿತನಾಗಿದ್ದನೆಂದು ಹೇಳುತ್ತದೆ.

ಕವಿಕಂದರ್ಪನ (೧೧೭೭) ಕ್ರಿಶ. ೧೧೭೭ರ ಕೊಪ್ಪಳ ಜಿಲ್ಲೆಯ ಕೌಲೂರು ಗ್ರಾಮದಲ್ಲಿ ದೊರೆಕಿದ ಶಾಸನದಲ್ಲಿ ಕವಿ ಕಂದರ್ಪ ಉಲ್ಲೇಖವಿದೆ. ಕ್ರಿಶ. ೧೧೭೭ರಲ್ಲಿ ಈ ಪ್ರದೇಶವನ್ನು ಕಲಚೂರಿ ದೊರೆ ಸಂಕಮನಾಳುತ್ತಿದ್ದ ಕಾಲದಲ್ಲಿ ಏಚಿಮಯ್ಯನೆಂಬುವವನು ಹರಿಹರ ದೇವಾಲಯವನ್ನು ಕಟ್ಟಿಸಿ ದೇವಾಲಯದ ನಿರ್ವಹಣೆಗಾಗಿ ದತ್ತಿಗಳನ್ನು ಬಿಟ್ಟ ಉಲ್ಲೇಖ ಕಟ್ಟಿಸಿ, ದೇವಾಲಯದ ನಿರ್ವಹಣೆಗಾಗಿ ದತ್ತಿಗಳನ್ನು ಬಿಟ್ಟ ಉಲ್ಲೇಖವಿದೆ. ಈ ದೊಡ್ಡದಾದ ಕಲ್ಲಿನ ಮೇಲೆ ಕೊರೆಯಿಸಿದ ಶಾಸನವು ದತ್ತಿ ನೀಡಿದುದರ ವರ್ಣನೆಯನ್ನು ವೃತ್ತಗಳೂ, ಕಂದಗಳೂ ಇರುವಂತೆ ಕಂಡುಬರುತ್ತವೆ. ಆದರೆ ಸ್ಪಷ್ಟತೆ ಕಂಡುಬರುವುದಿಲ್ಲ. ಈ ದತ್ತಿ ಶಾಸನವು ಕೊನೆಭಾಗದಲ್ಲಿ ಒಂದು ಕಂದಪದ್ಯ ಲಕ್ಷಣವುಳ್ಳ ಪದ್ಯದಲ್ಲಿ ಒಂದು ಕಾಣಿಸುತ್ತದೆ.

> '...
> ....ಶಾಸನ..........
> ....ಚ

ತುರ್ಭಾಷಾ ಚಕ್ರವರ್ತಿ ಕವಿಕಂದರ್ಪಂ' ಎಂದು ಇರುವುದರಿಂದ ಕವಿ ಕಂದರ್ಪನೆ ಈ ಶಾಸನ ಬರೆದಿರಬೇಕು ಮತ್ತು ನಾಲ್ಕು ಭಾಷೆಗಳನ್ನು ಬಲ್ಲವನಾಗಿದ್ದವನೆಂದು ತಿಳಿದುಬರುತ್ತದೆ.

ಗೋಮಕವಿ: ಕ್ರಿಶ. ೧೧೭೮ರ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಕುಕನೂರಿನ ಶಾಸನದಲ್ಲಿ ಗೋಮಕವಿಯ ಉಲ್ಲೇಖ ಕಂಡುಬರುತ್ತದೆ. ಕಲಚೂರಿ ಅರಸ ಸಂಕಮನ ಕಾಲದ ಶಾಸನವಾಗಿದೆ. ಈ ಶಾಸನವು ೧೧೭ ಸಾಲಿನ ಸುದೀರ್ಘವಾದ ಚಂಪೂ ಕಾವ್ಯದಂತಿದೆ. ಅದರಲ್ಲಿರುವ ಕನ್ನಡ ಪದ್ಯಗಳ ಸಂಖ್ಯೆ ೫೭. ಶಾಸನದ ಕೊನೆಯಲ್ಲಿ ದತ್ತಿ ಹೇಳುವ ಸಂದರ್ಭದಲ್ಲಿ ಗೋಮಕವಿಗೆ ಸಲಗರದಲ್ಲಿ ಹೊಲಮನೆಗಳನ್ನು ನೀಡಿ ಸನ್ಮಾನಿಸಿದ ವಿವರಗಳನ್ನು ಕಂದಪದ್ಯದಲ್ಲಿ ನಿರೂಪಿತವಾಗಿದೆ. ಇಲ್ಲಿ ಗೋಮಕವಿಗೆ ಪುರಸ್ಕಾರ ನೀಡಿದವರು ಕುಕ್ಕನೂರಿನ ಜೇಷ್ಠಾದೇವಿಯರ ಸ್ಥಾನಾಚಾರ್ಯರಾಗಿದ್ದ ಹಾಗೆಯೇ ಸೋಮೇಶ್ವರದೇವರ ನವಮಠಾಚಾರ್ಯರಾದ ಲೋಕಗುರು ಕಳೇಶ್ವಚಾರ್ಯರು ಈ ಕೆಳಗಿನ ಕಂದಪದ್ಯದಲ್ಲಿ ಚಿತ್ರಿಸಿದೆ.

ಕಂದ : ಉತ್ತಮವೆನೆ ಗುಡುಗುಂಟಿಯೋ
ಳಿತ್ತಂತಿದೆ ಗೋಮಕವಿಗೆ ದಯೆಯಿಂಪನ್ನಿ
ರ್ಮತ್ತರ್ಕೆನಯ್ಯಿಂ ಮನೆಯ ವು
ನಿತ್ತಂ ಸೆಲಗರಪೊಳಂ ಕಳೇಶ್ವರದೇವಂ ॥

ಮುಂದುವರೆದು ಇದೇ ಶಾಸನದಲ್ಲಿ ಕುಕನೂರಿನ ಮಹಿಮೆ ಅದಕ್ಕೆ ಕಾರಣರಾದವರ ಕುರಿತು ಒಂದು ಒಳ್ಳೆಯ ವೃತ್ತಕಾವ್ಯ ಬಂಧದಲ್ಲಿ ಚಿತ್ರಿಸಲಾಗಿದೆ.

॥ವೃತ್ತ॥ ಬಾಳಾಕ್ಷದ್ಯುತಿ ಬಾಡಬಾಗ್ನಿಗೆ ಜಾಟಾಜೂಟಂ ಪ್ರವಾಳಕ್ಕೆ ಸ
ರ್ಪಾಳಂಕಾರಮದಾಹಿ ಕೋಟಿಗೆ ಕರೋಟಿಮಾಲೆ ಶಂಖಾಳಿ ಗಾ
ಭೀಳಧ್ವಾನವುದೀರ್ಣ ಘೋಷಕೆಣೆಯಾಗಲ್ ಕಾಳಿಕಾಭೈರವ
ಶ್ರೀಲೀಲಾಕೃತಿವೋಲ್ಮನಂಗೊಳಿಸಿತೋ ರತ್ನಾಕರಂ ಶ್ರೀಕರಂ ॥

॥ವೃತ್ತ॥ ಶಿವಲಿಂಗಂಗಳ್ ಸ್ವಯಂಭೂ ಪ್ರಭುತೆಯೆನೆಸೆವೊಂಭತ್ತೆನಲ್ಶಕ್ತಿಪೀಠಂ
ಭುವನಸ್ತುತ್ಯಂಗಳೊಂಭತ್ತೆನಲಿದು ಶಿವಶರ್ತ್ತೆಸ್ಫುರತ್ಸಂಪುಟಕ್ಷೇ
ತ್ರವೆನುತ್ತುಂ ಸಿದ್ಧಾಯೋಗಿಶ್ವರವರ ಸಹಜಾಯೋಗಿನೀವ್ರಾತವತ್ಯು
ತ್ತವರಿಂದಲ್ಲಿಂದವೆಂದುಂ ತೊಲಗದೆನಲದಾರ್ ಬಣ್ಣಿಸರ್ಕುಕನೂರಂ ॥

ಹೀಗೆ ಗೋಮಕವಿಯು ಸುಂದರವಾದ ಕಾವ್ಯಶೈಲಿಯೊಂದಿಗೆ ನಿರೂಪಿಸಿದ ಭಾಷೆ, ಛಂದಸ್ಸಿನ ದೃಷ್ಟಿಯಿಂದ ತುಂಬಾ ಮನೋಹರವಾಗಿದೆ.

ಚಂದ: ಕಲಬುರ್ಗಿ ಜಿಲ್ಲೆಯ ಚಿಂಚೋಳಿ ತಾಲೂಕಿನ ದೇಗಳಮಡಿಯ ಶಾಸನದಲ್ಲಿ ಕವಿ ಚಂದನ ಉಲ್ಲೇಖಬರುತ್ತದೆ.

ಸರಸಕವಿ ಭಾಸ್ಕರ: ಕ್ರಿ.ಶ. ೧೧೨೭ರ ತೆಲಂಗಾಣ ಸಂಗಾರೆಡ್ಡಿ ಜಿಲ್ಲೆಯ ಶಾಸನವನ್ನು ರಚಿಸಿದವನು ಈ ಸರಸಕವಿ ಭಾಸ್ಕರ. ಈ ಶಾಸನವು ಚಾಲುಕ್ಯ ದೊರೆ ಭೂಲೋಕಮಲ್ಲದೇವ ಮೂರನೆ ಸೋಮೇಶ್ವರನ ಕಾಲದ್ದು. ಇಡೀ ಶಾಸನವು ತುಂಬ ಕಾವ್ಯಮಯವಾಗಿದೆ. "ನಿರತಿಶಯೋನ್ನತಮತಿ ಭಾಸ್ಕರ ಸರಸ ಕವೀಂದ್ರ" ಎಂದು ಈ ಶಾಸನದಲ್ಲಿ ಇವನನ್ನು ಉಲ್ಲೇಖಿಸಿರುವುದು ಉತ್ಪ್ರೇಕ್ಷೆಯೆನಿಸುವುದಿಲ್ಲ. ಕ್ರಿ.ಶ. ೧೪೨೫ ರಲ್ಲಿ ಜನಿಸಿದ ಜೀವಂಧರ ಚರಿತೆಯ ಕರ್ತೃ ಭಾಸ್ಕರ ಮತ್ತು ಈ ಭಾಸ್ಕರ ಇಬ್ಬರೂ ಬೇರೆ ಬೇರೆಯವರು(ಕ.ವಿ.ಶಾ.ಸಂ.೫, ಭಾಗ.೨, ಪೂರ್ವೋಕ್ತ, ಪು.೧೪೧).

ಸಜ್ಜನತಿಲಕ: ಕ್ರಿ.ಶ. ೧೧೭೦ರ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಕುಕನೂರು ಶಾಸನವನ್ನು ರಚಿಸಿದವನು ಈತ. ಈ ಶಾಸನದಲ್ಲಿ ಕಲಚುರಿ ರಾಜರ ವಂಶಾವಳಿಯನ್ನು ಕಾವ್ಯಾತ್ಮಕವಾಗಿ ಚಿತ್ರಿಸಲಾಗಿದೆ. ಉತ್ತಮ ರಚನೆ ಇದಾಗಿರುವುದರಿಂದ ಈತ ಕೂಡ ಒಬ್ಬ ಉತ್ತಮ ಮಟ್ಟದ ಕವಿಯಾಗಿದ್ದಿರಬಹುದು. ಆದರೆ ಇವನು ರಚಿಸಿರಬಹುದಾದ ಯಾವ ಕೃತಿಯೂ ಇಂದು ಲಭ್ಯವಿಲ್ಲ(ಕ.ವಿ.ಶಾ.ಸಂ.೨, ಪೂರ್ವೋಕ್ತ, ಪು.೧೭೭).

ಲಲಿತ ಕಲೆಗಳು

ಪ್ರಾಚೀನ ಭಾರತೀಯರು ಕಲಾಪ್ರಿಯರು, ಅನಾದಿ ಕಾಲದಿಂದಲೂ ಲಲಿತ ಕಲೆಗಳನ್ನು ಪೋಷಿಸಿಕೊಂಡು ಬಂದಿದ್ದಾರೆ. ಅದು ಶಿಲ್ಪಕಲೆ, ಸಂಗೀತ ಕಲೆ, ನೃತ್ಯ ಕಲೆ, ಕಾಷ್ಠಕಲೆ, ಬರಹ

ಕಲೆ, ಯುದ್ಧಕಲೆ, ಮಾತನಾಡುವ ಕಲೆ, ಶಾಸನಗಳು ಕಲ್ಲು ಬಂಡೆಗಳ ಮೇಲೆ ಕೊರೆಯುವ ಕಲೆ, ಹೀಗೆ ಬಹಳಷ್ಟು ಕಲೆಗಳು ನಮ್ಮ ಪರಂಪರೆಯಲ್ಲಿ ಹಿಂದಿನಿಂದಲೂ ಆಸ್ತಿತ್ವದಲ್ಲಿದ್ದುದ್ದನ್ನು ಕಾಣಬಹುದು. ಪ್ರತಿಯೊಬ್ಬ ವ್ಯಕ್ತಿಯಲ್ಲಿಯೂ ಯಾವುದಾದರೊಂದು ಒಂದು ಕಲೆ ಅಡಗಿರುತ್ತದೆ. ಆ ಕಲೆಯನ್ನು ಗುರುತಿಸಲು ಒಬ್ಬ ಸರಿಯಾದ ವ್ಯಕ್ತಿ ಬೇಕು ಅಷ್ಟೆ. ಕಲೆಯು ಯಾವುದೇ ಆಗಿರಲಿ ಅದಕ್ಕೆ ಎಲ್ಲೆಡೆ ಮಾನ್ಯತೆಯಿದೆ. ಪ್ರಪಂಚದ ಎಲ್ಲ ಮಾನವ ಜೀವಿಗಳೂ ಒಂದಲ್ಲ ಒಂದು ಕಲೆಯ ಆರಾಧಕರಾಗಿದ್ದಾರೆ. ಕಲೆಯಿಲ್ಲದವನ ಜೀವನ ಕಳಾಹೀನ ಎನ್ನುವಂತೆ ಆಗಿದೆ. ಹೀಗಾಗಿ ಒಬ್ಬೊಬ್ಬ ವ್ಯಕ್ತಿಯೂ ವಿಭಿನ್ನ ಕಲೆಗಳಲ್ಲಿ ತನ್ನನ್ನು ತಾನು ತೊಡಗಿಸಿಕೊಂಡಿದ್ದಾನೆ. ಪ್ರಾಚೀನ ಕಾಲದ ಸಮಾಜವು ಕಲೆಗೆ ಹೆಚ್ಚಿನ ಪ್ರಾಧ್ಯಾನ್ಯ ನೀಡುತ್ತಿತ್ತು. ರಾಜ ರಾಣಿಯರು, ಮಂತ್ರಿಗಳು, ದಂಡನಾಯಕರು, ಇತರ ಅಧಿಕಾರಿಗಳು, ಶ್ರೀಮಂತರು, ಕೊನೆಗೆ ಸಾಮಾನ್ಯ ಜನರು ಕೂಡ, ಕಲೆಗೆ ಒಂದಲ್ಲ ಒಂದು ರೀತಿಯಲ್ಲಿ ಪೋಷಣೆ ನೀಡುತ್ತಲೇ ಬಂದಿದ್ದಾರೆ. ರಾಜಾಶ್ರಯವಂತೂ ಕಲೆಯ ವಿಕಾಸದಲ್ಲಿ ಮಹತ್ವದ ಪಾತ್ರ ವಹಿಸಿದೆ.

"ವಿನಾಶ್ರಯಂ ನಶೋಭಂತೇ ಪಂಡಿತಾ ವನಿತಾ ಲತಾ"

ಎಂಬ ಸೂಕ್ತಿಯನ್ನು ಇಲ್ಲಿ ನೆನೆಯಬಹುದು. ಅಂದಿನ ರಾಜರಂತೂ ಕಲಾ ಪ್ರಿಯರೂ, ರಸಿಕರೂ ಆಗಿದ್ದರು. ವಿಶೇಷವಾಗಿ ತಮ್ಮ ಆಸ್ಥಾನಗಳಲ್ಲಿ ಸಂಗೀತಗಾರರನ್ನು, ವಿದೂಷಕರನ್ನು, ನರ್ತನಾದಿಗಳನ್ನು ಮಾಡುವ ಕಲಾವಿದರನ್ನು ನೇಮಕ ಮಾಡಿಕೊಳ್ಳುತ್ತಿದ್ದರು. ಅಲ್ಲದೆ ಸ್ವತಃ ರಾಜ-ರಾಣಿಯರೂ ಹಲವಾರು ಕಲೆಗಳನ್ನು ಬಲ್ಲವರಾಗಿದ್ದರೆಂದು ಈ ಪ್ರದೇಶಗಳ ಶಾಸನಗಳು ಉಲ್ಲೇಖಿಸಿವೆ.

ಹೈದ್ರಾಬಾದ್ ಕರ್ನಾಟಕ ಮತ್ತು ತೆಲಂಗಾಣ ಪ್ರದೇಶಗಳಲ್ಲಿ ಲಭ್ಯವಾಗುವ ವಾಸ್ತುಶಿಲ್ಪವನ್ನು ಗಮನಿಸಿದಾಗ ಈ ಪ್ರದೇಶಗಳು ಕಲೆಯ ಬೀಡಾಗಿದ್ದವು ಎಂಬುದು ಸ್ಪಷ್ಟವಾಗಿ ಅರಿವಿಗೆ ಬರುತ್ತದೆ. ಡಿ.ವಿ. ಪರಮಶಿವಮೂರ್ತಿಯವರ 'ಶಾಸನ ಶಿಲ್ಪ' ಕೃತಿಯಲ್ಲಿ ಈ ಸಂಬಂಧದ ಹೆಚ್ಚಿನ ಮಾಹಿತಿಯನ್ನು ಕಾಣಬಹುದು.

ಕಲೆಗಳು ಮಾನವ ಜೀವನದ ಜೀವನಾಡಿಗಳಾಗಿವೆ. ಅದಕ್ಕಾಗಿಯೇ ಆಗಿನ ಕಾಲದಲ್ಲಿ ಕಲಾವಿದರಿಗೆ ಹೆಚ್ಚು ಪ್ರೋತ್ಸಾಹ ನೀಡುತ್ತಿದ್ದುದು. ಅಂದಿನ ರಾಜರು ಕಟ್ಟಿಸಿದ ದೇವಾಲಯಗಳು, ಕೋಟೆಕೊತ್ತಲಗಳು, ಅರಮನೆಗಳ ವಿನ್ಯಾಸ ಇತ್ಯಾದಿಗಳು ಅವರ ಕಲಾಪ್ರಿಯತೆಗೆ ಸಾಕ್ಷಿಯಾಗಿ ನಿಂತಿವೆ.

ಈ ಒಂದು ಹಿನ್ನೆಲೆಯಲ್ಲಿ, ಈ ವಿಷಯಗಳಿಗೆ ಸಂಬಂಧಿಸಿದಂತೆ ಇಲ್ಲಿಯ ಕೆಲವು ಶಾಸನಗಳಲ್ಲಿ ಲಭಿಸುವ ಸಾಮಗ್ರಿಯನ್ನು ಆಧರಿಸಿ ಇನ್ನು ವಿಚಾರ ಮಾಡಬಹುದು.

ಕ್ರಿ.ಶ.೧೧೨೪ರ ಕಲ್ಬುರ್ಗಿ ಜಿಲ್ಲೆಯ ಸೇಡಂ ಶಾಸನದಲ್ಲಿ(ಹನುಮಾಕ್ಷಿ ಗೋಗಿ, ಕಲ್ಬುರ್ಗಿಯ ಜಿಲ್ಲೆಯ ಶಾಸನಗಳು, ಪೂರ್ವೋಕ್ತ, ಸೇಡಂ ೧೫, ಪು.೧೮೨, ೯೪, ೪೯೬)ಅಲ್ಲಿಯ ಅಗ್ರಹಾರದ ಮಹಾಜನರನ್ನು "ಬಹುವಿಧವಚನರಚನಾಪ್ರವೀಣರುಂ, ಚೌಷಷ್ಠಿಕಳಾನ್ವಿತ ವಸುಮತೀಗೀರ್ವ್ವಾಣರುಂ, ...ಸಮಸ್ತವಿದ್ಯಾವಿಶೇಷಣರುಂ" ಎಂದು ಮುಂತಾಗಿ ಹೊಗಳಲಾಗಿದೆ. ಇದರಿಂದ ಅವರು ಸಾಹಿತ್ಯದಲ್ಲಿ ಮತ್ತು ಮಾನ್ಯತೆ ಪಡೆದ ಇತರ ಎಲ್ಲ ಅರವತ್ತನಾಲ್ಕು ಕಲೆಗಳಲ್ಲಿ ಪ್ರಾವೀಣ್ಯವನ್ನು ಪಡೆದಿದ್ದರೆಂಬುದು ಸ್ಪಷ್ಟವಾಗುತ್ತದೆ. ಇದು ಅಂದು ಗೌರವನೀಯ ಅಂಶವಾಗಿತ್ತು.

ಮಾನ್ಯತೆ ಪಡೆದ ಕಲೆಗಳ ಸಂಖ್ಯೆ ಅರುವತ್ತನಾಲ್ಕು ಎಂಬುದು ಭರತ ಖಂಡವು ಬಹು ಹಿಂದಿನಿಂದಲೂ ಒಪ್ಪಿಕೊಂಡು ಬಂದಿರುವ ಒಂದು ಪದ್ಧತಿ. ವಾತ್ಸ್ಯಾಯನನ ಕಾಮಸೂತ್ರದಲ್ಲಿರುವ ಅರುವತ್ತು ನಾಲ್ಕು ಕಲೆಗಳು ಕೆಳಗಿನಂತಿವೆ:

ಇದು ವಾತ್ಸ್ಯಾಯನು ಕೊಟ್ಟಿರುವ ಪಟ್ಟಿಯನ್ನು ಆಧರಿಸಿ ಡಾ.ಚಿದಾನಂದಮೂರ್ತಿಯವರು ನೀಡಿರುವ ವಿವರಗಳ ಸಾರ.

ಕ್ರಿ.ಶ.೧೧೧೭ರ ತೆಲಂಗಾಣ ಶಾಸನವೊಂದು ಚಾಳುಕ್ಯ ದೊರೆ ತ್ರಿಭುವನ ಮಲ್ಲದೇವನ ರಾಣಿಯನ್ನು 'ಅಭಿನವ ಸರಸ್ವತಿ' ಎಂದು ಉಲ್ಲೇಖಿಸಿದೆ(ಕ.ವಿ.ಶಾ.ಸಂ.೫, ಭಾಗ-೨, ಪೂರ್ವೋಕ್ತ,

೧. ಗೀತ
೨. ವಾದ್ಯ
೩. ನೃತ್ಯ
೪. ಆಲೇಖ್ಯ
೫. ವಿಶೇಷಕಚ್ಛೇದ್ಯ
೬. ತಂಡುಲಕುಸುಮಬಲಿವಿಕಾರಗಳು
೭. ಕೌಚುಮಾರಾಶ್ಚಯೋಗಾಃ
೮. ಕೌಚುಮಾರಾಶ್ಚಯೋಗಾಃ
೯. ಹಸ್ತಲಾಘವ
೧೦. ವಿಚಿತ್ರ ಶಾಕಯೂಷಭಕ್ಷ್ಯವಿಕಾರಕ್ರಿಯೆ
೧೧. ಪಾನಕರಸರಾಗಾಸವಯೋಜನ
೧೨. ಸೂಚೀವಾನಕರ್ಮ
೧೩. ಸೂತ್ರಕ್ರೀಡೆ
೧೪. ವೃಕ್ಷಾಯುರ್ವೇದ
೧೫. ಮೇಷಕುಕ್ಕುಟಲಾವಕಯುದ್ಧ ವಿಧಿ
೧೬. ಶುಕಸಾರಿಕಾ ಪ್ರಲಾಪನ
೧೭. ಉತ್ಸಾದನ ಸಂವಾಹನ ಕೇಶಮರ್ದನ ಗಳಲ್ಲಿ ಕೌಶಲಂ

೧೮. ಅಕ್ಷರಮುಷ್ಟಿಕಾಕಥನ
೧೯. ಪುಷ್ಪಾಸ್ತರಣ
೨೦. ದಶನವಸನಾಂಗರಾಗ
೨೧. ಮಣಿಭೂಮಿಕಾಕರ್ಮ
೨೨. ಶಯನರಚನೆ
೨೩. ಉದಕಘಾತ
೨೪. ಚಿತ್ರ
೨೫. ಮಾಲ್ಯಗ್ರಥನವಿಕಲ್ಪ
೨೬. ಶೇಖರಕಾಪೀಡಯೋಜನ
೨೭. ನೇಪಥ್ಯಪ್ರಯೋಗ
೨೮. ಕರ್ಣಪತ್ರಭಂಗ
೨೯. ಗಂಧಯುಕ್ತಿ
೩೦. ಭೂಷಣಯೋಜನ
೩೧. ಐಂದ್ರಜಾಲ
೩೨. ವೈನಯಿಕೀಗಳ ವಿದ್ಯೆಯ ಜ್ಞಾನ
೩೩. ಬಾಲಕ್ರೀಡನಕ
೩೪. ವೀಣಾಡಮರುಕವಾದ್ಯಗಳು
೩೫. ಪ್ರಹೇಲಿಕಾ
೩೬. ಪ್ರತಿಮಾಲಾ
೩೭. ದುರ್ವಾಚಕ
೩೮. ಪುಸ್ತಕವಾಚನ
೩೯. ನಾಟಕಾಖ್ಯಾಯಿಕಾದರ್ಶನ
೪೦. ಕಾವ್ಯಸಮಸ್ಯಾಪೂರಣ
೪೧. ಪಟ್ಟಿಕಾವೇತ್ರವಾನವಿಕಲ್ಪ
೪೨. ತಕ್ಷಕರ್ಮ
೪೩. ತಕ್ಷಣ
೪೪. ವಾಸ್ತುವಿದ್ಯೆ
೪೫. ರೂಪ್ಯರತ್ನಪರೀಕ್ಷೆ
೪೬. ಧಾತುವಾದ
೪೭. ಮಣಿರಾಗಾಕರಜ್ಞಾನ
೪೮. ವೈಜಯಿಕೀಗಳ ವಿದ್ಯೆಗಳ ಜ್ಞಾನ
೪೯. ಮ್ಲೇಚ್ಛಿತವಿಕಲ್ಪ
೫೦. ದೇಶಭಾಷಾವಿಜ್ಞಾನ
೫೧. ಪುಷ್ಪಶಕಟಿಕಾ
೫೨. ನಿಮಿತ್ತಜ್ಞಾನ
೫೩. ಯಂತ್ರಮಾತೃಕೆ
೫೪. ಧಾರಣಮಾತೃಕೆ
೫೫. ಸಂಪಾಠ್ಯ
೫೬. ಮಾನಸೀ
೫೭. ಕಾವ್ಯಕ್ರಿಯಾ
೫೮. ಅಭಿಧಾನಕೋಶ ಛಂದೋವಿಜ್ಞಾನ
೫೯. ಕ್ರಿಯಾಕಲ್ಪ
೬೦. ಛಲಿತಕಯೋಗ
೬೧. ವಸ್ತ್ರಗೋಪನ
೬೨. ದ್ಯೂತವಿಶೇಷ
೬೩. ಆಕರ್ಷಕ್ರೀಡೆ
೬೪. ವ್ಯಾಯಾಮಿಕೀಗಳವಿದ್ಯೆಗಳ ಜ್ಞಾನ.

ಶಾ.ಸಂ. ೪೯೦, ಪು.೧೫೨) ಇದರಿಂದ ಆಕೆಯು ಎಲ್ಲ ವಿದ್ಯೆಗಳಲ್ಲೂ ಕಲೆಗಳಲ್ಲೂ ಬಲ್ಲಿದಳಾಗಿದ್ದಳೆಂದು ಭಾವಿಸಬಹುದಾಗಿದೆ.

ಇದೇ ರೀತಿ ಕ್ರಿ.ಶ.೧೧೧೦೫ರ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಮುದನೂರು ಶಾಸನವು(ಸುರಪುರ ತಾಲೂಕಿನ ಶಾಸನಗಳು, ಪೂರ್ವೋಕ್ತ, ಪು.೨೬) ಆರನೆಯ ವಿಕ್ರಮಾದಿತ್ಯನ ರಾಣಿಯಾದ ತಾರಾದೇವಿಯನ್ನು "ಶೃಂಗಾರ ವಿದ್ಯಾಧರೆ ಸಕಳ ಕಳಾಧರೆ" ಎಂದು ಉಲ್ಲೇಖಿಸಿದೆ. ಅವಳು ಕೂಡ ಸಕಲಕಲಾಪ್ರವೀಣೆಯಾಗಿದ್ದಳೆಂದು ಭಾವಿಸಬಹುದು.

ಕ್ರಿ.ಶ. ೧೧೪೨ ಮತ್ತು ೧೧೫೪ರ ಸುರಪೂರ ತಾಲೂಕಿನ ಮುದನೂರ ಶಾಸನವು(ಅದೇ, ಪು.೨೭)ಅಲ್ಲಿಯ ಮಹಾಜನಂಗಳ ಬಗ್ಗೆ ಹೀಗೆ ಉಲ್ಲೇಖಿಸಿದೆ. "ಅನೇಕ ತರ್ಕ್ಕ ವ್ಯಾಕರಣ ಕಾವ್ಯ ನಾಟಕ ವೇದಾಂತ ಸಿದ್ಧಾಂತಾಭಿಜ್ಞರುಂ ಸಕಳಕಳಾ ಸರ್ವಜ್ಞರುಂ" ಎಂದು ವರ್ಣಿಸಿದೆ. ಇದರಿಂದ ಅವರು ಕೇವಲ ಪಂಡಿತರಷ್ಟೇ ಆಗಿರದೆ ಸಕಲಕಲಾಭಿಜ್ಞರೂ ಆಗಿದ್ದರೆಂಬುದು ಸ್ಪಷ್ಟವಾಗುತ್ತದೆ.

ಕ್ರಿ.ಶ.೧೦೩೪ರ ತೆಲಂಗಾಣದ ಸೈದಾಪುರದ ಶಾಸನವೊಂದು(ಕ.ವಿ.ಶಾ.ಸಂ.೫, ಭಾಗ-೨, ಪೂರ್ವೋಕ್ತ, ಶಾ.ಸಂ. ೪೯೦, ಪು.೧೫೨) ಶಸ್ತ್ರಶಾಸ್ತ್ರಗಳಲ್ಲಿ ಬಲ್ಲಿದನಾಗಿದ್ದ ಆಯುರ್ವೇದವಿದನಾಗಿದ್ದ ವೈದ್ಯರತ್ನಾಕರ ಪ್ರಾಣಾಚಾರ್ಯನನ್ನು ಉಲ್ಲೇಖಿಸುತ್ತದೆ. ಈತ ಅನೇಕ ನರವೈದ್ಯ ಕರ್ಮಗಳನ್ನು ಬಲ್ಲವನಾಗಿದ್ದನೆಂದೂ ತಿಳಿಸಿದೆ.

ಕ್ರಿಶ ೧೦೮೬ರ ಕಲಬುರ್ಗಿ ಜಿಲ್ಲೆಯ ನಾಗಾಯಿ ಶಾಸನವು(ಹನುಮಾಕ್ಷಿ ಗೋಗಿ, ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪೂರ್ವೋಕ್ತ, ಪು. ೧೯೧-೧೯೨)ಅಲ್ಲಿಯ ರಾಮೇಶ್ವರ ದೇವಾಲಯವು ನಾಟ್ಯಶಾಲೆಯಿಂದ ಅಲಂಕೃತವಾಗಿತ್ತೆಂದು ತಿಳಿಸುತ್ತದೆ. "ಅನೇಕಕೂಟಕೋಟೀವಿ ಶಾಳಶಾಳಭಂಜಿ ಕಾರಂಜಿತಮುಂ ನಾಟ್ಯಶಾಳಾಳಂಕ್ರಿತಮುಂ" ಎಂದಿರುವುದು ಅಂದು ನಾಟ್ಯಕಲೆಗೆ ಲಭಿಸುತ್ತಿದ್ದ ಅವಕಾಶ ಪ್ರೋತ್ಸಾಹಗಳು ಎಂತಹವಾಗಿದ್ದವು ಎಂಬುದು ಸ್ಪಷ್ಟವಾಗುತ್ತದೆ.

ಕ್ರಿ.ಶ.೧೦ನೆಯ ಶತಮಾನದ ಸುಮಾರಿನ ಕುರ್ಕ್ಯಾಲಶಾಸನವು(ಕ.ವಿ.ಶಾ.ಸಂ.೫, ಭಾಗ-೨, ಪೂರ್ವೋಕ್ತ, ಶಾ.ಸಂ. ೪೯೦, ಪು.೧೫೩) ಜಿನವಲ್ಲಭನ ಬಗ್ಗೆ ವಿವರವಾಗಿ ವರ್ಣನೆ ನೀಡುವುದು ತಿಳಿದ ವಿಚಾರ. ಅಲ್ಲಿ ಅವನನ್ನು ಬಾಜಿಸಲ್ ಬರೆಯಲ್ ಬಲ್ಲವನೆಂದು ವರ್ಣಿಸಲಾಗಿದೆ. ಅವನು ಕೇವಲ ಕವಿಯಷ್ಟೇ ಆಗಿರದೆ ಗಮಕಿಯೂ ಉತ್ತಮವ್ಯಾಖ್ಯಾನ ಕಾರನೂ ಆಗಿದ್ದನೆಂಬುದು ಆ ಶಾಸನದಲ್ಲಿ ಸ್ಪಷ್ಟವಾಗಿ ಉಲ್ಲೇಖಿತವಾಗಿದೆ.

ಕ್ರಿ.ಶ.೧೧೧೩ರ ಕೊಪ್ಪಳ ಜಿಲ್ಲೆಯ ಇಟಗಿ ಶಾಸನವು(ಕ.ವಿ.ಶಾ.ಸಂ.೨, ಪೂರ್ವೋಕ್ತ, ಪು. ೧೮೪–೧೮೮) ಮಹದೇವಮಂದಿರದ ಕಲೆಯ ಸೊಬಗನ್ನು ಉಲ್ಲೇಖಿಸುತ್ತದೆ. ಚಾಲುಕ್ಯದೊರೆ ಆರನೆಯ ವಿಕ್ರಮಾದಿತ್ಯನ ದಂಡನಾಯಕನಾದ ಮಹದೇವನು ಈ ಮಹದೇವ ದೇವಾಲಯವನ್ನು ಕಟ್ಟಿಸಿದನು. ಇದರ ರಚನಾವೈಖರಿಯ ಬಗ್ಗೆ ಈ ಶಾಸನವು ಹೀಗೆ ಹೇಳುತ್ತದೆ:

ಇದಪೂರ್ವ್ವಂ ಬ್ರಹ್ಮನುಂ ನಿರ್ಮ್ಮಿಸಲಱಿಯನಿದಂ ಪೋಲಲಾ ವಿಶ್ವಕರ್ಮಂ
ಗಿದೆದಲ್ಕರ್ಮ್ಮಾಂತರ ಪ್ರೌಢಿಗೆ ಗುರುವೆನಿಸಲು ಸಾಲ್ವುದೆಂಬಂತುಟಂ ನೋ
ಡಿದರಾಶ್ಚರ್ಯ್ಯಂಬಡಲ್ಮಾಡಿದನಿದನೆ ವಲಂದೇವದೇವಂಗಿರಲ್ತ
ಕ್ಕುದೆನಿಪ್ಪುತ್ತುಂಗ ದೇವಾಯತನಮೆಸೆದಿರಲು ದಂಡನಾಥತ್ರಿನೇತ್ರಂ ॥
ಉದಧಿವ್ಯಾವೃತ ಧಾತ್ರಿಯೊಳ್ಪಡಿಯಿಡಲು ದೇವಾಲಯಂ ಮುನ್ನೆ ಮಾ
ಡಿದವಿಮ್ಮಾಡುವವೀಗ ಮಾಡಿಸುವವಾವುಂ ಪೋಲ್ವುವೇ ಪೋಲವಿಂ
ತಿದು ದೇವಾಲಯ ಚಕ್ರವರ್ತಿಯೆನಿಸಲು ಸಾಲ್ದಿರ್ಪ್ಪುದಂ ಮುಂಮ್ಮನೋ
ಮುದದಿಂದ ಮಾಡಿಸಿ ಮಾಣದೊಪ್ಪುವ ಮಹಾದೇವೇಶ್ವರಾ(ರೋ)ಪಾಂತದೊಳು॥

ಈ ದೇವಾಲಯವು ಅತ್ಯಪೂರ್ವವಾಗಿ ರಚಿತವಾಗಿತ್ತಂತೆ. ನೋಡಿದ ಜನರು ಆಶ್ಚರ್ಯ ಪಡುವಂತೆ ಭವ್ಯವಾಗಿತ್ತಂತೆ. ಸ್ವತಃ ಬ್ರಹ್ಮನೇ ಇಂತಹದನ್ನು ನಿರ್ಮಿಸಲರಿಯನು ಎನ್ನುತ್ತಾನೆ ಕವಿ. ಇದಕ್ಕೆ ಸರಿಸಾಟಿಯಾದ ದೇವಾಲಯವೊಂದು ಈ ಮುಂಚೆ ಇರಲಿಲ್ಲ, ಈಗಲೂ ಇಲ್ಲ ಮತ್ತು ಮುಂದೆಯೂ ಇರಲಾರದು ಎಂದು ವರ್ಣಿಸಲಾಗಿದೆ. ಇದರಿಂದಾಗಿ ಇದು ಎಲ್ಲ ದೇವಾಲಯಗಳಿಗೂ ಚಕ್ರವರ್ತಿ ಯೆನಿಸುವಂತೆ ಇತ್ತಂತೆ. ಈ ಮಾತುಗಳನ್ನು ನೋಡಿದರೆ ಅದರಲ್ಲಿಯ ಕಲಾನೈಪುಣ್ಯದ ಅತಿಶಯತೆಯು ಅರಿವಾಗದಿರದು.

ಕ್ರಿ.ಶ. ೧೦೭೭ರ ಯಾದಗಿರಿ ಜಿಲ್ಲೆಯ ಏವೂರು ಶಾಸನವು(ಹನುಮಾಕ್ಷಿ ಗೋಗಿ, ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪೂರ್ವೋಕ್ತ, ಪು.೨೧) ಚಾಲುಕ್ಯದೊರೆ ಆರನೆಯ ವಿಕ್ರಮಾದಿತ್ಯನ ದಂಡನಾಯಕನಾದ ರವಿಗದೇವನ ಪ್ರತಿಭೆ ಪಾಂಡಿತ್ಯ ಹಾಗೂ ಆತನಲ್ಲಿ ಸುಪ್ತವಾಗಿದ್ದ ಕಲಾನೈಪುಣ್ಯ ಇವುಗಳ ಬಗ್ಗೆ ಹೀಗೆ ಹೇಳುತ್ತದೆ:

ಅನುಮಾನಕ್ಕೆಡೆಯಿಲ್ಲ ಬಾಜಿಪೊಡೆ ರೇಖಾಶುದ್ಧಿ ಬೇಱೊಂದೆ ಭಿ
ತ್ತಿ ನಯಂಬೆತ್ತೆಸೆದಪ್ಪುವಂ ನಿಮಿಟ್ಟ ಚಂಚನ್ಮಾತ್ರೆಗಳ್ ಪದ್ಮಗ
ರ್ಭನುಮೇಂ ಬಲ್ಲನೆ ಪೇಳಿಮಿನ್ತು ಬರೆಯಲ್ಕೆಂಬನ್ನೆಗಂ ತಾನೆನೆ
ಟ್ಟನೆ ಬಲ್ಲಂ ಬರೆಯಲ್ಕನೇಕ ಲಿಪಿಯಂ ಶ್ರೀವಿಪ್ರವಿದ್ಯಾಧರಂ ॥
ಇದು ನವ ಮಧುಧಾರಾಸಾರಮೋ ಮೇಣ್ಸುಧಾಂಭೋ

ನಿಧಿಯೊ ಕವಿವುದೆಂಬೊನ್ನದಿಂ ನುಣ್ಪನಿಂಪಂ ಮು
ದಿದು ರವಿಗ ಚಮೂಪಂ ಬಾಜಿಪೊನ್ನೋಜೆ ಪೇಳೇ
ನೊದವಿಸುಗುಮೊ ಕರ್ಣ್ಣಾನನ್ದಮಂ ಧಾತ್ರಿಗೆಲ್ಲಂ ॥

ಇದರ ಪ್ರಕಾರ ಆತನು ಕುಶಲ ಲಿಪಿಕಾರನೂ ಲಿಪಿಜ್ಞನೂ ಅಂತೆಯೇ ಉತ್ತಮ ಗಮಕಿಯೂ ಆಗಿದ್ದನೆಂಬುದು ಸ್ಪಷ್ಟವಾಗುತ್ತದೆ. ದನಿಯ ಉಚಿತ ಏರಿಳಿತಗಳಿಗನುಗುಣವಾಗಿ ಕಾವ್ಯವನ್ನು ವಾಚಿಸುವುದರಲ್ಲಿ ಇವರೆಲ್ಲ ಬಲ್ಲಿದರಾಗಿದ್ದರು. ಹಿಂದೆ ನೋಡಿದ ಜಿನವಲ್ಲಭನೂ ಇವನೂ ಇದಕ್ಕೆ ಉತ್ತಮ ಮಾದರಿಯಾಗುತ್ತಾನೆ.

ಹೀಗೆ ಸಂಗೀತ, ಸಾಹಿತ್ಯ, ಗಮಕ, ಲೇಖನ, ಶಿಲ್ಪ ಇತ್ಯಾದಿ ಕಲೆಗಳಲ್ಲೆಲ್ಲ ಆಗಿನವರು ಪರಿಣತರಾಗಿದ್ದರೆಂಬುದು ಸ್ಪಷ್ಟವಾಗುತ್ತದೆ. ಇನ್ನು ಯುದ್ಧಕಲೆಯ ಬಗ್ಗೆಯಂತೂ ಹೇಳಲೇ ಬೇಕಿಲ್ಲ. ಅದು ತಿಳಿದಿರುವ ವಿಷಯವೇ. ಇವನ್ನೆಲ್ಲ ಗಮನಿಸಿದಾಗ ಆಗಿನವರ ಕಲಾ ಪ್ರೌಢಿಮೆಯ ಔನ್ನತ್ಯವು ಅರಿವಾಗದಿರದು.

ಲಿಪಿಕಾರರು ಮತ್ತು ಕಂಡರಣೆಕಾರರು

ಕವಿಯಾದವನು ತಾನು ರೂಪಿಸಿದ ಶಾಸನ ಪದ್ಯವನ್ನು ಭೂರ್ಜ ಪತ್ರದ ಮೇಲೋ ಮತ್ತೊಂದರ ಮೇಲೋ ಬರೆದುಕೊಂಡು ಅದನ್ನು ಕಲ್ಲಿನ ಮೇಲೆ ಬರೆಯುವ ಸಲುವಾಗಿ ಲಿಪಿಕಾರನಿಗೆ ಕೊಡುತ್ತಾನೆ. ಅವನು ಅದನ್ನು ಸುಣ್ಣದಿಂದಲೋ ಬಣ್ಣದಿಂದಲೋ ಶಿಲೆಯ ಮೇಲೋ ಲೋಹದ ಮೇಲೋ ಬರೆಯುತ್ತಾನೆ. ಕಂಡರಣೆಕಾರನು ಅದನ್ನು ಕೊರೆಯುವ ಕಾರ್ಯ ಮಾಡುತ್ತಾನೆ. ಇಂತಹವರನ್ನು ರೂವಾರಿಗಳು ಶಿಲ್ಪಿಗಳು ಮತ್ತು ಓಜರು ಎನ್ನುವರು. ಪ್ರಕೃತದ ಪ್ರದೇಶದ ಶಾಸನಗಳಲ್ಲಿ ಉಕ್ತವಾಗಿರುವ ಕೆಲ ಲಿಪಿಕಾರರ, ಕಂಡರಣೆಕಾರರ ಹೆಸರುಗಳು ಹೀಗಿವೆ: ಮಮ್ಮ, ಗಂಗಯ್ಯ, ಗೋಕರ್ಣಯ್ಯ, ಜೆಕ್ಕಣಮಯ್ಯ, ಚಂಗದೇವಯ್ಯ, ಮಾರೋಜ, ನಾಗೋಜ, ಕೊಮ್ಮೋಜ, ಮುದ್ದಣಾಚಾರ್ಯ ಇತ್ಯಾದಿ. ಹೀಗೆ ಲಿಪಿಕಾರರು ಕೂಡ ಶಾಸನ ಪದ್ಯವನ್ನು ರಚಿಸುವಲ್ಲಿ ಮಹತ್ತರವಾದ ಮತ್ತು ಅಷ್ಟೇ ಗಮನಾರ್ಹ ಪಾತ್ರವಹಿಸಿದ್ದಾರೆಂದು ಹೇಳಬಹುದು.

ಒಟ್ಟಾರೆಯಾಗಿ ಸಾಹಿತ್ಯಲೋಕದಲ್ಲಿ ಮಿಂಚಿದಂತೆ ಶಾಸನಲೋಕದಲ್ಲಿ ಶಾಸನಕವಿಗಳು ತಮ್ಮ ಅಲ್ಪ ಕಾಲಾವಕಾಶದಲ್ಲಿಯೇ ವಿಷಯವನ್ನು ತುಂಬಾ ಕಾವ್ಯಾತ್ಮಕವಾಗಿ ಚಿತ್ರಿಸಿದ್ದನ್ನು ಕಂಡುಬರುತ್ತದೆ. ಚಂಗದೇವಯ್ಯ, ನಾಗಾರ್ಜುನ ಪಂಡಿತ, ವಿಷ್ಣುಭಟ್ಟ, ಸರಸಕವಿ ಭಾಸ್ಕರ, ಸಜ್ಜನ ತಿಲಕ, ಗೋಮಕವಿ, ಚಂದಕವಿ, ಜಿನವಲ್ಲಭ, ಮುಂತಾದ ಕವಿಗರು ಅವಕಾಸ ಸಿಕ್ಕಾಗ

ಅಲ್ಲಲ್ಲಿ ತಮ್ಮ ಕಾವ್ಯ ಪ್ರತಿಭೆ ತೋರ್ಪಡಿಸಿದ್ದಾರೆ. ಸಾಹಿತ್ಯ ಕವಿಗಳಂತೆ ಶಾಸನ ಕವಿಗಳ ಒಂದು ಪ್ರತ್ಯೇಕ ಪಂಗಡವೇ ಇರಬಹುದು. ಕಾರಣ ಸಾಹಿತ್ಯ ಕವಿಗಳಿಗೂ ಇವರಿಗೂ ಕೆಲವು ವಿಷಯಗಳಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಅದರಲ್ಲಿ ವಿಶೇಷವಾಗಿ ಕಿರಿದೊಳ್ ಹಿರಿದಾದ ವಿಷಯ ನಿರೂಪಣೆ ಈ ಶಾಸನ ಕವಿಗಳಿಗೆ ಸಿದ್ಧಸಿತ್ತು ಎಂದು ಹೇಳಬಹುದು. ಹೇಳುವ ವಿಷಯವನ್ನು ಕಡಿಮೆ ಸ್ಥಳ, ಕಾಲ, ಶಬ್ಧಗಳಲ್ಲಿ ವಿಷಯ ನಿರೂಪಣೆಯೇ ಇವರ ಪ್ರತಿಭೆಯೇ ಇವರ ಪ್ರತಿಭೆಗೆ ದ್ಯೋತಕವಾಗಿದೆ.

ಹೀಗೆ ಈ ಭಾಗದ ಶಾಸನಗಳಲ್ಲಿ ಉಲ್ಲೇಖವಿರುವ ಕಾವ್ಯಾತ್ಮಕ ಅಂಶಗಳಿಂದ ಕೂಡಿದ ಅನೇಕ ಶಾಸನಗಳು ಪುಟ್ಟ ಚಂಪೂ ಕಾವ್ಯದಂತಿದೆ. ಮತ್ತು ಚಂಪೂ, ಕಂದ, ರಗಳೆ, ಷಟ್ಪದಿ ಪದ್ಯಗಳು ಅಲ್ಲಲ್ಲಿ ಕಂಡುಬರುತ್ತವೆ. ಅಲ್ಲದೆ ಈ ಭಾಗದ ಶಾಸನಗಳಲ್ಲಿ ಶಾಸನ ಕವಿಗಳು, ಲಿಪಿಕಾರರು ಮತ್ತು ಕಂಡರಣೆಕಾರರುಗಳ ಉಲ್ಲೇಖ ಕಂಡುಬರುತ್ತದೆ.

ಅಧ್ಯಾಯ ಒಂಬತ್ತು

ಶೈಕ್ಷಣಿಕ ಅಧ್ಯಯನ

ಅಧ್ಯಾಯ ಒಂಬತ್ತು

ಶೈಕ್ಷಣಿಕ ಅಧ್ಯಯನ

ಪ್ರಾಚೀನ ಕಾಲದಿಂದಲೂ ಶಿಕ್ಷಣಕ್ಕೆ ಅಮೂಲ್ಯವಾದ ಸ್ಥಾನ ಇದೆ. ಅಲ್ಲದೆ ಬೌದ್ಧ, ವೈಧಿಕ, ಇಸ್ಲಾಂ ಕಾಲದಿಂದಲೂ ಆಯಾ ಪ್ರಾಚೀನ ಕೃತಿಗಳಲ್ಲಿ ವಿದ್ಯೆಗಿರುವ ಮಹತ್ವ ಕುರಿತು ಅಲ್ಲಲ್ಲಿ ಉಲ್ಲೇಖಿಸಲಾಗಿದೆ. ರಾಜ್ಯಭಾರ ಮಾಡುವ ವ್ಯಕ್ತಿಗಳು, ಯಾರೇ ಆಗಿರಲ್ಲಿ ಅವರಿಗೆ ತಕ್ಕ ಶಿಕ್ಷಣ ಬೇಕೆ, ಬೇಕು ಎಂಬುವುದನ್ನು ಪ್ರಾಚೀನ ಕೃತಿಗಳಲ್ಲಿ ಉಲ್ಲೇಖಿಸಿದೆ. ರಾಜ, ಪ್ರಧಾನಿ, ಭಂಡಾರಿ, ಮಹಾದಂಡಾಧಿಪತಿ, ಮಂತ್ರಿ, ಮಾಂಡಳೀಕ, ಸೈನಿಕ, ಆಸ್ಥಾನ ಕವಿ/ಪಂಡಿತರು, ಊರಿನ ಆಡಳಿತ ನಡೆಸುವವ ಗಾವುಂಡ ರಾಣಿಯರು, ಯುವರಾಜರು, ಇತ್ಯಾದಿಯಾಗಿ ಆಯಾ ಕ್ಷೇತ್ರಕ್ಕೆ ಸಂಬಂಧಿಸಿದ ವಿದ್ಯೆಯನ್ನು ಕಲಿಯಲೇಬೇಕಾದ್ದದ್ದು. ಮತ್ತು ಅಗ್ರಹಾರದ ಬ್ರಾಹ್ಮಣರು, ಪುರೋಹಿತರು ಇತ್ಯಾದಿಯಾಗಿ ವಿವಿಧ ಶಾಸ್ತ್ರಗಳನ್ನು ಕಲಿಯಬೇಕಾಗಿತ್ತು ಎಂದು ಅನೇಕ ಕೃತಿಗಳು ಉಲ್ಲೇಖಿಸುತ್ತವೆ. ಶಾಸನಗಳಲ್ಲಿ ೬೪ ಕಲೆಗಳು ಬಗ್ಗೆ ಉಲ್ಲೇಖ ಬರುತ್ತದೆ. ಅದರಲ್ಲಿ ವಿದ್ಯೆಯ ಒಂದು. ಅವುಗಳಲ್ಲಿ ವಿಶೇಷವಾಗಿ ರಾಜನೀತಿಶಾಸ್ತ್ರ, ಧರ್ಮಶಾಸ್ತ್ರ, ನ್ಯಾಯಶಾಸ್ತ್ರ, ಯುದ್ಧಶಾಸ್ತ್ರಗಳು ತಿಳಿದಿರಬೇಕು. ವಿದ್ಯೆ ಇಲ್ಲದೇ ಯಾವುದೇ ಆಡಳಿತದ ಚುಕ್ಕಾಣಿ ಹಿಡಿಯಲು ಬರುತ್ತಿರಲಿಲ್ಲ. ರಾಜಾಡಳಿತದಲ್ಲಿ ಅನೇಕ ಅಧಿಕಾರಿ ವರ್ಗಗಳಿದ್ದವು. ಅವರು ತಾವು ಪಡೆದುಕೊಂಡು ವಿದ್ಯಾರ್ಹತೆಗೆ ಅನುಗುಣವಾಗಿ ಸ್ಥಾನ ಪಡೆಯುತ್ತಿದ್ದರು. ಕಲ್ಯಾಣ ಚಾಲುಕ್ಯ ದೊರೆ ಆರನೇ ವಿಕ್ರಮಾದಿತ್ಯನನ್ನು ಸಮಸ್ತ ಭುವನಾಶ್ರಯಶ್ರೀ ಪೃಥ್ವಿವಲ್ಲಭ ರಾಜಾಧಿರಾಜ ಪರಮೇಶ್ವರ ಪರಮಭಟ್ಟಾರಕ ಸತ್ಯಾಶ್ರಯ ಕುಲತಿಲಕರು ಚಾಲುಕ್ಯಾಭರಣವೆಂಬ ಬಿರುದುಗಳನ್ನು ಇರುವುದನ್ನು ಅನೇಕ ಶಾಸನಗಳಲ್ಲಿ ಉಲ್ಲೇಖಗೊಂಡಿರುವುದನ್ನು ನೋಡಿದಾಗ ೬ನೇ ವಿಕ್ರಮಾದಿತ್ಯನು ವಿದ್ಯಾಪಾರಾಂಗ ತನೂ ಅನೇಕ ರೀತಿಯ ಕಲೆ ಮತ್ತು ವಿದ್ಯೆಗಳನ್ನು ಕಲಿತಿದ್ದನೆಂದು ಹೇಳಬಹುದು. ಅಗ್ರಹಾರದಲ್ಲಿರುವ ಬ್ರಾಹ್ಮಣರು ಕುರಿತು ಅನೇಕ ಶಾಸನಗಳು ಸರಳ ಕಲಾಪಂಡಿತರು, ಬ್ರಹ್ಮವಿದ್ಯೆ ಕೋವಿಕರು, ಎಂಬಿತ್ಯಾದಿ ಶಾಸನಗಳು ಅವರನ್ನು ಉಲ್ಲೇಖಿಸುತ್ತವೆ. ಕೆಲವು ರಾಣಿಯರನ್ನು ಕಲಾ ಕಲಾ

ಸವುಣರು ಎಂದು ಉಲ್ಲೇಖಿಸುತ್ತವೆ. ಇವುಗಳಿಂದ ಅಂದೆಯೇ ವಿದ್ಯೆಯು ಎಷ್ಟು ಪ್ರಾಮುಖ್ಯತೆ ಪಡೆದುಕೊಂಡಿತ್ತೆಂಬುದನ್ನು ತಿಳಿಯಬಹುದು.

ಒಟ್ಟಾರೆಯಾಗಿ ಪ್ರಾಚೀನ ಕಾಲದಿಂದಲೂ ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಾ ಬಂದಿದ್ದಾರೆ. ಅದರಲ್ಲಿ ರಾಜರು, ಧರ್ಮದರ್ಶಿಗಳು, ಅಗ್ರಹಾರ, ಬ್ರಹ್ಮಪುರಿಯ ಪುರೋಹಿತರು, ಶಿಕ್ಷಣಕ್ಕಿರುವ ಮಹತ್ವ ಆರಂಭದಲ್ಲಿ ಮೋಕ್ಷ ಸಾಧನೆಗೆ ಶಿಕ್ಷಣವೇ ಮುಖ್ಯವಾಗಿತ್ತು. ಆದರೆ ಕಾಲಾನುಕ್ರಮದಲ್ಲಿ ಶಿಕ್ಷಣವು ಒಂದು ಲೌಖಿಕ ಆಸ್ತಿಯಾಗಿ, ತಿಳುವಳಿಕೆಯಾಗಿ ವಿಶೇಷ ಜ್ಞಾನ ಎಂಬ ದೃಷ್ಟಿಯಿಂದ ನೋಡುತ್ತಾ ಬಂದಿರುವುದನ್ನು ಕಾಣಬಹುದು. ಹೀಗಾಗಿ ಶಾಸನಗಳಲ್ಲಿ ಉಲ್ಲೇಖಿಸಿದಂತೆ, ಇಂತಹ ಶಿಕ್ಷಣದ ಬೋಧನೆ ಪ್ರಸಾರಕ್ಕಾಗಿ, ಅನೇಕ ದಾನದತ್ತಿ ಬಿಡುತ್ತಿದ್ದರು. ಮತ್ತುಅಲ್ಲಿಯ ವಿದ್ಯೆ ಕಲಿಸುವ ಉಪಾಧ್ಯಾಯರಾಗಿ, ಅಲ್ಲಿರುವ ಮಾಣಿಗಳಿಗಾಗಿ ದಾನದತ್ತಿಗಳನ್ನು ಬಿಡುತ್ತಿರುವುದನ್ನು ಕಂಡುಬರುತ್ತದೆ.

ಅವುಗಳಲ್ಲಿ ಮುಖ್ಯವಾಗಿ, ಜಿನಾಲಯಗಳು, ಘಟಿಕಾಸ್ಥಾನಗಳು, ಬ್ರಹ್ಮಪುರಿಗಳು, ಅಗ್ರಹಾರಗಳು, ದೇವಸ್ಥಾನಗಳು ಪ್ರಮುಖ ಶಿಕ್ಷಣ ಕೇಂದ್ರಗಳಾಗಿದ್ದವು. ತೆಲಂಗಾಣ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ ಇಂತಹ ಅನೇಕ ಕಡೆಗಳಲ್ಲಿ ಶಿಕ್ಷಣ ಕೇಂದ್ರಗಳಿದ್ದಾವೆಂದು ತಿಳಿದುಬರುತ್ತದೆ.

ಶಿಕ್ಷಣವು ಗುರುಕುಲ ಪದ್ಧತಿಯಾಗಿತ್ತು. ಗುರುಗಳಲ್ಲಿಡೆಯೇ ಹೋಗಿ ಶಿಕ್ಷಣ ಪಡೆದುಕೊಳ್ಳ ಬೇಕಾಗಿತ್ತು. ಇಂದಿನ ಹಾಗೆ ಸಾರ್ವಜನಿಕ ಶಿಕ್ಷಣ ಕೇಂದ್ರ ಇರಲಿಲ್ಲ. ಅಂದು ಎಲ್ಲರಿಗೂ ಕಡ್ಡಾಯ ಶಿಕ್ಷಣ ಇರಲಿಲ್ಲ. ಕೆಲವೇ ಕೆಲವು ವರ್ಗದ ಜನರಿಗೆ ಶಿಕ್ಷಣ ನೀಡಲಾಗುತ್ತಿತ್ತು.

ಪ್ರಾಚೀನ ಕಾಲದ ಶಿಕ್ಷಣ ಕ್ರಮ ಹಾಗೂ ಅದರ ದೃಷ್ಟಿಕೋನ ಇಂದಿಗಿಂತ ತೀರ ಭಿನ್ನವಾಗಿತ್ತು. ಐಹಿಕಸುಖವು ಕ್ಷಣಿಕವೆಂದು ತಿಳಿದ ಅಂದಿನವರು, ಶಾಶ್ವತವಾದ ಪರಲೋಕಸುಖವನ್ನು ಪಡೆಯಲು ಎಲ್ಲ ರೀತಿಯ ಸಾಧನೆಗಳನ್ನೂ ಮಾಡುತ್ತಿದ್ದರು. ಜೀವನದ ಪರಮಧ್ಯೇಯವೇ ಸತ್ಯವನ್ನು ಅರಿಯುವುದು. ಈ ಸತ್ಯವನ್ನು ಅರಿಯಲು ಅವರು ವಿದ್ಯೆ ಹಾಗು ಶಿಕ್ಷಣ ಮಾರ್ಗಗಳು ಅತ್ಯಗತ್ಯವೆಂದು ಮನಗಂಡಿದ್ದರು. ಹೀಗಾಗಿ ಅಂದಿನ ಶಿಕ್ಷಣವು ಧಾರ್ಮಿಕ ಮತ್ತು ಆಧ್ಯಾತ್ಮಿಕ ಪರಿಸರಗಳ ನೆರಳಿನಲ್ಲಿ ಬೆಳೆದು ಬಂತು. ಅದಕ್ಕಾಗಿಯೇ ಪ್ರಾಚೀನ ಕಾಲದಲ್ಲಿ ಶಿಕ್ಷಣವಿಲ್ಲದ ವ್ಯಕ್ತಿಯನ್ನು ಪಶುಸಮಾನನೆಂದು ಪರಿಗಣಿಸಲಾಗುತ್ತಿತ್ತು. ವಿದ್ಯೆಗಿರುವ ಮಹತ್ವ ಕುರಿತಂತೆ ಕವಿ ಸೋಮದೇವ ವಿರಚಿತ ನೀತಿ ವಾಕ್ಯಮೃತದಲ್ಲಿ ಹೀಗೆ ಹೇಳಲಾಗಿದೆ.

> ಅಲೋಚನಗೋಚರೇ ಹ್ಯರ್ಥೇ ಶಾಸ್ತ್ರಂ ಪುರುಷಾಣಾಂ
> ತೃತೀಯಂ ಲೋಚನಂ ॥೨೭॥೧೧೩॥
> ಅನಧೀತಶಾಸ್ತ್ರಶ್ಚಕ್ಷುಷ್ಮಾನಪಿ ಪುಮಾನಂಧ ಏವ ॥೨೮॥೧೧೪॥

ಅಂದರೆ ಕಣ್ಣಿಗೆ ಕಾಣದ ವಿಷಯಗಳಲ್ಲಿ ಮನುಷ್ಯರಿಗೆ ಶಾಸ್ತ್ರವೇ ಮೂರನೆಯ ಕಣ್ಣು; ಶಾಸ್ತ್ರವನ್ನರಿಯದ ಮನುಷ್ಯನು ಕಣ್ಣಿದ್ದೂ ಕುರುಡನೇ ಸರಿ ಎಂದು ಹೇಳಲಾಗಿದೆ. ಪ್ರಾಪಂಚಿಕ ಜ್ಞಾನದ ಜೊತೆಗೆ ಮೋಕ್ಷಸಾಧನೆಗೆ ಶಿಕ್ಷಣವೇ ಮುಖ್ಯಸಾಧನವಾಗಿತ್ತು. "ಪ್ರಾಚೀನ ಕರ್ನಾಟಕದ ವಿದ್ಯಾಭ್ಯಾಸದಲ್ಲಿ ಕಂಡುಬರುವ ಒಂದು ಪ್ರಮುಖ ಅಂಶವೆಂದರೆ ಊರೂರುಗಳಲ್ಲಿ ಮತ್ತು ಹಳ್ಳಿಹಳ್ಳಿಗಳಲ್ಲಿ ಅಗ್ರಹಾರಗಳೂ ಮಠಗಳೂ ಘಟಿಕಾಸ್ಥಾನಗಳೂ ನಿರ್ಮಾಣವಾಗಿ ವಿದ್ಯೆಯನ್ನು ಸಾಧ್ಯವಾದಷ್ಟು ವ್ಯಾಪಕವನ್ನಾಗಿ ಮಾಡುವ ಪ್ರಯತ್ನ. ನಾಡಿನ ಆದ್ಯಂತವೂ ದೊರಕುವ ನೂರಾರು ಶಾಸನಗಳು ಆ ಕಾಲದ ವಿದ್ಯಾಭ್ಯಾಸ ಪದ್ಧತಿಯ ಪರಿಚಯಕ್ಕೆ ಕಿಟಕಿಗಳನ್ನು ತೆರೆಯುತ್ತವೆ; ನಮ್ಮ ರಾಜರು ಮತ್ತು ಮಹಾಜನಗಳೂ ವಿದ್ಯೆಗೆ ಕೊಡುತ್ತಿದ್ದ ಉದಾರವಾದ ಪ್ರೋತ್ಸಾಹಕ್ಕೂ ನಿದರ್ಶನವಾಗಿವೆ." ಇದಕ್ಕೆ ಶಾಸನಗಳ ಒಪ್ಪಿಗೆಯೂ ಇದೆ. ಇದಕ್ಕೆ ಪೂರಕ ಎನ್ನುವಂತೆ ತೆಲಂಗಾಣದ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಗಳ ಶಾಸನಗಳಲ್ಲಿ ಕೂಡ ಅನೇಕ ನಿದರ್ಶನಗಳಿವೆ.

"ಪ್ರಾಚೀನ ಭರತಖಂಡದ ವಿದ್ಯಾಭ್ಯಾಸ ಪದ್ಧತಿಯು ಬಹುಪಾಲು ಧಾರ್ಮಿಕವಾದದ್ದು. ಮನುಷ್ಯ ಜೀವನದ ಗುರಿ ಆತ್ಮಜ್ಞಾನ ಅಥವಾ ಮೋಕ್ಷ. ವಿದ್ಯಾಭ್ಯಾಸವೆನ್ನುವುದು ಈ ಆತ್ಮಜ್ಞಾನವನ್ನು ಪಡೆಯಲು ಒಂದು ಮಾರ್ಗ. ವಿದ್ಯೆಯು ಎರಡು ತೆರನಾದುದು. ಪರಾವಿದ್ಯೆ ಮತ್ತು ಅಪರಾ ವಿದ್ಯೆ. ಮನುಷ್ಯ ಆತ್ಮದ ವಿಕಾಸಕ್ಕೆ ಸಾಧಕವಾದುದು ಪರಾವಿದ್ಯೆ, ಇದೇ ಶ್ರೇಷ್ಠವಾದದು. ಇನ್ನುಳಿದುದೇನಿದ್ದರೂ ಲೌಕಿಕ ಸುಖಕ್ಕೆ ಸಾಧಕವಾದದ್ದು. ಮನುಷ್ಯರು ಹುಟ್ಟುವ ಬಗೆ ಯಾವುದು, ಸಾವಿನ ಬಳಿಕ ಅವರೆಲ್ಲಿಗೆ ಹೋಗುತ್ತಾರೆ ಎಂಬುದು ನಿನಗೆ ತಿಳಿದಿರದಿದ್ದರೆ ನಿನ್ನ ವಿದ್ಯೆಯಿಂದ ಏನು ಪ್ರಯೋಜನ ಎಂದು ತಂದೆ ಒಬ್ಬ ತನ್ನ ಮಗನನ್ನು ಪ್ರಶ್ನಿಸುತ್ತಾನೆ. ಛಾಂದೋಗ್ಯ ಉಪನಿಷತ್ತಿನಲ್ಲಿ ಕಠೋಪನಿಷತ್ತಿನಲ್ಲಿ ಯಮನು ಜ್ಞಾನಾರ್ಥಿಯಾಗಿ ತನ್ನ ಬಳಿಗೆ ಬಂದ ನಚಿಕೇತನಿಗೆ ಅನೇಕಾನೇಕ ಲೌಕಿಕ ಆಸೆಗಳನ್ನು ತೋರಿಸುತ್ತಾನೆ. ಆಗ ಯಮನು ಹೇಳುತ್ತಾನೆ. ಎರಡು ಮಾರ್ಗಗಳಿವೆ. ಒಂದು ಸೇವಾ ಮಾರ್ಗ ಮತ್ತೊಂದು ತ್ರೇಯೋಮಾರ್ಗ. ಶ್ರೇಯಸ್ಸನ್ನು ವಿವೇಕಿಗಳು ಬಯಸುವರು; ಮುರ್ಖರು ಪ್ರೇಯಸ್ಸನ್ನು ಬಯಸವರು. ಅಪರಾವಿದ್ಯೆಯ ಫಲ ಪ್ರೇಯಸ್ಸಾದರೆ; ಪುಣ್ಯವಿದ್ಯೆಯ ಫಲ ಶ್ರೇಯಸ್ಸು"(ಎಂ.ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ೧೯೭೯, ಪು.೨೦೫).

"ಅಗ್ರಹಾರಗಳು ಕೇವಲ ಧಾರ್ಮಿಕ ಚಟುವಟಿಕೆಗಳ ಕೇಂದ್ರಗಳಾಗಿರದೇ ಅನೇಕ ಧಾರ್ಮಿಕ, ಸಾಮಾಜಿಕ ಕಾರ್ಯಾಗಾರಗಳಾಗಿದ್ದು. ಅಗ್ರಹಾರಗಳು ಸ್ವತಂತ್ರ ರಾಜಕೀಯ ಆಡಳಿತವನ್ನು ಹೊಂದಿದ್ದು, ಆ ನಾಡಿನ ಮಹಾಪ್ರಧಾನ ದಂಡನಾಯಕ ಅಥವಾ ಸಮಂತಾಧಿಪತಿಯ

ಮೇಲ್ವಿಚಾರಣೆಯಲ್ಲಿ ಇರುತ್ತಿದ್ದವು. ಇವುಗಳ ತೆರಿಗೆಗಳನ್ನು ಹಾಕುವುವು ಸಂಗ್ರಹಿಸುವುದು ಮತ್ತು ಸಂಗ್ರಹಿಸಿದ ತೆರಿಗೆಗಳನ್ನು ಧರ್ಮಕಾರ್ಯಗಳಿಗಾಗಿ ಅಗ್ರಹಾರದ ಅಭಿವೃದ್ಧಿಗಾಗಿ ಕೆರೆ, ಕಟ್ಟೆಗಳನ್ನು ನಿರ್ಮಿಸುವುದು. ದೇವಾಲಯಗಳಿಗೆ ದಾನದತ್ತಿಗಳನ್ನು ನೀಡುವುದು ಇಂತಹ ಮೊದಲಾದ ಕಾರ್ಯಗಳಿಗೆ ವಿನಿಯೋಗಿಸುತ್ತಿದ್ದರು. ಸಾಮಾನ್ಯವಾಗಿ ಅಗ್ರಹಾರಗಳನ್ನು ಮಹಾಜನರೇ ನೋಡಿ ಕೊಳ್ಳುತ್ತಿದ್ದರು. ಮಹಾಜನಗಳು ಇಲ್ಲಿನ ಎಲ್ಲ ವಿಧದ ಧಾರ್ಮಿಕ, ಸಾಮಾಜಿಕ, ಆರ್ಥಿಕ ಹಾಗೂ ಸಾಂಸ್ಕೃತಿ ಚಟುವಟಿಕೆಗಳ ಮೇಲ್ವಿಚಾರಣೆಯನ್ನು ಮಾಡುತ್ತಿದ್ದರು(ಡಾ.ಡಿ.ಎಂ.ನಾಗರಾಜ, ಪು.೧೪೯). ಅಗ್ರಹಾರಗಳ ನಿರ್ವಹಣೆಗಾಗಿ ರಾಜರು, ದಂಡನಾಯಕರು ಅಲ್ಲಿಯ ಗಾವುಂಡರು, ಉದಾರವಾದ ದತ್ತಿ ನೀಡುತ್ತಿದ್ದರು. ಅವುಗಳಿಂದ ಅಗ್ರಹಾರದ ಮಹಾಜನರ ಜೀವನ ಸಾಗಿಸುತ್ತಿದ್ದರು. ಇವರು ಆ ಪ್ರದೇಶದ ಹಿತಕಾಯುವಲ್ಲಿ ಶ್ರಮಿಸುತ್ತಿದ್ದರು.

"ಅಗ್ರಹಾರವನ್ನು ದಾನವಾಗಿ ಪಡೆದ ಬ್ರಾಹ್ಮಣರೇ 'ಮಹಾಜನ'ಗಳು. ಅವರೇ ಆ ಅಗ್ರಹಾರದ ಪ್ರಭುಗಳು. ಮಹಾಜನಗಳು ಬ್ರಾಹ್ಮಣರೇ ಆಗಬೇಕಿಲ್ಲವೆಂದೂ ಮಹಾಜನಗಳಲ್ಲಿ ಬ್ರಾಹ್ಮಣೇತರರು ಕಡಿಮೆ ಸಂಖ್ಯೆಯಲ್ಲಾದರೂ ಇದ್ದಿರಬಹುದೆಂದು ಡಾ.ಅಲ್ಟೇಕರರು ಅಭಿಪ್ರಾಯ ಪಟ್ಟು ಕೆಲವು ಶಾಸನಗಳನ್ನು ಉದಾಹರಿಸುತ್ತಾರೆ. ಆರೆ ಆ ಶಾಸನಗಳನ್ನು ಅವರು ಸರಿಯಾಗಿ ಅರ್ಥಮಾಡಿಕೊಂಡಿಲ್ಲವೆಂಬುದು ಸ್ಪಷ್ಟ ಮಹಾಜನಗಳನ್ನು ಹೆಸರಿಸುವಾಗಲೆಲ್ಲ ಅವರಿಗೆ ಕೊಟ್ಟಿರುವ ವಿಶೇಷಣಗಳನ್ನು ನೋಡಿದರೆ ಅವರು ಬ್ರಾಹ್ಮಣರೇ ಹೊರತು ಬೇರೆ ಯಾರೂ ಅಲ್ಲ ಎಂಬುದು ಸ್ಪಷ್ಟವಾಗುತ್ತದೆ(ಡಾ.ಎಂ.ಚಿದಾನಂದಮೂರ್ತಿ, ೨೦೧೧, ಸ್ವಸ್ತಿಯಮನಿಯಮ ಸ್ವಾಧ್ಯಾಯ ಧ್ಯಾನ ಮೋನಾನುಷ್ಠಾಣ ಪರಾಯಣ ಜಪ ಸಮಾಧಿ ಶೀಳ ಸಂಪನ್ನರ್).

ಹೀಗೆ ರಾಜ ಪೂಜಿತ ಅಗ್ರಹಾರಗಳು, ಬ್ರಹ್ಮಪುರಿ, ಘಟಿಕಾಸ್ಥಾನ, ದೇವಾಲಯಗಳು ಅಂದಿನ ಸಮಾಜದಲ್ಲಿ ಉಚ್ಚ ಮತ್ತು ಪವಿತ್ರ ಸ್ಥಾನ ಪಡೆದಿದ್ದವು. ರಾಜರು ಈ ಮೇಲಿನ ಎಲ್ಲ ಸಂಸ್ಥೆಗಳಿಗೆ ಉದಾರವಾದ ದಾನ-ದತ್ತಿಗಳನ್ನು ನೀಡಿ ಸಾಕಿ ಪೋಷಿಸುತ್ತಿದ್ದರು. ಅಗ್ರಹಾರದಲ್ಲಿರುವ ಮಹಾಜನರು ರಾಜಗುರುವಿನ ಹಾಗೆ ಊರಿನ ಒಡೆಯರ ಹಾಗೆ ಮಾರ್ಗದರ್ಶನ ನೀಡುತ್ತಿದ್ದರು. ಬ್ರಹ್ಮಪುರಿಗಳು, ಇವು ಬ್ರಹ್ಮಣರ ಓಣಿಯಾಗಿತ್ತು. ಇಲ್ಲಿ ಸಾಮಾನ್ಯವಾಗಿ ಬ್ರಾಹ್ಮಣರು ವಾಸಿಸುತ್ತಿದ್ರು, ಇವು ವೇದಾಧ್ಯಯನ, ಜಪ, ತಪ, ಪ್ರದೇಶದ ಪುರೋಹಿತರಾಗಿ ಸೇವೆ ಸಲ್ಲಿಸುತ್ತಿದ್ದರು. ಘಟಿಕಾಸ್ಥಾನಗಳು ಅಂದಿನ ಶ್ರೇಷ್ಠ ವಿದ್ಯಾಲಯಗಳಾಗಿದ್ದವು. ಇವು ಅನೇಕ ಪ್ರಕಾರದ ವಿದ್ಯಾಗಳಾದ ವೇದ, ಶಾಸ್ತ್ರ, ನಿಘಂಟು, ವ್ಯಾಕರಣ, ಆಗಮಿಕ, ಉಪನಿಷತ್ತು, ವೈದ್ಯ ಇತ್ಯಾದಿ ವಿಷಯಗಳ ಕುರಿತು ಶಿಕ್ಷಣ ನೀಡುವ ಕಾರ್ಯದಲ್ಲಿ ನಿರತವಾಗಿದ್ದವು. ಇಲ್ಲಿಯ ಅಭ್ಯಾಸಿಗರಿಗೆ, ಬೋಧಕರಿಗೆ, ಅಲ್ಲಿರುವ ಇನ್ನಿತರ ಸಿಬ್ಬಂದಿಗಳಿಗೆ ಅಂದಿನ ಆಳರಸರು ದತ್ತಿ ನೀಡಿ ಅವುಗಳನ್ನು ಪುರಸ್ಕರಿಸುತ್ತಿದ್ದರು.

ಒಟ್ಟಾರೆಯಾಗಿ ಈ ಮೇಲಿನ ಎಲ್ಲ ಸಂಸ್ಥೆಗಳು ವಿದ್ಯಾಭ್ಯಾಸಕ್ಕೆ ಹೆಚ್ಚಿನ ಒತ್ತು ಮತ್ತು ದೇವಾಲಯಗಳ ಸಂಕರಕ್ಷಣೆ ಹಾಗೂ ಅದರ ಕಾರ್ಯನಿರ್ವಹಿಸುವ ಕೆಲಸಗಳು ಮಾಡುತ್ತಿದ್ದವೆಂದು ಹೇಳಬಹುದು.

ಮಧ್ಯಯುಗದಲ್ಲಿಯೂ ಶಿಕ್ಷಣವು ಸಾರ್ವತ್ರಿಕವಾಗಿರಲಿಲ್ಲ; ಧಾರ್ಮಿಕ ಪರಿಸರದಲ್ಲೇ ಬೆಳೆದುಕೊಂಡು ಬಂತು. ಇದಕ್ಕೆ ಯಾವುದೇ ಸರ್ಕಾರ ಅಥವಾ ರಾಜಕೀಯ ನಿಯಂತ್ರಣವೂ ಇರಲಿಲ್ಲ. ಮಠಮಾನ್ಯಗಳೇ ತಮ್ಮ ಹಿಡಿತದಲ್ಲಿ ನಡೆಸಿಕೊಂಡು ಬಂದವು. ಹೀಗಾಗಿ ಆಗಲೂ ಕೆಲವೇ ಕೆಲವು ವರ್ಗದ ಜನರಿಗೆ ಶಿಕ್ಷಣ ಸೀಮಿತವಾಗಿತ್ತು. ಇಂದಿನ ಹಾಗೆ ಸಾರ್ವತ್ರಿಕ ಲೌಕಿಕ ಶಿಕ್ಷಣದ ಉದ್ದೇಶಗಳಿರಲಿಲ್ಲ. ಅದು ಏನಾದರೂ ಇದ್ದರೆ ಧಾರ್ಮಿಕ ಅಥವಾ ಸಂಪ್ರದಾಯ ನಿಷ್ಠವಾಗಿ ಮಾತ್ರವೇ ಇತ್ತು. ಈ ಶಿಕ್ಷಣ ಕೇಂದ್ರಗಳು ಧಾರ್ಮಿಕ ಸಂಸ್ಥೆಯ ನೇರ ನಿಯಂತ್ರಣಕ್ಕೆ ಒಳಪಟ್ಟಿದ್ದವು. ಇವುಗಳಿಗೆ ಅರಸರಿಂದ, ರಾಣಿಯರಿಂದ, ಮಹಾಮಂಡಳೇಶ್ವರರಿಂದ, ಸಾಮಂತರಿಂದ ಮತ್ತು ಊರಿನ ಗಾಮುಂಡರಿಂದ ಮತ್ತಿತರರಿಂದ ದಾನದತ್ತಿಗಳ ರೂಪದಲ್ಲಿ ಕೊಡುಗೆ ನೀಡಲಾಗುತ್ತಿತ್ತು. ಅಗ್ರಹಾರಗಳು, ದೇವಸ್ಥಾನಗಳು, ಮಠಗಳು, ಬ್ರಹ್ಮಪುರಿಗಳು, ಘಟಿಕಾಸ್ಥಾನಗಳು ಇತ್ಯಾದಿಗಳಷ್ಟೇ ಶಿಕ್ಷಣಕೇಂದ್ರಗಳಾಗಿದ್ದವು.

ಅಗ್ರಹಾರಗಳು

"ಕರ್ನಾಟಕದಲ್ಲಿ ಅಗ್ರಹಾರ ಪದ್ಧತಿ ಪ್ರಾರಂಭವಾದುದು ಕದಂಬರ ಕಾಲದಲ್ಲಿ. ಬಹುಶ: ಕರ್ನಾಟಕದ, ಪ್ರಥಮ ಅಗ್ರಹಾರ ತಾಳಗುಂದವಾಗಿದ್ದು, ಮಯೂರವರ್ಮನೇ ಇದರ ಸಂಸ್ಥಾಪಕನೆಂದು ತಿಳಿದುಬರುತ್ತದೆ". ಅಗ್ರಹಾರವನ್ನು ಬ್ರಹ್ಮವಿದ್ಯೆಯನ್ನು ಬಲ್ಲ ಬ್ರಾಹ್ಮಣರಿಗೆ ಬಿಟ್ಟುಕೊಡಲಾಗುತಿತ್ತು. ಅವರು ಈ ಅಗ್ರಹಾರದಿಂದ ಬಂದ ಆದಾಯವನ್ನು ಬಳಸಿಕೊಂಡು, ತಮ್ಮ ಜೀವನ ನಡೆಸುತ್ತಾ ವಿದ್ಯೆಯನ್ನು ಅಧ್ಯಯನ ಅಧ್ಯಾಪನಗಳಲ್ಲಿ ತೊಡಗಿಕೊಳ್ಳುತ್ತಿದ್ದರು. ಈ ಅಗ್ರಹಾರದಲ್ಲಿ ಬ್ರಾಹ್ಮಣರಲ್ಲದೆ ಇತರ ಸಮುದಾಯದ ಜನರೆಲ್ಲ ವಾಸಿಸುತ್ತಿದ್ದರು. ಆದರೆ ತಮಗೆ ಸರ್ವನಮಸ್ಯವಾಗಿ ರಾಜರು ಅಥವಾ ಊರಿನ ಗಾಮುಂಡರು ದಾನದತ್ತಿಯ ರೂಪದಲ್ಲಿ ನೀಡಿದ ಈ ಆಸ್ತಿಯು ಈ ಅಗ್ರಹಾರದ ಬ್ರಾಹ್ಮಣ ವರ್ಗದವರಿಗೆ ಸೇರಿರುತ್ತಿತ್ತು.

ಕ್ರಿ.ಶ.೧೧೮೨ರ ಬೀದರ ಜಿಲ್ಲೆಯ ಗೋರ್ಟಾ ಶಾಸನ ಕಲ್ಯಾಣ ಚಾಲುಕ್ಯದೊರೆ ತ್ರಿಭುವನ ಮಲ್ಲದೇವನನ್ನು ಉಲ್ಲೇಖಿಸುತ್ತದೆ. ಈತನು ಸದ್ಗುರುವಾಗಿ ಶ್ರೇಷ್ಠ ವ್ಯಕ್ತಿ ರುದ್ರಮಿಶ್ರನಿದ್ದ. ಈತನು ವಸಿಷ್ಟ ಋಷಿಯ ವಂಶಸ್ಥನಾಗಿದ್ದನು. ಈತನು ಅನೇಕ ಯಜ್ಞಗಳನ್ನು ಮಾಡಿಸಿದನೆಂದು ಶಾಸನದಲ್ಲಿ ಉಲ್ಲೇಖಿಸಿದೆ. ಇಂತಹ ರುದ್ರಮಿಶ್ರನಿಗೆ ಕಾರ್ತಿಕಮಾಸದ ಸಂದರ್ಭದಲ್ಲಿ

ತ್ರಿಭುವನಮಲ್ಲನು ಹಲವು ಧರ್ಮಕಾರ್ಯಗಳನ್ನು ಮಾಡಿಸಿದನು. ಅದರಲ್ಲಿ ದಕ್ಷಣೆಯಾಗಿ ಈ ರುದ್ರಮಿಶ್ರ ಗುರುವಿಗೆ ಅಟ್ಟಳೆ ನಾಡಿನ ಕಂಪಣದ ಭಲುಂಕೆಯ ಎಂಭತ್ನಾಲ್ಕರ ಬಳಿ ಬಾಡ ಹುಲಿಚೆರು ಗ್ರಾಮವನ್ನು ತ್ರಿಭೋಗಾಭ್ಯಂತರ ಸಹಿತಂ ಪೂರ್ವಪ್ರಸಿದ್ಧಿ ಪಡೆದ ಅಗ್ರಹಾರ ಗೋರಂಟೆಯಲ್ಲಿ ಮಾಡಿಸಿದ ಶ್ರೀ ರುದ್ರೇಶ್ವರ ದೇವರಿಗೆ ಅಂಗ ಭೋಗಕ್ಕಂಗೀತ, ವಾದ್ಯ ನೃತ್ಯಕಂ ಪಾದಮೂಲ ಪರಿವಾರಕ್ಕೂ, ಅಲ್ಲಿಯ ತಪೋನಿರತ ಉಪಾಧ್ಯಯರಿಗೂ, ಅಲ್ಲಿಯ ಛಾತ್ರ ರಚನಾಚ್ಛಾದನಕಂ ಜೀರ್ಣೋದ್ಧಾರಕ್ಕೂ ದತ್ತಿ ನೀಡಿದನೆಂದು ಹೆಸರಿಸಿದೆ(ಕ.ವಿ.ಶಾ.ಸಂ.೮, ಪು.೬೫)

ಅದೇ ಜಿಲ್ಲೆಯ ಚಂದಾಪೂರ ಶಾಸನವು ಕ್ರಿ.ಶ.೧೧೧೨ರಲ್ಲಿ ಚಾಲುಕ್ಯದೊರೆ ತ್ರಿಭುವನಮಲ್ಲ ದೇವನು ಜಯಂತಿಪುರದಿಂದ ರಾಜ್ಯ ಮಾಡುವಾಗ ಅಲ್ಲಿಯ ಸರ್ವನಮಸ್ಯದ ಅಗ್ರಹಾರಕ್ಕೆ ಚಂದವಾರಿಯ ಜಂಜರಾ ತೀರದಲ್ಲಿ ಶ್ರೀ ಭೋಗೇಶ್ವರ ದೇವರಿಗೆ ಪ್ರತಿಷ್ಠಾಪನೆ ಮಾಡಿ, ಅಲ್ಲಿಯ ಮಹಾಜನರ ಭೂದತ್ತಿ ನೀಡಿದನೆಂದು ತಿಳಿಸಿದೆ(ಅದೇ, ಪು.೧೧೫-೧೧೬).

ಕ್ರಿ.ಶ.೧೨೬೮ ಕೊಪ್ಪಳದ ಅಳವಂಡಿ ಶಾಸನವು ಅಲ್ಲಿ ಅಗ್ರಹಾರದ ಬಗ್ಗೆ ಹೀಗೆ ವರ್ಣಿಸಿದೆ. "ಭರತಮಹೀವಧೂ ರಚಿರ ಕುಂತಳದಂದ ದಿನಿಪ್ಪ ಕುಂತಳೇರ್ವ್ವರೆಯ ವಿಭೂಷಣಾಕೃತಿಯೊಳೊಪ್ಪುವದೆಕ್ಕಲವಾಡದ ಮಹೀಗುರು ಕುಚದಗ್ರಹಾರಮೆನೆ ರಂಜಿಸುವ ಸರಳಾಗ್ರಹಾರ ಶೇಖರ ರಮಣೀಯರತ್ನಮಳವಿಂಡಿ ಸಮಸ್ತ ಧರಾ ವಿಭಾಗದೊಳು" ...ತಾನೆನಿಪ ಮಹಾಗ್ರಹಾರಮಳವಿಂಡಿಯದೊಪುವರೆಂತು ನೋರ್ಪಡೆ, ಸಕಳ ವ್ಯಾಕರಣಾಗಮ ಸ್ಮೃತಿ ಪುರಾಣಾಗಮ ಶಾತ್ತರ್ಕ ನಾಟಕ ಕಾವ್ಯಜ್ಞ ಚತುರ್ಮ್ಮುಖರ್ಕ್ಕ ತಮರಖರ್" ಎಂದು, ಈ ಅಗ್ರಹಾರವು ಈ ಭಾಗದ ಎಲ್ಲ ಅಗ್ರಹಾರಗಳಿಗೆ ಶೇಕರ ರಮಣಿರತ್ನವಾಗಿತ್ತು. ಇಲ್ಲಿ ವ್ಯಾಕರಣ, ಆಗಮ, ಸ್ಮೃತಿ, ಪುರಾಣಗಳು ಆರುತರ್ಕಗಳು, ನಾಟಕ, ಕಾವ್ಯ ಇತ್ಯಾದಿ ವಿಷಯಗಳನ್ನು ಬೋಧಿಸಲಾಗುತ್ತಿತ್ತು ಎಂದು ಉಲ್ಲೇಖಿಸಿದೆ(ಕ.ವಿ.ಶಾ.ಸಂ.೨, ಪು.೧೮).

ಕ್ರಿ.ಶ.೧೧೫೪ರ ಮುಧೋಳು ಶಾಸನವು ಅಲ್ಲಿಯ ಮಹಾಗ್ರಹಾರದ ಒಂದು ಮಹಾಜನರ ಬಗ್ಗೆ ಉಲ್ಲೇಖಿಸುತ್ತದೆ. ಇವರನ್ನು ಬಹುಸುಂದರವಾಗಿ ಈ ಶಾಸನವು ವರ್ಣಿಸಿದೆ. ಅಗ್ರಹಾರಕ್ಕೆ ಚಾಲುಕ್ಯದೊರೆ ತ್ರೈಲೋಕ್ಯಮಲ್ಲನು, ಅಲ್ಲಿಯ ಅಗ್ರಹಾರ ಗವರೇಶ್ವರ ದೇವರಿಗೆ ವ್ಯಾಪಾರಿ ಐಹೊಳೆ ಐನೂರರು, ಸಮಸ್ತ ಮುಮ್ಮರಿದಂಡರು, ನಾನಾದೇಶಿಗಳು, ಜನ ಸಾಮನ್ಯರು, ಚಿಕ್ಕ ಪುಟ್ಟ ಕುಲಕಸುಬುದಾರರು ಈ ಅಗ್ರಹಾರದ ಗವರೇಶ್ವರ ದೇವರ ಅಂಗಭೋಗ, ರಂಗಭೋಗಕ್ಕಾಗಿ ಉದಾರವಾದ ದತ್ತಿ ಬಿಡುತ್ತಾರೆ. ಇಲ್ಲಿಯ ಮಹಾಜನಗಳ ಬಗ್ಗೆ ಶಾಸನ ಹೀಗೆ ವರ್ಣಿಸಿದೆ.

"ಸ್ವಸ್ತಿಯಮನಿಯಮಸ್ವಾಧ್ಯಾಯ ಧ್ಯಾನಧಾರಣ ಮಾನಾನುಷ್ಠಾನ ಪಾರಾಯಣ ಜಪ ಸಮಾಧಿ ಶೀಳಸಂಪನ್ನರು, ಪನ್ನಗಸಯನ ಪದ ಕಮಳಾರಾಧಿತೋತ್ಪನ್ನರು ಷಟ್ಕರ್ಮ್ಮನಿರತರು ಸಪ್ತಸೋಮ ಸಂಸ್ಥಾವಭೃತಾವಗಾರ್ಹನ ಅತಿಥಿಯ ಭ್ಯಾಗತ ವಿಶಿಷ್ಟ ಜನ ಪೂಜೋತ್ಸಾಹರು, ಆಶ್ರೀತ ಜನ ಕಲ್ಪವೃಕ್ಷರು ಶರಣಾಗತ ವಜ್ರಪಂಜರರು ಮನ್ನೆಯಪಂನೆಗ ವೈನತೇಯರು ತೊರಪ ವಿಂಧ್ವಂಶಕರು ದುಷ್ಟನಿಗ್ರಹ ಶಿಷ್ಟ ಪ್ರತಿಪಾಳಕರು ಏಕೈಕ ಪಂಡಿತರು ಕಲಿಯುಗ ರಾಮರು, ಏಕವಾಕ್ಯರು..... ಹೀಗೆ ಅವರನನು ವರ್ಣಿಸಿದೆ. ಈ ಮೇಲಿನ ವ್ಯಕ್ತಿತ್ವ ಇರುವುದರಿಂದಲೇ ಅಲ್ಲಿಯ ದೊರೆಯಾದಿಯಾಗಿ ಜನಸಾಮಾನ್ಯರು ಅವರಿಗೆ ದಾನ–ದತ್ತಿ ನೀಡಿದ್ದನ್ನು ಕಂಡುಬರುತ್ತದೆ (ಅದೇ, ಪು.೧೮೬).

ಕ್ರಿ.ಶ.೧೧೧೯ ತೆಲಂಗಾಣದ ನೆಲ್ಗೊಂಡ ಜಿಲ್ಲೆಯ ಪೇರೂರು ಶಾಸನವು ಚಾಲುಕ್ಯ ದೊರೆ ತ್ರಿಭುವನಮಲ್ಲನು ಅಂಗದಹಾಳಿನಿಂದ ಆಳುತ್ತಿರುವಾಗ ಆತನ ಮಹಾಮಂಡಳೇಶ್ವರ ಕುಮಾರನ ತೈಲಪನು ಕಂದೂರಿನ ೧೦೦೦ ದಿಂದ ಆಳುತ್ತಿರುವಾಗ ಅಲ್ಲಿನ ಮಾಂಡಳೀಕರ ಕೋರಿಕೆ ಮೇರೆಗೆ ಕುಮಾರ ತೈಲಪನು ಸೂರ್ಯಗ್ರಹಣದಂದು ಉರಿಯಯೆಪ್ಪತ್ತರ ಬಳಿಯ ಪೇರೂರಿನ ಶ್ರೀ ಸ್ವಯಂಭು ಸೋಮೇಶ್ವರ ದೇವರಿಗೆ ಅಂತ–ಭೋಗ, ಧೂಪ ದೀಪಕ್ಕಾಗಿ ಮತ್ತು ಅಲ್ಲಿಯ ಮಹಾಜನಕ್ಕೆ ಒಂದು ಭಾಗ, ಒಂದು ಭಾಗವಾಗಿ ಪೇರೂರಿನ ಪ್ರತಿಬದ್ದಂ ತಾಳಿಮಟ್ಟ ಅಗ್ರಹಾರವು ಧಾರಾಪೂರ್ವಕವಾಗಿ ಕೊಟ್ಟರೆಂದು ಉಲ್ಲೇಖಿಸುತ್ತದೆ(ಕ.ವಿ.ಶಾ.ಸಂ.೫, ಭಾಗ ೨, ಪು.೨೧೨).

ಕ್ರಿ.ಶ.೧೧೧೯ರ ಕೊಲನುಪಾಕ ಶಾಸನವು ಚಾಲುಕ್ಯದೊರೆ ತ್ರಿಭುವನಮಲ್ಲನು ಆಳುತ್ತಿರುವಾಗ ಆತನ ದಂಡನಾಯಕ ಲೆಕ್ಕಪಯ್ಯನ ಕೋರಿಕೆಯಂತೆ ಮತ್ತು ಚಕ್ರವರ್ತಿಯ ಆಜ್ಞೆಯಂತೆ ಅಲ್ಲಿಯ ಸೋಮೇಶ್ವರ ರಂಗಭೋಗ ಮತ್ತು ಅಂಗಭೋಗಕ್ಕಾಗಿ, ಕಲ್ವಚೆಡ್ಲ ನಾಲವತ್ತರ ಬಳಿ ಸೋಮನಾಥಭಟ್ಟರ ಪ್ರಭುತ್ವದ ಅಗ್ರಹಾರ ತಾಂಡಿಪಾಮುಲಂಕಂ ಚೆನಿಂಚೆಗೆ ದಾನ ನೀಡಿ ಅಂಶಗಳು ಕಂಡು ಬರುತ್ತವೆ(ಅದೇ, ಪೂರ್ವೋಕ್ತ, ಪು.೨೪೮).

ರಾಯಚೂರು ಜಿಲ್ಲೆಯಲ್ಲಿ ಬಳ್ಳಟಗಿ, ಬೆಳಗುರ್ಕಿ, ತಡಕಲ್, ಬನ್ನಿಗೊಳ್, ಮುಕ್ಕುಂಡಿ, ಕಲ್ಲೂರು, ಸಾಲಿಗುಂದೆ, ಗಬ್ಬೂರು ರೂಢಿ ರಾರಾವಿ, ಹಿರಿಯಬಳಗಾನೂರು, ಕೊಟ್ಟು ಕುಣಿಹೆ ಕಂಡು ಬರುವ ಶಾಸನೋಕ್ತ ಅಗ್ರಹಾರಗಳಾಗಿವೆ. ಇವುಗಳಲ್ಲಿ ಸರ್ವನಮಸ್ಯದ ಅಗ್ರಹಾರಗಳೆಂದು ಖ್ಯಾತಿ ಪಡೆದವು. ಮುಕ್ಕಂಡಿ, ಕಲ್ಲೂರು, ಗಬ್ಬೂರು ರೂಢಿ, ರಾರಾವಿ, ಹಿರಿಯ ಬಳಗಾನೂರು ಕೊಟ್ಟು ಕುಣಿಹೆ ಪ್ರಮುಖವಾಗಿದ್ದವು.

ಕ್ರಿ.ಶ.೯೨ರ ಬೆಳಗುರ್ಕಿ ಶಾಸನ ಅಲ್ಲಿಯ ಸಂಕ್ರಾಂತಿ ನಿಮಿತ್ತದಂದು ಮನ್ನೆವೆರ್ಗಡೆ ವಿದ್ದಮಯ್ಯನು ಬೇಡಿಕೆಯಂತೆ ಕುದಿಯಪರ್ವಿ-೨೦ರಲ್ಲಿದ್ದ ಬೆಳಗುರ್ಕಿಯು ಅಗ್ರಹಾರ ಮಾಡಿ, ದಾರಾಪೂರ್ವಕವಾಗಿ ತೋಟ, ಕ್ರಯದಾನ ಅಲ್ಲಿಯ ಮಹಾಜನರಿಗೆ ನೀಡಲಾಯಿತು ಎಂದು ಉಲ್ಲೇಖಿಸಿದೆ.

ಕ್ರಿ.ಶ.೧೦೪೬ರ ಬನ್ನಿಗೊಳ ಶಾಸನವು ಅಲ್ಲಿಯ ಆಳ್ವಿಕೆ ಮಾಡುತ್ತಿರುವ ಚಾಲುಕ್ಯ ಜಯಸಿಂಹನು ಕರಡಿಕಲ್ಲು-೨೦೦ರ, ಅಗ್ರಹಾರ ಬನ್ನಿಗೊಳದ ಭೋಗೇಶ್ವರ ದೇವರಿಗೆ ತ್ರಿಭೋಗಾಭ್ಯಂತರವಾಗಿ ಅಲ್ಲಿಯ ದೇವಸಿಂಘ ಭಳಾರರ್ಗ್ಗೆ ಧಾರಾಪೂರ್ವಕವಾಗಿ ಭೂದತ್ತಿ ನೀಡುತ್ತಾನೆ.

ಕ್ರಿ.ಶ.೧೧೦೫ರ ಕೊಪ್ಪಳದ ಕುಕ್ಕನೂರು ಶಾಸನವು ಅಲ್ಲಿಯ ಸರ್ವ ನಮಸ್ಯ ಅಗ್ರಹಾರದ ಬಗ್ಗೆ ಉಲ್ಲೇಖಿಸಿದೆ. ಚಾಲುಕ್ಯದೊರೆ ಜಗದೇಕಮಲ್ಲನ ರಾಜ್ಯಭಾಗರದಲ್ಲಿ ಕುಂತಳದೇಶದ ಬೆಳ್ವಲದ ನಾಡಿನಲ್ಲಿ ಕುಕ್ಕನೂರು-೩೦ ಇತ್ತು. ಅದಕ್ಕೆ ಕುಕ್ಕನೂರು ಅಗ್ರಹಾರವು ಮುಖ್ಯ ಕೇಂದ್ರವಾಗಿತ್ತು. ಈ ಕುಕ್ಕನೂರಿನಲಿ ೪೮ ಕೇರಿಗಳಿದ್ದವು. ಈ ಪ್ರದೇಶವು "ಪಲವುಂ ಮಂಟಪದಿಂದ ದೇಗುಲದಿಂದ ಪುಣ್ಯಥಿಯಂ ಚೌವಟದಿಂಸಲೆ ವೇದ ಪಾಠದಿಂದಂ ಫಲತೆರದಿಂ ಕುಕ್ಕನೂರು ತೆಲ್ವಂ ತಳೆಗುಂ" ಎನೆ ನೆಗಳ್ದಗ್ರಾಹಾರದೊಳುದಗ್ರಣಿಗಳು ಸಮವಾಪ್ತ ಶಾಸ್ತ್ರಸಜ್ಜನರನವದ್ಯರರ್ತ್ಥಿಜನ ಕಳ್ಪಕುಜರ್ಕ್ಕವಿತಾ ಮಹಾರ್ಣ್ಣವರ್ಮ್ಮನು ಚರಿತರ್ಸ್ಸಮಸ್ತ ಬುಧಸಂಸ್ತುರೆಂದು ಮಹಾಜನಂಗಳಂ" ಎಂದು ಶಾಸನವು ಅಲ್ಲಿಯ ಮಹಾಜನಗಳ ಷಟಕರ್ಮಗಳ ಬಗ್ಗೆ ತಿಳಿಸುತ್ತದೆ. ಅಲ್ಲಿ ವೇದಪಾಠಗಳು ಬೋಧನೆಯಿಂದ ಖ್ಯಾತಿ ಪಡೆದ ಅಗ್ರಹಾರವಾಗಿತ್ತೆಂದು ಹೇಳಬಹುದು(ಕ.ವಿ.ಶಾ.ಸಂ.೨, ಪು.೨೨೬-೨೨೭).

ಇದೇ ಜಿಲ್ಲೆಯ ಇಟಗಿಯ ಸರ್ವನಮಸ್ಯದ ಅಗ್ರಹಾರದ ಬಗ್ಗೆ ಶಾಸನ ಹೀಗೆ ಉಲ್ಲೇಖಿಸಿದೆ. ಚಾಲುಕ್ಯದೊರೆ ತ್ರಿಭುವನಮಲ್ಲದೇವನು ಅಗ್ರಹಾರ ಶ್ರೀ ಮಹಾದೇವೇಶ್ವರ ರಂಗಭೋಗ ಇತ್ಯಾದಿ ನಿರ್ವಹಣೆಗಾಗಿ ಸರ್ವನಮಶ್ಯವಾಗಿ ದತ್ತಿ ಬಿಟ್ಟಿರುತ್ತಾನೆ. ಮುಂದುವರೆದು ಅಲ್ಲಿಯ ಮಹಾಜನರು ನಾಲ್ಕನುರು, ಅವರ ಕರ್ತವ್ಯಗಳ ಬಗ್ಗೆ ವಿವರಿಸುತ್ತದೆ. "ಯಮನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೌನಾನುಷ್ಠಾನ, ಜಪ ಹೋಮ ಸಮಾಧಿ ಶೀಲಗುಣ ಸಂಪನ್ನರು ವಿಭುಧ ಪ್ರಸನ್ನರು, ಹಿರಣ್ಯಗರ್ಭ್ಭ ಬ್ರಹ್ಮಮುಖ ಕಮಳ ವಿನಿರ್ಗ್ಗತ ವೇದವೇದಾಂಗೋಪಾಂಗ, ಶ್ರೀತಿಸ್ಮೃತಿ, ಪುರಾಣ, ಷಡ್ದರ್ಶನ ಷಟ್‌ತರ್ಕ ಪ್ರವೀಣರು.... ಇತ್ಯಾದಿ ಅವರ ದಿನನಿತ್ಯದ ಕಾರ್ಯಗಳನ್ನು ವಿವರಿಸುತ್ತದೆ (ಅದೇ, ಪು.೨೬೭).

ಕ್ರಿ.ಶ.೧೧೯೭ರ ಕಲ್ಬುರ್ಗಿಯ ಹರಸೂರ ಶಾಸನವು ಅಲ್ಲಿಯ ಅಗ್ರಹಾರದ ಬಗ್ಗೆ ಉಲ್ಲೇಖಿಸುತ್ತದೆ. ಚಾಲುಕ್ಯ ದೊರೆ ಜಗದೇಕಮಲ್ಲನ ದಂಡನಾಯಕ ಬಮ್ಮಣಯ್ಯಂಗಳು, ಅಲ್ಲಿಯ

ಅಗ್ರಹಾರದ ಮಹಾಜನಗಳಿಗಾಗಿ ದತ್ತಿ ಬಿಟ್ಟಿದ್ದನೆಂದು ಉಲ್ಲೇಖಿಸಿ, ಅವರು ಸಮಸ್ತ ಶಾಸ್ತ್ರ ಪಾರಾಂಗತರಾಗಿದ್ದರೆಂದು, ಕೀರ್ತಿಯುತರು, ಪವಿತ್ರ ಕೃತ್ಯ ಎಸಗುವ ಅಲ್ಲಿಯ ಶ್ರೀಮತ್ಸರ್ವನಮಸ್ಯದ ಅಗ್ರಹಾರದ ಶಾಲೆಯ ಸೀಮೊಳದ ಶೇಷ ಮಹಜನಂಗಳು" ಎಂದು ವರ್ಣಿಸಿದೆ(ಹನುಮಾಕ್ಷಿ ಗೋಗಿ, ಕಲಬುರ್ಗಿ ಜಿಲ್ಲೆಯ ಶಾಸನಗಳು, ಪು.೧೦೮). ಕ್ರಿ.ಶ.೧೧೩೪ರ ರಾಯಚೂರು ಜಿಲ್ಲೆಯ ಕಲ್ಲೂರು ಶಾಸನವು ಚಾಲುಕ್ಯ ಚಕ್ರವರ್ತಿ ಭೂಲೋಕಮಲ್ಲನು ರಾಜ್ಯಭಾರ ಮಾಡುತ್ತಿರುವಾಗ ಆತನ ಮಹಾಮಂಡಳೇಶ್ವರನಾದ ಬೂಚಿದೇವರಸರು ಅಲ್ಲಿಯ ಸರ್ವನಮಸ್ಯರ ಅಗ್ರಹಾರದ ಕಲ್ಲೂರ ಅಶೇಷ ಮಹಾಜನಗಳ ಸಮಕ್ಷಮದಲ್ಲಿ ಶ್ರೀ ಸ್ವಯಂಭು ಮಾರಚೇಶ್ವರ ದೇವರ ರಂಗಭೋಗಕ್ಕೆ ವಿಕ್ರಮಾದಿತ್ಯಭಟ್ಟರ ಕೈಯಿಂದ ಬಿಟ್ಟ ಗೊಬ್ಬುರ ದಾರಿಯಲ್ಲಿ ದಶವಂದಾ ಭೂಂಇಯೊಳಗೆ ಹಿರಿಯ ಕೋಲಲು ಹನ್ನಿರ್ಮತ್ತರು ಕೆಯ್ಯಂ ಧಾರಾಪೂರ್ವಕವಾಗಿ ನೀಡಿದನೆಂದಿದೆ(ಕ.ವಿ.ಶಾ.ಸಂ.೭, ಪು.೭೮, ೮೦).

ಅದೇ ಜಿಲ್ಲೆಯ ಕ್ರಿ.ಶ.೧೦೬೩ರ ಸಾಲಿಗುಂದೆ ಶಾಸನವು ಅಲ್ಲಿಯ ನಿಟ್ಟರವೆಯ ಎಪ್ಪತ್ತರಲ್ಲಿದ್ದ ಅಗ್ರಹಾರವು ಶಾಶ್ವತ ನಿಳಯ ಕರಮಸೆದಿಕ್ಕು, ಅಗಣಿತಮೆನಲೊಪುವ ದೇವಗೇಹಾ ಶತ್ರ ಪ್ರಪಾವನೋದ್ಭತಟಾಕಾದಿಗಳಿಂದಮರಾವಲೆಗೆ ಮಿಗಿಲಾಗಿತ್ತು. ಕುಂದದ ಚೆಲ್ವ ಈ ನಾಡು" ಎಂದು ವರ್ಣಿಸಲಾಗಿದೆ(ಅದೇ, ಪು.೩೫೧). ಅದೇ ಜಿಲ್ಲೆಯ ಗೊಬ್ಬುರಿನ ಕ್ರಿ.ಶ.೧೧೦೩ರ ಶಾಸನವು ಅಲ್ಲಿ ಸರ್ವನಮಸ್ಯದ ಅಗ್ರಹಾರದ ಮಹಾಜನಗಳ ಕಾರ್ಯವೈಖರಿ, ಗುಣಗಳ ಬಗ್ಗೆ ಚಿತ್ರಿಸಿದೆ.

"ಸದುವಿನಯ ವೇದಪಾರಗರೊದವಿದ ಪರಮಾರ್ತ್ಥಸಕಳ
ಶಾಸ್ತ್ರಾಗಮದಿಂದ ಮುದಿಲೋದಿತ ಮಾಗಿರ್ಪರ್ಮ್ಮದದಿಂಗೊಬ್ಬುರ
ವಿಪ್ರ ಚೂಡಾಮಣಿಗಳು" ....ಇದು ವಿದ್ಯಾಕ್ಷೇತ್ರ ಲೋಕಕ್ಕಧಿಕ ಭುವನ
ವಿಖ್ಯಾತವೀ ಗೋಪುರಂ ತಾನಿದು ಪುಂಣ್ಯೋದಾನ ದಾನರುಹ ವಿಭೂಧ
ಜನೋವ್ವಂದಿ ವಿದ್ವಜನಂಗಳು ಮುದದಿಂದಾನಂದದಿಂದಂ
ಕೊಡುವರೊಲಿದು ಮಂತ್ರಾಕ್ಷರಂ ದೃಷ್ಟಿಯಿಂದಂ ಪದುಳಂ
ಚಂದ್ರಾರ್ಕಾತಾರಂನೆವುರಮಧಿಕ ಮತ್ಯೂರ್ಜ್ಜಿತಂ ಗ್ರಾಮರಾಜಂ"
ಸೊಗಯಿಸುತಿರ್ಕ್ಕುಮಿಂತು ನಡುನಾಡೊಳಗಯ್ಯಣವಾಡಿಯಲ್ಲಿ
ತಾಂ ಮಿಗಿಲೆನಿಪ್ಪ ಗೋಪೂರದ ವಿಪ್ರಜನಂಗಳ ವೇದಘೋಷ
ದಿಂ ಅಗನಿತಮಾನ ವದ್ಯ ಮಹಿಮೋಂನತಿ ಕೀತಿಯವಲ್ಲಿ
ನೋರ್ಪ್ಪಡಂ ಬಗೆಗೆಳ ನೀತಿಶಾಸ್ತ್ರಿ ಸಕಳಾಗಮ ಕೋವಿ–
–ದರೇಂ ಮಹಾತ್ಮರು"

ಇಂತಹ ವ್ಯಕ್ತಿತ್ವವುಳ ಅಲ್ಲಿಯ ಮಹಾಜನರಿಗೆ ಅಲ್ಲಿಯ ಗೊಬ್ಬುರ ಸೀಮೆಯ ಎಲ್ಲ ಜಾತಿಯ ಜನರು ತಾವು ನೊಗನಿಕ್ಕಿ ಉತ್ತು ಹರಗಿ ಬಿತ್ತಿ ಬೆಳೆದ ಆ ಹಿರಿಯ ಮಹಾಜನಗಳಿಗೆ ಸೂಡು ಜೋಳಮಂ ತೆತ್ತುಗೆಯ್ದುಂ... ಹೀಗಾಗಿ ತಾವು ಕಷ್ಟಪಟ್ಟು ಬೆಳೆದ ಜೋಳದ ಸೂಡು ಮೊದಲಾಗಿ ತಂದು, ದಿವ್ಯ ಮಹಾಜನಗಳಿಗೆ ಅಲ್ಲಿಯ ಸಮಸ್ತ ಜನ ತಂದು ಅರ್ಪಿಸುತ್ತಿತ್ತು. ಎಂದರೆ, ಅವರ ಕಾರ್ಯವೈಖರಿ, ವಿದ್ವತ್ತು, ಸಾಹಿತ್ಯದ ಪ್ರಸಾರ ಇತ್ಯಾದಿ ಕೆಲಸಗಳಿಂದ ಅವರು ಖ್ಯಾತಿ ಪಡೆದಿದರೆಂದು ತಿಳಿದುಬರುತ್ತದೆ(ಅದೇ, ಪೂರ್ವೋಕ್ತ, ಪು.೪೭-೪೯).

ಕ್ರಿ.ಶ.೧೧೮೦ರ ಯಾದಗೀರ ಜಿಲ್ಲೆಯ ಸುರಪುರನ ಮುದನೂರ ಶಾಸನವು ಅಲ್ಲಿ ಸರ್ವನಮಸ್ಯದ ಅಗ್ರಹಾರವು ದಕ್ಷಿಣ ವಾರಣಾಸಿಯಾಗಿತ್ತು ಎಂದು ಹೇಳಿ ಮತ್ತು ಅಲ್ಲಿಯ ಮಹಾಜನತೆ ಷಟ್‌ಕರ್ಮದ ಬಗ್ಗೆ ಉಲ್ಲೇಖಿಸುತ್ತದೆ. ಯಮ ನಿಯಮ ಸ್ವಾಧ್ಯಾಯ ಧ್ಯಾನಧಾರಣ ಲೋನಾನಷ್ಠಾಣ ಜಪಸಮಾಧಿ ಶೀಲಗುಣ ಸಂಪನ್ನರ್ ಸಮಸ್ತ ವಿದ್ವಜ್ಜನ ಪ್ರಸಂನ್ನರ್ ಯಜನ ಯಾಜನ ಅಧ್ಯಯನ ಅಧ್ಯಾಪನ ದಾನ ಪ್ರತಿ ಗ್ರಹ ಷಟ್ಕರ್ಮ, ನಿರತರ್...., ಅನೇಕ ತರ್ಕ್ಕ, ವ್ಯಾಕರಣ, ಕಾವ್ಯ, ನಾಟಕ, ವೇದಾಂತ ಸಿದ್ಧಾಂತಾಭಿಜ್ಞರುಂ. ಸಕಳಕಳಾ ವಿದ್ಯಾಧರರಪ್ಪ ಶ್ರೀರಾಮದತ್ತಿ ಸರ್ವ್ವನಮಶ್ಯದಗ್ರಹಾರಂ ದಕ್ಷಿಣ ವಾರಣಾಸಿ ಮುದಿನೀರೂ(ರೊ)ಡೆಯ ಪ್ರಮುಖ ಅಶೇಷ ಮಹಾಜನಾಂಗಳೈನೂರ್ವ್ವರು" ಎಂದು ತಿಳಿಸುತ್ತದೆ(ಹನುಮಾಕ್ಷಿ ಗೋಗಿ, ೧೯೯೫, ಸುರಪುರ ತಾಲೂಕಿನ ಶಾಸನಗಳು, ಪು.೧೫೦-೧೫೧). ಅದೇ ಜಿಲ್ಲೆಯ ಹಗರಟಗಿಯ ಅಗ್ರಹಾರವು "ಪಾಂಡವದತ್ತಿ" ಎಂದು ಖ್ಯಾತಿ ಪಡೆದುಕೊಂಡಿತ್ತು. ಈ ಶಾಸನವು ಕ್ರಿ.ಶ.೧೨೨೯ರ ಯಾದವ ದೊರೆ ಇಮ್ಮಡಿ ಸಿಂಗಣದೇವನ ಕಾಲದ್ದಾಗಿದೆ. ಈತನು ಅಲ್ಲಿಯ ಮಹಾಜನಗಳ ಉಪಭೋಗಕ್ಕಾಗಿ, ಸರ್ವನಮಸ್ಯವಾಗಿ ಷಟ್‌ಕರ್ಮ ನಿರತ ಮಹಾ ಜನತೆಗೆ "ಪಾಂಡವದತ್ತಿ" ನೀಡಲಾಗಿತ್ತು(ಅದೇ, ಪೂರ್ವೋಕ್ತ, ಪು.೧೯೦).

ಅಲ್ಲದೆ ಇದೇ ಜಿಲ್ಲೆಯ ವಿಕ್ರಮಪೂರ, ಹಗರಟಗೆ, ಏವೂರು, ಮುದಿನೀರ, ಹುಣಸಗಿ, ಕರಿಬಾಳ, ಶ್ರೇಷ್ಠ ಅಗ್ರಹಾರಗಳಾಗಿದ್ದವೆಂದು ಇಲ್ಲಿಯ ಶಾಸನಗಳಿಂದ ತಿಳಿದುಬರುತ್ತದೆ.

ಬೀದರ ಜಿಲ್ಲೆಯ ಚಿಲ್ಲರಿಗೆಯು ಸರ್ವನಮಸ್ಯದ ಅಗ್ರಹಾರವಾಗಿತ್ತೆಂದು ಜಿಲ್ಲೆಯ ಚಿಮಕೋಡ ಶಾಸನ ತಿಳಿಸುತ್ತದೆ. ಇಲ್ಲಿಯ ಅಷೇಷ ಮಹಾಜನಂಗಳ ಸನ್ನಿಧಾನದಲ್ಲಿ ಸಾತ ವಡ್ಡಿಯ ಪ್ರಭು ಸಹದೇವನು ಅಲ್ಲಿಯ ಎರಡು ಮತ್ತರು ಭೂಮಿಯನ್ನು ಮಾಡಿಕೊಂಡು ಶ್ರೀತ್ರಿಲೋಚನ ದೇವರಿಗೆ ಧಾರಾಪೂರ್ವಕವಾಗಿ ನೀಡಿದನೆಂದು ಉಲ್ಲೇಖಿಸಿದೆ. ನಾರಾಂಜಾ ನದಿಯ ದಡಮೇಲಿರುವ ಚಿಲ್ಲರಿಗೆ ಗ್ರಾಮವು ಅಂದು ಶ್ರೇಷ್ಠ ಅಗ್ರಹಾರವಾಗಿತ್ತೆಂದು ತಿಳಿದುಬರುತ್ತದೆ (ಕ.ವಿ.ಶಾಸಂ.೮, ಪೂರ್ವೋಕ್ತ, ಪು.೧೮೭).

ಅದೇ ಜಿಲ್ಲೆಯ ಕ್ರಿ.ಶ.೧೧೧೫ರ ಬರೂರು ಶಾಸನದಲ್ಲಿ ಮಹಾಜನರ ಬಹುವಾಗಿ ವರ್ಣಿಸಿ ಬಂದಿರುವುದರಿಂದ ಅದು ಕೂಡ ಒಂದು ಅಗ್ರಹಾರ ಇರಬಹುದೆಂದು ಹೇಳಬಹುದು (ಅದೇ, ಪು.೧೮೩).

ಅಗ್ರಹಾರಗಳು ಆ ಕಾಲದ ಸುಸಂಸ್ಕೃತ ಸಂಸತ್ತಿನ ಕೇಂದ್ರಗಳೆಂದು ಹೇಳಬಹುದು. ಅಗ್ರಹಾರಗಳಲ್ಲಿ ಅವುಗಳ ಪ್ರಾಮುಖ್ಯತೆಗಳಿಗನುಗುಣವಾಗಿ ಅವುಗಳನ್ನು ಬೇರೆ ಬೇರೆ ಭಾಗಗಳಾಗಿ ಮಾಡಲಾಗಿದೆ. ಅಂದರೆ ಅಗ್ರಹಾರ, ಪಿರಿಯ ಅಗ್ರಹಾರ, ಕಿರಿಯ ಅಗ್ರಹಾರ, ಮಹಾ ಅಗ್ರಹಾರ, ಅನಾದಿ ಅಗ್ರಹಾರ, ಪರಮೇಶ್ವರಿ ದತ್ತಿ ಅಗ್ರಹಾರ, ಉತ್ತಮದ ಅಗ್ರಹಾರ, ಶ್ರೀರಾಮದತ್ತಿ ಅಗ್ರಹಾರ ಇತ್ಯಾದಿಯಾಗಿ ಗುರುತಿಸಲಾಗಿದೆ(ಶಾಂತಕುಮಾರಿ ಎಸ್.ಎಲ್., ದಿ ಹಿಸ್ಟರಿ ಆಫ್ ಆಗ್ರಹಾರಸ್, ಕರ್ನಾಟಕ ೪೦೦-೧೩೦೦ ಎ.ಡಿ., ೧೯೮೬, ಪು.೨೪-೨೬)

ಕ್ರಿ.ಶ.೧೦೭೭ರ ಸೇಡಿಂಬದ ಶಾಸನವೊಂದು(ಹನುಮಾಕ್ಷಿ ಗೋಗಿ, ಕಲ್ಬುರ್ಗಿ ಜಿಲ್ಲೆ ಶಾಸನ ಸಂಪುಟ, ಪೂರ್ವೋಕ್ತ, ಪು.೪೯೩-೪೯೪)ಇಂತಹ ಅಗ್ರಹಾರದ ಮಹಾಜನರ ಕಾರ್ಯವೈಖರಿಯ ಬಗ್ಗೆ ಹೀಗೆ ಹೇಳುತ್ತದೆ:

ಅಂಬುಧಿ ಮೇರೆದಪ್ಪಿ ಕವಿದೀ ಧರೆಯಂ ಕಿಡಿಪಂದು ವಿಷ್ಣುವೀ
ಶಂ ಬೆರಸೀ ಜಗತ್ತ್ರಯಮುಮಂ ಬಸಿಱೊಳ್ನಿಲಿಸಿಟ್ಟು ಕಾವವೊ
ಲಿಂಬಳಿದಿರ್ದ್ದ ನಾಲ್ದೆಸೆಯ ನಾಡುಗಳಂ ಪೆಱಗಿಕ್ಕಿ ಕಾವ ಸೇ
ಡಿಂಬದ ವಿಪ್ರರೊಂದಳವನೇವೊಗಳ್ವೆಂ ಚಲದಂಕರಾಮರಂ ॥೧೯॥

ಯಮ ನಿಯಮ ಸ್ವಾಧ್ಯಾಯ ಧ್ಯಾನ ಧಾರಣ ಮೌನಾ ನುಷ್ಠಾನ ಪರಾಯಣ ಜಪ ತಪ ಸಮಾಧಿಶೀಳ ಗುಣ ಸಂಪನ್ನರುಂ। ನುಡಿದು ಮತ್ತೆನ್ನರುಂ। ವಿರೋಧಿ ಕುಳಾರಣ್ಯ ದಾವಪಾವಕರುಂ। ಚತುರ್ವ್ವೇದ ಪಾರಾವಾರ ಪಾರಗರುಂ। ಬಹುವಿಧ ವಚನರಚನಾಪ್ರವೀಣರುಂ। ಚತು[ಷ್ಷ]ಷ್ಠಿಕಳಾನ್ವಿತ ವಸುಮತೀಗೀ ರ್ವ್ವಾಣರುಂ ಹೇಮಕುಂಡಳಜ್ವಾಳಿನೀದೇವ್ಯಾಕರ್ಷಣರುಂ। ಸಮಸ್ತ ವಿದ್ಯಾ ವಿಶೇಷಣರುಂ। ಶರಣಾಗತವಜ್ರಪಂಜರರುಂ। ವೈರಿದಿಕ್ಕುಂಜರರುಂ। ಶ್ರೀ ನಾರಾಯಣದೇವ ಪಾದಪಂಕಜಭ್ರಮರರುಮಪ್ಪ ಶ್ರೀಮದನಾದಿಯಗ್ರಹಾರಂ ಸೇಡಿಂಬದಶೇಷ ಮಹಾಜನಂ ಮೂನೂರ್ವ್ವಸ್ವಾ[ಮಿ]ಮಿಗಳ್ ಸ್ಥಿರಂಜೀಯಾತ್॥

ಇಲ್ಲಿಯ ಮಹಾಜನರ ಇಂತಹ ವಿದ್ವತ್ತು, ಚಾರಿತ್ರ್ಯ, ಶೌರ್ಯ ಮತ್ತು ಕಾರ್ಯವೈಖರಿಗಳನ್ನು ಮನಗಂಡು ಚಾಳುಕ್ಯ ದೊರೆ ತ್ರಿಭುವನಮಲ್ಲನು ಇವರ ಉಪಜೀವನಕ್ಕಾಗಿ ಸೇಡಿಂಬವನ್ನು ಅಗ್ರಹಾರವನ್ನಾಗಿ ನೀಡಿದನೆಂದು ಈ ಶಾಸನದಲ್ಲಿ ಉಲ್ಲೇಖಿಸಿದೆ.

ಕ್ರಿ.ಶ.೧೧೮೫ರ ಗೊಬ್ಬೂರ ಶಾಸನವು(ಕ.ವಿ.ಶಾ.ಸಂ.೭ ಪೂರ್ವೋಕ್ತ, ಪು.೩೧೭-೩೨೧) ಸರ್ವನಮಸ್ಯವಾಗಿ ನೀಡಿದ ಅಗ್ರಹಾರ ಬಗ್ಗೆ ಉಲ್ಲೇಖಿಸುತ್ತದೆ. ಇದು ಚಾಳುಕ್ಯ ದೊರೆ ತ್ರಿಭುವನಮಲ್ಲನ ಕಾಲದ್ದು. ಅಲ್ಲಿಯ ಮಹಾಜನಂಗಳನ್ನು ಕುರಿತು ಈ ಶಾಸನ ಹೀಗೆ ವರ್ಣಿಸುತ್ತದೆ:

॥ಕಂದ॥

ಸದುವಿನಯ ವೇದಪಾರಗ
ರೊದವಿದ ಪರಮಾರ್ತ್ಥಸಕಳಶಾಸ್ತ್ರಾಗಮದಿಂ।
ಮುದಿತೋದಿತಮಾಗಿರ್ಪ್ಪ
ರ್ಮ್ಮದದಿಂ ಗೊಬ್ಬೂರ ವಿಪ್ರ ಚೂಡಾಮಣಿಗಳು॥

॥ವೃತ್ತ॥

ಇದು ವಿದ್ಯಾಕ್ಷೇತ್ರ ಲೋಕಕ್ಕಧಿಕ ಭುವನವಿಖ್ಯಾತವೀ ಗೋಪುರಂ ತಾ
ನಿದು ಪುಂಣ್ಯೋದಾನದಾನರುಹ ವಿಬುಧಜನೋರ್ವ್ವಂದಿವಿದ್ವಜನಂಗಳು
ಮುದದಿಂದಾನಂದದಿಂದಂ ಕೊಡುವರೊಲಿದು ಮಂತ್ರಾಕ್ಷರಂ ದೃತಿಯಿಂದಂ
ಪದುಳಂಚಂದ್ರಾರ್ಕ್ಕತಾರಂನೆ[ವ]ರಮಧಿಕಮತ್ಯೂರ್ಜ್ಜಿತಂ ಗ್ರಾಮರಾಜಂ॥

ಆ ಹಿರಿಯ ಗೊಬ್ಬೂರ ಹಳ್ಳಿಗಳೊಳಗಾಗಿ ಗೊಬ್ಬೂರ ಚತುಸ್ಸೀಮೆಯಿಂದೊಳಗೆ ಜಾತಿ ವಿಜಾತಿಯೆ...... ನೊಗನಿಕ್ಕಿ ಉತ್ತು ಹರಗಿ ಬಿತ್ತಿ ಬೆಳೆದು ಆ ಹಿರಿಯ ಮಹಾಜನಂಗಳಿಗೆ ಸೂಡು ಜೋಳಮಂ ತೆತ್ತುಗೆಯ್ದುಂ" ಈ ಅಗ್ರಹಾರದ ಮಹಾಜನರು ಸಕಳ ಶಾಸ್ತ್ರ ಪಾರಾಂಗತರಾಗಿದ್ದರು, ವಿಪ್ರಚೂಡಾಮಣಿಗಳಾಗಿದ್ದರು. ಅಲ್ಲದೆ ಗೊಬ್ಬೂರ ಸೀಮೆಯು ಪ್ರಸಿದ್ಧ ವಿದ್ಯಾಕ್ಷೇತ್ರವಾಗಿತ್ತು. ಇಲ್ಲಿಯ ವಿದ್ಯಾದಾನಕ್ಕೆಂದು ಹಿರಿಯ ಗೊಬ್ಬೂರನ್ನು ಸರ್ವನಮಸ್ಯವಾಗಿ, ಅಂದರೆ ಎಲ್ಲ ಕರಗಳಿಂದ ಮುಕ್ತವಾಗಿ ತ್ರಿಭೋಗ್ಯಾಂತರವಾಗಿ ಈ ಮಹಾಜನಕ್ಕೆ ದತ್ತಿ ನೀಡಲಾಗಿತ್ತು. ಅಲ್ಲದೆ, ಈ ಗೊಬ್ಬೂರಿನ ಚತುಸೀಮೆಯಲ್ಲಿರುವ ಎಲ್ಲ ಜಾತಿಯವರೂ ತಾವು ಬೆಳೆದ ಜೋಳದ ಸೂಡುಗಳನ್ನು ಈ ಮಹಾಜನರಿಗೆ ನೀಡುತ್ತಿದ್ದರೆಂದು ಈ ಶಾಸನವು ಉಲ್ಲೇಖಿಸುತ್ತದೆ. ಇದರಿಂದ ತಿಳಿದುಬರುವ ಅಂಶವೆಂದರೆ ಅಂದಿನ ಕಾಲದಲ್ಲಿ ವಿದ್ಯಾದಾನ ಮಾಡುವವರಿಗೆ ಇದ್ದ ಗೌರವ, ಮರ್ಯಾದೆಗಳ ಸ್ವರೂಪ ಎಂತಹದು ಎಂಬುದು.

ಕ್ರಿ.ಶ.೧೧೫೪ರ ಶಾಸನವೊಂದು(ಅದೇ, ಪೂರ್ವೋಕ್ತ, ಪು.೧೫೪)ಅಗ್ರಹಾರ ಮುದುವೊಳಲಿನ ಮಹಾಜನರನ್ನು ಯಮ ನಿಯಮಸ್ವಾಧ್ಯಾಯಧ್ಯಾನ ಧಾರಣಮೌನಾನುಷ್ಠಾನಪರಾಯಣರು, ಜಪಸಮಾಧಿ ಶೀಳಸಂಪನ್ನರು, ಪನ್ನಗಶಯನ ಪದಕಮಳಾರಾಧಿತೋತ್ಪನ್ನರು, ಷಟ್ಕರ್ಮನಿರತರು

ಎಂದು ಬಣ್ಣಿಸುತ್ತದೆ. ಈ ಮುದುವೊಳಲಿನ ಸಾವಿರ ಮಹಾಜನರು ಲೋಕ ಕಲ್ಯಾಣಕ್ಕಾಗಿ ಷಟ್ಕರ್ಮನಿರತರಾಗಿದ್ದರೆಂದು ಹೇಳಿ ಇಂತಹ ವಿದ್ಯಾದಾನ ಮಾಡುವ ಸಂಪನ್ನ ಜನರಿಗೆ ಮುದುವೊಳಲನ್ನು ಅಗ್ರಹಾರವನ್ನಾಗಿ ಭೋಗಿಸಲು ದಾನ ನೀಡಲಾಗಿತ್ತು.

ಕ್ರಿ.ಶ.೧೧೮೩ರ ಕರೀಂನಗರ್ ಜಿಲ್ಲೆಯ ವೇಮುಲವಾಡದ ಒಂದು ಶಾಸನವು(ಕ.ವಿ.ಶಾ.ಸಂ.೫, ಭಾಗ-೨, ಪೂರ್ವೋಕ್ತ, ಪು.೫೨) ವಿದ್ಯಾರ್ಥಿಗಳ ಆಹಾರಕ್ಕಾಗಿ ಮತ್ತು ಅವರಿಗೆ ಬೋಧಿಸುವ ಉಪಾಧ್ಯಾಯರ ಉಪಜೀವನಕ್ಕಾಗಿ "ವೇಣ್ಣಿಸಾಲೆ ೭೦೫ ಬಳಿ" ಭೂದತ್ತಿ ಬಿಟ್ಟಂತೆ ಉಲ್ಲೇಖಿಸಿದೆ. ಇದನ್ನು ಚಾಳುಕ್ಯ ದೊರೆ ವಿಕ್ರಮಾದಿತ್ಯನ ಮಹಾಸಾಮಂತ ರಾಜಾದಿತ್ಯನು ನೀಡಿದ್ದಾನೆ. ಹೀಗಾಗಿ ದೊರೆಗಳು ವಿದ್ಯಾಭ್ಯಾಸಕ್ಕಾಗಿ, ಅದನ್ನು ನಿರ್ವಹಿಸಿಕೊಂಡು ಬರುವ ಉಪಾಧ್ಯಾಯರ ಜೀವನಕ್ಕಾಗಿ, ಪ್ರತ್ಯಕ್ಷವಾಗಿ ಪೋಷಿಸದೇ ಇದ್ದರು ಪರೋಕ್ಷವಾದರು ವಿದ್ಯೆ ಹಾಗೂ ಬೋಧಿಸುವ ವರ್ಗವನ್ನು ಪುರಸ್ಕರಿಸುತ್ತಿದ್ದರೆಂದು ಹೇಳಬಹುದು.

ಕಲ್ಬುರ್ಗಿ ಜಿಲ್ಲೆಯ ಚಿತಾಪೂರ ತಾಲೂಕಿನ(ಹನುಮಾಕ್ಷಿ ಗೋಗಿ, ಕಲ್ಬುರ್ಗಿಯ ಜಿಲ್ಲೆಯ ಶಾಸನಗಳು, ಪೂರ್ವೋಕ್ತ, ಚಿತ್ತಾಪುರ ೨೬, ೨೮, ಸೇಡಂ ೧೫, ಪು. ೧೮೨, ೧೯೪, ೪೯೬) ದಿಗ್ಗಾಂವ, ನಾಗಾಯಿ, ಸೇಡಂ ಹಾಗೂ ಸುರಪುರ ತಾಲೂಕಿನ(ಅದೇ, ೪೯೬)ಕರಿಬಾಳು, ಮುದಿನೀರು, ವಿಕ್ರಮಪುರ ಮತ್ತು ಹಗರಿಟಗೆ ಮುಂತಾದವು ಪ್ರಮುಖ ಅಗ್ರಹಾರಗಳಾಗಿದ್ದವು. ಅಲ್ಲಿಯ ಮಹಾಜನರು ಷಟ್ಕರ್ಮನಿರತರೂ, ಅನೇಕ ಶಾಸ್ತ್ರಪ್ರವೀಣರೂ, ಸಕಳಕಳಾಸರ್ವಜ್ಞರೂ ಆಗಿದ್ದರೆಂದು ಇಲ್ಲಿಯ ಶಾಸನಗಳು ಉಲ್ಲೇಖಿಸುತ್ತವೆ. ಅಲ್ಲದೆ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಮುದುವೊಳಲು, ಬಳಗೆರೆ, ಕುಕ್ಕನೂರು, ಇಟ್ಟಿಗೆ ಇವು ಪ್ರಮುಖ ಅಗ್ರಹಾರಗಳಾಗಿದ್ದವೆಂದು ಅಲ್ಲಿಯ ಶಾಸನಗಳು ಉಲ್ಲೇಖಿಸುತ್ತವೆ(ಕ.ವಿ.ಶಾ.ಸಂ-೨, ಪೂರ್ವೋಕ್ತ, ಪು.೧೧೬) ರಾಯಚೂರು ಜಿಲ್ಲೆಯಲ್ಲಿಯೂ ಕೆಲವು ಅಗ್ರಹಾರಗಳಿದ್ದವು. ಈ ಜಿಲ್ಲೆಯ ಬಳ್ಳನಿಟ್ಟಿಗೆ, ಬೆಳಗುರ್ಕಿ, ಮುಕ್ಕುಂದೆ, ರೂಡಿ, ಜಾಜಾವಿ, ಹಿರಿಯ ಬಳಗಾನೂರು ಇವು ಪ್ರಮುಖ ಅಗ್ರಹಾರಗಳಾಗಿದ್ದವೆಂದು ಈ ಜಿಲ್ಲೆಯ ಶಾಸನಗಳು ದಾಖಲಿಸಿವೆ(ಅದೇ, ೧೧೯). ಇಲ್ಲಿಯ ದ್ವಿಜರು ಷಟ್ಕರ್ಮನಿರತರಾಗಿದ್ದು ಅಗ್ರಹಾರದ ಚತುಸ್ಸೀಮೆಗಳಲ್ಲಿ ಬರುವ ಗ್ರಾಮಗಳ ಸಾಮಾಜಿಕ, ಧಾರ್ಮಿಕ ಅಭಿವೃದ್ಧಿಕಾರ್ಯಗಳನ್ನು ಕೈಗೊಂಡ ದಾಖಲೆಗಳಿವೆ. ಆದರೆ ವಿದ್ಯಾದಾನ, ಶಿಕ್ಷಣಗಳ ಬಗ್ಗೆ ಮಾತ್ರ ಇಲ್ಲಿಯ ಶಾಸನಗಳು ಏನನ್ನೂ ತಿಳಿಸುವುದಿಲ್ಲ.

ಹೀಗೆ ಲಭ್ಯ ಶಾಸನಗಳಲ್ಲಿ ಬರುವ ಅಗ್ರಹಾರಗಳ ವರ್ಣನೆಗಳನ್ನು ಗಮನಿಸಿದಾಗ ಅವುಗಳ ಕಾರ್ಯವೈಖರಿ, ಅವು ಹೊಂದಿದ್ದ ಜವಾಬ್ದಾರಿಗಳು, ಅಲ್ಲಿಯ ಮಹಾಜನರು ಷಟ್ಕರ್ಮನಿರತರೂ ಸಕಲವಿದ್ಯಾಪಾರಂಗತರೂ ಸದಚಾರಿಗಳೂ ಆಗಿದ್ದು ಅಲ್ಲಿಯ ಜನರಿಗೆ

ವಿದ್ಯಾದಾನ ಮಾಡುತ್ತಿದ್ದುದು, ಇವುಗಳ ಜೊತೆಗೆ ಶಿಷ್ಟರಕ್ಷಣೆ ದುಷ್ಟನಿಗ್ರಹಗಳ ನಿರ್ವಹಣೆಯಲ್ಲೂ ತೊಡಗಿದ್ದುದು, ಬೇಡಿದವರಿಗೆ ಕೊಡುಗೈಯಾಗಿ ನೀಡುತ್ತಿದ್ದುದು, ದೇವಾಲಯಗಳ ನಿರ್ಮಾಣ ನಿರ್ವಹಣೆಗಳಂತಹ ಧಾರ್ಮಿಕ ಕಾರ್ಯಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದುದು ಇವೆಲ್ಲ ಅರಿವಿಗೆ ಬರುತ್ತವೆ. ಇವೆಲ್ಲವನ್ನೂ ನೋಡಿದಾಗ ಆ ಮಹಾಜನರು ಒಂದು ರೀತಿಯಲ್ಲಿ ಸಾಂಸ್ಕೃತಿಕ ರಾಯಭಾರಿಗಳಾಗಿದ್ದರೆಂದು ಹೇಳಬಹುದು.

ಇಂತಹ ಅಗ್ರಹಾರಗಳಲ್ಲಿ ಅನಾದಿ ಅಗ್ರಹಾರ, ಪಿರಿಯ ಅಗ್ರಹಾರ, ಸರ್ವನಮಸ್ಯದ ಅಗ್ರಹಾರ, ಸರ್ವೋತ್ತಮ ಅಗ್ರಹಾರ, ರಾಮದತ್ತಿ ಅಗ್ರಹಾರ, ಮಹಾಗ್ರಹಾರ ಇತ್ಯಾದಿಯಾಗಿ ವಿವಿಧ ಪ್ರಕಾರಗಳಿರುವುದನ್ನು ಕೂಡ ಇಲ್ಲಿಯ ಶಾಸನಗಳು ಉಲ್ಲೇಖಿಸಿವೆ.

ದೇವಸ್ಥಾನಗಳು

ಪ್ರಾಚೀನ ಕಾಲದ ದೇವಸ್ಥಾನಗಳು ಬಹುಮುಖ ಕಾರ್ಯಗಳಲ್ಲಿ ನಿರತವಾಗಿದ್ದವು. ಇಂದಿನ ದೇವಾಲಯಗಳ ಹಾಗೆ ಬರೀ ಪೂಜೆ ಪುನಸ್ಕಾರಗಳಿಗೆ ಮಾತ್ರವಷ್ಟೇ ಸೀಮಿತವಾಗಿರಲಿಲ್ಲ. ದೇವಸ್ಥಾನಗಳು ಕೇವಲ ಧಾರ್ಮಿಕ ವಿಧಿ-ವಿಧಾನಗಳನ್ನು ಬೋಧಿಸುವ ಕೇಂದ್ರಗಳಾಗಿರದೇ ಜೊತೆ ಜೊತೆಯಲ್ಲಿ ಅನೇಕ ಲೌಕಿಕ ಜ್ಞಾನ ನೀಡುವ ಸಂಸ್ಥೆಗಳಾಗಿದ್ದವು. ಧಾರ್ಮಿಕ ವಿಷಯಕ್ಕೆ ಸಂಬಂಧಿಸಿದ ಕಾರ್ಯಗಳು ಪ್ರಧಾನವಾಗಿದ್ದರೂ ಅವುಗಳೊಂದಿಗೆ ಅನುಷಂಗಿಕವಾದರೂ ಪ್ರಸ್ತುತ ನಿಜ ಜೀವನಕ್ಕೆ ಬೇಕಾಗುವ ಕೌಶಲ್ಯಗಳನ್ನು ಬೋಧಿಸಲಾಗುತ್ತಿತ್ತು. "ದೇವಸ್ಥಾನವು ಜನರ ದೈವಭಕ್ತಿಯ ಕೇಂದ್ರವಾಗಿದ್ದಂತೆ, ವಿದ್ಯಾಕೇಂದ್ರವು ಆಗಿದ್ದಿತ್ತು. ಶಿಲ್ಪ, ಚಿತ್ರ, ಸಂಗೀತ, ನರ್ತನಾದಿ, ಕುಶಲ ಕಲೆಗಳು ದೇವಸ್ಥಾನದ ಆಶ್ರಯದಲ್ಲಿ ವರ್ಧಿಸಿದವು."

ಒಂದು ರೀತಿಯಲ್ಲಿ ಅಂದು ಅವು ಸಾಂಸ್ಕೃತಿಕ ಕೇಂದ್ರಗಳಾಗಿದ್ದವು. ಧಾರ್ಮಿಕ, ಸಾಮಾಜಿಕ, ರಾಜಕೀಯ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಗಳನ್ನು ಅವು ನಿರ್ವಹಿಸುತ್ತಿದ್ದವು. ಹಾಗಾಗಿ, ಎಂ.ಎಂ.ಕಲಬುರ್ಗಿಯವರು ಹೇಳುವಂತೆ "ದೇವಾಲಯಗಳು ಆಧ್ಯಾತ್ಮ, ಕಲೆ, ಸಾಮಾಜಿಕ ನ್ಯಾಯ, ಮೊದಲಾದ ಚಟುವಟಿಕೆಗಳ ಕೇಂದ್ರವೆನಿಸಿದ ಕಾರಣ ಇವುಗಳ ನಿರ್ಮಾಣ ಒಂದು ಚಳುವಳಿ ರೂಪದಲ್ಲಿ ಸಾಗಿ ಬಂದಿದೆ"(ಎಂ.ಎಂ.ಕಲಬುರ್ಗಿ: ಶಾಸನ ಸೂಕ್ತಿಸುಧಾರ್ಣವ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೯೭, ಪು.೬೮.) ಎಂ.ಚಿದಾನಂದಮೂರ್ತಿಯವರು ಹೇಳುವಂತೆ, "ದೇವಸ್ಥಾನವು ಮುನಿಗಳ ವಾಸಸ್ಥಾನವಾಗಿದ್ದುದು ಮಾತ್ರವಲ್ಲ, ದೊಡ್ಡ ವಿದ್ಯಾಕೇಂದ್ರವೂ ಆಗಿದ್ದಿತು"(ಎಂ.ಚಿದಾನಂದಮೂರ್ತಿ, ಕನ್ನಡ ಶಾಸನಗಳಲ್ಲಿ ಸಾಂಸ್ಕೃತಿಕ ಅಧ್ಯಯನ, ಪು.೧೦) ಆರಂಭದಲ್ಲಿ ಜನರು ಅಥವಾ ಭಕ್ತಾದಿಗಳು ದೇವರ ಪೂಜಾದಿಗಳಿಗೆ ಮತ್ತು ದೇವಾಲಯಗಳ ಜೀರ್ಣೋದ್ಧಾರಕ್ಕಾಗಿ ದಾನದತ್ತಿಗಳನ್ನು ನೀಡುತ್ತಿದ್ದರು. ಬರುಬರುತ್ತಾ ಎಲ್ಲ ದಾನಗಳಲ್ಲಿ ವಿದ್ಯಾದಾನ

ಮಹಾದಾನವಾಗಿರು ವುದನ್ನು ಮನಗಂಡು, ಅದರ ಒಂದು ನಿರ್ವಹಣೆಗಾಗಿ, ಬೋಧಿಸುವ ವರ್ಗಕ್ಕೂ, ಅಧ್ಯಯನ ಮಾಡುವ ವಿದ್ಯಾರ್ಥಿಗಳ ವರ್ಗಕ್ಕೂ, ದಾನದತ್ತಿ ನೀಡಲು ಪ್ರಾರಂಭಿಸಿರು ವುದನ್ನು ಕಾಣುತ್ತೇವೆ. ಇದರಿಂದಾಗಿ ದೇವಾಲಯಗಳ ಕಾರ್ಯವ್ಯಾಪ್ತಿ ಮತ್ತು ಜವಾಬ್ದಾರಿಗಳು ಹೆಚ್ಚಾದವು.

"ದೇವಾಲಯಗಳು ಜನಜೀವನದಲ್ಲಿ ನಿತ್ಯಸಂಗತಿಗಳಾಗಿ ಅವರನ್ನು ತಿದ್ದುವ ಶಕ್ತಿಗಳಾಗಿದ್ದವು. ಹಾಗಿರಬೇಕೆನ್ನುವುದೇ ಅವುಗಳ ನಿರ್ಮಾಣದ ಹಿಂದಿರುವ ಮಹೋದ್ದೇಶವಾಗಿತ್ತು...; ಅನೇಕ ದೇವಾಲಯಗಳು ಶಾಲೆಗಳನ್ನು ಪ್ರೌಢವಿದ್ಯಾಸಂಸ್ಥೆಗಳನ್ನು ನಡೆಸುತ್ತಾ ಜನಜೀವನವನ್ನು ರೂಪಿಸುವ ಜೀವಂತ ಶಕ್ತಿಗಳಾಗಿದ್ದವು. ದೇವಾಲಯಗಳಿಗೆ ದಾನವಾಗಿ ಬರುವ ಹಣ ಈ ಸತ್ಕಾರ್ಯಗಳಿಗೆ ವಿನಿಯೋಗವಾಗುತ್ತಿತ್ತು"(ಎಚ್.ತಿಪ್ಪೇರುದ್ರಸ್ವಾಮಿ, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ೨೦೦೧, ಪು.೨೧೯).

"ದೇವಸ್ಥಾನಗಳಲ್ಲಿ ಅಧ್ಯಯನ ಮಾಡುತ್ತಿದ್ದ ವಿದ್ಯಾರ್ಥಿಗಳನ್ನು ಎರಡು ಭಾಗಗಳಾಗಿ ವಿಂಗಡಿಸಬಹುದು. ೧. ವಿದ್ಯಾರ್ಥಿ ತಪೋಧನರು, ೨. ವಿದ್ಯಾರ್ಥಿ ಮಾಣಿಯರು. .... ಇವರಲ್ಲಿ ವಿದ್ಯಾರ್ಥಿ ತಪೋಧನರನ್ನು ನೈಷ್ಠಿಕ ತಪೋಧನ ಅಥವಾ ನೈಷ್ಠಿಕ ಬ್ರಹ್ಮಚಾರಿಗಳೆಂದೂ, ಕರೆಯುತ್ತಿದ್ದಂತೆ ಕಾಣುತ್ತದೆ. ವಿದ್ಯಾರ್ಥಿ ತಪೋಧನರು ಅಥವಾ ನೈಷ್ಠಿಕ ಬ್ರಹ್ಮಚಾರಿಗಳು ಆ ದೇವಸ್ಥಾನದ ಯತಿಗಳ ಸಂಪ್ರದಾಯಕ್ಕೆ ಸೇರಿದವರು. ಅವರು ಆಜೀವಪರ್ಯಂತ ಬ್ರಹ್ಮಚಾರಿಗಳಾಗಿ ಉಳಿದು, ತಮ್ಮ ಅಧ್ಯಯನ ಮುಗಿದ ಮೇಲೆ ಬೇರೆ ಬೇರೆ ಮಠಗಳಲ್ಲಿ ಸ್ಥಾನಪತಿಗಳಾಗುತ್ತಿದ್ದರು. ಈ ನೈಷ್ಠಿಕ ಬ್ರಹ್ಮಚಾರಿಗಳ ಏಕೈಕ ಗುರಿ ಜ್ಞಾನಾರ್ಜನೆ. ....ವಿದ್ಯಾರ್ಥಿ ಮಾಣಿಯೆಂದರೆ ಬಹುಶಃ ಆ ಮಠದಲ್ಲಿ ಓದಿ ಅಧ್ಯಯನ ಮುಗಿದ ನಂತರ ಗೃಹಸ್ಥರಾಗತಕ್ಕವರು"(ಹನುಮಾಕ್ಷಿ ಗೋಗಿ, ಕಲ್ಬುರ್ಗಿಯ ಜಿಲ್ಲೆಯ ಶಾಸನಗಳು, ಪೂರ್ವೋಕ್ತ, ಚಿತ್ತಾಪುರ ೨೬, ೨೮, ಸೇಡಂ ೧೫, ಪು. ೧೮೨, ೧೯೪, ೪೯೬) ಎಂಬುವುದನ್ನು ಈ ಶಾಸನಗಳು ಉಲ್ಲೇಖಿಸುತ್ತವೆ.

ಕ್ರಿ.ಶ.೧೦೮೬ ರ ನಾಗಾಯಿಯ ಶಾಸನವೊಂದರಲ್ಲಿ(ಅದೇ, ಪು.೧೯೮) "ದೇವರಯುಂ ಸಂಜೆ ಮಠದಲುಂ ಪುರಾಣಂ ಬಾಜಿಸುವ ಪುರಾಣ ಭಟ್ಟರ್ಗೆ ಮತ್ತರು ೪೦ .... ದೇವರ ಘಟಿಗೆಯ ಮಾಣಿಗಳು ನಾಲ್ವರ್ಗ್ಗಂ ಮತ್ತರು ೫೦" ಭೂಮಿಯನ್ನು ನೀಡಿದುದನ್ನು ಉಲ್ಲೇಖಿಸಿದೆ. ಈ ದೇವಾಲಯದ ಅಂಗ ಭಾಗವಾದ ಮಠದಲ್ಲಿ ಪುರಾಣ ಹೇಳುವ ಭಟ್ಟರಿಗೆ ಮತ್ತು ಅಲ್ಲಿಯ ಮಾಣಿಗಳ ಉಪಜೀವನಕ್ಕಾಗಿ ಭೂದತ್ತಿ ನೀಡಿದುದನ್ನು ಇಲ್ಲಿ ಗಮನಿಸಬೇಕು.

ಕ್ರಿ.ಶ.೧೧೧೫ರ ಇಟಗಿಯ ಶಾಸನವು(ಕ.ವಿ.ಶಾ.ಸಂ.೨, ಪೂರ್ವೋಕ್ತ, ಪು.೧೧೬)ಅಲ್ಲಿಯ ಸರಸ್ವತೀ ದೇವಾಲಯದ ಬಗ್ಗೆ ಹೀಗೆ ಕಾವ್ಯಾತ್ಮಕವಾಗಿ ವರ್ಣಿಸುತ್ತದೆ:

ಸಕಲಕಲಾಸರಸ್ವತಿಗೆ ವಾಙ್ಮಯಮೂರ್ತಿಗೆ ವೇದಮೂರ್ತಿಗ
ಪ್ರಕಟನ ಮಂತ್ರಮೂರ್ತಿಗಮಳಾಕ್ಷರಮೂರ್ತಿಗಿರಲ್ಕೆ ಭಕ್ತಿಯಿಂ
ಸಕಲಕಳಾಸರಸ್ವತಿಯೆ ಮಾಡಿಸಿದಂ ಮಠಮಂ ಸಮಸ್ತ ಶಾ
ಬ್ದಿಕಕವಿತಾರ್ಕಿಕಾಗಮಿಕವೈದಿಕಸಾಕ್ಷರಸಜ್ಜನಾಶ್ರಯಂ॥

ಈ ಸರಸ್ವತಿ ದೇವಾಲಯವು ಸಕಲ ಶಾಬ್ದಿಕ ಕವಿ ತಾರ್ಕಿಕ ಆಗಮಿಕ ವೈದಿಕ ಸಾಕ್ಷರ ಸಜ್ಜನರಿಗೂ ಆಶ್ರಯತಾಣವಾಗಿತ್ತೆಂಬುದು ಗಮನಾರ್ಹ.

ಕ್ರಿ.ಶ. ೧೧೧೮ರ ಹಂದರಕಿಯ ಶಾಸನವೊಂದು(ಹನುಮಾಕ್ಷಿ ಗೋಗಿ, ಕಲ್ಬುರ್ಗಿಯ ಜಿಲ್ಲೆಯ ಶಾಸನಗಳು, ಪು.೨೩೯). ಕನ್ನಡ ಅಭ್ಯಾಸಕ್ಕಾಗಿ ಭೂದತ್ತಿ ಬಿಟ್ಟದ್ದನ್ನು ತಿಳಿಸುತ್ತದೆ.

"ಕಂನಡಕ್ಕರವೋದುವ ವಿದ್ಯಾರ್ತ್ಥಿಮಾಣಿಗಳಿಗವೋದಿಸುವುಪಾಧ್ಯಾಯರ್ಗ್ಗಂ"

ಎಂದರೆ ಕನ್ನಡ ಅಕ್ಷರಗಳನ್ನು ಅಭ್ಯಾಸ ಮಾಡುವ ವಿದ್ಯಾರ್ಥಿ ಮಾಣಿಗಳಿಗೂ ಅವರನ್ನು ಓದಿಸುವ ಉಪಾಧ್ಯಾಯರಿಗೂ ಭೂದತ್ತಿ ನೀಡಿದುದನ್ನು ಈ ಶಾಸನವು ಉಲ್ಲೇಖಿಸುತ್ತದೆ. ಹೀಗಾಗಿ ಈ ನೈಷ್ಠಿಕ ಮಠದಲ್ಲಿ ಕನ್ನಡಭಾಷೆಯ ಅಭ್ಯಾಸವು ನಡೆಯುತ್ತಿತ್ತೆಂಬುದು ಸ್ಪಷ್ಟವಾಗುತ್ತದೆ. ಆಗ ಸಂಸ್ಕೃತದ ಅಭ್ಯಾಸ ಮಾತ್ರ ನಡೆಯುತ್ತಿತ್ತು, ಕನ್ನಡವನ್ನು ಕಡೆಗಣಿಸಲಾಗುತ್ತಿತ್ತು ಎಂಬ ಅಪೋಹಗಳನ್ನು ತಳ್ಳಿಹಾಕಲು ಇಂತಹ ಆಧಾರಗಳು ತುಂಬ ನೆರವಾಗುತ್ತವೆ.

ಬೀದರ ಜಿಲ್ಲೆಯ ಗೋರ್ಟಾ(ಬಿ) ಅಗ್ರಹಾರದಲ್ಲಿ ಚಾಲುಕ್ಯದೊರೆ ತ್ರಿಭುವಮಲ್ಲನು ಹಲವು ಕಾರ್ಯಗಳನ್ನು ಮಾಡುವಾಗ ಅಲ್ಲಿ ಶ್ರೀ ರುದ್ರೇಶ್ವರ ದೇವಾಲಯ ನಿರ್ಮಿಸಿದನು. ಅದರ ಅಂಗ-ಭೋಗ ರಂಗಕ್ಕಾಗಿ, ಅಲ್ಲದೇ ವಿವಿಧ ಇತರ ಕಲೆಗಳಾದ ಗೀತ, ವಾದ್ಯ, ನೃತ್ಯಕ್ಕಾಗಿ ಅಲ್ಲಿರುವ ತಪೋಧನ ಉಪಾಧ್ಯಯರಿಗಾಗಿ, ಅಲ್ಲಿ ಅಭ್ಯಸಿಸುವ ವಿದ್ಯಾರ್ಥಿಗಳಿಗಾಗಿ ಅವರ ವಸತಿ ಇತರ ವಿಷಯಗಳ ನಿರ್ವಹಣೆಗಾಗಿ ಉದಾರವಾಗಿ ದತ್ತಿ ನೀಡಿ, ತಾಮ್ರಶಾಸನ ಬರೆಯಿಸಿ ನೀಡಿದನೆಂದು ಉಲ್ಲೇಖಿಸಿದೆ(ಕ.ವಿ.ಶಾ.ಸಂ.೮, ಪು.೬೫).

ಕ್ರಿ.ಶ.೧೧೧೭ರ ಯಾದಗಿರ ಜಿಲ್ಲೆಯ ಸುರಪುರ ತಾಲೂಕಿನ ತಿಂಥಣಿ ತಾಮ್ರ ಶಾಸನವು ಪ್ರಾಥಮಿಕವಾಗಿ ಒಂದು ದೇವಾಲಯವಾಗಿದ್ದು; ಅಲ್ಲಿಯ ವಿದ್ಯಾದಾನ ಸ್ವರೂಪ ಕುರಿತು, ಹೀಗೆ ಉಲ್ಲೇಖಿಸಿದೆ. ಕಲ್ಯಾಣ ಚಕ್ರವರ್ತಿ ಜಗದೇಕ ಮಲ್ಲ ಎರಡನೆಯ ಜಯಸಿಂಹನ ಆಳ್ವಿಕೆಯ ಕಾಲದಲ್ಲಿ(ತೃತೀಯ ತಾಮ್ರ ಪತ್ರ ಮೇಲೆ ಉಲ್ಲೇಖವಿರುವಂತೆ) ಸಗರ ನಾಡಿನ ಮಧ್ಯದಲ್ಲಿರುವ ಕೃಷ್ಣಾವೆಗೆ ತಟದ ಉತ್ತರ ತೀರದಲ್ಲಿರುವ ತಿಂತಿಣಿ ಸಿರಿವರ ಹೆಸರಿನ ಸರ್ವನಮಸ್ಯ ಅಗ್ರಹಾರದಲ್ಲಿ

ಷಟ್‌ಕರ್ಮ ನಿರತ ವೇದವೇದಾಂಗ ಪಾರಂಗತ ದುಗ್ಗಣಾರ್ಯಭಟ್ಟನು ನಿರ್ಮಿಸಿದ, ತ್ರೈಪುರುಷ ಶಾಲೆಯಲ್ಲಿ ಯಜುಶಾಲೆಯನ್ನು ಅಭ್ಯಾಸಿಸುವ ಬ್ರಹ್ಮಚಾರಿ ವಿದ್ಯಾರ್ಥಿಗಳ ಭೋಜನಕ್ಕಾಗಿ ಮತ್ತು ವಸತಿಗಾಗಿ, ೩೦೦ ನಿವರ್ತನ ಸರ್ವನಮಸ್ಯವಾಗಿ ಚಕ್ರವರ್ತಿ ದಾನ ನೀಡಿದನೆಂದು ಸೂಚಿಸುತ್ತದೆ (ಹನುಮಾಕ್ಷಿ ಗೋಗಿ, ೧೯೯೫, ಸುರಪುರ ತಾಲೂಕಿನ ಶಾಸನಗಳು, ಪು.೮೮).

ಅದೇ ಜಿಲ್ಲೆಯ ಏವೂರಿನ ಕ್ರಿ.ಶ.೧೧೭೭ರ ಶಾಸನವು ಚಾಲುಕ್ಯ ದೊರೆ ತ್ರಿಭುವನ ಮಲ್ಲನು ಕಲ್ಯಾಣ ನಾಡಿನಲ್ಲಿ ರಾಜ್ಯಭಾರ ಮಾಡುವಾಗ, ಆತನ ಮಹಾಪ್ರಧಾನ ದಂಡನಾಯಕ ರವಿಯಣಭಟ್ಟರ ಬಿನ್ನಪರಮೇರೆಗೆ ಏವೂರಿನಲ್ಲಿ ಶ್ರೀಸ್ವಯಂಭುದೇವರ ಜೀರ್ಣೋದ್ಧಾರ ಜೊತೆಗೆ ಅಲ್ಲಿ ಓದುವ, ಕೇಳ್ವ ವಿದ್ಯಾರ್ಥಿಗಳಿಗಾಗಿ, ತಪೋಧನರಿಗಾಗಿ ಮತ್ತು ಬೋಧಿಸುವ ಭಟ್ಟರಿಗೆ ಹೀಗೆ ಇತ್ಯಾದಿ ವಿಷಯ ನಿರ್ವಹಣೆಗಾಗಿ ಅಲ್ಲಿಯ ಸಿಂಹಪರ್ಷ ಮಂಡಳಿಯ ಮಲೆಯಾಳ ಪಂಡಿತ ದೇವರ ಶಿಷ್ಯನಾದ ಮಿರಿಂಜೆಯ ಚಿಕ್ಕದೇವರ ಪ್ರಶಿಷ್ಯರಾದ ಶ್ರೀಮದೀಶಾನ ರಾಶಿ ಪಂಡಿತರಿಗೆ ಧಾರಾಪೂರ್ವಕವಾಗಿ ಮಾಡಿಕೊಟ್ಟ ಭೂದತ್ತಿ ಬಗ್ಗೆ ವಿವರಿಸಿದೆ(ಅದೇ, ಪು.೨೫).

ಕ್ರಿ.ಶ.೧೧೧೮ರ ಕಲ್ಲುರ್ಗಿ ಜಿಲ್ಲೆಯ ಹಂದರಕಿ ಶಾಸನವು ಅಲ್ಲಿಯ ಲೋಕೇಶ್ವರ ದೇವಾಲಯ ಶಿಕ್ಷಣ ಬೋಧನೆ ಬಗ್ಗೆ ಉಲ್ಲೇಖಿಸಿದೆ. ಚಾಲುಕ್ಯ ದೊರೆ ತ್ರಿಭುವನಮಲ್ಲನು ಜಯಂತಿಪುರದಿಂದ ಆಳುತ್ತಿರುವಾಗ ಆತನ ಮಹಾಮಂಡಳೇಶ್ವರನಾದ ಲೋಕರಸರು, ಅಜಿಲು ಮುನ್ನೂರರ ಬಳಿ ಅಲ್ಲಿಯ ನೈಷ್ಟಿಕಮಠದ ಆಚಾರ್ಯ ಮೊದಲಾಗಿ, ತಪೋಧನರಿಗಾಗಿ, ದೇವರ ಅಂಗರಂಗ ಭೋಗಕ್ಕಾಗಿ, ಪೂಜೆಗಾಗಿ ಅಲ್ಲಿಯ ಕನ್ನಡ ಓದುವ ವಿದ್ಯಾರ್ಥಿ ಮಾಣಿಗಳಿಗಾಗಿ ಮತ್ತು ಅವರನ್ನು ಓದಿಸುವ ಉಪಾಧ್ಯಾಯರಿಗಾಗಿ ಭೂದಾನ ಬಿಟ್ಟಿದ್ದನ್ನು ಉಲ್ಲೇಖಿಸಿದೆ(ಹನುಮಾಕ್ಷಿ ಗೋಗಿ, ೧೯೯೬, ಕಲಬುರ್ಗಿ ಜಿಲ್ಲೆಯ ಶಾಸನಗಳು, ಪು.೨೪೯).

ಅದೇ ಜಿಲ್ಲೆಯ ಕ್ರಿ.ಶ.೧೦೭೭ರ ವಡಗೇರಿ ಶಾಸನ ಅಲ್ಲಿಯ ಮಠದಲ್ಲಿ ಓದುವ ವಿದ್ಯಾರ್ಥಿಗಳಿಗಾಗಿ ಭೂದಾನ ಬಿಟ್ಟ ಉಲ್ಲೇಖ ಮಾಡುತ್ತದೆ. ಚಾಳುಕ್ಯ ದೊರೆ ತ್ರಿಭುವನ ಮಲ್ಲನ ಪಟ್ಟಾಭಿಷೇಕ ನಿಮಿತ್ತವಾಗಿ ಅನೇಕ ಪ್ರಕಾರ ಮಹಾದಾನ ಮಾಡುವಾಗ ಅಲ್ಲಿಯ ಮಠದಲ್ಲಿ ಓದುವ, ಕೇಳ್ವ ವಿದ್ಯಾರ್ಥಿಗಳಿಗಾಗಿ, ತಪೋಧನರಿಗಾಗಿ ವಡಗೇರಿಯಲ್ಲಿ ಸರ್ವನಮಸ್ಯವಾಗಿ ಭೂದಾನ ಮಾಡಿ, ಅಲ್ಲಿಯ ಮಹೇಶ್ವರ ರಾಸಿ ಪಂಡಿತರಿಗೆ ೨೦೦ ಮತ್ತರು ಭೂಮಿಯು ಧಾರಾಪೂರ್ವಕ ನೀಡಿದನೆಂದು ವಿವರಿಸುತ್ತದೆ(ಅದೇ, ಪೂರ್ವೋಕ್ತ, ಪು.೩೮೨).

ಕ್ರಿ.ಶ.೧೦೩೩ರ ತೆಲಂಗಾಣದ ಕರೀಮನಗರ ಜಿಲ್ಲೆಯ ವೇಮುಲವಾಡ ಶಾಸನವು ಚಾಲುಕ್ಯ ದೊರೆ ತ್ರಿಭುವನಮಲ್ಲನ ಮಹಾಮಂಡಳೇಶ್ವರನಾದ ರಾಜಾದಿತ್ಯನು ಕೊಸವಳ

ಸವಲಕ್ಷೆಯಲ್ಲಿದ್ದ ಚಬ್ಬಿ ೨೧೦೦೦ರ ತನ್ನ ರಾಜಧಾನಿಯಾದ ಲೆಂಬುಳವಾಡೆಯಲ್ಲಿ ಶ್ರೀ ರಾಜಾದಿತ್ಯೇಶ್ವರ ದೇವರನ್ನು ಪ್ರತಿಷ್ಠಾಪಿಸಿ, ತನ್ನ ದೊರೆ ತ್ರಿಭುವನಮಲ್ಲನಲ್ಲಿ ಭಿನ್ನವಿಸಿಕೊಂಡು, ತನಗೆ ಪರಮೇಶ್ವರ ದತ್ತಿಯನ್ನು ದಯಪಾಲಿಸಿಕೊಂಡನು. ಹೀಗಾಗಿ, ಅಲ್ಲಿಯ ದೇವರ ದೇವರ ರಂಗಭೋಗಕ್ಕಾಗಿ, ದೇಗುಲದ ಖಂಡಸ್ಫುಟಿತ ಜೀರ್ಣೋದ್ಧಾರಕ್ಕಾಗಿ, ವಿಲ್ರುಕೂನ್ತು ಬಳಿ ೮೫ ಬಳಿಯ ಕುಱುಮಡುಮಂ ಅಲ್ಲಿಯ ತಪೋಧನರ ವಿದ್ಯಾರ್ಥಿಗಳಾಹಾರದಾನಕ್ಕಂ ಮತ್ತು ವಿದ್ಯಾರ್ಥಿಗಳಿಗೆ ಬೋಧಿಸುವ ಉಪಾಧ್ಯಾಯರ ಜೀವನಕ್ಕಾಗಿ, ವೇಣ್ಣೆಸಾಲೆ ೨೦೫ ಬಳಿಯ ಸಂಕಯ ಪಳ್ಳಿಯುಮಂ ಲೇಂಬುವಾಳಿಡೆಯ ತವಿವೃತ್ತಿಯ ರಾಜಾದಿತ್ಯ ಸಮುದ್ರದ ಪೆಱಗೆನಿತೊನ್ದುಗಳೆ ಚಿಱವುದೆನಿತುವಂ ಕೊಟ್ಟರೀ ಸ್ಥಾನಕ್ಕೆ ಭುಜಂಗವಳಿ ಕಾಳಾಮುಖ ತಪೋಧನನೆ ನಡೆಸುವಂ ಬ್ರತಚ್ಯುತನಪ್ಪವಂ ಕ್ಕನಪ್ಪದರಸಂ ನಗರ ಪಂಚಮಠಸ್ಥಾನಮಂ.”

ಇಲ್ಲಿ ಗಮನಿಸಬೇಕಾದ ಅಂಶಗಳೆಂದರೆ, ತನ್ನ ಹೆಸರಿನಲ್ಲಿಯೇ ರಾಜಾದಿತ್ಯೇಶ್ವರ ದೇವರನ್ನು ಪ್ರತಿಷ್ಠಾಪಿಸಿ, ಅದರ ನಿರ್ವಹಣೆಗಾಗಿ ಭೂದತ್ತಿ ನೀಡಿ, ಅದರೊಂದಿಗೆ ಅಲ್ಲಿಯ ತಪೋಧನ ವಿದ್ಯಾರ್ಥಿಗಳ ಆಹಾರ ಧಾನ್ಯಕಾಗಿ, ವಿದ್ಯಾರ್ಥಿಗಳಿಗೆ ಮತ್ತು ಅವರಿಗೆ ಬೋಧಿಸುವ ಉಪಾಧ್ಯಾಯರಿಗಾಗಿ, ಭೂದತ್ತಿ ನೀಡಿದ್ದನ್ನು ನೋಡಿದರೆ, ಅಂದಿನ ದೇವಾಲಯಗಳು ಮಠಗಳು ಬರೀ ಧಾರ್ಮಿಕ ಕೇಂದ್ರಗಳಾಗಿರಲಿಲ್ಲ, ಅವು ಶಿಕ್ಷಣ ಕೇಂದ್ರಗಳಾಗಿದ್ದವೆಂದು ಅಲ್ಲಿಯ ಬೋಧಿಸುವ ಉಪಾಧ್ಯಾಯರಿಗೆ ವೇತನದ ಉಪಾದಿಯಲ್ಲಿ ತಳವೃತ್ತಿಯಾಗಿ ಬಿಟ್ಟದ್ದನ್ನು ಇಲ್ಲಿ ನೋಡಬಹುದಾಗಿದೆ(ಕ.ವಿ.ಶಾ.ಸಂ.೫, ಭಾಗ ೨, ಪು.೪೧). ಕ್ರಿ.ಶ.೧೦೮೮ರ ತೆಲಂಗಾಣ ರಾಜ್ಯದ ನೆಲ್ಗೊಂಡ ಜಿಲ್ಲೆಯ ಕೊಲನುಪಾಕ ಶಾಸನವು ಚಾಲುಕ್ಯದೊರೆ ತ್ರಿಭುವನಮಲ್ಲನ ಮಹಾಮಂಡಳೇಶ್ವರನಾದ ತೊಂಡರಸ ಜೋಳ ಮಹಾರಾಜನು ಕೊಳ್ಳಿವಾಕೆ ೨೦೦೦ ದಿಂದ ಆಳುತ್ತಿರುವಾಗ ಅಲ್ಲಿಯ ಕಾಳಾಮುಖ ರಾಮೇಶ್ವರ ಪಂಡಿತ ದೇವರಿಗೆ ಶ್ರೀ ಉತ್ತರೇಶ್ವರ ದೇವರ ಅಂಗ-ಭೋಗಕ್ಕಾಗಿ, ರಂಗಭೋಗಕ್ಕಾಗಿ, ಅಲ್ಲಿ ಓದುವ ವಿದ್ಯಾರ್ಥಿಗಳಿಗಾಗಿ ಮತ್ತು ಅಲ್ಲಿಯ ಸತ್ರಕ್ಕಾಗಿ ಹನ್ನೆರಡರ ಗಡಿಯ ತಳವೃತ್ತಿಯಾಗಿ ದಾನ ನೀಡಿದನೆಂದು ಉಲ್ಲೇಖಿಸಿದೆ. ಇಲ್ಲಿ ದೇವಾಲಯಗಳ ಅಂಗ-ರಂಗಗಳ ನಿರ್ವಹಣೆ ಮತ್ತು ಅದರ ಜೊತೆಜೊತೆಗೆ ಅಲ್ಲಿ ವಿದ್ಯಾದಾನದ ಕೈಕಾರ್ಯಕ್ಕಾಗಿ ಅಲ್ಲಿ ಓದುವ ವಿದ್ಯಾರ್ಥಿಗಳಿಗೆ, ಅವರ ವಸತಿಗಾಗಿ ದಾನ ನೋಡಿದ್ದನ್ನು ನೋಡಿದರೆ, ಏಕಕಾಲಕ್ಕೆ ಈ ದೇವಾಲಯಗಳು ಧಾರ್ಮಿಕವಾಗಿ ಆ ಸಮಾಜದಲ್ಲಿ ಶಾಂತಿ, ಸುಭಿಕ್ಷೆ ಕಾಪಾಡುವುದರೊಂದಿಗೆ ವಿವಿಧ ವಿಷಯಗಳನ್ನು ಬೋಧಿಸುವ ಕಾರ್ಯಗಳನ್ನು ಕೈಗೊಳ್ಳುತ್ತಿದ್ದವೆಂದು ತಿಳಿದುಬರುತ್ತದೆ (ಅದೇ, ಪೂರ್ವೋಕ್ತ, ಪು.೨೨೧).

ಕ್ರಿ.ಶ.೧೦೮೧ ಅದೇ ಜಿಲ್ಲೆಯ ಇನ್ನೊಂದು ಶಾಸನದಲ್ಲಿ ಚಾಲುಕ್ಯ ದೊರೆ ತ್ರಿಭೂವನಮಲ್ಲ (ನಾಲ್ಕನೆ ವಿಕ್ರಮಾದಿತ್ಯ)ನ ಮಹಾಮಂಡಳೇಶ್ವರನಾದ ದೊರೆಯಿಂದ ತಾಮ್ರಶಾಸನದ ಮೂಲಕ ಕೊಳ್ಳಿಪಾಕೆ-೨೦೦೦ ಅನ್ನು ಪಡೆದುಕೊಂಡು ರಾಜಧಾನಿ ಕೊಳ್ಳಿಪಾಯಿಂದ ರಾಜ್ಯಭಾರ ಮಾಡುವಾಗ ಕಾಮರಸನು ಅಲ್ಲಿಯ ಮಲ್ಲೇಶ್ವರ ದೇವರಿಗೆ ಖಂಡಸ್ಫುಟಿತ ನವಸುಧಾಕರ್ಮಕ್ಕಾಗಿ, ಅಂಗ-ರಂಗಭೋಗಕ್ಕಾಗಿ ಅಲ್ಲಿಯ ತಪೋಧನ ವಿದ್ಯಾರ್ಥಿಗಳಿಗಾಗಿ ತ್ರಿಭೋಗಾಭ್ಯಂತರ ಸಿದ್ಧಿಯಂ ಸರ್ವನಮಸ್ಯವಾಗಿ ಅಲ್ಲಿಯ ಶ್ರೀಕಂಠ ಪಂಡಿತ ದೇವರಿಗೆ ಧಾರಾಪೂರ್ವಕವಾಗಿ ಅದರ ಸೀಮೆಯ ಗ್ರಾಮಗಳು ದತ್ತಿಯಾಗಿ ಬಿಟ್ಟು, ಇಲ್ಲಿ ನಡೆಯುವ ಶಿಕ್ಷಣ ಕಾರ್ಯಕ್ಕೆ ಉತ್ತೇಜಿಸಲಾಗಿದೆ ಎಂದು ದೇವಾಲಯಗಳ ಸಂರಕ್ಷಣೆ ಜೊತೆಗೆ ವಿದ್ಯಾರ್ಜನೆ ಕ್ರಿಯೆಗೆ ಪ್ರೋತ್ಸಾಹಿಸಿರುವುದು ಕಂಡುಬರುತ್ತದೆ(ಅದೇ, ಪು.೨೬೨).

ಕ್ರಿ.ಶ.೧೦೫೮ರ ಕಲ್ಬುರ್ಗಿ ಜಿಲ್ಲೆಯ ನಾಗಾವಿ ಶಾಸನವು ಅಲ್ಲಿಯ ತ್ರೈಪುರುಷರ ದೇವಾಲಯದಲ್ಲಿ ನೀಡುತ್ತಿರುವ ಶಿಕ್ಷಣ ಸ್ವರೂಪದ ಬಗ್ಗೆ ವಿವರಿಸಿದೆ. ಚಾಲುಕ್ಯ ದೊರೆ ತ್ರಿಲೋಕ ಮಲ್ಲನ ದಂಡಾಧಿಪತಿ ಕಾಳಿದಾಸನು ತನನ್ ದೊರೆಯಿಂದ ಪರಮೇಶ್ವರ ದತ್ತಿಯಾಗಿ ಪಡೆದುಕೊಂಡು ನಾಗಾವಿಯಲ್ಲಿ ತ್ರೈಪುರುಷ ದೇವರ ಶಾಲೆಯನ್ನು ಸ್ಥಾಪಿಸಿದನು. ಅದು ಕುಂತಳ ದೇಶಕ್ಕೆ ಕಿರೀಟ ಪ್ರಾಯವಾಗಿತ್ತು.

ಈ ತ್ರೈಪುರುಷ ದೇವಾಲಯದಲ್ಲಿ ಓದುವ ವಿದ್ಯಾರ್ಥಿಗಳಿಗಾಗಿ, ಅವರನ್ನು ಬೋಧಿಸುವ ಉಪಾಧ್ಯಯರಿಗಾಗಿ, ವಿವಿಧ ವೃತ್ತಿ ಕೈಗೊಳ್ಳುವವರಿಗಾಗಿ ಪ್ರತ್ಯೇಕವಾಗಿ ದತ್ತಿ ಬಿಟ್ಟ ವಿಷಯವನ್ನು ಉಲ್ಲೇಖಿಸುತ್ತದೆ. ಮುಂದೆ ಬಂದ ವಿಕ್ರಮಾದಿತ್ಯ ಸಹೋದರನಾದ ಅಯ್ಯರಸನು ಈ ತ್ರೈಪುರುಷ ಶಾಲೆಗೆ ಭೂಮಿಯನ್ನು ಧಾರಾಪೂರ್ವಕವಾಗಿ ದಾನ ಮಾಡಿದ ವಿವರ ಹೀಗಿದೆ. ಶಾಲೆಯಲ್ಲಿ ಓದುವ ವೇದಾಧ್ಯಯನ ಮಾಡುವವರು ೨೦೦ ಇನ್ನುಳಿದವರು ವಿವಿಧ ವಿಷಯಗಳು ಅಧ್ಯಯನ ಮಾಡುವವರು ೫೦ ಮತ್ತು ವಿವಿಧ ವಿಷಯಗಳನ್ನು ಬೋಧಿಸುವ ಉಪಾಧ್ಯಯರು ೨. ವೇದಾಧ್ಯಯನ ಬೋಧಿಸುವ ಉಪಾಧ್ಯಯರು ೨, ಸರಸ್ವತಿ ಭಂಡಾರಿಗ ೧, ಹೀಗೆ ೨೫೭ ಜನರಿಗಾಗಿ ಪ್ರತ್ಯೇಕವಾಗಿ ಅವರ ವಸನಕ್ಕಾಗಿ ಭೂದತ್ತಿ ಮತ್ತು ಆ ದೇವಾಲಯದ ಜೀರ್ಣೋದ್ಧಾರ ಕ್ಕಾಗಿ ೧೦೦೦ ಮತ್ತರು ಭೂದಾನ ಮಾಡಿದುದರ ಉಲ್ಲೇಖವಿದೆ. ಇಲ್ಲಿರುವ ತ್ರೈಪುರುಷರ ದೇವಾಲಯದಲ್ಲಿ ೨೫೦ ವಿದ್ಯಾರ್ಥಿಗಳಿಗೆ ವಿವಿಧ ವಿಷಯಗಳ ಬೋಧನೆ ಮಾಡಲಾಗುತ್ತಿತ್ತು ಮತ್ತು ಒಟ್ಟೊಟ್ಟಿಗೆ ದೇವಾಲಯದ ಜೀರ್ಣೋದ್ಧಾರ, ದೀಪ ಇತ್ಯಾದಿ ಕರ್ಮಕ್ಕಾಗಿ ಸರ್ವನಮಸ್ಯವಾಗಿ ಭೂದಾನ ನೀಡಲಾಗಿತ್ತೆಂದು ತಿಳಿದುಬರುತ್ತದೆ. ಹೀಗಾಗಿ ಅಂದಿನ ದೇವಾಲಯಗಳು ಧಾರ್ಮಿಕವಾಗಿ

ಆಧ್ಯಾತ್ಮಿಕ ಕೇಂದ್ರಗಳಾಗಿದ್ದು, ವಿದ್ಯಾದಾನಕ್ಕೂ ಹೆಚ್ಚಿನ ಆದ್ಯತೆ ನೀಡಿದ್ದವು ಎಂದು ಹೇಳಬಹುದು(ಹನುಮಾಕ್ಷಿ ಗೋಗಿ, ೧೯೯೬, ಕಲಬುರ್ಗಿ ಜಿಲ್ಲೆಯ ಶಾಸನಗಳು, ಪು.೧೯೨).

ಅದೇ ಜಿಲ್ಲೆಯ ಕ್ರಿ.ಶ.೧೧೧೮ರ ಹಂದರಕಿ ಶಾಸನವು ಕನ್ನಡ ಅಕ್ಷರ ಓದಿಸುವ ಉಪಾಧ್ಯಯರಿಗಾಗಿ ಭೂದಾನ ನೀಡಿದಂತೆ ಉಲ್ಲೇಖಿಸಿದೆ. ಚಾಲುಕ್ಯ ದೊರೆ ತ್ರಿಭುವನ ಮಲ್ಲದೇವನು ಜಯಂತಿಪುರದಿಂದ ರಾಜ್ಯಭಾರ ಮಾಡುತ್ತಿರುವಾಗ, ಆತನ ಮಹಾಮಂಡಳೇಶ್ವರನಾದ ಲೋಕರಸರು. ಅಲ್ಲಿಯ ಕನ್ನಡ ಅಕ್ಷರ ಓದುವ, ವಿದ್ಯಾರ್ಥಿ ಮಾಣಿಗಳಿಗೆ ಓದಿಸುವ ಉಪಾಧ್ಯಯರ ವರ್ಗಕ್ಕೆ ಭೂದತ್ತಿ ನೀಡಿದನೆಂದು ತಿಳಿದುಬರುತ್ತದೆ. ಅಂದು ಸಂಸ್ಕರತ ಭಾಷೆಯಲ್ಲಿಯೇ ವೇದ, ಆಗಮಗಳನ್ನು ಪಠಿಸುವ ಸಂದರ್ಭದಲ್ಲಿ ಕನ್ನಡ ಅಕ್ಷರವನ್ನು ಕಲಿಸುವುದು ಪ್ರಾಥಮಿಕ ಹಂತದಲ್ಲಿತ್ತು. ಅದಕ್ಕಾಗಿ ಪ್ರತ್ಯೇಕ ಉಪಾಧ್ಯಯರು ಇರುತ್ತಿದ್ದರೆಂದು ತಿಳಿದುಬರುತ್ತದೆ. ಹೀಗೆ ದೇವಾಲಯಗಳ ಜೀರ್ಣೋದ್ಧಾರಗಳ ಸಮಯದಲ್ಲಿ ಅಲ್ಲಿಯ ವಿದ್ಯಾಭ್ಯಾಸಕ್ಕಾಗಿಯೂ ಪ್ರತ್ಯೇಕ ಭೂದತ್ತಿ ನೀಡಲಾಗುತ್ತಿತ್ತು ಎಂದು ಹೇಳಬಹುದು(ಅದೇ, ಪು.೨೪೫).

ಕ್ರಿ.ಶ.೧೧೧೩ರ ಕೊಪ್ಪಳ ಜಿಲ್ಲೆಯ ಇಟಗಿ ಶಾಸನವು ಅಲ್ಲಿಯ ಮಹಾದೇವ ದಂಡಾಧಿಪತಿಯು ತನ್ನ ಹೆಸರಿನಲ್ಲಿ ಶ್ರೀ ಮಹಾದೇಶ್ವರ ದೇವಾಲಯವನ್ನು ನಿರ್ಮಿಸುತ್ತಾನೆ. ಈ ದೇವಾಲಯವನ್ನು 'ದೇವಾಲಯಗಳ ಚಕ್ರವರ್ತಿ' ಎಂದು ಶಾಸನವು ಉಲ್ಲೇಖಿಸಿದೆ. ಇಂತಹ ದೇವಾಲಯದ ಪ್ರತಿಷ್ಠಾಪನೆ ಮಾಡಿದ ಈತನು ಅಲ್ಲಿಯ ವಿವಿಧ ವಿಷಯಗಳಾದ ಋಗ್ವೇದದ ಬಾಲಶಿಕ್ಷೆ, ಯಜುರ್ವೇದದ ಬಾಲಶಿಕ್ಷೆ ನೀಡುವ ಉಪಾಧ್ಯಾಯರಿಗೆ, ದೇವಾಲಯದ ದತ್ತಿಗಳೊಡನೆ, ವಿದ್ಯಾದಾನಕ್ಕಾಗಿ ದತ್ತಿ ಬಿಟ್ಟಂತೆ ಕಂಡುಬರುತ್ತದೆ. ಇದರಿಂದ ಅಂತಹ ಶ್ರೇಷ್ಠ ದೇವಾಲಯ ನಿರ್ಮಿಸಿದ ಮಹಾದೇವ ದಂಡಾಧಿಪ ವಿದ್ಯಾದಾನವೂ ಒಂದು ಶ್ರೇಷ್ಠ ಕಾರ್ಯವಾಗಿದೆ ಎಂದು ತಿಳಿದುಕೊಂಡಿದನೆಂದು ಹೇಳಬಹುದು(ಕ.ವಿ.ಶಾ.ಸಂ.೨, ಪು.೨೬೭).

ಹೀಗೆ ಕಲ್ಬುರ್ಗಿ ಜಿಲ್ಲೆಯ ಶಿರೊಳಿ, ಮೋಘಾ, ಮುದನೂರು, ಹಗರಟಗೆ, ಗೊಬ್ಬುರ ಇಂಗಳಗಿ, ಸುಲೇಪೇಟ, ದಿಗ್ಗಾವಿ, ಸಿರಿವಾಳ, ಹುನಗುಂದಾ, ನಾಗಾವಿ, ಇವು ಪ್ರಮುಖ ಅಂದಿನ ವಿದ್ಯಾಕೇಂದ್ರಗಳಾಗಿದ್ದವು. ಅಲ್ಲದೇ ಬೀದರನ ಗೋರ್ಟಾ(ಬಿ), ಚಂದಾಪುರ, ಭಾಲ್ಕಿ, ರಂಜೇರು, ಕೋಟಗ್ಯಾಳ, ಬರೂರ, ಚೆಲ್ಲರಗೆ ಪ್ರಮುಖವಾಗಿದ್ದವು. ಕೊಪ್ಪಳ ಜಿಲ್ಲೆಯ ಅಳವಂಡಿ, ಮುದೇನೂರು, ಮುಧೋಳ, ಕುಕನೂರು, ತಳಕಲ್, ಇಟಗಿ, ಗೊಂಡಿಬಾಳ, ಬಳಗೇರಿ ಮತ್ತು ರಾಯಚೂರು ಜಿಲ್ಲೆಯ ಬಳ್ಳಟಗಿ, ಬೆಳಗುರ್ಕಿ, ತಡಕಲ್ ಹಿರಿಯ ಬಳಗಾನೂರು, ಕೊಟ್ಟು ಕುಣಿಹೆ ಕರಡಿಗುಕಲ್, ಬನ್ನಿಗೊಳ್, ಕಲ್ಲೂರು, ಕಲಬುರ್ಗಿಯ ಸೇಡಿಂಬ, ಸುಲೇಪೇಟ,

ಸಾಲಿಗುಂದೆ, ಗಬ್ಬೂರು, ರಾರಾವಿ ಮತ್ತು ಯಾದಗೀರ ಜಿಲ್ಲೆಯ ಏವೂರು, ಎಡೆಯಪೂರ, ಮುದಿನೂರು, ರಾಜನ ಕೋಳೂರು, ಹಗರಟಗೆ, ವಿಕ್ರಮಪುರ, ಹುಣಸಗಿ, ಮುದಿನೀರ, ಕರಿಬಾಳ ಹಾಗೂ ತೆಲಂಗಾಣದ ಮಹಬೂಬನಗರ ಜಿಲ್ಲೆಯ ಅಲಂಪುರ, ನೆಮೊಂಡ, ಬೋಧನ, ನಲಗೊಂಡ ಜಿಲ್ಲೆಯ ತಾಳಿಮಟ್ಟ, ಕಲ್ವಚೇಡು ಕೊಲನುಪಾಕ ಮತ್ತು ಕರೀಮನಗರ ಜಿಲ್ಲೆಯ ವೇಮುಲವಾಡ ಈ ಪ್ರದೇಶಗಳು ಈ ಭಾಗದ ಪ್ರಮುಖ ಅಗ್ರಹಾರಗಳಾಗಿದ್ದವು ಮತ್ತು ಅಲ್ಲಿಯ ದೇವಾಲಯಗಳು ವಿದ್ಯಾದಾನ ಮಾಡುವ ಸಂಸ್ಥೆಗಳಾಗಿದ್ದವೆಂದು ಶಾಸನಗಳಾಧಾರಿತವಾಗಿ ಹೇಳಬಹುದಾಗಿದೆ.

ಹೀಗಾಗಿ ಅಂದಿನ ದೇವಾಲಯಗಳು "ಸರ್ವೇಜನ ಸುಖಿನೋ ಭವಂತು" ಎನ್ನುವ ಹಿನ್ನೆಲೆಯಲ್ಲಿ ಅಂದಿನ ಆಳರಸರು ದೇವಾಲಯವು ತಾವು ಇಲ್ಲವೇ ತಮ್ಮ ಒಡೆಯ ಇಲ್ಲವೆ, ತಂದೆ–ತಾಯಿಯರ ಸ್ಮರಣಾರ್ಥವಾಗಿ ದೇವಾಲಯಗಳನ್ನು ನಿರ್ಮಿಸುತ್ತಿದ್ದರು. ನಿರ್ಮಿಸಿ, ಅದರ ಸರ್ವಾಂಗೀಣ ಅಭಿವೃದ್ದಿಗಾಗಿ, ಅಲ್ಲಿಯ ಸ್ಥಾನಪತಿಗೆ ನೇಮಿಸಿ, ಉದಾರವಾಗಿ, ಸರ್ವನಮಸ್ಯವಾಗಿ ಭೂದತ್ತಿ, ಗ್ರಾಮಗಳ ದಾನ ನೀಡುವುದರ ಮೂಲಕ, ಈ ದೇವಾಲಯಗಳ ನಿರ್ವಹಣೆಗಾಗಿ ಬಿಡುವ ದತ್ತಿಯಲ್ಲಿ ಅಲ್ಲಿಯ ವಿದ್ಯಾರ್ಥಿ, ಮಾಣಿಗಳಿಗಾಗಿ, ಅವರನ್ನು ಬೋಧಿಸುವ ಉಪಾಧ್ಯಯ ವರ್ಗದವರ ಜೀವನ ನಡೆಸುವುದಕ್ಕಾಗಿ, ಪ್ರತ್ಯೇಕ ದತ್ತಿ ಬಿಡುತ್ತಿದ್ದರು. ಅದಲ್ಲದೆ ಅಂದಿನ ಆಳರಸರು, ತಮ್ಮ ಆಸ್ಥಾನದಲ್ಲಿ ಅನೇಕ ವಿಷಯಗಳ ಪಂಡಿತ ವರ್ಗವನ್ನವುಳ್ಳವರಿದ್ದರು, ಅಲ್ಲದೆ, ಯುವ ಪೀಳಿಗೆಗಾಗಿ, ವಿದ್ಯಾದಾನ ಮಾಡುವುದು ಅವರ ದೇವಾಲಯಗಳ ಒಂದು ಅವಿಭಾಜ್ಯ ಅಂಗವೇ ಆಗಿತೆಂದು ತಿಳಿದುಬರುತ್ತದೆ. ಹೀಗಾಗಿ ಅವರು ವಿದ್ಯಾಪ್ರೇಮಿಯಾಗಿದ್ದು, ಅಲೌಕಿಕ ಜ್ಞಾನ ಬೋಧನೆಯೊಂದಿಗೆ, ಲೌಖಿಕ ಜ್ಞಾನ ಪ್ರಸಾರದ ಕೆಲಸವೂ ನಿರ್ವಹಿಸುತ್ತಿದ್ದುದನ್ನು ಈ ಭಾಗದ ಅನೇಕ ಶಾಸನಗಳು ಉಲ್ಲೇಖಿಸುತ್ತವೆ.

ಹೀಗೆ ದೇವಾಲಯಗಳಲ್ಲಿ ಮತ್ತು ಅವುಗಳ ಒಂದು ಅಂಗವಾಗಿರುವ ಮಠಗಳಲ್ಲಿ, ವಿವಿಧ ರೀತಿಯ ಅಕ್ಕರ ವಿದ್ಯೆಗಳನ್ನು ಕಲಿಸಲಾಗುತ್ತಿತ್ತು ಎಂಬುದನ್ನೂ, ಅಂತಹ ದೇವಾಲಯಗಳೂ ಮಠಗಳೂ ಅಂದಿನ ಪ್ರಮುಖ ಶಿಕ್ಷಣಕೇಂದ್ರಗಳಾಗಿದ್ದವೆಂಬುದನ್ನೂ ಇಲ್ಲಿಯ ಶಾಸನಗಳು ದೃಢಪಡಿಸುತ್ತವೆ.

ಬ್ರಹ್ಮಪುರಿಗಳು

ಬ್ರಹ್ಮಪುರಿಗಳು ಬ್ರಾಹ್ಮಣರ ವಾಸಸ್ಥಾನಗಳಾಗಿದ್ದವು. ಕೆಲವೊಂದು ಶಾಸನಗಳಲ್ಲಿ ಅಗ್ರಹಾರಗಳ ಬದಲಾಗಿ ಪರ್ಯಾಯವಾಗಿ ಬ್ರಹ್ಮಪುರಿಯೆಂದೂ ಉಲ್ಲೇಖವಾಗಿದೆ. "ನಗರಗಳಲ್ಲಿ ಅಥವಾ

ಪಟ್ಟಣಗಳಲ್ಲಿ ಬ್ರಾಹ್ಮಣ ವಿದ್ವಾಂಸರು ವಾಸಿಸುವ ಭಾಗವೇ ಬ್ರಹ್ಮಪುರಿ. ಅಗ್ರಹಾರಗಳು ಊರುಗಳಾದರೆ, ಬ್ರಹ್ಮಪುರಿಗಳು ಪಟ್ಟಣಗಳ ಭಾಗಗಳು. ಅಗ್ರಹಾರಗಳಿಗಿಂತ ಬ್ರಹ್ಮಪುರಿಗಳ ಸಂಖ್ಯೆ ಕಡಿಮೆ. ಏಕೆಂದರೆ ಪ್ರಾಚೀನ ಕರ್ನಾಟಕದಲ್ಲಿ ಹಳ್ಳಿಗಳ ಸಂಖ್ಯೆ ಹೆಚ್ಚು, ನಗರಗಳ ಸಂಖ್ಯೆ ಕಡಿಮೆ. ಅಗ್ರಹಾರಗಳಲ್ಲಿದ್ದ ಬ್ರಾಹ್ಮಣರು ಆ ಊರುಗಳ ಒಡೆಯರು. ಆದರೆ ಬ್ರಹ್ಮಪುರಿಗಳಲ್ಲಿದ್ದ ಬ್ರಾಹ್ಮಣರು ಆ ಊರಿನ ಇತರ ಪಂಗಡಗಳ ಜನರಿದ್ದಂತೆ ಅಷ್ಟೆ. ಅಗ್ರಹಾರದ ಬ್ರಾಹ್ಮಣರಿಗಿದ್ದ ಅಧಿಕಾರ ಇವರಿಗಿರಲಿಲ್ಲ". ಆದರೂ ವಿದ್ಯಾದಾನ ಮಾಡುವುದರಲ್ಲಿ ಬ್ರಹ್ಮಪುರಿಗಳು ತಮ್ಮನ್ನು ತಾವು ತೊಡಗಿಸಿಕೊಂಡಿದ್ದವೆಂದು ಮಾತ್ರ ಹೇಳಬಹುದು.

ಕ್ರಿ.ಶ.೧೧೨೧ರ ತೆಲಂಗಾಣದ ನೆಖೊಂಡ ಶಾಸನವು ಜಯಂತಿಪುರದಿಂದ ರಾಜ್ಯಭಾರ ಮಾಡುತ್ತಿರುವ ಚಾಲುಕ್ಯದೊರೆ ತ್ರಿಭುವನಮಲ್ಲದೇವರನ ಮಗ, ಮಹಾಮಂಡಳೇಶ್ವರ ಕುಮಾರ ತೈಲಪನು ಕೋಳೂರಿನ ರಾಜ್ಯಧಾನಿಯಲ್ಲಿ ರಾಜ್ಯಭಾರ ಮಾಡುತ್ತಿರುವಾಗ ನೆಕ್ಕೊಂಡಿಯ ಈ ರಾಮೇಶ್ವರ ದೇವರಿಗೆ ಅಂಗಭೋಗ, ರಂಗಭೋಗಕ್ಕಾಗಿ ಮತ್ತು ಅಲ್ಲಿಯ ಬ್ರಹ್ಮಪುರಿಯ ನಾಗಿಯಣ್ಣ ಭಟ್ಟನಿಗೆ ತ್ರಿಭೋಗ್ಯಾಭ್ಯಂತರವಾಗಿ ಸರ್ವನಮಸ್ಯವಾಗಿ ಕಂದೂರು ಸಾಸಿರದ ನೂರುಂಬಾಡದ ಸಮಕಟ್ಟಿನ ಕಂದೂರು ೭೦ರ ಬಳಿಯ ಬಾಡಂ ಬೂದುಪೂರಂ ದೇವರ ಬಡಗಣ ಕೆರೆಗೆ ನೀರಾವರಿಯ ಪ್ರಮಾಣದ ನೆಕ್ಕೊಂಡೆಯ ಬಡಗಣದಲ್ಲಿ ಬನದ ಹಡುವಣ ರಾವಣದೊಳರ್ದ್ದ ಮನಂಬಿಟ್ಟರು" ಎಂದು ಉಲ್ಲೇಖಿಸಿದೆ(ಕ.ವಿ.ಶಾ.ಸಂ.೫, ಭಾಗ ೨, ಪು.೧೭೬).

ಕ್ರಿ.ಶ.೧೦೫೬ರ ನಿಜಾಮಾಬಾದ ಜಿಲ್ಲೆಯ ಬೋಧನ ಶಾಸನವು ಚಾಲುಕ್ಯ ದೊರೆ ತ್ರೈಲೋಕ್ಯಮಲ್ಲ ಸೋಮೇಶ್ವರ–೧ ಆಳ್ವಿಯನ್ನು ಉಲ್ಲೇಖಿಸಿ, ಅಲ್ಲಿಯ ಬ್ರಹ್ಮಪುರಿಗೇರಿಯನ್ನು ಉಲ್ಲೇಖಿಸುತ್ತದೆ. ಈ ಬ್ರಹ್ಮಪುರಿ ಬಗ್ಗೆ ಹೆಚ್ಚಿನ ಮಾಹಿತಿ ತಿಳಿದುಬರುವುದಿಲ್ಲ(ಅದೇ, ಪೂರ್ವೋಕ್ತ, ಪು.೩೨೬).

ಕ್ರಿ.ಶ.೧೦೭೭ರ ಯಾದಗೀರ ಜಿಲ್ಲೆಯ ಏವೂರು ಶಾಸನವು ಚಾಲುಕ್ಯ ದೊರೆ ತ್ರಿಭುವಮಲ್ಲನ ಆಳ್ವಿಕೆಯ ಕಲ್ಯಾಣದಿಂದ ರಾಜ್ಯಭಾರ ಮಾಡುತ್ತಿರುವಾಗ ಆತನ ಮಹಾಪ್ರಧಾನ ಹೇರಿಲಾಳ ಸಂಧಿವಿಗ್ರಹಿ ದಂಡನಾಯಕ ರವಿಯಣಭಟ್ಟನು ಏವೂರಿನ ಶ್ರೀಸ್ವಯಂಭುಂ ದೇವಗಳ ಜೀರ್ಣೋದ್ಧಾರ, ನವಸುಧಾಕಮ್ಮರ್ಕ್ಕಂ ಮತ್ತು ಅಲ್ಲಿಯ ಬ್ರಹ್ಮಪುರಿಯಲ್ಲಿ ಓದುವ ಪಾವುಳವರ್ಗ್ಗಕ್ಕಂ ಓದುವ, ಕೇಳ್ವ ವಿದ್ಯಾರ್ಥಿಗಳಿಗಾಗಿ, ಅಲ್ಲಿಯ ತಪೋಧನರ ಛಾತ್ರರಶನಾಚ್ಛಾದನಕ್ಕಂ, ಅವರಿಗೆ ವಕ್ಖಾಣಿಸುವ ಭಟ್ಟರ್ಗ್ಗಂ, ಗ್ರಹಣಾದಿ ಪರ್ವ್ವಹೋಮ ಬಲಿಕ್ರಿಯಾದಿಗಳ ಬ್ರಹ್ಮಣಾದಿಗಳಿಗೆ, ಮತ್ತು ಬ್ರಹ್ಮಪುರಿಯ ಬ್ರಾಹ್ಮಣರಿಗೆ ಎಳರಾವೆಯ ಛಳೆಯೊಳ್ ಕಿರಿಯ ಬೆಳ್ಳುಂಬಟ್ಟಿಯ ಪೊಲದೊಳ್ ಬಿಟ್ಟ ಕೈಯ

ಮತ್ತರು" ಎಂದು ತಿಳಿಸುತ್ತದೆ(ಹನುಮಾಕ್ಷಿ ಗೋಗಿ, ಸುರಪುರ ತಾಲೂಕಿನ ಶಾಸನಗಳು, ಪು.೨೫-೨೬). ಮುದನೂರು ಶಾಸನವು ಕ್ರಿ.ಶ.ಸು.೧೨ ಶತಮಾನದ್ದಾಗಿದೆ. ಅಲ್ಲಿಯ ದೊರೆ ಚಾಲುಕ್ಯ ದೊರೆ ಆರನೆ ವಿಕ್ರಮಾದಿತ್ಯನು ರಾಜ್ಯಭಾರ ಮಾಡುತ್ತಿರುವಾಗ ಆತನ ಮಹಾಮಂಡಳೇಶ್ವರನಾದ ಲಕ್ಷ್ಮರಸನ ಕುಮಾರ ಕಪ್ಪದೇವರಸರುಮತ್ತು ಅಲ್ಲಿಯ ಅವರ ದುರ್ಗಾದಾಳೊಡೆಯ ನಾಯಕ ಪ್ರಮುಖ ಕರಣಂಗಳು ಮತ್ತು ಮಹಾಜನಂಗಳೈನೂರ್ವ್ವರುಂ ಈ ಸಮಸ್ತರ ಒಪ್ಪಿಯಿಂದ "ದೇವರ ಬ್ರಹ್ಮಪುರಿ"ಯ ಸತ್ರದಲ್ಲಿ ಅಗ್ಗಿಷ್ಟಿಗೆ ಬಿಟ್ಟ ವ್ರಿತ್ತಿವಕ್ಕಲದೆರೆಯ ಲೊಂದರೆವೀಸಂ ಅಂನ್ಯಾಯ ಕಾಹು ಕಾಣಿಕೆಯೊಳಗಾಗಿ ಯೇನು ಬಂದಡಂ ಪೂರೊಡೆಯ ಪ್ರಮುಖ ಮಹಾಜನಂಗಳುಂ ಸಮಸ್ತ ಪ್ರಜೆಗಳುಂ ಕೊಡುವರು ಎಂದು ತಿಳಿಸುತ್ತಾರೆ.

ಹೀಗೆ ಇಲ್ಲಿಯ ಅಗ್ರಹಾರವು 'ದೇವರ ಬ್ರಹ್ಮಪುರಿ'ವೆಂದು ಉಲ್ಲೇಖಿಸಿದ್ದುದು ವಿಶೇಷವಾಗಿದ್ದು; ಅಲ್ಲಿ ಹೊತ್ತಿಸಿದ ಬೆಂಕಿಯು ಇಡೀ ಊರಿನ ಜನ ಬಳಸುತ್ತಿದ್ದರು. ಹೀಗಾಗಿ ಎಲ್ಲರೂ ಅದಕ್ಕೆ ತೆರಿಗೆಯಾಗಿ ನೀಡಬೇಕೆಂದು ತಿಳಿಸುತ್ತದೆ(ಅದೇ, ಪು.೧೩೯).

ಬೀದರ ಜಿಲ್ಲೆಯ ಭಾಲ್ಕಿಯ ಕ್ರಿ.ಶ.೧೧೧೦೫ರ ಶಾಸನವು ಅಲ್ಲಿಯ ಬ್ರಹ್ಮಪುರಿಗೆ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಚಾಲುಕ್ಯರ ಮಹಾಮಂಡಳೇಶ್ವರ ಪೆರ್ಮಾಡಿಯು ರಾಜಧಾನಿ ಭಲ್ಲುಂಕೆಯ ಬ್ರಹ್ಮಪುರಿಯ ಮಹಾಜನಗಳಿಗೆ ಸಂಕ್ರಾಂತಿಯಂದು ಎರಡುಂವಾಡದ ಹಿರಸೆಮಡೆಯ ಉಪಾಧ್ಯಾಯಗೆ ಮತ್ತು ಅಲ್ಲಿಯ ಮಹಾಜನಗಳಿಗಾಗಿ ಹತ್ತು ಗದ್ಯಾನ ಹೊಲವನ್ನು ದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ. ಹೀಗಾಗಿ ಇಂದಿನ ಬೀದರ ತಾಲೂಕಿನ ಭಾಲ್ಕಿಯು ಅಂದು ಪ್ರಸಿದ್ಧ ಬ್ರಹ್ಮಪುರಿಯಾಗಿತ್ತು ಎಂದು ತಿಳಿದುಬರುತ್ತದೆ(ಕ.ವಿ.ಶಾ.ಸಂ.೮, ಪು.೯೪).

ಕ್ರಿ.ಶ.೧೦೫೯ರ ರಾಯಚೂರು ಜಿಲ್ಲೆಯ ಕರಡಿಕಲ್ ಶಾಸನವು ಅಲ್ಲಿಯ ಬ್ರಹ್ಮಪುರಿಗೆ ದತ್ತಿ ಬಿಟ್ಟ ಬಗ್ಗೆ ಪ್ರಸ್ತಾಪಿಸುತ್ತದೆ. ಚಾಲುಕ್ಯ ದೊರೆ ತ್ರಿಭುವಮಲ್ಲನ ಆಳ್ವಿಕೆಯ ಕಾಲದಲ್ಲಿ ಅಲ್ಲಿಯ ಶ್ರೀ ಸ್ವಯಂಭು ಸೋಮೇಶ್ವರ ದೇವರಿಗೆ ದಾನ ಬಿಡುವಾಗ; ಅಲ್ಲಿಯ ಬ್ರಹ್ಮಪುರಿಯ ಬ್ರಾಹ್ಮಣ ವರ್ಗದವರಿಗೂ ಇಪ್ಪತ್ತು ಮತ್ತರು ಭೂಮಿಯನ್ನು ದಾನ ನೀಡಿದ ವಿಷಯ ತಿಳಿದು ಬರುತ್ತದೆ(ಕ.ವಿ.ಶಾ.ಸಂ.೭, ಪು.೧೩೦).

ಕ್ರಿ.ಶ.೧೦೮೮ರ ತೆಲಂಗಾಣದ ನಲ್ಗೊಂಡ ಜಿಲ್ಲೆಯ ಕೊಲನುಪಾಕ ಶಾಸನವು ಅಲ್ಲಿ ಓದುವ ಛಾತ್ರರಿಗೆ, ಅವರ ಸತ್ರಕ್ಕಾಗಿ ದತ್ತಿಬಿಟ್ಟ ವಿಷಯ ಸೂಚಿಸುತ್ತದೆ. ಕೊಳ್ಳಿಪಾಕೆ ೨೦೦೦ವನ್ನು ಆಳುತ್ತಿದ್ದ ಕಂದೂರು ತೊಂಡಯ ಚೋಳ ಮಹಾರಾಜನ ರಾಜ್ಯಭಾರವನ್ನು ಬೆಳೆಸಿದೆ. ಇಲ್ಲಿಯ ಸಕಳ ಕುಲಾಕುಳ ಸಿದ್ಧಾಂತ ತತ್ವಮಣಿ, ಪ್ರದೀಪಂ ವಿದ್ಯಾನಿಧಿ, ಲೀಲಾನಿಕೇತನಂ ಬುದ್ಧಿ

ವಿದ್ವಾಂಸ ಶ್ರೀ ದಾರಪಂಡಿತ ಮತ್ತು ಶಿಷ್ಯ ರಾಮೇಶ್ವರ ಪಂಡಿತರಿಗೆ ಧಾರಾಪೂರ್ವಕವಾಗಿ ಉತ್ತರೇಶ್ವರ ದೇವರ ಅಂಗ-ರಂಗಭೋಗಕ್ಕಾಗಿ ಮತ್ತು ಅಲ್ಲಿ ಓದುವ ವಿದ್ಯಾರ್ಥಿಗಳಿಗಾಗಿ, ಅವರ ನಿವಾಸಕ್ಕಾಗಿ ಹನ್ನೆರಡು ಗಡಿಯಲ್ಲಿ ತಳವೃತ್ತಿಯಾಗಿ ದತ್ತಿ ನೀಡಿದನ್ನು ತಿಳಿಸಿದೆ(ಕ.ವಿ.ಶಾ.ಸಂ.೫, ಭಾಗ ೨, ಪು.೨೨೧).

ಯಾದಗಿರಿ ಜಿಲ್ಲೆಯ ರಾಜನ ಕೋಳೂರುವ ಕ್ರಿ.ಶ.೧೯೧ರ ಶಾಸನವು ಕಲ್ಯಾಣ ಚಾಲುಕ್ಯದೊರೆ ತ್ರಿಭುವನಮಲ್ಲ ಆರನೆ ವಿಕ್ರಮಾದಿತ್ಯನ ರಾಣಿ ಚಂದಲಾದೇವಿಯು ಸೂರ್ಯಗ್ರಹಣ ನಿಮಿತ್ತವಾಗಿ ರಾಜ್ಯಕೊಳೂರಿನಲ್ಲಿ ಸರ್ವನಮಸ್ಯವಾಗಿ ಅಲ್ಲಿಯ ಬ್ರಹ್ಮಪುರಿಯ ಬ್ರಾಹ್ಮಣರಿಗಾಗಿ ೩೨ ಬ್ಬೆರ್ಗೆ ಧಾರಾಪೂರ್ವಕವಾಗಿ ಹಿರಣ್ಯ ಸಹಿತ ಕಾಲಕರ್ಚ್ಚಿ ೪೨ ಗೇಣ ಫಳೆಯಲಳೆದು ಪಗರಿಟ್ಟಗೆಯ ಸೀಮೆಯಿಂ ಮೂಡ ಜಲಪಾಷಾಣ ಮೊರಗಾಗಿ ಬಿಟ್ಟ ಕರಿಯ ನೆಲಂ ಮತ್ತರು ೧೧೧" ಎಂದು ಉಲ್ಲೇಖಿಸುತ್ತದೆ ರಾಜನ ಕೋಳೂರು ಕೂಡ ಒಂದು ಪ್ರಮುಖ ಬ್ರಹ್ಮಪುರಿ ಯಾಗಿತ್ತೆಂದು ತಿಳಿದುಬರುತ್ತದೆ(ಹನುಮಾಕ್ಷಿ ಗೋಗಿ, ಸುರಪುರ ತಾಲೂಕಿನ ಶಾಸನಗಳು, ಪು.೧೫೭).

ಬೀದರ ಜಿಲ್ಲೆಯ ರಂಜೇರು ಶಾಸನವು ಅಲ್ಲಿಯ ಬ್ರಹ್ಮಪುರಿ ಬಗ್ಗೆ ಉಲ್ಲೇಖಿಸಿದೆ. ಅಲ್ಲಿಯ ಭೈರವರಸರು ತನ್ನ ತಂದೆಯ ಹೆಸರಿನಲ್ಲಿ ಹೆಮ್ಮೇಶ್ವರ ದೇವಾಲಯ, ತಾಯಿಯ ಹೆಸರಿನಲ್ಲಿ ಮೈಳಲೇಶ್ವರ ದೇವಾಲಯ ನಿರ್ಮಿಸುತ್ತಾನೆ. ಅವುಗಳ ನಿರ್ವಹಣೆಗಾಗಿ ಮತ್ತು ಅಲ್ಲಿಯ ಹೇಮೇಶ್ವರ ಬ್ರಹ್ಮಪುರಿಯ ಬ್ರಾಹ್ಮಣರಿಗೆ ದಕ್ಷಿಣದಲ್ಲಿ ೬೦ ಮತ್ತರು ಭೂಮಿಯನ್ನು ನೀಡಿದನೆಂದು ತಿಳಿಸುತ್ತದೆ. ಹೀಗಾಗಿ ಇಂದಿನ ರಂಜೇರಿ ಸಿಂಧರ ಅಟ್ಟಳೆನಾಡಿನ ರಾಜಧಾನಿ ಯಾಗಿತ್ತು. ಪ್ರಸಿದ್ಧ ವ್ಯಾಪಾರ ಕೇಂದ್ರವಾಗಿತ್ತು. ಅಲ್ಲದೆ ಅಂದು 'ಬ್ರಹ್ಮಪುರಿ'ಯು ಹೊಂದಿತೆಂದು ತಿಳಿದುಬರುತ್ತದೆ(ಕ.ವಿ.ಶಾ.ಸಂ.೮, ಪೂರ್ವೋಕ್ತ, ಪು.೧೭೧).

ಅದೇ ಜಿಲ್ಲೆಯ ಕ್ರಿ.ಶ.೧೦೮೭ರ ಕೊಟಗ್ಯಾಳ ಶಾಸನವು ಚಾಲುಕ್ಯದೊರೆ ತ್ರಿಭುವನಮಲ್ಲನು ಜಯಂತಿಪುರದಿಮದ ರಾಜ್ಯಭಾರ ಮಾಡುತ್ತಿರುವಾಗ ಹೀಗೆ ಉಲ್ಲೇಖಿಸಿದೆ "ಯಕ್ಕಂಗಳು ಶ್ರೀಮತ್ಸರ್ವ್ವ ನಮಸ್ಯ ನಿತ್ಯ ಶು..... ದಾನದಗ್ರಹಾರಂ ೦ಗೇರಿಯಲು ತಮ್ಮ ಮಾಡಿಸಿದ ಶ್ರೀ ಕೇಶವದೇವರ ರಂಗಭೋಗಕಂ ನಿವೇದ್ಯಕ್ಕೆ ತಮ್ಮ ತನ್ದೆ ಪಿರಿಯನರ್ದ್ಧ ವ್ರಿತ್ತಿಯೊಳಗೆ ಬಿಟ ವೃತ್ತಿ" ಎಂದು ಉಲ್ಲೇಖಿಸಿದೆ. ಈ ಶಾಸನದಲ್ಲಿ ಉಕ್ತವಾದ ಯಕ್ಕ ಪದವು ಇದು ಸ್ತ್ರೀವಾಚಕ ಶಬ್ದವಾಗಿರಬಹುದು. ಈಕೆಯ ತಂದೆಯ ಹಿರಿಯ ವೃತ್ತಿಯಲ್ಲಿ ಅರ್ಧ ವೃತ್ತಿಯಾಗಿ ಬಿಟ್ಟ ದತ್ತಿ ಎನ್ನುವಂತಿದೆ ಮತ್ತು ಉಲ್ಲೇಖವಾಗಿರುವ '೦ಗೇರಿ' ಸ್ಥಳ ಯಾವುದಾಗಿರಬೇಕು ಎಂಬುವುದು ತಿಳಿದುಬರುತ್ತಿಲ್ಲ(ಅದೇ, ಪೂರ್ವೋಕ್ತ, ಪು.೧೧೭)

ಕ್ರಿ.ಶ.ಸು.೧೨ನೆಯ ಶತಮಾನದ ಯಡ್ರಾಮಿಯ ಶಾಸನವು(ಹನುಮಾಕ್ಷಿ ಗೋಗಿ, ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪೂರ್ವೋಕ್ತ, ಪು.೨೪೯)ಅಲ್ಲಿ ಉಭಯಪುರಿಗಳಿದ್ದ ವೆಂದೂ, ಈ ಉಭಯಪುರಿಗಳಲ್ಲಿದ್ದ ವಿದ್ಯಾಸತ್ರಕ್ಕಾಗಿ, ಅಲ್ಲಿಯ ತಪೋಧನರಿಗಾಗಿ, ತ್ರೈಲೋಕಮಲ್ಲನ ಮಹಾಸಮಂತನಾದ ಏಚರಸನು ಭೂದತ್ತಿ ಬಿಟ್ಟನೆಂದೂ ತಿಳಿಸುತ್ತದೆ. ಇದೇ ಊರಿನ ಇನ್ನೊಂದು ಶಾಸನವು(ಅದೇ, ಪು.೨೨೦) ಈ ಯಡ್ರಾಮಿಯು ಕನ್ನಡ ಅಕ್ಕರದ ವಿದ್ಯಾಸ್ಥಾನವಾಗಿತ್ತೆಂದು ತಿಳಿಸುತ್ತದೆ. ಕ್ರಿ.ಶ. ೧೦೬೦ರ ಮಹಬೂಬ್‌ನಗರ್ ಜಿಲ್ಲೆಯ ಅಲಂಪುರದ ಒಂದು ಶಾಸನವು(ಕ.ವಿ.ಶಾ.ಸಂ.೫, ಭಾಗ.೨, ಪೂರ್ವೋಕ್ತ, ಪು.೧೫೨)ಅಲ್ಲಿಯ ಬ್ರಹ್ಮಪುರಿಯ ಜನರು ಪಾಪವಿನಾಶದ ತ್ರಿಭುವನಶಕ್ತಿ ಪಂಡಿತರಿಗೆ ಅಲ್ಲಿಯ ತಪೋಧನರ ವಿದ್ಯಾದಾನಕ್ಕಾಗಿ ೪೫ ಮತ್ತರು ಕರಿಯ ನೆಲವನ್ನು ಸರ್ವನಮಸ್ಯವಾಗಿ ನೀಡಿದರೆಂದು ಉಲ್ಲೇಖಿಸುತ್ತದೆ. ಕ್ರಿ.ಶ.೧೧೭೯ರ ಕರಡ್ಕಲ್ ಶಾಸನವು(ಕ.ವಿ.ಶಾ.ಸಂ.೭, ಪು.೧೩೦) ಅಲ್ಲಿಯ ಬ್ರಹ್ಮಪುರಿಯ ಬ್ರಾಹ್ಮಣರಿಗೆ ೨೦ ಮತ್ತರು ಭೂಮಿಯನ್ನು ದಾನವಾಗಿ ನೀಡಿದ್ದನ್ನು ಉಲ್ಲೇಖಿಸುತ್ತದೆ. ಬಹುಶಃ ಅಗ್ರಹಾರದ ಮಹಾಜನರಂತೆ ಇವರು ಕೂಡ ವಿದ್ಯಾದಾನದಲ್ಲಿ ತೊಡಗಿರುವುದರಿಂದ ಅಲ್ಲಿಯ ಬ್ರಾಹ್ಮಣರ ಉಪಜೀವನಕ್ಕಾಗಿ ಈ ಭೂದಾನ ನೀಡಿರಬಹುದೆಂದು ಹೇಳಬಹುದು.

ಕ್ರಿ.ಶ.೧೧೭೭ರ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ಏವೂರು ಶಾಸನವು(ಹನುಮಾಕ್ಷಿ ಗೋಗಿ, ಸುರಪುರ ತಾಲೂಕಿನ ಶಾಸನಗಳು, ಪು.೨೬) ಅಲ್ಲಿಯ ಬ್ರಹ್ಮಪುರಿಯ ಬ್ರಾಹ್ಮಣರಿಗೆ, ಅಲ್ಲಿಯ ಸತ್ರಕ್ಕೆ, ಅಲ್ಲಿ ಓದುವ ಮತ್ತು ಕೇಳುವ ವಿದ್ಯಾರ್ಥಿ ತಪೋಧನರಿಗೆ ಛಾತ್ರರ ಅಶನಆಚ್ಛಾದನಗಳಿಗಾಗಿ, ಮತ್ತು ಇವರಿಗೆ ಬೋಧಿಸುವ ಭಟ್ಟರಿಗಾಗಿ, ಭೂಮಿಯನ್ನು ದತ್ತಿ ಬಿಟ್ಟಂತೆ ಹೇಳುತ್ತದೆ. ಇದರಿಂದ ತಿಳಿದುಬರುವ ಅಂಶಗಳೆಂದರೆ ಬ್ರಹ್ಮಪುರಿಯ ಬ್ರಾಹ್ಮಣರು ವಿದ್ಯಾಬೋಧನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು ಎಂಬುದು ಹಾಗೂ ಅದಕ್ಕಾಗಿಯೇ ಅವರಿಗೆ ಭೂದಾನ ನೀಡಲಾಗುತ್ತಿತ್ತು.

ಈ ಬ್ರಹ್ಮಪುರಿಗಳು ನಗರ ಅಥವಾ ಪಟ್ಟಣಗಳಲ್ಲಿ ಇರುತ್ತವೆ. ಇವು ಇಂದಿಗೂ ಅದೇ ಹೆಸರಿನಿಂದ ಕರೆಯುವ ವಾಡಿಕೆಯಿದೆ. ಇಂತಹ ಬ್ರಹ್ಮಪುರಿಯಲ್ಲಿ ಬ್ರಾಹ್ಮಣರು ಆರಂಭದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವಾಸ ಮಾಡುವ ಸ್ಥಳಗಳಾಗಿದ್ದವು. ಬರುಬರುತ್ತಾ ಇಂತಹ ಪ್ರದೇಶಗಳಲ್ಲಿ ಎಲ್ಲ ಸಮುದಾಯದ ಜನ ಅಲ್ಲಿ ವಾಸಿಸಲು ಆರಂಭಿಸಿದರೆಂದು ಹೇಳಬಹುದು.

ಬ್ರಹ್ಮಪುರಿಗಳು ಶಿಕ್ಷಣ ಪ್ರಸಾರ ಮಾಡುವ ಜನರು ವಾಸಿಸುವ ಅಂದರೆ ಬ್ರಾಹ್ಮಣಗೇರಿ, ಬ್ರಾಹ್ಮಣವಾಡಿ ಎಂದು ಹೇಳಬಹುದು. ಬ್ರಹ್ಮಪುರಿ ಉಭಯಪುರಿ ಸ್ಥಾಪನೆ ಬಗ್ಗೆ ಶಾಸನಗಳಲ್ಲಿ

ಉಲ್ಲೇಖ ಬಂದಿವೆ. ಇವು ಸಾಮಾನ್ಯವಾಗಿ ದೇವಾಲಯಗಳ ಬಳಿಯಲ್ಲಿ ಇರುತ್ತವೆ. ಆ ದೇವಾಲಯಗಳ ಸೇವೆ ಮಾಡುತ್ತ, ಬೋಧನೆ, ಅಧ್ಯಯನ, ಯಜ್ಞ ಹವನ ಮಾಡುವ ಕಾರ್ಯ ನಿರತರಾದ ಬ್ರಾಹ್ಮಣರಿಗೆ, ಅಂದಿನ ಆಳರಸರು ಇವರ ಕಾರ್ಯಕ್ಷಮತೆಯನ್ನು ಕಂಡು ಬ್ರಹ್ಮಪುರಿಗಳಿಗೆ ಉದಾರವಾಗಿ ದಾನ-ದತ್ತಿ ಬಿಟ್ಟ ಉಲ್ಲೇಖಗಳು ಶಾಸನಗಳಲ್ಲಿ ಬರುತ್ತದೆ. ಭಾಲ್ಕಿ, ರಂಜೇರು, ಕೊಟಗ್ಯಾಳ, ಏವೂರು, ಮುರಿನೂರು, ರಾಜನಕೋಟಾ, ಕರಡಿಕಲ್, ನೆಖೆಂಡ, ಬೋಧನ, ಕೊಲನುಪಾಕ ಇವು ಅಂದಿನ ಬ್ರಹ್ಮಪುರಿಗಳಾಗಿದ್ದವೆಂದು ಶಾಸನಗಳು ಉಲ್ಲೇಖಿಸಿವೆ.

ಘಟಿಕಾಸ್ಥಾನಗಳು

ಪ್ರಾಚೀನ ಕರ್ನಾಟಕದಲ್ಲಿ ಅಗ್ರಹಾರ, ಬ್ರಹ್ಮಪುರಿ, ಮಠ ಮತ್ತು ದೇವಾಲಯಗಳಂತೆ ಘಟಿಕಾಸ್ಥಾನಗಳೂ ವಿದ್ಯಾಕೇಂದ್ರಗಳಾಗಿದ್ದವು. ಈ ಘಟಿಕಾಸ್ಥಾನಗಳ ಮುಖ್ಯಸ್ಥರು ಮಹಾಜನರೇ ಆಗಿರುತ್ತಿದ್ದರು. ಇಂತಹ ಘಟಿಕಾಸ್ಥಾನಗಳಲ್ಲಿ ತ್ರೈಪುರುಷರ ದೇವಾಲಯವಿರುತ್ತಿತ್ತು. ಬಹುಶಃ ಇದು "ವಿದ್ಯಾರ್ಥಿಗಳಲ್ಲಿ ಸರ್ವಧರ್ಮಸಮತಾಭಾವ ಬೆಳೆಯಲೆಂಬ ದೃಷ್ಟಿಯೇ ಇದಕ್ಕೆ ಕಾರಣವಾಗಿರಬೇಕು. ....ಗ್ರಾಮಕ್ಕೆ ವೇಳೆ ತಿಳಿಸಲು ಅವಶ್ಯವಿರುವ ಸಾರ್ವಜನಿಕ ಘಟಿಕಾಯಂತ್ರವನ್ನು ಇಲ್ಲಿ ಇಡುತ್ತಿದ್ದುದರಿಂದ ಈ ಕೇಂದ್ರಗಳಿಗೆ 'ಘಟಿಕಾಸ್ಥಾನ' ಎಂದು ಹೆಸರು ಬಂದಿದ್ದಿತು". 'ಘಟಿಕಾ'ದ ತದ್ಭವ 'ಘಳಿಗೆ' / 'ಗಳಿಗೆ'. ಇದು ಸಮಯವನ್ನು ಸೂಚಿಸುವ ಒಂದು ಯಂತ್ರ, ಒಂದು ದಿನದ ಅವಧಿಗೆ ೬೦ ಗಳಿಗೆಗಳು. ಹಿಂದೆ ವಿದ್ಯಾಕೇಂದ್ರಗಳಲ್ಲಿ ಅಧ್ಯಯನ, ಅಧ್ಯಾಪನಗಳು ಸಮಯಾನುಸಾರ ನಡೆಯಲು ಘಳಿಗೆ ಮಾಪಕವನ್ನಿರಿಸಲಾಗುತ್ತಿತ್ತು. ಇದರಿಂದಾಗಿ ಅವು ಘಟಿಕಾ ಸ್ಥಾನಗಳೆಂದು ಪ್ರಸಿದ್ಧವಾಗಿವೆ. "'ಘಟಿಕಾಸ್ಥಾನ'ವೆನ್ನುವುದು ಬ್ರಾಹ್ಮಣರ ಲೌಕಿಕ- ಧಾರ್ಮಿಕ ವಿದ್ಯೆಗಳ ಅಧ್ಯಯನ ಅಧ್ಯಾಪನ ಕೇಂದ್ರ. ಈ ಕೇಂದ್ರದ ಮುಖ್ಯ ಲಕ್ಷಣ ತ್ರೈಪುರುಷ ದೇವಾಲಯವನ್ನೊಳಗೊಂಡದ್ದು." ಇಂತಹ ಘಟಿಕಾಸ್ಥಾನಗಳು ಉನ್ನತ ಮಟ್ಟದ ವಿದ್ಯಾದಾನ ಮಾಡುತ್ತಿದ್ದವೆಂದು ತಿಳಿಬರುತ್ತದೆ. "ಆಧುನಿಕ ಕಾಲದಲ್ಲಿ ವಿಶ್ವವಿದ್ಯಾನಿಲಯಗಳ ಪದವೀದಾನ ಸಮಾರಂಭಗಳನ್ನು (Convocations) ಘಟಿಕೋತ್ಸವಗಳೆಂದು ಕರೆಯುತ್ತಾರೆ. ಘಟಿಕಸ್ಥಾನಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಕರ್ನಾಟಕದ ವಿದ್ವಾಂಸರೊಬ್ಬರು (ಶ್ರೀ ತಿ.ತಾ.ಶರ್ಮಾಅವರು) 'ಘಟಿಕೋತ್ಸವ' ಎಂಬ ಉಕ್ತಿಯನ್ನು ಪ್ರಚಾರಕ್ಕೆ ತಂದಂತೆ ವಿಶ್ವಸನೀಯವಾಗಿ ತಿಳಿದುಬಂದಿದೆ." ಹೇಳಲಾಗುತ್ತದೆ.

ಕರ್ನಾಟಕದಲ್ಲಿಯೇ ಅತ್ಯಂತ ಪ್ರಮುಖ ಘಟಿಕಾಸ್ಥಾನವೆಂದರೆ ಗುಲಬರ್ಗಾ ಜಿಲ್ಲೆಯ ಚಿತ್ತಾಪುರ ತಾಲೂಕಿನ 'ನಾಗಾವಿ'(ಹನುಮಾಕ್ಷಿ ಗೋಗಿ, ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಪು.೧೯೮)ಶಾಸನದಲ್ಲಿ ಉಕ್ತವಾಗಿರುವ ಘಟಿಕಾಸ್ಥಾನ. ಇದರ ಕಾಲ ಕ್ರಿ.ಶ.೧೦೫೮. ಇದು ಕಲ್ಯಾಣ ಚಾಲುಕ್ಯ ದೊರೆ ತ್ರೈಲೋಕ್ಯಮಲ್ಲ ಮೊದಲನೇ ಸೋಮೇಶ್ವರನ ಕಾಲದ ಶಾಸನವಾಗಿದೆ.

ಈತನ ದಂಡನಾಯಕನಾದ ಮಧುವಪರಸನು ಹಾಕಿಸಿದ ಶಾಸನ ಇದು. ಇದರಲ್ಲಿ ಅಂದಿನ ವಿದ್ಯಾಭ್ಯಾಸದ ಸ್ವರೂಪ ಮತ್ತು ವಿವಿಧ ಶಾಸ್ತ್ರಗಳನ್ನು ಕಲಿಸುತ್ತಿದ್ದ ವಿಚಾರ, ಬೋಧಕವರ್ಗ, ಸರಸ್ವತೀ ಭಂಡಾರಿ ಮತ್ತು ಘಟಿಕಾಪ್ರಹಾರಿ ಇತ್ಯಾದಿ ವಿಷಯಗಳನ್ನು ಉಲ್ಲೇಖಿಸಲಾಗಿದೆ.

"ಕುಂತಳ ಮಹೀತಳಕ್ಕೆ ಮುಖವಿದೆಂಬನ್ತಿರ್ದ್ದಱಲು ಮೂನೂರ[ರ್ಕ್ಕೆ] ತಿಳಕಮಪ್ಪನ್ತಿರ್ದ್ದ ಮಹಾ[ಗ್ರ]ಹಾರಂ ನಾಗಾವಿಯೊಳನೇಕ ಜನ್ಮೋಪಾರ್ಜಿತಾತ್ಮೀಯ ಪುಣ್ಯಪುಂಜಮುಮಂ ನಿಜಗುಣಗಣೋಪಾರ್ಜಿತ ಯಶೋಲತಾವಿಶಾಲ ಕಂದಮುಮಂ ಅಖಿಳ ಜಗತೀತಳಕ್ಕೆ ಪ್ರತ್ಯಕ್ಷಂ ಮಾಡಿ ತೋಱುವನ್ತೆ ಕಟಕಕಮಳಾರ್ಕ್ಕವೆಸರ ತ್ರೈಪುರುಷದೇವರ ಶಾಲೆಯುಮಂ .... ಮಾಡಿಸಿ ಘಟಿಕಾಸ್ಥಾನಮೆನಿಪ ಶಾಲೆಗೆ" ಮಧುಸೂದನ ದಂಡನಾಯಕನು ದತ್ತಿಗಳನ್ನು ಬಿಡುತ್ತಾನೆ. ಅದರ ವಿವರವು ತುಂಬ ಮಹತ್ತ್ವದ್ದಾಗಿದೆ. ಆ "ಶಾಲೆಯಲೋದುವ ವೇದಾಧ್ಯಾಯಿಗಳಿನ್ನೂರ್ವರ್ಗ್ಗಂ ಶಾಸ್ತ್ರಾ[ಧ್ಯಾ]ಯಿಗಳಯ್ವದಿಂಬರ್ಗ್ಗಂ ತದುಪಾಧ್ಯಾಯಿಗಳು ೩ ಭಟ್ಟದರ್ಶನ ನ್ಯಾ[ಸ] ಪ್ರಭಾಕರ ವ್ಯಾಖ್ಯಾತೃಗಳ್ಮೂವರ್ಗ್ಗಂ ವೇದಮನೋದಿಸುವುಪಾಧ್ಯಾಯರ್ಮ್ಮೂವರ್ಗ್ಗಂ ಶಾಲೆಯ ಸರಸ್ವತೀ ಭಂಡಾರಿಗ[ರೊ]ರಾರ್ವ್ವರ್ಗ್ಗಮನ್ತು ೨೫೭ ಮಾನಸರ ಅಶನಾಚ್ಛಾದನಕ್ಕಂ ಜೀರ್ಣೋದ್ಧಾರ ಖಂಡಸ್ಫುಟಿತ ನವಸುಧಾಕರ್ಮ್ಮಕ್ಕಂ ಗಂಧಾಕ್ಷತ ಪುಷ್ಪಧೂಪದೀಪ ನಿವೇದ್ಯಕ್ಕಂ ತ್ರೈಪುರುಷದೇವರ ಶಾಲೆಯ ಪರಿಷಮಾಣಿಯರ್ಗ್ಗೆ ಸರ್ವ್ವನಮಸ್ಯವಾಗಿ ಕೊಟ್ಟಕೆಯ್ಮಾಣಿಕೇಶ್ವರದಗಟ್ಟಿಂ ಬಡಗ ಮತ್ತರು ೧೦೦೦ .... ಭಾಟ್ಟದರ್ಶನ ವ್ಯಾಖ್ಯಾತೃಗೆ ಮತ್ತರು ೩೫ ನ್ಯಾಸವ್ಯಾಖ್ಯಾತೃಗೆ ಮತ್ತರು ೩೦ ಪ್ರಭಾಕರ ವ್ಯಾಖ್ಯಾತೃಗೆ ಮತ್ತರು ೪೫ ಸರಸ್ವತೀ ಭಂಡಾರಿಗೆ ಮತ್ತ ೩೦ ಘಟಿಕಾ ಪ್ರಹಾರಿಗೆ ಮತ್ತರ್ ೩೦ ...." ಕೊಟ್ಟುದಾಗಿ ಹೇಳಿದೆ. ಈ ವಿದ್ಯಾಕೇಂದ್ರದಲ್ಲಿದ್ದ ವಿದ್ಯಾರ್ಥಿಗಳು ಮತ್ತು ಉಪಾಧ್ಯಾಯರ ಸಂಖ್ಯೆ ೨೫೭. ಈ ಎರಡುನೂರಾ ಐವತ್ತೇಳು ಜನರಿಗೆ ಬೇಕಾಗುವ ಊಟ, ವಸತಿಗಳ ಖರ್ಚಿಗಾಗಿ, ಈ ಶಾಲೆಯ ಜೀರ್ಣೋದ್ಧಾರಗಳಿಗಾಗಿ, ಸುಣ್ಣ ಬಣ್ಣ ಹಚ್ಚುವುದಕ್ಕಾಗಿ, ಧೂಪ, ದೀಪ, ನೈವೇದ್ಯಗಳಿಗಾಗಿ ಮತ್ತು ಇಲ್ಲಿಯ ಅಧ್ಯಾಪಕ ವರ್ಗದವರಿಗಾಗಿ ಸರಸ್ವತಿ ಭಂಡಾರಿಗೆ, ಘಟಿಕಾ ಪ್ರಹಾರಿಗೆ ಇಲ್ಲಿ ಭೂಹಂಚಿಕೆ ಮಾಡಿರುವುದನ್ನು ಕಾಣಬಹುದು. ಈ ದತ್ತಿಗಳ ವಿವರದಲ್ಲಿ ನಮಗೆ ಪ್ರಸ್ತುತವಾದ ಭಾಗವು ಇಂತಿದೆ: ಒಟ್ಟು ದತ್ತಿ ನೀಡಿದ ಭೂಮಿಯ ಮೊತ್ತ ೧೦೦೦ ಮತ್ತರು. ಅದರಲ್ಲಿ ಘಟಿಕಾಸ್ಥಾನಕ್ಕೆ ಸಂಬಂಧಿಸಿದಂತೆ ಒಟ್ಟು ೧೭೦ ಮತ್ತರು ಭೂಮಿ ಯನ್ನು ಹೀಗೆ ಹಂಚಲಾಗಿದೆ:

ಭಟ್ಟದರ್ಶನ ವ್ಯಾಖ್ಯಾತೃಗೆ	೩೫ ಮತ್ತರು
ನ್ಯಾಸ ವ್ಯಾಖ್ಯಾತೃಗೆ	೩೦ ಮತ್ತರು
ಪ್ರಭಾಕರ ವ್ಯಾಖ್ಯಾತೃಗೆ	೪೫ ಮತ್ತರು

ಸರಸ್ವತೀ ಭಂಡಾರಿಗೆ	೩೦ ಮತ್ತರು
ಘಟಿಕಾ ಪ್ರಹಾರಿಗೆ	೩೦ ಮತ್ತರು
	ಒಟ್ಟು ೧೭೦ ಮತ್ತರು ಭೂಮಿ

ಹೀಗೆ ನಾಗಾಯಿಯ ಈ ಘಟಿಕಾಸ್ಥಾನದಲ್ಲಿ ಉನ್ನತ ಮಟ್ಟದ ಶಿಕ್ಷಣವನ್ನು ನೀಡಲಾಗುತ್ತಿತ್ತು. ಅವುಗಳಲ್ಲಿಯೂ ವಿಶೇಷವಾಗಿ ವೇದ, ಭಾಟ್ಟದರ್ಶನ, ಪ್ರಭಾಕರ, ನ್ಯಾಸಗಳಂತಹ ವಿಶೇಷ ವಿಷಯಗಳಲ್ಲೂ ಶಿಕ್ಷಣವನ್ನು ನೀಡಲಾಗುತ್ತಿತ್ತು. ಅಭ್ಯಾಸಿಗಳಿಗಾಗಿಯೂ ಉಪಾಧ್ಯಾಯರಿ ಗಾಗಿಯೂ, ಸರಸ್ವತಿ ಭಂಡಾರಿಗಾಗಿಯೂ, ಘಟಿಕಾ ಪ್ರಹಾರಿಗಾಗಿ ಮತ್ತು ಎಲ್ಲಾ ಸಿಬ್ಬಂದಿಗಳು ಹಾಗು ವಿದ್ಯಾರ್ಥಿಗಳು ಅಲ್ಲೇ ಇದ್ದು, ವಿದ್ಯೆ ಕಲಿಯಲು ಮತ್ತು ಸಿಬ್ಬಂದಿಗಳಿಗೆ ವೈಯಕ್ತಿಕವಾಗಿ ಸಂಭಾವನೆ ರೂಪದಲ್ಲಿ ಭೂದತ್ತಿ ನೀಡಿದ್ದುದ್ದನ್ನು ನೋಡಬಹುದಾಗಿದೆ. ಒಟ್ಟಾರೆಯಾಗಿ ಇಂದಿನ ವಸತಿಶಾಲೆಗಳ ಹಾಗೆ, ವಿಶ್ವವಿದ್ಯಾಲಯಗಳ ಹಾಗೆ, ಇದು ಉನ್ನತ ಮಟ್ಟದ ಶಿಕ್ಷಣ ಕೇಂದ್ರವಾಗಿತ್ತೆಂದು ಹೇಳಬಹುದು.

ಹೀಗೆ ಪ್ರಾಚೀನ ಕಾಲದ ಶೈಕ್ಷಣಿಕ ಕೇಂದ್ರಗಳಾಗಿ ಅಗ್ರಹಾರಗಳು ಮತ್ತು ಬ್ರಹ್ಮಪುರಿಗಳು, ಮಠಗಳು ಹಾಗೂ ದೇವಾಲಯಗಳು ಕಾರ್ಯನಿರ್ವಹಿಸುತ್ತಿದ್ದವು. ಅವುಗಳನ್ನು ಮಹಾಜನರು ಸ್ಥಾನಾಚಾರ್ಯರು ನೋಡಿಕೊಳ್ಳುತ್ತಿದ್ದರು. ಇವುಗಳ ನಿರ್ವಹಣೆಗಾಗಿ ಅಂದಿನ ರಾಜರು, ಸಾಮಂತರು, ದಾನ-ದತ್ತಿಗಳನ್ನು ನೀಡುತ್ತಿದ್ದರೆಂದು ಈ ಭಾಗದ ಶಾಸನಗಳಿಂದ ತಿಳಿದುಬರುತ್ತದೆ ಮತ್ತು ಈ ಕೇಂದ್ರಗಳಲ್ಲಿ ಪ್ರಮುಖವಾಗಿ ಧಾರ್ಮಿಕ ಹಿನ್ನೆಲೆಯುಳ್ಳ ಶಿಕ್ಷಣ ನೀಡುತ್ತಿದ್ದರು. ವೇದ, ಆಗಮ, ಪುರಾಣಗಳನ್ನು ಇತರ ಧಾರ್ಮಿಕಶಾಸ್ತ್ರಗಳನ್ನು ವಾಚಿಸುವ ಪದ್ಧತಿ ಇತ್ತು. ಅಲ್ಲದೇ ಕನ್ನಡ ಕಲಿಸುವ ದೇವಾಲಯಗಳು, ಮಠಗಳು ಇದ್ದವೆಂದು ತಿಳಿದುಬರುತ್ತದೆ.

ಅಧ್ಯಾಯ ಹತ್ತು

ಶಾಪಾಶಯಗಳ ಅಧ್ಯಯನ

ಅಧ್ಯಾಯ ಹತ್ತು

ಶಾಪಾಶಯಗಳ ಅಧ್ಯಯನ

ಭಾರತವು ಪ್ರಾಚೀನ ಕಾಲದಿಂದಲೂ ಜಗತ್ತಿಗೆ ಅತ್ಯಾತಿಕ ಗುರು ಎನಿಸಿದೆ. ಇಲ್ಲಿಯ ಋಷಿ ಮುನಿಗಳು, ತಮ್ಮ ತಪಸ್ಸಿನಿಂದ ಆಗಾಧವಾದ ಶಕ್ತಿಯನ್ನು ಪಡೆದುಕೊಂಡಿದ್ದರೆಂದು ನಮ್ಮ ಅನೇಕ ಪುರಾಣ ಕಾವ್ಯಗಳಿಂದ ಸಾಧಿತವಾಗಿದೆ. ಅಂತಹ ಶಕ್ತಿಯನ್ನು ಪಡೆದುಕೊಂಡ ವ್ಯಕ್ತಿ ಅದರ ಪ್ರಯೋಗಕ್ಕಾಗಿಯೋ, ತಮ್ಮ ಶಕ್ತಿ ಪ್ರದರ್ಶಿಸುವುದಕ್ಕಾಗಿಯೋ, ಇಲ್ಲವೇ ಆತನಲ್ಲಿರುವ ದುಷ್ಟಶಕ್ತಿ ನಿಗ್ರಹಿಸುವುದಕ್ಕಾಗಿಯೋ, ಶಿಕ್ಷಿಸುವ ಶಕ್ತಿ ಇರುವವರು, ಶಾಪ ಹಾಕುವವರು. ಇಂತಹ ಶಾಪವು ಶಾಶ್ವತ ಶಾಪ, ಇಲ್ಲವೆ ಕೆಲವು ಕಾಲಗಳವರೆಗೆ ಇರುವ ಶಾಪಗಳಾಗಿದ್ದವು. ಇಂತಹ ಶಾಪಕ್ಕೆ ಗುರಿಯಾದವರ ಬಗ್ಗೆ ನಮ್ಮ ಅನೇಕ ಪುರಾಣ ಕಾವ್ಯಗಳು ಉಲ್ಲೇಖಿಸುತ್ತವೆ. ಮನುಷ್ಯ ತಾನು ಅರಿತೋ ಅರಿಯದೇ ತಪ್ಪು ಮಾಡಿರುತ್ತಾನೆ. ಈ ತಪ್ಪಿನಿಂದಾಗಿ ಇಲ್ಲವೇ ವಿನಃ ಕಾರಣ ಇಂತಹ ಘೋರವಾದ ಶಾಪಗಳಿಂದ ಆತನು ಪಡಬಾರದ ದುಃಖ ಅನುಭವಿಸುತ್ತಾನೆ.

'ಶಾಪ' ಎಂದರೆ ಕೋಪಿಸು, ಶಪಿಸು, ಸಿಟ್ಟಾಗು, ಕೋಪಿಷ್ಟನಾಗು, ಮುನಿಸಿಕೊ ಎಂಬ ನಾನಾ ಅರ್ಥಗಳು ನೀಡಬಹುದು. 'ಶಾಪ' ಎಲ್ಲರಿಗು ಹಾಕಲಿಕ್ಕೆ ಆಗುವುದಿಲ್ಲ. ಯಾವ ವ್ಯಕ್ತಿಯು ಅಂತಹ ದಿವ್ಯಶಕ್ತಿ, ಸಾಮರ್ಥ್ಯ ಪಡೆದಿರುತ್ತಾನೋ ಅವರು ಇಂತಹ ಶಾಪ ಹಾಕುತ್ತಾರೆ. "ಶಾಪ ಮತ್ತು ಶಪಥ ಎಂಬ ಪದಗಳು 'ಶಪ್' ಎಂಬ ಧಾತುವಿನಿಂದ ಉದ್ಭವಿಸಿವೆ. 'ಶಪಥ' ಎಂಬುದು ಪ್ರತಿಜ್ಞೆಯ ನಿರ್ದೇಶಕ ಶಬ್ದ, ತಾನು ನುಡಿದದ್ದು ಸತ್ಯ ಎಂಬುವುದನ್ನು ಬೇರೆಯವರಿಗೆ ಮನವರಿಕೆ ಮಾಡಿಕೊಡಲು ಉಚ್ಚರಿಸಿದ ಶಬ್ದ ಪ್ರಯೋಗವೇ ಶಪಥ. ಅದು ಅಸತ್ಯವೆನಿಸಿದರೆ ಅನಿಷ್ಟವಾಗಲಿ! ಎಂದು ಪ್ರಕಟಪಡಿಸುವ ಶಬ್ದ ಪ್ರಯೋಗಕ್ಕೆ ಶಪಥ ಎಂದೆನ್ನಬಹುದು. 'ಶಪ್' ಎಂಬ ಧಾತುವಿಗೆ ಪ್ರಮಾಣಪೂರ್ವಕ ಪ್ರತಿಜ್ಞೆ ಮಾಡುವುದು ಆಣೆಯನ್ನು ಇಕ್ಕುವುದು. ಇಕ್ಕಿಕೊಳ್ಳುವುದು. ಕೇಡು ಹಾರೈಸುವುದು ಮೊದಲಾದ ಅರ್ಥ ಇದ್ದರೂ ಶಪ್ ಎಂದರೆ ಗಟ್ಟಿಯಾಗಿ ನುಡಿಯುವುದು, ಬೈಯುವುದು, ಆಕ್ರೋಶ ಮಾಡುವುದು

ಎಂಬುದೇ ಮೂಲಾರ್ಥ(ಡಾ.ಡಿ.ಟಿ.ರಾಜಣ್ಣ, ೨೦೧೦, ಕನ್ನಡ ಶಾಸನ ಮತ್ತು ಸಾಹಿತ್ಯದಲ್ಲಿ ಶಾಪ, ಪು.೨೦)ಶಾಪವು ಕೊಡುವುದಕ್ಕೆ ಅವರಲ್ಲಿರುವ ಶಕ್ತಿ ಇಂತಹ ಶಕ್ತಿಯು ತನ್ನ ತಪಸ್ಸಿನ ಬಲದಿಂದಲೋ, ತನ್ನ ಇಷ್ಟ ದೇವರಿಂದಲೂ ಪಡೆದುಕೊಂಡವರಾಗಿರುತ್ತಾರೆ. ಅಂತಹ ಶಾಪಗಳು ತುಂಬಾ ಪರಿಣಾಮಕಾರಿಯಾಗಿ ತಕ್ಷಣವೇ ತಟ್ಟುವಂತಹವುಗಳಾಗಿದ್ದವು. ಅವರ ಕೆಂಗೆಣ್ಣಿಗೆ ಗುರಿಯಾದವರು ಹಾಳಾಗಿ, ಸುಟ್ಟು ಹೋಗುವ, ಪುತ್ರಸಂತಾನ ರಹಿತ, ನಪುಂಸಕ, ನಿನ್ನ ಸಾವು ಹೀಗೆ ಹಾಗಲಿ, ಪ್ರಾಣಿಯಿಂದಲೋ, ನಿಸರ್ಗ ವಿಕೋಪದಿಂದಲೋ ಆಗಲಿ ಎಂದು ಶಪಿಸುವುತ್ತಿದ್ದರು.

ಶಾಪಕ್ಕೆ ಸಮಾನವಾದ ಇಂಗ್ಲಿಷ್ 'Curse' ಶಬ್ದ ನಿರ್ವಚನ ಖಚಿತವಾಗಿಲ್ಲವಾದರೂ ಅದು ಫ್ರೆಂಚಿನ 'Curoier'=ಆಕ್ರೋಶ ಪೂರ್ವಕ ಕೆಡುನುಡಿಯುವುದು ಎಂಬ ಪದದಿಂದ ಬಂದಿದೆಯೆಂದು ತರ್ಕಿಸಲಾಗಿದೆ. ಬಹುಶಃ ಇದು ಸಂಸ್ಕೃತದ ಕ್ರೋಶ(ಕೂಗು) ಶಬ್ದಕ್ಕೆ ಸಂವಾದಿಯಾಗಿದೆ. ಎಂದರೆ 'ಶಾಪ' ಮಮಿತು ಎಂದರೆ ಶಾಪಗ್ರಸ್ಥ ಅಥವಾ ಪಾಪಿ; ಮಮ್ಮು ಎಂದರೆ ಗಟ್ಟಿಯಾದ ಧ್ವನಿ ಅಥವಾ ಎಚ್ಚರಿತ ಶಬ್ದ. ಇಸ್ಲಾಮಿನಲ್ಲಿಯೂ ಶಾಪ, ವರ ಕೇಳಿಸುವಂತಿರಬೇಕು(ಅದೇ, ಪು.೨೦).

'ಶಾಪ'ವು ಧಾರ್ಮಿಕ ಪ್ರಜ್ಞೆಯುಳ್ಳದ್ದಾಗಿದೆ. ಪ್ರಾಚೀನ ಕಾಲದಲ್ಲಿ ಸಾಮಾಜಿಕವಾಗಿ ಕೇಡು ಬಯಸುವಂತಿಲ್ಲ. ತನ್ನ ಶಕ್ತಿ ತನ್ನ ಹತೋಟಿಯಲ್ಲಿಟ್ಟುಕೊಂಡು ಬಾಳ್ವೆ ನಡೆಸಬೇಕು. ಅದನ್ನು ಇನ್ನೊಬ್ಬರ ಮೇಲೆ ವಿನಾಃ ಕಾರಣ ಪ್ರಯೋಗಿಸುವುದಾದರೆ, ಇಲ್ಲವೇ ಸಮಾಜಕ್ಕೆ ಉಪದ್ರವ ನೀಡುವಂತಹ ಶಕ್ತಿಯನ್ನು ದಮನಿಸುವುದಕ್ಕಾಗಿ ಧಾರ್ಮಿಕ ಪ್ರೇರಿತ 'ಶಾಪಗಳು' ಹುಟ್ಟಿಕೊಂಡವು. ಇಲ್ಲಿ ಹಿರಿಯರಿಗೆ, ಚರಾಚರ ಜೀವಿಗೆ ಹಿಂಸೆಯಾಗಬಾರದು ಇನ್ನೊಬ್ಬರ ಆಸ್ತಿ ಲಪಟಾಯಿಸುವುದಾಗಲಿ, ಇನ್ನೊಬ್ಬರ ಮುಖಭಂಗ ಮಾಡುವುದಾಗಲಿ ಮಾಡಿದರೆ ಅವರಿಗೆ ಶಾಪ ನೀಡುವ ಶಕ್ತಿವುಳ್ಳವರು ಶಾಪ ಹಾಕುತ್ತಿದ್ದರು.

ಇಂತಹ ಧಾರ್ಮಿಕ ಪ್ರಧಾನವುಳ್ಳ ಹಿನ್ನೆಲೆಯಲ್ಲಿ ತೆಲಂಗಾಣ ಮತ್ತು ಹೈದ್ರಾಬಾದ ಕರ್ನಾಟಕ ಪ್ರದೇಶಗಳ ಶಾಸನಗಳಲ್ಲಿ ಶಾಪಾಶಯಗಳು ಕಂಡುಬರುತ್ತವೆ.

ಶಾಪಾಶಯಗಳ ಸ್ವರೂಪ

ಶಾಸನಗಳಲ್ಲಿ ಶಾಪಾಶಯಗಳು ಮತ್ತು ಪುಣ್ಯಾಶಯಗಳು ಸಾಮಾನ್ಯವಾಗಿ ಶಾಸನ ಪಠ್ಯದ ಕೊನೆಯಲ್ಲಿ ಬರುತ್ತವೆ. ಭಾರತೀಯ ಸಂಪ್ರದಾಯದಂತೆಯೇ ಯಾವುದೇ ಧರ್ಮಕಾರ್ಯ ಮಾಡುವಾಗ ಆರಂಭದಲ್ಲಿ ದೇವತಾ ಶ್ಲೋಕದೊಂದಿಗೆ, ಕಾರ್ಯಗಳು ಆರಂಭವಾಗುತ್ತವೆ. ಹೀಗಾಗಿ, ಆರಂಭದಲ್ಲಿ ದೇವತಾಸ್ತುತಿ, ತದನಂತರ ಅಲ್ಲಿಯ ಆಳ್ವಿಕೆಯ ರಾಜ–ಮಂತ್ರಿ ವರ್ಗದವರ

ಬಿರುದುಗಳ ಸಹಿತ ಅವರ ವಿವರ, ಶಾಸನ ಹಾಕಿಸುವುದರ ಸನ್ನಿವೇಶ ವಿಷಯದ ನಿರೂಪಣೆ, ಮತ್ತು ಈ ಧರ್ಮವನ್ನು ಕೆಡಿಸಿದವರಿಗೆ ಅಥವಾ ಮನದಲ್ಲಿಯೂ ಕೇಡು ಬಯಸಿದ್ದಾದಲ್ಲಿ ತಟ್ಟುವ ಭಯಂಕರ ಸ್ವರೂಪದ ಶಾಪಾಶಯಗಳ ಪಟ್ಟಿಯೇ ಇರುತ್ತದೆ. ಈ ಶಾಸನಗಳಲ್ಲಿ ಒಡಮೂಡಿ ಬಂದಿರುವ ಶಾಪಗಳು ಎಲ್ಲ ಶಾಸನಗಳಲ್ಲಿ ಇರುವುದಿಲ್ಲ. ಸಾಮಾನ್ಯವಾಗಿ ಇವು ಹೆಚ್ಚು ಧರ್ಮ–ದತ್ತಿ–ದಾನ ಸ್ವರೂಪದ ಶಾಸನಗಳಲ್ಲಿ ಕಂಡುಬರುತ್ತವೆ. ನಿಸಿಧಿಗಲ್ಲು, ವೀರಗಲ್ಲು, ಮಹಾಸತಿಗಲ್ಲು, ಇನ್ನಿತರ ಶಾಸನಗಳಲ್ಲಿ ಕಡಿಮೆ ಎಂತಲೇ ಹೇಳಬೇಕು. ಒಂದೊಂದು ಶಾಸನವು ತುಂಬಾ ದೊಡ್ಡದಾಗಿದ್ದು; ಕಾವಾತ್ಮಕವಾಗಿರುವ ಶಾಸನಗಳಲ್ಲಿ ಶಾಪಾಶಯದ ನುಡಿಗಳು ಕಂಡುಬರುವುದಿಲ್ಲ. ವೈಭವದಿಂದ ಮೆರೆದ ರಾಜಮನೆತನಗಳು ಹಾಕಿಸುವ ಶಾಸನಗಳಲ್ಲಿಯೂ ಕಡಿಮೆ ಎಂತಲೇ ಹೇಳಬೇಕು. ಅವರ ಅಧೀನ ಮಹಾಮಂಡಳೇಶ್ವರರು ಮತ್ತು ದಂಡನಾಯಕರ ಮತ್ತು ಊರಿನ ವ್ಯಾಪಾರಿ ವರ್ಗ ಮತ್ತು ಹೆಚ್ಚಾಗಿ ಇಂತಹ ಕಠೋರ ಶಾಪಾಶಯಗಳು ಹೊತ್ತ ನಿಂತ ಶಾಸನಗಳಲ್ಲಿ ರಾಜಮನೆತನ ಉಲ್ಲೇಖಗಳು ಕಂಡುಬರುವುದಿಲ್ಲ. ಅಸಹ್ಯವಾದ ಮಾತುಗಳಿಂದ ಕೂಡಿದ ಶಾಸನಗಳಲ್ಲಿ ಶ್ರೇಷ್ಠ ರಾಜಮನೆತನಗಳ ಹೆಸರು ಇರುವುದಿಲ್ಲ. ಶ್ರೇಷ್ಠ ರಾಜಮನೆತನದವರೂ ಶಾಪಾಶಯಗಳು ಹಾಕಿಸಿದರೂ ಸಾಮಾನ್ಯ ನುಡಿಯಲ್ಲಿ "ವಾರಾಣಾಸಿಯಲ್ಲಿ ಕವಿಲೆ, ಬ್ರಾಹ್ಮಣರು, ತರ್ಪೋಧನರನ್ನು ಕೊಂದ ಪಾಪಕ್ಕೆ ಹೋಗುವವರು ಎಂದಿರುತ್ತದೆ. ಇಲ್ಲವೇ ಪಂಚಮಹಾಪಾತಂಕಗಳ್ ಎಂದಿರುತ್ತದೆ.

ಆರಂಭದಲ್ಲಿ ಆ ಶಾಸನ ಹಾಕಿಸಿದ ಭಾಷೆಯಲ್ಲಿಯೇ ಇರುತ್ತದೆ. ಆದರೆ ಹೆಚ್ಚಾಗಿ ಸಂಸ್ಕೃತಿ ಭಾಷೆಯಲ್ಲಿ "ಸ್ವದತ್ತಾ ಪರದತ್ತಾ ವಾಯೋ ಹರೇತ ವಸುಂಧರಾ ಷಷ್ಟಿರ್ವ್ವರ್ಷ ಸಹಸ್ರಾಣಿ ವಿಷ್ಟಾಯಾ ಜಾಯೆತೇ ಕ್ರಿಮಿಃ" ಬಹುಭಿರ್ವ್ವಸು ಧಾದತ್ತಾ ರಾಜಭಿಃ ಸಗರಾಧಿಭಿಃ, 'ಯಸ್ಯ ಯಸ್ಯ ಯದಾ ಭೂಮಿ ತಸ್ಯ ತಸ್ಯ ತಧಾ ಫಲಂ' ಸಾಮಾನ್ಯೋಯಂ ಧರ್ಮಸೇತುನೃಪಾಣಾಂ ಕಾಲೇ ಕಾಲೇ ಪಾಲನೀಯೋ ಭವದ್ಭಿಃ" ಎಂದಿರುತ್ತದೆ.

ಶಾಸನಗಳಲ್ಲಿ ನಿರೂಪಣೆಗೊಂಡ ಶಾಪಾಶಯಗಳು ಯಾವುದೇ ಒಬ್ಬ ವ್ಯಕ್ತಿಗೆ ಸೀಮಿತವಲ್ಲ, ಕಾರಣ ಈ ತರಹ ಶಾಪಾಶಯಗಳು ಸಾರ್ವಜನಿಕವಾಗಿ ಹಾಕಿಸಿದ ಶಿಲಾಶಾಸನಗಳಲ್ಲಿರುವುದರಿಂದ ನಿರ್ದಿಷ್ಟ ವ್ಯಕ್ತಿಯಾಗಲಿ, ನಿರ್ದಿಷ್ಟ ಸಮಯ/ಕಾಲವಾಗಲಿ ಇರುವುದಿಲ್ಲ. ಇವು ಕೂಡ ಸಾರ್ವತ್ರಿಕ ಸಾರ್ವಕಾಲಿಕವಾಗಿರುತ್ತದೆ. ತಾಮ್ರ ಮತ್ತು ಇತರೆ ಲೋಹಗಳ ಮೇಲೆ ಹಾಕಿಸಿದ ಶಾಸನಗಳಲ್ಲಿ ಇಂತಹ ಕಠೋರ ಶಾಪಾಶಯಗಳು ಇರುವುದಿಲ್ಲ. ಅವುಗಳು ವೈಯಕ್ತಿಕ ಕ್ರಯ/ಆಸ್ತಿ ಪತ್ರದಂತಿರುತ್ತವೆ. ಹೀಗಾಗಿ ಅವುಗಳ ಮೇಲೆ ಅವಶ್ಯಕತೆ ಇರುವುದಿಲ್ಲವೆಂದು ಹೇಳಬಹುದು. ಅವುಗಳ ಕೊನೆಯಲ್ಲಿ ಮಾತ್ರ, ಮುಂದೆ ಬಂದ ಅರಸು ಇವುಗಳನ್ನು ಪಾಲಿಸಿಕೊಂಡು ಬರಬೇಕು, ಇಲ್ಲವಾದಲ್ಲಿ ಸಂತಾನದೋಷ/ಕುಟುಂಬ ದೋಷ ಎಂಬ ಕಿರಿದಾದ 'ಶಾಪ' ವಾಕ್ಯ ಇರುವುದು ಕಂಡುಬರುತ್ತದೆ.

ಈ ಶಾಪಾಶಯಗಳು ಶಾಸನ ಪಠ್ಯದ ಕೊನೆಯಲ್ಲಿಯೇ ಬರುತ್ತಿದ್ದರೂ ಒಂದೊಂದು ಸಲ ಆರಂಭದಲ್ಲಿ, ಮಧ್ಯದಲ್ಲಿಯೂ ಇವುಗಳ ಉಲ್ಲೇಖ ಬಂದ್ದುಂಟು. ಶಾಸನ ಒಂದೇ ಆದರೂ ಎರಡೆರಡು ಸಲ ಶಾಪಾಶಯಗಳು ಬಂದಿವೆ. ಉದಾ: ನಮ್ಮ ಮೊಟ್ಟಮೊದಲ ಶಾಸನ ಕ್ರಿ.ಶ.೪೫೦ ಹಲ್ಮಿಡಿ ಶಾಸನದಲ್ಲಿಯೇ ನೋಡಬಹುದು. ಇದು ಶಾಸನಗಳಲ್ಲಿ ಶಾಪಾಶಯಗಳ ಉಗಮಕ್ಕೂ ನಾಂದಿ ಎಂದು ಹೇಳಬಹುದು.

ಹೀಗೆ ಒಂದೇ ಶಾಸನದಲ್ಲಿ ಎರಡೆರಡು ಸಲ ಶಾಪಾಶಯಗಳು ಬರಬೇಕಾದರೆ ಒಂದು ಆ ಶಾಸನವು ಎರಡು ದತ್ತಿ ಒಳಗೊಂಡಿರಬೇಕು. ಇಲ್ಲವೆ, ತುಂಬ ದೊಡ್ಡದಾದ ಶಾಸನವಾಗಿದ್ದರೆ ಅದರಲ್ಲಿ ಒಂದು ಮುಖ, ಎರಡು ಮುಖ, ಮೂರನೆ ಮುಖ, ನಾಲ್ಕನೆ ಮುಖ ಇರುತ್ತದೆ. ಹಾಗಾಗಿ ಅಲ್ಲಲ್ಲಿ ಶಾಪಾಶಯಗಳು ಬರುತ್ತವೆ. ಇಲ್ಲವೆ ಇನ್ನೇನ್ನು ಶಾಸನ ಬರೆದು ಮುಗಿಸಿ ಬಿಟ್ಟಿರುತ್ತಾನೆ. ಇನ್ನು ಕೆಲವು ವಿಷಯಗಳನ್ನು ಮರೆತು ಬಿಟ್ಟಿರುತ್ತಾರೆ. ಆಮೇಲೆ ಆ ವಿಷಯ ನಿರೂಪಣೆ ಮಾಡಿ ಮತ್ತೆ ಶಾಪಾಶಯದ ನುಡಿಗಳು ಸಹಜವಾಗಿಯೇ ಬರುತ್ತವೆ.

ಶಾಪಾಶಯಗಳ ಉಗಮ

ಪ್ರಾಚೀನ ಮಹಾಕಾವ್ಯಗಳ ಸಾಹಿತ್ಯಿಕ ಕೃತಿಗಳಲ್ಲಿ ಅದರಲ್ಲಿಯೂ ಪೌರಾಣಿಕ ಪ್ರಸಿದ್ಧ-ಕಾವ್ಯಗಳಲ್ಲಿ ಶಾಪಗಳ ಕಲ್ಪನೆ, ಯಾವುದೋ ತಪ್ಪು ಮಾಡಿದ ವ್ಯಕ್ತಿಗೆ, ಆ ಶಕ್ತಿವುಳ್ಳ ವ್ಯಕ್ತಿಗಳು ಶಾಪ ನೀಡಿದುದ್ದನ್ನು ಕಾವ್ಯಗಳಲ್ಲಿ ಕಾಣಬಹುದು. ಶ್ರವಣಕುಮಾರ ತಂದೆ-ತಾಯಿಯರು ದಶರಥನಿಗೆ ಹಾಕಿದ ಶಾಪ, ಏಕಲವ್ಯನ ತಾಯಿ ದ್ರೋಣಚಾರ್ಯನಿಗೆ ಹಾಕಿದ ಶಾಪ, ವಾಲ್ಮೀಕಿ ಋಷಿ ಬೇಡನಿಗೆ ಹಾಕಿದ ಶಾಪ. ಗೌತಮ ಋಷಿ ಇಂದ್ರ ಹಾಗೂ ಅಹಲ್ಯೆಗೆ ಹಾಕಿದ ಶಾಪ, ಊರ್ವಶಿ ಅರ್ಜುನನಿಗೆ ಹಾಕಿದ ಶಾಪ, ಶಿವನ ವಾಹನ ನಂದಿ ಹಾಕಿದ ಶಾಪ ಇತ್ಯಾದಿ ಶಾಪಗಳ ಪಟ್ಟಿಯೇ ನಮ್ಮ ಕಾವ್ಯಪುರಾಣಗಳಲ್ಲಿ ಲಭಿಸುತ್ತದೆ. ಶಾಸನಗಳಲ್ಲಿ 'ಶಾಪ'ದ ನುಡಿಗಳು ಬರಲಿಕ್ಕೆ ಈಗಾಗಲೇ ಅನೇಕ ಕಡೆಗಳಲ್ಲಿ ಸಾಹಿತ್ಯದಲ್ಲಿ ಉಲ್ಲೇಖಗೊಂಡ ಶಾಪಗಳೇ ಪ್ರೇರಣೆಯೆಂದು ಹೇಳಬಹುದು. ಕನ್ನಡ ಶಾಸನಗಳಲ್ಲಿ ಈ ಶಾಪಾಶಯಗಳ ಉಲ್ಲೇಖವು ಕನ್ನಡ ಸಾಹಿತ್ಯದ ಭಾಷೆ, ಲಿಪಿ, ಸಾಹಿತ್ಯ, ರಾಜಕೀಯ, ಸಾಂಸ್ಕೃತಿಕ ಅಧ್ಯಯನಕ್ಕೆ ಮೊಟ್ಟ ಮೊದಲಾದ ಕ್ರಿ.ಶ.೪೫೦ರ ಹಲ್ಮಿಡಿ ಶಾಸನದಲ್ಲಿಯೇ ಕಂಡುಬರುತ್ತದೆ. ಅಲ್ಲಿ ನರಿದಾವಿಳೆ ನಾಡಿನ ಮೃಗೇಶ ಮತ್ತು ನಾಗೇಂದ್ರರು, ಕೇಕಯ ಪಲ್ಲವರೊಂದಿಗೆ ಯುದ್ಧ ಮಾಡಿ ಜಯಗಳಿಸಿದ ವಿಜ ಅರಸನಿಗೆ ಪಲ್ಮಿಡಿ ಮೂಳವಳ್ಳಿ ದತ್ತಿ ಕೊಟ್ಟಿರುತ್ತಾರೆ. ಇದನ್ನು "ಕಳ್ದೋನ್ ಮಹಾಪಾತಕನ್" ಎಂದು ಉಲ್ಲೇಖಿಸಿದೆ. ಅಂದರೆ ಕನ್ನಡ ಶಾಸನ ಹುಟ್ಟಿಕೊಂಡಿದ್ದ ಅಂದಿನಿಂದಲೇ ಈ ಶಾಪಾಶಯ ಕಲ್ಪನೆ ಈ ಕ್ಷೇತ್ರದಲ್ಲಿಯೂ ಹುಟ್ಟಿಕೊಂಡಿದೆ. ಮುಂದೆ ಕ್ರಿ.ಶ.ಆರನೆ ಶತಮಾನದ ಬಾದಾಮಿಯ

ಮಂಗಲೀಸನ ಶಾಸನದಲ್ಲಿ ಇದಾವಳಿಯೋನ್ ಪಂಚಮಹಾಪಾತಕನಕುಂ, ಏಳನೆ ನರಕದಾಮಳು ಅಕ್ಕುಂ ಎಂದಿದೆ.

ಹೀಗೆ ಆರಂಭದಲ್ಲಿ ಸರಳ ನುಡಿಯಿಂದ ಆರಂಭವಾದ ಈ ಶಾಪಾಶಯಗಳು ಬರುಬರುತ್ತಾ ಸುದೀರ್ಘವೂ ಕಠೋರವೂ, ಕ್ಲಿಷ್ಟ, ಅಸಹ್ಯವೂ ಅಶ್ಲೀಲವೂ ಆದ ಪದಗಳಿಂದ ಶಾಸನಗಳಲ್ಲಿ ಉಲ್ಲೇಖ ಗೊಂಡಿರುವುದನ್ನು ನೋಡಬಹುದು.

ಶಾಪಾಶಯಗಳು ಬರೆಯಿಸುವುದಕ್ಕೆ ಕಾರಣಗಳು

ಅಂದಿನ ಆಳರಸರು ಸಮಾಜದ ಅಭಿವೃದ್ಧಿಗಾಗಿ ಉದಾರವಾಗಿ ಭೂದಾನ ದತ್ತಿ, ಊರುಗಳಿಂದ ಬರುವ ಕರಗಳ ದತ್ತಿ, ಇತರ ವ್ಯಾಪಾರ, ಧಾನ್ಯಗಳ ಮೇಲಿನ ಕರಗಳನ್ನು ಅಲ್ಲಿಯ ದೇವಾಲಯಗಳ, ಪ್ರದೇಶ, ವಿವಿಧ ಕಾರ್ಯಗಳ ಅಭಿವೃದ್ಧಿಗಾಗಿ, ಧರ್ಮದ ಹೆಸರಿನಲ್ಲಿ ತಮಗೆ ಪುಣ್ಯವಾಗಲೆಂದು, ತಮ್ಮ ಹಿರಿಯರಿಗೆ, ಆ ಊರಿಗೆ, ಆ ಧರ್ಮಕ್ಕೆ ತಾವು ತೋರಿಸುವ ಗೌರವಾರ್ಥವಾಗಿಯೋ ಅನೇಕ ತರದ ದಾನ–ದತ್ತಿಗಳನ್ನು ನೀಡುತ್ತಿದ್ದರು. ಇದನ್ನು ಪಡೆದುಕೊಂಡವರು, ವ್ಯಕ್ತಿಯಾಗಬಹುದು, ಸಮಾಜವಾಗಬಹುದು, ಇಲ್ಲವೇ ಅಲ್ಲಿಯ ಮಹಾಜನಗಳು ಆಗಬಹುದು. ಇಂತಹ ಧರ್ಮಕಾರ್ಯಗಳಿಗಾಗಿ ದತ್ತಿ ಬಿಟ್ಟವುಗಳನ್ನು ಅದೇ ಸಮಾಜದಲ್ಲಿ ಕೆಲ ವ್ಯಕ್ತಿಗಳು ಅವುಗಳ ಮೇಲೆ ಅತಿಕ್ರಮಣ ಮಾಡುವುದು, ಕಬಳಿಸುವುದು, ಧ್ವಂಸಗೊಳಿಸುವುದು ಇತ್ಯಾದಿ ಧರ್ಮಬಾಹಿರ ಕೃತ್ಯಗಳನ್ನು ತಡೆಯುವುದಕ್ಕಾಗಿಯೇ ಶಾಸನಗಳ ಕೊನೆಯಲ್ಲಿ ಈ ಶಾಪಾಶಯದ ನುಡಿಗಳು ಸೇರಿಸಲಾಯಿತು.

ಇಂತಹ ಸಾಮಾಜಿಕ ಕುಹಕ ಶಕ್ತಿಗಳನ್ನು ತಡೆಯುವಲ್ಲಿ ರಾಜಾಜ್ಞೆ, ರಾಜ ನೀಡುವ ಶಿಕ್ಷೆ ಸೋತು ಹೋಗಿರಬೇಕು. ಅದಕ್ಕಾಗಿ ಮಾನವ ನೀಡುವ ದೈಹಿಕ ಶಿಕ್ಷೆಯ ಪ್ರಮಾಣಕ್ಕಿಂತಲೂ ದೈವ/ದೇವ ನೀಡುವ ಶಿಕ್ಷೆಯ ಪ್ರಮಾಣ ಅಗಾಧ ಮತ್ತು ತುಂಬಾ ಪರಿಣಾಮಕಾರಿ ಎಂತಲೂ ಲೌಕಿಕ ಶಿಕ್ಷೆಗಿಂತಲೂ ಅಲೌಕಿಕ, ಮಾನಸಿಕ ಶಿಕ್ಷೆ ತುಂಬಾ ಭಯ ಹುಟ್ಟಿಸುವಂತಹದಾಗಿರಬೇಕು. ಎಂತಲೇ ಇಂತಹ ಶಾಪಾಶಯಗಳು ಹುಟ್ಟಿಕೊಂಡಿರಬೇಕು.

ಶಾಸನಗಳು ಸಾಮಾನ್ಯವಾಗಿ ಸಾರ್ವಜನಿಕ ಸ್ಥಳಗಳಲ್ಲಿಯೇ ನೆಡುವುದರಿಂದ ಅವುಗಳ ರಕ್ಷಣೆ ಯಾವಾಗಲೂ ಮಾಡಲು ಸಾಧ್ಯವಿರದ ಕಾರಣ, ಶಾಸನಗಳು ತಮ್ಮನ್ನು ತಾವೇ ಸಂರಕ್ಷಿಸಿಕೊಳ್ಳಬೇಕು ಎನ್ನುವ ಹಿನ್ನೆಲೆಯಲ್ಲಿಯೂ ಹಾಕಿಸಿರಬೇಕು. ಆದರೆ, ಇದಕ್ಕೆ ಅಪವಾದ ಎನ್ನುವಂತೆ ಅಂದಿನ ಎಷ್ಟು ಜನರು ಅಕ್ಷರ ಜ್ಞಾನ ಬಲ್ಲವರಾಗಿದ್ದರು ಎಂಬುವುದನ್ನು ಚಿಂತಿಸಬೇಕಾದ ವಿಷಯ. ಆರಂಭದಲ್ಲಿ ಚಿತ್ರಲಿಪಿ ಮೂಲಕ ಜನ ಸಾಮಾನ್ಯರಿಗೂ ತಿಳಿಯುವ ದೃಶ್ಯಾವಳಿಗಳ

ಮೂಲಕ ಅಲ್ಲಿಯ ವಿಷಯ ವಸ್ತುಗಳ ನಿರೂಪಣೆ ಮಾಡಲಾಗುತ್ತಿತ್ತು. ಬರೀ ಅಕ್ಷರಗಳ ಮೂಲಕ ಇಂತಹ ಶಾಪಾಶಯಗಳು ಎಷ್ಟು ಜನರಿಗೆ ಅರ್ಥವಾಗಬಲ್ಲವು ಎಂಬುದನ್ನು ಅರ್ಥ ಮಾಡಿಕೊಳ್ಳಬೇಕಾದ ಸಂಗತಿ ಅಲ್ಲಲ್ಲಿ ಗೌಣವಾಗಿ ಕತ್ತೆ ಚಿತ್ರ ಬಿಡಿಸುವುದು ಅಶ್ಲೀಲ ಶಾಪಾಶಯಗಳ ಸಂದರ್ಭದಲ್ಲಿ ಮಾತ್ರ ಎಂದು ಹೇಳಬಹುದು.

ತೆಲಂಗಾಣ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಗಳ ಶಾಸನಗಳಲ್ಲಿ ದಾನ-ದತ್ತಿ ಶಾಸನಗಳೇ ಪ್ರಮುಖ ಮತ್ತು ಸಂಖ್ಯಾದೃಷ್ಟಿಯಿಂದಲೂ ಹೆಚ್ಚಾಗಿರುವುದರಿಂದ ಈ ಭಾಗದ ಶಾಸನಗಳಲ್ಲಿ ಶಾಪಾಶಯ ಉಕ್ತಿಗಳು ಬಂದಿವೆ.

ಕ್ರಿ.ಶ.೯೦೭ರ ನಲ್ಗೊಂಡ ಜಿಲ್ಲೆಯ ವೆಲಂಜಲ್ ಶಾಸನವು ಅಲ್ಲಿಯ ಕೆರೆಯ ಉತ್ತರ ದಿಕ್ಕಿಗಿರುವ ಬಸದಿಗೆ ಬಿಟ್ಟ ದತ್ತಿಯನ್ನು ಯಾರು ಪಾಲಿಸುವುದಿಲ್ಲವೋ ಅವರು ಕೆರೆಯ ನೀರಿನೊಳಗೆ ನೆಲ್ಲಂ ಬೆಳಸಿದ್ದನ್ನು, ಸಾವಿರ ಕವಿಯನುಳಿದ ಪಾಪಂ ಅರವತ್ತು ಸಾವಿರ ವರ್ಷ ಹೇಲೊಳಗೆ ಹುಳವಾಗಿ ಪುಟ್ಟುಗುಂ ಎಂದಿದೆ(ಕ.ವಿ.ಶಾ.ಸಂ.೫, ಭಾಗ.೨, ಪು.೨೮೯).

ಕ್ರಿ.ಶ.೧೦೮೦ರ ಕಲ್ಬುರ್ಗಿ ಜಿಲ್ಲೆಯ ಯಾತನೂರು ಶಾಸನವು ದತ್ತಿ ಬಿಟ್ಟ ಈ ಧರ್ಮಕ್ಕೆ ಪ್ರತಿಕೂಲ ಎಸಗಿದವರು ಪವಿತ್ರ ಸ್ಥಳ ವಾರಣಾಸಿ ದಿವ್ಯ ತೀರ್ಥದಲ್ಲಿ ಸೂರ್ಯಗ್ರಹಣದಲ್ಲಿ ಕೋಟಿ ಕವಿಲೆ ಬ್ರಾಹ್ಮಣರುಂ ಸ್ವಹಸ್ತದಿಂದ ಕೊಂದು ಅಂಗ ಭೇದ ಮಾಡಿದ ದೋಷವಕ್ಕುಂ(ಹನುಮಾಕ್ಷಿ ಗೋಗಿ, ಕಲಬುರ್ಗಿ ಜಿಲ್ಲೆಯ ಶಾಸನಗಳು, ಪು.೩೭೫).

ಕ್ರಿ.ಶ.೧೦೮೪ರ ರಾಯಚೂರು ಜಿಲ್ಲೆಯ ಗಬ್ಬೂರು ಶಾಸನವು ಇದನ್ನಳಿದ ದುರಾತ್ಮಕ ನರಕಕ್ಕೆ ಇಳಿವವನು ಅದೇ ಊರಿನ ಇನ್ನೊಂದು ಶಾಸನದಲ್ಲಿ ಪುಣ್ಯ ತೀರ್ಥಸ್ಥಳಗಳಾದ ಗಂಗಾ, ಸಾಗರ, ಯಮುನಾ, ಸಂಗಮ, ಬಾಣರಾಶಿ, ಗಯೆ, ದ್ವಿಜ ಪುಂಗವಂ, ಗೋಕುಳ ಅಳಿದ ಶಾಪ, ಕವಿಲೆ ಕೇಂದ್ರ, ಲಿಂಗಭಂಜಕಶಾಪ ತಟ್ಟುದೆ ಎಂದಿದೆ(ಅದೇ, ಪು.೮೯).

ಕ್ರಿ.ಶ.೧೦೮೭ರ ಕಲ್ಬುರ್ಗಿ ಜಿಲ್ಲೆಯ ಕೌಂಟಿ ಶಾಸನವು ಚಾಲುಕ್ಯದೊರೆ ತ್ರಿಭುವನ ಮಲ್ಲನ ಮಹಾಮಂಡಳೇಶ್ವರನಾದ ಬಿಬ್ಬರಸನು ಅಲ್ಲಿಯ ಭೀಮರಥಿ ತಡಿಯ ಕವಿಟಗೆಯ ಆಜ್ಜೇಶ್ವರ ದೇವರರ್ಗೆ ಬಿಟ್ಟ ದತ್ತಿಯನ್ನು ಆರಾದರೂ ಈ ಧರ್ಮಕ್ಕೆ ಮನದಲ್ಲಿಯಾದರೂ ಕೇಡಿನ ಬಗ್ಗೆ ಚಿಂತೆ ಮಾಡಿ ಕುಳಿದರೆ ಭೀಮರಥಿನದಿಯೆನಿತುಂ ಪರಿದುದನಿತರೊಳುಣ್ಣ ಜೀವಧನಮುಮಂ, ಬ್ರಾಹ್ಮಣರುಮಂ ವಾರಣಾಸಿ ಹತ್ಯೆ ಗೈದ ಪಾಪಮಕ್ಕುಂ.... ಸಂಸ್ಕೃತದಲ್ಲಿಯೂ ಜನ್ಮ ಜನ್ಮಾಂತರದಲ್ಲೂ ಪಾಪ ತಗಲುತ್ತದೆ ಎಂದು ಉಲ್ಲೇಖಿಸಿದೆ(ಹನುಮಾಕ್ಷಿ ಗೋಗಿ, ಕಲಬುರ್ಗಿ ಜಿಲ್ಲೆಯ ಶಾಸನಗಳು, ಪು.೮೯).

ಅದೇ ಜಿಲ್ಲೆಯ ನಿಂಬರಗಿಯ ಕ್ರಿ.ಶ.೧೧೮೮ರ ಶಾಸನವು ಚಾಲುಕ್ಯ ದೊರೆ ಆಹವಮಲ್ಲ ಆಳ್ವಿಕೆ ಮಾಡುತ್ತಿರಲು ಆತನ ಮಹಾಮಂಡಳೇಶ್ವರನಾದ ಗೊಂಡರಸರು ಅಲ್ಲಿಯ ಕೋಟಿ ಶಂಕರ ದೇವರ ನೈಷ್ಠಿಕ ತಪೋಧನರ ಉಪಜೀವನಕ್ಕಾಗಿ ಸರ್ವನಮಸ್ಯವಾಗಿ ದತ್ತಿ ಬಿಡುತ್ತಾರೆ. ಇದನ್ನು ಅರಸರು, ಪ್ರಭುಗಳು, ವ್ಯಾಪಾರಿಗಳು ಸಮಸ್ತ ಪ್ರಜೆಗಳು ಪಾಲಿಸುವವರು. ಇದನ್ನು ತಪ್ಪಿ ಯಾರಾದರೂ ನಡೆದುಕೊಂಡುದಾದರೆ, ತಮ್ಮ ಇಪ್ಪತ್ತೊಂದು ತಲೆಯ ಪಿತೃಗಲು ನೇರ ಪುನಃ ನರಕ್ಕಳಿವರು, ನರರು ಶ್ವಾನ ಗರ್ಧಭ ಚಾಂಡಾಲರವರ್ಗ್ಗೆ ಜನ್ಮ ಜನ್ಮಾಂತರಂ ರೌರವಂ" ಎಂದು ಹೇಳಿದೆ(ಅದೇ, ಪೂರ್ವೋಕ್ತ, ಪು.೫೬).

ಕ್ರಿ.ಶ.೧೧೮೯ರ ಯಾದಗೀರ ಜಿಲ್ಲೆಯ ಮುದನೂರು ಶಾಸನವು ಈ ಧರ್ಮವನ್ನು ಕೆಡಿಸಬೇಕೆಂದು ಮನದಲ್ಲಿ ಚಿಂತಿಸಿದವರ್ಗೆ, ವಾರಣಾಸಿಯಲ್ಲಿ ಸಾವಿರ ಕವಿಲೆ ಅಳಿದ ದೋಷ ಅಕ್ಕುಂ, ಸ್ವಹಸ್ತಾಯಂ.... ಎನ್ನುತದೆ. ಅದೇ ಊರಿನ ಇನ್ನೊಂದು ಶಾಸನವು ಈ ಧರ್ಮಕಿಡಿಸಿದಾತಂಗೆ, ಉಪೇಕ್ಷ ಮಾಡಿದವರಿಗೆ ಗಂಗೆ, ವಾರಣಾಸಿ, ಕುರುಕ್ಷೇತ್ರದಲ್ಲಿ ಚಮರ್ವೇದ ಪಾರಂಗತರನ್ನು, ಬ್ರಾಹ್ಮಣರನ್ನು, ಸಹಸ್ರ ಕವಿಲೆ ಕೊಂದ ದೋಷಕ್ಕುಂ..... ಓಂ ನಮಶಿವಾಯ ಎಂದಿದೆ(ಹನುಮಾಕ್ಷಿ ಗೋಗಿ, ಸುರಪುರ ತಾಲೂಕಿನ ಶಾಸನಗಳು, ಪು.೧೧೭).

ಇದೇ ಜಿಲ್ಲೆಯ ಕ್ರಿ.ಶ.೧೧೨೭ರ ಕಕ್ಕೇರಿ ಶಾಸನವು ಈ ಧರ್ಮಕ್ಕೆ ಕಾಯುವ ಯಾರೇ ಆಗಲಿ, ಮನದಲ್ಲಿ ಕೇಡನ್ನೂ ನುಡಿದಲ್ಲಿ ಆತನು ವಾರಣಾಸಿಯಲ್ಲಿ ಕೋಟಿ ಕವಿಲೆ, ಚತುರ್ವೇದ ಪಾರಂಗತರನ್ನು, ಬ್ರಾಹ್ಮಣರನ್ನು ಕೊಂದ ದೋಷ ತಟ್ಟುವುದು ಎಂದಿದೆ(ಅದೇ, ಪು.೫೪)

ಕ್ರಿ.ಶ.೧೭೨೬ರ ರಾಯಚೂರಿನ ಗಲಗ್ ಶಾಸನವು ಅತಿ ಕಠೋರ ಮತ್ತು ಕ್ಲಿಷ್ಟ ಅಹಸ್ಯ ಪದಗಳಲ್ಲಿ ಶಾಪ ನೀಡುವುದನ್ನು ಇಲ್ಲಿ ಕಂಡುಬರುತ್ತದೆ. ಇಲ್ಲಿಯ ರಾಯದುರ್ಗ ಸೀಮೆಯೊಳಗೆ ಯಾರು ವಿನಃ ಕಾರಣ ದಂಡ ತೆಗೆದುಕೊಳ್ಳುತ್ತಾರೋ ಅವರ ಬಾಯಿಗೆ ಕತ್ತೆ ತುಂಣಿ ಕಲ್ಲುಪ್ಪು, ನ್ಯಾಯಾದಿಂದ ಕೊಡಬೇಕು ಎಂದು ಅಲ್ಲಿಯ ಶಾಸನದ ಕೊನೆಯ ಶಾಪಾಶಯದಲ್ಲಿ ಉಲ್ಲೇಖಿಸಿದೆ. ಬಹುಶಃ ಇಂತಹ ನಿಕೃಷ್ಟವಾಗಿ ಶಾಪ ಹಾಕಬೇಕಾದರೆ, ಅಲ್ಲಿಯ ರಾಯದುರ್ಗ ಸೀಮೆಯಲ್ಲಿ ವಿನಾಃ ಕಾರಣ ದಂಡ ಹಾಕುತ್ತಿದ್ದಿರಬಹುದು. ಹಾಗಾಗಿ, ಅವರ ಆಕ್ರೋಶದ ಧ್ವನಿ ಇಲ್ಲಿ ಬಿಂಬಿತ ವಾಗಿದೆ ಎಂದು ಹೇಳಬಹುದು(ಕ.ವಿ.ಶಾ.ಸಂ.೭, ಪು.೧೦೪).

ಕ್ರಿ.ಶ.೧೧೩೮ರ ಬೀದರ ಜಿಲ್ಲೆಯ ಆಣಂದೂರು ಶಾಸನವು "ಈ ಧರ್ಮವಂ ಕಿಡಿಸಿರ್ದ್ದನ ಪ್ನೊಡೆ ವಾರಣಾಸಿಯಲು ಸಹಸ್ರ ಲಿಂಗ ಭೇದವಂ ಸಹಸ್ರ ಬ್ರಹ್ಮತಿಯುಂ ಗೋವಧ ಸಹಸ್ರವಂ ಮಾಡಿದ ಅಕ್ಷಯ ನರಕವಂ" ಎಂದು ಉಲ್ಲೇಖಿಸಿದೆ(ಕ.ವಿ.ಶಾ.ಸಂ.೮, ಪು.೧೭೬). ಇದೇ

ಜಿಲ್ಲೆಯ ಕ್ರಿ.ಶ.೧೧೯೬ರ ರಂಜೇರಿನ ಶಾಸನವು ಮೇಲೆ ಸಂಸ್ಕೃತದ ಶ್ಲೋಕದಲ್ಲಿ ಸ್ವದತ್ತಾಂ ಪದದತ್ತಾಂ ಊ ಯೋಹರೇ ಷಷ್ಠಿರ್ವ್ವರ್ಷ ಸಹಸ್ರಾಣಿ ವಿಷ್ಠಾಯಾಂ ಜಾಯತೆ ಕ್ರಿಮಿಃ".... ಮುಂದುವರೆದು ಇನ್ತಿ ಈ ಧರ್ಮ ಆರ ಬಗೆಯುವರೋ ಬ್ರಾಹ್ಮಣರು ತಪೋ ಧನರುಂ ಕವಿಲೆಯಂ, ವಾರಣಾಸಿ.... ಎಂದು ಉಲ್ಲೇಖಿಸಿದೆ(ಅದೇ, ಪು.೧೬೨).

ಇದೇ ಊರಿನ ಇನ್ನೊಂದು ಶಾಸನವು ಹೀಗೆ ಉಲ್ಲೇಖಿಸಿದೆ. "ಇದನಳಿದವಂಗೆ ಬ್ರತುವಿಯ ಬ್ರಾಹಂ ಅರುಮಂ ತಪೋಧನರುಮಂ.... ವಾರಣಾಸಿ, ಪ್ರಯಾಗ ಅರ್ಘ್ಯ ತೀರ್ಥ ಕುರುಕ್ಷೇತ್ರದಲು ಕೊಂದ ದೋಷಃ ಸಾರ್ಗ್ಗ" ಎಂದು ತಿಳಿಸುತ್ತದೆ(ಅದೇ, ಪು.೧೭೨). ಇದೇ ಜಿಲ್ಲೆಯ ಭಾಟ ಸಂಗಾವಿ ಶಾಸನವು" ಇದಂಕಾಯದೆ ಕಾಯ್ವ ಪಾಪಿಗೆ ಕುರುಕ್ಷೇತ್ರದಲ್ಲಿ, ವಾರಣಾಸಿಯಲ್ಲಿ ಏಳುಕೋಟಿ ಮುನೀಂದ್ರರನ್ನು, ಗೋವುಗಳನ್ನು, ವೇದಾಧ್ಯಯರನ್ನು ಲೆಂದ ಪಾಪ ಬರುತ್ತದೆ(ಅದೇ, ಪು.೧೦೪).

ಇದೇ ಜಿಲ್ಲೆಯ ಕ್ರಿ.ಶ.೧೨ನೇ ಶತಮಾನದ ನಿಂಬೂರಿನ ಶಾಸನವು ವಾರಣಾಸಿಯಲ್ಲಿ ಕವಿಲೆ, ಬ್ರಾಹ್ಮಣರನ್ನು ಹತ್ಯೆಗೈದ ಪಾಪವುಂಟಾಗುತ್ತದೆ ಎಂದು ತಿಳಿಸುತ್ತದೆ(ಅದೇ, ಪು.೬).

ತೆಲಂಗಾಣದ ವರಂಗಲ್ ಜಿಲ್ಲೆಯ ಕಾಲದ ಉಲ್ಲೇಖವಿಲ್ಲದ ಅಕುನೂರು ಶಾಸನವು ಮೂರು ಮುಖದಲ್ಲಿ ಇದೆ. ಆರಂಭ ಎರಡು ಭಾಗಗಳಲ್ಲಿ ಕನ್ನಡ ಭಾಷೆಯಲ್ಲಿದೆ, ಮೂರನೇ ಭಾಗದಲ್ಲಿ ಲಿಪಿ ಕನ್ನಡ ಭಾಷೆ ತೆಲುಗುನಲ್ಲಿದೆ. ಆದರೆ ಶಾಪಾಶಯ ಮಾತ್ರ ಕನ್ನಡದಲ್ಲಿದೆ. "ಗೋವಧಯ್ಯು ಸ್ತ್ರೀ ವಧೆಯು, ರಿಷಿವಧಯ್ಯ, ಪುತ್ರವಧಯ್ಯ, ಬ್ರಹ್ಮಹತಿಮೆಂಬ ಪಂಚ ಮಹಾಪಾತುಕುಗಯ್ದಲಿನ ಪಾಪ ಲೋಕ(ದೊಗ್ಗ) ನರಕದೊಲೆಯ(ರು) ಎಂದಿದೆ(ಕ.ವಿ.ಶಾ.ಸಂ.೫, ಭಾಗ ೨, ಪು.೭೬)

ಇಲ್ಲಿಯ ಶಾಸನವು ಪಂಚಮಹಾಪಾತಂಕಗಳು, ಬಿಚ್ಚಿ ಹೇಳಿದೆ. ಇದು ಕಠೋರೋಕ್ತಿಯೇ ಆಗಿದೆ. ಯಾವ ದತ್ತಿ ಅಮೂಲ್ಯವಾಗಿದೆಯೋ ಅಲ್ಲಿ ಅಥವಾ ಆಯಾ ಪ್ರದೇಶದ ಜನ ಸಮುದಾಯದ ಮನೋವೃತ್ತಿಗೆ ಆಧಾರವಾಗಿ ಇಂತಹ ಶಾಪಾಶಯಗಳು ಬಂದಿರಬಹುದು.

ಇದೇ ರಾಜ್ಯದ ಕರೀಮನಗರ ಜಿಲ್ಲೆಯ ವೇಮುಲವಾಡದ ಶಾಸನವೊಂದು, "ಯತ್ರಾರ್ಥಾಪೇಕ್ಷಯಂ ಮಾಡಿದೊಡೆ ವಾರಣಾಸಿಯಲು ಕೋಟಿ ಕವಿಲೆ, ಯುಮಂ, ಕೋಟಿ ವಿದ್ವಾಂಸರುಮಂ ಕೊಂದ ಪಾಪಮಕ್ಕುಂ" ಕೊನೆಯಲ್ಲಿ ಸ್ವದತ್ತಾಂ ಪರದತ್ತಾಂ ಊ ಯೋ ಹರೇಲೆ ವಸುಂಧರಾಂ ಸಷ್ಠಿರ್ವ್ವರಿಷಸಹಸ್ರಾಣಿ ವಿಷ್ಟಾಯಾಂ ಜಾಯೇತೇ ಕ್ರಿಮಿಃ"(ಅದೇ, ಪೂರ್ವೋಕ್ತ, ಪು.೪೨).

ಕ್ರಿ.ಶ.೧೨೯೮ರ ಕಲ್ಬುರ್ಗಿ ಜಿಲ್ಲೆಯ ಇಂಗಳಗಿ ಶಾಸನದಲ್ಲಿ ಹೀಗೆ ಉಲ್ಲೇಖಿಸಿದೆ. ಈ ಧರ್ಮಕ್ಕೆ ಪ್ರತಿಕೂಲ ಎಸಗಿದವರು ಶಿವದ್ರೋಹ ಗಣಂಗಳ್ ಎನಿಪರು"(ಹನುಮಾಕ್ಷಿ ಗೋಗಿ, ಕಲಬುರ್ಗಿ ಜಿಲ್ಲೆಯ ಶಾಸನಗಳು, ಪು.೧೨೩)

ಇದೇ ಜಿಲ್ಲೆಯ ೧೧೭೩ರ ಚಿಣಮಗಿ ಶಾಸನವು ಈ ಧರ್ಮವನ್ನು ಯಾರು ಪಾಲಿಸುವುದಿಲ್ಲವೋ ಅವರು ವಾರಣಾಸಿ ಕುರುಕ್ಷೇತ್ರದಲ್ಲಿ ಹೊನ್ನ ಬಣ್ಣದ ಸಾವಿರ ಕವಿಲೆಗಳನ್ನು ಸ್ವಹಸ್ತದಿಂದ ಕೊಂದ ಪಾಪಕ್ಕೆ ಹೋಗುವವರು(ಅದೇ, ಪು.೨೧೯). ಇದೇ ಜಿಲ್ಲೆಯ ಕ್ರಿ.ಶ.೧೧ನೇ ಶತಮಾನದ ಅಂದೋಲ ಶಾಸನವು "ಈದನಳಿದ ಕುಂಬೀಪಾಕದ ಕಿಚ್ಚಂ ಬೇಗುವನು ಮಲ್ಲದೇ ಗಂಗನದಿಯೊಳು ಸಹಸ್ರ ಕಪಿಲೆ ಕೊಂದ ಪಾಪ ಮತ್ತು ಸುತ್ತಿದ ಕುಟುಂಬ ಸಹಿತಂ ನರಕದಲ್ಲಿ ವಿಲಿವಿಲಿ ಒದ್ದಾಡುವುದು ಎಂದು ಉಲ್ಲೇಖಿಸಿದೆ(ಅದೇ, ಪೂರ್ವೋಕ್ತ, ಪು.೨೮೧-೨೮೩).

ಇದೇ ಜಿಲ್ಲೆಯ ಕುಳಗೇರಿ ಶಾಸನವು "ನೀಡಿದ ದತ್ತಿ ಪುನಃ ಹಿಂತಿರುಗಿಸಿ ಎಂತಾದರೆ ಗಂಗೆ, ಗಯೆ, ಕೇದಾರ, ಕುರುಕ್ಷೇತ್ರ, ಪಾರ್ವರುಂ, ಕವಿಲೆಂ ಸ್ತ್ರೀ ಬಾಲಕ ಇವರನ್ನು ಕೊಂದವರು ಮತ್ತು ಸ್ವಗೋತ್ರ ಸಹಿತ ಮಹಾಪೂರದಲ್ಲಿ ಬೀಳುವವರು ಎಂದು ಉಲ್ಲೇಖಿಸಿದೆ(ಅದೆ, ಪು.೩೦೬). ಒಮ್ಮೆ ನೀಡಿದ ದತ್ತಿ-ದಾನ, ಪುನಃ ಆಳ್ವಿಕೆ ಬದಲಾವಣೆ ಆದರೆ, ಮುಂದೆ ಬಂದ ಅರಸರು ಹಿಂದಕ್ಕೆ ಪಡೆಯಬಾರದು ಎಂಬ ನಿಲುವು ಈ ಶಾಸನ ಶಾಪಾಶಯವಾಗಿದೆ.

ಇದೇ ಜಿಲ್ಲೆಯ ಸಂಗಮ ಶಾಸನವು ಕ್ರಿ.ಶ.೧೧೪೩ರ ಕಾಲದ್ದಾಗಿದೆ. ಇಲ್ಲಿ ನೀಡಿದ ದತ್ತಿಯ ಬಗ್ಗೆ ಈ ಧರ್ಮವನಳಿದನಿಗೆ, ಗಂಗೆ, ಗಯೆ, ಕುರುಕ್ಷೇತ್ರ ಅರ್ಘ್ಯತೀರ್ದದಲ್ಲಿ ಸಾಸಿರ ಕೋಟಿ ಹೊನ್ನಬಣ್ಣದ ಕವಿಲೆ, ಸಾವಿರ ಕೋಟಿ ವೇದ ಪಾರಂಗತರನ್ನು, ಬ್ರಾಹ್ಮಣರಿಗೆ, ದಿವ್ಯ ತಪೋಧನರಿಗೆ ಕೊರದ ಪಾತಕ ಬರುವುದು. ಹಾಗೂ ಸಗೋತ್ರ ಸಹಿತಂ ನರಕ್ಕಳಿವವರು ಎಂದು ಹೆಸರಿಸಿದೆ(ಅದೇ, ಪು.೪೫೪-೪೫೫).

ಕ್ರಿ.ಶ.೧೧೨೫೫ರ ಕೊಪ್ಪಳ ಜಿಲ್ಲೆಯ ಕಲ್ಲೂರಿನ ಶಾಸನವು ಈ ಧರ್ಮವನ್ನು ಅಳಿದವನ್ನು ಗಂಗೆಯಲ್ಲಿ, ವಾರಣಾಸಿಯಲ್ಲಿ ಏಳುಕೋಟಿ ಕವಿಲೆ, ಏಳುಕೋಟಿ ತಪೋಧನರನ್ನು, ಬ್ರಾಹ್ಮಣರನ್ನು ಹತ್ಯೆಗೈದ ಪಾಪಕ್ಕೆ ಗುರಿಯಾಗುವರು ಎಂದು ಹೇಳುತ್ತದೆ(ಕ.ವಿ.ಶಾ.ಸಂ.೨, ಪು.೧೭೬).

ಇದೇ ಊರಿನ ಇನ್ನೊಂದು ಶಾಸನ ಈ ಧರ್ಮ ಆಳಿದವರು ಮಕ್ಕಳಾಂ ಜನನರು ಏಳಿಂಬರುಂ ಕೊಂದು ಕವಳ್ವಳೊರೀ ಸ್ಥಿತಿಯ ನರಿದೊಂ ಪಂಚಮಹಾಪಾತಕ" ಎಂದಿದೆ(ಅದೇ, ಪು.೪೭). ಅದೇ ಜಿಲ್ಲೆಯ ಇನ್ನೊಂದು ಗಂಗನಹಾಳು ಶಾಸನವು ಸು.ಕ್ರಿ.ಶ.೧೬ನೇ ಶತಮಾನ ಇದಕ್ಕೆ ತಪ್ಪಿದವನ ಬಾಯಿಗೆ ಕತ್ತೆ ತುಂಣಿ ಕಲ್ಲುಪ್ಪು" ಎಂದು ಕಠೋರವಾಗಿ ಉಲ್ಲೇಖಿಸುತ್ತದೆ.

ಇದೇ ಜಿಲ್ಲೆಯ ಶಿವಪುರ ಶಾಸನವು ಈ ದಾನಕ್ಕೆ ಯಾರು ತಪ್ಪಿದರೂ ಅವರು ತಮ್ಮ ತಂದೆ-ತಾಯಿಯನ್ನು ವಾರಣಾಸಿಯಲ್ಲಿ ಕೊಂದ ಪಾಪಕ್ಕೆ ಹೋಗುತ್ತಾರೆ ಎಂದು ಉಲ್ಲೇಖಿಸುತ್ತದೆ. ಇಲ್ಲಿ ಪವಿತ್ರಸ್ಥಳ, ಮತ್ಯಾರನ್ನೋ ಹಾನಿಗೈದಕ್ಕಿಂತಲೂ ತಮ್ಮ ಹೆತ್ತವನನ್ನೇ ಕೊಂದ ಪಾಪ ಕಟ್ಟಿಕೊಳ್ಳುವರೆಂದು, ಅವರನ್ನು ನೀತಿ ಮಾರ್ಗದಲ್ಲಿ ನಡೆಯುವಂತೆ ಸೂಚಿಸಿದೆ(ಅದೇ, ಪೂರ್ವೋಕ್ತ, ಪು.೧೫೧).

ಇದೇ ಜಿಲ್ಲೆಯ ಕ್ರಿ.ಶ.೧೫೨೧ರ ಕೊಪ್ಪಳ ಶಾಸನವು ಕೃಷ್ಣರಾಯಮಹಾರಾಯನು ರಾಜ್ಯಭಾರ ಮಾಡುತ್ತಿದ್ದಾಗ ಭಂಡಾರದ ಅರಸಪ್ಪಯ್ಯನ ಮಗ ಭಂಡಾರದ ತಿಮ್ಮಪಯ್ಯನು ಕೊಪ್ಪಳದ ಚೆನ್ನಕೇಶವ ದೇವರಿಗೆ ಹಿರಿಯ ಸಿಂದೋಗಿ ಗ್ರಾಮವನ್ನು ದತ್ತಿ ರೂಪದಲ್ಲಿ ಸಮರ್ಪಿಸುತ್ತಾನೆ. ಈ ಗ್ರಾಮವು ಕೃಷ್ಣರಾಯನು ಇವರಿಗೆ ಪಾಲಿಸಿದ ಕೊಪಣದ ಸೀಮೆಯಲ್ಲಿತ್ತು. ಈ ಗ್ರಾಮದ ಆದಾಯವನ್ನು ದೇವರ ಅಮೃತಪಡಿ, ಅಂಗರಂಗ ವೈಭವದ ಮಾಸೋತ್ಸವ ಇತರ ದೇವತಾ ಕಾರ್ಯಕ್ಕೆ ಸಲ್ಲಬೇಕು ಎಂದಿದೆ. ಆ ಸಿಂದೋಗಿಯ ಗ್ರಾಮದ ಈ ಯಾರೊಬ್ಬರೂ ತಪ್ಪಿ ನಡೆದರೆ "ತಮ್ಮ ತಾಯಿ ತಂದೆಯನ್ನು ವಾರಣಾಸಿಯಲ್ಲಿ ಕೊಲ್ಲಿದ ಪಾಪಕ್ಕೆ ಮತ್ತು ಸಾವಿರ ಗೋವುಗಳನ್ನು ಕೊಂದ ಪಾಪಕ್ಕೆ ಗುರಿಯಾಗುವರು ಎಂದಿದೆ(ಅದೇ, ಪೂರ್ವೋಕ್ತ, ಪು.೪೩-೪೪). ಈ ದತ್ತಿಯನ್ನು ಆಳಿದ ಯಾರೇ ಆಗಲಿ, ಈ ಸಮಾಜದಲ್ಲಿ ತಂದೆ-ತಾಯಿಂದರೆ ಸಾಕ್ಷಾತ್ ದೈವಗಳಾಗಿದ್ದಾರೆ, ಅಂತವರನ್ನು ಪವಿತ್ರ ಸ್ಥಳ ಕಾಶಿಯಲ್ಲಿ ವಧೆ ಮಾಡಿದ ಪಾಪಕ್ಕೆ ಹೋಗುವವರು ಎಂದು ಶಾಸನ ಕಠಿಣವಾದ ಮಾತುಗಳಿಂದ ನಿರ್ದೇಶಿಸಿದೆ(ಅದೇ, ಪು.೧೫೪).

ಇದೇ ಜಿಲ್ಲೆಯ ಬಂಡಿ ಹರ್ಲಾಪೂರದ ಕ್ರಿ.ಶ.೧೫೧೩ರ ಶಾಸನವು ಕೂಡ ಹಾಗೆಯೇ ಉಚ್ಚರಿಸಿದೆ. "ಈ ಧರ್ಮಕ್ಕೆ ಯಾರು ತಪ್ಪಿದರೆ ಅವರು ತಮ್ಮ ತಾಯಿ, ತಂದೆ ಕಾಶಿಲಿ ವಧಿಸಿದ ಪಾಪಕ್ಕೆ ಹೋಗುವರು ಮತ್ತು ಅದಲ್ಲದೆ ಬ್ರಹ್ಮ ಹತ್ಯ, ಗೋಹತ್ಯ, ಸ್ತ್ರೀಹತ್ಯ, ಬ್ರೂಣ ಹತ್ಯೆ ಪಾಪಕ್ಕೆ ಹೋಗುತ್ತಾರೆ(ಅದೇ, ಪೂರ್ವೋಕ್ತ, ಪು.೧೫೪). ಇಲ್ಲಿ ಶಾಸನದಲ್ಲಿ ಮೂಡಿ ಬಂದ ಭ್ರೂಣ ಹತ್ಯ, ಇದರ ಒಂದು ಕಲ್ಪನೆ ಮತ್ತು ಭ್ರೂಣ ಹತ್ಯೆಗೈಯುವ ಕಾರ್ಯಗಳು ಕ್ರಿ.ಶ.೧೫೧೩ರ ಹೊತ್ತಿಗೆ ನಡೆಯುತ್ತಾ ಇದ್ದವು ಎಂದು; ಆಗಿನ ಸಮಾಜವು ವೈದ್ಯಕೀಯ ಸೌಲಭ್ಯ ಇಲ್ಲದಿದ್ದಗೂ, ವನಸ್ಪತಿ ಗಿಡಮೂಲಿಕೆಗಳನ್ನೋ ಮತ್ತೆ ಇನ್ನೆನ್ನೋ ಬಳಸಿಕೊಂಡು ತಾಯಿ ಗರ್ಭದಲ್ಲಿನ ಮಗು ಹತ್ಯೆಗೈವುದು ಒಂದು ಮಹಾಪಾಪ ಎನ್ನುವುದು ಅಂದಿನಿಂದಲೇ ಜಾರಿಯಲ್ಲಿತ್ತು ಎಂದು ಹೇಳಬಹುದು.

ಇದೇ ಜಿಲ್ಲೆಯ ಕ್ರಿ.ಶ.೧೫೧೫ರ ಹತೋಟಿ ಶಾಸನವು ಕೃಷ್ಣರಾಯ ಮಹಾರಾಯನು ಅಲ್ಲಿಯ ಬಾಲಕೃಷ್ಣದೇವರ ಪ್ರತಿಷ್ಠಾಪನೆ ಕಾಲದಲ್ಲಿ ತನ್ನ ತಂದೆ-ತಾಯಿಯವರಿಗೆ ಪುಣ್ಯವಾಗಲೆಂದು

ಅಲ್ಲಿಯ ದೇವರಿಗೆ ದತ್ತಿಯನ್ನು ಬಿಡುತ್ತಾನೆ. ಈ ಧರ್ಮ ಯಾರು ಪಾಲಿಸುವುದಿಲ್ಲವೋ ಅವರು ತಮ್ಮ ತಾಯಿ-ತಂದೆಯನ್ನು, ವಾರಣಾಸಿಯಲ್ಲಿ ಕೊಂದ ಪಾಪಕ್ಕೆ, ಬ್ರಹ್ಮ ಹತ್ಯ, ಗೋಹತ್ಯ, ಸ್ತ್ರೀ ಹತ್ಯ, ಬ್ರಾಹ್ಮಣ ಹತ್ಯ ಪಾಪಕ್ಕೆ ಗುರಿಯಾಗುವರು(ಅದೇ, ಪೂರ್ವೋಕ್ತ, ಪು.೧೫೬). ಅಂದರೆ ಅಲ್ಲಿನ ಸಮುದಾಯವು ದೇವರಿಗಿಂತಲೂ ತಂದೆ-ತಾಯಿಯರ ಮೇಲೆ ಹೆಚ್ಚು ಭಕ್ತಿ ಇಟ್ಟಿದ್ದರೆಂದು ಅದಕ್ಕಾಗಿಯೇ ಇಲ್ಲಿ ತಂದೆ-ತಾಯಿಯರ ವಧಿಸಿದ ಪಾಪಕ್ಕೆ ಹೋಗುವವರು ಎಂದು ಈ ಶಾಸನವು ನಿಷ್ಠುರವಾಗಿ ದಾಖಲಿಸಿದೆ. ಮುಂದುವರಿದು ಅಚಲಾಪೂರ ಶಾಸನವು ಕೂಡ ಇದೇ ವಿಷಯವನ್ನು ಪ್ರಸ್ತಾಪಿಸಿದೆ. 'ಅಲ್ಲದೇ ತುಂಬಾ ಕೀಳಾಗಿ ವರ್ಣಿಸಿದೆ. ಮುಂದುವರೆದು 'ಕತ್ತಿ ತುಂಣಿ, ಕಂಳು ತೊಗೆ' ಉಲ್ಲೇಖವಾಗಿರುವುದರಿಂದ ಅಲ್ಲಿ ಜನಸಮುದಾಯವು ತುಂಬಾನೆ ಕೀಳು ಸ್ವಭಾವದವರಾಗಿದ್ದರು ಎಂತಲೇ ಈ ಮೇಲಿನ ವಾಕ್ಯಗಳು ಉಲ್ಲೇಖಗೊಂಡಿವೆ ಎಂದು ಹೇಳಬಹುದು(ಅದೇ, ಪೂರ್ವೋಕ್ತ, ಪು.೧೫೭). ಅದೇ ಊರಿನ ಇನ್ನೊಂದು ಕಮ್ಮಟದ ಶಾಸನವು ಅದೇ ವಿಷಯ ಮತ್ತು ಕಲ್ಲೂರು ಶಾಸನವು ತುಂಬಾ ಈ ಮೇಲಿನ ವಿಷಯವನ್ನು ನಿಷ್ಠುರವಾಗಿ ಪ್ರಸ್ತಾಪ ಮಾಡಿತೆಂದು ಹೇಳಬಹುದು(ಅದೇ, ಪೂರ್ವೋಕ್ತ, ಪು.೧೭೧).

ರಾಯಚೂರು ಜಿಲ್ಲೆಯ ದೇವಸೂಗೂರು ಶಾಸನವು ವೀರಶೈವ ಧರ್ಮಿಯರನ್ನೇ ಕೇಂದ್ರವಾಗಿಟ್ಟುಕೊಮಡು ಹಾಕಿಸಿದ ಹಾಗೆ ಇದೆ. ಈ ಧರ್ಮವನ್ನು ತಪ್ಪಿದವರಿಗೆ ಕಾಶಿಲಿ ಜಂಗಮನನ್ನು ಕೊಂದ ಪಾಪಕ್ಕೆ ಗುರಿಯಾಗುತ್ತಾನೆಂದು ಉಲ್ಲೇಖಿಸಿದೆ(ಕ.ವಿ.ಶಾ.ಸಂ.೭, ಪೂರ್ವೋಕ್ತ, ಪು.೩೯). ಅದೇ ಊರಿನ ಇನ್ನೊಂದು ಶಾಸನದಲ್ಲಿ ಇದನ್ನಳಿದವನು ಶಿವಾಲ್ಯಕ್ಕೆ ದ್ರೋಹಕ್ಕೆ ಗುರಿಯಾಗುತ್ತಾನೆ ಎಂದಿದೆ.

ಇದೇ ಜಿಲ್ಲೆಯ ಮಲಿಯಾಬಾದ ಮಸೀದಿಯಲ್ಲಿರುವ ಶಾಸನವು ಪರ್ಶಿಯಾ ಭಾಷೆಯಲ್ಲಿದ್ದು, ಸುದೀರ್ಘವಾಗಿ ಅಲ್ಲಿಯ ಮಲಿಕುಷ್ ಪರ್ಬ್ ಮಲಿಕ್ ಅಂಬರ್ ಎಂಬುವವನು ಅಲ್ಲಿಯ ಅನೇಕ ಕುಲಕಸುಬುದಾರರ ತೆರಿಗೆ ಮತ್ತು ವಿನಾಯಿಗಳನ್ನು ಉಲ್ಲೇಖಿಸುತ್ತಿದೆ. ಆದರೆ, ಅದರಲ್ಲಿರುವ ಅಸಹ್ಯವಾದ ಶಾಸನ ಕತ್ತೆ ತುಂಣಿ ಕಲುಪ್ಪು ತಿಂದವರು ಎಂದಿದೆ. ಮತ್ತೆ ಈ ಶಾಸನದ ಪಾಠದ ಎಡಕ್ಕೆ ಕತ್ತೆಯ ರೇಖಾ ಚಿತ್ರವಿದೆ ಎಂದು ಶಾಸನ ಸಂಪಾದಕರು ಉಲ್ಲೇಖಿಸಿದ್ದಾರೆ. ಅಲ್ಲಿಯ ಹಿಂದೂ ಜನರಿಗೆ ಪರ್ಶಿಯಾ ಭಾಷೆ ಅರ್ಥವಾಗುವುದಿಲ್ಲ. ಆದರೆ ಶಾಪಾಶಯ ಮಾತ್ರ ಅರ್ಥವಾಗಲಿ ಎನ್ನುವ ವಿಚಾರದಿಂದ ಹೀಗೆ ಹಾಕಿಸಿರಬೇಕು ಎಂದು ಹೇಳಬಹುದು(ಅದೇ, ಪೂರ್ವೋಕ್ತ, ಪು.೧೧).

ಇದೇ ಜಿಲ್ಲೆಯ ಕ್ರಿ.ಶ.೧೬೪೭ರ ಗುಂಜಹಳ್ಳಿ ಶಾಸನವು "ದಕ್ಷಿಣ ಕಾಶಿ ಎನಿಸಿರುವ ಗಯಿಲ ರಾಜ್ಯ ಕೋಟೆ ರಯಿಚುರ ಸೀಮೆ ಗುಂಜೆಹಳ್ಳಿಯ ಹಜರತಿ ಬಚಾಸಾಹೇಬರ ಆಳ್ವಿಕೆಯಲ್ಲಿ ಆ ಊರಿನ ಪಾರುಪತ್ಯೆಗಾರರು, ಗವುಡರು, ಕುಲಕರ್ಣಿ ಇತ್ಯಾದಿ ಜನ ಸೇರಿ, ಅಲ್ಲಿಯ ಶ್ರೀ ಆದಿಕೇಶವ ದೇವರ ಗುಡಿ ಈ ಹಿಂದೆ ಮರದಿಂದ ಮಾಡಲ್ಪಟ್ಟಿತ್ತ. ಅದು ತೀರ ಹಲೆಯದಾದ ಕಾರಣ ಕಲ್ಲಿನಿಂದ ಕಟ್ಟಿಸಿದ್ದಾರೆ. ಈ ಗುಡಿಯನ್ನು ಕಟ್ಟಿದ ಕಾಸೆವೆಂಕಟಯ್ಯ ಮತ್ತು ಬಡಿಗೇರ ಕಲ್ಲೋಜ ಎಂಬುವರು, ಇವರ ಪಟ್ಟ ಕಷ್ಟ ನೋಡಿ ಅಲ್ಲಿ ತಲಾ ೮ ಮಾನ ಮತ್ತು ಒಂದು ವಕ್ಕಳ ಎರೆ ಹೊಲವನ್ನು ನೀಡುತ್ತಾರೆ. ಇದು ನಿಮ್ಮ ಮಕ್ಕಳಾದಿಯಾಗಿ ಭೋಗಿಸಿಕೊಂಡು ಸುಖವಾಗಿರಿ ಎಂದು. ಇಂತಹ ಶಾಸನವನ್ನು ಮರ್ಯಾದೆಯಿಂದ ಎಲ್ಲರೂ ಪಾಲಿಸಬೇಖು. ಇಲ್ಲವಾದಲ್ಲಿ "ಮಸಲಾಮಾನರಿಗೆ ಮಕ್ಕಾದ ಆಣೆ, ಬ್ರಾಹ್ಮಣ ಮಿಕ್ಕಾದ ಹಿಂದೂ ಮಂದಿಗೆ ಕಾಶಿ ಆಣೆ ಎಂದು ಅಲ್ಲಿಯ ಹಿಂದು-ಮುಸ್ಲಿಂರ ದೈವಕ್ಕೆ ಅನುಗುಣವಾಗಿ ಅವರವರ ನಂಬಿಕೆ ಅನುಸಾರವಾಗಿ ಶಾಪಾಶಯಗಳನ್ನು ಹಾಕಿಸಿದು ಕಂಡುಬರುತ್ತದೆ(ಅದೇ, ಪೂರ್ವೋಕ್ತ, ಪು.೯).

ಅದೇ ಜಿಲ್ಲೆಯ ಕ್ರಿ.ಶ.೧೬೧೬ರ ರಾಮದುರ್ಗದ ಶಾಸನವು ಬಹುಧರ್ಮಿಯರಿಗಾಗಿ, ಅವರವರ ದೈವಕ್ಕೆ ಅನುಗುಣವಾಗಿ ಶಾಪಾಶಗಳು ಹಾಕಿಸಿದ್ದನ್ನು ನೋಡಬಹುದಾಗಿದೆ. ಅಲ್ಲಿಯ ರಾಮಲಿಂಗದೇವರಿಗೆ ಎಕಭೋಗವಾಗಿ ಬಿಟ್ಟ ದಾನವನ್ನು ಮುಂದೆ ಬರುವ ಯಾವ ಅರಸರು ಇದಕ್ಕೆ ಒಡೆಯರಾಗಿ ಬಂದರು ಇದನ್ನು ಮುಂದೆ ಪಾಲಿಸಿಕೊಂಡು ಹೋಗಬೇಕು. ಇದನ್ನು ಯಾರಾದರೂ ತಪ್ಪಿದರೆ, ಹಿಂದೂ ವಜೀರರಾದರೆ, ಕಾಶಿಯಲ್ಲಿ ತಮ್ಮ ತಂದೆ-ತಾಯಿ ಕೊಂದು, ಹೋಹತ್ಯೆ, ಬ್ರಾಹ್ಮಣ ಹತ್ಯ ಮಾಡಿದ ಪಾಪಕ್ಕೆ ಹೋಗುತ್ತಾರೆ. ತುರುಕ ವಜೀರರಾದರೆ ಮಕ್ಕಾದಲ್ಲಿ ತಮ್ಮ ತಂದೆ-ತಾಯಿ ಸಹಕೊಂದು ತಿಂದ ಪಾಪಕ್ಕೆ ಹೊಗುತ್ತಾರೆ ಎಂದು ಉಲ್ಲೇಖಿಸಿದೆ(ಅದೇ, ಪೂರ್ವೋಕ್ತ, ಪು.೧೧೩). ಅವರವರ ದೈವಕ್ಕೆ ಅನುಗುಣವಾಗಿ ಹಾಕಿಸಿದರೆ ಮಾತ್ರ ಪರಿಣಾಮಕಾರಿಯಾಗುತ್ತದೆ ಎಂಬ ಭಾವನೆಯಿಂದ ಹಿಂದು-ಮುಸ್ಲಿಂ ಬಾಂಧವರ ಮೇಲೆ ಮಾನಸಿಕವಾಗಿ ವ್ಯತಿರಿಕ್ತವಾದ ಪರಿಣಾಮ ಬೀರುವುದಕ್ಕಾಗಿ ಇಂತಹ ಮಾತುಗಳು ಬಂದಿರುವುದನ್ನು ನೋಡಬಹುದು.

ಕಾಲದ ಉಲ್ಲೇಖವಿಲ್ಲದ ಅದೇ ಜಿಲ್ಲೆಯ ದೇವದುರ್ಗ ಶಾಸನವು ಬಹುಧರ್ಮಿಯರನ್ನು ಗಮನದಲ್ಲಿಟ್ಟುಕೊಂಡು ಶಾಪಾಶಯಗಳು ಇರುವ ವಿಚಾರಗಳನ್ನು ಬರುವಂತೆ ಹೀಗೆ ಉಲ್ಲೇಖಿಸಿದೆ. ಹಿರೆಚನ ಮಾಡಿದವನು ಬ್ರಹ್ಮರು ತಪ್ಪಿದರೆ ಕಾಶಿಯಲ್ಲಿ ಬ್ರಹ್ಮಹತ್ಯೆ, ಗೋಹತ್ಯೆ, ಮಾಡಿದ ಪಾತಕಕ್ಕೆ ಹೋಗುವರು. ವೈಷ್ಣವರು ತಪ್ಪಿದರೆ ವೈಕುಂಠದಲ್ಲಿ ಬ್ರಾಹ್ಮಣ ಹತ್ಯ, ಗೋಹತ್ಯೆವನ್ನು

ಮಾಡಿದ ಪಾತಕಕ್ಕೆ, ಗುರುಸ್ತರು ತಪ್ಪಿದರೆ ಸ್ತಲದಲ್ಲಿ ದೈವ ದ್ರೋಹ, ಜಂಗಮ ದ್ರೋಹ, ಲಿಂಗ ದ್ರೋಹ, ಮಾಡಿದ ಪಾತಕಕ್ಕೆ ಮುಸಲ್ಮಾನರು ತಪ್ಪಿದರೆ ಮಕ್ಕಾದಲ್ಲಿ ಹಂದಿಗೈದ ಪಾತಕಕ್ಕೆ ಹೋಗುವರು. ಶಾಸನದ ಕೆಳಗಡೆ ಕತ್ತೆಯ ಚಿತ್ರವಿರುತ್ತದೆ(ಅದೇ, ಪು.೧೨೦).

ಈ ಶಾಸನದಲ್ಲಿ ಬರುವ ಆ ಊರಿನಲ್ಲಿ ನೆಲೆಸಿರುವ ಎಲ್ಲ ಪ್ರಧಾನ ಸಮುದಾಯಕ್ಕೆ ಎಚ್ಚರಿಕೆ ಗಂಟೆ ಭಾರಿಸುವ ನಿಟ್ಟಿನಲ್ಲಿ ತುಂಬಾ ಕಠೋರವಾದ ಮಾತುಗಳಿಂದ ಶಾಪ ಹಾಕಲಾಗಿದೆ. ಮೇಲೆ ಉಲ್ಲೇಖಿಸಿದ ಸ್ಥಳಗಳು ಅವರವರ ದೈವಕ್ಕೆ ಬಹು ಪಾವಿತ್ರ್ಯತೆಯಿಂದ ಕೂಡಿದ ಸ್ಥಳಗಳಾಗಿವೆ. ಮುಸಲ್ಮಾನರಿಗೆ 'ಹಂದಿ' ಎಂದರೆ ಅನಿಷ್ಟ, ಅದರಲ್ಲಿ ಅವರಿಗೆ ಮಕ್ಕಾ ಜನ್ಮಜನ್ಮಾಂತರದಲ್ಲಿ ಅತಿ ಶ್ರೇಷ್ಠ ಮತ್ತು ಪವಿತ್ರವಾದ ಸ್ಥಳವಾಗಿದೆ. ಅಲ್ಲಿ ಹಂದಿ ಮಾಡಿದ ಪಾಪಕ್ಕೆ ಹೋಗುವವರು ಎಂದರೆ ಎಂತಹವರ ಮನಸ್ಸಿನ ಮೇಲೂ ಘಾಸಿಗೊಳಿಸುವಂತಹದ್ದಾಗಿದೆ. ಅದೇ ರೀತಿ ವೈಷ್ಣವರಿಗೆ ವೈಕುಂಠ ವೀರಶೈವರಿಗೆ ಜಂಗಮ, ಶಿವ, ಲಿಂಗ, ಇವು ಬಹುಮುಖ್ಯವಾದ ವಸ್ತುಗಳು. ಮೀರಿದರೆ ಇವುಗಳಿಗೆ ದ್ರೋಹ ಎಂದಿದೆ. ಹೀಗಾಗಿ ಈ ಶಾಸನ ಚಿರಕಾಲ(ಇಲ್ಲಿಯ ನಿಯಮಗಳು) ಇರಬೇಕು ಎನ್ನುವ ಮನೋಭೂಮಿಕೆಯಿಂದ ಇಂತಹ ಕಠೋರ ಮತ್ತು ಮನೋವೈಜ್ಞಾನಿಕವಾಗಿ ಎಲ್ಲರನ್ನು ನಿಯಂತ್ರಿಸುವುದಕ್ಕಾಗಿ ಇಂತಹ ಶಾಪಾಶಯಗಳು ಹಾಕಿಸಿರಬಹುದೆಂದು ಹೇಳಬಹುದು(ಅದೇ, ಪೂರ್ವೋಕ್ತ, ಪು.೧೨೦)

ಇದೇ ಜಿಲ್ಲೆಯ ಹಿರೇನಾಗ್ನೂರು ಶಾಸನವು ಇದನ್ನು "ತಪ್ಪಿದಲ್ಲಿ ಕುಲಾಚಾರಕ್ಕೆ ಶಿವಾಚಾರಕ್ಕೆ ಹೊರಗು" ಎಂದಿದೆ(ಅದೇ, ಪೂರ್ವೋಕ್ತ, ಪು.೧೫೬)

ಕೊಪ್ಪಳ ಜಿಲ್ಲೆಯ ಕ್ರಿ.ಶ.೧೫೪೭ರ ಕುಕನೂರಿನ ಶಾಸನವು ಈ ದತ್ತಿ ಶಾಸನದ ನಿಯಮವನ್ನು ತಪ್ಪಿನಡೆದುದಾದರೆ, ತಮ್ಮ ತಂದೆ-ತಾಯಿಯನ್ನು, ಗೋವು, ಬ್ರಾಹ್ಮಣರನ್ನು ವಾರಣಾಸಿಯಲ್ಲಿ ಕೊಂದ ಪಾಪಕ್ಕೆ ಹೋಗುವರು ಮತ್ತು ಸುರಾಪಾನ, ನಾಯಿ ಮಾಂಸ ಸೇವಿಸಿದರು, ಕತ್ತೆ ತುಂಣಿ ಕಳುಭಕ್ಷ ಎಂದು(ಕ.ವಿ.ಶಾ.ಸಂ.೨, ಪೂರ್ವೋಕ್ತ, ಪು.೨೧೫). ಇದೇ ಜಿಲ್ಲೆಯ ಇಟಗಿ ಶಾಸನವು ಅತಿ ನಿಕೃಷ್ಟವಾಗಿ ಹೀಗೆ ಉಲ್ಲೇಖಿಸಿದೆ. "ಯಿದಕ್ಕೆ ತಪ್ಪಿದರೆ ಕತ್ತೆ ತುಂಣಿ, ಕಳ್ಳುಮೊಗೆ ವಾರಣಾಸಿಯಲ್ಲಿ ಗೋವು ಕೊಂದ ಪಾತಕ್ಕೆ ಹೋದ ಹಾಗೆ"(ಅದೇ, ಪು.೨೫೫). ಈ ಶಾಸನದ ಕೆಳಗೆ ಕಳ್ಳಿನ ಮೊಗೆ ಮತ್ತು ಕತ್ತೆಯ ರೇಖಾಚಿತ್ರ ಬಿಡಿಸಲಾಗಿದೆ. ಎಂದು ಈ ಸಂಪುಟದ ಸಂಪಾದಕರು ಉಲ್ಲೇಖಿಸಿದ್ದಾರೆ.

ಇದೇ ಜಿಲ್ಲೆಯ, ತಾವರಗೆರೆ ಶಾಸನ(ಪು.೨೮೬), ಪುರಶಾಸನ(ಪು.೨೯೬), ಕನಕಗಿರಿ ಶಾಸನ(ಪು.೩೭೧), ಕನ್ನೇರು ಮಡುಶಾಸನ(ಪು.೩೮೦), ಹಳೆ ಅಯ್ಯೋಧ್ಯಾಶಾಸನ(ಪು.೩೮೭)

ಈ ಎಲ್ಲ ಶಾಸನಗಳು, ಈ ಧರ್ಮವನನು ತಪ್ಪಿ ನಡೆದರೆ, ಅವರಿಗೆ ತಮ್ಮ ತಂದೆ-ತಾಯಿ, ಗೋವು, ಬ್ರಾಹ್ಮಣರನ್ನು ವಾರಣಾಸಿಯಲ್ಲಿ ಕೊಂದ ಪಾಪಕ್ಕೆ ಹೋಗುವವರು ಎಂದು ಉಲ್ಲೇಖಿಸಿದೆ.

ಹೀಗೆ ಈ ಮೇಲಿನ ೧೫ನೇ ಶತಮನದ ಶಾಸನದಲ್ಲಿ ಹೆಚ್ಚಾಗಿ ಅದು ಕೊಪ್ಪಳ ಜಿಲ್ಲೆಯ ಶಾಸನಗಳಲ್ಲಿ ತಂದೆ-ತಾಯಿಯರನ್ನು ಕೇಂದ್ರವಾಗಿಟ್ಟುಕೊಂಡು ಅವರಿಗಿಂತ ಶ್ರೇಷ್ಠರು ಯಾರೂ ಇಲ್ಲ ಎಂಬ ಹಿನ್ನೆಲೆಯಲಿ ಅವರ ಮಾನಸಿಕವಾಗ ಮನಃಪರಿವರ್ತನೆ ಮಾಡುವುದಕ್ಕಾಗಿಯೇ ತಂದೆ-ತಾಯಿಯರು ತಮ್ಮ ಜೀವನದಲ್ಲಿ ದೇವರಿಗಿಂತ, ತೀರ್ಥಸ್ಥಳಕ್ಕಿಂತ ತಂದೆ-ತಾಯಿಯರು ಹತ್ತಿರ ಮತ್ತು ಪ್ರೀತಿ, ಶ್ರದ್ಧೆಯನ್ನು ಇಟ್ಟುಕೊಂಡವರು, ಹೀಗಾಗಿ ಈ ನಿಯಮವನ್ನು ಯಾರು ಪಾಲಿಸುವುದಿಲ್ಲವೋ ಅವರು ಪುಣ್ಯ ಸ್ಥಳಗಳಾದ ವಾರಣಾಸಿ, ಗಯಾ ಪ್ರಯಾಣದಲ್ಲಿ ಹತ್ಯೆಗೈದ ಪಾಪ" ಎಂಬ ನುಡಿಗಳು ಇಲ್ಲಿ ಕಂಡುಬರುತ್ತವೆ.

ಕ್ರಿ.ಶ.೧೭ ಶತಮಾನದ ರಾಯಚೂರಿನ ಮಟಮಾರಿ ಶಾಸನವು ಅಲ್ಲಿಯ ಶಾಸನದಲ್ಲಿನ ನಿಯಮಕ್ಕೆ ಯಾರು ಬಾಹಿರವಾಗಿ ನಡೆದುಕೊಳ್ಳುತ್ತಾರೋ ಅವರಿಗೆ ಅಲ್ಲಿರುವ ಬಹುಧರ್ಮಿಯರಿಗಾಗಿ ಶಾಪಾಶಯಗಳನ್ನು ಹಾಕಿಸಿದ್ದನ್ನು ನೋಡಬಹುದು. ಅಲ್ಲಿಯ ರಾಜೀಬಾಯಿ ಎಂಬ ಮಹಿಳೆಯು ದೇವರಿಗಾಗಿ ಒಂದು ಬಾವಿಯನ್ನು ತೋಡಿಸಿದ್ದಳು, ಅದಕ್ಕಾಗಿ ಮಟವಾರಿಯ ಪ್ರಜೆಗಳು ಸೇರಿ ಆಕೆಗೆ ಒಂದು ವಕ್ಕುಳ ಹೊಲವನ್ನು ದತ್ತಿ ನೀಡುತ್ತಾರೆ. ಅದಕ್ಕಾಗಿ ಆಕೆಯಿಂದ ಯಾರೂ ಕಸಿದುಕೊಳ್ಳಬಾರದು ಎಂಬ ಉದ್ದೇಶದಿಂದ ಅಲ್ಲಿಯ ಎಲ್ಲ ಧರ್ಮಿಯರಿಗೆ ಅನ್ವಯವಾಗುವ ಶಾಪಾಶಯಗಳು ಅವರವರ ಧರ್ಮದ ಹೆಸರಿನಲ್ಲಿಯೇ ಹಾಕಿಸಿರುವುದು ಕಂಡುಬರುತ್ತದೆ. ಅದು ಹೀಗಿದೆ "ಹೊಲದ ಕೊಟುಯಿದೆವು ನಿಂನ್ನ ಪುತ್ರ ಪೌತ್ರ ಪಾರಂಪರಿಕ, ಆ ಸೂರ್ಯಚಂದ್ರ ಪರಿಯಂತ ಸುಖದಲ್ಲು ಅನುಭವಿಸುವುದು, ಯಿದಕೆ ಯಾರು ತಪ್ಪಿದರೆ ತುರುಕರಿಗೆ ಮುಸ್ತಾಪಿನ ಆಣೆ, ಹಿಂದುಗಳಿಗೆ ಕಾಶಿಯಲ್ಲಿ ಗೋಹತ್ಯೆ ಮಾಡಿದ ಪಾಪಕ್ಕೆ ಹೋಹರು, (ವೀರಶೈವರು) ಆಚಾರಕೆ ಹೊರಗು ಕುಲಾಚಾರಕೆ ಹೊರಗು" ಎಂದು ಹೀಗೆ ಉಲ್ಲೇಖಿಸುತ್ತದೆ(ಅದೇ, ಪೂರ್ವೋಕ್ತ, ಪು.೭). ಸಾಮಾನ್ಯ ಒಬ್ಬ ಮಹಿಳೆಯು ಸಾಮಾಜಿಕ ಉಪಯೋಗದ ಕಾರ್ಯದಲ್ಲಿ ಸ್ವಯಂ ಆಗಿ ದೇವರಿಗಾಗಿ ಬಾವಿ ತೋಡಿಸಿದ್ದಕ್ಕಾಗಿ ಅಲ್ಲಿ ಊರಿನ ಪ್ರಮುಖರಾದ ಮದಮಾರಿಯ ಮೊಗಸಾಯಿ, ನಾಯಕವಾಡಿ, ಕಿಲ್ಲೆಯ ಅದವಾನಿಗಳು, ಗೌಡರು, ಅಲ್ಲಿ ಪ್ರಜೆಗಳು ಸೇರಿ ಅಬಲೆಯಾದ ಈ ಹೆಣ್ಣು ಮಗಳಿಗೆ ಮುಂದೆ ಯಾರಿಂದಲೂ ಈ ಆಸ್ತಿ ಕಬಳಿಸುವಂತಾಗಬಾರದೆಂದು ಇಂತಹ ಧಾರ್ಮಿಕವಾದ ಎಲ್ಲ ಧರ್ಮಿಯರಿಗೂ ಅವರ ಧರ್ಮಾನುಸಾರಿಯಾಗಿ ಶಾಸನದಲ್ಲಿದ್ದ ಶಾಪಾಶಯಗಳು ಸಂದರ್ಭೋಚಿತವಾಗಿವೆ ಎಂದು ಹೇಳಬಹುದು.

ಕ್ರಿ.ಶ.೧೫೪೪ರ ಇದೇ ಜಿಲ್ಲೆಯ ಕಲ್ಲೂರಿನ ಶಾಸನವು, ಪ್ರಾಣಿಗಳ ಮೇಲೆ ದಯಾ ತೋರುವ ದೃಷ್ಟಿಯಿಂದ ಹಾಕಿಸಿದ ಶಾಪಾಶಯಗಳು ಹೀಗಿವೆ. "ಕಾರಹುಣ್ಣಿಮೆ ದಿನ ಎತ್ತುಗಳನ್ನು ಓಡಿಸಬೇಕು, ಕಟುಬಾಯಲಿ ಉಣಿಸುವುದು, ಎತ್ತು ಸತ್ತರೆ ಭಂಡಿ ಮೇಲೆ ಹಾಕಿ ಒಯ್ಯಬೇಕು' ಈ ಗ್ರಾಮಕ್ಕೆ ಮಳೆ-ಬೆಳೆ ಕಾಲಕಾಲಕ್ಕೆ ಆಗುತ್ತವೆ. ಈ ನಿಯಮ ಮೀರಿದಡೆ, ತಪ್ಪಿದರೆ ಅವರೇ ಅನ್ಯಾಯಗಳು ಅವರಿಗೆ ಬಸವನ ಶ್ರಾಪ"(ಅದೇ, ಪೂರ್ವೋಕ್ತ, ಪು.೨೮೨). ಈ ಶಾಸನದ ವಿವರಗಳು ನೋಡಿದಾಗ ಬರೀ ಮನುಷ್ಯರ ಮೇಲೆಯೇ ಅವರ ಮಾಡಿದ ಕಾರ್ಯ ಪರಿಗಣಿಸಿ ಅವರಿಗೆ ಆ ಚಂದ್ರ ಸೂರ್ಯರು ಇರುವ ತನಕ ಅವರಿಗಾಗಿ ಉದಾರವಾಗಿ ದತ್ತಿ ಬಿಡುತ್ತಿದ್ದರು. ಇಲ್ಲಿ ಪ್ರಾಣಿ ದಯೆ ಮೇರೆಯುವುದಕ್ಕಾಗಿ ಕಾರಹುಣ್ಣಿಮೆ ಅಂದರೆ ಮುಂಗಾರು ಹೊಲ ಬಿತ್ತನೆ ಮಾಡುವ ಪೂರ್ವದಲ್ಲಿ ಅಥವಾ ಅದೇ ಸಂದರ್ಭದಲ್ಲಿ ಬರುವ ಈ ದನ, ಕರು, ಎತ್ತುಗಳ ಹಬ್ಬಕ್ಕೆ ಎತ್ತುಗಳನ್ನು ಪೂಜ್ಯನೀಯ ಮತ್ತು ಅವೇ ನಮಗೆ ಅನ್ನದಾತರು. ಹೀಗಾಗಿ ಈ ಕಾರಹುಣ್ಣಿಮೆಗೆ ಎತ್ತುಗಳನ್ನು ಮೈ ತೊಳೆಯುವುದು ವಿವಿಧ ಬಣ್ಣಗಳಿಂದ ಅಲಂಕರಿಸುವುದು, ಅವುಗಳನ್ನು ಊರಿನಲ್ಲಿ ಮೆರವಣಿಗೆ ಮಾಡಿಸುವುದು ನೋಡಿದಾಗ, ಈಗಲೂ ಈ ಪದ್ಧತಿ ಹೈದ್ರಾಬಾದ ಕರ್ನಾಟಕ ಪ್ರದೇಶಗಳಲ್ಲಿ ಜೀವಂತವಾಗಿವೆ ಮತ್ತು ಸಾಮಾನ್ಯವಾಗಿ ಎತ್ತುಗಳು ತೀರಿ ಹೋದಾಗ ಅವುಗಳನ್ನು ಬಂಡಿಯಲ್ಲಿ ಹಾಕಿಕೊಂಡು ದೂರ ಒಯ್ದು ಬಿಡುತ್ತಾರೆ. ಇಲ್ಲವೇ ಗುಂಡಿ ತೋಡಿ ಮುಚ್ಚುತ್ತಾರೆ. ವಿಶೇಷ ಪೂಜೆಗಳು ಸಲ್ಲಿಸುತ್ತಾರೆ. ಈ ಪರಂಪರೆ ಈಗಲೂ ಇದೆ. ಅವುಗಳೇ ನಮಗೆ ಅನ್ನದಾತ ಆಗಿರುವುದರಿಂದ ಇಂತಹ ನಿಯಮಗಳು ಮಾಡಿದ್ದು, ಅಂದಿನ ಕಾಲದಲ್ಲಿ ಉಚಿತವಾಗಿತ್ತು. ಆದರೆ ಇಂದಿನ ಆಧುನಿಕ ಸಂದರ್ಭದಲ್ಲಿ, ಟ್ರಾಕ್ಟರ್, ಬಂದ ಮೇಲೆ ಎತ್ತುಗಳ ಮೇಲಿರುವ ಭಕ್ತಿ ಸ್ವಲ್ಪ ಕಡಿಮೆಯಾಗಿದೆ ಎಂದೆನಿಸುತ್ತದೆ.

ಕ್ರಿ.ಶ.೧೫೪೭ರ ಇದೇ ಜಿಲ್ಲೆಯ ಮಸ್ಕಿ ಶಾಸನವು ಅಲ್ಲಿಯ ನಾವಿಂದರಿಗಾಗಿ ಬಿಟ್ಟ ಆ ಊರಿನ ತೆರಿಗೆಗಳನ್ನು ಬಿಡಲಾಗಿತ್ತು. ಈ ನಿಯಮವನ್ನು ಯಾರು ಕಬಳಿಸಬಾರದು ಎಂಬುದಕ್ಕಾಗಿ, ಅಲ್ಲಿಯ ಸದಶಿವರಾಯನ ಕರ್ತನಾದ ಅಳಿಯ ರಾಮರಾಜಯ್ಯದೇವ ಅರಸರು ನಾವಿಂದರ ಮನವಿಯ ಮೇರೆಗೆ ಆ ಊರಿನ ತೆರಿಗೆಗಳನ್ನು ಅವರಿಗೆ ಬಿಟ್ಟಿರುತ್ತಾರೆ. ಈ ನಿಯಮ ಪರಿಪಾಲನೆಗಾಗಿ ಆ ಶಾಸನದಲ್ಲಿ ಶಾಪಶಯಗಳು ಹೀಗಿವೆ. "ಇದಕೆ ಆರೆ ಅಳುಪಿದರು ತಂಮ ತಂದೆ ತಾಯಿಗಳನ್ನು ಗೋಉ ಬ್ರಾಹ್ಮಣರನ್ನು ವಾರಣಾಸಿಲಿ ಕೊಂದ ಪಾತಕ(ಪೂರ್ವೋಕ್ತ, ಪು.೧೭೩) ಎಂದು ಉಲ್ಲೇಖಿಸಿದೆ. ಅಂದಿನ ಆಳರಸರು ಸಾಮಾನ್ಯ ಜನರ ಹಿತಕಾಯುವುದಕ್ಕಾಗಿ ಇಂತಹ ಶಾಸನಗಳು ಹಾಕಿಸಿರುವುದು ಕಂಡುಬರುತ್ತದೆ.

ಕ್ರಿ.ಶ.೧೬೧೬ರ ಅದೇ ಜಿಲ್ಲೆಯ ಗೋರ್ಕಲ್ಲು ಶಾಸನ ಕೃಷಿಗೆ ಸಂಬಂಧಿಸಿದ ವಿಷಯದ ಕುರಿತು ಕವಲು ಬರೆದುಕೊಂಡ ವಿಷಯವಾಗಿ ಹಾಕಿಸಿದ ಶಾಸನವಾಗಿದೆ. ಇಲ್ಲಿಯ ಹಾಳುಬಿದ್ದ ಹೊಲವು ಹಸನು(ಸ್ವಚ್ಛ) ಮಾಡುವುದಕ್ಕಾಗಿ ಐದು ವರ್ಷಕ್ಕೆ ಒಪ್ಪಂದ ಕರಾರು ಇದಾಗಿದೆ. ಅದರ ಬಗ್ಗೆ ಶಾಪಾಶಯಗಳು ಹೀಗೆ ಹೇಳುತ್ತವೆ. "ಇದಕ್ಕೆ ಹೊರತಾಗಿ ನಡೆದರೆ ದಿವಾಣರು ಯಾರು ಬಂದರೂ ಇದನ್ನು ಹೀಗೆಯೇ ನಡೆಸಬೇಕು. ತಪ್ಪಿದರೆ ತುರಕರಾದರೆ ಮುಸಾಫರನ ಆಣೆ, ಬ್ರಾಹ್ಮಣ ಗೋಹತ್ಯೆ ಮಾಡಿದ ಹಾಗೆ, ತುಂಬಾ ಕೀಳು ಮಟ್ಟದ ಮಾತು ಕತ್ತೆ ತುಂಣಿ ಕಲುಪು..... ಹೀಗೆ ಈ ಕವಲು(ಒಪ್ಪಂದ, ಕರಾರು) ತಪ್ಪಿದಲ್ಲಿ ಮತ್ತು ಮರೆಮಾಡಿ(ತಿರುಚಿ) ಯಾರೇ ಹೇಳಿದರೂ ಇದೇ ಆಣೆ"(ಅದೇ, ಪೂರ್ವೋಕ್ತ, ಪು.೨೫೪) ಎಂದು ಕೃಷಿಗೆ ಸಂಬಂಧಿಸಿದ ಅಂದರೆ ಗ್ರಾಮೀಣ ಭಾಗದಲ್ಲಿ ಒಕ್ಕಲಿಗರು ಈಗಲೂ ಒಂದು ವರ್ಷದಿಂದ ಸು.೬, ೧೦ ವರ್ಷಗಳವರೆಗೆ ಭೂಮಿಯನ್ನು ದುಡ್ಡು ತೆಗೆದುಕೊಮಡು ಇಲ್ಲವೇ ಕೊಟ್ಟು ಅಧಿಕೃತವಾಗಿ ಇಂತಹ ಕರಾರು ಪತ್ರಗಳನ್ನು ಬರೆಯಿಸಿಕೊಳ್ಳುತ್ತಾರೆ. ಈ ಪರಂಪರೆ ಅಂದಿನಿಂದಲೂ ಇಂದಿನವರೆಗೆ ಬಳಕೆಯಲಿದೆ ಎಂದು ಅದಕ್ಕಾಗಿ ಅಂದು ಬರೆದುಕೊಳ್ಳುವುದಕ್ಕೆ ಇಂದಿನ ಹಾಗೆ ಪೇಪರ(Bond)ಇರಲಿಲ್ಲ. ಅದಕ್ಕಾಗಿ ಇಂತಹ ಶಾಸನಗಳು ಹಾಕಿಸುತ್ತಿದ್ದರೆಂದು, ಅದನ್ನು ಉಳಿಸಿಕೊಂಡು ಬರುವುದಕ್ಕಾಗಿ, ಇಂತಹ ಶಾಪಾಶಯ ನುಡಿಗಳು ಹಾಕುತ್ತಿದ್ದರೆಂದು ತಿಳಿದುಬರುತ್ತದೆ.

ಹೀಗೆ ಶಾಸನ ಪಠ್ಯದ ಹೆಚ್ಚಾಗಿ ಕೊನೆಯ ಭಾಗದಲ್ಲಿ ಬರುವ ಈ ಶಾಪಾಶಯಗಳು, ನೀಡಿದರೆ, ಇವು ಅಂದಿನ ಸಾಮಾಜಿಕ ಬದುಕಿನ ಚಿತ್ರಣವನ್ನು ಬಿಚ್ಚಿಡುತ್ತವೆ. ಅವುಗಳಲ್ಲಿ ಬಹುಮುಖ್ಯವಾಗಿ, ಶಾಸನಗಳು ಸಾರ್ವಜನಿಕರಿಗಾಗಿ, ಸಾರ್ವಜನಿಕ ಸ್ಥಳಗಳಲ್ಲಿ ಹಾಕಿಸುವುದರಿಂದ, ಅವುಗಳನ್ನು ಸಂರಕ್ಷಣೆಗಾಗಿ ಯಾರನ್ನೂ ನೇಮಿಸದೇ ಅವುಗಳಲ್ಲಿರುವ ಶಾಪಾಶಯಗಳೇ ಆ ಶಾಸನದ ಸಂರಕ್ಷಣೆ ಎನ್ನುವಂತೆ ಇದ್ದವು. ಹೀಗಾಗಿ ಶಾಸನಗಳಲ್ಲಿರುವ ಶಾಪಾಶದ ನುಡಿಗಳಿಂದಾಗಿ ಆ ಶಾಸನ ಸಂರಕ್ಷಣೆ ಆಗುತ್ತಿತ್ತು. ಇಲ್ಲವಾದಲ್ಲಿ, ಶಾಸನವನ್ನು ವಿರೂಪಗೊಳಿಸುವ ಹುನ್ನಾರಗಳು ನಡೆಯುತ್ತಾ ಇದ್ದವು ಎಂದು ಹೇಳಬಹುದು.

ಇಂತಹ ಶಾಪಾಶಯಗಳು ಹಾಕಿಸುವರ ಉದ್ದೇಶ, ಕೊಟ್ಟ ದಾನ-ದತ್ತಿಗಳು, ಮಾಡಿದ ನಿಯಮಗಳು, ಯಾರೂ ಮೀರಬಾರದು ಅವುಗಳನ್ನು ಹಾಗೆಯೇ ಪೋಷಿಸಿಕೊಂಡು ಬರಬೇಕು. ಎನ್ನುವುದೇ ಅವರ ಉದ್ದೇಶ. ಆದರೆ ಅದೇ ವಿಷಯವನ್ನು ಒಬ್ಬ ಅಧ್ಯಯನಕಾರನ ದೃಷ್ಟಿಯಲ್ಲಿ ಅನೇಕ ವಿಚಾರಗಳಿಗೆ ಗ್ರಾಸ ಒದಗಿಸುತ್ತವೆ. ಅಧ್ಯಯನ ದೃಷ್ಟಿಯಿಂದ ನೋಡಿದಾಗ, ಅಲ್ಲಿಯ ಜನರ ಸಾಂಸ್ಕೃತಿಕ ಬದುಕು, ಅಂದಿನ ಪುಣ್ಯ ತೀರ್ಥಗಳು ಯಾವುವು? ಯಾವ ಯಾವ

ದೈವಗಳನ್ನು ನಂಬಿದರು, ಎಂತಹ ನಿಯಮಗಳು ಮಾಡಿದರು ಎಂಬ ಹಲವು ಹತ್ತು ವಿಷಯಗಳು ಇಂತಹ ಶಾಪಾಶಯಗಳೆಂದು ತಿಳಿದುಬರುತ್ತದೆ.

ಆರಂಭದ ಶಾಸನಗಳಲ್ಲಿ ಬರೀ ಅದನಳಿದವನ್ ಪಂಚಮಹಾ ಪಾತಕ್' ಎಂದು ಉಲ್ಲೆಖಿಸಿ, ಬರುಬರುತ್ತಾ ೧೨ನೇ ಶತಮಾನ ನಂತರ ಶಾಸನಗಳು, ಪಂಚ ಮಹಾಪಾತಕಗಳಾದ ಸ್ತ್ರೀ ಹತ್ಯೆ, ಶಿಶು ಹತ್ಯೆ, ಬ್ರಾಹ್ಮಣ ಹತ್ಯೆ, ಗೋವಿನ ಹತ್ಯೆ, ಭ್ರೂಣಹತ್ಯೆ, ಬಿಡಿ ಬಿಡಿಯಾಗಿ ಉಲ್ಲೇಖಿಸಿದನ್ನು ನೋಡಬಹುದು. ಅಲ್ಲದೆ, ಹಿಂದುಗಳಿಗಾಗಿ, ವಾರಣಾಸಿ, ಗಯೆ, ಪ್ರಯಾಗ, ಭೀಮರಥಿ, ಗಂಗೆ, ಯಮುನೆ, ಶ್ರೀಶೈಲ, ಕೇದಾರ, ಕುರುಕ್ಷೇತ್ರ ಈ ಸ್ಥಳದಲ್ಲಿ ಬ್ರಾಹ್ಮಣರನ್ನು, ಗೋವುಗಳನ್ನು, ವಿದ್ವಾಂಸರನ್ನು, ತಪೋಧನರನ್ನು, ಮುಂದುವರೆದು ತಮ್ಮ ತಂದೆ, ತಾಯಿ, ಮಕ್ಕಳನ್ನು ಕೊಂದ ಪಾಪಕ್ಕೆ ಹೋಗುವರು ಎಂದು ಉಲ್ಲೇಖಿಸಿವೆ. ಇವು ಹಿಂದೂ ಧರ್ಮೀಯರಿಗೆ ಪ್ರಾಚೀನ ಕಾಲದಿಂದಲೂ ಪವಿತ್ರ ತೀರ್ಥಸ್ಥಳಗಳೆಂದು ಮಾನ್ಯ ಮಾಡಲಾಗಿತ್ತು ಎಂದು ತಿಳಿದುಬರುತ್ತವೆ.

ವೀರಶೈವ ಧರ್ಮಿಯರಿಗೆ, ಈ ನಿಯಮ ಮೀರಿದಾದರೆ, ಶಿವಗಣಕ್ಕೆ ಹೊರಗು, ಲಿಂಗಭಂಜಕ, ಜಂಗಮ ದ್ರೋಹಿ, ಶಿವದ್ರೋಹಿ, ಶಿವಾಚಾರಕ್ಕೆ ಹೊರಗು, ವಾರಣಾಸಿಯಲ್ಲಿ ಗೋವುಗಳನ್ನು ಕೊಂದ ಪಾಪಕ್ಕೆ ಹೋಗುವರು. ತಂದೆ-ತಾಯಿಯರನ್ನು ಕೊಂದ ಪಾಪಕ್ಕೆ ಹೋಗುವರು ಎಂದು ತಿಳಿಸುತ್ತದೆ.

ವೈಷ್ಣವ ಧರ್ಮ ಸಂಬಂಧಿಸಿದಂತೆ, "ವೈಕುಂಠದಲ್ಲಿ ಗೋಹತ್ಯೆ, ಋಷಿ ಮುನಿಗಳನ್ನು ಹತ್ಯೆಗೈದ ಪಾಪಕ್ಕೆ ಹೋಹರು" ಎಂದು ಉಲ್ಲೇಖಿಸಿವೆ.

ಮುಸ್ಲಿಂ ಸಮುದಾಯಕ್ಕೆ ಸಂಬಂಧಿಸಿದಂತೆ, ಅವರ ಪುಣ್ಯಕ್ಷೇತ್ರ ಮಕ್ಕಾ ಮತ್ತು ಪ್ರವಾದಿ ಮುಸ್ತಾಪಿನ ಮೇಲೆ ಆಣೆ ಮತ್ತು ಅವರಿಗೆ ಅಪ್ರಿಯವಾದ ಪ್ರಾಣಿ ಹಂದಿ ಇದಕ್ಕೆ ತಪ್ಪಿ ನಡೆದರೆ, ಹಂದಿಗೈದ ಪಾಪಕ್ಕೆ ಹೋಗುವರು ಎಂದು ಮತ್ತು ಮಕ್ಕಾದಲ್ಲಿ ಹಂದಿ ಮತ್ತು ತಮ್ಮ ತಂದೆ-ತಾಯಿಯರನ್ನು ಕೊಂದು ತಿಂದ ಪಾಪಕ್ಕೆ ಹೋಗುವುರೆಂದು ರಾಯಚೂರಿನ ಶಾಸನವೊಂದು ಉಲ್ಲೇಖಿಸುತ್ತದೆ. ರಾಯಚೂರಿನ ಮಟಮಾರಿ, ರಾಮದುರ್ಗದ ಶಾಸನಗಳು ಎಲ್ಲ ಧರ್ಮಿಯರಿಗೆ ಅನ್ವಯಿಸುವ ಅವರರವರ ಧರ್ಮಕ್ಕೆ ಅನುಗುಣವಾಗಿ ಅವರ ಪವಿತ್ರ ಸ್ಥಳಗಳ ಉಲ್ಲೇಖ ಮಾಡಿ ಅಲ್ಲಿ ಹತ್ಯೆಗೈದ ಪಾಪಕ್ಕೆ ಹೋಗುವರು ಎಂದು ಉಲ್ಲೇಖಿಸುತ್ತವೆ.

ಇದು ಸಾಲದು ಎನ್ನುವುದಕ್ಕೆ ದೇವರು, ತೀರ್ಥಸ್ಥಳಗಳು ನಮ್ಮ ದಿನನಿತ್ಯದ ಬದುಕಿನಿಂದ ದೂರ ಇರುವವು ಎಂತಲೋ, ಎಲ್ಲರಿಗೂ ಜೀವಂತ ದೈವಗಳಾದ ತಂದೆ-ತಾಯಿಯರನ್ನು

ಪವಿತ್ರ ಕ್ಷೇತ್ರಗಳಲ್ಲಿ ಕೊಂದ ಪಾಪಕ್ಕೆ ಗುರಿಯಾಗುವಿರಿ ಎಂದು ಉಲ್ಲೇಖಿಸಿವೆ. ದೇವರ ಮೇಲೆ ಭಕ್ತಿ-ಭಾವ ಇಲ್ಲ, ನಾಸ್ತಿಕರಿಗೆ ಇದರ ಬಿಸಿ ತಟ್ಟಲಿ ಎಂಬ ಭಾವನೆಯಿಂದಲೇ ಇಂತಹ ಮಾತುಗಳು ಕಂಡುಬರುತ್ತವೆ.

ಇಂದಿನ ಆಧುನಿಕ ಜಗತ್ತಿನಲ್ಲಿ ದಿನನಿತ್ಯ ಅದೆಷ್ಟೋ ಲಿಂಗ ಪರೀಕ್ಷೆ ಮಾಡಿಸಿಕೊಂಡು, ಭ್ರೂಣ ಹತ್ಯೆ ಮಾಡುತ್ತಿದ್ದಾರೆ. ಇದಕ್ಕೆ ಮಧ್ಯಯುಗದ ಕಾಲದಲ್ಲೂ ಭ್ರೂಣ ಹತ್ಯೆ ಮಾಡುವ ಪರಿಕಲ್ಪನೆ ಇತ್ತು ಎಂದು ಕ್ರಿ.ಶ.೧೫೧೩ರ ಕೊಪ್ಪಳ ಜಿಲ್ಲೆಯ ಬಂಡಿಹರ್ಲಾಪೂರ ಶಾಸನ ಉಲ್ಲೇಖಿಸುತ್ತದೆ. ಅದು ಹಿಂದಿನಿಂದಲೂ ಮಹಾಪಾಪಕಾರ್ಯವೆಂದು ಸೂಚಿಸುತ್ತದೆ.

ಈ ಮೇಲಿನ ಕೆಲವು ಅಲೌಕಿಕವಾದ ಶಾಪಾಶಯಗಳು ಆದರೆ, ಲೌಕಿಕವಾದ ಕಠೋರ ಬಯ್ಯುವ ಧಾಟಿಯಲ್ಲಿ ನಿಕೃಷ್ಟ ಅವಾಚ್ಯ ನುಡಿಗಳಲ್ಲಿ ಶಾಪಾಶಯಗಳು ಶಾಸನಗಳಲ್ಲಿ ಉಲ್ಲೇಖಗೊಂಡಿವೆ. ಕೊಪ್ಪಳ ಗಂಗನಹಾಳು, ಅಚಲಾಪೂರ, ಕುಕನೂರು ೧೬ನೇ ಶತಮಾನದ ಶಾಸನಗಳು, ಇದನ್ನು ತಪ್ಪಿದವರ ಬಾಯಿಗೆ 'ಕತ್ತೆ ತುಂಣಿ ಕಲ್ಲುವುಪ್ಪ" ಜೊತೆ ಆ ಶಾಸನಗಳ ಮೇಲೆ ಕತ್ತೆ ಚಿತ್ರ ಕೂಡ ಬಿಡಿಸಲಾಗಿದೆ. ಮುಂದುವರಿದು, ರಾಯಚೂರು ಜಿಲ್ಲೆಯ ಕ್ರಿ.ಶ.೧೭೭೪ರ ಬಿಚಾಲೆ, ಮಲಿಯಬಾದ ಗಲಗ್ ಶಾಸನಗಳು ಮೇಲಿನ ನಿಕೃಷ್ಟ ಕೆಟ್ಟ ನುಡಿಗಳಲ್ಲಿ ಶಾಪಾಶಯದಲ್ಲಿ ನಿರೂಪಿಸಿವೆ. ಇನ್ನುಳಿದ ಬೀದರ, ಕಲ್ಬುರ್ಗಿ, ಯಾದಗೀರ, ತೆಲಂಗಾಣ ಪ್ರದೇಶದ ಈ ಭಾಗದ ಶಾಸನಗಳಲ್ಲಿ ಇಂತಹ ಕಠೋರ ನುಡಿಯ ಶಾಪಾಶಯಗಳು ಕಂಡುಬರುವುದಿಲ್ಲ. ಇದರಿಂದಾಗಿ, ಈ ಭಾಗದ ಅಂದಿನ ಜನರ ಮನೋಭಾಮಿಯನ್ನು ನಿರ್ಧರಿಸುತ್ತದೆ.

ಕಲಬುರ್ಗಿಯ ಅಂದೊಲ, ಸಂಗಮ ಶಾಸನಗಳಲ್ಲಿ ಶಾಪಾಶಯಗಳು, ಒಬ್ಬ ವ್ಯಕ್ತಿ ಇದನ್ನು ತಪ್ಪು ಮಾಡಿದರೆ, ಇಡೀ ಆತನ ಕುಟುಂಬದವರೆಲ್ಲ ಆ ಪಾಪದಲ್ಲಿ ಬೀಳುವವರು ಎಂದು ಉಲ್ಲೇಖಿಸುತ್ತವೆ. ಒಮ್ಮೆ ನೀಡಿದ ದಾನ-ದತ್ತಿಯು ಪುನಃ ಹಿಂದಕ್ಕೆ ಪಡೆಯುವಂತಿಲ್ಲವೆಂದು ಅದೇ ಜಿಲ್ಲೆಯ ಕುಳಗೇರಿ ಶಾಸನದ ಶಾಪಾಶಯಗಳು ಹೀಗಿವೆ. ನೀಡಿದ ದತ್ತಿ ಪುನಃ ವಾಪಸ್ಸು ನೀಡು ಎಂದಾದರೆ, ಗಂಗೆ, ಗಯೆ, ಕೇದಾರ, ಕುರುಕ್ಷೇತ್ರದಲ್ಲಿ ಪಾರ್ವರುಂ, ಕವಿಲೆ, ಸ್ತ್ರೀ ಬಾಲಕ ಇವರನ್ನು ಕೊಂದ ಪಾಪದಲ್ಲಿ ಬೀಳುವರೆಂದು, ಸ್ವಗೋತ್ರ ಸಹಿತ ಮಹಾಪೂರದಲ್ಲಿ ಬೀಳುವರೆಂದು ಉಲ್ಲೇಖಿಸಿದೆ. ಹೀಗಾಗಿ ಒಬ್ಬ ಮಾಡಿದ ತಪ್ಪಿಗಾಗಿ ಇಡೀ ಅವನನ್ನು ಸುತ್ತುವರಿದ ಸವಗೋತ್ರಸಹಿತದವರಿಗೂ ಈ ಶಾಪತಟ್ಟುತ್ತದೆ ಎಂದು ಉಲ್ಲೇಖಿಸಿದೆ.

ಅದೇ ರೀತಿಯ ನಿಂಬರಗಿ ಶಾಸನವೂ ಕೂಡ ನಾಯಿ ಗರ್ಭದಲ್ಲಿ ಜನಿಸುವುದು ಮತ್ತು ನಾಯಿ ತಿಂದ ಪಾಪಕ್ಕೆ ಹೋಗುವವರು, ಹೀಗಾಗಿ ನಿಯಮ ಬಾಹಿರವಾಗಿರುವ ವಿಷಯಗಳನ್ನು ಈ ಶಾಸನಗಳು ಶಾಪಾಶಯಗಳಲ್ಲಿ ಕಂಡುಬರುತ್ತವೆ. "ದಾನವನ್ನು ರಕ್ಷಿಸದೇ ಅಪಹರಿಸಿದವರು

ತನ್ನ ಹೆಂಡತಿಯನ್ನು ತಾನೇ ಹೊಲೆ ಮಾದಿಗನಿಗೆ ಒಪ್ಪಿಸಿದ ಪಾಪಕ್ಕೆ ಹೋಗುತ್ತಾನೆ ಎಂಬ ಶಾಪದ ಅಂಶಗಳಲ್ಲಿ ಅಶ್ಲೀಲ ಮತ್ತು ಅನೈತಿಕತೆಯ ಪದದ ಜೊತೆಗೆ ಜಾತಿ ಪ್ರಶ್ನೆಯನ್ನು ಎತ್ತಿ ತೋರಿಸಲಾರಂಭಿಸಿದರು. ಇಲ್ಲಿ ಬಳಕೆಯಾಗಿರುವ ಹೊಲೆ ಮಾದಿಗ ಎನ್ನುವುದು ಸಮಾಜದಲ್ಲಿ ಕೆಳಸ್ಥಾನವನ್ನು ಸೂಚಿಸುತ್ತದೆ. ಆದ್ದರಿಂದ ಇಂತಹ ಪದಗಳನ್ನು ಬಳಸುವುದರ ಮೂಲಕ ಅವರು ಕೀಳುಹಂತಕ್ಕೆ ಹೋಗುವರು ಅಥವಾ ನಿಕೃಷ್ಟತೆಗೆ ಗುರಿಯಾಗುವರು ಎಂಬುದನ್ನು ತಿಳಿಸಲಾಗಿದೆ.

ಹೀಗೆ ಜಾತಿ ಮತ್ತು ಅನೈತಿಕ ಸಂಬಂಧಗಳನ್ನು ಆಪಾದಿಸುವುದರ ಮೂಲಕ ಹಾಗೂ ಬೈಗುಳ ಮತ್ತು ಅಶ್ಲೀಲ ಪದಗಳನ್ನು ಬಳಸುವುದರ ಮೂಲಕ ಅವರನ್ನು ಮಾನಸಿಕವಾಗಿ ನಿಯಂತ್ರಣ ಮಾಡಿ ದಾನವನ್ನು ರಕ್ಷಿಸುವ ಪ್ರಯತ್ನ ಮಾಡಿದ್ದಾರೆ. ಇದಕ್ಕೆ ಉದಾಹರಣೆಗಾಗಿ, ತಂದೆಯನ್ನು ಕೊಂದು ತಾಯಿಯೊಂದಿಗೆ ಕೂಡಿದವನೆಂದೂ, ಒಡಹುಟ್ಟಿದವಳೊಂದಿಗೆ ಸಂಬಂಧವಿರಿಸಿಕೊಂಡಂತೆಯೂ, ತನ್ನ ಮಗಳೊಂದಿಗೆ ಲೈಂಗಿಕ ಸಂಬಂಧವನ್ನು ಮಾಡಿದಂತೆಯೂ (ಉದ್ಧೃತ: ಡಾ.ಬಿ.ಡಿ.ರಾಜಣ್ಣ, ಕನ್ನಡ ಶಾಸನ ಮತ್ತು ಸಾಹಿತ್ಯದಲ್ಲಿ ಶಾಪ, ೨೦೧೦, ಪು.೨೭). ಹೀಗೆ ಸಾಮಾಜಿಕ ಬಾಹಿರವಾದ ನುಡಿಗಳನ್ನು ಶಾಪಾಶಯಗಳಲ್ಲಿ ಉಲ್ಲೇಕಿಸಿ, ದಾನ–ದತ್ತಿಗಳನ್ನು ಕಾಪಾಡಿಕೊಂಡು ಬರುವ ಭರಾಟೆಯಲ್ಲಿ, ಅವು ಅಂದಿನ ಸಮಾಜದಲ್ಲಿನ ಸ್ತರಗಳ ಬಗ್ಗೆ ವಿವಿಧ ಕೆಳ ಜನಸಮುದಾಯಗಳ ಬಗ್ಗೆ ಮೇಲಸ್ತರದ ಜನ ಕಾಣುವ ಬಗೆ ಮತ್ತು ಮನಸ್ಸಿಗೆ ಘಾಸಿಗೊಳಿಸುವ, ತಾಯಿ ಸಹೋದರಿ, ಮಗಳು ಇವರೊಂದಿಗೆ ಹೊಂದಿರುವ ಅನೈತಿಕ ಸಂಬಂಧಗಳು ಅಂದು, ಹೇಗೆ ಚುರುಕು ಮುಟ್ಟಿಸುವ ಹಿನ್ನೆಲೆಯಲಿ ಹೀಗೆ ನಿರೂಪಿಸಿವೆ ಎಂಬುದನ್ನು ತಿಳಿಸುತ್ತವೆ.

ಬೀದರ ಜಿಲ್ಲೆಯ ಭಾಟಸಂಗಾವಿ ಶಾಸನ ಶಾಪಾಶಯವು ವಾರಣಾಸಿಯಲ್ಲಿ ಏಳುಕೋಟಿ ಮುನಿಂದ್ರರನ್ನು, ಗೋವುಗಳನ್ನುಮ ಮೇದಾದ್ವರನ್ನು ಕೊಂದು ತಿಂದ ಪಾಪಕ್ಕೆ ಹೋಗುವವರು ಎನ್ನುತ್ತದೆ. ಇವೆಲ್ಲ ಶಾಪಾಶಯಗಳು ನೋಡಿದಾಗ, ಅಮಾನುಷಕರ ಕೃತ್ಯಗಳು ಬಹುಶಃ ಅಂದಿನ ಸಮಾಜದಲ್ಲಿ ಇದ್ದಿರಬೇಕು, ಅವು ಅನೈತಿಕ ಮತ್ತು ನಿಯಮಬಾಹಿರವಾಗಿದ್ದವೆಂತಲೇ ಆ ಕಾಲದ ಶಾಸನಗಳು ಶಾಪಾಶಯಗಳೋಪಾದಿಯಲ್ಲಿ ಒಡಮೂಡಿ ಬಂದಿವೆ ಎಂದು ಹೇಳಬಹುದು.

ಇನ್ನು ಸಾಮಾನ್ಯವಾಗಿ, ಪಂಚಮಹಾಪಾತಂಕಗಳ್, ಅಕ್ಕುಂ, ಅರವತ್ತು ಸಾವಿರ ವರ್ಷಗಳ ಕಾಲ ಮಲದಲ್ಲಿ ಕ್ರಿಮಿಯಾಗಿ ಹುಟ್ಟುಗುಂ ಮತ್ತು ನರಕದಲ್ಲಿ ವಿಲವಿಲನೆ ಒದ್ದಾಡುವಿರಿ, ವಾರಣಾಸಿಯಲ್ಲಿ ಕವಿಲೆ, ಬ್ರಾಹ್ಮಣರ ಹತ್ಯೆ ಎಲ್ಲ ಶಾಸನಗಳಲ್ಲಿ ಬರುತ್ತವೆ. ಅದಕ್ಕೂ ಮೀರಿ ಕೆಲವು ವಿಶಿಷ್ಟ ನುಡಿಗಳು ಇಲ್ಲಿ ಬಂದಿರುವುದನ್ನು ಕಾಣಬಹುದಾಗಿದೆ.

ತೆಲಂಗಾಣ ಮತ್ತು ಹೈದ್ರಾಬಾದ ಕರ್ನಾಟಕ ಪ್ರದೇಶಗಳ ಶಾಸನಗಳಲ್ಲಿ ಬಂದಿರುವ ಶಾಪಾಶಯಗಳ ಅಧ್ಯಯನವು ಬರೀ ಶಾಸನ ಹಾಕಿಸಿದವರ ದೃಷ್ಟಿಕೋನದ ಅಧ್ಯಯನವಲ್ಲ. ಅವುಗಳನ್ನು ಸಾಂಸ್ಕೃತಿಕ ಪರಧಿಯೊಳಗೆ ತೆಗೆದುಕೊಂಡಾಗ, ಅನೇಕ ಅಂಶಗಳು ಬೆಳಕಿಗೆ ಬರುತ್ತವೆ. ಹೀಗಾಗಿ ಶಾಪಾಶಯಗಳ ಅಧ್ಯಯನ ಎಂದರೆ ಈ ಭಾಗದ ಸಾಂಸ್ಕೃತಿಕ ಅಧ್ಯಯನವೇ ಆಗಿದೆ.

ಶಾಸನಗಳು ಹಾಕಿಸಿದವರ ದೃಷ್ಟಿಕೋನದಿಂದ ನೋಡಿದಾದರೆ ಬರೀ ಅವರು ಹಾಕಿಸಿದ ದತ್ತಿ–ದಾನ ಶಾಸನಗಳು ಸಂರಕ್ಷಿಸುವುದಕ್ಕಾಗಿ ನಾನಾ ರೀತಿಯ ಶಾಪಾಶಯಗಳನ್ನು ಉಲ್ಲೇಖಿಸಿದ್ದಾರೆ. ಹೀಗಾಗಿ ಅವರ ಮೂಲ ಉದ್ದೇಶ ಅವುಗಳ ರಕ್ಷಣೆ. ಆದರೆ ಅವು ಅಧ್ಯಯನಕಾರ ದೃಷ್ಟಿ ಹಲವು ಹತ್ತು ವಿಷಯಗಳ ಅನಾವರಣೆ ಎಡೆಮಾಡಿಕೊಡುತ್ತವೆ. ಮೊದಲನೆಯದಾಗಿ, ರಾಜಕೀಯ ನೋಡುವುದಾದರೆ, ಅಂದಿನ ಆಳರಸರು, ದಂಡಾಧಿಕಾರಿಗಳು, ಸಾಮಂತರು ಹೀಗೆ ಆಡಳಿತ ವರ್ಗದವರು ಹಾಕಿಸಿದ ಈ ಶಾಸನಗಳು ಯಾವುದೋ ಒಂದು ಕಾರಣ ನಿಮಿತ್ತವಾಗಿ ಉದಾರವಾಗಿ ತಾವು ನೀಡಿದ ದಾನ–ದತ್ತಿ, ಮಾಡಿದ ನಿಯಮಗಳ ಪಾಲನೆ, ಅವುಗಳನ್ನು ಸಮರ್ಪಕವಾಗಿ ಕಾರ್ಯರೂಪಕ್ಕೆ ತರಬೇಕು ಎಂಬ ಸದುದ್ದೇಶ ಇಟ್ಟುಕೊಂಡು ಶಾಸನಗಳು ಹಾಕಿಸುತ್ತಿದ್ದರು. ಅವುಗಳನ್ನು ಸಾರ್ವಜನಿಕ ರಸ್ತೆ, ಸ್ಥಳದಲ್ಲಿ ಹಾಕಿಸಲಾಗುತ್ತಿತ್ತು. ಅವು ಒಂದು ರೀತಿಯ ದಾಖಲೆ ರೂಪದಲ್ಲಿದ್ದವು. ಇಂತಹ ದಾಖಲೆಗಳ ಮಾದರಿಯಲ್ಲಿದ್ದ ಶಾಸನಗಳ ಮೇಲೆ ಇನ್ನಾರದೋ ಕಣ್ಣು ಬಿದ್ದು ಅವುಗಳನ್ನು ಉದ್ದೇಶ ರಹಿತವಾಗಿ ಹಾಳು ಮಾಡುತ್ತಿದ್ದರು. ಇಂತಹ ಸಂದರ್ಭದಲ್ಲಿ ಮುಂದೆ ರಾಜನಾದವನು ಇಲ್ಲವೇ ಆಡಳಿತ ವರ್ಗದವರು ಇಲ್ಲವೇ ಆ ಶಾಸನ ಹಾಕಿಸಿದವರಾಗಬಹುದು. ಆ ಶಾಸನಗಳ ಮೇಲೆ ರಾಜಾಜ್ಞೆ ಇರಬಹುದು. ಇಲ್ಲವೇ ಇಲ್ಲದೆ ಇರಬಹುದು. ಹೀಗಿದ್ದರೂ ಅವುಗಳನ್ನು ವಿರೂಪಗೊಳಿಸುವ ಹುನ್ನಾರ ಮೇಲಿಂದ ಮೇಲೆ ನಡಿತಾ ಇತ್ತು. ಅದಕ್ಕಾಗಿ ನಾವು ದಂಡಿಸುವ ಶಿಕ್ಷೆಗೆ ಅವರು(ಧ್ವಂಸಗೊಳಿಸು) ಮಣಿಯುವುದಿಲ್ಲ. ಅವರನ್ನು ಧರ್ಮ ಶಿಕ್ಷೆ ಹಿನ್ನೆಲೆಯಲ್ಲಿ ಶಾಸನಗಳು ಹಾಕಿಸುವವರ ಆಕ್ರೋಶದ ಪರಿಣಾಮವಾಗಿ ಶಾಸನಗಳಲ್ಲಿ 'ಮಹಾಪಾತಕನ್' ಎನ್ನುವ ಒಂದು ಶಬ್ದದಿಂದ ಆರಂಭಗೊಂಡ ಶಾಪಾಶಯಗಳು, ಬರುಬರುತ್ತಾ ಅಧನ ಪುಟಕ್ಕೂ ಮೀರುವ ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ಬಹು ವಿವರವಾದ ಶಾಪಾಶಯಗಳು ಬರಲು ಕಾರಣವಾಯಿತು.

ರಾಜಾಜ್ಞೆಗಿಂತಲೂ ದೈವಾಜ್ಞೆಯ ಪರಿಣಾಮ ಹೆಚ್ಚು ಎಂದು ತಿಳಿದ ಆಡಳಿತ ವರ್ಗ ತಾವು ನೀಡಿದ ದಾನ–ದತ್ತಿ, ನಿಯಮಗಳು ಚಾಚು ತಪ್ಪದೆ ಅದು ಪಾಲನೆಯಾಗಬೇಕೆಂದು ಅವರ ಮಾನಸಿಕವಾಗಿ ನಿಯಂತ್ರಣ ಮಾಡಲು ಇಂತಹ ಶಾಪಶಯಗಳು ಮುಂದೆ ಬಂದ

ಸಾಮಾನ್ಯ ಜನರು ಕೂಡ ಇಂತಹ ದಾನ-ದತ್ತಿಗಳಲ್ಲಿ ಕಠೋರವಾದ ಅಸಹ್ಯವಾದ ಬೈಗುಳ ಶಾಸನಗಳಲ್ಲಿ ಹಾಕಲಾರಂಭಿಸಿದರು. ಹೀಗಾಗಿ ಶಾಸನ ಹಾಕಿಸಿದವರು ಕೊಡುವ ದೈಹಿಕ ಶಿಕ್ಷೆಯ ಪರಿಣಾಮಕ್ಕಿಂತ ದೈವ/ಧರ್ಮ ನೀಡುವ ಮಾನಸಿಕ ಶಿಕ್ಷೆ ದೊಡ್ಡದು ಅದು ಸಾರ್ವತ್ರಿಕ ಮತ್ತು ಇಡೀ ಕುಟುಂಬಕ್ಕೆ ಗುರಿ ಮಾಡಿ, ಸುದೀರ್ಘ ಕಾಲ ಶಿಕ್ಷೆಗೆ ಗುರಿಪಡಿಸುವ ಶಾಪಾಶಯಗಳು ಹಾಕಿಸಲಾಯಿತು.

ಧಾರ್ಮಿಕವಾಗಿ ನೋಡುವುದಾದರೆ ಈ ಶಾಪಾಶಯಗಳ್ಲಲಿ ಮೂಡಿ ಬಂದ ಅಂದಿನ ಕಾಲದಲ್ಲಿಯೇ ಪುಣ್ಯಸ್ಥಳಗಳೆಂದು ಖ್ಯಾತಿ ಪಡೆದ, ವಾರಣಾಸಿ, ಗಂಗಾ ಯಮುನಾ, ಭೀಮಾ, ಕೇದಾರ, ಶ್ರೀಶೈಲ, ಗಯಾ, ಪ್ರಯಾಗ, ಮಕ್ಕಾ, ವೈಕುಂಠ, ಶಿವಾಲಯ, ಈ ಸ್ಥಳಗಳನ್ನು ಶಾಪಾಶಯಗಳಲ್ಲಿ ಬಳಸಿ, ಜನರ ಮನಸ್ಸು ಪರಿವರ್ತನೆ ಮಾಡುವ ಉಪಾದಿಯಲ್ಲಿ ಇವುಗಳನ್ನು ತರಲಾಗಿದೆ. ಅಲ್ಲದೆ, ಋಷಿ ಮುನಿಗಳನ್ನು, ಗೋವುಗಳನ್ನು, ವಿದ್ವಾಂಸರನ್ನು, ತಪೋನಿರತರನ್ನು ಶಿವಗಣಗಳನ್ನು, ಮುಸಾಫರನನ್ನು ತಂದೆ-ತಾಯಿ, ಸ್ತ್ರೀ, ಭ್ರೂಣ, ಬ್ರಾಹ್ಮಣ, ಇವರ ಹತ್ಯೆಗಳು ಮಾಡುವ ಪಾಪಕ್ಕೆ ಹೋಗುವವರು ಎಂಬ ಕಠೋರವಾದ ಉಕ್ತಿಗಳನ್ನು ಶಾಪಾಶಯಗಳಲ್ಲಿ ತಂದು ಆ ದುಷ್ಟ ಶಕ್ತಿಗಳನ್ನು ನಿಗ್ರಹಿಸಲು ಈ ಪ್ರಯತ್ನ ಮಾಡಿದರೆಂದು ತಿಳಿದುಬರುತ್ತದೆ. ಈ ಮೇಲಿನವುಗಳು ಸಮಾಜದಲ್ಲಿ ಪೂಜ್ಯನೀಯ, ಗೌರವಸ್ಥಾನದಿಂದ ಕೂಡಿದವರಾಗಿದ್ದು; ಪುಣ್ಯಸ್ಥಳಗಳಲ್ಲ, ಈ ಪೂಜ್ಯನೀಯ ವ್ಯಕ್ತಿಗಳ ಕೊಲೆ ಮಾಡಿದ ಪಾಪಕ್ಕೆ, ನರಕದಲ್ಲಿ ವಿಲಿವಿಲಿ ಒದ್ದಾಡುವಿರಿ ಮತ್ತು ಆರವತ್ತು ಸಾವಿರ ವರ್ಷಗಳ ಕಾಲ ಮಲದಲ್ಲಿ ಕ್ರಿಮಿಯಾಗಿ ಹುಟ್ಟುವಿರಿ ಎಂದೂ, ನೀವು ಒಬ್ಬರು ಮಾಡಿದ ದುಷ್ಕೃತ್ಯದಿಂದ ಇಡೀ ಸ್ವಗೋತ್ರ/ಕುಟುಂಬದವರಿಗೆ ಈ ಶಪ ತಟ್ಟುತ್ತದೆ ಎಂಬ ಮಾತುಗಳಿಂದ ಶಾಪಾಶಯಗಳು ಕೂಡಿದ್ದವು. ಅಷ್ಟಕ್ಕೆ ನಿಲ್ಲದೇ ಸಮಾಜದಲ್ಲಿ ನೈತಿಕತೆ ಅಧಃಪತನಕ್ಕೆ ಹೋಗುತ್ತಿರುವಾಗ ಇನ್ನೂ ಕಠೋರವಾದ ಅಶ್ಲೀಲ ಪದ ಬಳಕೆಯಿಂದ ಇಡೀ ಅವರ ಮಾನಸಿಕವಾಗಿ ಸರಿದಾರಿಗೆ ತರುವ ನಿಟ್ಟಿನಲ್ಲಿ ಇದನ್ನಳಿದವ್ ಕತ್ತೆ ತುಂಣಿ ಕಲ್ಲುಪ್ಪ ಬಾಯಿಗೆ, ಎಂದು ಬರೆದು ಕತ್ತೆ ಚಿತ್ರವೂ ಬಿಡಿಸುತ್ತಿದ್ದರು. ಇಂತಹ ಅಸಹ್ಯ ಮಾತುಗಳಿಂದ ಈ ಕೃತ್ಯಗಳು ನಿಯಂತ್ರಿಸಲು ಶಾಪಾಶಯಗಳಲ್ಲಿ ಉಲ್ಲೇಖಿಸುತ್ತಿದ್ದರು. ಇಲ್ಲಿ ಒಂದು ಸ್ಥಳ, ವಸ್ತು, ಪ್ರಾಣಿ ಒಂದು ಧರ್ಮದಿಂದ ಒಂದು ಧರ್ಮಕ್ಕೆ ಭಿನ್ನ ಅರ್ಥವಾಗಿ ಪಡೆದುಕೊಳ್ಳುತ್ತವೆ ಎಂಬುದುದಕ್ಕಾಗಿಯೇ ಆಯಾ ಧರ್ಮಕ್ಕೆ ಅನುಗುಣವಾಗಿ ಬಳಸುತ್ತಿದ್ದರೆಂದು ತಿಳಿದುಬರುತ್ತದೆ. ಉದಾ. ಹಂದಿ ಹಿಂದು ಧರ್ಮೀಯರಿಗೆ ಇಷ್ಟವಾದ ಪ್ರಾಣಿ. ಕಾರಣ ಶ್ರೀವಿಷ್ಣು ಹಿಂದೊಮ್ಮೆ ವರಾಹ ಅವತಾರ ಎತ್ತಿ ಈ ಭೂಮಂಡಲ ಮುಳುಗುತ್ತಿರುವುದನ್ನು ಮೇಲಕ್ಕೆತ್ತಿ ತಂದನೆಂದು ಪುರಾಣಗಳಲ್ಲಿ ಉಲ್ಲೇಖಿಸಿದೆ. ಅದಕ್ಕಾಗಿ ಹಂದಿ ವಿಷ್ಣುವಿನ ಅವತಾರ ಎನ್ನುವ ಕಲ್ಪನೆ ಹಿಂದುಗಳಲ್ಲಿದೆ.

ಆದರೆ ಅದೇ ಹಂದಿ, ಮುಸ್ಲಿಂರಿಗೆ ವರ್ಜ್ಯನಿಯವಾದ ಪ್ರಾಣಿ, ಅವರಿಗೆ ಹಂದಿ ಅಂದರೆ ಆಗದು, ಅಂದ ಮೇಲೆ ಅದನ್ನು ಅವರ ಪವಿತ್ರಸ್ಥಳ ಮಕ್ಕಾದಲ್ಲಿ ಹತ್ಯೆಗೈದ, ಮಕ್ಕಾದಲ್ಲಿ ಕೊಂದು ತಿಂದ, ಹಂದಿಗೈದ ಪಾಪಕ್ಕೆ ಹೋಗುವರು' ಎಂದು ಶಾಪಾಶಯಗಳಲ್ಲಿ ಉಲ್ಲೇಖಿಸಿದರೆ ಸಹಜವಾಗಿಯೇ ಅವರ ಮನಸ್ಸು ಕುಕೃತ್ಯದಿಂದ ದೂರ ಇರಬೇಕು. ಹಿಂದುಗಳಿಗೆ ಗೋವು ದೇವತಾ ಸಮಾನ. ತಾಯಿ ಸಮಾನ, ಕಾಮಧೇನು ಇತ್ಯಾದಿ. ಹೀಗಾಗಿ ಶಾಪಾಶಯಗಳಲ್ಲಿ ಕಡ್ಡಾಯವಾಗಿ ಕವಿಲೆಯನು ಕೊಂದ ಪಾಪಕ್ಕೆ ಗುರಿಯಾಗುವರು. ಅದು ವಾರಣಾಸಿಯಲ್ಲಿ ಬಂಗಾರ ಬಣ್ಣದ ಏಳು ಕೋಟಿ ಗೋವುಗಳನ್ನು ಹತ್ಯೆಗೈದ ಪಾಪಕ್ಕೆ ಹೋಹರು' ಎಂದು ಉಲ್ಲೇಖಿಸಿವೆ. ಹೀಗಾಗಿ ಶಾಸನಗಳನ್ನು ಕಬಳಿಸುವ, ಇನ್ನೊಬ್ಬರ ಸ್ವಂತಿಕೆಗೆ ಧಕ್ಕೆ ತರುವ ಕಾರ್ಯಗಳನ್ನು ನಿಲ್ಲಿಸುವುದಕ್ಕಾಗಿಯೇ ಅವರ(ಜನರ) ಮಾನಸಿಕರಂಗಗಳನ್ನು ಅರಿತು ಅವರ ಮನಸ್ಸಿಗೆ ಘಾಸಿಗೊಳಿಸುವ ಹಿನ್ನೆಲೆಯಲ್ಲಿ ಶಾಪಾಶಯಗಳು ಉಲ್ಲೇಖಿಸಿವೆ. ಇದರಿಂದಾಗಿ ಅಂದಿನ ಜನರ ಮನಃ ಹೇಗೆ ಕಾಲದಿಂದ ಕಾಲಕ್ಕೆ ವಿರೂಪಗೊಳ್ಳುತ್ತಿತ್ತೊ, ಹಾಗೆಯೇ ಶಾಸನಗಳ ಶಾಪಾಶಯಗಳಲ್ಲಿ ಕಠೋರ ಮತ್ತು ಅಶ್ಲೀಲ ಪದಗಳೊಂದಿಗೆ ವಿಕಾಸ ಹೊಂದಿವೆ ಎಂದು ಹೇಳಬಹುದು.

ಶಾಪಾಶಯಗಳಲ್ಲಿ ಸಂಸ್ಕೃತದ ಬಳಕೆ

ಆರಂಭದಿಂದಲೇ ನಮ್ಮ ದೇಶದ ಎಲ್ಲ ಸಾಹಿತ್ಯ ಪರಂಪರೆ ಮೇಲೆ ಸಂಸ್ಕೃತ ಭಾಷೆ ದಟ್ಟ ಪ್ರಭಾವ ಬೀರಿದೆ. ಅದರ ಹಾಗೆಯೇ ಶಾಸನಗಳು ಹೊರತಾಗಿಲ್ಲ. ಸಂಸ್ಕೃತ ಭಾಷೆ ನೇರವಾಗಿ ದೇವರಿಂದ ಹುಟ್ಟಿದೆ. ಹೀಗಾಗಿ ಅದು ದೇವಭಾಷೆ ಎನಿಸಿದೆ ಎಂದು ತಿಳಿದ ಅಂದಿನ ಜನಸಾಮಾನ್ಯರು, ಶಾಸನ ಕನ್ನಡ ಭಾಷೆಯಲ್ಲಿದ್ದರೂ, ಕನ್ನಡ ನಾಡಿನಲ್ಲೇ ಹಾಕಿಸಿದರೂ ಆರಂಭದ ಸಾಲುಗಳು ಮಾತು ಸಂಸ್ಕೃತ ಶ್ಲೋಕದಿಂದಲೇ ಆರಂಭವಾಗುತ್ತಿದ್ದವು. ಮತ್ತು ಕೊನೆಯ ಸಾಲು ಶಾಪಾಶಯದ ಹಂತದಲ್ಲಿ ಕನ್ನಡದಲ್ಲಿ ಶಾಪಾಶಯ ಇದ್ದರೂ ನಂತರ ಸುದೀರ್ಘವಾದ ಸಂಸ್ಕೃತದಲ್ಲಿ ಶಾಪಾಶಯಗಳ ಸಲು ಬರುತ್ತಿದ್ದವು. ಒಂದೊಂದು ಸಹ ಹೆಚ್ಚಾಗಿ ಕನ್ನಡ ಭಾಷೆಯ ಶಾಪಾಶಯಗಳೇ ಇಲ್ಲವೆಂಬಂತೆ ಕಂಡುಬರುತ್ತದೆ. ಆದರೆ ಸಂಸ್ಕೃತ ಭಾಷೆ ಶಾಪಾಶಗಳು ನಿಯತವಾಗಿದ್ದವು ಎಂದು; ಇದನ್ನು ಜನ ಸಾಮಾನ್ಯರ ಭಾವನೆ ಮೇಲೆ ಗಾಢ ಪರಿಣಾಮ ಬೀರುತ್ತಿದ್ದವು ಎಂದು ಹೇಳಬಹುದು.

ಹೀಗಾಗಿ ಈ ಶಾಪಾಶಯಗಳಿಮದ ಅಂದಿನ ಜನರ ಮಾನಸಿಕ ತುಡಿತಗಳೇನು? ನೈತಿಕತೆ, ಗುರು-ಹಿರಿಯರ ಮೇಲಿನ ಘನತೆ-ಗೌರವಗಳು ಅಂದಿನ ಪುಣ್ಯ ತೀರ್ಥಗಳು, ಅವರು ಇಟ್ಟ ಶ್ರದ್ಧೆ, ಭಕ್ತಿ ಎಂಥದ್ದು, ಬ್ರಾಹ್ಮಣರ, ವೇದಾಧ್ಯಯನ ಮಾಡುವವರ, ಗುರು,

ಲಿಂಗ, ಜಂಗಮ, ತಂದೆ-ತಾಯಿ, ಸ್ವಗೋತ್ರ ಮತ್ತು ಕುಟುಂಬದ ಮೇಲಿರುವ ಪ್ರೀತಿ, ಹೀಗೆ ಆಯಾ ಧರ್ಮದವರಿಗೆ ಅಸಹ್ಯವಾಗುವ ವಿಚಾರಗಳು ತಂದು ಶಾಪಾಶಯಗಳಲ್ಲಿ ತಂದು ಹಾಕುವುದರಿಂದ ಅಂದಿನ ಶಾಸನ ಹಾಕಿಸುವವರು ಇವರಿಗಿಂತ ಕುಶಾಲಮತಿಗಳೇ ಎಂದು ಹೇಳಬಹುದು; ಆದರೆ, ಅಂತಹ ಕಠೋರ ಅಶ್ಲೀಲ, ಮನಮಿಡಿಯುವ ಶಾಪಾಶಗಳು ಅಂದಿನ ಜನಸಮುದಾಯದ ಮೇಲೆ ಆದ ಪರಿಣಾಮ ಎಷ್ಟು? ಹೇಗೆ ಅಂತಹ ಸಮಾಜ ನಿಯಂತ್ರಿಸಲು ಸಾಧ್ಯವಾಯಿತೇ, ಅವರು ಅಂದುಕೊಂಡಷ್ಟು ಈ ಶಾಪಾಶಯಗಳು ಅಂತಹ ಸಮಾಜ ಘಾತುಕ ಶಕ್ತಿಗಳು ನಿಯಂತ್ರಿಸಿವೆ? ಎಂಬುದನ್ನು ಎಲ್ಲಿಯೂ ಉಲ್ಲೇಖಗೊಂಡಿಲ್ಲ. ಈ ಭಾಗದ ಯಾವ ಶಾಸನದಲ್ಲಿಯೂ ಶಾಸನ ಭಂಜಕ, ಹಾಗಾಗಿ ಈತನಿಗೆ ಇಂತಹ ಶಿಕ್ಷೆ ನೀಡಲಾಗಿದೆ ಎನ್ನುವ ಉಲ್ಲೇಖಗಳು ಎಲ್ಲಿಯೂ ಬಂದಿಲ್ಲ ಎಂದೇ ಹೇಳಬಹುದಾಗಿದೆ. ಅನೇಕ ಶಾಪಾಶಯಗಳಲ್ಲಿ ಈ ದತ್ತಿ ಶಾಸನವು ಹೀಗೆಯೇ ಮುಂದೆ ಬಂದ ಆಳರಸರು, ದಿವಾನರೂ, ವಜೀರನಾಗಬಹುದು ಮುಂದುವರಿಸಿಕೊಂಡು ಹೋಗಬೇಕೆಂದು ನಿರ್ದೇಶಿಸುತ್ತದೆ. ಆದರೆ ಅದರ ನಂತರ ಬಂದ ಯಾವುದೇ ಈ ಪ್ರದೇಶಗಳ ಶಾಸನಗಳಲ್ಲಿ ಅದನ್ನು ಮುಂದುವರಿಸಿಕೊಂಡು ಬಂದ ನಿದರ್ಶನಗಳು ಇಲ್ಲವೆಂದು ಹೇಳಬಹುದು. ಈ ಶಾಪಾಶಯಗಳ ಚರಿತ್ರೆಯು ಕನ್ನಡ ಶಾಸನಗಳಿಗೆ ಅನ್ವಯಿಸಿ ಹೇಳುವುದಾದರೆ ಕ್ರಿ.ಶ.೪೫೦ ಹಲ್ಮಿಡಿ ಶಾಸನದಿಂದ ಆರಂಭಗೊಂಡು ೧೮ ಶತಮಾನದ ಉತ್ತರಾರ್ಧದವರೆಗಿನ ಈ ಭಾಗದ ಶಾಸನದಲ್ಲಿ ಯಾವುದೇ ಮನೆತನದ ಅರಸರು ಈ ಹಿಂದೆ ಆಳ್ವಿಕೆ ಮಾಡಿದ ಅರಸರ ಬಿಟ್ಟ ದಾನ-ದತ್ತಿ-ನಿಯಮಗಳನ್ನು ಮುಂದುವರಿಸಿದ ಉಲ್ಲೇಖಗಳು ಕಂಡುಬರುವುದಿಲ್ಲ.

ಇದಕ್ಕೆ ಕಾರಣಗಳು ಹೀಗೆ ಸೂಚಿಸಬಹುದು ಎಂದು ಹೇಳಬಹುದು.

೧. ಕಾವ್ಯ ಕೃತಿಗಳಲ್ಲಿ ಹೆಚ್ಚಾಗಿ ಋಷಿ ಮುನಿಗಳೇ ಹೆಚ್ಚು ಶಾಪಗಳು ಹಾಕುತ್ತಿದ್ದರು. ಇಲ್ಲವೇ ಆ ದೈವಶಕ್ತಿ ಪಡೆದವರು ಅಂತಹ ಶಾಪಗಳನ್ನು ಹಾಕುತ್ತಿದ್ದರು. ಆದರೆ ಇಲ್ಲಿ ಶಾಸನಗಳನ್ನು ಹಾಕಿಸುವವರು ಆಡಳಿತ ವರ್ಗ, ಲೌಕಿಕ ವ್ಯಕ್ತಿಗಳು ಆಗಿರುವುದರಿಂದ ಇವರುಗಳು ಹಾಕಿಸುವ ಶಾಸನಗಳಿಗೆ ದೈವಿ ಶಕ್ತಿ ಇರುತ್ತಿರಲಿಲ್ಲ. ಹಾಗಾಗಿ ಅಲ್ಲಿಯ ಶಾಪಾಶಯಕ್ಕೂ ಇದೇ ಮಾತು ಅನ್ವಯಿಸುವುದು.

೨. ಇಲ್ಲಿಯ ಶಾಪಗಳು ಪರೋಕ್ಷವಾಗಿದ್ದವು. ಯಾವುದೇ ನಿರ್ದಿಷ್ಟ ವ್ಯಕ್ತಿಗೆ, ನಿರ್ದೇಶನವಿರದೇ ಅವು ಸಾರ್ವತ್ರಿಕವಗಿದ್ದವು.

೩. ಕಾಲದ ಅಭಾವ; ಕಾವ್ಯ ಕೃತಿಗಳು ಸುದೀರ್ಘವಾಗಿರುತ್ತವೆ. ಶಾಪ ನೀಡುವವರು ಯಾರು? ಅವರಿಗಿರುವ ಸಾಮರ್ಥ್ಯ ಎಂತಹದ್ದು ಎಂಬಾ ಇತ್ಯಾದಿ ಅಂಶಗಳ ಸುದೀರ್ಘವಾದ

ನಿರೂಪನೆ ಇರುತ್ತದೆ. ಹಾಗಾಗಿ ಇಲ್ಲಿ ಇದ್ಯಾವುದಕ್ಕೂ ಕಾಲಾವಕಾಶ ಇಲ್ಲದಿದ್ದಕ್ಕೋ ಏನೋ ಅವುಗಳ ಪರಿಣಾಮಗಳ ಉಲ್ಲೇಕ ಕಂಡುಬರುವುದಿಲ್ಲ.

೪. ಕಾವ್ಯಗಳಲ್ಲಿ ಬಂದ ಶಾಸನಗಳು ಪ್ರತ್ಯಕ್ಷ, ಪರೋಕ್ಷವಾಗಿದ್ದವು ಎಂದು ಹೇಳಬಹುದು. ಶಾಸನಗಳ ಸಂರಕ್ಷಣೆ ಅಂದು–ಇಂದು.

ಅಂದಿನ ಆಳರಸರು ಸಮಾಜಮುಖಿ ಕಾರ್ಯಗಳಿಗಾಗಿ ಉದಾರವಾಗಿ ನೀಡಿದ ದಾನ–ದತ್ತಿ; ತೆರಿಗೆ ವಿನಾಯಿತಿ ಹೊಸ ನಿಯಮಗಳ ಪಾಲನೆ, ಇತ್ಯಾದಿ ಅಂಶಗಳ ಪಾಲನೆ, ಪೋಷಣೆಯೇ ಶಾಪಾಶಯಗಳ ಮುಖ್ಯ ಪಾತ್ರವಾಗಿತ್ತು. ಅದು ರಾಜಾಜ್ಞೆಯೋ, ದೈವಾಜ್ಞೆಯೋ, ರಾಜನ ಶಿಕ್ಷೆಯ ಭೀತಿಯೋ, ದೈವ ಶಿಕ್ಷೆಯೋ ಅವರನ್ನು ನಿಯಂತ್ರಿಸುತ್ತಿತ್ತು ಅಥವಾ ಇಲ್ಲವೊ ತಿಳಿದಿಲ್ಲ. ಹಾಗೆಯೇ ಒಂದು ಶಿಷ್ಟ ಪರಂಪರೆಯಾಗಿ ಬೆಳೆದುಕೊಂಡು ಬಂದಿತು ಎಂದು ಹೇಳಬಹುದು.

ಆದರೆ ಇಂದು ಮೇಲಿನ ಯಾವ ಭೀತಿಗೂ ಒಳಗಾಗುವುದಿಲ್ಲ. ಕಾರಣ ಅವರ ಭಾಷೆ, ಲಿಪಿಯೆ ಇಂದಿನವರಿಗೆ ತಿಳಿಯುವುದಿಲ್ಲ. ತಿಳಿದರೂ ದೈವಕ್ಕೆ, ದೇವರಿಗೆ, ಗೋಹತ್ಯೆ, ಇವು ಯಾವ ಹತ್ಯೆಗೂ ಹೆದರುವುದಿಲ್ಲ. ಹೀಗಾಗಿ ಇವರಿಗೆ, ಭಾರತೀಯ ದಂಡ ಸಂಹಿತೆಯ ಕಲಂಗಳೇ ಮತ್ತು ಶಿಕ್ಷೆಯ ಸ್ವರೂಪ ಪ್ರಕಟಿಸಿದಾಗ ಮಾತ್ರ ಅವುಗಳು ಅರ್ಥವಾಗುತ್ತವೆ. ಹೀಗಾಗಿ ದೈಹಿಕ, ಆರ್ಥಿಕ ದಂಡನೆಗಳು ಹಾಕಿದಾಗ ಇಂದಿನವರಿಂದ ಶಾಸನಗಳ ಸಂರಕ್ಷಣೆ ಮಾಡುವುದಕ್ಕೆ ಸಾಧ್ಯವಿಲ್ಲ. ಇಲ್ಲವೇ ಸರ್ಕಾರ, ಸಂಘ ಸಂಸ್ಥೆಗಳು, ವ್ಯಕ್ತಿಗಳು ಅವುಗಳನ್ನು ಸಂರಕ್ಷಿತ ಕಟ್ಟಡದಲ್ಲಿ ಸಂರಕ್ಷಿಸಬೇಕಾಗಿದೆ.

ಹೀಗಾಗಿ ಈ ಭಾಗದ ಶಾಸನಗಳ ಶಾಪಾಶಯಗಳು ಆರಂಭದಲ್ಲಿ ಸರಳ ಮತ್ತು ಸಣ್ಣ ಪ್ರಮಾಣದ ಶಾಪಾಶಯಗಳು ಬಂದು ಕಾಲಂತರದಲ್ಲಿ ಕ್ಲಿಷ್ಟ, ಅಶ್ಲೀಲ, ಕಠೋರ ಮತ್ತು ಸುದೀರ್ಘದ ಮತ್ತು ರಾಯಚೂರು ಕೊಪ್ಪಳ ಭಾಗದ ಕೆಲವು ಶಾಸನಗಳಲ್ಲಿ ಅಶ್ಲೀಲದಿಂದ ಕೂಡಿದ ಶಾಪಾಶಯಗಳು, ಇನ್ನುಳಿದ ಬೀದರ, ಕಲ್ಬುರ್ಗಿ, ತೆಲಂಗಾಣ ಪ್ರದೇಶಗಳ ಶಾಸನಗಳಲ್ಲಿ ಸಾಮಾನ್ಯವಾಗಿ ಬಂದಿವೆ.

ಅಧ್ಯಾಯ ಹನ್ನೊಂದು

ಸಮಾರೋಪ

ಅಧ್ಯಾಯ ಹನ್ನೊಂದು

ಸಮಾರೋಪ

ಪ್ರಾಚೀನ ಮತ್ತು ಮಧ್ಯಕಾಲಿನ ಕರ್ನಾಟಕವು ತುಂಬಾ ವಿಶಾಲವಾಗಿತ್ತು. ಇದರ ವ್ಯಾಪ್ತಿಯು ಕವಿರಾಜ ಮಾರ್ಗಕಾರನು ಹೇಳುವ ಹಾಗೆ, ಕಾವೇರಿಯಿಂದ ಗೋದಾವರಿ ವರೆಗೆ ಹರಡಿತ್ತೆಂದು ಇಂದಿನ ಕರ್ನಾಟಕ ಅಲ್ಲದೆ, ಅಂದು ಕರ್ನಾಟಕದ ಬಹು ಭಾಗಗಳೇ ಆಗಿದ್ದ ತೆಲಂಗಾಣ ಮತ್ತು ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು ಪ್ರದೇಶಗಳಲ್ಲಿ ಲಭಿಸುವ ಕನ್ನಡ ರಾಜಮನೆತನಗಳ ಕನ್ನಡ ಶಾಸನಗಳಿಂದಲೇ ತಿಳಿದುಬರುತ್ತದೆ. ಪ್ರಸ್ತುತ ತೆಲಂಗಾಣ ಮತ್ತು ಹೈದರಬಾದ ಕರ್ನಾಟಕ ಪ್ರದೇಶಗಳ ಕನ್ನಡ ಶಾಸನಗಳ ಅಧ್ಯಯನದಿಂದ ಇಲ್ಲಿ ಉಲ್ಲೇಖಗೊಂಡ ರಾಜಕೀಯವಾಗಿ ಈ ಭೂ ಪ್ರದೇಶವನ್ನು ಪ್ರಾಚೀನ ಮತ್ತು ಮಧ್ಯಕಾಲೀನದವರೆಗೆ ರಾಜ್ಯಭಾರ ಮಾಡಿದ ಮೌರ್ಯರು, ಮೊಗಲರು, ಬಾದಮಿ ಚಾಲುಕ್ಯರು, ಕಲ್ಯಾಣದ ಚಾಲುಕ್ಯರು, ಕಲಚೂರಿಗಳು, ರಾಷ್ಟ್ರಕೂಟರು ಮತ್ತು ವಿಜಯನಗರ ಅರಸರು, ಇತರ ಚಿಕ್ಕ ಪುಟ್ಟ ಸಾಮಂತ ರಾಜರು ಈ ಭೂಭಾಗವನ್ನು ಆಳಿದ್ದಾರೆ. ಇಂದಿನ ತೆಲಂಗಾಣ ಪ್ರದೇಶದ ಅಧ್ಯಯನವೆಂದರೆ ಪ್ರಾಚೀನ ಹಾಗೂ ಮಧ್ಯಕಾಲೀನ ಕರ್ನಾಟಕದ ಅಧ್ಯಯನವೇ ಆಗಿದೆ. ಈ ಎರಡು ಪ್ರದೇಶಗಳು ಇಂದು ಬೇರೆಯಾಗಿದ್ದರೂ ಅಂದು ಆಡಳಿತಾತ್ಮಕವಾಗಿ ಏಕಚಕ್ರಾಧಿಪತ್ಯಕ್ಕೆ ಒಳಪಟ್ಟಿತ್ತೆಂದು ತಿಳಿದುಬರುತ್ತದೆ. ಹೈದರಾಬಾದ ಕರ್ನಾಟಕ ಪ್ರದೇಶಗಳಾದ ಬೀದರ್, ಕಲಬುರ್ಗಿ, ಯಾದಗಿರಿ, ಕೊಪ್ಪಳ ಮತ್ತು ರಾಯಚೂರು ಹಾಗೂ ತೆಲಂಗಾಣದ ಪ್ರದೇಶ ಅವಿಭಾಜಿತ ಜಿಲ್ಲೆಗಳಾದ ನಿಜಾಮಬಾದ, ಕರೀಮನಗರ, ವರಂಗಲ್, ಮೇದಕ್, ಹೈದರಾಬಾದ, ರಂಗಾರೆಡ್ಡಿ, ನಲ್ಗೊಂಡ, ಖಮ್ಮಂ ಮತ್ತು ಮಹಬೂಬನಗರ ಜಿಲ್ಲೆಗಳು ಈ ಪ್ರದೇಶಗಳಲ್ಲಿ ಲಭಿಸಿದ ಕನ್ನಡ ಶಾಸನಗಳಲ್ಲಿ ಕಂಡುಬರುವ ರಾಜಕೀಯವಾಗಿ ಈ ಪ್ರದೇಶಗಳ ಆಳಿದ ರಾಜಮನೆತನಗಳು ಯಾವುವು? ಆಡಳಿತ ಸ್ವರೂಪ, ವಿಧಾನ, ಸಾಮಾಜಿಕ ಸ್ಥಿತಿಗತಿಗಳು ಈ ಪ್ರದೇಶಗಳಲ್ಲಿ ಬೆಳೆದ ಪ್ರಮುಖ ಧರ್ಮಗಳು, ಆರ್ಥಿಕ ಸ್ಥಿತಿಗತಿ, ಸಾಹಿತ್ಯಿಕ ಅಧ್ಯಯನ, ಶಿಕ್ಷಣದ ಸ್ವರೂಪದ ಬಗ್ಗೆ ಶಿಕ್ಷಣ

ನೀಡುವ ಸಂಸ್ಥೆಗಳಾದ, ಅಗ್ರಹಾರಗಳು, ಬ್ರಹ್ಮಪುರಿಗಳು, ದೇವಾಲಯಗಳು, ಅವುಗಳ ಸ್ವರೂಪ, ನಿರ್ವಹಣೆ ಇತ್ಯಾದಿ ವಿಷಯಗಳ ಕುರಿತು ನೋಡಲಾಗಿದೆ. ಶಾಸನಗಳಲ್ಲಿ ಕಂಡುಬರುವ ೬೪ ಕಲೆಗಳ ಬಗ್ಗೆ ವಿವೇಚಿಸಲಾಗಿದೆ. ಅಲ್ಲದೆ ಶಾಸನಗಳ ಸಂರಕ್ಷಣೋಪಾದಿಯಲ್ಲಿ ಮೂಡಿ ಬಂದ ಶಾಸನದ ಕೊನೆಯಲ್ಲಿ ಕಂಡುಬರುವ ಶಾಪಾಶಯಗಳ ಸ್ವರೂಪ, ವಿಕಾಸ ಅವುಗಳ ಉದ್ದೇಶ ಇತ್ಯಾದಿ ಅಂಶಗಳನ್ನು ಕುರಿತು ನಿರೂಪಿಸಲಾಗಿದೆ.

ಅಧ್ಯಾಯ ಒಂದರಲ್ಲಿ ತೆಲಂಗಾಣ ಮತ್ತು ಹೈದರಬಾದ ಕರ್ನಾಟಕ ಪ್ರದೇಶಗಳ ಕನ್ನಡ ಶಾಸನಗಳ ಅಧ್ಯಯನ, ಉದ್ದೇಶ, ಅವುಗಳ ವ್ಯಾಪ್ತಿ, ಅವುಗಳ ಅಧ್ಯಯನ ವಿಧಾನ ಮತ್ತು ಅಧ್ಯಯನದ ಅಗತ್ಯತೆ ಕುರಿತು ಹೇಳಲಾಗಿದೆ. ಅಧ್ಯಾಯ ಎರಡರಲ್ಲಿ ಶಾಸನ ಎಂದರೇನು, ಅದರ ಸ್ವರೂಪ, ಮಹತ್ವ, ಪ್ರಕಾರಗಳ ಕುರಿತು ಸಂಕ್ಷಿಪ್ತ ಪರಿಚಯ ರೀತಿಯಲ್ಲಿ ನಿರೂಪಿಸಿ ಮತ್ತು ಪ್ರದೇಶಗಳಲ್ಲಿ ಇದುವರೆಗೆ ಆಗಿರುವ ಶಾಸನಗಳ ಅಧ್ಯಯನ ಕುರಿತು ಸಮೀಕ್ಷಿಸಲಾಗಿದೆ.

ತೆಲಂಗಾಣ ಮತ್ತು ಹೈದರಬಾದ ಕರ್ನಾಟಕ ಪ್ರದೇಶಗಳು ಇಂದು ರಾಜಕೀಯವಾಗಿ ಬೇರ್ಪಟ್ಟಿದ್ದರೂ ಈ ಎರಡೂ ಒಂದಕ್ಕೊಂದು ಹತ್ತಿಕೊಂಡಿರುವ ಗಡಿ ಪ್ರದೇಶಗಳಾಗಿವೆ. ಪ್ರಾಚೀನ ಮತ್ತು ಮಧ್ಯಕಾಲದವರೆಗೆ ಈ ಪ್ರದೇಶಗಳು ಒಂದೊಂದೆ ರಾಜಮನೆತನಗಳ ಆಳ್ವಿಕೆಗೆ ಒಳಪಟ್ಟಿದ್ದವು. ಎರಡು ಪ್ರದೇಶಗಳು ಇಂದು ಭೌಗೋಳಿಕ, ಆಡಳಿತಾತ್ಮಕವಾಗಿ ಬೇರೆ ಬೇರೆಯಾಗಿದ್ದರೂ ಅಂದು ಪ್ರಾಚೀನ ಕರ್ನಾಟಕದ ಭಾಗಗಲೇ ಆಗಿದ್ದವು. ಈ ಪ್ರದೇಶಗಳ ಶಾಸನ ಅಧ್ಯಯನ ಮಾಡುವುದು ಎಂದರೆ ಪ್ರಾಚೀನ ಕರ್ನಾಟಕ ಅಧ್ಯಯನ ಮಾಡಿದಂತೆ ಎನ್ನಬಹುದು.

ಈ ಪ್ರದೇಶಗಳಲ್ಲಿ ರಾಜ್ಯಭಾರ ಮಾಡಿದ ಮೌರ್ಯರು, ಶಾತವಾಹನರು, ಮೊಗಲರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಲಚೂರಿಗಳು, ಕಾಕತೀಯರು, ವಿಜಯನಗರ ಅರಸರು ಮತ್ತು ಕೊನೆಯಲ್ಲಿ ಆಳಿದ ಹೈದರಾಬಾದಿನ ನಿಜಾಮರು ಈ ಪ್ರಮುಖ ಮನೆತನಗಳ ಪ್ರದೇಶವನ್ನು ಆಳ್ವಿಕೆ ಮಾಡಿವೆ. ಹೀಗಾಗಿ ಆಯಾ ಕಾಲದಲ್ಲಿ ಒಂದೇ ಮನೆತನ ರಾಜವಂಶಸ್ಥರು ಈ ಭೂಭಾಗವನ್ನು ಆಳ್ವಿಕೆ ಮಾಡಿದುದರ ಫಲವಾಗಿ ಈ ಭಾಗದಲ್ಲಿ ಅನೇಕ ಕನ್ನಡ ಶಾಸನಗಳು ಕಂಡುಬರುತ್ತವೆ. ಈ ಶಾಸನಗಳ ಆಧಾರದ ಮೇಲೆಯೇ ಈ ಪ್ರದೇಶಗಳನ್ನು ಆಳ್ವಿಕೆ ಮಾಡಿದ ರಾಜಮನೆತನಗಳ ರಾಜರುಗಳ ಆಳ್ವಿಕೆ, ಮಾಡಿದ ಪ್ರದೇಶಗಳು, ಅವರು ಕೈಗೊಂಡ ಕಾರ್ಯಗಳು, ವಿಜಯಗಳು, ಯುದ್ಧಗಳು, ಅವರ ಆಳ್ವಿಕೆ ವಿಭಾಗಗಳು, ಪ್ರಮುಖ ಅರಸರು ಅವರು ವಿಸ್ತರಿಸಿದ ಕರ್ನಾಟಕದ ಪ್ರದೇಶಗಳ ಕುರಿತು ಆಡಳಿತದ ವ್ಯವಸ್ಥೆ, ಅಂದಿನ ಸಾಮಾಜಿಕ ಜೀವನ, ಈ ಭಾಗದಲ್ಲಿರುವ ವಿವಿಧ ಧರ್ಮ, ಜಾತಿ, ಮತಗಳು,

ಆರ್ಥಿಕ ವ್ಯವಸ್ಥೆ, ಸುಧಾರಣೆಗಳು ಹಾಗೂ ಈ ಭಾಗದಲ್ಲಿ ಬೆಳದು ಬಂದ ಸಾಹಿತ್ಯ ಮತ್ತು ಶಿಕ್ಷಣದ ಸ್ವರೂಪ, ಲಲಿತಕಲೆಗಳ ಅಧ್ಯಯನ, ಶಾಸನಗಳಲ್ಲಿ ಕಂಡುಬರುವ ಶಾಪಾಶಯಗಳಿಂದ ಅಂದಿನ ಜನರ ಮನೋಭೂಮಿಮಿಕೆ ಇತ್ಯಾದಿ ಅಂಶಗಳ ಮೇಲೆ ಅಧ್ಯಯನ ಕೈಗೊಳ್ಳಲಾಗಿದೆ.

ತೆಲಂಗಾಣ ಮತ್ತು ಹೈದರಬಾದ ಕರ್ನಾಟಕ ಪ್ರದೇಶಗಳು ಬಹು ವಿಶಾಲ. ಈ ಪ್ರದೇಶವು ತಮ್ಮ ಆಡಳಿತದ ಅನುಕೂಲಕ್ಕಾಗಿ ಅನೇಕ ವಿಭಾಗಗಳನ್ನು ಮಾಡಿಕೊಂಡು ಆಳ್ವಿಕೆ ಮಾಡಿದುದ್ದನ್ನು ಕಂಡುಬರುತ್ತದೆ. ಪ್ರಧಾನವಾಗಿ ಕೇಂದ್ರಾಡಳಿತ, ಗ್ರಾಮಾಡಳಿತವೆಂದು ವಿಭಾಗೀಕರಿಸ ಬಹುದು. ಕೇಂದ್ರದಲ್ಲಿ ರಾಜನೇ ಪ್ರಮುಖ, ತದನಂತರ ಅವರ ಪಟ್ಟದರಾಣಿ, ಹಿರಿಯರಸಿ, ರಾಣಿಯರು, ಯುವರಾಜ, ಮಹಾದಂಡನಾಯಕರು, ಅಧಿಕಾರಿಗಳು, ಪ್ರಾಂತ್ಯಾಧಿಕಾರಿಗಳು ಮತ್ತು ಊರಿನ ಗಾವುಂಡರು, ಆಡಳಿತದಲ್ಲಿ ಭಾಗಿಯಾಗಿದ್ದರು. ವಿಶಾಲವಾದ ಭೂ ಪ್ರದೇಶಗಳನ್ನು ಹೀಗೆ ವಿಭಾಗಿಸಲ್ಪಟ್ಟಿತ್ತು. ಕೊಲ್ಲಿಪಾಕೆ–೭೦೦೦, ಆರ್ಮಕುಂಡ–೭೦೦೦, ಚಬ್ಬಿ–೨೧೦೦೦, ಎಡದೊರೆ–೨೦೦೦, ಮೊಸಳಿಕಲ್ಲು–೨೦೦. ಅಂದರೆ ಕೊಲ್ಲಿಪಾಕೆ ಅಂದು ೭೦೦೦ ಗ್ರಾಮಗಳನ್ನೊಳಗೊಂಡ ಭೂಭಾಗವಾಗಿತ್ತೆಂದು ತಿಳಿದುಬರುತ್ತದೆ. ಇಂತಹ ಭೂಭಾಗವನ್ನು ರಾಜನು ತನ್ನ ಅದಿಕಾರಿಗಳನ್ನು ನೇಮಿಸಿಕೊಂಡು ಇವುಗಳ ಮೇಲೆ ತನ್ನ ನಿಯಂತ್ರಣವನ್ನಿಕೊಂಡಿದದ್ದು ತಿಳಿದುಬರುತ್ತದೆ. ಇಂದಿನ ಹಾಗೆ ಆಡಳಿತದಲ್ಲಿ ವಿಕೇಂದ್ರಿಕರಣ ವ್ಯವಸ್ಥೆ ಕಂಡುಬರುತ್ತದೆ. ಆದರೆ ಎಲ್ಲದಕ್ಕೂ ರಾಜನೇ ಸಾರ್ವಭೌಮ ಆಧಿಕಾರಿ ಎಂದು ಹೇಳಬಹುದು.

'ಸಮಾಜ' ಎಂಬುವುದು ಹಲವು ಕುಟುಂಬ, ವರ್ಗ, ಜಾತಿಗಳು ಒಂದೆಡೆಯಲ್ಲಿ ವಾಸಿಸುವ ಸಮೂಹವೇ ಆಗಿದೆ. ಅಂದಿನ ಸಮಾಜದಲ್ಲಿ ಪುರುಷರು ಮೇಲಿನ ಸ್ಥಾನದಲ್ಲಿದ್ದರು. ಸ್ತ್ರೀಯರು ಅಷ್ಟೊಂದು ಪ್ರಾಧ್ಯಾನತೆ ಇರಲಿಲ್ಲವೆಂದು ಹೇಳಬಹುದು. ರಾಜರು ಬರೀ ತಮ್ಮ ಆಡಳಿತ ವಿಸ್ತರಣೆಯೊಂದಿಗೆ ಅನೇಕ ಸಾಮಾಜಿಕ ಧರ್ಮಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ರೆಂದು ತಿಳಿದುಬರುತ್ತದೆ. ಅವುಗಳಲ್ಲಿ ಪ್ರಮುಖವಾಗಿ ಕೆರೆ–ಬಾವಿ, ದೇವಾಲಯಗಳನ್ನು ನಿರ್ಮಿಸುವುದು, ಅವುಗಳಿಗೆ ಉದಾರವಾದ ದಾನ–ದತ್ತಿ ನೀಡುವುದು, ಅಗ್ರಹಾರದಲ್ಲಿರುವ ಮಹಾಜನರಿಗೆ ದಾನ–ದತ್ತಿ ನೀಡುವುದು ಇತರೆ ಸಾರ್ವಜನಿಕ ಕೆಲಸಗಳನ್ನು ನಿರ್ವಹಿಸುವುದು ಮಹಿಳೆಯರು ಕೂಡ ಸಾಮಾಜಿಕ ರಂಗದಲ್ಲಿ, ಆಡಳಿತ ರಂಗದಲ್ಲಿ ಭಾಗಿ ಯಾಗಿದ್ದರೆಂದು ಅನೇಕ ಶಾಸನಗಳು ಉಲ್ಲೇಖಿಸಿವೆ.

ಧರ್ಮಗಳು ಮಾನವನ ಬದುಕು ಸಂಸ್ಕರಿಸುತ್ತವೆ. ಧರ್ಮ ಈ ಅರ್ಥದಲ್ಲಿ ಭಾಗಿಸಬಹುದು. ಒಂದು ವಸ್ತು ಆಧಾರಿತ ಇನ್ನೊಂದು ಆಚಾರವು ಚಾರಿತ್ರ್ಯವು ಧರ್ಮವೆನಿಸುತ್ತದೆ. ಅಗ್ನಿಯು ಯಾವುದೇ ವಸ್ತುವಿರಲಿ ಸುಡುವ ಧರ್ಮ ಅದರದಾಗಿದೆ. ಇನ್ನೊಂದು ಮನುಷ್ಯನನ್ನು ಆತ್ಮ

ಚೈತನ್ಯ ಒದಗಿಸುವುದಾಗಿದೆ. ಇಂತಹ ಧರ್ಮಗಳು ಈ ಭಾಗದಲ್ಲಿಯ ಶಾಸನಗಳಲಿ ಉಲ್ಲೇಖಗೊಂಡಿವೆ. ವುಗಳಲ್ಲಿ ಪ್ರಧಾನವಾಗಿ ಈ ಪ್ರದೇಶದ ಶಾಸನಗಳಲ್ಲಿ ಕಂಡುಬರುವ ಧರ್ಮಗಳೆಂದರೆ ಬೌದ್ಧಧರ್ಮ, ಜೈನಧರ್ಮ, ವೈಧಿಕ, ವೀರಶೈವ ಧರ್ಮಗಳು ಪ್ರಮುಖವಾದವುಗಳಾಗಿವೆ. ಈ ಧರ್ಮಗಳು ಆಶ್ರಯಿಸಿದ ಪ್ರಮುಖ ರಾಜಮನೆತನಗಳು ಅವರು ಆ ಧರ್ಮಕ್ಕೆ ನೀಡಿದ ಕೊಡುಗೆಗಳು, ದೇವಾಲಯಗಳ, ಬೌದ್ಧ ವಿಹಾರಗಳ ನಿರ್ಮಾಣ ಇತರ ಪುಣ್ಯ ಸ್ಥಗಳು, ತೀರ್ಥಸ್ಥಳಗಳನ್ನು ಇತ್ಯಾದಿಯಾಗಿ ಈ ಶಾಸನಗಳು ಉಲ್ಲೇಖಿಸಿವೆ. ಅವುಗಳನ್ನು ಕುರಿತು ಇಲ್ಲಿ ವಿವರಿಸಲಾಗಿದೆ.

ಯಾವುದೇ ಒಂದು ನಾಡು ಪ್ರಗತಿಯತ್ತ ಸಾಗಬೇಕಾದರೆ ಅಲ್ಲಿನ ನೈಸರ್ಗಿಕ ಸಂಪತ್ತು ಬಹುಮುಖ್ಯವಾಗುತ್ತದೆ. ಅವುಗಳಲ್ಲಿ ಮುಖ್ಯವಾಗಿ ಭೂಮಿ, ನೀರು, ಅರಣ್ಯಗಳು ಸಮರ್ಪಕವಾಗಿ ಬಳಸಿಕೊಳ್ಳಬೇಕಗುತ್ತದೆ. ಇಂತಹ ನೈಸರ್ಗಿಕ ಸಂಪತ್ತುಗಳನ್ನು ಬಳಸಿಕೊಂಡು ಅಭಿವೃದ್ಧಿಯತ್ತ ಸಾಗಬೇಕಗುತ್ತದೆ. ರಾಜನು ತನ್ನ ಆಡಳಿತದಲ್ಲಿ ಎಷ್ಟೇ ಸುಧಾರಣೆ ತಂದರೂ ಆತನು ಆರ್ಥಿಕವಾಗಿ ಸಬಲನಾಗಿರಬೇಕಾಗುತ್ತದೆ. ಹಾಗಾಗಿ ಕೃಷಿಯೇ ರಾಷ್ಟ್ರದ ಬೆನ್ನೆಲುಬು. ಬಂಜರು ಭೂಮಿಯನ್ನು ಫಲವತ್ತಾಗಿ ಮಾರ್ಪಡಿಸಿಕೊಳ್ಳಬೇಕಾಗುತ್ತದೆ. ಅಲ್ಲಿಯ ನೀರು ಸಮಪರ್ಕವಾಗಿ ಬಳಸಿಕೊಳ್ಳ ಬೇಕಾಗುತ್ತದೆ. ಮಾನವ ಜನಾಂಗಕ್ಕೆ ಪ್ರಧಾನವಾಗಿ ನಾಲ್ಕು ಪುರುಷಾರ್ಥಗಳಿವೆ. ಅವುಗಳು ಧರ್ಮ, ಅರ್ಥ, ಕಾಮ, ಮೋಕ್ಷ. ಇಲ್ಲಿ ಅರ್ಥ ಎರಡನೇ ಸ್ಥಾನದಲ್ಲಿದ್ದರೂ, ಲೌಕಿಕ ಜೀವನದಲ್ಲಿ ಮೊದಲನೇ ಸ್ಥಾನ ಪಡೆಯುತ್ತದೆ. ರಾಜನಾದವನು ಆರ್ಥಿಕವಾಗಿ ದಿವಾಳಿಯದರೆ ಸಹಜವಾಗಿಯೇ ಆಡಳಿತ ಅವನತಿಯತ್ತ ಸಾಗುತ್ತದೆ. ಇಡೀ ರಾಜ್ಯದ ಅಭಿವೃದ್ಧಿ, ವೈಭವ, ಆತನ ಆರ್ಥಿಕ ವ್ಯವಸ್ಥೆಯನ್ನು ಅವಲಂಬಿಸಿರುತ್ತದೆ. ಹಾಗಾಗಿ ಪ್ರಾಚೀನ ಕಾಲದಿಂದಲೂ ಕೃಷಿ, ವ್ಯಾಪಾರಕ್ಕೆ ಹೆಚ್ಚಿನ ಆದ್ಯತೆ ನೀಡಿದ್ದನ್ನು ಶಾಸನಗಳಲ್ಲಿ ಕಂಡುಬರುತ್ತದೆ. ಕೃಷಿಯ ಅಭಿವೃದ್ಧಿಗಾಗಿ ಅಂದಿನ ಆಳರಸರು ಕೆರೆಗಳನ್ನು ಕಟ್ಟಿಸುವುದು, ಬಾವಿಗಳನ್ನು ತೋಡಿಸುವುದು, ಅಣೆಕಟ್ಟೆಗಳನ್ನು ನಿರ್ಮಿಸುವುದು, ಕಾಲುವೆಗಳನ್ನು ನಿರ್ಮಿಸುವುದು ಇತ್ಯಾದಿ ಕಾರ್ಯಗಳು ಮಾಡಿರುವುದನ್ನು ಶಾಸನಗಳು ಉಲ್ಲೇಖಿಸಿವೆ. ಹೀಗಾಗಿ ರಾಜನಿಗೆ ಮುಖ್ಯ ಆದಾಯದ ಮೂಲಗಳಾಗಿ ಕೃಷಿ, ವ್ಯಾಪಾರಿಗಳ ವೈಹಿವಾಟುಗಳಿಂದ ಬರುವ ತೆರಿಗೆ ಇವು ಮುಖ್ಯವಾಗಿದ್ದವು ಎಂದು ಹೇಳಬಹುದು. ಅಲ್ಲದೆ ಅಂದಿನ ಕಾಲದಲ್ಲಿ ವಿವಿಧ ತೆರಿಗೆಗಳನ್ನು ಹಾಕಿ ರಾಜ್ಯ ಬೊಕ್ಕಸ ಶ್ರೀಮಂತಗೊಳಿಸಿ ಕೊಳ್ಳುತ್ತಿದ್ದರು. ಇಂತಹ ಆರ್ಥಿಕ ಸುಧಾರಣೆಯಿಂದಾಗಿ ಅಲ್ಲಿಯ ಧರ್ಮಕಾರ್ಯಗಳಿಗೆ ಉದಾರವಾಗಿ ದಾನ-ದತ್ತಿ ನೀಡಿ, ದೇವಾಲಯಗಳ ನಿರ್ಮಾಣ, ವಿದ್ಯಾದಾನ, ಕೆರೆ-ಕಾಲುವೆಗಳ ನಿರ್ಮಾಣ ಇತ್ಯಾದಿ ಧರ್ಮಕಾರ್ಯಗಳಿಗೆ ಉಪಯೋಗಿಸುವ ಕುರಿತು ಈ ಅಧ್ಯಾಯದಲ್ಲಿ ಶಾಸನಧಾರಿತವಾಗಿ ವಿವರಿಸಲಾಗಿದೆ.

ಶಾಸನಗಳು ಘಟನೆಗಳನ್ನು ನಿರೂಪಿಸುವ ಪ್ರಧಾನ ಉದ್ದೇಶದಿಂದ ಹುಟ್ಟಿಕೊಂಡಂತವುಗಳಾಗಿವೆ. ಇಲ್ಲಿ ಸುದೀರ್ಘವಾದ ಸಾಹಿತ್ಯ ನಿರೂಪಣೆ ಅಲಂಕಾರದ ಮಾತುಗಳು ಮೂಡಿಸುವುದು ಅವುಗಳ ಉದ್ದೇಶವಲ್ಲ. ಆದರು ಅಲ್ಲಲ್ಲಿ ಪ್ರಾಸಂಗಿಕವಾಗಿ, ಒಂದೊಂದು ಶಾಸನಗಳು ಪುಟ್ಟ ಚಂಪೂ ಕಾವ್ಯದಂತಿವೆ. ಇವು. ಕ್ರಿ.ಶ.೨೦೦ ಶತಮಾನ ಬಾದಾಮಿ ಶಾಸನದಿಂದಲೆ ನೋಡಬಹುದು. ಹೀಗಾಗಿ ಅಂದಿನ ಅಳರಸರು ದಾನ ನೀಡುವಾಗಲೋ, ಲೋಕೋಪಯೋಗಿ ಕಾರ್ಯಗಳಾದ ದೇವಾಲಯ ನಿರ್ಮಾಣ ಕೈಗೊಳ್ಳುವಾಗ ಅಲ್ಲಲ್ಲಿ ಕಾವ್ಯಾತ್ಮಕ ಅಂಶಗಳು ಬಂದಿವೆ. ಅದರಲ್ಲಿ ಇಟಗಿ ಶಾಸನವು ಅಲ್ಲಿಯ ಮಹಾದೇವ ದೇವಾಲಯದ ಸೊಬಗನ್ನು ಕಾವ್ಯಾತ್ಮವಾಗಿ ವರ್ಣಿಸಲಾಗಿದೆ. ಶಾಸನಗಳಲ್ಲಿ ಗದ್ಯವೇ ಪ್ರಮುಖವಾದರೂ ಗದ್ಯಸಾಹಿತ್ಯ ಸ್ವರೂಪ, ಕಾವ್ಯದ ಸ್ವರೂಪ ಅದರಲ್ಲಿ ಬಳಕೆಯಾಗಿರುವ ಅಲಂಕಾರ, ಛಂದಸ್ಸು, ಭಾಷಾ ಸ್ವರೂಪ, ಲಿಪಿಯ ಉಗಮ ಇತ್ಯಾದಿ ಸಾಹಿತ್ಯಿಕ ಅಧ್ಯಯನಕ್ಕೆ ಈ ಪ್ರದೇಶದ ಶಾಸನಗಳು ಪ್ರೇರಕಗಳಾಗಿವೆ. ಅಲ್ಲಲ್ಲಿ ಶಾಸನಗಳಲ್ಲಿ ಕಂಡುಬರುವ ಶಾಸನ ಲಿಪಿಕಾರರು, ಶಾಸನ ಕವಿಗಳು ಇವರೂ ಸಹ ಈ ಹಿಂದೆ ಕನ್ನಡ ಕೃತಿ–ಕಾವ್ಯಗಳನ್ನು ರಚಿಸಲು ಸಾಧ್ಯವಾಯಿತೆಂದು ಹೇಳಲು ಇಲ್ಲಿಯ ಶಾಸನಗಳೇ ಆಕರಗಳಾಗಿವೆ.

ಅಂದಿನ ಆಳರಸರಿಗೆ ಸಾಹಿತ್ಯದ ಬಗ್ಗೆ ಇರುವ ಆಸಕ್ತಿ ಅವರ ಸ್ಥಾನದಲ್ಲಿ ಅನೇಕ ಕಲಾವಿದರೂ, ಪಂಡಿತರು, ಸರ್ವ ವಿದ್ಯೆ ಬಲ್ಲ ಆಚಾರ್ಯರು ಇರುವುದು ಇದಕ್ಕೆ ಸಾಕ್ಷಿ ಎಂದು ಹೇಳಬಹುದು. ಇದರ ಪ್ರಸಾರ ಒಂದು ಅಂಗಗಳೇ ಶೈಕ್ಷಣಿಕ ಕೇಂದ್ರಗಳಾಗಿವೆ.

ಅಂದಿನ ಆಳರಸರು ಬರಿ ಭೌತಿಕ ಅಭಿವೃದ್ಧಿ ಕಾರ್ಯಗಳಲ್ಲಿಯೇ ಬೌದ್ಧಿಕ ವಿಕಾಸಕ್ಕೆ ಅನುವು ಮಾಡಿಕೊಟ್ಟಿದ್ದರೆಂದು ಇಲ್ಲಿಯ ಶಾಸನಗಳಿಂದ ತಿಳಿದುಬರುತ್ತದೆ. ಆಡಳಿತರೂಢ ರಾಜರು ವಿದ್ಯಾ ಪ್ರೇಮಿಗಳಾಗಿದ್ದರು. ಅದಕ್ಕಾಗಿ ತಮ್ಮ ಆಸ್ಥಾನದಲ್ಲಿ ಅನೇಕ ವಿಷಯ ವೇದ, ಆಗಮಿ, ತರ್ಕ, ಜ್ಯೋತಿಷ್ಯ ಇತರ ಕಲೆಗಳಲ್ಲಿ ಪ್ರವೀಣರಾದವನ್ನು ಆಶ್ರಯ ನೀಡಿದರು. ಅಲ್ಲದೇ ಶಿಕ್ಷಣದ ಪ್ರಸಾರಕ್ಕಾಗಿ ಅಗ್ರಹಾರ, ಬ್ರಹ್ಮಪುರಿ, ಘಟಿಕಾಲಯಗಳಿಗೆ ದೇವಾಲಯಗಳಿಗೆ ಉದಾರವಾಗಿ ದಾನ–ದತ್ತಿ ನೀಡುತ್ತಿದ್ದರು. ಅಲ್ಲಿ, ಧಾರ್ಮಿಕ ಶಿಕ್ಷಣದೊಂದಿಗೆ, ಲೌಕಿಕ ಜೀವನಕ್ಕೆ ಬೇಕಾಗುವ ಶಿಕ್ಷಣವು ನೀಡಲಾಗುತ್ತಿತ್ತು ಎಂದು ಹೇಳಬಹುದು. ದೇವಾಲಯಗಳ ನಿರ್ಮಾಣ, ಅಲ್ಲಿ ವಿದ್ಯಾ ದಾನಕ್ಕಾಗಿ ಛತ್ರಗಳ ನಿಮಾಣ ಅಲ್ಲಿ ಓದುವ ವಿದ್ಯಾರ್ಥಿಗಳಿಗೆ ದತ್ತಿ ಬಿಡುವುದು, ಅವುಗಳಲ್ಲಿ ನಾಗಾವಿ ಈ ಭಾಗದ ಪ್ರಮುಖ ವಿದ್ಯಾ ಕೇಂದ್ರವಾಗಿತ್ತೆಂದು ಅದು ಅಂದು ಘಟಿಕಾಲಯ ಸ್ವರೂಪದ ಇಂದಿನ ವಿಶ್ವವಿದ್ಯಾಲಯಕ್ಕೆ ಹೋಲುವಂತಿತ್ತು ಎಂದು ಹೇಳಬಹುದು. ವಿಶೇಷವಾಗಿ

ದೇವಾಲಯಗಳು ಅಗ್ರಹಾರಗಳು, ಬ್ರಹ್ಮಪುರಿ ಇವು ಅಂದಿನ ಪ್ರಮುಖ ಶಿಕ್ಷಣ ಕೇಂದ್ರಗಳಾಗಿದ್ದವೆಂದು ಈ ಪ್ರದೇಶದ ಶಾಸನಗಳು ತಿಳಿಸುತ್ತವೆ.

ಪ್ರತಿಯೊಬ್ಬನಲ್ಲಿ ಒಂದೊಂದು ವಿಶೇಷ ಕಲೆ ಅಡಗಿರುತ್ತದೆ. ಆದರೆ ಅದು ಮೂರ್ಹತ ರೂಪಕ್ಕೆ ಬರುವುದಕ್ಕೆ ತಕ್ಕ ಪರಿರಸರದ ಅವಶ್ಯಕತೆ ಇದೆ ಎಂದು ಹೇಳಬಹುದು. ಸೇಡಿಂಬದ ಶಾಸನವು ಅಲ್ಲಿಯ ಮಹಾಜನರು ೬೪ ಕಲೆಗಳನ್ನು ಬಲ್ಲವರಾಗಿದ್ದರೆಂದು ಉಲ್ಲೇಖಿಸಿದೆ. 'ಕಲೆ' ಮಾನವನ ಮನ್ನು ಮುದಗೊಳಿಸುತ್ತದೆ. ಅವುಗಳಲ್ಲಿ ಮುಖ್ಯವಾಗಿ ಚಿತ್ರಕಲೆ, ಸಂಗೀತ, ಹಾಡುವ ಕಲೆ, ನೃತ್ಯಕಲೆ, ಕಾಷ್ಯಕಲೆ, ಶಿಲ್ಪಕಲೆ, ಯುದ್ಧಕಲೆ ಇತ್ಯಾದಿ ಕಲೆಗಳ ಸ್ವರೂಪ, ಉಗಮ, ಅವುಗಳ ವೈಶಿಷ್ಟ್ಯತೆ ಬಗ್ಗೆ ಅಂತಹ ಕಲಾವಿದರನ್ನು ಅಂದಿನ ಆಳರಸರು ಆಶ್ರಯ ನೀಡಿ, ತಾವು ಕೂಡ ಕಲಾಪೋಷಕರಾಗಿ, ಕಲಾವಿದರಾಗಿ, ಸ್ವತಃ ವಿಕ್ರಮಾದಿತ್ಯನ ರಾಣಿ ಸಕಲಕಲಾ ಪ್ರವೀಣೆ, ಸರಸ್ವತಿ ಪುತ್ರಿ ಇತ್ಯಾದಿ ವಿಷಯಗಳು ಶಾಸನಗಳಲ್ಲಿ ನಿರೂಪಿಸುತ್ತವೆಂದು ಹೇಳಬಹುದು. ಅಂದಿನ ಜನಮಾನಸದಲ್ಲಿ ಕಲೆಗಳು ಮನೆ ಮಾಡಿದವು ಎಂದು ಅಂದಿನ ಸುಂದರ ದೇವಾಲಯಗಳ ನಿರ್ಮಾಣ, ಅವುಗಳ ಮೇಲೆ ಬಿಡಿಸಿದ ಸುಂದರ ಶಿಲ್ಪಗಳು ಇದಕ್ಕೆ ಸಾಕ್ಷಿಯಾಗಿವೆ ಎಂದು ಹೇಳಬಹುದು.

ಪ್ರಾಚೀನ ಭಾರತೀಯ ಪುರಾಣ, ಕಾವ್ಯಗಳಲ್ಲಿ ಉತ್ತಮವಾದ ಶಾಪದ ಕಲ್ಪನೆ ಅತಿ ಪ್ರಾಚೀನವಾದುದು. ಅಂದಿನ ಕಾಲದಲ್ಲಿ ಋಷಿ ಮುನಿಗಳು ತಮ್ಮ ತಪೋಬಲದಿಂದ ಅಲೌಕಿಕ ಶಕ್ತಿಯನ್ನು ಪಡೆದಿದ್ದರು. ಅಂತಹ ಯೋಗಿ ಪುರುಷರು ಕೋಪಿಸಿಕೊಂಡು ಆಗಾಗ ವ್ಯಕ್ತಿಗಳ ಮೇಲೆ ಸ್ಥಳಗಳ ಮೇಲೆ ಶಾಪ ಹಾಕಿದ್ದನ್ನು ಅನೇಕ ನಮ್ಮ ಮಹಾಕಾವ್ಯಗಳು ಉಲ್ಲೇಖಿಸಿವೆ. ಅದೇ ಪರಂಪರೆ ಗಟ್ಟಿಗೊಂಡು ಅದು ಶಾಸನಲೋಕಕ್ಕೂ ಹರಿದು ಬಂದಿವೆ. ಅಂದಿನ ಆಳರಸರು ಮತ್ತು ಆಡಳಿತಾಧಿಕಾರಿಗಳು, ಸಾಮಾನ್ಯರು ಯಾವುದೋ ಒಂದು ಧರ್ಮಕಾರ್ಯ ಕೈಗೊಂಡು ಅದು ಶಾಶ್ವತವಾಗಿರಬೇಕೆಂಬ ಮಹಾದಾಸೆ ಹೊಂದಿ, ಶಾಸನಗಳನ್ನು ಹಾಕಿಸುತ್ತಿದ್ದರು. ಅಂತಹ ಶಾಸನಗಳು ಸಾರ್ವಜನಿಕ ಸ್ಥಳದಲ್ಲಿ ಹಾಕಿಸಲಾಗುತ್ತಿತ್ತು. ಅಂದಿನ ಕೆಲ ಜನ ಅವುಗಳನ್ನು ಧ್ವಂಸಗೊಳಿಸುವುದ, ವಿಕಾರ ರೂಪಕ್ಕೆ ತಳ್ಳುವುದು ಮಾಡುತ್ತಿದ್ದರೆಂದು ತಿಳಿದು ರಾಜಾಜ್ಞೆ ಅಥವಾ ಶಿಕ್ಷಕ್ಕಿಂತಲೂ ದೈವ ಶಿಕ್ಷೆಗೆ, ಲೌಕಿಕ ಶಿಕ್ಷೆಗಿಂತಲೂ ಅಲೌಕಿಕ ಶಿಕ್ಷೆಯ ಪರಿಣಾಮ ಹೆಚ್ಚು ಎಂದು ಮನಗಂಡು ಶಾಸನಗಳ ಕೊನೆಯಲ್ಲಿ ಶಾಪಾಶಯ ವಿಚಾರಗಳು ಹಾಕಿಸಲಾಯಿತು. ಅಂತಹ ಶಾಪಾಶಯಗಳು ಕ್ರಿ.ಶ.೪೫೦ರಿಂದಲೇ ಕನ್ನಡದಲ್ಲಿ ಕಂಡುಬರುತ್ತವೆ. ಆರಂಭದ ಶಾಸನಗಳಲ್ಲಿ ಶಾಪಾಶಯಗಳು ಅದನಳಿಯೋನ್ ಮಹಾಪಾತನ್, ಪಂಚಮಹಾಪಾತನ್ ಹೀಗೆ ಒಂದು ಶಬ್ದದಲ್ಲಿಯೋ ಎರಡು ಶಬ್ಧದಲ್ಲಿಯೋ ಕಾಣಿಸುತ್ತಿದ್ದರು. ಅವುಗಳ ಧ್ವಂಸ ಕಾರ್ಯಗಳು

ತೀವ್ರಗೊಂಡಂತೆ ಶಾಪಶಯಗಳಲ್ಲಿಯೂ ಸುದೀರ್ಘ, ಕಠೋರ ಮತ್ತು ಅಶ್ಲೀಲ ಪದಗಳ ಬಳಕೆಯು ಕಂಡುಬರುತ್ತದೆ. ವಾರಣಾಸಿಯಲ್ಲಿ ಕವಿತೆಗಳನ್ನು, ಬ್ರಾಹ್ಮಣರನ್ನು, ತಪೋನಿರತರನ್ನು, ತಂದೆ–ತಾಯಿ ಮಕ್ಕಳನ್ನು, ಸ್ತ್ರೀಹತ್ಯೆ, ಮುಸ್ಲಿಂರಿಗಾಗಿ ಮೆಕ್ಕಾದಲ್ಲಿ ಹಂದಿಕೊಂದ ಶಾಪಕ್ಕೆ ಹೋಗವರು, ಇನ್ನು ಮುಂದೆ ಹೋಗಿ ಅಶ್ಲೀಲವದ 'ಕತ್ತೆ ತುಂನಿ ಕಲುಪು' ಆತನ ಬಾಯಿ' ಎಂಬ ನಿಕೃಷ್ಟ ಜನಪದರು ಬಯ್ಯುವ ದಾಟಿಯಲ್ಲಿ ಶಾಪಾಶಯಗಳೊಪಾದಿಯಲ್ಲಿ ಕಂಡುಬರುವುದನ್ನು ಅನೇಕ ಶಾಸನಗಳು ಉಲ್ಲೇಖಿಸಿವೆ. ಇವುಗಳ ಅಧ್ಯಯನದಿಂದ ಅಂದಿನ ಸಾಮಾಜಿ, ಸಾಂಸ್ಕೃತಿ ಬದುಕಿನ ಬಗ್ಗೆ ತಿಳಿದುಬರುತ್ತದೆ.

ಶಾಸನಗಳಲ್ಲಿ ಕ್ರಿ.ಶ.೪೫೦ರಿಂದಲೇ ಕಾಣಸಿಕೊಂಡ ಶಾಪಾಶಯದ ನುಡಿಗಳು ಕಾಲಾಂತರದಲ್ಲಿ ಇವುಗಳ ವಿಷಯ ವ್ಯಾಪ್ತಿ ಹೆಚ್ಚಾಯಿತು. ಕ್ರಿ.ಶ.೧೨ನೇ ಶತಮಾನದ ನಂತರ ಬೀದರ, ಕಲಬುರ್ಗಿ, ಸುರಪುರ ಮತ್ತು ತೆಲಂಗಾಣದ ಶಾಸನಗಳಲ್ಲಿ ಕನ್ನಡ ಮತ್ತು ಸಂಸ್ಕೃತ ಭಾಷೆಯಲ್ಲಿ ಕಠೋರ ಮತ್ತು ಸುದೀರ್ಘತೆ ಶಾಪಾಶಯಗಳ ಪಟ್ಟಿಯೇ ಇರುತ್ತದೆ. ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ ಶಾಸನಗಳ ಪಟ್ಟಿಯೇ ಇರುತ್ತದೆ. ಕೊಪ್ಪಳ ಮತ್ತು ರಾಯಚೂರು ಜಿಲ್ಲೆಯ ಶಾಸನ ಗಳಲ್ಲಿ ಶಾಪಾಶಯಗಳು ಮೇಲಿನವುಗಳೊಂದಿಗೆ ಅಶ್ಲೀಲ, ಬೈಯುವ ದಾಟಿಯ ಶಾಪಾಶಯಗಳು ಕಂಡುಬರುತ್ತದೆ.

ಹೀಗೆ ಈ ಮೇಲಿನ ಶಾಸನಗಳಲ್ಲಿ ಬರುವ ಶಾಪಾಶಯಗಳು ಅಂದಿನ ಜನಮಾನಸದಲ್ಲಿ ನೆಲೆನಿಂತ ವಿಕಾರರೂಪಗಳು ಅವಕ್ಕೆ ಶಾಸನ ಹಾಕಿಸುವ ಆಳರಸರು ಕೈಗೊಂಡ ಕ್ರಮಗಳು, ಬಗ್ಗೆ ತಿಳಿದುಬರುತ್ತದೆ.

ಇನ್ನೂ ಹಲವು ಶಾಸನಗಳು ತೆಲಂಗಾಣ ಮತ್ತು ಹೈದರಬಾದ ಕನಾಟಕದ ಪ್ರದೇಶಗಳಿಗೆ ಸಂಬಂಧಿಸಿದಂತೆ ಅನೇಕ ಶಾಸನಗಳು ಲಭ್ಯವಾಗುತ್ತವೆ. ಅವುಗಳ ಸಂಪೂರ್ಣ ಸಂಕಲನ ಕಾರ್ಯವು ನಡೆದಾಗ ಈ ಅಧ್ಯಯನದ ಹೆಚ್ಚು ಪರಿಪೂರ್ಣವಾಗು ಸಾಧ್ಯತೆ ಇದೆ. ಅದೇ ರೀತಿ ಈ ಭಾಗದಲ್ಲಿ ಕನ್ನಡವಲ್ಲದೇ ಪ್ರಾಕೃತ, ಸಂಸ್ಕೃತ, ಉರ್ದು, ಅರಬಿಕ್ಕ, ಪರ್ಶಿಯ ಭಾಷೆಯ ಅನೇಕ ಶಾಸನಗಳು ಕಂಡುಬರುತ್ತವೆ. ಅವುಗಳು ಕೂಡ ಈ ಭಾಗದ ಸಾಂಸ್ಕೃತಿಕ ಅಧ್ಯಯನಕ್ಕೆ ಪೂರಕವಾಗಬಲ್ಲವು. ಈ ಭಾಗದ ಶಾಸನಶಿಲ್ಪಗಳ ಕುರಿತು ಅಧ್ಯಯನ ಆಗಬೇಕಾಗಿದೆ. ಈ ಪ್ರದೇಶಗಳಲ್ಲಿ ರಾಜ್ಯಭಾರ ಮಾಡಿದ ಅನೇಕ ರಾಜಮನೆತನಗಳ ಶಾಸನಗಳು ಕರ್ನಾಟಕ ಮಹಾರಾಷ್ಟ್ರ ತಮಿಳುನಾಡು ಪ್ರದೇಶಗಳಲ್ಲಿ ಕನ್ನಡ, ತೆಲುಗು, ತಮಿಳು ಭಾಷೆಯಲ್ಲಿ ಕಂಡುಬರುತ್ತವೆ. ಅವುಗಳನ್ನು ಒಂದೆಡೆ ಸೇರಿಸಿ ಅಧ್ಯಯನ ಕೈಗೊಳ್ಳಲು ಇನ್ನು ಹೆಚ್ಚಿನ ಅವಕಾಶವಿದೆ ಎಂದು ಹೇಳಬಹುದು.

ಒಟ್ಟಿನಲ್ಲಿ ತೆಲಂಗಾಣ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ ಲಭ್ಯವಾದ ಶಾಸನಗಳನ್ನು ಅಧ್ಯಯನ ಮಾಡಿ ಎರಡೂ ಪ್ರದೇಶಗಳ ಸಾಂಸ್ಕೃತಿಕ ಅನನ್ಯತೆಯನ್ನು ಭೌಗೋಳಿಕ, ರಾಜಕೀಯ, ಆಡಳಿತಾತ್ಮಕ, ಧಾರ್ಮಿಕ ಹಾಗೂ ಭಾಷಿಕ ಅನನ್ಯತೆಯನ್ನು ಈ ಕೆಳಗಿನಂತೆ ನಿರೂಪಿಸಬಹುದಾಗಿದೆ.

ಪ್ರಾಚೀನ ಕರ್ನಾಟಕದ ಭೂಭಾಗವು ಬಹು ವಿಸ್ತಾರವಾಗಿತ್ತು. ಇಂದಿನ ತೆಲಂಗಾಣ ಮತ್ತು ಆಂಧ್ರಪ್ರದೇಶ ಮತ್ತು ಮಹಾರಾಷ್ಟ್ರದ ಕೆಲವು ಪ್ರದೇಶಗಳು ತಮಿಳುನಾಡಿನ ಕೆಲವು ಭಾಗಗಳು ಇವು ಅಂದು ಕರ್ನಾಟಕವನ್ನು ಆಳಿದ ರಾಜಮನೆತನದ ಅಧೀನಕ್ಕೆ ಒಳಪಟ್ಟಿದ್ದವು. ೧೯೫೬ರಲ್ಲಿ ಭಾಷಾವಾರು ಆಧಾರವಾಗಿ ಪ್ರಾಂತ್ಯಗಳು ವಿಂಗಡನೆಯಾದಾಗ ಅದೆಷ್ಟೋ ಕರ್ನಾಟಕ ಅಂದರೆ ಕನ್ನಡವನ್ನು ಮಾತಾಡುವವರು ಬೇರೆ ಭಾಷೆಯನ್ನಾಡುವ ಪ್ರಾಂತಕ್ಕೆ ಸೇರಿದರು. ಹೀಗಾಗಿ ಬಹುದಿನಗಳ ಏಕಚಕ್ರಾಧಿಪತ್ಯಕ್ಕೆ ಒಳಗಾಗಿದ್ದ ಈ ಭೂ ಪ್ರದೇಶವು ಹಲವು ಭಾಗಗಳಾಗಿ ಹಂಚಿ ಹೋಯಿತು.

ಬಹುದಿನಗಳ ಕಾಲ ಕನ್ನಡ ರಾಜಮನೆತನಗಳು ಈ ಭಾಗವು ಆಳಿದ ಕಾರಣಕ್ಕಾಗಿ, ಈ ಪ್ರದೇಶಗಳಲ್ಲಿ ಸಹಜವಾಗಿಯೇ ತಮ್ಮ ಆಡಳಿತಕ್ಕೆ ಸಂಬಂಧಪಟ್ಟ ಅನೇಕ ಶಾಸನಗಳು ಈ ಪ್ರದೇಶಗಳಲ್ಲಿ ಲಭಿಸುತ್ತವೆ. ಈ ಪ್ರದೇಶದಲ್ಲಿ ಕನ್ನಡ ಶಾಸನಗಳು ಹಾಕಿಸಬೇಕಾದರೆ ಇಲ್ಲಿ ಜನ ಕನ್ನಡಿಗರೇ ಆಗಿದ್ದರು, ಇಲ್ಲಿಯ ಆಡಳಿತ ಭಾಷೆ, ಜನಭಾಷೆ ಕನ್ನಡವೇ ಆಗಿದ್ದ ಕಾರಣ ಈ ಪ್ರದೇಶಗಳಲ್ಲಿ ಆಯಾ ಕಾಲದ ರಾಜಮನೆತನಕ್ಕೆ ಸಂಬಂಧಪಟ್ಟ ಕನ್ನಡ ಶಾಸನಗಳು ಲಭಿಸುತ್ತವೆ.

ಪ್ರಾಚೀನ ಕಾಲದ ಕರ್ನಾಟಕದಲ್ಲಿ ತನ್ನದೇ ಆದ ಮೂಲ ಸಾಂಸ್ಕೃತಿಕ ಅನನ್ಯತೆಯನ್ನು ಕಾಣಲು ಸಾಧ್ಯವಿದೆ. ತೆಲಂಗಾಣ ಮತ್ತು ಹೈದರಾಬಾದ ಕರ್ನಾಟಕ ಪ್ರದೇಶಗಳಲ್ಲಿ ಸಾಂಸ್ಕೃತಿಕ ಅನನ್ಯತೆ ಕೆಳಗಿನ ಕೆಲವು ಅಂಶಗಳಿಂದ ಗುರುತಿಸಬಹುದಾಗಿದೆ.

೧. **ಭೌಗೋಳಿಕ:** ತೆಲಂಗಾಣ ಮತ್ತು ಹೈದರಾಬಾ ಕರ್ನಾಟಕದ ಪ್ರದೇಶಗಳು ಭೌಗೋಳಿಕವಾಗಿ ಒಂದಕ್ಕೊಂದು ಹತ್ತಿಕೊಂಡಿಯೇ ಇವೆ. ಹೀಗಾಗಿ ಭೌಗೋಳಿಕ ಸಾಮ್ಯತೆ ಕಂಡುಬರುತ್ತದೆ. ಪ್ರಾಚೀನ ಕಾಲದಿಂದಲೂ ಇಂದಿನವರೆಗೆ ಆಹಾರ ಧಾನ್ಯಗಳನ್ನು ಕೊಡು–ಕೊಳ್ಳುವಿಕೆ ನಡೆಯುತ್ತಲೇ ಇದೆ. ಈ ಪ್ರದೇಶದಲ್ಲಿ ಬೆಳೆಗಳು ದವಸ–ಧಾನ್ಯಗಳಲ್ಲಿ ಸಾಮತ್ಯೆಯನ್ನು ಕಾಣಬಹುದು. ತೆಲಂಗಾಣದಲ್ಲಿ ಹುಟ್ಟುವ ಕಾರಂಜಾ ನದಿ ಹರಿದು ಕರ್ನಾಟಕದ ಬೀದರ ತಾಲೂಕಿನಿಂದ ಭಾಲ್ಕಿ ತಾಲೂಕಿನ ನಾರಾಂಜಾ ನದಿ ಸೇರಿ ಮುಂದೆ ತೆಲಂಗಾಣದ ಮಂಜಿರಾ ನದಿಯನ್ನು ಸೇರಿ ಅರಬ್ಬಿ ಸಮುದ್ರ ಸೇರುತ್ತದೆ.

೨. ರಾಜಕೀಯ ಅನನ್ಯತೆ: ಇಂದಿನ ತೆಲಂಗಾಣ ಮತ್ತು ಆಂಧ್ರಪ್ರದೇಶಗಳು ಪ್ರಾಚೀನ ಕಾಲದಿಂದಲೂ ಕರ್ನಾಟಕದ ರಾಜಮನೆತನಗಳೇ ಆಳ್ವಿಕೆ ನಡೆಸಿದವು. ಅವರಲ್ಲಿ ಬದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಗಂಗರು, ಕಲ್ಯಾಣದ ಚಾಲುಕ್ಯರು, ಕಲ್ಯಾಣದ ಕಲಚೂರಿಗಳು ಮತ್ತು ವಿಜಯನಗರ ಅರಸರು ಹೀಗೆ ಕ್ರಿ.ಶ.೭೧೩ರಿಂದ ಕ್ರಿ.ಶ.೧೫೨೧ರ ವರೆಗೆ ಭೂಭಾಗವನ್ನು ಕರ್ನಾಟಕದ ಅರಸು ಮನೆತನಗಳು ಆಳ್ವಿಕೆ ಮಾಡುದುದರ ಫಲವಾಗಿ ಈ ಕನ್ನಡ ಶಾಸನಗಳು ಮತ್ತು ಕನ್ನಡದ ಸಂಸ್ಕೃತಿಯನ್ನು ಕಾಣಲು ಕಾರಣವಾಗಿದೆ ಎಂದು ಹೇಳಬಹುದು. ಮುಂದೆ ಬಂದ ಹೈದರಾಬಾದ ನಿಜಾಂರು ಈ ತೆಲಂಗಾಣ ಮತ್ತು ಹೈದರಾಬಾದ ಕರ್ನಾಟಕ ಪ್ರದೇಶಗಳು ಒಂದೇ ಮಾಡಿಕೊಂಡು ಬಹುದಿನಗಳ ಅಂದರೆ ೧೯೪೮ ಸೆಪ್ಟೆಂಬರ್ ೧೭ರ ವರೆಗೆ ಈ ಪ್ರದೇಶಗಳನ್ನು ಆಳ್ವಿಕೆ ಮಾಡಿದರು. ಹೀಗಾಗಿ ಈ ಪ್ರದೇಶಗಳು ಆಡಳಿತಾತ್ಮಕವಾಗಿ ಅಭೇದವಾಗಿಯೇ ಇದ್ದವು. ಈ ಭಾಗದ ಜನಸಮುದಾಯಗಳಲ್ಲಿ ಒಂದೇ ತರಹದ ಸಾಂಸ್ಕೃತಿಕ ಅನನ್ಯತೆ ಕಾಣಲು ಸಾಧ್ಯವಿದೆ.

ಭಾಷಿಕ ಅನನ್ಯತೆ: ಕನ್ನಡ ತೆಲುಗು ಭಾಷೆಗಳು ದಕ್ಷಿಣ ದ್ರಾವಿಡ ಭಾಷಾ ಪರಿವಾರಕ್ಕೆ ಸೇರಿದವುಗಳಾಗಿವೆ. ಇವು ಸಹೋದರಿ ಭಾಷೆಗಳಾಗಿವೆ. ಇವುಗಳ ಭಾಷೆಯಲ್ಲಿ ಅತೀ ಹತ್ತಿರದ ಸಾಮ್ಯತೆಗಳಿವೆ. ಭಾಷೆಗಳ ಉಚ್ಛಾರಣೆಯಲ್ಲಿ, ಧ್ವನಿ ಸಂಕೇತಗಳಲ್ಲಿ ಸಾಮ್ಯತೆ ಕಂಡುಬರುತ್ತದೆ. ಇಂದಿಗೂ ಕನ್ನಡ ತೆಲುಗು ಭಾಷೆಯ ಧ್ವನಿ ಸಂಕೇತಗಳಲ್ಲಿ ಅಂಕಿಗಳ ಉಚ್ಛಾರಣೆಯಲ್ಲಿಯೂ, ಬರವಣಿಗೆಯಲ್ಲಿಯೂ ಸಾಮ್ಯತೆಯನ್ನು ಕಾಣಬಹುದು. ಹೀಗಾಗಿ ಇಂದಿನ ತೆಲಂಗಾಣ ಪ್ರದೇಶವು ಕನ್ನಡಮಯ ವಾತಾವರಣದ ನೆಲೆಯಾಗಿತ್ತು. ಅದಕ್ಕಾಗಿಯೇ ಅಂದು ಅಲ್ಲಿಯ ಬಹುಸಂಖ್ಯೆ ಜನರ ಮಾತೃಭಾಷೆ ಕನ್ನಡವಾಗಿತ್ತು. ಅದಕ್ಕಾಗಿ ಕನ್ನಡ ಶಾಸನಗಳು ದಕ್ಷಿಣ ಭಾರತದಲ್ಲಿಯೇ ತೆಲಂಗಾಣ ಮತ್ತು ಇಂದಿನ ಆಂಧ್ರಪ್ರದೇಶಗಳಲ್ಲಿ ಲಭಿಸಿವೆ. ಇದಕ್ಕೆಲ್ಲ ಕಾರಣ ಭಾಷಿಕ ಅನನ್ಯತೆ. ಅಂದಿನ ರಾಜಮನೆತನಗಳ ಭಾಷೆ ಕನ್ನಡ, ಅಲ್ಲಿ ವಾಸಿಸುವ ಬಹುಸಂಖ್ಯಾತರ ಭಾಷೆ ಕನ್ನಡ. ಹೀಗೆ ಕನ್ನಡ ಭಾಷೆ ಆಡಳಿತ ಭಾಷೆ, ಜನಭಾಷೆ ಕನ್ನಡವೇ ಅಗಿರುವುದರಿಂದಲೇ ಈ ಭಾಗದಲ್ಲಿ ಕನ್ನಡದ ಶಾಸನಗಳು ಹೆಚ್ಚು ಇರಲಿಕ್ಕೆ ಸಾಧ್ಯವಿದೆ. "ಯಾವುದೇ ಒಂದು ಪ್ರದೇಶದಲ್ಲಿ ಯಾವುದೇ ಭಾಷೆಯ ಶಾಸನಗಳು ದೊರೆಯಬೇಕಾದರೆ ಪ್ರಧಾನವಾಗಿ ಎರಡು ಕಾರಣಗಳಿರುತ್ತವೆ.

೧. ಆ ಪ್ರದೇಶವನ್ನು ಆಳುತ್ತಿರುವ ಅರಸರ ಆಡಳಿತ ಭಾಷೆಯಾಗಿರಬಹುದು

೨. ಆ ಪ್ರದೇಶದ ಜನ ಆಡುತ್ತಿರುವ ಜನಭಾಷೆಯಾಗಿರಬಹುದು

ಕನ್ನಡ ಶಾಸನಗಳು ದೊರೆಯುವ ತೆಲಂಗಾಣ ಪ್ರದೇಶವನ್ನು ಗಮನಿಸಿದರೆ ಆರಂಭಕಾಲದಲ್ಲಿ ನಮಗೆ ವಿಶೇಷವಾಗಿ ಕನ್ನಡ ಶಾಸನಗಳೇ ದೊರೆಯುತ್ತಿದದ್ದು, ತೆಲುಗು ಭಾಷೆಯ ಶಾಸನಗಳ ಸಂಖ್ಯೆ ತೀರಾ ಕಡಿಮೆಯಾಗಿರುವುದು ಕಂಡುಬರುತ್ತದೆ.

ಕಾಕತೀಯ ದೊರೆಗಳ ಅತ್ಯಂತ ಪ್ರಾಚೀನ ಶಾಸನಗಳು ಕನ್ನಡ ಭಾಷೆಯಲ್ಲಿವೆ. ಕಲ್ಯಾಣ ಚಾಲುಕ್ಯರ ಪ್ರಭಾವದಿಂದ ಕಾಕತೀಯರು ಹೊರಬಂದು ಔನ್ನತ್ಯವನ್ನು ಪಡೆಯುತ್ತಿದ್ದಂತೆ ತೆಲಂಗಾಣದಲ್ಲಿ ಕನ್ನಡ ಶಾಸನಗಳು ಕಡಿಮೆಯಾಗುತ್ತಾ ಬಂದವು. ಈ ಪ್ರದೇಶದಲ್ಲಿ ಹದಿನೈದನೆಯ ಶತಮಾನದ ನಂತರ ಕನ್ನಡ ಶಾಸನಗಳೇ ದೊರೆಯುವುದಿಲ್ಲ"(ಗಣೇಶ ಕೆ.ಆರ್. ಮತ್ತು ಶೇಷಶಾಸ್ತ್ರಿ ಆರ್.(ಸಂ), ಕ.ವಿ.ಶಾ.ಸಂ.೫, ಭಾಗ ೧, ೨೦೦೧, ಪು.XL)

ಹೀಗೆ ಈ ಭಾಗದ ಬಹುಸಂಖ್ಯೆಯಲ್ಲಿ ಕನ್ನಡ ಭಾಷೆಯನ್ನಾಡುವ ಜನಸಮೂಹ ಇರುವುದರಿಂದಲೇ ತೆಲುಗು ಭಾಷೆ ಇದ್ದರೂ ಅಲ್ಪಸಂಖ್ಯಾತರ ಭಾಷೆಯಾಗಿರಬಹುದು. ಈ ಪ್ರದೇಶಗಳಲ್ಲಿ ಲಭಿಸುವ ಶಾಸನಗಳಿಂದ ಈ ಪ್ರದೇಶಗಳ ಭಾಷಿಕ ಸಾಂಸ್ಕೃತಿಕ ಅನನ್ಯತೆ ಕಂಡು ಕೊಳ್ಳಬಹುದಾಗಿದೆ.

ಕನ್ನಡ ಮತ್ತು ತೆಲುಗು ಭಾಷೆಗಳಿಗೆ ಬಳಸುವ ಲಿಪಿಯ ಸಾಮ್ಯತೆಯೂ ಇದೆ. ಕನ್ನಡ ವರ್ಣಮಾಲೆಗಳ ಹಾಗೆಯೇ ತೆಲುಗು ವರ್ಣಮಾಲೆಗಳು ಕಂಡುಬರುತ್ತವೆ ಮತ್ತು ಅಂಕಿಗಳ ಬಳಸುವಲ್ಲಿಯು ಅನನ್ಯತೆಯನ್ನು ಕಾಣಬಹುದು ಹಾಗೂ ಅವುಗಳ ಉಚ್ಚಾರಣೆಯಲ್ಲಿಯೂ ಸಾಮ್ಯತೆ ಕಂಡುಬರುತ್ತದೆ. ಈ ಎರಡು ಭಾಷೆಯ ಲಿಪಿಗಳ ಮೂಲ ಬ್ರಾಹ್ಮಿ ಆಗಿದ್ದು, ಲಿಪಿ ಸ್ವರೂಪಗಳಲ್ಲಿ ಸಾಮ್ಯತೆ ಕಂಡುಕೊಳ್ಳಬಹುದಾಗಿದೆ. ಹೀಗಾಗಿ ಅಲ್ಲಿಯ ಅಲ್ಪಸಂಖ್ಯಾತ ತೆಲುಗು ಜನಸಮುದಾಯಕ್ಕೂ ಸರಳವಾಗಿ ಅಲ್ಲಿಯ ಕನ್ನಡ ಶಾಸನಗಳು ಅರ್ಥವಾಗುತ್ತಿದ್ದಿರಬಹುದು.

ಸಾಹಿತ್ಯಿಕ ಅನನ್ಯತೆ: ಕನ್ನಡ ಸಾಹಿತ್ಯ ಚರಿತ್ರೆ ಕ್ರಿ.ಶ.೪೫೦ರ ಹಲ್ಮಿಡಿ ಶಾಸನದಿಂದಲೇ ಉದಯವಾಗುತ್ತದೆ. ಆದರೆ ತೆಲುಗು ಸಾಹಿತ್ಯದ ಉದಯ ೧೦ನೇ ಶತಮಾನದಲ್ಲಿದೆ. ಹೀಗಾಗಿ ಕನ್ನಡ ಸಾಹಿತ್ಯ ಸಹಜವಾಗಿಯೇ ತೆಲುಗು ಸಾಹಿತ್ಯದ ಮೇಲೆ ಪ್ರಭಾವಿಸಿರಬೇಕು. ಸಾಹಿತ್ಯ ಇಲ್ಲ ಎಂದ ಮೇಲೆ ಶಾಸನ ರಚಿಸುವುದು ಹೇಗೆ? ಹೀಗೆ ಭಾಷಿಕ, ಲಿಪಿ, ಸಾಹಿತ್ಯಿಕ ದೃಷ್ಟಿಯಿಂದ ಕನ್ನಡವು ತೆಲಂಗಾಣ ಪ್ರದೇಶದ ಮೇಲೆ ತನ್ನ ಪ್ರಭಾವ ಬೀರಿ ಅಲ್ಲಿಯ ಸಾಂಸ್ಕೃತಿಕ ಅನನ್ಯತೆಗೆ ಕಾರಣವಾಗಿದೆ ಎನ್ನಬಹುದು.

ಕನ್ನಡದ ಆದಿ ಕವಿ ಪಂಪನು ತೆಲಂಗಾಣ ಮತ್ತು ಕರ್ನಾಟಕ ಪ್ರದೇಶಗಳ ಸಾಹಿತ್ಯಿಕ ಮತ್ತು ಸಾಂಸ್ಕೃತಿಕ ರಾಯಭಾರಿಯಾಗಿದ್ದನು. ಪಂಪನ ಪೂರ್ವಜರು ವೇಮುಲವಾಡದವರು, ಆದರೆ ಪಂಪನ ತಾಯಿ ಕರ್ನಾಟಕದ ಅಣ್ಣಿಗೇರಿಯವಳು. ಪಂಪನ ಸಾಹಿತ್ಯ ಸೃಷ್ಟಿಯೆಲ್ಲ ಕರ್ನಾಟಕದ ಬನವಾಸಿಯಲ್ಲಿ. ಆದರೆ ಆತನ ತಮ್ಮ ಜಿನವಲ್ಲಬನ ಕರ್ಮಕ್ಷೇತ್ರ ಇಂದಿನ ತೆಲಂಗಾಣದ ಕರೀಮ್‌ನಗರ ಜಿಲ್ಲೆಯ ಕುರಿಕ್ಯಾಲ ಆಗಿತ್ತು. ಹೀಗಾಗಿ ತೆಲಂಗಾಣ ಮತ್ತು

ಕರ್ನಾಟಕದ ವೈವಾಹಿಕ ಸಂಬಂಧ ಮತ್ತು ಸಾಹಿತ್ಯಿಕ ಸಂಬಂಧವು ೧೧ನೇ ಶತಮಾನದ ಪ್ರಾಚೀನವಾದ ಸಂಬಂಧಗಳು ಇದ್ದವು ಎಂದು ತಿಳಿದುಬರುತ್ತದೆ.

ಆಡಳಿತ: ಪ್ರಾಚೀನ ಕಾಲದ ಕರ್ನಾಟಕ ರಾಜಮನೆತನಗಳುಭೂ ಪ್ರದೇಶವಾದ ಇಂದಿನ ತೆಲಂಗಾಣ ಪ್ರದೇಶಗಳನ್ನು ಇಂದಿನ ಕರ್ನಾಟಕ ಪ್ರದೇಶಗಳಲ್ಲಿಯೇ ತಮ್ಮ ರಾಜ್ಯಧಾನಿಯನ್ನಾಗಿಸಿ ಕೊಂಡು ಆಳ್ವಿಕೆ ನಡೆಸುತ್ತಿದ್ದನ್ನು ಶಾಸನಗಳು ಉಲ್ಲೇಖಿಸುತ್ತವೆ. ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ವಿಜಯನಗರ ಅರಸರು, ಬಾದಾಮಿ ಚಾಲುಕ್ಯ ದೊರೆ ವಿಜಯಾದಿತ್ಯನು ರಾಜಧಾನಿ ಬಾದಾಮಿಯಿಂದ ಹೈದರಬಾದ ಕರ್ನಾಟಕದ ಕೊಪ್ಪಳ ಮತ್ತು ತೆಲಂಗಾಣದ ಮಹಬೂಬನಗರದ ಅಲಂಪೂರದವರೆಗೆ ರಾಜ್ಯಭಾರ ಮಾಡುತ್ತಿದ್ದನೆಂದು ಕೊಪ್ಪಳದ ಹಲಗೇರಿ ಶಾಸನ(ಕ.ವಿ.ಶಾ.ಸಂ.೨, ಪು.೨೯-೩೦) ಮತ್ತು ಮಹಬೂಬನಗರ ಜಿಲ್ಲೆಯ ಅಲಂಪೂರ ಶಾಸನ(ಕ.ವಿ.ಶಾ.ಸಂ.೫, ಭಾಗ ೨, ಪು.೧೫೨)ಗಳು ಉಲ್ಲೇಖಿಸುತ್ತವೆ. ಹೈದರಾಬಾದ ಕರ್ನಾಟಕ ಪ್ರದೇಶ ಮಾನ್ಯಖೇಟ ವನ್ನು ರಾಜ್ಯಧಾನಿಯನ್ನಾಗಿಟ್ಟುಕೊಂಡು ರಾಷ್ಟ್ರಕೂಟರು ತೆಲಂಗಾಣ ಬಹುಭಾಗದಲ್ಲಿ ತಮ್ಮ ಆಳ್ವಿಕೆ ನಡೆಸಿದ್ದನ್ನು ಶಾಸನಗಳು ತಿಳಿಸುತ್ತವೆ. ರಾಷ್ಟ್ರಕೂಟರ ಪ್ರಖ್ಯಾತ ದೊರೆಗಳಾದ, ಧ್ರುವ, ಮೂರನೆ ಗೋವಿಂದ, ಅಮೋಘವರ್ಷ(ನೃಪತುಂಗ) ಎರಡನೆ ಕೃಷ್ಣ ಇವರುಗಳು ತೆಲಂಗಾಣ ಭೂಭಾಗವನ್ನು ಕ್ರಮವಾಗಿ ಮಹಬೂಬನಗರ, ವರಂಗಲ್ ಮತ್ತು ನಲ್ಗೊಂಡ ಜಿಲ್ಲೆಗಳ ಪ್ರದೇಶವನ್ನು ಆಳ್ವಿಕೆ ನಡೆಸಿ ಏಕರೂಪದ ಆಡಳಿತ ನೀಡಿದ್ದಾರೆಂದು ಕನ್ನಡ ಶಾಸನಗಳಿಂದ ತಿಳಿದುಬರುತ್ತದೆ.

ಮುಂದುವರೆದು ಕಲ್ಯಾಣದ ಚಾಲುಕ್ಯರು, ಬೀದರ ಜಿಲ್ಲೆಯ ಕಲ್ಯಾಣವನ್ನು ರಾಜ್ಯಧಾನಿ ಯನ್ನಾಗಿಸಿಕೊಂಡು ತೆಲಂಗಾಣದ ಪ್ರದೇಶಗಳಾದ ಕರೀಮನಗರ, ವರಂಗಲ್, ಮಹಬೂಬನಗರ, ನಲ್ಗೊಂಡ ಮತ್ತು ಮೆದಕ್ ಜಿಲ್ಲೆಗಳ ಪ್ರದೇಶಗಳು ಇವರ ನೇರ ಆಡಳಿತಕ್ಕೆ ಒಳಪಟ್ಟಿದ್ದವು. ಇಲ್ಲಿ ಲೋಕೋಪಯೋಗಿ ಕಾರ್ಯಗಳಾದ ದೇವಾಲಯಗಳ ನಿರ್ಮಾಣ, ಅವುಗಳ ನಿರ್ವಹಣೆಗಾಗಿ ದಾನ-ದತ್ತಿಗಳನ್ನು ನೀಡುತ್ತಿದ್ದರೆಂದು ತಿಳಿದುಬರುತ್ತದೆ. ಕಲಚೂರಿ ಅರಸರು ಕಲ್ಯಾಣವನ್ನೇ ರಾಜ್ಯಧಾನಿಯಾಗಿ ಮಾಡಿಕೊಂಡು ತೆಲಂಗಾಣದ ಮಹಬೂಬನಗರ ಜಿಲ್ಲೆಯ ಶಾಸನವನ್ನು ಕಲಚೂರಿ ಅರಸ ಬುಜಬಳಮಲ್ಲ ಆಹವಮಲ್ಲನನ್ನು ಹೆಸರಿಸಿದೆ. ಈತನು ಅಲ್ಲಿಯ ಗವರೇಶ್ವ ದೇವರಿಗೆ ದತ್ತಿ ಬಿಟ್ಟನೆಂದು ಉಲ್ಲೇಖಿಸಿದೆ(ಕ.ವಿ.ಶಾ.ಸಂ.೫, ಭಾಗ ೨, ಪು.೧೫೦).

ವಿಜಯನಗರದ ಅರಸರಾದ ವೀರ ಪ್ರತಾಪದೇವರಾಯನು ತೆಲಂಗಾಣದ ನಿಜಾಂಬಾದ ಜಿಲ್ಲೆ ಮತ್ತು ಕೃಷ್ಣದೇವರಾನು ತೆಲಂಗಾಣದ ಅಲಂಪೂರ ಭೂ ಪ್ರದೇಶವನ್ನು ಆಳ್ವಿಕೆ ಮಾಡುತ್ತಿದ್ದ ನೆಂದು ಶಾಸನಗಳು ಉಲ್ಲೇಖಿಸುತ್ತವೆ(ಕ.ವಿ.ಶಾ.ಸಂ.೫, ಭಾಗ ೨, ಪು.೧೩೬).

ಹೀಗೆ ಕರ್ನಾಟಕದ ಅರಸುಮನೆತನಗಳು ತೆಲಂಗಾಣದ ಬಹುಭಾಗವನ್ನು ಆಳುತ್ತಿದ್ದರು. ಅದರಿಂದಾಗಿಯೇ ಈ ಪ್ರದೇಶಗಳಲ್ಲಿ ಕನ್ನಡ ಶಾಸನಗಳು ಲಭಿಸಿವೆ. ಈ ಭಾಗದಲ್ಲಿ ಸಮಾಜಪರ ಅನೇಕ ಕೆಲಸಕಾರ್ಯಗಳನ್ನು ಕೈಗೊಂಡಿದ್ದನ್ನು ಶಾಸನಗಳು ಉಲ್ಲೇಖಿಸುತ್ತವೆ.

ಧಾರ್ಮಿಕ: ಕ್ರಿ.ಪೂ.೩ನೇ ಶತಮಾನದಲ್ಲಿ ಮೌರ್ಯವಂಶದ ಚಂದ್ರಗುಪ್ತನೊಂದಿಗೆ ಜೈನ ಋಷಿ ಭದ್ರಬಾಹು ದಕ್ಷಿಣ ಭಾರತದ ಶ್ರವಣಬೆಳಗೊಳಕ್ಕೆ ಬಂದನು. ಮುಂದೆ ಹೈದರಾಬಾದ ಕರ್ನಾಟಕದ ಕೊಪ್ಪಳ ಪ್ರದೇಶವು ಜೈನರಿಗೆ ಕಾಶಿ ಆಯಿತು, ಪವಿತ್ರ ಸ್ಥಳವಾಯಿತ್ತೆಂದು ಅನೇಕ ಶಾಸನಗಳು ಉಲ್ಲೇಖಿಸಿವೆ. ಅಲ್ಲದೆ ತೆಲಂಗಾಣದ ಕರೀಮನಗರ ಜಿಲ್ಲೆ ಜೈನರ ಯಾತ್ರಾ ತೀರ್ಥಸ್ಥಳ ವಾಗಿತ್ತೆಂದು ಶಾಸನ ಉಲ್ಲೇಖಿಸಿದೆ(ಕ.ವಿ.ಶಾ.ಸಂ.೫, ಭಾಗ ೨, ಪು.೬೪). ಇದರ ಕಾರಣ ಕರ್ತೃ ಆದಿಕವಿ ಪಂಪನ ತಮ್ಮ ಜಿನವಲ್ಲಭ. ಇದೇ ಜಿಲ್ಲೆಯ ಸನಿಗರಂ, ಕೊರಟ್ಲ ಮತ್ತು ವರಂಗಲ್ ಜಿಲ್ಲೆಯ ಬಾಣಾಜಿಪೇಟ್ ಶಾಸನಗಳು(ಕ.ವಿ.ಶಾ.ಸಂ.೫, ಭಾಗ ೨, ಪು.೬೪) ಕಲ್ಯಾಣ ಚಾಲುಕ್ಯ ದೊರೆ ಆರನೆಯ ವಿಕ್ರಮಾದಿತ್ಯನು ಜೈನ ಬಸದಿಗಳನ್ನು ನಿರ್ಮಿಸಿ ಉದಾರವಾದ ದತ್ತಿ ನೀಡಿದನೆಂದು ತಿಳಿಸುತ್ತವೆ. ಹೀಗೆ ಅಂದಿನ ಆಳರಸರು ತಮ್ಮ ರಾಜ್ಯಧಾನಿ ಪ್ರದೇಶಗಳಂತೆಯೇ ತೆಲಂಗಾಣ ಪ್ರದೇಶಗಳಲ್ಲಿಯೂ ಜೈನಧರ್ಮಕ್ಕೆ ಆಶ್ರಯ ನೀಡಿ, ಪೋಷಿಸಿದ್ದನ್ನು ಕಾಣಬಹುದು. ಇದರಿಂದಾಗಿ ಇಲ್ಲಿಯ ಪ್ರದೇಶಗಳಲ್ಲಿ ಸಾಂಸ್ಕೃತಿಕ ಅನನ್ಯತೆ ಎದ್ದು ಕಾಣುವಂತಹದ್ದಾಗಿದೆ.

ಕಾಳಾಮುಖ ಶೈವರು: "ಕಾಶ್ಮೀರದಿಂದ ಬಂದ ವೈದಿಕ ಮೂಲಕ ಶೈವ ಪಂಥವೇ ಕಾಳಾಮುಖ ಶೈವರು"ಎಂದು ಎಂ.ಚಿದಾನಂದಮೂರ್ತಿಯವರು ಅಭಿಪ್ರಾಯಪಟ್ಟಿದ್ದಾರೆ. ಈ ಪಂಥಕ್ಕೆ ಸಂಬಂಧಿಸಿದ ಶಾಸನಗಳು ಹೈದರಾಬಾದ ಕರ್ನಾಟಕದ ಕೊಪ್ಪಳ ಮತ್ತು ತೆಲಂಗಾಣದ ಮೆಹಬೂಬನಗರ ಜಿಲ್ಲೆಯ ಅಲಂಪೂರದಲ್ಲಿ ಲಭಿಸಿವೆ. ಈ ಕಾಳಮುಖರ ಗುರುಪರಂಪರೆಯನ್ನು ಅಲಂಪೂರದ ಹಲವು ಶಾಸನಗಳು ಉಲ್ಲೇಖಿಸಿವೆ. ಆರಂಭದಲ್ಲಿ ಕೊಪ್ಪಳ ಶಾಸನಗಳನ್ನು ಕಾಳಮುಖ ಗುರು ಸೋಮೇಶ್ವರ ಪಂಡಿತನನ್ನು ಉಲ್ಲೇಖಿಸುತ್ತದೆ. ಅದೇ ಸೋಮೇಶ್ವರ ಪಂಡಿತನನ್ನು ತೆಲಂಗಾಣದ ಅಲಂಪೂರ ಶಾಸನ ಉಲ್ಲೇಖಿಸಿದೆ. ಹೀಗೆ ಈ ಕಾಳಮುಖ ಗುರುಪರಂಪರೆ ಬಗ್ಗೆ ಸುದೀರ್ಘವಾಗಿ ಅಲಂಪೂರ ಶಾಸನಗಳು ಉಲ್ಲೇಖಿಸುತ್ತವೆ(ಕ.ವಿ.ಶಾ.ಸಂ.೫, ಭಾಗ ೨, ಪು.೧೧೬–೧೪೧). ಕಾಳಾಮುಖ ಗುರು ಪರಂಪರೆಯು ಆರಂಭದಲ್ಲಿ ಹೈದರಾಬಾದ ಕರ್ನಾಟಕದಿಂದ ಮೊದಲಗೊಂಡು ತೆಲಂಗಾಣದ ಅಲಂಪೂರದಲ್ಲಿ ಈ ಗುರುಪರಂಫರೆ ಬಹು ಪ್ರಸಿದ್ಧಿ ಪಡೆಯಿತ್ತೆಂದು ಹೇಳಬಹುದು. ಈ ಎರಡು ಪ್ರದೇಶಗಳಲ್ಲಿ ಏಕಕಾಲಕ್ಕೆ ಕಾಳಮುಖ ಗುರುಪರಂಪರೆ ಬೆಳೆದು ಬಂದಿತ್ತೆಂದು ಹೇಳಬಹುದು.

ಹೀಗೆ ತೆಲಂಗಾಣ ಪ್ರದೇಶಗಳಲ್ಲಿ ಲಭಿಸಿದ ಕನ್ನಡ ಶಾಸನಗಳು ಈ ಪ್ರದೇಶಗಳ ಸಾಂಸ್ಕೃತಿಕ ಅನನ್ಯತೆ ಸಾರುತ್ತವೆ ಎಂದು ಹೇಳಬಹುದು.

ಅಧ್ಯಯನದ ಫಲಿತಗಳು

ಪ್ರಸ್ತುತ ಅಧ್ಯಯನದಲ್ಲಿ ತೆಲಂಗಾಣ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಗಳಲ್ಲಿ ಲಭಿಸಿದ ಕನ್ನಡದ ಶಾಸನಗಳನ್ನು ಆಧಾರವಾಗಿ ಬಳಸಿಕೊಂಡು ಈ ಪ್ರದೇಶಗಳ ಒಟ್ಟು ಸಾಂಸ್ಕೃತಿಕ ಚರಿತ್ರೆಯನ್ನು ಅಧ್ಯಯನ ಮಾಡಲಾಗಿದೆ. ಈ ಎರಡೂ ಪ್ರದೇಶಗಳು ಇಂದು ರಾಜಕೀಯವಾಗಿ ಬೇರೆಬೇರೆ ಯಾಗಿದ್ದರೂ ಸಾಂಸ್ಕೃತಿಕವಾಗಿ ಅಂದು ಮಾತ್ರ ಎರಡೂ ಒಂದೇ ಆಗಿರುವುದು ಪಸ್ತುತ ಸಂಶೋಧನೆಯಿಂದ ದೃಢಪಟ್ಟಿದೆ. ಇಂತಹ ಏಕತೆಯನ್ನು ಕಂಡುಕೊಳ್ಳುವುದರಿಂದ ಈ ಪ್ರದೇಶಗಳ ಜನರ ನಡುವೆ ಸಾಮರಸ್ಯವನ್ನು ಐಕ್ಯತಾ ಭಾವವನ್ನು ಬೆಳಸಲು ಸಹಾಯವಾಗುತ್ತದೆ.

ಈ ಒಂದು ನಿರ್ಣಯಕ್ಕೆ ಬರುವಲ್ಲಿ ಈ ಭಾಗದಲ್ಲಿ ಲಭ್ಯವಾಗಿ ಪ್ರಕಟವಾಗಿರುವ ಕನ್ನಡ ಶಾಸನಗಳೆಲ್ಲವನ್ನೂ ಪ್ರಾದೇಶಿಕ ವಿಂಗಡಣೆ ಮತ್ತು ಭಾಷಿಕ ವಿಂಗಡಣೆಗಳ ಆಧಾರದ ಮೇಲೆ ಕೈಗೆತ್ತಿಕೊಂಡು ವ್ಯಾಪಕವಾಗಿ ಅಧ್ಯಯನ ಮಾಡಲಾಗಿದೆ. ಇಡೀ ಅಧ್ಯಯನದ ಫಲಿತವನ್ನು ಈ ಕೆಳಗೆ ನೀಡಲಾಗಿದೆ.

೧. ರಾಜಕೀಯ ಅಧ್ಯಯನಲ್ಲಿ ಈ ಪ್ರದೇಶಗಳ ರಾಜಕೀಯ ಚರಿತ್ರೆಯ ವಿವೇಚನೆಯಿದೆ. ಚಾರಿತ್ರಿಕ ಕಾಲದಿಂದ ಹಿಡಿದು ೧೯೪೮ರವರೆಗೆ ಈ ಎರಡೂ ಪ್ರದೇಶಗಳು ಒಂದೇ ರಾಜ್ಯಾಧಿಪತ್ಯಕ್ಕೆ ಒಳಪಟ್ಟು ಸಾಗಿಬಂದಿರುವುದು ಈ ಅಧ್ಯಯನದಿಂದ ಸ್ಪಷ್ಟವಾಗುತ್ತದೆ.

೨. ಆಡಳಿತ ಅಧ್ಯಯದಲ್ಲಿ ಆಡಳಿತರಂಗಕ್ಕೆ ಸಂಬಂಧಿಸಿದ ವಿವೇಚನೆಯಿದೆ. ತೆಲಂಗಾಣ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಗಳು ಒಂದೇ ರೀತಿಯ ಆಡಳಿತಕ್ಕೆ ಒಳಪಟ್ಟಿದುದು, ಇಲ್ಲಿಯ ಆಡಳಿತಾಧಿಕಾರಿಗಳು, ಆಡಳಿತದ ವಿವಿಧ ಮಜಲುಗಳು, ರೂಪಗಳು, ಕೇಂದ್ರ ಪ್ರಾಂತೀಯ ಹಾಗೂ ಗ್ರಾಮಗಳ ಮಟ್ಟದ ಆಧಿಕಾರದ ವಿಭಜನೆ, ಆಡಳಿತದ ವಿಕೇಂದ್ರೀಕರಣ ಅಂದು ಈ ಪ್ರದೇಶಗಳಲ್ಲಿ ಯಾವ ರೀತಿ ಇತ್ತು ಎಂಬುದು ಮುಂತಾದ ಅಂಶಗಳು ಇದರಿಂದ ಸ್ಪಷ್ಟಗೊಂಡಿವೆ.

೩. ಸಾಮಾಜಿಕ ಅಧ್ಯಾಯದಲ್ಲಿ ಸಾಮಾಜಿಕ ವ್ಯವಸ್ಥೆಯನ್ನು ಕುರಿತಾದ ವಿವೇಚನೆಯಿದೆ. ಇದರಲ್ಲಿ ಅಂದಿನ ಸಮಾಜದ ಸಂರಕ್ಷಣೆ ಪೋಷಣೆಗಳು ಯಾವ ರೀತಿಯಲ್ಲಿ ನಡೆಯುತ್ತಿದ್ದವು, ಸ್ತ್ರೀಯರ ಸ್ಥಾನಮಾನಗಳ ಸ್ಥಿತಿಗತಿಗಳು ಹೇಗಿದ್ದವು ಎಂಬಿತ್ಯಾದಿ ವಿಚಾರಗಳ ಬಗ್ಗೆ ಒಂದು ಖಚಿತವಾದ ನಿಲುವಿಗೆ ಬರಲು ಸಾಧ್ಯವಾಗಿದೆ.

೪. ಧಾರ್ಮಿಕ ಅಧ್ಯಯದಲ್ಲಿ ಧಾರ್ಮಿಕ ದೃಷ್ಟಿಯ ವಿವೇಚನೆಯಿದೆ. ಬೌದ್ಧ, ಜೈನ, ವೀರಶೈವ ಹಾಗೂ ವೈದಿಕ ಧರ್ಮಗಳು ಇಲ್ಲಿ ಪ್ರಧಾನವಾಗಿ ವ್ಯಾಪಿಸಿದ್ದ ಧರ್ಮಗಳೆಂಬುದು, ಇವು

ಈ ಎರಡೂ ಪ್ರದೇಶಗಳಲ್ಲಿ ಸಮಾನವಾಗಿ ವ್ಯಾಪಿಸಿರುವುದು ದೃಢಪಡುತ್ತದೆ. ಇದರಿಂದ ಈ ಮೂಲಕವಾಗಿ ಈ ಪ್ರದೇಶಗಳ ಧಾರ್ಮಿಕ ಐಕ್ಯತೆಯು ಅರಿವಿಗೆ ಬರುತ್ತದೆ.

೫. ಆರ್ಥಿಕ ಅಧ್ಯಾಯದಲ್ಲಿ ವಿವಿಧ ಮೂಲಗಳಿಂದ ಬರುವ ಆದಾಯದಿಂದ ಬಂದ ಸಂಪತ್ತಿನಿಂದ ರಾಜರು, ರಾಣಿಯರು, ದಂಡನಾಯಕರು, ಸಾಮಂತರು, ಅಲ್ಲಿಯ ಧರ್ಮಕಾರ್ಯಗಳಾದ ಕೆರೆ, ಬಾವಿ, ಕಾಲುವೆ, ದೇವಾಲಯಗಳ ನಿರ್ಮಾಣ ಮಾಡುವುದು ಅವುಗಳ ಪೋಷಣೆಗಾಗಿ ಉದಾರವಾದ ದಾನ–ದತ್ತಿ ನೀಡುತ್ತಿದ್ದರೆಂದು ಈ ಭಾಗದಲ್ಲಿನ ಶಾಸನಗಳಲ್ಲಿ ಉಲ್ಲೇಖಗೊಂಡ ಅಂಶಗಳಿಂದ ಆರ್ಥಿಕ ಸ್ಥಿತಿಗತಿ ಬಗ್ಗೆ ತಿಳಿದುಕೊಳ್ಳಬಹುದಾಗಿದೆ.

೬. ಸಾಹಿತ್ಯಿಕ ಅಧ್ಯಯನದಲ್ಲಿ ಸಾಹಿತ್ಯದ ಗದ್ಯದ ಸ್ವರೂಪ ಮತ್ತು ಕಾವ್ಯದ ಸ್ವರೂಪ, ಛಂದೋ ರೂಪಗಳು, ಶಾಸನೋಕ್ತ ಕವಿಗಳು, ಹಾಗಾಗಿ ಶಾಸನಗಳು ಪುಟ್ಟ ಚಂಪೂ ಕಾವ್ಯದಂತಿವೆ ಎಂಬುದು ಈ ಅಧ್ಯಯನದಿಂದ ಸ್ಪಷ್ಟವಾಗುತ್ತದೆ. ಅದಲ್ಲದೆ ಈ ಪ್ರದೇಶ ಶಾಸನಗಳಲ್ಲಿ ಅನೇಕ ಕಲೆಗಳ ಉಲ್ಲೇಖವಿದ್ದು, ಅದರಲ್ಲಿ ೬೪ ಕಲೆಗಳಲ್ಲಿ ಬಲ್ಲಿದರಾದವರಿಗೆ ಹೆಚ್ಚಿನ ಮನ್ನಣೆಯಿತ್ತೆಂದು ತಿಳಿಯುತ್ತದೆ. ಹಾಗೆ ಅವುಗಳಲ್ಲಿ ಬಲ್ಲಿದರಾದವರು ಪ್ರದೇಶದಲ್ಲೂ ಬಹುಸಂಖ್ಯಾತ ಜನ ಇದ್ದರು. ಹಾಗಲ್ಲದೆ ವಿವಿಧ ವಿದ್ಯೆಗಳ ಪೈಕಿ ಕೆಲವದರಲ್ಲಷ್ಟೇ ಆಳವಾದ ಪಾಂಡಿತ್ಯ ಹೊಂದಿದವರೂ ಬಹುಸಂಖ್ಯೆಯಲ್ಲಿದ್ದರು. ರಾಜಮಹಾರಾಜರು ಅಧಿಕಾರಿಗಳು ಶ್ರೀಮಂತರು ಮುಂತಾದವರು ಕಲೆಗೆ ಪ್ರೋತ್ಸಾಹ ನೀಡುತ್ತಿದ್ದರು. ಇದರಿಂದಾಗಿ ಸಾಹಿತ್ಯಕಲೆ, ಸಂಗೀತ ಮತ್ತು ಶಿಲ್ಪಕಲೆಗಳು ಈ ಪ್ರದೇಶದಲ್ಲಿ ವ್ಯಾಪಕವಾಗಿ ವಿಕಾಸಗೊಂಡಿವೆ ಯೆಂಬುದನ್ನು ಮನಗಾಣಬಹುದು. ಕಲೆಗಳ ದೃಷ್ಟಿಯಿಂದ ತೆಲಂಗಾಣ ಮತ್ತು ಹೈದ್ರಾಬಾದ್ ಕರ್ನಾಟಕ ಪ್ರದೇಶಗಳ ನಡುವೆ ಏಕರೂಪತೆ ಕಂಡುಬರುತ್ತದೆ ಎಂಬುದನ್ನು ಅರಿತಂತಾಗುತ್ತದೆ.

೭. ಶೈಕ್ಷಣಿಕ ಅಧ್ಯಯನದಲ್ಲಿ ಅಂದಿನ ವಿದ್ಯಾಭ್ಯಾಸ ಪದ್ಧತಿ ಯಾವ ರೀತಿಯಿತ್ತು, ಅದಕ್ಕೆ ನೆರವು ಹೇಗೆ ಬರುತ್ತಿತ್ತು, ಅದಕ್ಕಾಗಿ ನೀಡುತ್ತಿದ್ದ ದಾನದತ್ತಿಗಳ ಸ್ವರೂಪ, ಬೋಧನಾ ವಿಷಯಗಳು, ಉಪಾಧ್ಯಾಯರ ಉಪಜೀವನ, ಗುರುಕುಲದಲ್ಲಿ ವಿದ್ಯಾರ್ಥಿಗಳಿಗೂ ಉಪಾಧ್ಯಾಯರಿಗೂ ಇದ್ದ ಸೌಕರ್ಯಗಳು ಇವನ್ನೆಲ್ಲ ಇಲ್ಲಿ ವಿವರಿಸಲಾಗಿದೆ. ಇದರಿಂದ ವಿದ್ಯಾಭ್ಯಾಸವು ಅಂದು ಕೆಲವು ನಿರ್ದಿಷ್ಟವರ್ಗಗಳಿಗೆ ಮಾತ್ರ ಸೀಮಿತವಾಗಿತ್ತು, ಸಾರ್ವತ್ರಿಕ ವಾಗಿರಲಿಲ್ಲ ಮತ್ತು ಅಗ್ರಹಾರ, ಬ್ರಹ್ಮಪುರಿ ದೇವಾಲಯಗಳು ಮತ್ತು ಮಠಗಳು ಅಂದಿನ ಶೈಕ್ಷಣಿಕ ಕೇಂದ್ರಗಳಾಗಿದ್ದವು ಅವುಗಳ ನಿರ್ವಹಣೆಗಾಗಿ ರಾಜಮಹಾರಾಜರು ಉದಾರವಾಗಿ ದಾನದತ್ತಿಗಳನ್ನು ನೀಡುತ್ತಿದ್ದರು.

೮. ಶಾಪಾಶಯಗಳ ಅಧ್ಯಯನದಿಂದ ಅಂದಿನ ಕಾಲದಲ್ಲಿ ಜನರ ಮನೋವೃತ್ತಿಗಳ ಬಗ್ಗೆ, ಅವುಗಳನ್ನು ನಿಯಂತ್ರಿಸುವುದಕ್ಕೆ ಶಾಸನಗಳನ್ನು ಹಾಕಿಸುವವರು ಕೈಗೊಂಡ ಕ್ರಮಗಳು ಮತ್ತು ಅವುಗಳ ಸ್ವರೂಪದ ಬಗ್ಗೆ ಈ ಶಾಪಾಶಯಗಳಿಂದ ತಿಳಿದುಬರುತ್ತದೆ. ರಾಜನು ನೀಡುವ ದೈಹಿಕ ಶಿಕ್ಷೆಗಿಂತಲೂ ದೈವ ಅಥವಾ ಧಾರ್ಮಿಕ ಹಿನ್ನೆಲೆಯಲ್ಲಿ ನೀಡುವ ಶಾಪಗಳು ಪರಿಣಾಮಕಾರಿಯಾಗಿದ್ದವು ಎಂಬ ಕಲ್ಪನೆ ಅವರಲ್ಲಿರುವುದು ಕಂಡುಬರುತ್ತದೆ ಮತ್ತು ಕಷ್ಟಪಟ್ಟು ಪಡೆದುಕೊಂಡ ದಾನದತ್ತಿ ಫಲ ಆತನಿಗೆ ಸಲ್ಲಬೇಕು ಮತ್ತು ಅವು ಶಾಶ್ವತವಾಗಿರಬೇಕು, ಯಾರು ಕಬಳಿಸಬಾರದು. ಶಾಪಾಶಯಗಳೇ ಶಾಸನಗಳ ಸಂರಕ್ಷಿಸಿ ಕೊಳ್ಳಬೇಕು. ಆದರೆ ಅವುಗಳ ಪರಿಣಾಮದ ಸ್ವರೂಪ, ಬದಲಾವಣೆ, ಅವುಗಳ ನಿಶ್ಚಿತ ಫಲಗಳ ಬಗ್ಗೆ ಶಾಸನಗಳು ಎಲ್ಲಿಯೂ ಉಲ್ಲೇಖಿಸಿರುವುದಿಲ್ಲವೆಂದು ತಿಳಿದುಬರುತ್ತದೆ.

೯. ಮುಖ್ಯವಾಗಿ ಈ ಹೊತ್ತು ಕರ್ನಾಟಕದ ಸುತ್ತಮುತ್ತಲಿರುವ ತೆಲಂಗಾಣ, ತಮಿಳುನಾಡು, ಮಹಾರಾಷ್ಟ್ರ ಪ್ರದೇಶಗಳ ಕನ್ನಡ ಶಾಸನಗಳನ್ನು ಗಮನಿಸಿದಾಗ ದ್ರಾವಿಡ ಭಾಷೆ ವಲಯದ ಹಾಗೂ ತೆಲಂಗಾಣ, ಕರ್ನಾಟಕ ಮತ್ತು ತಮಿಳು ಶಾಸನಗಳಲ್ಲಿ ಶಿಲಾಶಾಸನಗಳೇ ಹೆಚ್ಚು. ಇದಕ್ಕೆ ಕಾರಣ ದೇವಾಲಯ ಸಂಸ್ಕೃತಿಯನ್ನು ತಮಿಳು, ತೆಲಗು ಹಾಗೂ ಕನ್ನಡ ಭಾಷಾ ಪ್ರದೇಶಗಳಲ್ಲಿ ಕಾಣಬಹುದು. ಉಳಿದಂತೆ ಮಹಾರಾಷ್ಟ್ರದಲ್ಲಿ ಶಿಲಾಶಾಸನಗಳಿಗಿಂತ ಅಧಿಕವಾಗಿ ತಾಮ್ರ ಶಾಸನಗಳು ಹೆಚ್ಚು ಲಭ್ಯವಾಗುತ್ತವೆ. ಇದಕ್ಕೆ ಕಾರಣ ವಿದ್ವಾಂಸರಾದ ಡಾ.ಎಂ. ಎಂ.ಕಲಬುರ್ಗಿ ಅವರು ಹೇಳುವಂತೆ ಆರ್ಯ ಭಾಷಾ ಪರಿವಾರದ ಪ್ರದೇಶಗಳು ಅಗ್ರಹಾರ ಸಂಸ್ಕೃತಿಯನ್ನು ಪ್ರತಿನಿಧಿಸುತ್ತವೆಂಬುದು ತಿಳಿದುಬರುತ್ತದೆ.

ಹೀಗಾಗಿ ಈ ವರೆಗೆ ಲಭ್ಯವಿರುವ ಪ್ರಕಟಿತ ಶಾಸನಗಳನ್ನು ಮಾತ್ರ ಆಧಾರವಾಗಿಟ್ಟುಕೊಂಡು ಇಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಆದರೆ ಇನ್ನೂ ಈ ಪ್ರದೇಶಗಳಲ್ಲಿ ಅನ್ಯ ಭಾಷೆಗಳ ಶಾಸನಗಳು ಮತ್ತು ಈ ಪ್ರದೇಶಗಳನ್ನು ಆಳ್ವಿಕೆ ಮಾಡಿದ ರಾಜಮನೆತನಗಳ ಶಾಸನಗಳು ಪ್ರಸ್ತುತ ಅಧ್ಯಯನದ ಪ್ರದೇಶಗಳ ಹೊರಗೆಯು ಲಭಿಸುತ್ತವೆ. ಅಲ್ಲದೇ ಈ ಪ್ರದೇಶಗಳಲ್ಲಿ ಅನೇಕ ಶಾಸನಶಿಲ್ಪಗಳು ಲಭಿಸುತ್ತವೆ. ಇವುಗಳೆಲ್ಲದರ ಕುರಿತು ಈ ಪ್ರದೇಶಗಳಲ್ಲಿ ಅಧ್ಯಯನ ನಡೆಯಬೇಕಾಗಿದೆ.

ಅನುಬಂಧಗಳು


೧. ಹೈದ್ರಾಬಾದ್ ಕರ್ನಾಟಕ ಭಾಗದ ಶಾಸನಗಳ ಸ್ಥಳ ನಕ್ಷೆ

೨. ತೆಲಂಗಾಣ ಪ್ರದೇಶದ ಶಾಸನಗಳ ಸ್ಥಳ ನಕ್ಷೆ

೩. ಪರಾಮರ್ಶನ ಗ್ರಂಥಗಳು

ಅನುಬಂಧ ಒಂದು


ಹೈದ್ರಾಬಾದ್ ಕರ್ನಾಟಕ ಭಾಗದ ಶಾಸನಗಳ ಸ್ಥಳ ನಕ್ಷೆ



ಶಾಸನೋಕ್ತ ಪ್ರದೇಶಗಳು

ಕೃಪೆ: ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ, ಬೀದರ ಜಿಲ್ಲೆ

ಕಲಬುರ್ಗಿ ಜಿಲ್ಲೆ





ಶಾಸನೋಕ್ತ ಪ್ರದೇಶಗಳು

ಕೃಪೆ: ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ, ಕೊಪ್ಪಳ ಜಿಲ್ಲೆ



ಶಾಸನೋಕ್ತ ಪ್ರದೇಶಗಳು

ಕೃಪೆ: ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ, ರಾಯಚೂರು ಜಿಲ್ಲೆ

ಅನುಬಂಧ ಎರಡು

ತೆಲಂಗಾಣ ಪ್ರದೇಶದ ಶಾಸನಗಳ ಸ್ಥಳ ನಕ್ಷೆ



ಕೃಪೆ: ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ ೧, ಆಂಧ್ರಪ್ರದೇಶ

ಅನುಬಂಧ ಮೂರು

ಪರಾಮರ್ಶನ ಗ್ರಂಥಗಳು

ಅ. ಕೃತಿಗಳು

೧. ಅಣ್ಣಾರಾಯ ಮಿರ್ಜಿ, ೧೯೯೭, ಜೈನಧರ್ಮ, ಶಾಂತಿಸೇವಾ ಸದನ, ಸೇಡಬಾಳ, ಬೆಳಗಾಂವ ಜಿಲ್ಲೆ.

೨. ಅನಂತರಂಗಾಚಾರ್ ಎನ್., ೨೦೦೭, ಪಂಪ ಮಹಾಕವಿ ವಿರಚಿತ ಪಂಪಭಾರತಂ, ಗದ್ಯಾನುವಾದ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೪. ಕಲ್ಬುರ್ಗಿಎಂ.ಎಂ., ೧೯೭೩, ಕವಿರಾಜಮಾರ್ಗ ಪರಿಸರದ ಕನ್ನಡಸಾಹಿತ್ಯ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೫. ಕಲ್ಬುರ್ಗಿಎಂ.ಎಂ., ೧೯೭೮, ಶಾಸನಗಳಲ್ಲಿ ಶಿವಶರಣರು, ವೀರಶೈವ ಅಧ್ಯಯನ ಅಕಾಡೆಮಿ, ಗದಗ.

೬. ಕಲ್ಬುರ್ಗಿಎಂ.ಎಂ., ೧೯೯೭, ಶಾಸನ ಸೂಕ್ತಿ ಸುಧಾರ್ಣವ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೭. ಗಣೇಶ ಕೆ.ಆರ್., ೧೯೯೬, ಆಂಧ್ರಪ್ರದೇಶದ ಕನ್ನಡ ಶಾಸನಗಳು ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೮. ಗಣೇಶ ಎನ್. ಉಪಾಧ್ಯ, ೨೦೦೨, ಗೋದಾವರಿವರಂ ಇರ್ದ ಕನ್ನಡ ನಾಡು, ಕನ್ನಡ ವಿಭಾಗ, ಮುಂಬಯಿ ವಿಶ್ವವಿದ್ಯಾಲಯ, ಮುಂಬಯಿ.

೯. ಗುಂಡಪ್ಪ ಡಿ.ವಿ., ೧೯೯೬ ಸಂಸ್ಕೃತಿ, ಕಾವ್ಯಾಲಯ ಪ್ರಕಾಶನ, ಮೈಸೂರು.

೧೦. ಚನ್ನಬಸವಯ್ಯ ಹಿರೇಮಠ, ೧೯೯೫, ಕುರುಗೋಡು ಸಿಂದರು: ಒಂದು ಅಧ್ಯಯನ, ಸಂಗಣ್ಣನವರು, ಅಗಡಿ ಸಂಸ್ಕೃತಿ ಪ್ರತಿಷ್ಠಾನ, ಕೊಪ್ಪಳ.

೧೧. ಚಿದಾನಂದಮೂರ್ತಿ ಎಂ., ೧೯೭೭, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೨. ಚಿದಾನಂದಮೂರ್ತಿ ಎಂ., ೧೯೯೪, ಕರ್ನಾಟಕ ಸಂಸ್ಕೃತಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೩. ಚಿದಾನಂದಮೂರ್ತಿ ಎಂ., ೧೯೯೮, ಕನ್ನಡ ಸಾಹಿತ್ಯ ಶಾಸನಗಳಲ್ಲಿ ಸಂಗೀತ ವಿಚಾರ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೪. ಚೆನ್ನಕ್ಕ ಎಲಿಗಾರ, ೧೯೯೦, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀಸಮಾಜ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೫ ಜಯದೇವ ಹು.ಕ., ೧೯೭೫, ಶಾಸನ ಮತ್ತು ಗದ್ಯ, ಸಾಮಾನ್ಯನಿಗೆ ಸಾಹಿತ್ಯಚರಿತ್ರೆ, ಸಂಪುಟ ೨, ಬೆಂಗಳೂರು, ವಿಶ್ವವಿದ್ಯಾಲಯ, ಬೆಂಗಳೂರು.

೧೬. ತಿಪ್ಪೇರುದ್ರಸ್ವಾಮಿ ಹೆಚ್., ೨೦೦೧ ಕರ್ನಾಟಕ ಸಂಸ್ಕೃತಿ ಸಮೀಕ್ಷೆ , ಡಿ.ವಿ.ಕೆ.ಮೂರ್ತಿ, ಮೈಸೂರು.

೧೭. ದೀಕ್ಷಿತ್ ಜಿ.ಎಸ್. ರಾಮಸ್ವಾಮಿ ಬಿ. ಮತ್ತು ಶ್ರೀನಿವಾಸ ರಿತ್ತಿ (ಸಂ), ೨೦೦೦, ಆಚಾರ್ಯ ಸೋಮದೇವ ವಿರಚಿತಂ ನೀತಿವಾಕ್ಯಾಮೃತಂ, (ಶ್ರೀ ನೇಮಿನಾಥವಿರಚಿತಂ ಕರ್ನಾಟಕ ವ್ಯಾಖ್ಯಾನ ಸಹಿತಂ), ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಬಳ್ಳಾರಿ ಜಿಲ್ಲೆ.

೧೮. ನರಸಿಂಹಾಚಾರ್ ಡಿ.ಎಲ್.(ಸಂ), ೧೯೯೮ ವಡ್ಡಾರಾಧನೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೧೯. ನಾಗಯ್ಯ ಜೆ.ಎಂ., ೧೯೯೨, ಆರನೆ ವಿಕ್ರಮಾದಿತ್ಯನ ಶಾಸನಗಳು ಒಂದು ಅಧ್ಯಯನ, ವೀರಶೈವ ಅಧ್ಯಯನ ಅಕಾಡೆಮಿ, ಶ್ರೀ ನಾಗನೂರು ರುದ್ರಾಕ್ಷಿ ಮಠ, ಬೆಳಗಾಂವ.

೨೦. ನಾಗರಾಜು ಡಿ.ಎಂ., ೨೦೧೨, ಕಲ್ಯಾಣ ಚಾಲುಕ್ಯ ಆರನೇ ವಿಕ್ರಮಾದಿತ್ಯನ ಶಾಸನಗಳು: ಒಂದು ಸಾಂಸ್ಕೃತಿಕ ಅಧ್ಯಯನ, ಗೌತಮ ಪ್ರಕಾಶನ, ಜೆ.ಪಿ.ನಗರ, ಮೈಸೂರು.

೨೧. ಮೇವುಂಡಿ ಮಲ್ಲಾರಿ, ೧೯೭೪, ಕನ್ನಡ ನಾಡಿನ ಶಾಸನ ಕವಿಗಳು, ಮನೋಹರ ಘಾಣೇಕರ, ಪ್ರತಿಭಾ ಗ್ರಂಥಮಾಲೆ, ಧಾರವಾಡ.

೨೨. ರವೀಂದ್ರ ಕೆ., ೨೦೦೦, ಕನ್ನಡ ದಾಖಲು ಸಾಹಿತ್ಯ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ಬಳ್ಳಾರಿ ಜಿಲ್ಲೆ.

೨೩. ರಾಜಣ್ಣ ಟಿ.ಡಿ., ೨೦೧೦, ಕನ್ನಡ ಸಾಹಿತ್ಯ ಮತ್ತು ಶಾಸನಗಳಲ್ಲಿ ಶಾಪ, ಭಂಡಾರ ಪ್ರಕಾಶನ, ಮಸ್ಕಿ.

೨೪. ವೆಂಕಟೇಶ ಜೋಯಿಸ್ ಕೆ.ಜಿ., ೧೯೯೬, ಕೆಳದಿ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೨೫. ಶಿವಾನಂದ ವಿ., ೧೯೯೨, ಹೈದರಾಬಾದು ಕರ್ನಾಟಕ ಭಾಗದ ಕನ್ನಡ ಶಿಲಾಶಾಸನಗಳು, ಬನಾರಸ ಹಿಂದು ವಿಶ್ವವಿದ್ಯಾಲಯ, ವಾರಣಾಸಿ.

೨೬. ಶೇಷಶಾಸ್ತ್ರಿ ಆರ್., ೨೦೦೫, ಶಾಸನ ಪರಿಚಯ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೨೭. ಶ್ರೀನಿವಾಸಮೂರ್ತಿ ಹೆಚ್.ವಿ. ಮತ್ತು ರಾಮಕೃಷ್ಣ ಆರ್., ೧೯೯೯, ಸಮಗ್ರ ಕರ್ನಾಟಕ ಚರಿತೆ, ಓರಿಯಂಟ್ ಲಾಂಗಮನ್ ಲಿಮಿಟೆಡ್, ಬೆಂಗಳೂರು.

ಆ. ಶಾಸನ ಸಂಪುಟಗಳು

೧. ಗಣೇಶ ಕೆ.ಆರ್. ಮತ್ತು ಶೇಷಶಾಸ್ತ್ರಿ ಆರ್.(ಸಂ), ೨೦೦೧, ಕನ್ನಡ ವಿಶ್ವವಿದ್ಯಾಲಯದ ಶಾಸನ ಸಂಪುಟ ೫, ಭಾಗ–೨, ಪ್ರಸಾರಾಂಗ ಕನ್ನಡ, ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಬಳ್ಳಾರಿ ಜಿಲ್ಲೆ.

೨. ದೇವರಕೊಂಡಾರೆಡ್ಡಿ, ಭಟ್ಟಸೂರಿ ಕೆ.ಜಿ., ಕಲವೀರ ಮನ್ವಾಚಾರ ಮತ್ತು ಪರಮಶಿವಮೂರ್ತಿ ಡಿ.ವಿ.(ಸಂ), ೧೯೯೯, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೨, ಪ್ರಸಾರಾಂಗ ಕನ್ನಡ, ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೩. ದೇವರಕೊಂಡಾರೆಡ್ಡಿ, ಭಟ್ಟಸೂರಿ ಕೆ.ಜಿ., ಕಲವೀರ ಮನ್ವಾಚಾರ ಮತ್ತು ಪರಮಶಿವಮೂರ್ತಿ ಡಿ.ವಿ.(ಸಂ), ೨೦೦೩, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೪. ದೇವರಕೊಂಡಾರೆಡ್ಡಿ ಮತ್ತು ಹನುಮಾಕ್ಷಿ ಗೋಗಿ (ಸಂ), ೨೦೦೬, ಕನ್ನಡ ವಿಶ್ವವಿದ್ಯಾಲಯ ಶಾಸನ ಸಂಪುಟ–೮, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

೫. ಹನುಮಾಕ್ಷಿ ಗೋಗಿ (ಸಂ), ೧೯೯೫, ಸುರಪುರ ತಾಲೂಕಿನ ಕನ್ನಡ ಶಾಸನಗಳು, ಮಹಿಳಾ

ಸಾಹಿತ್ಯಿಕಾ, ನವನಗರ, ಹುಬ್ಬಳ್ಳಿ.

೬. ಹನುಮಾಕ್ಷಿ ಗೋಗಿ (ಸಂ), ೧೯೯೬, ಕಲ್ಬುರ್ಗಿ ಜಿಲ್ಲೆಯ ಶಾಸನಗಳು, ಶಿವಚಂದ್ರ ಪ್ರಕಾಶನ, ನವನಗರ, ಹುಬ್ಬಳ್ಳಿ.

ಇ. ವಿಶ್ವಕೋಶಗಳು

೧. ರಹಮತ್ ತರೀಕೆರೆ, ಮಾಧವ ಪೆರಾಜೆ ಮತ್ತುವೆಂಕಟೇಶ ಇಂದ್ವಾಡಿ (ಸಂ), ೨೦೦೦, ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ ೩, ಧರ್ಮ, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.


ಈ. ನಿಘಂಟುಗಳು

೧. ಬಸವಾರಾಧ್ಯ ಎಸ್. ಮತ್ತು ಇತರರು (ಸಂ), ೨೦೦೦, ಜಟಿ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಉ. ಪತ್ರಿಕೆಗಳು

೧. ದೇವರಕೊಂಡಾರೆಡ್ಡಿ (ಸಂ), ೨೦೦೩, ಶಾಸನ ಅಧ್ಯಯನ, ಅರ್ಧವಾರ್ಷಿಕ ಪತ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಬಳ್ಳಾರಿ ಜಿಲ್ಲೆ.

೨. ರಹಮತ್ ತರೀಕೆರೆ (ಸಂ), ೨೦೦೨, ಕನ್ನಡ ಅಧ್ಯಯನ, ತ್ರೈಮಾಸಿಕ ಪತ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ, ಬಳ್ಳಾರಿ ಜಿಲ್ಲೆ.



ಕನ್ನಡ ವಿಶ್ವವಿದ್ಯಾಲಯ

[illegible] ವಿಭಾಗ